ವಿಷಯಾನುಕ್ರಮಣಿಕೆ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ — ೨೫

ಶ್ರೀ ವ್ಯಾಸಮಹರ್ಷಿಪ್ರಣೀತಂ

ಶ್ರೀ ವಾಮನಪುರಾಣಂ

(ಸಂಸ್ಕೃತದಲ್ಲಿ ಮೂಲ, ಕನ್ನಡ ಅರ್ಥಾನುವಾದವಿವರಣೆಗಳೊಡನೆ)

(ತೀರ್ಥಮಾಹಾತ್ಮ್ಯವೆಂಬ ಎರಡನೆಯ ಸಂಪುಟ)

ಅನುವಾದಕ :

ಆಸ್ಥಾನ ಮಹಾವಿದ್ವಾನ್

ಸಂಕೀಘಟ್ಟಂ ವೆಂಕಟಾಚಾರ್ಯ.

ಮೈಸೂರು

ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್

೧೯೪೬

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ದಂಡನು ಚಿತ್ರಾಂಗದೆಯ ಇತಿಹಾಸವನ್ನು ಹೇಳಿ ಅಜರೆಯ ಮನಸ್ಸನ್ನು ಸೆಳೆಯಲು ಪ್ರಯತ್ನಪಟ್ಟರೂ ಅದು ಸಾಧ್ಯವಾಗದೆ ಅಜರೆಯು ತನ್ನನ್ನು ದಾನಮಾಡಲು ಸರ್ವಥಾ ಒಪ್ಪಲಿಲ್ಲವಾದುದರಿಂದ ಕಾಮುಕನಾಗಿ ಮದಾಂಧನಾದ ದಂಡನು ಬಲಾತ್ಕಾರದಿಂದ ಅವಳನ್ನು ಸ್ವಾಧೀನಪಡಿಸಿಕೊಂಡು ಭ್ರಷ್ಟಳನ್ನಾಗಿ ಮಾಡಿದನೆಂದೂ ಅನಂತರ ಅನಾಥೆಯಾದ ಅಜರೆಯು ರಜಸ್ವಲೆಯಾಗಿ ಆಶ್ರಮದ ಹೊರಗೆ ನಿಂತಿರುವ ಸಮಯದಲ್ಲಿ ಪಾತಾಲದಿಂದ ಬಂದ ಶುಕ್ರಾಚಾರ್ಯರು ದುಃಖದಿಂದ ಅಳುತ್ತಾ ಹೊರಗೆ ನಿಂತಿದ್ದ ಪುತ್ರಿಯನ್ನು ನೋಡಿ ನಡೆದ ಸಂಗತಿಯನ್ನು ಅವಳಿಂದ ತಿಳಿದು ಕೋಪದಿಂದ ದುಷ್ಟನಾದ ದಂಡನು ಸಪರಿವಾರನಾಗಿ ಇನ್ನು ಏಳು ದಿನದಲ್ಲಿಯೇ ಭಸ್ಮವಾಗಲಿ ಎಂದು ಶಾಪವಿತ್ತರೆಂದೂ ಅದರಂತೆ ದಂಡನು ಸರ್ವನಾಶದಿಂದ ತಾನೂ ನಾಶಹೊಂದಿದನೆಂದೂ ದೃಷ್ಟಾಂತವಾದ ಇತಿಹಾಸವನ್ನು ಮುಗಿಸಿ ಹಾಗೆಯೇ ನೀನೂ ಪಾರ್ವತಿಯ ಅಭಿಲಾಷೆಯಿಂದ ನಾಶಹೊಂದಬೇಡ ಎಂದು ಅಂಧಕನನ್ನು ಕುರಿತು ಪ್ರಹ್ಲಾದನು ಬಹುವಿಧವಾದ ಧರ್ಮೋಪದೇಶವನ್ನು ಮಾಡಿದರೂ ದುರಾತ್ಮನಾದ ಅಂಧಕನು ಅದಕ್ಕೆ ಒಪ್ಪದೆ ನೀನೇ ಧರ್ಮಶೀಲನಾಗಿರು. ನನಗೆ ಆ ಧರ್ಮವು ಬೇಡವೆಂದು ನಿರಾಕರಿಸಿ ಮಂದರಪರ್ವತದಲ್ಲಿದ್ದ ಶಂಕರನಿಗೆ ಶಂಬರನೆಂಬ ದಾನವನ ಮೂಲಕ ಸಂದೇಶವನ್ನು ಹೇಳಿಕಳುಹಿಸಿದನೆಂದೂ ಅದಕ್ಕೆ ಶಂಕರನಿಂದಲೂ ಪಾರ್ವತಿಯಿಂದಲೂ ಕಳುಹಿಸಲ್ಪಟ್ಟ ಪ್ರತ್ಯುತ್ತರದಿಂದ ಕ್ರುದ್ಧನಾಗಿ ಅಂಧಕನು ಶಂಕರನೊಡನೆ ಯುದ್ಧಮಾಡಿ ಪಾರ್ವತಿಯನ್ನು ವಶಪಡಿಸಿಕೊಳ್ಳಲು ಸೇನಾಸಮೇತನಾಗಿ ಸರ್ವಪ್ರಯತ್ನದಿಂದಲೂ ಮಂದರಪರ್ವತಕ್ಕೆ ಬಂದನೆಂದೂ ಹೇಳಲಾಯಿತು.

ಅವತರಣಿಕೆ

ಪುರಾಣಗಳ ಉತ್ಪತ್ತಿ ಮತ್ತು ಪ್ರಯೋಜನಗಳನ್ನು ಸಾಮಾನ್ಯರೂಪದಿಂದಲೂ, ವಿಶೇಷರೂಪದಿಂದಲೂ ಮೊದಲನೆಯ ಸಂಪುಟದ ಅವತರಣಿಕೆಯಲ್ಲಿ ವಿವರಿಸಲಾಗಿದೆ. ಅದರಲ್ಲಿ ನಿರೂಪಿಸಿರುವಂತೆ ವಾಮನಪುರಾಣದ ಈ ಎರಡನೆಯ ಸಂಪುಟದಲ್ಲಿಯೂ ಕರ್ಮಯೋಗಕ್ಕೆ ಅತ್ಯಂತ ಉಪಯುಕ್ತಗಳಾದ ತೀರ್ಥಕ್ಷೇತ್ರ ಇವುಗಳ ಸ್ವರೂಪವನ್ನೂ, ಸ್ನಾನಾದಿವಿಧಿಗಳನ್ನೂ ವಿಶದವಾಗಿ ನಿರೂಪಿಸಿರುವರು.

ಈ ವಿಧವಾದ ವಿಷಯದೃಷ್ಟಿಯಿಂದ ಈ ಸಂಪುಟವನ್ನು ತೀರ್ಥಮಾಹಾತ್ಮ್ಯವೆಂಬ ಹೆಸರಿನಿಂದ ಪ್ರಕಾಶಗೊಳಿಸಲಾಗಿದೆ.

ಈ ಸಂಪುಟದಲ್ಲಿ ಸತೀದೇವಿಯ ಪುನರುತ್ಪತ್ತಿಯೊಂದು ಹೊರತು ಉಳಿದ ವಿಷಯಗಳನ್ನೆಲ್ಲಾ ಪ್ರಾಸಂಗಿಕಪ್ರಶ್ನೆಗೆ ಉತ್ತರರೂಪದಿಂದಲೇ ವಿವರಿಸಿರುವರು. ದೇವಿಯಿಂದ ಮಾಡಲ್ಪಟ್ಟ ದಾನವರ ವಧವನ್ನೂ ಷಣ್ಮುಖ ಮತ್ತು ವಿನಾಯಕರ ಉತ್ಪತ್ತಿ ಕ್ರಮವನ್ನೂ ಪ್ರಾಸಂಗಿಕ ಕಥಾಭಾಗದಲ್ಲಿಯೇ ಸೇರಿಸಲಾಗಿದೆ. ನರಕ ವರ್ಣನವೇ ಮೊದಲಾದ ಇತರ ಅನೇಕ ವಿಷಯಗಳೂ ಸೇರಿವೆ.

ಈ ಸಂಪುಟದ ಕೊನೆಯಲ್ಲಿ ಸೇರಿರುವ ಚಿತ್ರಾಂಗದೆಯ ಉಪಾಖ್ಯಾನ ಮತ್ತು ಅರಜೆ, ದಂಡ ಇವರ ಸಂವಾದ ಕಥೆ ಮತ್ತು ಅದರ ಫಲಿತಾಂಶ ಇವನ್ನು ವಾಚಕರು ಅವಶ್ಯ ಓದಬೇಕು. ಇವು ನೀತಿಯ ದೃಷ್ಟಿಯಿಂದಲೂ ಕಥಾವೈಖರಿಯ ದೃಷ್ಟಿಯಿಂದಲೂ ಬಹುಮಟ್ಟಿಗೆ ರಮ್ಯವಾದ ಸನ್ನಿವೇಶವನ್ನು ಹೊಂದಿವೆ.

ಈ ಸಂದರ್ಭದಲ್ಲಿ ಇದೊಂದು ವಿಷಯವನ್ನು ವಾಚಕಮಹಾಶಯರ ಅವಗಾಹನಗೆ ತರಲು ಆಶಿಸುತ್ತೇನೆ. ಮಹರ್ಷಿಗಳಿಂದ ನಿರೂಪಿಸಲಾಗಿರುವ ಪುರಾಣಗಳ ಕಥಾಭಾಗದಲ್ಲಿ ಈಗಿನ ಲೋಕವ್ಯವಹಾರ ದೃಷ್ಟಿಯಿಂದ ಸ್ವಲ್ಪಮಟ್ಟಿಗೆ ವಿರೋಧವು ಕಂಡುಬಂದರೂ ಅಂತಹ ಭಾಗಗಳು ಅಸತ್ಯವೆಂದಾಗಲೀ ಅವುಗಳನ್ನು ನಿರೂಪಿಸಿದ ಋಷಿಗಳು ಸುಳ್ಳುಗಾರರೆಂದಾಗಲೀ ಭಾವಿಸಲು ಕಾರಣವಿಲ್ಲ.

ಸ್ವಾರ್ಥದ ಲೇಶವನ್ನೂ ಅಪೇಕ್ಷಿಸದಿರುವ ಮಹರ್ಷಿಗಳಿಗೆ ಅನೃತಭಾಷಣದಿಂದ ಫಲವೇನು ಎಂಬುದನ್ನು ವಿಮರ್ಶಕರು ವಿಚಾರಿಸಬಹುದಾಗಿದೆ. ರಸ, ಅಲಂಕಾರವೇ ಮೊದಲಾದುವುಗಳ ರಮ್ಯತೆಗೆ ತಕ್ಕಂತೆ ಕಥಾವಸ್ತುವನ್ನು ಪರಿವೃತ್ತಿಗೊಳಿಸುವ ಸಂಪ್ರದಾಯವು ಕಾವ್ಯ, ನಾಟಕ ಮೊದಲಾದ ಸಾಹಿತ್ಯ ಪ್ರಪಂಚದಲ್ಲಿ ಕಂಡುಬಂದಿದೆಯೇ ಹೊರತು ಸತ್ಯ, ಧರ್ಮ ಇತ್ಯಾದಿ ಪಾರಲೌಕಿಕ ಸುಖಸಾಧನೆಯ ಉಪ

ದೇಶಕ್ಕಾಗಿ ಹೊರಟು ವೇದಾರ್ಥಗಳನ್ನು ಪ್ರಕಾಶಪಡಿಸಲು ಆವಿರ್ಭವಿಸಿರುವ ಪುರಾಣಗಳಲ್ಲಿ ಕಥಾವಸ್ತುವಿನ ಅಸಂಭವ ಶಂಕೆಗೆ ಕಾರಣವೇ ಇಲ್ಲ.

ಅಲ್ಪಶಕ್ತರೂ ಅಶಕ್ತರೂ ಆಗಿರುವ ಮನುಷ್ಯರ ಕೆಲವು ವ್ಯವಹಾರವನ್ನು ನೋಡಿದ ಮಾತ್ರದಿಂದ ಸರ್ವಶಕ್ತರೂ ಮಹಾಮಹಿಮರೂ ಆಗಿರುವ ದೇವಪ್ರಕೃತಿಗಳ ವ್ಯವಹಾರದಲ್ಲಿ ಅಸಂಭಾವನಾಶಂಕೆಯು ಉಚಿತವೂ ಅಲ್ಲ ಈಗ್ಗೆ 20-30 ವರ್ಷಗಳ ಹಿಂದೆ ಅಸಂಭವವೆಂದು ಜನರು ನಂಬಿದ್ದ ಅನೇಕ ಲೌಕಿಕಪದಾರ್ಥಗಳನ್ನು ಆ ಜನಗಳೇ ಈಗ ಆಶ್ಚರ್ಯಾವೇಶದಿಂದ ನೋಡುತ್ತಿಲ್ಲವೇ, ಲೋಕದೃಷ್ಟಿಯೇ ಈರೀತಿ ಇರುವಾಗ ಅಲೌಕಿಕ ದೇವಪ್ರಕೃತಿಗಳ ವ್ಯವಹಾರದಲ್ಲಿ ಅಸಂಭವಾತಿಶಯೋಕ್ತಿಗಳಿಗೆ ಅವಕಾಶವೇ ಇಲ್ಲವೆಂದು ಸ್ಪಷ್ಟವಾಗಿ ನಂಬಬಹುದು.

ಈ ದೃಷ್ಟಿಯಿಂದಲೇ ಈ ಸಂಪುಟದಲ್ಲಿ ನಿರೂಪಿಸಿರುವ ಷಣ್ಮುಖ ಮತ್ತು ವಿನಾಯಕರುಗಳ ಉತ್ಪತ್ತಿಕ್ರಮದಲ್ಲಾಗಲಿ, ದೇವಿಯ ಮಹಾತ್ಮ್ಯ ವಿಷಯದಲ್ಲಾಗಲಿ, ತೀರ್ಥಕ್ಷೇತ್ರಗಳ ಮಹಿಮೆಗಾಗಿ ಹೇಳಿರುವ ಉಪಕಥಾ ಭಾಗಗಳಲ್ಲಾಗಲಿ ಅಸತ್ಯವೆಂಬ ಶಂಕೆಗೆ ಕಾರಣವಿಲ್ಲದಿರುವುದರಿಂದ ಎಲ್ಲವೂ ಸತ್ಯವೆಂದೇ ತಿಳಿಯುವುದು ಯುಕ್ತಿಯುಕ್ತವಾದದ್ದು.

ಬಹುಮುಖವಾದ ಜ್ಞಾನವಿಜ್ಞಾನಗಳಿಗೂ ಕರ್ಮಯೋಗವೇ ಮೊದಲಾದ ಉಪಾಯ ಸಾಧನೆಗೂ ಭಂಡಾಗಾರದಂತಿರುವ ಇಂತಹ ಗ್ರಂಥಗಳನ್ನು ಭಾಷಾಂತರೀಕರಿಸಿ ಸರ್ವಜನರಿಗೂ ತಿಳಿಯುವಂತೆ ಪ್ರಕಾಶಪಡಿಸುತ್ತಿರುವ ಪ್ರಭುವರ್ಯರಾದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ.** ರವರ ಮಹೋಪಕಾರಕ್ಕೆ ಪ್ರಜೆಗಳೆಲ್ಲರೂ ಚಿರಋಣಿಗಳಾಗಿರುವರು.

ಇದೇ ರೀತಿಯಾಗಿ ಸದ್ಧರ್ಮವನ್ನು ಪ್ರಕಾಶಗೊಳಿಸುತ್ತಾ ಮಹಾಪ್ರಭುಗಳವರು ಆಯುರಾರೋಗ್ಯೈಶ್ವರ್ಯಸತ್ಸಂತಾನಾದಿ ಸಕಲ ಭೋಗಗಳಿಂದ ಸಂತುಷ್ಟರಾಗಿ ಬಹುಕಾಲ ನಮ್ಮನ್ನಾಳುತ್ತಿರುವಂತೆ ಸರ್ವೇಶ್ವರನು ಅನುಗ್ರಹಿಸಲಿ.

ಅನನ್ಯಸಾಮಾನ್ಯನೃಪಪ್ರಪಂಚೇ
ಷ್ವಗ್ರೇಸರೀಭೂಯಸಿತಾಂಗಯಷ್ಟಿಃ ॥
ಯಶಃಪತಾಕಾ ಜಯಚಾಮರಾಜ
ನೃಪಾಲಮೌಲೇಃ ವಿಜಯಾಯಭೂಯಾತ್ ॥

ಅನುವಾದಕ,

ಆಸ್ಥಾನ ಮಹಾವಿದ್ವಾನ್,

ಸಂಕೀಘಟ್ಟಂ ವೆಂಕಟಾಚಾರ್ಯ.

ವಿಷಯಾನುಕ್ರಮಣಿಕೆ

ಅಧ್ಯಾಯ — ಪುಟಸಂಖ್ಯೆ

ಮೂವತ್ತಮೂರನೆಯ ಅಧ್ಯಾಯ

ಕುರುಕ್ಷೇತ್ರ ಮತ್ತು ಅಲ್ಲಿರುವ ಅನೇಕ ತೀರ್ಥಗಳ ವಿವರಣೆ. 1-5

ಮೂವತ್ತನಾಲ್ಕನೆಯ ಅಧ್ಯಾಯ

ಕುರುಕ್ಷೇತ್ರದಲ್ಲಿರುವ ತೀರ್ಥಗಳ ಮತ್ತು ಪುಣ್ಯವನಗಳ ವಿವರಣೆ ಮತ್ತು ತೀರ್ಥಗಳ ಸೇವಾಕ್ರಮ. 6-15

ಮೂವತ್ತೈದನೆಯ ಅಧ್ಯಾಯ

ತೀರ್ಥಗಳ ಮಾಹಾತ್ಮ್ಯ ಮತ್ತು ಅವುಗಳ ಸೇವಾಕ್ರಮ. 16-26

ಮೂವತ್ತಾರನೆಯ ಅಧ್ಯಾಯ

ತೀರ್ಥಗಳ ಮಾಹಾತ್ಮ್ಯ. 27-41

ಮೂವತ್ತೇಳನೆಯ ಅಧ್ಯಾಯ

ತೀರ್ಥಗಳ ಮಾಹಾತ್ಮ್ಯ ಮತ್ತು ಅವುಗಳಲ್ಲಿ ಸರಸ್ವತೀನದಿಯ ಏಳು ಶಾಖೆಗಳಿಂದುಂಟಾದ ಸಪ್ತಸಾರಸ್ವತದ ಮಹಿಮೆ. 42-49

ಮೂವತ್ತೆಂಟನೆಯ ಅಧ್ಯಾಯ

ಮಂಕಣಮುನಿಗೆ ಉಂಟಾದ ಈಶ್ವರಾನುಗ್ರಹ ಮತ್ತು ಸಪ್ತಸಾರಸ್ವದ ಮಹಿಮೆ. 50-55

ಮೂವತ್ತೊಂಭತ್ತನೆಯ ಅಧ್ಯಾಯ

ತೀರ್ಥಮಾಹಾತ್ಮ್ಯ. 56-63

ನಲವತ್ತನೆಯ ಅಧ್ಯಾಯ

ವಸಿಷ್ಠೋದ್ವಾಹ ತೀರ್ಥದ ಮಾಹಾತ್ಮ್ಯ ಅದಕ್ಕೆ ಅನುಸಂಬಂಧಿಸಿದ ಇತಿಹಾಸ. 64-72

ಅಧ್ಯಾಯ ಪುಟಸಂಖ್ಯೆ

ನಲವತ್ತೊಂದನೆಯ ಅಧ್ಯಾಯ

ತೀರ್ಥಗಳ ಮಾಹಾತ್ಮ್ಯ. 73-79

ನಲವತ್ತೆರಡನೆಯ ಅಧ್ಯಾಯ

ತೀರ್ಥಗಳ ವಿವರಣೆ ಮತ್ತು ಸೇವಾಕ್ರಮ. 80-85

ನಲವತ್ತಮೂರನೆಯ ಅಧ್ಯಾಯ

ಸ್ಥಾಣುತೀರ್ಥದ ಮತ್ತು ಸ್ಥಾಣುವಟದ ಮಹಿಮೆ. ಇದನ್ನು ದೃಢಪಡಿಸಲು ಸನತ್ಕುಮಾರರು ಮಾರ್ಕಂಡೇಯರಿಗೆ ಹೇಳಿದ ಉಪಾಖ್ಯಾನ, ಸೃಷ್ಟಿಕ್ರಮ, ವಾಲಖಿಲ್ಯರ ವಿಷಯದಲ್ಲಿ ಶಂಕರನು ಮಾಡಿದ ಪರೀಕ್ಷೆ. 86-108

ನಲವತ್ತನಾಲ್ಕನೆಯ ಅಧ್ಯಾಯ

ಈಶ್ವರನಲ್ಲಿ ಅಪರಾಧಿಗಳಾದ ಋಷಿಗಳಿಗೆ ಬ್ರಹ್ಮನ ಉಪದೇಶ ಬ್ರಹ್ಮನೊಡಗೂಡಿದ ಋಷಿಗಳಿಂದ ಮಾಡಲ್ಪಟ್ಟ ಈಶ್ವರನ ಸ್ತೋತ್ರ. ಸಂತುಷ್ಟನಾದ ಈಶ್ವರನು ತನ್ನ ಸ್ವರೂಪವನ್ನು ಸರಸ್ಸಿನಲ್ಲಿ ಆ ಋಷಿಗಳಿಗೆ ತೋರ್ಪಡಿಸಿದ ವಿವರಣೆ. 109-119

ನಲವತ್ತೈದನೆಯ ಅಧ್ಯಾಯ

ಸ್ಥಾಣುಲಿಂಗದಲ್ಲಿ ಸಾನ್ನಿಧ್ಯಹೊಂದಿದ್ದ ಈಶ್ವರನಿಂದ ಬ್ರಹ್ಮಾದಿಗಳಿಗೆ ಉಂಟಾದ ತೀರ್ಥ ಮಾಹಾತ್ಮ್ಯೋಪದೇಶ. ಸರೋವರವನ್ನು ದೇವತೆಗಳು ಧೂಳಿಯಿಂದ ಮುಚ್ಚಲಾಗಿ ಮೇಲ್ಮೇಲೆ ಚತುರ್ಮುಖನಿಂದ ಮಾಡಲ್ಪಟ್ಟ ಲಿಂಗಗಳ ಪ್ರತಿಷ್ಠೆ. 120-125

ನಲವತ್ತಾರನೆಯ ಅಧ್ಯಾಯ

ಸ್ಥಾಣುವಟದಲ್ಲಿರುವ ತೀರ್ಥಗಳ ಮತ್ತು ಲಿಂಗಗಳ ವರ್ಣನೆ. 127-136

ನಲವತ್ತೇಳನೆಯ ಅಧ್ಯಾಯ

ಸ್ಥಾಣುತೀರ್ಥದ ಮಹಿಮೆಯ ವರ್ಣನೆಗಾಗಿ ವೇನನ ಮತ್ತು ಅವನ ಮಗನಾದ ಕ್ಷುತನ ವೃತ್ತಾಂತ, ವೇನನು ಮಾಡಿದ ಈಶ್ವರ ಸ್ತುತಿ. 138-171

ಪುಟಸಂಖ್ಯೆ

ನಲವತ್ತೆಂಟನೆಯ ಅಧ್ಯಾಯ

ಶೇಶನ ಪುತ್ರನಾದ ಕ್ಷುತನ ಮತ್ತು ಸಾರಮೇಯನ ವೃತ್ತಾಂತದಿಂದ ತೀರ್ಥಮಾಹಾತ್ಮ್ಯ ವರ್ಣನೆ. 173-179

ನಲವತ್ತೊಂಭತ್ತನೆಯ ಅಧ್ಯಾಯ

ಚತುರ್ಮುಖನೇ ಮೊದಲಾದವರ ಉತ್ಪತ್ತಿಯಿಂದಲೂ ಚತುರ್ಮುಖನಿಗೆ ಉಂಟಾದ ಶಾಪವಿಮೋಚನದಿಂದಲೂ ತೀರ್ಥಮಹಾತ್ಮ್ಯದ ವಿವರಣ. 181-190

ಐವತ್ತನೆಯ ಅಧ್ಯಾಯ

ಇಂದ್ರಾದಿ ದೇವತೆಗಳು ನಾರಾಯಣನ ಅಪ್ಪಣೆಯಂತೆ ಪೃಥೂದಕವೆಂಬ ಸರೋವರಕ್ಕೆ ಬಂದುದು. ಅಲ್ಲಿ ಅವರು ಮಾಡಿದ ತರ್ಪಣಾದಿಗಳಿಂದ ಸಂತುಷ್ಟರಾದ ಪಿತೃದೇವತೆಗಳು ಮೇನಾದೇವಿಯನ್ನು ತಮ್ಮವಳೆಂದು ಹೇಳಿ ಹಿಮವಂತನಿಗೆ ಕೊಟ್ಟದ್ದು. ಆ ಮೇನಾದೇವಿಯಲ್ಲಿ ಮೂರು ಜನ ಹೆಣ್ಣು ಮಕ್ಕಳಾದರೆಂಬ ಉಪಾಖ್ಯಾನ. 192-195

ಐವತ್ತೊಂದನೆಯ ಅಧ್ಯಾಯ

ಮೇನಾದೇವಿಯ ಗರ್ಭದಲ್ಲಿ ಪಾರ್ವತಿಯರೂಪದಿಂದ ಸತೀದೇವಿಯ ಉತ್ಪತ್ತಿ. ಪಾರ್ವತಿಯ ಸಹೋದರಿಗಳಾದ ರಾಗಿಣಿ, ಕುಟಿಲಾ ಇವರ ವೃತ್ತಾಂತ. ಶಂಕರನಿಗೆ ಹಿಮವತ್ಪರ್ವತದಲ್ಲಿ ನಡೆದ ಆತಿಥ್ಯ. 196-210

ಐವತ್ತೆರಡನೆಯ ಅಧ್ಯಾಯ

ಹಿಮವಂತನಿಂದ ಆದರಿಸಲ್ಪಟ್ಟ ಹರನು ತನ್ನ ವಾಗ್ದಾನದಂತೆ ಪಾರ್ವತಿಯನ್ನು ಕೊಡುವಂತೆ ಸಪ್ತರ್ಷಿಗಳಮೂಲಕ ಹಿಮವಂತನಲ್ಲಿ ಪ್ರಾರ್ಥಿಸುವುದು, ಮತ್ತು ಋಷಿಗಳ ಪ್ರಯತ್ನ, ಮತ್ತು ವಿವಾಹದ ನಿರ್ಣಯ. 212-224

ಅಧ್ಯಾಯ ಪುಟಸಂಖ್ಯೆ

ಐವತ್ತಮೂರನೆಯ ಅಧ್ಯಾಯ

ಆಹ್ವಾನದಿಂದ ಬಂದ ಬ್ರಹ್ಮ, ವಿಷ್ಣು, ಇಂದ್ರಾದಿಗಳೊಡನೆ ವೈವಾಹಿಕಾಲಂಕಾರಭೂಷಿತನಾದ ಹರನು ಹಿಮವತ್ಪರ್ವತಕ್ಕೆ ತೆರಳುವುದು. ಪಾರ್ವತೀಪರಮೇಶ್ವರರ ವಿವಾಹ. 226-239

ಐವತ್ತನಾಲ್ಕನೆಯ ಅಧ್ಯಾಯ

ವಿಂಧ್ಯಪರ್ವತಕ್ಕೇ ತೆರಳಿದ ಹರನು ತನ್ನ ಗೃಹಸ್ಥಾಶ್ರಮಕ್ಕೆ ತಕ್ಕಂತೆ ವಿಶ್ವಕರ್ಮನಿರ್ಮಿತವಾದ ದಿವ್ಯಸೌಧದಲ್ಲಿರುವುದು ಮತ್ತು ತಪಸ್ಸಿನಿಂದ ದಿವ್ಯದೇಹಹೊಂದಿದ ಪಾರ್ವತಿಯೊಡನೆ ಮಹಾ ಮೋಹದಲ್ಲಿರುವುದು, ದೇವತೆಗಳ ವಿಘ್ನದಿಂದ ಹರಪಾರ್ವತಿಗಳ ವಿಶ್ಲೇಷ, ದುಃಖಿತೆಯಾದ ಪಾರ್ವತಿಯಿಂದ ದೇವತೆಗಳಿಗೆ ಶಾಪ ಪ್ರದಾನ ಮತ್ತು ವಿನಾಯಕನ ಉತ್ಪತ್ತಿ. 240-254

ಐವತ್ತೈದನೆಯ ಅಧ್ಯಾಯ

ವಿಂಧ್ಯವಾಸಿನಿಯಾದ ದೇವಿಯ ಮಾಹಾತ್ಮ್ಯವರ್ಣನೆಗೆ ಉಪೋದ್ಘಾತ ರೂಪವಾಗಿ ಶುಂಭನಿಶುಂಭಾದಿಗಳ ಉತ್ಪತ್ತಿ ಮತ್ತು ದಿಗ್ವಿಜಯ, ಅವರಿಗೆ ರಕ್ತಬೀಜನೆಂಬ ದಾನವನ ಸಹಾಯ, ದೇವಿಯಿಂದ ಈ ದಾನವರ ಸಂಹಾರಕ್ರಮ, ಕೌಶಿಕಿಯ ಅಪ್ಪಣೆಯಂತೆ ಶಿವೆಯೇ ಚಾಮುಂಡಿ ಎಂಬ ಹೆಸರಿನಿಂದ ದೈತ್ಯರನ್ನು ನಾಶಪಡಿಸಿದುದು. 257-273

ಐವತ್ತಾರನೆಯ ಅಧ್ಯಾಯ

ಚಂಡಮುಂಡರ ನಾಶಾನಂತರ ರಕ್ತಬೀಜನ ಯುದ್ಧ, ಅವನ ನಾಶಕ್ಕಾಗಿ ದೇವಿಯ ನಾನಾರೂಪಗಳ ಅಭಿವ್ಯಕ್ತಿ, ಚಂಡಿಯು ಚರ್ಮಮುಂಡಾರೂಪದಿಂದ ರಕ್ತಬೀಜನ ರಕ್ತವನ್ನೆಲ್ಲಾ ಪಾನ ಮಾಡಿ ಅವನನ್ನು ಸಂಹರಿಸುವುದು, ನಿಶುಂಭನ ಯುದ್ಧ ಮತ್ತು ಅವನೊಡನೆ ದೇವಿಯ ಪ್ರಶ್ನೋತ್ತರಗಳು, ಶುಂಭನಿಶುಂಭರು ನಾಶವಾದನಂತರ ಸಂತುಷ್ಟರಾದ ದೇವತೆಗಳಿಂದ ದೇವಿಯ ಸ್ತುತಿ, ಸಂತುಷ್ಟಳಾದ ದೇವಿಯು ದೇವತೆಗಳಿಗೆ ಅಭಯವನ್ನಿತ್ತು ಆಕಾಶಮಾರ್ಗಕ್ಕೆ ಹೊರಡುವುದು. 276-293

ಅಧ್ಯಾಯ ಪುಟಸಂಖ್ಯೆ

ಐವತ್ತೇಳನೆಯ ಅಧ್ಯಾಯ

ಷಣ್ಮುಖನ ಉತ್ಪತ್ತಿ ಕ್ರಮ, ಅವನು ಅಭಿವೃದ್ಧಿಹೊಂದಿದನಂತರ ಎಲ್ಲಾ ದೇವತೆಗಳೂ ಸೇರಿ ಕುರುಕ್ಷೇತ್ರದ ಓಜಸತೀರ್ಥದಲ್ಲಿ ದೇವಸೇನಾಪತಿಯಸ್ಥಾನದಲ್ಲಿ ಅಭಿಷೇಕಮಾಡಿದುದು, ದೇವತೆಗಳೆಲ್ಲರೂ ಆ ಷಣ್ಮುಖನ ಸಹಾಯಕ್ಕಾಗಿ ಭೃತ್ಯರನ್ನೂ ಗಣಗಳನ್ನೂ ಮಾತೃಗಳನ್ನೂ ಕೊಟ್ಟು ಸಹಕರಿಸುವುದು. 296-314

ಐವತ್ತೆಂಟನೆಯ ಅಧ್ಯಾಯ

ಸೇನಾಪತಿಯಾಗಿ ಅಭಿಷೇಕಹೊಂದಿದ ಕುಮಾರಸ್ವಾಮಿಯು ದೇವತೆಗಳಿಗೆ ವಂದಿಸಿ ಮಹಿಷತಾರಕರ ವಧವನ್ನು ಪ್ರತಿಜ್ಞೆಮಾಡುವುದು, ಅನಂತರ ಬ್ರಹ್ಮ, ವಿಷ್ಣು ಇವರ ಅನುಗ್ರಹದಿಂದಲೂ ವಿಷ್ಣುವಿನ ವಿಶೇಷವಾದ ಆಶೀರ್ವಚನದಿಂದಲೂ ಆಯುಧಧಾರಿಯಾಗಿ ದೈತ್ಯರ ನಾಶಕ್ಕಾಗಿ ಗಗನಕ್ಕೆ ಹೊರಡುವುದು, ಭೂಮಿಗೆ ಇಳಿದುಬಂದ ಅವನ ಸೈನ್ಯಧ್ವನಿಯಿಂದ ಭೀತರಾದ ದೈತ್ಯರ ಮಂತ್ರಾಲೋಚನೆ, ಪಾತಾಲಕೇತುವಿನ ಪರಾಜಯವೃತ್ತಾಂತದಿಂದ ಮಹಿಷತಾರಕರ ಯುದ್ಧೋದ್ಯೋಗ, ದೈತ್ಯರೊಡನೆ ಯುದ್ಧ, ತಾರಕನು ಷಣ್ಮುಖನಿಂದ ಹತನಾದಮೇಲೆ ಮಹಿಷನ ಪಲಾಯನ, ಕ್ರೌಂಚಪರ್ವತದಲ್ಲಿ ಅಡಗಿಕೊಂಡ ಮಹಿಷನನ್ನು ಷಣ್ಮುಖನು ಸಂಹರಿಸಿದುದು, ಬಂಧುನಾಶದುಃಖದಿಂದ ಷಣ್ಮುಖನ ನಿರ್ವೇದ, ಹರಿಯ ಉಪದೇಶದಿಂದ ಪೃಥೂದಕತೀರ್ಥದ ಓಘವತಿಯಲ್ಲಿ ಸ್ನಾನಮಾಡಿ ಷಣ್ಮುಖನು ನಿಷ್ಪಾಪನಾದುದು, ಸುಚಕ್ರಾಕ್ಷನಿಗೆ ಶಂಕರನು ಬಾಣನನ್ನು ಕೊಲ್ಲಲು ಅನುಗ್ರಹಿಸಿದುದು. 316-341

ಐವತ್ತೊಂಭತ್ತನೆಯ ಅಧ್ಯಾಯ

ಪಾತಾಲಕೇತುವೆಂಬ ದಾನವನನ್ನು ನಾಶಪಡಿಸಿದ ಋತಧ್ವಜನ ವೃತ್ತಾಂತ, ಮಹಿಷತಾರಕರ ನಾಶಾನಂತರ ಕೋಪಾಕ್ರಾಂತನಾದ ಅಂಧಕನು ಮಂದರಪರ್ವತಕ್ಕೆ ಬಂದು ಅಲ್ಲಿ ವಿಹರಿಸುತ್ತಿದ್ದ ಗೌರಿಯನ್ನು ನೋಡಿ ಕಾಮುಕನಾದುದು, ಪ್ರಹ್ಲಾದನು ಉಪದೇಶಮಾಡಿದರೂ ಅದು ಫಲಕಾರಿಯಾಗದೆ ಪುನಃ ಕೋಪದಿಂದ

ಅಧ್ಯಾಯ ಪುಟಸಂಖ್ಯೆ

ಗೌರಿಯನ್ನೇ ಆಕ್ರಮಿಸಲು ಮಹಿಷನ ಪ್ರಯತ್ನ, ನಂದಿಯ ಪರಾಜಯವನ್ನು ನೋಡಿ ದೇವಿಯ ಅಂತರ್ಧಾನ, ಶತಾವರೀ ಎಂಬ ದೇವಿಯ ಮೂರ್ತಿಯಿಂದ ಅಂಧಕನಿಗೆ ಪೆಟ್ಟುಬಿದ್ದು ಮೂರ್ಛೆಯುಂಟಾದುದು, ಅನಂತರ ಪ್ರಜ್ಞೆಹೊಂದಿದ ಅಂಧಕನು ಪಾತಾಲಕ್ಕೇ ಹೋಗಿ ಗೌರಿಯ ಧ್ಯಾನದಿಂದ ದುಃಖಿಸುವುದು. 344-354

ಅರವತ್ತನೆಯ ಅಧ್ಯಾಯ

ಅಂಧಕನೊಡನೆ ಗೌರಿಯೇ ಯುದ್ಧಮಾಡಿದಳೆಂಬ ಪ್ರಸಂಗದಲ್ಲಿ ಹರನು ಅಲ್ಲಿ ಇಲ್ಲದಿರುವುದಕ್ಕೆ ಕಾಲಿಂದೀನದಿಯಲ್ಲಿ ಮುಳುಗಿ ಜಪಪರಾಯಣನಾದುದರಿಂದ ಲೋಕಕ್ಕೆ ಉಂಟಾದ ಕ್ಷೋಭೆ ಅದರ ಪ್ರತೀಕಾರಕ್ಕಾಗಿ ದೇವತೆಗಳು ಬ್ರಹ್ಮನಲ್ಲಿ ಹೋದದ್ದು, ಬ್ರಹ್ಮನೂ ಸಹ ದೇವತೆಗಳೊಡನೆ ಮುರಾರಿಯ ಸ್ಥಾನಕ್ಕೆ ಹೋದದ್ದು, ಪ್ರಸಂಗದಿಂದ ಬಂದ ಮುರಾರಿಯ ಸ್ವರೂಪವರ್ಣನಕ್ಕಾಗಿ ಮುರನ ವೃತ್ತಾಂತ ಮತ್ತು ಅವನನ್ನು ಹರಿಯು ಜಯಿಸಿದ ಕ್ರಮ, ವಿಷ್ಣುವಿನ ನಾಲ್ಕು ಮೂರ್ತಿಗಳ ಸ್ವರೂಪ. 356-371

ಅರವತ್ತೊಂದನೆಯ ಅಧ್ಯಾಯ

ಈ ಅಧ್ಯಾಯದಲ್ಲಿ ಪುತ್ರಶಬ್ದಾರ್ಥವನ್ನು ವಿವರಿಸಿ ಅಂತಹ ಪುತ್ರರ ಭೇದವನ್ನೂ ಉಪಪಾದಿಸಲಾಗಿದೆ. ಸನತ್ಕುಮಾರನನ್ನು ದತ್ತ ಪುತ್ರನನ್ನಾಗಿ ಸ್ವೀಕರಿಸಿ ಚತುರ್ಮುಖನು ಅವನಿಗೆ ವಾಸುದೇವ ದ್ವಾದಶಾಕ್ಷರಮಂತ್ರವನ್ನು ಅವಯುವವಿಭಾಗದಿಂದ ದ್ವಾದಶಪತ್ರ ರೂಪವಾಗಿ ಉಪದೇಶಿಸಿದುದು, ಇಂತಹ ವಾಸುದೇವನೊಡನೆ ಯುದ್ಧಕ್ಕಾಗಿ ಹೋದ ಮುರಾಸುರನನ್ನು ಆ ವಾಸುದೇವನು ಸಂಹಾರಮಾಡಿದ ರೀತಿ. 374-389

ಅರವತ್ತರಡನೆಯ ಅಧ್ಯಾಯ

ದೇವತೆಗಳು ಮುರಾರಿಯ ಸ್ಥಾನಕ್ಕೆ ಹೋಗಿ ಜಗತ್ತಿನ ಕ್ಷೋಭಕ್ಕೆ ಕಾರಣವನ್ನು ಕೇಳಲು ಮುರಾರಿಯು ಅದನ್ನು ತಿಳಿಯಲು ದೇವತೆಗಳೊಡನೆ ಮಂದರಕ್ಕೆ ಬಂದುದು, ಅಲ್ಲಿಯೂ ಹರನನ್ನು

ಪುಟಸಂಖ್ಯೆ

ಕಾಣದೆ ಹರನಲ್ಲಿ ಅಪರಾಧಿಗಳಾಗಿರುವ ದೇವತೆಗಳಿಗೆ ತಪ್ತಕೃಚ್ಛ್ರಾನುಷ್ಠಾನದ ಉಪದೇಶ, ಅನಂತರವೂ ಹರನನ್ನು ಕಾಣದ ದೇವತೆಗಳಿಗೆ ಹರಿಯೇ ತನ್ನ ಶರೀರದಲ್ಲಿ ಹರನನ್ನು ತೋರಿಸಿದುದು, ಹರಿಹರಮೂರ್ತಿಯ ದರ್ಶನದಿಂದ ಸಂತುಷ್ಟರಾದ ದೇವತೆಗಳು ಕುರುಕ್ಷೇತ್ರದಲ್ಲಿ ಸ್ಥಾಣುವನ್ನು ನೋಡಿದುದು, ಇಂದ್ರನಿಂದ ಮಹಾವ್ರತವನ್ನು ಬಿಡಲು ಹರನಲ್ಲಿ ಪ್ರಾರ್ಥನೆ, ಹರನ ಅಂಗೀಕಾರ, ಶುಕ್ರ ಮತ್ತು ಮಂಕಣಮುನಿಯನ್ನು ಅನುಗ್ರಹಿಸಿ ಹರನು ಪುನಃ ಮಂದರಪರ್ವತಕ್ಕೆ ಬಂದುದು. 391-403

ಅರವತ್ತಮೂರನೆಯ ಅಧ್ಯಾಯ

ಪಾತಾಲಲೋಕದಲ್ಲಿಯೂ ಪಾರ್ವತಿಯ ವ್ಯಾಮೋಹದಿಂದ ದುಃಖಪಡುತ್ತಿದ್ದ ಅಂಧಕನಿಗೆ ಪ್ರಹ್ಲಾದನ ಧರ್ಮೋಪದೇಶ, ಈ ಪ್ರಸಂಗದಲ್ಲಿ ಶುಕ್ರನ ಪುತ್ರಿಯಾದ ಅಜರೆಯಲ್ಲಿ ಆಸಕ್ತನಾಗಿ ಸರ್ವನಾಶಹೊಂದಿದ ದಂಡನ ಉಪಾಖ್ಯಾನ, ಸ್ತ್ರೀ ಸ್ವಾತಂತ್ರ್ಯ ಸಾಧನೆಯಿಂದ ಅಜರೆಯನ್ನು ಒಲಿಸಲು ದಂಡನು ಉದಾಹರಿಸಿದ ಚಿತ್ರಾಂಗದೆಯ ಕಥೆ. 405-420

ಅರವತ್ತನಾಲ್ಕನೆಯ ಅಧ್ಯಾಯ

ಚಿತ್ರಾಂಗದೆಗೆ ಉಂಟಾದ ದುಃಖವನ್ನೂ ಅವಳಿಗೆ ಉಂಟಾದ ಪತಿಯ ಸಮಾಗಮಕ್ರಮವನ್ನೂ ವಿವರಿಸಲು ಪ್ರಾಸಂಗಿಕವಾಗಿ ಬಂದ ವೇದವತಿ, ದಮಯಂತೀ, ದೇವವತಿ ಇವರ ಕಥೆ, ಋತಧ್ವಜನೆಂಬ ಯೋಗಿಯ ಶಾಪದಿಂದ ಕಪಿಯಾದ ವಿಶ್ವಕರ್ಮನ ಚೇಷ್ಟೆಯಿಂದ ಮರದಲ್ಲಿ ಕಟ್ಟಲ್ಪಟ್ಟಿದ್ದ ಜಾಬಾಲಿಯ ವಿಮೋಚನೆ. 422-435

ಅರವತ್ತೈದನೆಯ ಅಧ್ಯಾಯ

ಇಕ್ಷ್ವಾಕುವಂಶದ ರಾಜಪುತ್ರನಾದ ಶಕುನಿಯ ಸಹಾಯದಿಂದ ಜಾಬಾಲಿಯನ್ನು ಋತಧ್ವಜನು ಬಂಧನದಿಂದ ಬಿಡಿಸಿದುದು ಮತ್ತು ಇಂದ್ರದ್ಯುಮ್ನನ ಸಹಾಯದಿಂದ ದಮಯಂತೀ ಮೊದಲಾದ ಕನ್ಯಕೆಯರ ಅನ್ವೇಷಣ. ದಾರಿಯಲ್ಲಿ ಘೃತಾಚಿ ಎಂಬ ಅಪ್ಸರೆಯೊಡನೆ ಬಂದ ಕಪಿಯಿಂದ ಜಾಬಾಲಿಯ ಜಟಾಬಂಧದ

ಅಧ್ಯಾಯ ಪುಟಸಂಖ್ಯೆ

ವಿಮೋಚನೆ, ತೀರ್ಥದಲ್ಲಿ ಸ್ನಾನಮಾಡಿ ಬಂದ ಋಷಿಗಳೂ, ರಾಜರುಗಳೂ, ಹಾಟಕೇಶ್ವರನದೇವಾಲಯದಲ್ಲಿ ವೇದವತಿ, ದಮಯಂತೀ, ದೇವವತೀ, ಚಿತ್ರಾಂಗದೆ ಇವರನ್ನು ನೋಡಿ ಸಂತೋಷಪಟ್ಟುದು, ಋತಧ್ವಜನ ಅಪ್ಪಣೆಯಿಂದ ಜಾಬಾಲಿಗೆ ವೇದವತಿಯನ್ನೂ ಶಕುನಿಗೆ ದಮಯಂತಿಯನ್ನೂ ಸುರಥನಿಗೆ ಚಿತ್ರಾಂಗದೆಯನ್ನೂ ವಿವಾಹಮಾಡಿಕೊಡುವುದು, ವಿಶ್ವಕರ್ಮನ ಶಾಪವಿಮೋಚನೆ 438-469

ಅರವತ್ತಾರನೆಯ ಅಧ್ಯಾಯ

ಚಿತ್ರಾಂಗದೆಯ ಈ ಕಥೆ ಎಲ್ಲವನ್ನೂ ಹೇಳಿ ಚಿತ್ರಾಂಗದೆಯಂತೆ ನೀನೂ ನನ್ನನ್ನು ಸ್ವಾತಂತ್ರ್ಯದಿಂದಲೇ ಸ್ವೀಕರಿಸೆಂದು ದಂಡನು ಮೃದುನುಡಿಗಳಿಂದ ಪ್ರಾರ್ಥನೆಮಾಡಿದರೂ ಅರಜೆಯು ಅವನನ್ನು ತಿರಸ್ಕರಿಸಲಾಗಿ ಅರಜೆಗೆ ದಂಡನಿಂದುಂಟಾದ ಪರಾಭವ, ಭ್ರಷ್ಟಳಾದ ಅರಜೆಯನ್ನು ನೋಡಿ ಕೋಪಗೊಂಡ ಶುಕ್ರಾಚಾರ್ಯನಿಂದ ದಂಡನಿಗೆ ಶಾಪಪ್ರದಾನ, ಆ ಶಾಪದಿಂದ ಏಳು ದಿನದೊಳಗೆ ದಂಡನು ರಾಜ್ಯಕೋಶಾದಿಗಳೊಡನೆ ನಾಶವಾದುದು, ದಂಡನ ಈ ಕಥೆಯ ದೃಷ್ಟಾಂತದಿಂದ ಪಾರ್ವತೀ ವಿಷಯಕವಾದ ವ್ಯಾಮೋಹವು ನಿನಗೆ ಅನರ್ಥವಾದೀತು ಎಂದು ಪ್ರಹ್ಲಾದನು ಅಂಧಕನನ್ನು ಕುರಿತು ಮಾಡಿದ ಬಹುವಿಧವಾದ ಉಪದೇಶ, ಅನಂತರ ಅಂತಹ ಧರ್ಮಪರತೆಯು ನಿನಗೇ ಇರಲಿ ನನಗೆ ಬೇಡವೆಂದು ಪ್ರಹ್ಲಾದನನ್ನೂ ನಿರಾಕರಿಸಿ ಅಂಧಕನು ತಾನುಮಾಡಿದ ಯುದ್ಧವ್ಯಾಪಾರ. 472-485

॥ ಶ್ರೀಃ ॥

ಶ್ರೀ ಹಯಗ್ರೀವಾಯನಮಃ

ಶ್ರೀವಾಮನಪುರಾಣಂ

ತ್ರಯಸ್ತ್ರಿಂಶೋಽಧ್ಯಾಯಃ

ಲೋಮಹರ್ಷಣ ಉವಾಚ

ಇತ್ಯೃಷೇರ್ವಚನಂ ಶ್ರುತ್ವಾ ಮಾರ್ಕಂಡೇಯಸ್ಯ ಧೀಮತಃ ।
ನದೀ ಪ್ರವಾಹಸಂಯುಕ್ತಾ ಕುರುಕ್ಷೇತ್ರಂ ವಿವೇಶ ಹ ॥ ೧ ॥

ತತ್ರ ಸಾರಂತುಕಂ ಪ್ರಾಪ್ಯ ಪುಣ್ಯತೋಯಾ ಸರಸ್ವತೀ ।
ಕುರುಕ್ಷೇತ್ರಂ ಸಮಾಪ್ಲಾವ್ಯ ಪ್ರಯಾತಾ ಪಶ್ಚಿಮಾಂ ದಿಶಂ ॥ ೨ ॥

ತತ್ರ ತೀರ್ಥಸಹಸ್ರಾಣಿ ಋಷಿಭಿಸ್ಸೇವಿತಾನಿ ಚ ।
ತಾನ್ಯಹಂ ಕೀರ್ತಯಿಷ್ಯಾಮಿ ಪ್ರಸಾದಾತ್ಪರಮೇಷ್ಠಿನಃ ॥ ೩ ॥

ಮೂವತ್ತಮೂರನೆಯ ಅಧ್ಯಾಯವು

೧-೪. ಲೋಮಹರ್ಷಣರು ಹೇಳುತ್ತಾರೆ:—ಈ ಪ್ರಕಾರ ಮಹಾತ್ಮನಾದ ಮಾರ್ಕಂಡೇಯನ ಮಾತನ್ನು ಪುರಸ್ಕರಿಸಿ ಆ ಸರಸ್ವತಿಯು ನದಿಯ ಪ್ರವಾಹದಿಂದ ಕೂಡಿ ಕುರುಕ್ಷೇತ್ರವನ್ನು ಪ್ರವೇಶಿಸಿದಳು. ಅಲ್ಲಿ ಪುಣ್ಯಕರವಾದ ಪ್ರವಾಹದಿಂದ ಸಾರಂತುಕ (ಅಥವಾ ರಂತುಕ) ದೇಶವನ್ನು ಹೊಂದಿ ಪುನಃ ಆ ಸರಸ್ವತೀ ನದಿಯು ಕುರುಕ್ಷೇತ್ರವನ್ನೂ ತನ್ನ ಪ್ರವಾಹದಿಂದ ತೋಯಿಸಿ ಪಶ್ಚಿಮ ದಿಕ್ಕಿಗೆ ಹೊರಟಿತು. ಅಲ್ಲಿ ಋಷಿಗಳಿಂದ ಸೇವಿಸಲ್ಪಟ್ಟ ಅನೇಕ ತೀರ್ಥಗಳು ಪ್ರಸಿದ್ಧಿಗೆ ಬಂದವು. ಇಂತಹ ತೀರ್ಥಗಳ ಸ್ಮರಣವು ಪಾಪಿಗಳಿಗೂ ಕೂಡ ಬಹಳ ಪುಣ್ಯಕರವಾದುದರಿಂದಲೂ

ಸೂ:—ವಿಶೇಷಾರ್ಥ ಅಥವಾ ತಾತ್ಪರ್ಯಾರ್ಥವನ್ನು ( ) ಈ ಚಿಹ್ನೆಯಲ್ಲಿ ಸೇರಿಸಲಾಗಿದೆ.

ತೀರ್ಥಾನಾಂ ಸ್ಮರಣಂ ಪುಣ್ಯಂ ದರ್ಶನಂ ಪಾಪನಾಶನಂ ।
ಸ್ನಾನಂ ಪುಣ್ಯಕರಂ ಪ್ರೋಕ್ತಂ ಅಪಿದುಷ್ಕೃತಕಾರಿಣಃ ॥ ೪ ॥

ಯೇ ಸ್ಮರಿಷ್ಯಂತಿ ತೀರ್ಥಾನಾಂ ದೇವತಾಃ ಪ್ರೀಣಯಂತಿ ಚ ।
ಸ್ನಾಂತಿ ಚ ಶ್ರದ್ಧಧಾನಾಶ್ಚ ತೇಯಾಂತಿ ಪರಮಾಂ ಗತಿಂ ॥ ೫ ॥

ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ ।
ಯಃ ಸ್ಮರೇತ್ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಃ ಶುಚಿಃ ॥ ೬ ॥

ಕುರುಕ್ಷೇತ್ರಂ ಗಮಿಷ್ಯಾಮಿ ಕುರುಕ್ಷೇತ್ರೇ ವಸಾಮ್ಯಹಂ ।
ಅಪ್ಯೇತಾಂ ವಾಚಮುತ್ಸೃಜ್ಯ ಸರ್ವಪಾಪೈಃ ಪ್ರಮುಚ್ಯತೇ ॥ ೭ ॥

ಬ್ರಹ್ಮಜ್ಞಾನಂ ಗಯಾಶ್ರಾದ್ಧಂ ಗೋಗ್ರಹೇ ಮರಣಂ ಧ್ರುವಂ ।
ವಾಸಃ ಪುಂಸಾಂ ಕುರುಕ್ಷೇತ್ರೇ ಮುಕ್ತಿರುಕ್ತಾ ಚತುರ್ವಿಧಾ ॥ ೮ ॥

ದರ್ಶನವು ಪಾಪನಾಶಕವೇ ಆದುದರಿಂದಲೂ, ಸ್ನಾನವು ಅತ್ಯಂತ ಪುಣ್ಯಕರವಾದುದರಿಂದಲೂ ಆ ತೀರ್ಥಗಳ ಮಾಹಾತ್ಮ್ಯವನ್ನು ಚತುರ್ಮುಖನ ಅನುಗ್ರಹದಿಂದ ನಾನು ಹೇಳುತ್ತೇನೆ ಕೇಳಿರಿ

೫-೭. ಈ ತೀರ್ಥಗಳನ್ನು ಯಾರು ಸ್ಮರಿಸುತ್ತಾರೆಯೋ ಮತ್ತು ತೀರ್ಥಾಧಿದೇವತೆಗಳನ್ನು ಪೂಜಾದಿಗಳಿಂದ ಪ್ರೀತಿಪಡಿಸುತ್ತಾರೆಯೋ ಮತ್ತು ಶ್ರದ್ಧೆಯಿಂದ ಯಾರು ಸ್ನಾನಾದಿಗಳನ್ನು ಮಾಡುತ್ತಾರೆಯೋ ಅವರು ಪರಮಪದವನ್ನು ಹೊಂದುತ್ತಾರೆ. ಅಪರಿಶುದ್ಧನಾಗಿರಲಿ, ಸ್ನಾನಾದಿಗಳಿಂದ ಪರಿಶುದ್ಧನಾಗಿರಲಿ ಯಾವನು ಪುಂಡರೀಕಾಕ್ಷನಾದ ನಾರಾಯಣನನ್ನು ಸ್ಮರಿಸುತ್ತಾನೆಯೋ ಅವನು ಅಂತರ್ಬಹಿಶ್ಶುದ್ಧನಾಗುತ್ತಾನೆ. ಕುರುಕ್ಷೇತ್ರಕ್ಕೆ ನಾನು ಹೋಗುತ್ತೇನೆ. ಕುರುಕ್ಷೇತ್ರದಲ್ಲಿ ನಾನು ವಾಸಮಾಡುತ್ತೇನೆ ಎಂಬ ಮಾತನ್ನು ಉಚ್ಚರಿಸಿದರೂ ಅವನು ಸರ್ವಪಾಪದಿಂದಲೂ ಬಿಡುಗಡೆ ಹೊಂದುತ್ತಾನೆ.

೮-೧೦. ಬ್ರಹ್ಮಜ್ಞಾನ (ಪರಮಾತ್ಮವಿಷಯಕವಾದ ಉಪಾಸನಾರೂಪವಾದ ಅಪರೋಕ್ಷಜ್ಞಾನ) ಗಯಾಶ್ರಾದ್ಧ, ಗೋಗ್ರಹಕ್ಷೇತ್ರದಲ್ಲಿ ಉಂಟಾದ ಮರಣ, ಕುರುಕ್ಷೇತ್ರದಲ್ಲಿ ವಾಸ ಈ ನಾಲ್ಕೂ ಮೋಕ್ಷಕ್ಕೆ ಸಾಧನವೆಂದು ಪರಿಗಣಿಸಲ್ಪಟ್ಟಿದೆ. (ಇಲ್ಲಿ ಬ್ರಹ್ಮಜ್ಞಾನವು ಸಾಕ್ಷಾತ್ಸಾಧನವಾಗಿರುವದ್ದರಿಂದ ಇತರ ಗಯಾಶ್ರಾದ್ಧಾದಿಗಳಿಗೆ ಪರಂಪರೆಯಾಗಿ ಕಾರಣತ್ವವಿದ್ದರೂ ಇಲ್ಲಿ ಪ್ರಾಶಸ್ತ್ಯವನ್ನು ಹೇಳುವುದಕ್ಕಾಗಿ ಒಟ್ಟುಗೂಡಿಸಿ

ಸರಸ್ವತೀದೃಷದ್ವತ್ಯೋಃ ದ್ವಯೋರ್ನದ್ಯೋರ್ಯದಂತರಂ ।
ತಂ ದೇವನಿರ್ಮಿತಂ ದೇಶಂ ಬ್ರಹ್ಮಾವರ್ತಂ ಪ್ರಚಕ್ಷತೇ ॥ ೯ ॥

ದೂರಸ್ಥೋಽಪಿ ಕುರುಕ್ಷೇತ್ರಂ ಗಮಿಷ್ಯಾಮಿ ವಸಾಮ್ಯಹಂ ।
ಏವಂ ಯಃ ಸತತಂ ಬ್ರೂಯಾತ್ ಸೋಽಪಿ ಪಾಪೈಃ ಪ್ರಮುಚ್ಯತೇ ॥ ೧೦ ॥

ತತ್ರೈವ ಚ ವಸೇ ಧೀರಃ ಸರಸ್ವತ್ಯಾಸ್ತಟೇ ಸ್ಥಿತಃ ।
ತಸ್ಯ ಜ್ಞಾನಂ ಬ್ರಹ್ಮಮಯಂ ಭವಿಷ್ಯತಿ ನ ಸಂಶಯಃ ॥ ೧೧ ॥

ದೇವತಾ ಋಷಯಃ ಸಿದ್ಧಾಃ ಸೇವಂತೇ ಕುರುಜಾಂಗಲಂ ।
ತಸ್ಯ ಸಂಸೇವನಾನ್ನಿತ್ಯಂ ಬ್ರಹ್ಮಚಾತ್ಮನಿ ಪಶ್ಯತಿ ॥ ೧೨ ॥

ಹೇಳಿರುತ್ತಾರೆ. ಗಯಾಶ್ರಾದ್ಧಾದಿಕರ್ಮಗಳು ಮೋಕ್ಷೋಪಾಯಕ್ಕೆ ವಿರೋಧಿಗಳಾದ ಪಾಪವನ್ನು ಹೋಗಲಾಡಿಸಿ ಮೋಕ್ಷೋಪಾಯ ನಿಷ್ಪತ್ತಿಗೆ ಕಾರಣವಾಗುತ್ತವೆಯೇ ಹೊರತು ಸಾಕ್ಷಾತ್ತಾಗಿ ಮೋಕ್ಷಕ್ಕೆ ಕಾರಣವಾಗುವುದಿಲ್ಲ. ಆದುದರಿಂದ ಮೋಕ್ಷ ಶಾಸ್ತ್ರವಾಗಿರುವ ವೇದಾಂತಮಾರ್ಗಕ್ಕೆ ವಿರೋಧವಿಲ್ಲದೆ ಮೇಲೆ ಹೇಳಿರುವಂತೆ ಅರ್ಥ ವನ್ನು ಗ್ರಹಿಸಬೇಕು. ಕಾಶೀಮರಣಾನ್ಮುಕ್ತಿಃ ಎಂಬ ವಾಕ್ಯಕ್ಕೂ ಅರ್ಥವಿವರಣ ವಿಷಯದಲ್ಲಿ ಇದೇ ಮಾರ್ಗ. ಮುಕ್ತಿರುಕ್ತಾಚತುರ್ವಿಧಾ ಎಂಬ ವಾಕ್ಯದಲ್ಲಿಯೂ ಮುಕ್ತಿಪದವು ಕರಣವ್ಯುತ್ಪತ್ತಿಯಿಂದ ಮೋಕ್ಷೋಪಾಯಪರವೆಂದೇ ತಿಳಿಯಬೇಕು.) ಸರಸ್ವತೀ ಮತ್ತು ದೃಷದ್ವತೀ ನದಿಗಳ ಮಧ್ಯದಲ್ಲಿರುವ ದೇವನಿರ್ಮಿತವಾದ ಪ್ರದೇಶವನ್ನು ಬ್ರಹ್ಮಾವರ್ತವೆಂದು ಹೇಳುತ್ತಾರೆ. ದೂರದಲ್ಲಿರುವವರೂ ಕುರು ಕ್ಷೇತ್ರಕ್ಕೆ ಹೋಗುತ್ತೇನೆ, ಅಲ್ಲಿ ವಾಸಮಾಡುತ್ತೇನೆ ಎಂದು ಯಾವಾಗಲೂ ಉಚ್ಚರಿ ಸುತ್ತಿದ್ದರೂ ಸರ್ವಪಾಪನಾಶವನ್ನು ಹೊಂದುತ್ತಾರೆ. ಇಲ್ಲಿ ನಾಶಹೊಂದುವವೆಂದು ಹೇಳಿರುವ ಪಾಪಗಳೆಲ್ಲವೂ ಮೋಕ್ಷಸಾಧನನಿಷ್ಪತ್ತಿಗೆ ವಿರೋಧಿಗಳಾದ ಪಾಪಗಳೆಂದೇ ತಿಳಿಯಬೇಕು. ಇದನ್ನೇ ಮುಂದೆ ವಿವರಿಸಿರುವರು.

೧೧-೧೪. ಆ ಸರಸ್ವತೀ ತೀರದಲ್ಲಿಯೇ ಧೀರನಾಗಿ ವಾಸಮಾಡುವ ಮಹಾ ತ್ಮನು ಬ್ರಹ್ಮಜ್ಞಾನವನ್ನೇ ಹೊಂದುತ್ತಾನೆ. ಇದರಲ್ಲಿ ಸಂದೇಹವಿಲ್ಲ. ದೇವತೆ ಗಳಿಂದಲೂ, ಋಷಿಗಳಿಂದಲೂ, ಸಿದ್ಧರಿಂದಲೂ ಸೇವಿಸಲ್ಪಡುತ್ತಿರುವ ಆ ಕುರುಕ್ಷೇತ್ರದ ಸೇವನೆಯಿಂದ ಸರ್ವಪಾಪನಾಶವನ್ನು ಹೊಂದಿದ ಮನುಷ್ಯನು ಆತ್ಮ ಜ್ಞಾನಿಯೇ ಆಗುತ್ತಾನೆ. ಅಸ್ಥಿರವಾದ ಮನುಷ್ಯನ ದೇಹವನ್ನು ಹೊಂದಿ ಯಾರು

ಚಂಚಲಂ ಹಿ ಮನುಷ್ಯತ್ವಂ ಪ್ರಾಪ್ಯ ಯೇ ಮೋಕ್ಷಕಾಂಕ್ಷಿಣಃ ।
ವಸಂತಿ ನಿಯತಾತ್ಮಾನೋ ಯೇಽಪಿ ದುಷ್ಕೃತಕಾರಿಣಃ ॥ ೧೩ ॥

ತೇ ವಿಮುಕ್ತಾಶ್ಚ ಕಲುಷೈಃ ಅನೇಕೈರ್ಜನ್ಮಸಂಭವೈಃ ।
ಪಶ್ಯಂತಿ ನಿರ್ಮಲಂ ದೇವಂ ಹೃದಯಸ್ಥಂ ಸನಾತನಂ ॥ ೧೪ ॥

ಬ್ರಹ್ಮವೇದಿಃ ಕುರುಕ್ಷೇತ್ರಂ ಪುಣ್ಯಂ ಸನ್ನಿಹಿತಂ ಸರಃ ।
ಸೇವಮಾನಾ ನರಾಃ ನಿತ್ಯಂ ಪ್ರಾಪ್ನುವಂತಿ ಪರಂ ಪದಂ ॥ ೧೫ ॥

ಗ್ರಹನಕ್ಷತ್ರತಾರಾಣಾಂ ಕಾಲೇನ ಪತನಾದ್ಭಯಂ ।
ಕುರುಕ್ಷೇತ್ರಮೃತಾನಾಂ ತು ಪತನಂ ನೈವ ವಿದ್ಯತೇ ॥ ೧೬ ॥

ಯತ್ರ ಬ್ರಹ್ಮಾದಯೋ ದೇವಾಃ ಋಷಯಃ ಸಿದ್ಧಚಾರಣಾಃ ।
ಗಂಧರ್ವಾಶ್ಚಾಪ್ಸರೋಯಕ್ಷಾಃ ಸೇವಂತೆ ಸ್ಥಾನಕಾಂಕ್ಷಿಣಃ ॥ ೧೭ ॥

ಮೋಕ್ಷಾಪೇಕ್ಷಿಗಳಾಗಿರುತ್ತಾರೋ, ಅವರು ಪಾಪಕರ್ಮಗಳನ್ನು ಮಾಡಿದ್ದರೂ ಈ ಕ್ಷೇತ್ರದಲ್ಲಿ ನಿಯಮದೊಡನೆ ವಾಸಮಾಡಿದಲ್ಲಿ ಅನೇಕ ಜನ್ಮಾರ್ಜಿತವಾದ ಪಾಪ ಸಂಘಾತಗಳನ್ನೂ ಹೋಗಲಾಡಿಸಿಕೊಂಡು ಹೃದಯದಲ್ಲಿರುವ ನಿರ್ಮಲವಾದ ಪರಮಾತ್ಮನನ್ನೂ ಸಾಕ್ಷಾತ್ಕರಿಸುವಷ್ಟು ಅಂತರ್ಮುಖರಾಗುತ್ತಾರೆ. (ಶುದ್ಧಮನಸ್ಕ ರಾಗುತ್ತಾರೆ)

೧೫-೧೭. ಬ್ರಹ್ಮವೇದಿಯಾದ ಕುರುಕ್ಷೇತ್ರವನ್ನೂ, ಸಮೀಪದಲ್ಲಿರುವ ಆ ಪೃಥೂಕದಸರೋವರವನ್ನೂ ಯಾರು ನಿತ್ಯವೂ ಸೇವಿಸುತ್ತಾರೆಯೋ ಅಂತಹ ಪುಣ್ಯ ಶಾಲಿಗಳು ಪರಮಪದಕ್ಕೆ ಹೋಗುತ್ತಾರೆ. ಸೂರ್ಯಚಂದ್ರಾದಿಗ್ರಹಗಳಿಗೂ, ಅಶ್ವಿನ್ಯಾದಿನಕ್ಷತ್ರಗಳಿಗೂ, ಇತರ ನಕ್ಷತ್ರಗಳಿಗೂ ಒಂದಾನೊಂದು ಕಾಲದಲ್ಲಿ ಪತನ ವುಂಟು. ಕುರುಕ್ಷೇತ್ರದಲ್ಲಿ ಮೃತರಾದವರಿಗೆ ಮಾತ್ರ ಯಾವಾಗಲೂ ಪತನದ ಭಯವೇ ಇಲ್ಲ. ಯಾವ ಆ ಕ್ಷೇತ್ರದಲ್ಲಿ ಚತುರ್ಮುಖನೇ ಮೊದಲಾದ ದೇವತೆ ಗಳೂ, ಋಷಿಗಳೂ, ಸಿದ್ಧಚಾರಣಾದಿಗಳೂ, ಗಂಧರ್ವಯಕ್ಷಅಪ್ಸರಸೆಯರೇ ಮೊದ ಲಾದವರು ತಮ್ಮ ತಮ್ಮ ಉತ್ತಮಸ್ಥಾನಕ್ಕಾಗಿ ಯಾವಾಗಲೂ ಸೇವಿಸುತ್ತಿರುವರೋ

ಗತ್ವಾ ತು ಶ್ರದ್ಧಯಾ ಯುಕ್ತಃ ಸ್ನಾತ್ವಾ ಸ್ಥಾಣುಮಹಾಹ್ರದೇ ।
ಮನಸಾ ಚಿಂತಿತಂ ಕಾಮಂ ಲಭತೇ ನಾತ್ರಸಂಶಯಃ ॥ ೧೮ ॥

ನಿಯಮಂ ಚ ನರಃ ಕೃತ್ವಾ ಸರಃ ಕೃತ್ವಾ ಪ್ರದಕ್ಷಿಣಂ ।
ರಂತುಕಂಚ ಸಮಾಸಾದ್ಯ ಕ್ಷಾಮಯಿತ್ವಾ ಪುನಃ ಪುನಃ ॥ ೧೯ ॥

ಸರಸ್ವತ್ಯಾಂ ನರಃ ಸ್ನಾತ್ವಾ ಯಕ್ಷಂ ದೃಷ್ಟ್ವಾ ಪ್ರಣಮ್ಯ ಚ ।
ಪುಷ್ಪಂ ಧೂಪಂ ಚ ನೈವೇದ್ಯಂ ದತ್ವಾ ವಾಚಮುದೀರಯೇತ್ ॥ ೨೦ ॥

ತವ ಪ್ರಸಾದಾದ್ಯಕ್ಷೇಂದ್ರ ವನಾನಿ ಸರಿತಸ್ತಥಾ ।
ಭ್ರಮಿಷ್ಯಾಮಿ ಚ ತೀರ್ಥಾನಿ ಹ್ಯವಿಘ್ನಂ ಕುರು ಮೇ ಸದಾ ॥ ೨೧ ॥

ಇತಿ ಶ್ರೀ ವಾಮನಪುರಾಣೇ ಸರೋಮಾಹಾತ್ಮ್ಯೇ
ತ್ರಯಸ್ತ್ರಿಂಶೋಽಧ್ಯಾಯಃ

೧೮-೨೧. ಅಂತಹ ಕ್ಷೇತ್ರಕ್ಕೆ ಹೋಗಿ ಶ್ರದ್ಧೆಯಿಂದ ಸ್ಥಾಣುಮಹಾಹ್ರದದಲ್ಲಿ ಸ್ನಾನಮಾಡಿದಲ್ಲಿ ಅಂತಹವನಿಗೆ ಮನೋರಥಸಿದ್ಧಿಯುಂಟಾಗುವುದರಲ್ಲಿ ಸಂದೇಹವಿಲ್ಲ. ವ್ರತನಿಯಮದಿಂದ ಕೂಡಿದ ಯಾವ ಮನುಷ್ಯನಾದರೂ ರಂತುಕದೇಶಕ್ಕೆ ಹೋಗಿ ಈ ಸರೋವರವನ್ನು ಪ್ರದಕ್ಷಿಣಮಾಡಿ ಸರಸ್ವತೀ ನದಿಯಲ್ಲಿ ಕ್ಷಮಾಪಣೆ ಪುರಸ್ಸರವಾಗಿ ಸ್ನಾನಮಾಡಿ ಅಲ್ಲಿರುವ ತೀರ್ಥವಾಸಿಯಾದ ಯಕ್ಷನನ್ನು ನೋಡಿ ಅವನಿಗೆ ನಮಸ್ಕರಿಸಿ ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯಾದಿಗಳಿಂದ ಅವನನ್ನು ಅರ್ಚಿಸಿ ಅವನಲ್ಲಿ ಹೀಗೆ ಪ್ರಾರ್ಥಿಸಬೇಕು. ಎಲೈ ಯಕ್ಷೇಂದ್ರನೇ, ನಿನ್ನ ಅನುಗ್ರಹದಿಂದ ನಾನು ಈ ಕುರುಕ್ಷೇತ್ರವನದಲ್ಲಿಯೂ ಸರೋವರ ಮತ್ತು ತೀರ್ಥಗಳಲ್ಲಿಯೂ ಸಂಚರಿಸಲು ಹೊರಟಿದ್ದೇನೆ. ನನಗೆ ನಿರ್ವಿಘ್ನದಿಂದ ಈ ಯಾತ್ರೆಯನ್ನು ಸಫಲಗೊಳಿಸು ಎಂದು.

ಇಲ್ಲಿಗೆ ಶ್ರೀ ವಾಮನಪುರಾಣದ ಸರೋಮಾಹಾತ್ಮ್ಯವೆಂಬ
ಮೂವತ್ತಮೂರನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಕುರುಕ್ಷೇತ್ರದ ಮತ್ತು ಸ್ಥಾಣುಸರೋವರದ ಸೇವೆಯಿಂದ ನಿಖಿಲಪುರುಷಾರ್ಥಗಳೂ ಲಭಿಸುತ್ತವೆಯೆಂಬ ಫಲವಾದವೇ ಹೆಚ್ಚಾಗಿ ಉದಾಹರಿಸಲ್ಪಟ್ಟಿದೆ.

॥ ಶ್ರೀಃ ॥

ಶ್ರೀವಾಮನಪುರಾಣಂ

ಚತುಸ್ತ್ರಿಂಶೋಽಧ್ಯಾಯಃ

ಋಷಯ ಊಚುಃ

ವನಾನಿ ಸಪ್ತ ನೋ ಬ್ರೂಹಿ ಸಪ್ತನದ್ಯಶ್ಚ ಕಾಃ ಸ್ಮೃತಾಃ ।
ತೀರ್ಥಾನಿ ಚ ಸಮಗ್ರಾಣಿ ತೀರ್ಥಸ್ನಾನಫಲಂ ತಥಾ ॥ ೧ ॥

ಯೇನ ಯೇನ ವಿಧಾನೇನ ಯಸ್ಯ ತೀರ್ಥಸ್ಯ ಯತ್ ಫಲಂ ।
ತತ್ಸರ್ವಂ ವಿಸ್ತರೇಣೇಹ ಬ್ರೂಹಿ ಪೌರಾಣಿಕೋತ್ತಮ ॥ ೨ ॥

ಲೋಮಹರ್ಷಣ ಉವಾಚ

ಶೃಣು ಸಪ್ತವನಾನೀಹ ಕುರುಕ್ಷೇತ್ರಸ್ಯ ಮಧ್ಯತಃ ।
ಯೇಷಾಂ ನಾಮಾನಿ ಪುಣ್ಯಾನಿ ಸರ್ವಪಾಪಹರಾಣಿ ಚ ॥ ೩ ॥

ಕಾಮ್ಯಕಂ ಚ ವನಂ ಪುಣ್ಯಂ ತಥಾ ದಿತಿವನಂ ಮಹತ್ ।
ವ್ಯಾಸಸ್ಯ ಚ ವನಂ ಪುಣ್ಯಂ ಫಲಕೀವನಮೇವ ಚ ॥ ೪ ॥

ಮೂವತ್ತನಾಲ್ಕನೆಯ ಅಧ್ಯಾಯವು

೧-೨. ಋಷಿಗಳು ಪುನಃ ಪ್ರಶ್ನೆಮಾಡುತ್ತಾರೆ :—ಅಲ್ಲಿರುವ ಏಳು ವನಗಳು ಯಾವುವು, ಏಳು ನದಿಗಳೂ ಸಹ ಯಾವುವು, ಅಲ್ಲಿರುವ ತೀರ್ಥಗಳಾವುವು, ಆ ತೀರ್ಥಗಳ ಸ್ನಾನದಿಂದ ಯಾವ ಫಲವುಂಟಾಗಬಹುದು, ಯಾವ ವಿಧಾನದಿಂದ ತೀರ್ಥಗಳನ್ನು ಸೇವಿಸಬೇಕು, ಯಾವಯಾವ ತೀರ್ಥದಿಂದ ಎಂತಹ ಫಲವು ಲಭಿಸುವುದು, ಇದೆಲ್ಲವನ್ನೂ ವಿಸ್ತಾರವಾಗಿ ಪೌರಾಣಿಕಶ್ರೇಷ್ಠರಾದ ತಾವು ಅಪ್ಪಣೆಕೊಡಿಸಬೇಕು ಎಂದು

೩-೪. ಲೋಮಹರ್ಷಣರು ಹೇಳುತ್ತಾರೆ :—ಎಲೈ ಮಹರ್ಷಿಗಳೇ, ಕುರುಕ್ಷೇತ್ರದ ಮಧ್ಯದಿಂದ ಹೊರಟಿರುವ ಪುಣ್ಯಕರವಾದ ಏಳು ವನಗಳನ್ನೂ ಹೇಳುತ್ತೇನೆ

ತಥಾ ಸೂರ್ಯವನಂ ಸ್ಥಾನಂ ತಥಾ ಮಧುವನಂ ಮಹತ್ ।
ಪುಣ್ಯಶೀತವನಂ ನಾಮ ಸರ್ವಕಲ್ಮಷನಾಶನಂ ॥ ೫ ॥

ಏತಾನ್ಯೇತಾನಿ ವೈ ಸಪ್ತ ನದೀಃ ಶೃಣುತ ಮೇ ದ್ವಿಜಾಃ ।
ಸರಸ್ವತೀನದೀಪುಣ್ಯಾ ತಥಾ ವೈತರಣೀ ನದೀ ॥ ೬ ॥

ಆಪಗಾ ಚ ಮಹಾಪುಣ್ಯಾ ಗಂಗಾ ಮಂದಾಕಿನೀ ನದೀ ।
ಮಧುಶ್ರವಾ ಅಮ್ಲುನದೀ ಕೌಶಿಕೀ ಪಾಪನಾಶನೀ ॥ ೭ ॥

ದೃಷದ್ವತೀ ಮಹಾಪುಣ್ಯಾ ತಥೈವ ಚ ಹಿರಣ್ವತೀ ।
ವರ್ಷಾಕಾಲವಹಾಸ್ಸರ್ವಾಃ ವರ್ಜಯಿತ್ವಾ ಸರಸ್ವತೀಂ ॥ ೮ ॥

ಏತಾಸಾಮುದಕಂ ಪುಣ್ಯಂ ಪ್ರಾವೃಟ್ಕಾಲೇ ಪ್ರಕೀರ್ತಿತಂ ।
ರಜಸ್ವಲಾತ್ವಮೇತಾಸಾಂ ವಿದ್ಯತೆ ನ ಕದಾಚನ ।
ತೀರ್ಥಸ್ಯ ಚ ಪ್ರಭಾವೇಣ ಪುಣ್ಯಾಹ್ಯೇತಾಃ ಸರಿದ್ವರಾಃ ॥ ೯ ॥

ಶೃಣ್ವಂತು ಮುನಯಃ ಪ್ರೀತಾಃ ತೀರ್ಥಸ್ನಾನಫಲಂ ಮಹತ್ ।
ಗಮನಂ ಸ್ಮರಣಂ ಚೈವ ಸರ್ವಕಲ್ಮಷನಾಶನಂ ॥ ೧೦ ॥

ಕೇಳಿರಿ. ಅವುಗಳ ನಾಮೋಚ್ಚಾರಣವೂ ಸಹ ಪಾಪನಾಶಕಗಳಾಗಿಯೂ ಪುಣ್ಯಪ್ರದವಾಗಿಯೂ ಇವೆ. ಕಾಮ್ಯಕವನ, ದಿತಿವನ,ವ್ಯಾಸವನ, ಫಲಕೀವನ, ಸೂರ್ಯವನ, ಮಧುವನ, ಪುಣ್ಯಶೀತವನ ಎಂಬ ಈ ಏಳು ವನಗಳೂ ಮಹಾವನಗಳಾಗಿಯೂ ಪುಣ್ಯಕರಗಳಾಗಿಯೂ ಇವೆ. ಹಾಗೆಯೇ ಪುಣ್ಯಕರವಾದ ಸರಸ್ವತೀ, ವೈತರಣೀ, ಮಂದಗಾಮಿನಿಯಾದ ಗಂಗಾ, ಮಧುಶ್ರವಾ, ಕೌಶಿಕೀ, ದೃಷದ್ವತೀ, ಹಿರಣ್ವತೀ ಇವುಗಳಲ್ಲಿ ಸರಸ್ವತಿಯನ್ನು ಬಿಟ್ಟು ಉಳಿದವು ವರ್ಷಾಕಾಲದಲ್ಲಿ ಹರಿಯತಕ್ಕ ಪುಣ್ಯನದಿಗಳು.

೯-೧೧. ಈ ನದಿಗಳ ನೀರು ವರ್ಷಾಕಾಲದಲ್ಲಿ ಬಹಳ ಪುಣ್ಯಕರವೆಂದು ಹೇಳಲ್ಪಟ್ಟಿದೆ. ಇತರ ನದಿಗಳಂತೆ ಈ ನದಿಗಳಿಗೆ ರಜಸ್ವಲಾದೋಷವು ಯಾವಾಗಲೂ ಇಲ್ಲ. ಅಲ್ಲಲ್ಲಿರುವ ತೀರ್ಥಗಳ ಪ್ರಭಾವದಿಂದ ಈ ನದಿಗಳು ಪುಣ್ಯಕರಗಳಾಗಿವೆ. ಎಲೈ ಮುನಿಗಳೇ, ಈ ತೀರ್ಥಗಳ ಸ್ನಾನಫಲವನ್ನು ಹೇಳುತ್ತೇನೆ ಸಂತೋಷದಿಂದ ಕೇಳಿರಿ. ಈ ತೀರ್ಥಗಳ ಸ್ಮರಣವೂ ಗಮನವೂ ಸರ್ವಪಾಪನಾಶಕವೆಂದು ಸಾಮಾನ್ಯವಾಗಿ ತಿಳಿಯಿರಿ. ಮೊದಲು ರಂತುದೇಶಕ್ಕೆ ಹೋಗಿ ಅಲ್ಲಿ ದ್ವಾರಪಾಲಕನಾಗಿರುವ

ರಂತುಕಂ ಚ ನರೋ ದೃಷ್ಟ್ವಾ ದ್ವಾರಪಾಲಂ ಮಹಾಬಲಂ ।
ಯಕ್ಷಂ ಸಮಭಿವಾದ್ಯೈವ ತೀರ್ಥಯಾತ್ರಾಂ ಸಮಾರಭೇತ್ ॥ ೧೧ ॥

ತತೋ ಗಚ್ಛೇದ್ಧಿ ವಿಪ್ರೇಂದ್ರಾ ನಾಮ್ನಾ ದಿತಿವನಂ ಮಹತ್ ।
ಅದಿತ್ಯಾ ಯತ್ರ ಪುತ್ರಾರ್ಥೇ ಕೃತಂ ಘೋರಂ ಮಹತ್ತಪಃ ॥ ೧೨ ॥

ತತ್ರ ಸ್ನಾತ್ವಾ ಚ ಸಂಪೂಜ್ಯ ಹ್ಯದಿತಿಂ ದೇವಮಾತರಂ ।
ಪುತ್ರಂ ಜನಯತೇ ಶೂರಂ ಸರ್ವದೋಷವಿವರ್ಜಿತಂ ।
ಆದಿತ್ಯಶತಸಂಕಾಶಂ ವಿಮಾನಂ ಚಾಧಿರೋಹತಿ ॥ ೧೩ ॥

ತತೋ ಗಚ್ಛೇದ್ಧಿ ವಿಪ್ರೇಂದ್ರಾ ವಿಷ್ಣುಸ್ಥಾನ ಮನುತ್ತಮಂ ।
ಸತತಂ ನಾಮ ವಿಖ್ಯಾತಂ ಯತ್ರ ಸನ್ನಿಹಿತೋ ಹರಿಃ ॥ ೧೪ ॥

ವಿಮಲೇ ಚ ನರಃ ಸ್ನಾತ್ವಾ ದೃಷ್ಟ್ವಾ ಚ ವಿಮಲೇಶ್ವರಂ ।
ನಿರ್ಮಲಃ ಸ್ವರ್ಗಮಾಯಾತಿ ರುದ್ರಲೋಕಂ ಚ ಗಚ್ಛತಿ ॥ ೧೫ ॥

ಬಲಾಢ್ಯನಾದ ಯಕ್ಷನನ್ನು ನೋಡಿ ಅವನಿಗೆ ನಮಸ್ಕಾರಮಾಡಿ ಅವನ ಅಪ್ಪಣೆಯನ್ನು ಹೊಂದಿಯೇ ತೀರ್ಥಯಾತ್ರೆಯನ್ನು ಪ್ರಾರಂಭಿಸಬೇಕು.

೧೨-೧೪. ಎಲೈ ವಿಪ್ರಶ್ರೇಷ್ಠರೇ, ಅನಂತರ ಅದಿತಿವನವೆಂಬ ಮಹಾಕ್ಷೇತ್ರಕ್ಕೆ ಹೋಗಬೇಕು. ಆ ವನದಲ್ಲಿ ಅದಿತಿಯು ಪುತ್ರನನ್ನು ಪಡೆಯಲು ಘೋರವಾದ ತಪಸ್ಸನ್ನಾಚರಿಸಿದಳು. ಅಲ್ಲಿ ಸ್ನಾನಮಾಡಿ ದೇವಮಾತೆಯಾದ ಅದಿತಿಯನ್ನು ಪೂಜಿಸಿದರೆ ಅವನು ಶೂರನಾಗಿಯೂ ನಿರ್ದೋಷಿಯಾಗಿಯೂ ಇರುವ ಪುತ್ರನನ್ನು ಪಡೆಯುತ್ತಾನೆ. ಅನೇಕ ಸೂರ್ಯರಂತೆ ಪ್ರಜ್ವಲಿಸುವ ದಿವ್ಯ ವಿಮಾನವನ್ನು ಆರೋಹಣೆ ಮಾಡಿ ದೇವತಾಸ್ವರೂಪನಾಗಿ ಪ್ರಕಾಶಿಸುತ್ತಾನೆ. ಅಲ್ಲಿಂದ ಮುಂದೆ ವಿಷ್ಣು ಸ್ಥಾನವೆಂಬ ವನಕ್ಕೆ ಹೋಗಬೇಕು. ಅಲ್ಲಿರುವ ಸತತವೆಂದು ಪ್ರಸಿದ್ಧವಾದ ಸ್ಥಾನದಲ್ಲಿ ಹರಿಯು ಯಾವಾಗಲೂ ಸನ್ನಿಹಿತನಾಗಿರುತ್ತಾನೆ.

೧೫-೧೭. ಅಲ್ಲಿರುವ ವಿಮಲತೀರ್ಥದಲ್ಲಿ ಸ್ನಾನಮಾಡಿ ವಿಮಲೇಶ್ವರನನ್ನು ದರ್ಶನಮಾಡಿದಲ್ಲಿ ಅವನು ನಿರ್ಮಲನಾಗಿ ಸ್ವರ್ಗಗಾಮಿಯೇ ಆಗುವನು. ರುದ್ರ ಲೋಕವನ್ನೂ ಹೊಂದುತ್ತಾನೆ. ಅಲ್ಲಿರುವ ಬಲಭದ್ರಸಹಿತನಾದ ಹರಿಯನ್ನು ಏಕಾದಶಿ

ಫಲದೇವಂ ಚಾಪ್ಯೇಕಾದಶ್ಯಾಂ ಸಮನ್ವಿತಾ ।
ದೋಷೈರ್ವಿಮುಚ್ಯೇತ ಕಲಿಕಲ್ಮಷಸಂಭವೈಃ ॥ ೧೬ ॥

ಪಾರಿಪ್ಲವಂ ಗಚ್ಛೇತ್ತೀರ್ಥಂ ತ್ರೈಲೋಕ್ಯವಿಶ್ರುತಂ ।
ಸ್ನಾತ್ವಾ ಚ ದೃಷ್ಟ್ವಾ ಚ ಬ್ರಹ್ಮಾಣಂ ವೇದಸಂಯುತಂ ॥ ೧೭ ॥

ಬ್ರಹ್ಮಯಜ್ಞಫಲಂ ಪ್ರಾಪ್ಯ ನಿರ್ಮಲಃ ಸ್ವರ್ಗಮಾಪ್ನುಯಾತ್ ।
ತತ್ರಾಪಿ ಸಂಗಮಂ ರಮ್ಯಂ ಕೌಶಿಕ್ಯಾಸ್ತೀರ್ಥಸಂಭವಂ ॥ ೧೮ ॥

ಸಂಗಮೇ ಚ ನರಃ ಸ್ನಾತ್ವಾ ಪ್ರಾಪ್ನೋತಿ ಪರಮಂಪದಂ ।
ಅರಣ್ಯೇ ಚಾಪರಾಧಾ ಯೇ ಕೃತಾಹಿ ಪುರುಷೇಣ ವೈ ।
ಸರ್ವಾಂಸ್ತಾನ್ ಕ್ಷಮತೆ ತತ್ರ ಸ್ನಾತಮಾತ್ರಸ್ಯ ದೇಹಿನಃ ॥ ೧೯ ॥

ತತೋ ದಕ್ಷಾಶ್ರಮಂ ಗತ್ವಾ ದೃಷ್ಟ್ವಾ ದಕ್ಷೇಶ್ವರಂ ಶಿವಂ ।
ಅಶ್ವಮೇಧಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ॥ ೨೦ ॥

ದಿವಸ ದರ್ಶನಮಾಡಿದಲ್ಲಿ ಅವನು ಕಲಿಯುಸಂಬಂಧದಿಂದ ಉಂಟಾಗುವ ಎಲ್ಲಾ ದೋಷಗಳಿಂದಲೂ ಬಿಡುಗಡೆಹೊಂದುತ್ತಾನೆ. ಅನಂತರ ಅಲ್ಲಿಂದ ತ್ರಿಲೋಕವಿಖ್ಯಾತವಾದ ಪಾರಿಪ್ಲವತೀರ್ಥಕ್ಕೆ ಹೋಗಬೇಕು. ಅಲ್ಲಿ ಸ್ನಾನಮಾಡಿ ವೇದಗಳಿಂದೊಡಗೂಡಿರುವ ಬ್ರಹ್ಮದೇವರನ್ನು ದರ್ಶನಮಾಡಿದಲ್ಲಿ ಬ್ರಹ್ಮಯಜ್ಞದ ಫಲವನ್ನು ಹೊಂದುತ್ತಾನೆ. ಅದರಿಂದ ನಿರ್ಮಲವಾದ ಸ್ವರ್ಗಸುಖಕ್ಕೆ ಅರ್ಹನಾಗುತ್ತಾನೆ.

೧೮-೨೦. ಅಲ್ಲಿರುವ ಕೌಶಿಕೀತೀರ್ಥದ ಸಂಗಮವು ಅತ್ಯಂತ ರಮ್ಯವಾದ ಸ್ಥಾನ, ಆ ಸಂಗಮದಲ್ಲಿ ಸ್ನಾನಮಾಡಿದವನು ಸಾಕ್ಷಾತ್ಪರಮಪದವನ್ನೇ ಹೊಂದುತ್ತಾನೆ. ಅಲ್ಲಿ ಸ್ನಾನಮಾಡಿದ ಮಾತ್ರದಿಂದಲೇ ಚೇತನಸಾಮಾನ್ಯಕ್ಕೂ ಅರಣ್ಯದಲ್ಲಿ ಸಂಭವಿಸಬಹುದಾದ ಯಾವ ಅಪರಾಧವೂ ಬಂಧಕವಾಗಿ ಪರಿಣಮಿಸುವುದಿಲ್ಲ. ಅನಂತರದಲ್ಲಿ ಅಲ್ಲಿಂದ ದಕ್ಷಾಶ್ರಮವೆಂಬ ಕ್ಷೇತ್ರಕ್ಕೆ ಹೋಗಿ ಅಲ್ಲಿರುವ ದಕ್ಷೇಶ್ವರನನ್ನು ಸೇವಿಸಿದರೆ ಅಶ್ವಮೇಧಯಜ್ಞದಿಂದ ಲಭಿಸಬಹುದಾದ ಫಲವನ್ನೇ ಅವನು ಹೊಂದುವನು.

ತತಃ ಶಾಲೂಕಿನಂ ಗಚ್ಛೇತ್ ಸ್ನಾತ್ವಾ ತೀರ್ಥೇ ದ್ವಿಜೋತ್ತಮಃ ।
ಹರಿಂ ಹರೇಣ ಸಂಯುಕ್ತಂ ಪೂಜಯಿತ್ವಾ ತು ಭಕ್ತಿತಃ ॥
ಪ್ರಾಪ್ನೋತ್ಯಭಿಮತಂ ಲೋಕಂ ಸರ್ವಪಾಪವಿವರ್ಜಿತಃ ॥ ೨೦ ॥

ಸರ್ಪಿರ್ದಧಿ ಸಮಾಸಾದ್ಯ ನಾಗಾನಾಂ ತೀರ್ಥಮುತ್ತಮಂ ।
ತತ್ರ ಸ್ನಾನಂ ನರಃ ಕೃತ್ವಾ ಮುಕ್ತೋ ನಾಗಭಯಾದ್ಭವೇತ್ ॥ ೨೧ ॥

ತತೋ ಗಚ್ಛೇಚ್ಚ ವಿಪ್ರೇಂದ್ರಾ ನರಕೋದ್ಧಾರರಂತುಕಂ ।
ತತ್ರಾಪಿ ರಜನೀಮೇಕಾಂ ಸ್ನಾತ್ವಾ ತೀರ್ಥವರೇ ಶುಭೇ ॥ ೨೩ ॥

ತತ್ರ ದ್ವಿತೀಯಂ ಸಂಪೂಜ್ಯ ದ್ವಾರಪಾಲಂ ಪ್ರಯತ್ನತಃ ।
ಬ್ರಾಹ್ಮಣಾನ್ ಭೋಜಯಿತ್ವಾ ಚ ಪ್ರಣಿಪತ್ಯ ಕ್ಷಮಾಪಯೇತ್ ॥ ೨೪ ॥

ತವ ಪ್ರಸಾದಾದ್ಯಕ್ಷೇಂದ್ರ ಮುಕ್ತೋಽಹಂ ಸರ್ವಕಿಲ್ಬಿಷೈಃ ।
ಸಿದ್ಧಿರ್ಮಯಾಭಿಲಷಿತಾ ಸಂಸಾರೇ ತಾಂ ಲಭಾಮ್ಯಹಂ ॥ ೨೫ ॥

ಏವಂ ಪ್ರಸಾದ್ಯ ಯಕ್ಷೇಂದ್ರಂ ತತಃ ಪಂಚನದಂ ವ್ರಜೇತ್ ॥ ೨೬ ॥

೨೦-೨೪. ಅನಂತರ ಶಾಲೂಕಿ ಎಂಬ ಕ್ಷೇತ್ರಕ್ಕೆ ಹೋಗಬೇಕು. ಆ ತೀರ್ಥದಲ್ಲಿ ಸ್ನಾನಮಾಡಿ ಅಲ್ಲಿರುವ ಹರನಿಂದ ಕೂಡಿದ ಹರಿಯನ್ನು ಭಕ್ತಿಯಿಂದ ಪೂಜಿಸಿದ್ದೇ ಆದರೆ ಅಂತಹ ದ್ವಿಜನು ಸರ್ವಪಾಪಮೋಕ್ಷಪೂರ್ವಕವಾಗಿ ತನಗೆ ಇಷ್ಟವಾದ ಲೋಕವನ್ನು ಹೊಂದುತ್ತಾನೆ. ತುಪ್ಪ ಮತ್ತು ಮೊಸರು ಇವನ್ನು ತೆಗೆದುಕೊಂಡು ಅಲ್ಲಿರುವ ನಾಗತೀರ್ಥವನ್ನು ಸೇವಿಸಿ ಸ್ನಾನಾದಿಗಳನ್ನು ನೆರವೇರಿಸಿದಲ್ಲಿ ಅಂತಹ ಮನುಷ್ಯನಿಗೆ ಸರ್ಪಭಯವೇ ಇರುವದಿಲ್ಲ. ಅನಂತರ ನರಕೋದ್ಧಾರವೆಂಬ ರಂತುಕದೇಶದ ಭಾಗವನ್ನು ಹೊಂದಿ ಅಲ್ಲಿನ ತೀರ್ಥದಲ್ಲಿ ಸ್ನಾನಮಾಡಿ ಅಲ್ಲಿ ಒಂದು ರಾತ್ರಿ ಇರಬೇಕು ಅಲ್ಲಿರುವ ಎರಡನೇ ದ್ವಾರಪಾಲಕನಾದ ಯಕ್ಷನನ್ನು ಪ್ರಯತ್ನದಿಂದ ಪೂಜೆಮಾಡಿ ಬ್ರಾಹ್ಮಣಭೋಜನಾದಿಗಳನ್ನು ನಡೆಸಿ ಅವನಲ್ಲಿ ಕ್ಷಮಾಪಣೆಯನ್ನು ಬೇಡಬೇಕು.

೨೫-೨೮. ಎಲೈ ಯಕ್ಷೇಂದ್ರನೇ, ನಿನ್ನ ಅನುಗ್ರಹದಿಂದ ನಾನು ಸರ್ವಪಾಪಗಳಿಂದಲೂ ಬಿಡುಗಡೆಯನ್ನು ಹೊಂದಿದೆನು. ಯಾವ ಸಿದ್ಧಿಯನ್ನು ನಾನು ಹೊಂದಲು ಆಶಿಪಟ್ಟಿದ್ದೇನೆಯೋ ಅದನ್ನು ಸಂಸಾರದಲ್ಲಿಯೇ ಹೊಂದುತ್ತೇನೆ. ಈ ಪ್ರಕಾರ ಯಕ್ಷೇಂದ್ರನ ಅನುಗ್ರಹವನ್ನು ಹೊಂದಿ ಅನಂತರ ಪಂಚನದಕ್ಷೇತ್ರಕ್ಕೆ ಹೊರಡ

ಪಂಚನದ್ಯಶ್ಚ ರುದ್ರೇಣ ಕೃತಾ ದಾನವಭೀಷಣಾಃ ।
ತೇನ ಸರ್ವೇಷು ಲೋಕೇಷು ತೀರ್ಥಂ ಪಂಚನದಂ ಸ್ಮೃತಂ ॥ ೨೭ ॥

ಕೋಟಿತೀರ್ಥಾನಿ ರುದ್ರೇಣ ಸಮಾಜಹ್ರೇ ಯತಸ್ತತಃ ।
ತೇನ ತ್ರೈಲೋಕ್ಯವಿಖ್ಯಾತಂ ಕೋಟಿತೀರ್ಥಂ ಪ್ರಚಕ್ಷತೇ ॥ ೨೮ ॥

ತಸ್ಮಿಂಸ್ತೀರ್ಥೆ ನರಃ ಸ್ನಾತ್ವಾ ದೃಷ್ಟ್ವಾ ಕೋಟೀಶ್ವರಂ ಹರಂ ।
ಪಂಚಯಜ್ಞಾನವಾಪ್ನೋತಿ ನಿತ್ಯಂ ಶ್ರದ್ಧಾಸಮನ್ವಿತಃ ॥ ೨೯ ॥

ತತ್ರೈವ ವಾಮನೋ ದೇವಃ ಸರ್ವದೇವೈಃ ಪ್ರತಿಷ್ಠಿತಃ ।
ತತ್ರಾಪಿ ಚ ನರಃ ಸ್ನಾತ್ವಾ ಹ್ಯಗ್ನಿಷ್ಟೋಮಫಲಂ ಲಭೇತ್ ॥ ೩೦ ॥

ಅಶ್ವಿನೋಸ್ತೀರ್ಥಮಾಸಾದ್ಯ ಶ್ರದ್ಧಾವಾನ್ಯೋ ಜಿತೇಂದ್ರಿಯಃ ।
ರೂಪವಾನ್ಭಾಗ್ಯಯುಕ್ತಶ್ಚ ಸ ಯಶಸ್ವೀ ನ ಸಂಶಯಃ ॥ ೩೧ ॥

ವರಾಹತೀರ್ಥಮಾಖ್ಯಾತಂ ವಿಷ್ಣುನಾ ಪರಿಕಲ್ಪಿತಂ ।
ತಸ್ಮಿನ್ ಸ್ನಾತ್ವಾ ಶ್ರದ್ಧಧಾನಃ ಪ್ರಯಾತಿ ಪರಮಾಂ ಗತಿಂ ॥ ೩೨ ॥

ಬೇಕು. ದಾನವರಿಗೆ ಭಯಂಕರಗಳಾದ ಐದು ನದಿಗಳನ್ನು ಅಲ್ಲಿ ರುದ್ರನು ಒಟ್ಟು ಗೂಡಿಸಿರುವದ್ದರಿಂದ ಆ ಕ್ಷೇತ್ರಕ್ಕೆ ಪಂಚನದವೆಂದು ಪ್ರಸಿದ್ಧಿಯುಂಟಾಗಿದೆ. ರುದ್ರನು ಕೋಟಿ ತೀರ್ಥಗಳನ್ನು ಸಂಗ್ರಹಿಸಿ ಈ ಪಂಚನದಕ್ಷೇತ್ರವನ್ನು ನಿರ್ಮಿಸಿರುವದರಿಂದ ಇದಕ್ಕೆ ಕೋಟಿ ತೀರ್ಥವೆಂದೂ ಮೂರು ಲೋಕದ ಪ್ರಖ್ಯಾತಿ ಇದೆ.

೨೯-೩೨. ಆ ತೀರ್ಥದಲ್ಲಿ ಸ್ನಾನಮಾಡಿ ಕೋಟೀಶ್ವರನಾದ ಹರನ ದರ್ಶನ ದಿಂದ ಮನುಷ್ಯನು ನಿತ್ಯವೂ ಪಂಚಯಜ್ಞವನ್ನು ಶ್ರದ್ಧೆಯಿಂದ ಆಚರಿಸಿದರೆ ಉಂಟಾ ಗುವ ಫಲವನ್ನು ಹೊಂದಬಹುದು. ಅದೇ ಕ್ಷೇತ್ರದಲ್ಲಿ ದೇವತೆಗಳು ಅರ್ಚಾವತಾರ ವುಳ್ಳ ವಾಮನನನ್ನು ಪ್ರತಿಷ್ಠೆಮಾಡಿರುವರು. ಅಲ್ಲಿಯೂ ಸ್ನಾನಾದಿಗಳನ್ನು ನಡಿಸಿ ಭಗವತ್ಸೇವೆಮಾಡಿದವನು ಅಗ್ನಿಷ್ಟೋಮದ ಫಲವನ್ನು ಹೊಂದುತ್ತಾನೆ. ಹಾಗೆಯೇ ಅಶ್ವಿನೀದೇವತೆಗಳ ತೀರ್ಥವನ್ನು ಹೊಂದಿ ಶ್ರದ್ಧೆಯಿಂದಲೂ ಜಿತೇಂದ್ರಿಯತೆಯಿಂದಲೂ ಸ್ನಾನಾದಿಗಳನ್ನು ನಡೆಸಿದಲ್ಲಿ ಅವನು ರೂಪವಂತನೂ ಭಾಗ್ಯವಂತನೂ ಯಶಸ್ವಿಯೂ ಆಗುವುದರಲ್ಲಿ ಸಂದೇಹವಿಲ್ಲ. ಹಾಗೆಯೇ ಮಹಾವಿಷ್ಣುವಿನಿಂದ ಏರ್ಪಡಿಸಲ್ಪಟ್ಟ ಪ್ರಖ್ಯಾತವಾದ ವರಾಹತೀರ್ಥವೂ ಇದೆ. ಅಲ್ಲಿ ಶ್ರದ್ಧೆಯಿಂದ ಸ್ನಾನಾದಿಗಳನ್ನು ಮಾಡಿದವನು ಪರಮಪದವನ್ನು ಹೊಂದುತ್ತಾನೆ.

ತತ್ರ ಗಚ್ಛೇಚ್ಚ ವಿಪ್ರೇಂದ್ರಾ ಸೋಮತೀರ್ಥಮನುತ್ತಮಂ ।
ಯತ್ರ ಸೋಮಸ್ತಪಸ್ತಪ್ತ್ವಾ ವ್ಯಾಧಿಮುಕ್ತೋ ಭವತ್ಪುರಾ ॥ ೩೩ ॥

ತತ್ರ ಸೋಮೇಶ್ವರಂ ದೃಷ್ಟ್ವಾ ಸ್ನಾತ್ವಾ ತೀರ್ಥವರೆ ಶುಭೆ ।
ರಾಜಸೂಯಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ॥ ೩೪ ॥

ವ್ಯಾಧಿಭ್ಯಶ್ಚ ವಿನಿರ್ಮುಕ್ತಃ ಸರ್ವದೋಷವಿವರ್ಜಿತಃ ।
ಸೋಮಲೋಕಮವಾಪ್ನೋತಿ ಚಂದ್ರೇಣ ರಮತೆ ಚಿರಂ ॥ ೩೫ ॥

ಭೂತೇಶ್ವರಂ ಚ ತತ್ರೈವ ಜ್ವಾಲಾಮಾಲೇಶ್ವರಂ ತಥಾ ।
ತಚ್ಚಲಿಙ್ಗಂ ಸಮಭ್ಯರ್ಚ್ಯ ನ ಭೂಯೋ ಜನ್ಮಚಾಪ್ನುಯಾತ್ ॥ ೩೬ ॥

ಏಕಹಂಸೆ ನರಃ ಸ್ನಾತ್ವಾ ಗೋಸಹಸ್ರಫಲಂ ಲಭೇತ್ ।
ಕೃತಶೌಚಂ ಸಮಾಸಾದ್ಯ ತೀರ್ಥಸೇವೀ ದ್ವಿಜೋತ್ತಮಾಃ ॥ ೩೭ ॥

ಪೌಂಡರೀಕಮವಾಪ್ನೋತಿ ಕೃತಶೌಚೋ ಭವೇನ್ನರಃ ।
ತತೋ ಮುಂಜವಟಂ ನಾಮ ಮಹಾದೇವಸ್ಯ ಧೀಮತಃ ॥ ೩೮ ॥

೩೩-೩೫. ಎಲೈ ವಿಪ್ರಶ್ರೇಷ್ಠರೇ, ಅಲ್ಲಿರುವ ಉತ್ತಮವಾದ ಸೋಮತೀರ್ಥವನ್ನು ಹೊಂದಬೇಕು. ಅಲ್ಲಿ ತನ್ನ ವ್ಯಾಧಿನಿವೃತ್ತಿಗಾಗಿ ಚಂದ್ರನು ತಪಸ್ಸುಮಾಡಿ ಪೂರ್ವದಲ್ಲಿ ವ್ಯಾಧಿನಿವೃತ್ತಿಯನ್ನು ಹೊಂದಿದನು. ಅಲ್ಲಿರುವ ತೀರ್ಥದಲ್ಲಿ ಸ್ನಾನಮಾಡಿ ಸೋಮೇಶ್ವರನನ್ನು ದರ್ಶನಮಾಡಿದ ಮನುಷ್ಯನು ರಾಜಸೂಯಯಾಗದ ಫಲವನ್ನು ಹೊಂದುತ್ತಾನೆ. ಎಲ್ಲಾವಿಧವಾದ ದೋಷಗಳಿಂದಲೂ ವ್ಯಾಧಿಯಿಂದಲೂ ವಿಮೋಚನವನ್ನು ಹೊಂದಿ ಚಂದ್ರಲೋಕಕ್ಕೆ ಹೋಗಿ ಚಂದ್ರನೊಡನೆ ಬಹಳಕಾಲ ಸುಖಭೋಗವನ್ನು ಅನುಭವಿಸುತ್ತಾನೆ.

೩೬-೩೮. ಅಲ್ಲಿಯೇ ಇರುವ ಭೂತೇಶ್ವರ ಮತ್ತು ಜ್ವಾಲಾಮಹೇಶ್ವರ ಇವರ ಲಿಂಗವನ್ನೂ ಪೂಜಿಸಿದಲ್ಲಿ ಆ ಮನುಷ್ಯನಿಗೆ ಪುನರ್ಜನ್ಮವಿಲ್ಲ ಅಲ್ಲಿಯೇ ಇರುವ ಏಕಹಂಸ ತೀರ್ಥದಸ್ನಾನದಿಂದ ಗೋಸಹಸ್ರದಾನದ ಫಲವನ್ನು ಹೊಂದುತ್ತಾನೆ. ಶುಚಿಯಾಗಿದ್ದು ಈ ತೀರ್ಥಗಳನ್ನು ಸೇವಿಸುವ ಮನುಷ್ಯನು ತಾನೂ ನಿಷ್ಕಲ್ಮಷನಾಗಿ ಪೌಂಡರೀಕಯಾಗದ ಫಲವನ್ನು ಹೊಂದುತ್ತಾನೆ.

೩೮-೪೨. ಅನಂತರ ಮುಂಜವಟವೆಂಬ ಮಹಾತ್ಮನಾದ ಮಹಾದೇವನ ಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ಉಪವಾಸವ್ರತದಿಂದ ಒಂದು ರಾತ್ರಿ ವಾಸಮಾಡಿದಲ್ಲಿ

ಏವಂ ಶ್ರುತ್ವಾ ಶುಭಂ ವಾಕ್ಯಂ ರಾಮಸ್ಯ ಪಿತರಸ್ತದಾ ।
ಪ್ರತ್ಯೂಚುಃ ಪರಮಪ್ರೀತಾ ರಾಮಂ ಹರ್ಷಪುರಸ್ಕೃತಾಃ ॥ ೯ ॥

ತಪಸ್ತೇ ವರ್ಧತಾಂ ಪುತ್ರ ಪಿತೃಭಕ್ತ್ಯಾ ವಿಶೇಷತಃ ।
ಯಚ್ಚ ರೋಷಾಭಿಭೂತೇನ ಕ್ಷತ್ರಮುತ್ಸಾದಿತಂ ತ್ವಯಾ ॥ ೧೦ ॥

ತತಶ್ಚ ಪಾಪಾನ್ಮುಕ್ತಸ್ತ್ವಂ ಪಾತಿತಾಸ್ತೇ ಸ್ವಕರ್ಮಭಿಃ ।
ಹ್ರದಾಶ್ಚೈತೇ ದ್ಯತೀರ್ಥತ್ವಂ ಗಮಿಷ್ಯಂತಿ ನಸಂಶಯಃ ॥ ೧೧ ॥

ಹ್ರದೇಷ್ವೇತೇಷು ಯಃ ಸ್ನಾತ್ವಾ ಸ್ವಾನ್ ಪಿತ್ರ್ಯಾಂಸ್ತರ್ಪಯಿಷ್ಯತಿ ।
ತಸ್ಯ ದಾಸ್ಯಂತಿ ಪಿತರೋ ಯಥಾಭಿಲಷಿತಂ ಫಲಂ ॥ ೧೨ ॥

ಈಪ್ಸಿತಾನ್ ಮಾನಸಾನ್ಕಾಮಾನ್ ಸ್ವರ್ಗವಾಸಂ ಚ ಶಾಶ್ವತಂ ।
ಏವಂದತ್ವಾ ವರಾನ್ ವಿಪ್ರಾ ರಾಮಸ್ಯಪಿತರಸ್ತದಾ ॥ ೧೩ ॥

ರಾಮಂ ಸುಭಾರ್ಗವಂ ಪ್ರೀತಾಸ್ತತ್ರೈವಾಂತರ್ದಧುಸ್ತದಾ ।
ಏವಂ ರಾಮಹ್ರದಾಃ ಪುಣ್ಯಾ ಭಾರ್ಗವಸ್ಯ ಮಹಾತ್ಮನಃ ॥ ೧೪ ॥

೯-೧೨. ಈ ಪ್ರಕಾರವಾದ ಭಾರ್ಗವನ ಶ್ರೇಷ್ಠವಾದ ಮಾತನ್ನು ಕೇಳಿ ಅವನ ಪಿತೃದೇವತೆಗಳು ಸಂತುಷ್ಟರಾಗಿ ಈ ಪ್ರಕಾರ ಪ್ರತ್ಯುತ್ತರವನ್ನು ಹೇಳಿದರು. ಎಲೈ ಪುತ್ರನೇ, ನಿನ್ನ ತಪಸ್ಸು ಅಭಿವೃದ್ಧಿಹೊಂದಲಿ. ಈ ರೀತಿಯಾದ ಪಿತೃಭಕ್ತಿಯಿಂದ ಮತ್ತೂ ಅಭಿವೃದ್ಧಿಹೊಂದಲಿ. ರೋಷಾವೇಶದಿಂದ ಕ್ಷತ್ರಿಯರನ್ನು ಕೊಂದದ್ದರಿಂದ ಯಾವ ಪಾಪ ಸಂಘನೆಯುಂಟಾಗಿದೆಯೋ ಆ ಪಾಪದಿಂದ ನೀನು ಈಗ ವಿಮುಕ್ತನಾಗಿದ್ದೀಯೆ. ಆ ಕ್ಷತ್ರಿಯರ ನಾಶಕ್ಕೆ ಅವರ ದುಷ್ಕರ್ಮವೇ ಕಾರಣವಾಗಿದೆ. (ನೀನು ಕಾರಣನಲ್ಲವೆಂದಭಿಪ್ರಾಯ) ಈ ಹ್ರದಗಳೆಲ್ಲವೂ ನಿನ್ನ ಕೋರಿಕೆಯಂತೆ ಈಗಲೇ ಮಹಾತೀರ್ಥಗಳಾಗಿವೆ. ಇವುಗಳಲ್ಲಿ ಸ್ನಾನಮಾಡಿ ಯಾರು ಪಿತೃಗಳ ಪ್ರೀತಿಗಾಗಿ ತರ್ಪಣಮಾಡುತ್ತಾರೆಯೋ ಅವರಿಗೆ ಆ ಪಿತೃಗಳು ಪ್ರೀತರಾಗಿ ಇಷ್ಟಫಲವನ್ನು ಕೊಡುತ್ತಾರೆ.

೧೩-೧೪. ಮತ್ತು ಅವರು ಮನಸ್ಸಿನಲ್ಲಿ ಅಪೇಕ್ಷೆಪಡುವ ಇಷ್ಟಾರ್ಥವನ್ನೂ ಕೊಟ್ಟು ಕೊನೆಗೆ ಶಾಶ್ವತವಾದ ಸ್ವರ್ಗಸುಖವನ್ನೂ ಉಂಟುಮಾಡುತ್ತಾರೆ. ಈ ಪ್ರಕಾರ ಭಾರ್ಗವರಾಮನಿಗೆ ಆ ಪಿತೃಗಳು ವರವನ್ನು ಕೊಟ್ಟು ಭಾರ್ಗವನ ಈ ಕಾರ್ಯಕ್ಕೆ ಮೆಚ್ಚಿ ಸಂತುಷ್ಟರಾಗಿ ಅಲ್ಲಿಯೇ ಅಂತರ್ಧಾನಹೊಂದಿದರು. ಈ ರೀತಿಯಾಗಿ

ಪತ್ನೀ ತಸ್ಯ ಮಹಾಯಕ್ಷೀ ನಾಮ್ನೋಲೂಖಲಮೇಖಲಾ ।
ಆಹತ್ಯದುಂದುಭಿಂ ಸಾ ತು ಭ್ರಮತೇ ನಿತ್ಯಮೇವ ಹಿ ॥ ೪೩ ॥

ಸಾ ದದರ್ಶ ಸ್ತ್ರಿಯಂ ಚೈಕಾಂ ಸಪುತ್ರಾಂ ಪಾಪದೇಶಜಾಂ ।
ತಾಮುವಾಚ ತದಾ ಯಕ್ಷೀ ಆಹತ್ಯ ನಿಶಿ ದುಂದುಭಿಂ ॥ ೪೬ ॥

ಯುಗಂಧರೆ ದಧಿ ಪ್ರಾಶ್ಯ ಉಷಿತ್ವಾ ಚಾಚ್ಯುತಸ್ಥಲೆ ।
ತದ್ವದ್ಭೂತಾಲಯೆ ಸ್ನಾತ್ವಾ ಸಪುತ್ರಾ ವಸ್ತುಮಿಚ್ಛಸಿ ॥ ೪೭ ॥

ದಿವಾ ಮಯಾ ತೆ ಕಥಿತಂ ರಾತ್ರೌ ಭಕ್ಷ್ಯಾಮಿ ನಿಶ್ಚಿತಂ ।
ಏತಚ್ಛ್ರುತ್ವಾ ತು ವಚನಂ ಪ್ರಣಿಪತ್ಯ ಚಯಕ್ಷಿಣೀಂ ॥ ೪೮ ॥

ಉವಾಚ ದೀನಯಾ ವಾಚಾ ಪ್ರಸಾದಂ ಕುರು ಭಾಮಿನಿ ।
ತತಃ ಸಾ ಯಕ್ಷಿಣೀ ತಾಂ ತು ಪ್ರೋವಾಚ ಕೃಪಯಾನ್ವಿತಾ ॥ ೪೯ ॥

ಯನ್ನೂ ಉಂಟುಮಾಡುತ್ತಾನೆ. ಅವನ ಪತ್ನಿಯಾದ ಉಲೂಖಲಮೇಖಲಾ ಎಂಬ ಹೆಸರುಳ್ಳ ಮಹಾಯಕ್ಷಿಯು ನಿತ್ಯವೂ ದುಂದುಭಿಯನ್ನು ಹೊಡೆಯುತ್ತಾ ಅಲ್ಲಲ್ಲಿ ಸಂಚರಿಸುತ್ತಿರುವಳು.

೪೬-೫೦. ಆ ಯಕ್ಷಿಣಿಯು ಒಂದಾನೊಂದು ಕಾಲದಲ್ಲಿ ಪಾಪದೇಶದಿಂದ ಅಲ್ಲಿಗೆ ಬಂದಿದ್ದ ಪುತ್ರವತಿಯಾದ ಸ್ತ್ರೀಯೊಬ್ಬಳನ್ನು ನೋಡಿದಳು. ಆಗ ರಾತ್ರಿಯಲ್ಲಿ ದುಂದುಭಿಯನ್ನು ಹೊಡೆದು ಅವಳನ್ನು ಕುರಿತು ನೀನು ಪಾಪದೇಶದಿಂದ ಬಂದ ಪಾಪಿಯಾಗಿದ್ದೀಯೆ ಯುಗಂಧರಕ್ಷೇತ್ರದಲ್ಲಿ ಮೊಸರನ್ನು ಕುಡಿದು ಅಚ್ಯುತನ ಸ್ಥಲದಲ್ಲಿ ವಾಸಮಾಡಿ ಭೂತಾಲಯದಲ್ಲಿ ಸ್ನಾನಮಾಡಿ ಶುದ್ಧಳಾಗಿ ಹಗಲಿನಲ್ಲಿ ಪುತ್ರನೊಡನೆ ಇಲ್ಲಿ ವಾಸಿಸುತ್ತಿರು. ರಾತ್ರಿಯಲ್ಲಿ ನಾನು ನಿನ್ನನ್ನು ಭಕ್ಷಿಸುತ್ತೇನೆ ಎಂದು ಹೇಳಿದಳು. ಈ ಮಾತನ್ನು ಕೇಳಿದ ಆ ವನಿತೆಯು ಭಯಪಟ್ಟು ಆ ಯಕ್ಷಿಣಿಯನ್ನು ನಮಸ್ಕರಿಸಿ ದೈನ್ಯದಿಂದ ಎಲೈ ಭಾಮಿನಿಯೇ, ನನ್ನ ವಿಷಯದಲ್ಲಿ ನೀನು ಅನುಗ್ರಹವನ್ನು ತೋರಿಸಬೇಕೆಂದು ಬೇಡಿಕೊಳ್ಳಲಾಗಿ ಆ ಯಕ್ಷಿಣಿಯು ದಯೆಯಿಂದ ಅವಳನ್ನು ಕುರಿತು ಪಾಪನಾಶಕ್ಕೆ ಉಪಾಯವನ್ನು ಹೀಗೆ ಹೇಳಿದಳು.

ಯದಾ ಸೂರ್ಯಸ್ಯಗ್ರಹಣಂ ಕಾಲೇನ ಭವಿತಾ ಕ್ವಚಿತ್ ।
ಸರಸ್ವತ್ಯಾಂ ತದಾ ಸ್ನಾತ್ವಾ ಪೂತಾ ಸ್ವರ್ಗಂ ಗಮಿಷ್ಯಸಿ ॥ ೫೦ ॥

ಇತಿ ಶ್ರೀ ವಾಮನಪುರಾಣೇ ಸರೋಮಾಹಾತ್ಮ್ಯೇ
ಚತುಸ್ತ್ರಿಂಶೋಽಧ್ಯಾಯಃ

ಯಾವುದಾದರೊಂದು ಕಾಲದಲ್ಲಿ ಸೂರ್ಯಗ್ರಹಣವು ಬಂದದ್ದೇ ಆದರೆ ಆಗ ಈ ಸರಸ್ವತೀನದಿಯಲ್ಲಿ ಸ್ನಾನಮಾಡು ನಿನ್ನ ಸಕಲ ಪಾಪವೂ ಹೋಗುತ್ತದೆ. ನೀನೂ ಸ್ವರ್ಗಲೋಕವನ್ನು ಹೊಂದುವೆ.

ಇಲ್ಲಿಗೆ ಶ್ರೀ ವಾಮನಪುರಾಣದಲ್ಲಿ ಸರೋಮಾಹಾತ್ಮ್ಯವೆಂಬ
ಮೂವತ್ತನಾಲ್ಕನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ತೀರ್ಥಗಳ ಮತ್ತು ಕುರುಕ್ಷೇತ್ರದ ಪುಣ್ಯವನಗಳ ವಿಷಯದಲ್ಲಿ ಉಂಟಾದ ಪ್ರಶ್ನೆಗೆ ತಕ್ಕಂತೆ ಅವುಗಳನ್ನು ನಿರ್ದೇಶಮಾಡಿ ತೋರಿಸಲಾಯಿತು. ಆ ತೀರ್ಥಗಳಲ್ಲಿ ಮಾಡಬೇಕಾದ ಸ್ನಾನಾದಿವಿಧಿಗಳನ್ನೂ, ತೀರ್ಥಾಧಿದೇವತೆಗಳ ಸೇವಾಕ್ರಮವನ್ನೂ ವಿಸ್ತಾರವಾಗಿ ಹೇಳಿ ಅವುಗಳ ಫಲವನ್ನೂ ಉಪಪಾದಿಸಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಪಂಚತ್ರಿಂಶೋಽಧ್ಯಾಯಃ

ಲೋಮಹರ್ಷಣ ಉವಾಚ

ತತೋ ರಾಮಹ್ರದಂ ಗಚ್ಛೇತ್ ತೀರ್ಥಸೇವೀ ದ್ವಿಜೋತ್ತಮಃ ।
ತತ್ರ ರಾಮೇಣ ವಿಪ್ರೇಣ ತರಸಾ ದೀಪ್ತತೇಜಸಾ ॥ ೧ ॥

ಕ್ಷತ್ರಮುತ್ಸಾದ್ಯ ವಿಪ್ರೇಣ ಹ್ರದಾಃ ಪಂಚ ನಿವೇಶಿತಾಃ ।
ಪೂರಯಿತ್ವಾ ನರವ್ಯಾಘ್ರ್ರುಧಿರೇಣೇತಿ ನಃ ಶ್ರುತಂ ॥ ೨ ॥

ಪಿತರಸ್ತರ್ಪಿತಾಸ್ತೇನ ತಥೈವ ಚ ಪಿತಾಮಹಾಃ ।
ತತಸ್ತೇ ಪಿತರಃ ಪ್ರೀತಾಃ ರಾಮಮೂಚುರ್ದ್ವಿಜೋತ್ತಮಾಃ ॥ ೩ ॥

ಮೂವತ್ತೈದನೆಯ ಅಧ್ಯಾಯವು

೧-೩. ಅನಂತರ ಮುಂದಿನ ತೀರ್ಥಗಳನ್ನೂ ಮತ್ತು ಫಲಗಳನ್ನೂ ಲೋಮಹರ್ಷಣರು ಪುನಃ ಹೇಳುತ್ತಾರೆ :—ತೀರ್ಥಯಾತ್ರಾಭಿಲಾಷಿಯಾದ ಬ್ರಾಹ್ಮಣನು ಅನಂತರ ರಾಮಹ್ರದಕ್ಕೆ ಹೋಗಬೇಕು. ಬ್ರಾಹ್ಮಣೋತ್ತಮನಾದ ಭಾರ್ಗವ ರಾಮನು ತನ್ನ ಪರಾಕ್ರಮದ ಜ್ವಾಲೆಯಿಂದ ಕ್ಷತ್ರಿಯರೆಲ್ಲರನ್ನೂ ನಾಶಪಡಿಸಿ ಐದು ಹ್ರದಗಳನ್ನು (ಹಳ್ಳಗಳನ್ನು) ಏರ್ಪಡಿಸಿ ಶೂರರಾದ ಕ್ಷತ್ರಿಯಾಗ್ರೇಸರರ ರಕ್ತದಿಂದ ಆ ಹ್ರದಗಳನ್ನು ತುಂಬಿಸಿದನೆಂದು ನಾವು ಕೇಳಿರುತ್ತೇವೆ. ಆ ಹ್ರದಗಳ ರಕ್ತದಿಂದ ಭಾರ್ಗವರಾಮನು ತನ್ನ ಪಿತೃಗಳನ್ನೂ, ಪಿತಾಮಹಾದಿಗಳನ್ನೂ ತರ್ಪಣದಿಂದ ತೃಪ್ತಿಗೊಳಿಸಿದನು. ಅದರಿಂದ ಪ್ರೀತರಾದ ಅವನ ಪಿತೃಗಳು ಭಾರ್ಗವನನ್ನು ಕುರಿತು ಹೀಗೆ ಹೇಳಿದರು.

ರಾಮ ರಾಮ ಮಹಾಬಾಹೋ ಪ್ರೀತಾಃ ಸ್ಮಸ್ತವ ಭಾರ್ಗವ ।
ಅನಯಾ ಪಿತೃಭಕ್ತ್ಯಾ ಚ ವಿಕ್ರಮೇಣ ಚ ತೇ ವಿಭೋ ॥ ೪ ॥

ವರಂ ವೃಣೀಷ್ವ ಭದ್ರಂ ತೇ ಕಮಿಚ್ಛಸಿ ಮಹಾಯಶಃ ।
ಏವಮುಕ್ತಸ್ತು ಪಿತೃಭೀರಾಮಃ ಪ್ರಭವತಾಂ ವರಃ ॥ ೫ ॥

ಅಬ್ರವೀತ್ಪ್ರಾಂಜಲಿರ್ವಾಕ್ಯಂ ಸ ಪಿತೄನ್ ಗಗನಸ್ಥಿತಾನ್ ।
ಭವಂತೋ ಯದಿ ಮೇ ಪ್ರೀತಾ ಸ್ತದನುಗ್ರಾಹ್ಯತಾಮಯಂ ॥ ೬ ॥

ಪಿತೃಪ್ರಸಾದಾದಿಚ್ಛೇಯಂ ತಪಸೋಽಸ್ಯಾಪನಂ ಪುನಃ ।
ಯಚ್ಚೋ ರೋಷಾಭಿಭೂತೇನ ಕ್ಷತ್ರಮುತ್ಸಾದಿತಂ ಮಯಾ । ॥ ೭ ॥

ತತಸ್ತು ಪಾಪಾನ್ಮುಚ್ಯೇಯ ಯುಷ್ಮಾಕಂ ತೇಜಸಾ ಹ್ಯಹಂ ।
ಹ್ರದಾಶ್ಚೈತೇ ತೀರ್ಥಭೂತಾ ಭವೇಯುರ್ಭುವಿ ವಿಶ್ರುತಾಃ ॥ ೮ ॥

೪-೮. ಎಲೈ ಭಾರ್ಗವರಾಮನೇ, ಮಹಾಬಾಹುವೇ, ನಿನ್ನ ಈ ಪಿತೃಭಕ್ತಿಯಿಂದಲೂ, ಪರಾಕ್ರಮಾತಿಶಯದಿಂದಲೂ ನಾವು ಸಂತುಷ್ಟರಾಗಿದ್ದೇವೆ. ಎಲೈ ಯಶಸ್ವಿಯೇ, ನಿನಗೆ ಮಂಗಳವಾಗಲಿ. ನಿನ್ನ ಇಚ್ಛೆಯಿದ್ದಂತೆ ಬೇಕಾದ ವರವನ್ನು ಕೇಳಿಕೋ ಕೊಡುವೆವು ಎಂದು ಈ ರೀತಿಯಾದ ಪಿತೃದೇವತೆಗಳ ಸಂತೋಷವಚನವನ್ನು ಕೇಳಿ ಮಹಾಮತಿಯಾದ ಭಾರ್ಗವನು ಭಕ್ತಿಸೂಚಕವಾದ ಅಂಜಲಿಬಂಧವುಳ್ಳವನಾಗಿ ಆಕಾಶದಲ್ಲಿ ನಿಂತಿರುವ ಆ ಪಿತೃದೇವತೆಗಳನ್ನು ಕುರಿತು ಹೀಗೆ ಹೇಳುತ್ತಾನೆ. ನನ್ನ ವಿಷಯದಲ್ಲಿ ನಿಮಗೆ ಪ್ರೀತಿಯುಂಟಾಗಿರುವ ಪಕ್ಷದಲ್ಲಿ ಈ ರೀತಿ ಅನುಗ್ರಹಿಸಿರಿ. ನಿಮ್ಮ ಅನುಗ್ರಹದಿಂದ ಈಗ ನಷ್ಟವಾಗಿರುವ ತಪಸ್ಸೆಲ್ಲವೂ ನನ್ನನ್ನೇ ಬಂದು ಸೇರಲಿ. ಬ್ರಾಹ್ಮಣ ಧರ್ಮವಾದ ಶಾಂತಿಯನ್ನು ಬಿಟ್ಟು ರೋಷಾವೇಶದಿಂದ ಎಲ್ಲ ಕ್ಷತ್ರಿಯರನ್ನೂ ಸಂಹರಿಸಿ ಯಾವ ಪಾಪವನ್ನು ನಾನು ಹೊಂದಿರುತ್ತೇನೆಯೋ ಆ ಪಾಪವೆಲ್ಲಾ ನಿಮ್ಮ ತೇಜಸ್ಸಿನಿಂದ ನಾಶವಾಗಲಿ. ಈ ಹ್ರದಗಳೂ ಕೂಡ ಭೂಮಿಯಲ್ಲಿ ಪ್ರಸಿದ್ಧವಾದ ತೀರ್ಥಗಳಾಗಲಿ.

ಏವಂ ಶ್ರುತ್ವಾ ಶುಭಂ ವಾಕ್ಯಂ ರಾಮಸ್ಯ ಪಿತರಸ್ತದಾ ।
ಪ್ರತ್ಯೂಚುಃ ಪರಮಪ್ರೀತಾ ರಾಮಂ ಹರ್ಷಪುರಸ್ಕೃತಾಃ ॥೯॥

ತಪಸ್ತೇ ವರ್ಧತಾಂ ಪುತ್ರ ಪಿತೃಭಕ್ತ್ಯಾ ವಿಶೇಷತಃ ।
ಯಚ್ಚ ರೋಷಾಭಿಭೂತೇನ ಕ್ಷತ್ರಮುತ್ಸಾದಿತಂ ತ್ವಯಾ ॥೧೦॥

ತತಶ್ಚ ಪಾಪಾನ್ಮುಕ್ತಸ್ತ್ವಂ ಪಾತಿತಾಸ್ತೇ ಸ್ವಕರ್ಮಭಿಃ ।
ಹ್ರದಾಶ್ಚೈತೇ ದ್ಯತೀರ್ಥತ್ವಂ ಗಮಿಷ್ಯಂತಿ ನಸಂಶಯಃ ॥೧೧॥

ಹ್ರದೇಷ್ವೇತೇಷು ಯಃ ಸ್ನಾತ್ವಾ ಸ್ವಾನ್ ಪಿತ್ರ್ಯಾಂಸ್ತರ್ಪಯಿಷ್ಯತಿ ।
ತಸ್ಯ ದಾಸ್ಯಂತಿ ಪಿತರೋ ಯಥಾಭಿಲಷಿತಂ ಫಲಂ ॥೧೨॥

ಈಪ್ಸಿತಾನ್ ಮಾನಸಾನ್ಕಾಮಾನ್ ಸ್ವರ್ಗವಾಸಂ ಚ ಶಾಶ್ವತಂ ।
ಏವಂದತ್ವಾ ವರಾನ್ ವಿಪ್ರಾ ರಾಮಸ್ಯಪಿತರಸ್ತದಾ ॥೧೩॥

ರಾಮಂ ಸುಭಾರ್ಗವಂ ಪ್ರೀತಾಸ್ತತ್ರೈವಾಂತರ್ದಧುಸ್ತದಾ ।
ಏವಂ ರಾಮಹ್ರದಾಃ ಪುಣ್ಯಾ ಭಾರ್ಗವಸ್ಯ ಮಹಾತ್ಮನಃ ॥೧೪॥

೯-೧೨. ಈ ಪ್ರಕಾರವಾದ ಭಾರ್ಗವನ ಶ್ರೇಷ್ಠವಾದ ಮಾತನ್ನು ಕೇಳಿ ಅವನ ಪಿತೃದೇವತೆಗಳು ಸಂತುಷ್ಟರಾಗಿ ಈ ಪ್ರಕಾರ ಪ್ರತ್ಯುತ್ತರವನ್ನು ಹೇಳಿದರು. ಎಲೈ ಪುತ್ರನೇ, ನಿನ್ನ ತಪಸ್ಸು ಅಭಿವೃದ್ಧಿಹೊಂದಲಿ. ಈ ರೀತಿಯಾದ ಪಿತೃಭಕ್ತಿಯಿಂದ ಮತ್ತೂ ಅಭಿವೃದ್ಧಿಹೊಂದಲಿ. ರೋಷಾವೇಶದಿಂದ ಕ್ಷತ್ರಿಯರನ್ನು ಕೊಂದದ್ದರಿಂದ ಯಾವ ಪಾಪ ಸಂಘನೆಯುಂಟಾಗಿದೆಯೋ ಆ ಪಾಪದಿಂದ ನೀನು ಈಗ ವಿಮುಕ್ತನಾಗಿದ್ದೀಯೆ. ಆ ಕ್ಷತ್ರಿಯರ ನಾಶಕ್ಕೆ ಅವರ ದುಷ್ಕರ್ಮವೇ ಕಾರಣವಾಗಿದೆ. (ನೀನು ಕಾರಣನಲ್ಲವೆಂದಭಿಪ್ರಾಯ) ಈ ಹ್ರದಗಳೆಲ್ಲವೂ ನಿನ್ನ ಕೋರಿಕೆಯಂತೆ ಈಗಲೇ ಮಹಾತೀರ್ಥಗಳಾಗಿವೆ. ಇವುಗಳಲ್ಲಿ ಸ್ನಾನಮಾಡಿ ಯಾರು ಪಿತೃಗಳ ಪ್ರೀತಿಗಾಗಿ ತರ್ಪಣಮಾಡುತ್ತಾರೆಯೋ ಅವರಿಗೆ ಆ ಪಿತೃಗಳು ಪ್ರೀತರಾಗಿ ಇಷ್ಟಫಲವನ್ನು ಕೊಡುತ್ತಾರೆ.

೧೩-೧೪. ಮತ್ತು ಅವರು ಮನಸ್ಸಿನಲ್ಲಿ ಅಪೇಕ್ಷೆಪಡುವ ಇಷ್ಟಾರ್ಥವನ್ನೂ ಕೊಟ್ಟು ಕೊನೆಗೆ ಶಾಶ್ವತವಾದ ಸ್ವರ್ಗಸುಖವನ್ನೂ ಉಂಟುಮಾಡುತ್ತಾರೆ. ಈ ಪ್ರಕಾರ ಭಾರ್ಗವರಾಮನಿಗೆ ಆ ಪಿತೃಗಳು ವರವನ್ನು ಕೊಟ್ಟು ಭಾರ್ಗವನ ಈ ಕಾರ್ಯಕ್ಕೆ ಮೆಚ್ಚಿ ಸಂತುಷ್ಟರಾಗಿ ಅಲ್ಲಿಯೇ ಅಂತರ್ಧಾನಹೊಂದಿದರು. ಈ ರೀತಿಯಾಗಿ

ಸ್ನಾತ್ವಾ ಹ್ರದೇಷು ರಾಮಸ್ಯ ಬ್ರಹ್ಮಚಾರೀ ಶುಚಿವ್ರತಃ ।
ರಾಮಂ ಸಮಭ್ಯರ್ಚ್ಯ ತಥಾ ವಿಂದೇದ್ಬಹು ಸುವರ್ಣಕಂ ॥ ೧೫ ॥

ವಂಶಮೂಲಂ ಸಮಾಸಾದ್ಯ ತೀರ್ಥಸೇವೀ ಸುಸಂಯುತಃ ।
ಸ್ವವಂಶಮುದ್ಧರೇದ್ವಿಪ್ರಾಃ ಸ್ನಾತ್ವಾ ಚೈವ ಸಮೂಲಕಂ ॥ ೧೬ ॥

ಕಾಯಶೋಧನಮಾಸಾದ್ಯ ತೀರ್ಥಂ ತ್ರೈಲೋಕ್ಯವಿಶ್ರುತಂ ।
ಶರೀರಶುದ್ಧಿಮಾಪ್ನೋತಿ ಸ್ನಾತಸ್ತಸ್ಮಿನ್ನ ಸಂಶಯಃ ॥ ೧೭ ॥

ಶುದ್ಧದೇಹಶ್ಚ ಸಂಯಾತಿ ಯಸ್ಮಾನ್ನಾವರ್ತತೇ ಪುನಃ ।
ತಾವದ್ಭ್ರಮಂತಿ ತೀರ್ಥೇಷು ಸಿದ್ಧಾಸ್ತೀರ್ಥಪರಾಯಣಾಃ ।
ಯಾವನ್ನ ಪ್ರಾಪ್ನುವಂತೀಹ ತೀರ್ಥಂ ತತ್ಕಾಯಶೋಧನಂ ॥ ೧೮ ॥

ತಸ್ಮಿಂಸ್ತೀರ್ಥೇ ಚ ಸಂಪ್ಲಾವ್ಯ ಕಾಯಂ ಸಂಯತಮಾನಸಃ ।
ಪರಂ ಪದಮವಾಪ್ನೋತಿ ಯಸ್ಮಾನ್ನಾವರ್ತತೇ ಪುನಃ ॥ ೧೯ ॥

ಮಹಾತ್ಮನಾದ ಭಾರ್ಗವನ ಆ ಹ್ರದಗಳು ಪುಣ್ಯತೀರ್ಥಗಳಾಗಿವೆ. ಈ ರಾಮಹ್ರದಗಳಲ್ಲಿ ಬ್ರಹ್ಮಚರ್ಯವ್ರತದಿಂದ ಶುಚಿಯಾಗಿದ್ದು ಸ್ನಾನಮಾಡಿ ಭಾರ್ಗವನನ್ನು ಪೂಜಾದಿಗಳಿಂದ ಸಂತೋಷಪಡಿಸಿದಲ್ಲಿ ಅವನು ಬಹುಮಟ್ಟಿಗೂ ಐಶ್ವರ್ಯವಂತನಾಗಿ ಬದುಕುತ್ತಾನೆ.

೧೬-೧೯. ಇದೇ ಪ್ರಕಾರ ತೀರ್ಥಸೇವಕನಾದವನು ವಂಶಮೂಲವೆಂಬ ತೀರ್ಥವನ್ನು ಸೇರಿ ಜಿತೇಂದ್ರಿಯನಾಗಿ ಅಲ್ಲಿ ಸ್ನಾನಾದಿಗಳನ್ನು ಆಚರಿಸಿದಲ್ಲಿ ಮೂಲದಿಂದ ಮೊದಲು ತನ್ನ ವಂಶವನ್ನೆಲ್ಲಾ ಉದ್ಧರಿಸಿದಂತಾಗುತ್ತದೆ. ಅನಂತರ ಕಾಯಶೋಧನವೆಂಬ ಲೋಕಪ್ರಸಿದ್ಧವಾದ ತೀರ್ಥಕ್ಕೆ ಹೋಗಿ ಸ್ನಾನಾದಿಗಳನ್ನು ನಡೆಸಿದಲ್ಲಿ ನಿಸ್ಸಂದೇಹವಾಗಿ ಶರೀರಶುದ್ಧಿಯನ್ನು ಹೊಂದುತ್ತಾನೆ. ದೇಹಶುದ್ಧಿಯನ್ನು ಹೊಂದಿದವನು ಪುನರಾವೃತ್ತಿರಹಿತವಾದ ಸ್ಥಾನವನ್ನು ಹೊಂದುತ್ತಾನೆ. ಈ ತೀರ್ಥಗಳನ್ನು ಸೇವಿಸುತ್ತಿರುವ ಸಿದ್ಧರೇ ಮೊದಲಾದವರು ಕಾಯಶೋಧನವೆಂಬ ಈ ತೀರ್ಥವನ್ನು ಸೇವಿಸುವುದಕ್ಕೆ ಮೊದಲು ಇತರ ತೀರ್ಥಗಳಲ್ಲಿ ಅಲೆದಾಡುತ್ತಿರುವರು. ಈ ತೀರ್ಥವನ್ನು ಹೊಂದಿ ಇಲ್ಲಿ ಸ್ನಾನಮಾಡಿದ್ದೇ ಆದರೆ ದೇಹದೊಡನೆ ಮನಶ್ಶುದ್ಧಿಯನ್ನು ಹೊಂದಿ ಪುನರಾವೃತ್ತಿರಹಿತವಾದ ಪರಮಪದವನ್ನೇ ಹೊಂದುತ್ತಾರೆ.

ತತೋ ಗಚ್ಛೇಚ್ಚ ವಿಪ್ರೇಂದ್ರಾಃ ತೀರ್ಥಂ ತ್ರೈಲೋಕ್ಯವಿಶ್ರುತಂ ।
ಲೋಕಾ ಯತ್ರೋದ್ಧೃತಾಸ್ಸರ್ವೇ ವಿಷ್ಣುನಾಪ್ರಭವಿಷ್ಣುನಾ ॥ ೨೦ ॥

ಲೋಕೋದ್ಧಾರಂ ಸಮಾಸಾದ್ಯ ತೀರ್ಥಂ ಸ್ಮರಣತತ್ಪರಃ ।
ಸ್ನಾತ್ವಾ ತೀರ್ಥವರೆ ತಸ್ಮಿನ್ ಲೋಕಂ ಪಶ್ಯತಿ ಶಾಶ್ವತಂ ॥ ೨೧ ॥

ಯತ್ರವಿಷ್ಣುಃ ಸ್ಥಿತೋ ನಿತ್ಯಂ ಶಿವೋ ದೇವಶ್ಚ ಶಾಶ್ವತಃ ।
ತೌದೇವೌ ಪ್ರಣಿಪಾತೇನ ಪ್ರಸಾದ್ಯ*ಮುಕ್ತಿಮಾಪ್ನುಯಾತ್ ॥ ೨೨ ॥

ಶ್ರೀತೀರ್ಥಂ ತು ತತೋ ಗಚ್ಛೇಚ್ಛಾಲಿಗ್ರಾಮಮನುತ್ತಮಂ ।
ಯತ್ರ ಸ್ನಾತಸ್ಯ ಸಾನ್ನಿಧ್ಯಂ ಸದಾ ದೇವಃ ಪ್ರಯಚ್ಛತಿ ॥ ೨೩ ॥

ಕಪಿಲಾಹ್ರದಮಾಸಾದ್ಯ ತೀರ್ಥಂ ತ್ರೈಲೋಕ್ಯವಿಶ್ರುತಂ ।
ತತ್ರ ಸ್ನಾತ್ವಾರ್ಚಯಿತ್ವಾ ಚ ದೈವತಾನಿ ಪಿತೄಂಸ್ತಥಾ ॥ ೨೪ ॥

ಕಪಿಲಾನಾಂ ಸಹಸ್ರಸ್ಯ ಫಲಂ ವಿಂದತಿ ಮಾನವಃ ।
ತತ್ರಸ್ಥಿತಂ ಮಹಾದೇವಂ ಕಾಪಿಲಂ ವಪುರಾಶ್ರಿತಂ ॥ ೨೫ ॥

೨೦-೨೨. ಎಲೈ ಬ್ರಾಹ್ಮಣೋತ್ತಮರೇ, ಅನಂತರ ಲೋಕವಿಖ್ಯಾತವಾದ ಲೋಕೋದ್ಧಾರತೀರ್ಥಕ್ಕೆ ಹೋಗಬೇಕು. ಅದು ಮಹಾತ್ಮನಾದ ವಿಷ್ಣುವು ಲೋಕವನ್ನೇ ಉದ್ಧಾರಮಾಡಿದ ಕ್ಷೇತ್ರ. ಮನಸ್ಸಿನಲ್ಲಿ ಅದರ ಮಾಹಾತ್ಮ್ಯವನ್ನು ಸ್ಮರಿಸುತ್ತಾ ಆ ತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದವನು ಶಾಶ್ವತವಾದ ಲೋಕವನ್ನು ನೋಡುತ್ತಾನೆ. ಅಲ್ಲಿರುವ ವಿಷ್ಣುವನ್ನೂ, ಶಿವನನ್ನೂ ನಮಸ್ಕರಿಸಿ ಅವರ ಪ್ರಸಾದವನ್ನು ಹೊಂದಿದವನಿಗೆ ಮೋಕ್ಷವೇ ಉಂಟಾಗುತ್ತದೆ.

೨೩-೨೫. ಅನಂತರ ಉತ್ಕೃಷ್ಟವಾದ ಸಾಲಿಗ್ರಾಮಗಳುಳ್ಳ ಶ್ರೀ ತೀರ್ಥಕ್ಕೆ ಹೋಗಬೇಕು. ಅಲ್ಲಿ ಸ್ನಾನಮಾಡಿದವನಿಗೆ ಭಗವಂತನ ಸಾನ್ನಿಧ್ಯವು ನಿತ್ಯವಾಗಿ ಲಭಿಸುತ್ತದೆ. ಅಲ್ಲಿರುವ ಕಪಿಲಾ ಎಂಬ ಪ್ರಸಿದ್ಧವಾದ ಹ್ರದ (ಸರೋವರ) ವನ್ನು ಹೊಂದಿ ಅಲ್ಲಿ ಸ್ನಾನಮಾಡಿ ದೇವತೆಗಳನ್ನೂ ಪಿತೃಗಳನ್ನೂ ಪೂಜಿಸಿದರೆ ಸಹಸ್ರ ಕಪಿಲಗೋದಾನದ ಫಲವನ್ನು ಹೊಂದುತ್ತಾನೆ. ಅಲ್ಲಿರುವ ಕಪಿಲರೂಪಧಾರಿಯಾದ ಮಹಾದೇವನನ್ನು ದರ್ಶನಮಾಡಿ ಮುಕ್ತಿಯನ್ನೇ ಹೊಂದುತ್ತಾನೆ. ಆ ಮಹಾದೇವನನ್ನು ಋಷಿಗಳು ಯಾವಾಗಲೂ ಪೂಜಿಸುತ್ತಿರುತ್ತಾರೆ.

---

* ಇಲ್ಲಿ ಪ್ರಸಾದ್ಯಸ್ಯಾಚ್ಚಮುಕ್ತಿಮಾರ್ ಎಂದಿದ್ದಲ್ಲಿ ಛಂದೋದೋಷವಿರುವುದಿಲ್ಲ.

ದೃಷ್ಟ್ವಾ ಮುಕ್ತಿಮವಾಪ್ನೋತಿ ಋಷಿಭಿಃ ಪೂಜಿತಂ ಶಿವಮ್ ॥ ೨೬ ॥
ಸೂರ್ಯತೀರ್ಥಂ ಸಮಾಸಾದ್ಯ ಸ್ನಾತ್ವಾ ನಿಯತಮಾನಸಃ ।

ಅರ್ಚಯಿತ್ವಾ ಪಿತೄನ್ದೇವಾನುಪವಾಸಪರಾಯಣಃ ।
ಅಗ್ನಿಷ್ಟೋಮಮವಾಪ್ನೋತಿ ಸೂರ್ಯಲೋಕಂ ಚ ಗಚ್ಛತಿ ॥ ೨೭ ॥

ಸಹಸ್ರಕಿರಣಂ ದೇವಂ ಭಾನುಂ ತ್ರೈಲೋಕ್ಯವಿಶ್ರುತಂ ।
ದೃಷ್ಟ್ವಾ ಮುಕ್ತಿಮವಾಪ್ನೋತಿ ನರೋಜ್ಞಾನಸಮನ್ವಿತಃ ॥ ೨೮ ॥

ಭವಾನೀವನಮಾಸಾದ್ಯ ತೀರ್ಥಸೇವೀ ಯಥಾಕ್ರಮಂ ।
ತತ್ರಾಭಿಷೇಕಂ ಕುರ್ವಾಣೋ ಗೋಸಹಸ್ರಫಲಂ ಲಭೇತ್ ॥ ೨೯ ॥

ಪಿತಾಮಹಸ್ಯ ಪಿಬತೋಹ್ಯಮೃತಂ ಪೂರ್ವಮೇವ ಹಿ ।
ಉದ್ಗಾರಾತ್ಸುರಭಿರ್ಜಾತಾ ಸಾ ಚ ಪಾತಾಲಮಾಶ್ರಿತಾ ॥ ೩೦ ॥

ತಸ್ಯಾಃ ಸುರಭಯೋ ಜಾತಾಃ ಮಾತರೋ ಲೋಕಮಾತರಃ ।
ತಾಭಿಸ್ತತ್ಸಕಲಂ ವ್ಯಾಪ್ತಂ ಪಾತಾಲಂ ಸುನಿರಂತರಂ ॥ ೩೧ ॥

೨೭-೨೯. ಅನಂತರ ಅಲ್ಲಿಂದ ಸೂರ್ಯತೀರ್ಥಕ್ಕೆ ಹೋಗಿ ಮನಶ್ಶುದ್ಧಿಯೊಡನೆ ಅಲ್ಲಿ ಸ್ನಾನಮಾಡಿ ಉಪವಾಸದಿಂದಿದ್ದು ಪಿತೃಗಳನ್ನೂ ದೇವತೆಗಳನ್ನೂ ಪೂಜಿಸಿದರೆ ಅವನಿಗೆ ಅಗ್ನಿಷ್ಟೋಮವೆಂಬ ಯಾಗದ ಫಲವು ಲಭಿಸುತ್ತದೆ. ಸೂರ್ಯಲೋಕಕ್ಕೂ ಅವನು ಹೋಗುತ್ತಾನೆ. ಅಲ್ಲಿಯೇ ಪ್ರತಿಷ್ಠಿತನಾಗಿರುವ ತೀರ್ಥದೇವತೆಯಾದ ಸೂರ್ಯನನ್ನು ದರ್ಶನಮಾಡಿದವನಿಗೆ ಜ್ಞಾನೋದಯವುಂಟಾಗಿ ಮೋಕ್ಷವೇ ಲಭಿಸುತ್ತದೆ. ತೀರ್ಥಯಾತ್ರಾಸೇವಿಯಾದವನು ಅನಂತರ ಭವಾನೀವನಕ್ಕೆ ಹೋಗಬೇಕು. ಅಲ್ಲಿರುವ ತೀರ್ಥದಲ್ಲಿ ಸ್ನಾನಮಾಡಿದ್ದೇ ಆದರೆ ಗೋಸಹಸ್ರದಾನದ ಫಲವನ್ನು ಹೊಂದುತ್ತಾನೆ.

೩೦-೩೩. ಪೂರ್ವದಲ್ಲಿ ಚತುರ್ಮುಖನು ಅಮೃತಪಾನವನ್ನು ಮಾಡುತ್ತಿರುವಾಗ ಹೊರಕ್ಕೆಹೊರಟ ಆ ಅಮೃತದ ಭಾಗದಿಂದ ಒಂದು ಧೇನುವು ಉದ್ಭವಿಸಿತು. ಅದು ಒಡನೆಯೇ ಪಾತಾಲಲೋಕವನ್ನು ಆಶ್ರಯಿಸಿತು. ಆ ಧೇನುವಿನಿಂದುಂಟಾದ ಗೋವುಗಳೇ ಲೋಕಪೂಜ್ಯಗಳಾದುವು. ಪಾತಾಲಲೋಕವೆಲ್ಲವೂ ಆ ಗೋವುಗಳಿಂದ ನಿಬಿಡವಾಗಿ ತುಂಬಿಹೋಯಿತು. ಚತುರ್ಮುಖನು ಯಜ್ಞಮಾಡುವ ಸಮಯದಲ್ಲಿ

ಪಿತಾಮಹಸ್ಯ ಯಜತೋ ದಕ್ಷಿಣಾರ್ಥಮುಪಾಹೃತಾಃ ।
ಆಹೂತಾ ಬ್ರಾಹ್ಮಣಾಸ್ತೇ ಚ ವಿಭ್ರಾಂತಾ ವಿವರೇಣ ಹಿ ॥ ೩೨ ॥

ತಸ್ಮಿನ್ವಿವರದ್ವಾರೇತು ಸ್ಥಿತೋಗಣಪತಿಸ್ಸ್ವಯಂ ।
ಯಂ ದೃಷ್ಟ್ವಾ ಸಕಲಾನ್ಕಾಮಾನಾಪ್ನೋತಿ ನಿಯತೇಂದ್ರಿಯಃ ॥ ೩೩ ॥

ಸಂಗಿನೀಂ ತು ಸಮಾಸಾದ್ಯ ತೀರ್ಥಂ ಮುಕ್ತಿಸಮಾಶ್ರಯಂ ।
ದೇವ್ಯಾಸ್ತೀರ್ಥೇ ನರಃ ಸ್ನಾತ್ವಾ ಲಭತೇ ರೂಪಮುತ್ತಮಂ ॥ ೩೪ ॥

ಅನಂತಾಂ ಶ್ರಿಯಮಾಪ್ನೋತಿ ಪುತ್ರಪೌತ್ರೈಸ್ಸಮನ್ವಿತಃ ।
ಭೋಗಾಂಶ್ಚ ವಿಪುಲಾನ್ ಲಬ್ಧ್ವಾ ಪ್ರಾಪ್ನೋತಿ ಪರಮಂಪದಂ ॥ ೩೫ ॥

ಬ್ರಹ್ಮಾವರ್ತೇ ನರಃ ಸ್ನಾತ್ವಾ ಬ್ರಹ್ಮಜ್ಞಾನಸಮನ್ವಿತಃ ।
ಜಾಯತೇ ನಾತ್ರ ಸಂದೇಹಃ ಪ್ರಾಣಾನ್ಮುಂಚತಿಚೇಚ್ಛಯಾ ॥ ೩೬ ॥

ತತೋ ಗಚ್ಛೇದ್ಧಿ ವಿಪ್ರೇಂದ್ರಾಃ ದ್ವಾರಪಾಲಂ ಚ ರಂತುಕಂ ।
ತತ್ರ ತೀರ್ಥೇ ಸರಸ್ವತ್ಯಾ ಯಕ್ಷೇಂದ್ರಸ್ಯ ಮಹಾತ್ಮನಃ ॥ ೩೭ ॥

ದಾನಕ್ಕಾಗಿ ಆ ಗೋವುಗಳು ಒಂದು ದ್ವಾರದಿಂದ ಮೇಲಕ್ಕೆ ತರಲ್ಪಟ್ಟವು. ಆ ದ್ವಾರವನ್ನು ನೋಡಿ ಅಲ್ಲಿದ್ದ ಬ್ರಾಹ್ಮಣರೆಲ್ಲರೂ ಭಯಭ್ರಾಂತರಾದರು. ಆ ದ್ವಾರದ ಬಾಗಿಲಿನಲ್ಲಿ ಗಣಪತಿಯು ನೆಲಸಿರುತ್ತಾನೆ. ಅವನನ್ನು ಜಿತೇಂದ್ರಿಯನಾಗಿ ದರ್ಶನ ಮಾಡಿದಲ್ಲಿ ಅವನಿಗೆ ಎಲ್ಲಾ ಇಷ್ಟಗಳೂ ಸಿದ್ಧಿಸುತ್ತವೆ.

೩೪-೩೬. ಅನಂತರ ಸಂಗಿನಿಯೆಂದು ಪ್ರಸಿದ್ಧವಾದ ಮುಕ್ತಿಪ್ರದವಾದ ಕ್ಷೇತ್ರವನ್ನು ಹೊಂದಿ ಅಲ್ಲಿರುವ ದೇವೀತೀರ್ಥದಲ್ಲಿ ಸ್ನಾನಮಾಡಿದಲ್ಲಿ ಒಳ್ಳೆಯ ರೂಪವನ್ನು ಹೊಂದುತ್ತಾನೆ. ಪುತ್ರಪೌತ್ರರೊಡನೆ ಐಶ್ವರ್ಯಶಾಲಿಯಾಗಿ ಅನೇಕ ಭೋಗಗಳನ್ನೂ ಅನುಭವಿಸಿ ಕೊನೆಗೆ ಪರಮಪದವನ್ನೂ ಹೊಂದುತ್ತಾನೆ. ಬ್ರಹ್ಮಾವರ್ತದಲ್ಲಿ ಸ್ನಾನ ಮಾಡಿದವನು ಬ್ರಹ್ಮಜ್ಞಾನವನ್ನು ಹೊಂದುತ್ತಾನೆ. ಮತ್ತು ಇಚ್ಛಾಧೀನವಾದ ಮರಣವನ್ನು ಹೊಂದುತ್ತಾನೆ.

೩೭-೪೦. ಎಲೈ ವಿಪ್ರಶ್ರೇಷ್ಠರೇ, ಅನಂತರ ರಂತುಕಕ್ಷೇತ್ರವನ್ನೂ ಅಲ್ಲಿರುವ ದ್ವಾರಪಾಲನಾದ ಯಕ್ಷನನ್ನೂ ಹೊಂದಬೇಕು. ಆ ದ್ವಾರಪಾಲನಿಂದ ರಕ್ಷಿಸಲ್ಪಟ್ಟಿರುವ

ತತ್ರ ಜ್ಞಾನಂ ಸಮಾಸಾದ್ಯ ಹ್ಯುಪವಾಸಪರಾಯಣಃ ।
ಯಕ್ಷಸ್ಯ ಚ ಪ್ರಸಾದೇನ ಲಭತೇ ಕಾಮಿಕಂ ಫಲಂ ॥ ೩೮ ॥

ತತೋ ಗಚ್ಛೇದ್ಧಿ ವಿಪ್ರೇಂದ್ರಾಃ ಬ್ರಹ್ಮಾವರ್ತಂ ಮುನಿಸ್ತುತಂ ।
ಬ್ರಹ್ಮಾವರ್ತೇ ನರಃ ಸ್ನಾತ್ವಾ ಬ್ರಹ್ಮಚಾಪ್ನೋತಿ ನಿಶ್ಚಿತಂ ॥ ೩೯ ॥

ತತೋ ಗಚ್ಛೇಚ್ಚ ವಿಪ್ರೇಂದ್ರಾಃ ಸುತೀರ್ಥಕಮನುತ್ತಮಂ ।
ತತ್ರ ಸನ್ನಿಹಿತಾ ನಿತ್ಯಂ ಪಿತರೋ ದೈವತೈಃಸಹ ॥ ೪೦ ॥

ತತ್ರಾಭಿಷೇಕಂ ಕುರ್ವೀತ ಪಿತೃದೇವಾರ್ಚನೇ ರತಃ ।
ಅಶ್ವಮೇಧಮವಾಪ್ನೋತಿ ಪಿತೄನ್ ಪ್ರೀಣಾತಿ ಶಾಶ್ವತಂ ॥ ೪೧ ॥

ತತೋಽವಂತ್ಯಾಂ ಚ ಧರ್ಮಜ್ಞಾ ಸಮಾಸಾದ್ಯ ಯಥಾಕ್ರಮಂ ।
ಕಾಮೇಶ್ವರಸ್ಯ ತೀರ್ಥೇ ತು ಸ್ನಾತ್ವಾ ಶ್ರದ್ಧಾಸಮನ್ವಿತಃ ॥ ೪೨ ॥

ಸರ್ವವ್ಯಾಧಿವಿನಿರ್ಮುಕ್ತೋ ಬ್ರಹ್ಮಚಾಪ್ನೋತಿ ನಿಶ್ಚಿತಂ ।
ಮಾತೃತೀರ್ಥೇ ಚ ತತ್ರೈವ ಯತ್ರ ಸ್ನಾತಸ್ಯ ಭಕ್ತಿತಃ ॥ ೪೩ ॥

ಸರಸ್ವತೀತೀರ್ಥದಲ್ಲಿ ಸ್ನಾನಮಾಡಿ ಉಪವಾಸನಿರತನಾಗಿದ್ದು ಜ್ಞಾನವನ್ನು ಹೊಂದಿ ಆ ಯಕ್ಷನ ಅನುಗ್ರಹದಿಂದ ಇಷ್ಟವಾದ ಫಲವನ್ನು ಹೊಂದುತ್ತಾನೆ. ಅನಂತರ ಅನೇಕ ಮುನಿಗಳಿಂದ ಪ್ರಶಂಸಿತವಾಗಿರುವ ಬ್ರಹ್ಮಾವರ್ತಕ್ಕೆ ಹೋಗಬೇಕು. ಆ ಬ್ರಹ್ಮಾವರ್ತತೀರ್ಥದಲ್ಲಿ ಸ್ನಾನಮಾಡಿದವನು ಪರಬ್ರಹ್ಮವನ್ನು ಹೊಂದಿಯೇ ಹೊಂದುತ್ತಾನೆ ಅನಂತರ ಸುತೀರ್ಥವೆಂಬ ಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ಯಾವಾಗಲೂ ಪಿತೃಗಳೂ ದೇವತೆಗಳೂ ಸನ್ನಿಹಿತರಾಗಿಯೇ ಇರುತ್ತಾರೆ.

೪೧-೪೩. ಅಲ್ಲಿ ಸ್ನಾನಮಾಡಿ ಪಿತೃಗಳನ್ನೂ ದೇವತೆಗಳನ್ನೂ ಪೂಜಿಸಿದಲ್ಲಿ ಅವನು ಅಶ್ವಮೇಧಯಾಗದ ಫಲವನ್ನು ಹೊಂದುತ್ತಾನೆ. ಪಿತೃಗಳಿಗೂ ಶಾಶ್ವತ ಪ್ರೀತಿಯನ್ನುಂಟುಮಾಡುತ್ತಾನೆ. ಅನಂತರ ಅವಂತ್ಯಾಕ್ಷೇತ್ರವನ್ನು ಕ್ರಮವಾಗಿ ಹೊಂದಿ ಅಲ್ಲಿರುವ ಕಾಮೇಶ್ವರತೀರ್ಥದಲ್ಲಿ ಶ್ರದ್ಧೆಯಿಂದ ಸ್ನಾನಮಾಡಿದವನು ವ್ಯಾಧಿಗಳಿಂದ ವಿಮುಕ್ತನಾಗಿ ಬ್ರಹ್ಮವನ್ನೇ ಹೊಂದುತ್ತಾನೆ. ಮತ್ತು ಅಲ್ಲಿಯೇ ಇರುವ ಮಾತೃತೀರ್ಥದಲ್ಲಿ ಭಕ್ತಿಯಿಂದ ಸ್ನಾನಮಾಡಿದವನಿಗೆ ಪ್ರಜಾವೃದ್ಧಿಯೂ ಅಪರಿಮಿತವಾದ ಐಶ್ವರ್ಯವೂ ಉಂಟಾಗುತ್ತದೆ.

ಪ್ರಜಾ ವಿವರ್ಧತೆ ನಿತ್ಯಂ ಅನಂತಾಂ ಚಾಪ್ನುಯಾಚ್ಛ್ರಿಯಂ ॥ ೪೪ ॥
ತತಃ ಸೀತಾವನಂ ಗಚ್ಛೇತ್ ನಿಯತೋ ನಿಯತಾಶನಃ ।

ತೀರ್ಥಂ ತತ್ರ ಚ ವಿಪ್ರೇಂದ್ರಾ ಮಹದನ್ಯತ್ರ ದುರ್ಲಭಂ ।
ಪುನಾತಿ ದರ್ಶನಾದೇವ ಪುರುಷಾನೇಕವಿಂಶತಿಂ ॥ ೪೫ ॥

ಕೇಶಾನಭ್ಯುಕ್ಷ್ಯ ಚೈಕಸ್ಮಿನ್ ಪೂತೋ ಭವತಿ ಪಾಪತಃ ।
ತತ್ರ ತೀರ್ಥವರಂ ಚಾನ್ಯಚ್ಛ್ವನಾಂ ಲೋಮಾಪಹಂ ಮಹತ್ ॥ ೪೬ ॥

ತತ್ರ ವಿಪ್ರಾ ಮಹಾಪ್ರಾಜ್ಞಾ ವಿದ್ವಾಂಸಃ ತೀರ್ಥತತ್ಪರಾಃ ।
ಶ್ವವಿಲೋಮಾಪಹೇ ತೀರ್ಥೇ ವಿಪ್ರಾಸ್ತ್ರೈಲೋಕ್ಯವಿಶ್ರುತೆ ॥ ೪೭ ॥

ಪ್ರಾಣಾಯಾಮೈರ್ನಿರ್ಹರಂತಿ ಸ್ವಲೋಮಾನಿ ದ್ವಿಜೋತ್ತಮಾಃ ।
ಪೂತಾತ್ಮಾನಶ್ಚ ತೆ ವಿಪ್ರಾಃ ಪ್ರಯಾಂತಿ ಪರಮಾಂ ಗತಿಂ ॥ ೪೮ ॥

೪೪-೪೮. ಅನಂತರ ಸೀತಾವನಕ್ಕೆ ಹೋಗಬೇಕು. ಅಲ್ಲಿ ಆಹಾರನಿಯಮದಿಂದಲೂ ಜಿತೇಂದ್ರಿಯತೆಯಿಂದಲೂ ಇರಬೇಕು. ಅಲ್ಲಿರುವ ಸೀತಾತೀರ್ಥವು ಬಹಳ ದುರ್ಲಭವಾದದ್ದು. ಆ ಮಹಾತೀರ್ಥವನ್ನು ನೋಡಿದೊಡನೆಯೇ ಅವನ ಇಪ್ಪತ್ತೊಂದು ವಂಶೀಯ ಪುರುಷರನ್ನೂ ಅದು ಪವಿತ್ರರನ್ನಾಗಿ ಮಾಡುತ್ತದೆ. ಆ ತೀರ್ಥದ ಒಂದು ಭಾಗದಲ್ಲಿ ನಿಂತು ಆ ತೀರ್ಥದಿಂದ ತಲೆಯ ಕೇಶಗಳನ್ನು ಪ್ರೋಕ್ಷಿಸಿಕೊಂಡದ್ದೇ ಆದರೆ ಅವನು ಸಕಲ ಪಾಪರಹಿತನಾಗಿ ಪರಿಶುದ್ಧನಾಗುತ್ತಾನೆ. ಅಲ್ಲಿಯೇ ಶ್ವಲೋಮಾಪಹವೆಂಬ ಮತ್ತೊಂದು ಮಹಾತೀರ್ಥವಿದೆ. (ಇಲ್ಲಿ ಲೋಮಹಾನಿಯು ಪಾಪನಾಶಕ್ಕೆ ಸೂಚಕವೆಂದು ತಿಳಿಯಬೇಕು. ಕೇವಲ ನಾಯಿಗಳ ರೋಮಕ್ಕೆ ನಾಶಕವೆಂದು ಅರ್ಥಮಾಡಿದಲ್ಲಿ ತೀರ್ಥದ ಪ್ರಾಶಸ್ತ್ಯವು ಅಷ್ಟೊಂದು ತೋರುವುದಿಲ್ಲ. ನಾಯಿಗಳಿಗೂ ಕೂಡ ಆಜನ್ಮಪ್ರಾಪ್ತಿಗೆ ಕಾರಣವಾದ ಪಾಪಗಳನ್ನು ನಾಶಮಾಡತಕ್ಕದ್ದೆಂದು ತಾತ್ಪರ್ಯ. ಮನುಷ್ಯರಿಗೂ ತೀರ್ಥಸ್ನಾನಕಾಲದಲ್ಲಿಯೂ ಆಶೌಚಾದಿನಿವೃತ್ತಿಕಾಲದಲ್ಲಿಯೂ ಪ್ರಾಯಶ್ಚಿತ್ತಕಾಲದಲ್ಲಿಯೂ ಧರ್ಮಶಾಸ್ತ್ರಕಾರರು ಕ್ಷೌರವನ್ನು ವಿಧಿಸಿರುವದು ಅಶುಚಿ ಮತ್ತು ಪಾಪಗಳ ನಿವೃತ್ತಿಗೆ ಸೂಚಕವೆಂದೇ ತಾತ್ಪರ್ಯ. ಶುನಾಂ ಲೋಮಾಪಹಂ ಎಂಬ ವಾಕ್ಯಕ್ಕೂ ಶುನಾಮಪಿ ಲೋಮಾಪಹಂ ಎಂದೇ ಅರ್ಥಮಾಡಿಕೊಳ್ಳಬೇಕು.) ಆ ಮಹಾತೀರ್ಥದಲ್ಲಿ ತೀರ್ಥಯಾತ್ರಾತತ್ಪರರಾದ ಮಹಾಪ್ರಾಜ್ಞರು ಪ್ರಾಣಾಯಾಮಾದಿಗಳಿಂದ ತಮ್ಮ ಪಾಪವನ್ನು ನಾಶಪಡಿಸಿಕೊಳ್ಳುತ್ತಾರೆ. ಈರೀತಿ ಪರಿಶುದ್ಧರಾದ ಆ ಬ್ರಾಹ್ಮಣೋತ್ತಮರು ಪರಮಪದಗಾಮಿಗಳೇ ಆಗುತ್ತಾರೆ.

ದಶಾಶ್ವಮೇಧಿಕಂ ಚೈವ ತತ್ರ ತೀರ್ಥಂ ಸುವಿಶ್ರುತಂ ।
ತತ್ರ ಸ್ನಾತ್ವಾ ಭಕ್ತಿಯುತಃ ತದೇವಲಭತೆ ಫಲಂ ॥ ೪೯ ॥

ತತೋ ಗಚ್ಛೇದ್ಧಿ ಶ್ರದ್ಧಾವಾನ್ಮಾನುಷಂ ಲೋಕವಿಶ್ರುತಂ ।
ದರ್ಶನಾತ್ತಸ್ಯ ತೀರ್ಥಸ್ಯ ಮುಕ್ತೋಭವತಿ ಕಿಲ್ಬಿಷೈಃ ॥ ೫೦ ॥

ಪುರಾ ಕೃಷ್ಣಮೃಗಾಸ್ತತ್ರ ವ್ಯಾಧೈಸ್ತು ಶರಪೀಡಿತಾಃ ।
ಅವಗಾಹ್ಯ ನರಸ್ಯಸ್ಮಿನ್ ಮಾನುಷತ್ವಮುಪಾಗತಾಃ ॥ ೫೧ ॥

ತತೋ ವ್ಯಾಧಾಶ್ಚ ತೇ ಸರ್ವೇ ತಾನಪೃಚ್ಛನ್ ದ್ವಿಜೋತ್ತಮಾನ್ ।
ಮೃಗಾಃ ಕ್ವ ಋಷಯೋ ಯಾತಾ ಅಸ್ಮಾಭಿಶ್ಶರಪೀಡಿತಾಃ ॥ ೫೨ ॥

ನಿಮಗ್ನಾಸ್ತೇ ಸರಃ ಪ್ರಾಪ್ಯ ಕಿಂತದ್ಬ್ರೂತ ದ್ವಿಜೋತ್ತಮಾಃ ।
ತೇ ಬ್ರುವಂಸ್ತತ್ರ ವೈಪೃಷ್ಟಾ ವಯಂ ತೇಚ ದ್ವಿಜೋತ್ತಮಾಃ ॥ ೫೩ ॥

ಅಸ್ಯ ತೀರ್ಥಸ್ಯ ಮಾಹಾತ್ಮ್ಯಾನ್ಮಾನುಷತ್ವಮುಪಾಗತಾಃ ।
ತಸ್ಮಾದ್ಯೂಯಂ ಶ್ರದ್ಧಧಾನಾಃ ಸ್ನಾತ್ವಾ ತೀರ್ಥೆ ವಿಮತ್ಸರಾಃ ॥ ೫೪ ॥

೪೯-೫೨. ಅಲ್ಲಿಯೇ ದಶಾಶ್ವಮೇಧಿಕವೆಂಬ ಪ್ರಸಿದ್ಧವಾದ ತೀರ್ಥವಿದೆ. ಅಲ್ಲಿ ಭಕ್ತಿಯಿಂದ ಸ್ನಾನಮಾಡಿದವನು ಹತ್ತು ಅಶ್ವಮೇಧದ ಫಲವನ್ನೇ ಹೊಂದುತ್ತಾನೆ. ಅನಂತರ ಆಸ್ತಿಕ್ಯವುಳ್ಳ ಮನುಷ್ಯನು ಪ್ರಸಿದ್ಧವಾದ ಮಾನುಷತೀರ್ಥಕ್ಕೆ ಹೋಗಬೇಕು. ಅದರ ದರ್ಶನಮಾತ್ರವೇ ಸರ್ವಪಾಪನಾಶಕವಾದದ್ದು ಪೂರ್ವದಲ್ಲಿ ಆ ಸ್ಥಲದಲ್ಲಿ ಬೇಡರಿಂದ ಬಾಣಪ್ರಯೋಗದಿಂದ ಪೀಡಿತಗಳಾದ ಜಿಂಕೆಗಳು ಈ ಸರೋವರವನ್ನು ಪ್ರವೇಶಿಸಿ ಒಡನೆಯೇ ಮನುಷ್ಯರೂಪವನ್ನು ಹೊಂದಿದವು. ಆಗ ಆ ಬೇಡರು ಮನುಷ್ಯರೂಪದಿಂದ ಬ್ರಾಹ್ಮಣರಾಗಿ ಬಂದವರನ್ನು ಕುರಿತು ಎಲೈ ಋಷಿಗಳಿರಾ, ನಮ್ಮಿಂದ ಬಾಣಗಳಿಂದ ಹಿಂಸಿಸಲ್ಪಟ್ಟಿದ್ದ ಆ ಮೃಗಗಳು ಎಲ್ಲಿ

೫೩-೫೬. ಆ ಮೃಗಗಳೆಲ್ಲವೂ ಸರೋವರವನ್ನು ಹೊಂದಿ ಅಲ್ಲಿಯೇ ಮುಳುಗಿ ಹೋದುವೇ? ಏನು ಎಂದು ಕೇಳಲಾಗಿ ಆ ಬ್ರಾಹ್ಮಣರು ನಾವೇ ಆ ಮೃಗಗಳೆಂದೂ ಈ ತೀರ್ಥದ ಮಾಹಾತ್ಮ್ಯದಿಂದ ಮಾನುಷತ್ವವನ್ನು ಹೊಂದಿದೆವೆಂದೂ ಉತ್ತರಕೊಟ್ಟು ನೀವೂ ಮಾತ್ಸರ್ಯವನ್ನು ಬಿಟ್ಟು ಶ್ರದ್ಧೆಯಿಂದ ಈ ತೀರ್ಥದಲ್ಲಿ ಸ್ನಾನಮಾಡಿದಲ್ಲಿ ಸರ್ವಪಾಪದಿಂದಲೂ ಬಿಡುಗಡೆಯನ್ನು ಹೊಂದುತ್ತೀರಿ ಎಂದು ಉಪದೇಶಿಸಿದರು.

ಸರ್ವಪಾಪವಿನಿರ್ಮುಕ್ತಾ ಭವಿಷ್ಯಥ ನ ಸಂಶಯಃ ।
ತತಃ ಸ್ನಾತಾಶ್ಚ ತೇ ಸರ್ವೇ ಶುದ್ಧದೇಹಾ ದಿವಂ ಗತಾಃ ॥ ೪೫ ॥

ಏತತ್ತೀರ್ಥಸ್ಯ ಮಾಹಾತ್ಮ್ಯಂ ಮಾನುಷಸ್ಯ ದ್ವಿಜೋತ್ತಮಾಃ ।
ಯೇ ಶೃಣ್ವಂತಿ ಶ್ರದ್ಧಧಾನಾಸ್ತೇಽಪಿ ಯಾಂತಿ ಪರಾಂಗತಿಂ ॥ ೪೬ ॥

ಇತಿ ಶ್ರೀ ವಾಮನಪುರಾಣೇ ಸರೋಮಾಹಾತ್ಮ್ಯೇ
ಪಂಚತ್ರಿಂಶೋಽಧ್ಯಾಯಃ

ಆ ಉಪದೇಶದಂತೆ ಅವರೆಲ್ಲರೂ ಆ ತೀರ್ಥದಲ್ಲಿ ಸ್ನಾನಮಾಡಿ ದೇಹಶುದ್ಧಿ ಹೊಂದಿ ಸ್ವರ್ಗಗಾಮಿಗಳಾದರು. ಎಲೈ ದ್ವಿಜಶ್ರೇಷ್ಠರೇ, ಈ ಮಾನುಷತೀರ್ಥದ ಮಾಹಾತ್ಮ್ಯೆವನ್ನು ಯಾರು ಶ್ರದ್ಧೆಯಿಂದ ಕೇಳುತ್ತಾರೆಯೋ ಅವರೂ ಸಹ ಉತ್ಕೃಷ್ಟವಾದ ಗತಿಯನ್ನು ಹೊಂದುತ್ತಾರೆ.

ಇಲ್ಲಿಗೆ ಶ್ರೀ ವಾಮನಪುರಾಣದಲ್ಲಿ ಸರೋಮಾಹಾತ್ಮ್ಯವೆಂಬ ಮೂವತ್ತೈದನೆಯ
ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿಯೂ ತೀರ್ಥಗಳ ಮಾಹಾತ್ಮ್ಯವನ್ನು ಮುಂದುವರಿಸಿ ಹಿಂದೆ ಪ್ರಾರಂಭಮಾಡಿರುವ ಕ್ರಮದಂತೆಯೇ ವಿಧಾನಕ್ರಮವನ್ನೂ ಫಲಗಳನ್ನೂ ನಿರೂಪಿಸಿರುತ್ತಾರೆ.

॥ ಶ್ರೀಃ ॥

ಶ್ರೀವಾಮನಪುರಾಣಂ

ಷಟ್ತ್ರಿಂಶೋಽಧ್ಯಾಯಃ

ಲೋಮಹರ್ಷಣ ಉವಾಚ

ಮಾನುಷಸ್ಯ ತು ಪೂರ್ವೇಣ ಕ್ರೋಶಮಾತ್ರೇ ದ್ವಿಜೋತ್ತಮಾಃ ।
ಆಪಗಾ ನಾಮ ವಿಖ್ಯಾತಾ ನದೀ ದ್ವಿಜನಿಷೇವಿತಾ ॥ ೧ ॥

ಶ್ಯಾಮಾಕಂ ಪಯಸಾ ಸಿದ್ಧಂ ಆಜ್ಯೇನ ಚ ಪರಿಪ್ಲುತಂ ।
ಯೇ ಪ್ರಯಚ್ಛಂತಿ ವಿಪ್ರೇಭ್ಯಃ ತೇಷಾಂ ಪಾಪಂ ನ ವಿದ್ಯತೇ ॥ ೨ ॥

ಯೇ ತು ಶ್ರಾದ್ಧಂ ಕರಿಷ್ಯಂತಿ ಪ್ರಾಪ್ಯೈತಾಮಾಪಗಾಂ ನದೀಂ ।
ತೇ ಸರ್ವಕಾಮಸಂಯುಕ್ತಾ ಭವಿಷ್ಯಂತಿ ನ ಸಂಶಯಃ ॥ ೩ ॥

ಸ್ಮರಂತಿ ಪಿತರಸ್ತಸ್ಯ ಸ್ಮರಂತಿ ಚ ಪಿತಾಮಹಾಃ ।
ಅಸ್ಮಾಕಂ ಚ ಕುಲೇ ಪುತ್ರಃ ಪೌತ್ರೋ ವಾ ಪಿ ಭವಿಷ್ಯತಿ ॥ ೪ ॥

ಮೂವತ್ತಾರನೆಯ ಅಧ್ಯಾಯವು

೧-೩. ಆ ಮಾನುಷತೀರ್ಥಕ್ಕೆ ಪೂರ್ವಭಾಗದಲ್ಲಿ ಒಂದು ಹರಿದಾರಿ ದೂರದಲ್ಲಿ ದ್ವಿಜರಿಂದ ಸೇವಿತವಾಗಿರುವ ಪ್ರಸಿದ್ಧವಾದ ಆಪಗಾ ಎಂಬ ನದಿ ಇರುತ್ತದೆ. ಆ ಕ್ಷೇತ್ರದಲ್ಲಿ ಹಾಲಿನಿಂದ ನೆನೆಯಿಸಿದ ಸಾಮೆಯನ್ನು ಆಜ್ಯದೊಡನೆ ಬ್ರಾಹ್ಮಣರಿಗೆ ದಾನಮಾಡಿದಲ್ಲಿ ಅವರು ಪಾಪದಿಂದ ಬಿಡುಗಡೆ ಹೊಂದುತ್ತಾರೆ. ಆ ನದಿಯನ್ನು ಹೊಂದಿ ಯಾರು ಶ್ರಾದ್ಧಮಾಡುತ್ತಾರೆಯೋ ಅವರು ಸಕಲಮನೋರಥಸಿದ್ಧಿಯನ್ನೂ ಹೊಂದುತ್ತಾರೆ. ಈ ವಿಷಯದಲ್ಲಿ ಸಂದೇಹವಿಲ್ಲ.

೪-೬. ಅವನ ಪಿತೃಗಳೂ, ಪಿತಾಮಹರೂ ಸಹ ಇಲ್ಲಿ ಶ್ರಾದ್ಧಮಾಡಿದವನನ್ನು ಸ್ಮರಿಸುತ್ತಾ ನಮ್ಮ ಕುಲದಲ್ಲಿ ಪುತ್ರರೂ, ಪೌತ್ರರೂ ಹೀಗೆಯೇ ಉಂಟಾಗಲಿ.

ಯ ಆಪಗಾಂ ನದೀಂ ಗತ್ವಾಽಸ್ಮಾಂಸ್ತಿಲೈಸ್ತರ್ಪಯಿಷ್ಯತಿ ।
ತೇನ ತೃಪ್ತಾ ಭವಿಷ್ಯಾಮೋ ಯಾವತ್ಕುಲಶತಂ ಭವೇತ್ ॥ ೫ ॥

ನಭಸ್ಯೇಮಾಸಿ ಸಂಪ್ರಾಪ್ತೇ ಕೃಷ್ಣಪಕ್ಷೇ ವಿಶೇಷತಃ ।
ಚತುರ್ದಶ್ಯಾಂ ತು ಮಧ್ಯಾಹ್ನೇ ಪಿಂಡದೋ ಮುಕ್ತಿಮಾಪ್ನುಯಾತ್ ॥ ೬ ॥

ತತೋ ಗಚ್ಛೇಚ್ಚ ವಿಪ್ರೇಂದ್ರಾಃ ಬ್ರಹ್ಮಣಸ್ಥಾನಮುತ್ತಮಂ ।
ಬ್ರಹ್ಮೋದುಂಬರಮಿತ್ಯೇವಂ ಸರ್ವಲೋಕೇಷು ವಿಶ್ರುತಂ ॥ ೭ ॥

ತತ್ರ ಬ್ರಹ್ಮರ್ಷಿಕುಂಡೇಷು ಸ್ನಾತಸ್ಯ ದ್ವಿಜಸತ್ತಮಾಃ ।
ಸಪ್ತರ್ಷೀಣಾಂ ಪ್ರಸಾದೇನ ಸಪ್ತಸೋಮಫಲಂ ಲಭೇತ್ ॥ ೮ ॥

ಭರದ್ವಾಜೋ ಗೌತಮಶ್ಚ ಜಮದಗ್ನಿಶ್ಚ ಕಶ್ಯಪಃ ।
ವಿಶ್ವಾಮಿತ್ರೋ ವಸಿಷ್ಠಶ್ಚ ಅತ್ರಿಶ್ಚ ಭಗವಾನ್ ಋಷಿಃ ॥ ೯ ॥

ಏತೈಸ್ಸಮೇತ್ಯ ತತ್ಕುಂಡಂ ಕಲಿತಂ ಭುವಿ ದುರ್ಲಭಂ ।
ಬ್ರಹ್ಮಣಾಸೇವಿತಂ ತಸ್ಮಾದ್ಬ್ರಹ್ಮೋದುಂಬರಮುಚ್ಯತೇ ॥ ೧೦ ॥

ಆಪಗಾನದಿಗೆ ಬಂದು ನಮ್ಮನ್ನು ಎಳ್ಳಿನಿಂದ ಹೀಗೆಯೇ ತರ್ಪಿಸಲಿ. ಹೀಗೆ ಉಂಟಾಗುವ ಶತಪ್ರಕಾರವಾದ ಕುಲವೃದ್ಧಿಯಿಂದ ನಾವೂ ತೃಪ್ತರಾಗುವೆವು ಎಂದು ಶುಭಾಶಂಸೆಯಿಂದ ಆಶೀರ್ವದಿಸುತ್ತಾರೆ. ಭಾದ್ರಪದಮಾಸದ ಕೃಷ್ಣ ಚತುರ್ದಶಿಯಲ್ಲಿ ಮಧ್ಯಾಹ್ನ ಸಮಯದಲ್ಲಿ ಯಾರು ಪಿತೃಗಳನ್ನುದ್ದೇಶಿಸಿ ಇಲ್ಲಿ ಪಿಂಡಪ್ರದಾನಮಾಡುತ್ತಾರೆಯೋ ಅವರು ಪಿತೃದೇವತೆಗಳ ಅನುಗ್ರಹದಿಂದ ಮೋಕ್ಷವನ್ನೇ ಪಡೆಯುತ್ತಾರೆ.

೭-೧೦. ಎಲೈ ಬ್ರಾಹ್ಮಣೋತ್ತಮರೇ, ಅನಂತರ ಬ್ರಹ್ಮನ ಸ್ಥಾನಭೂತವಾದ ಬ್ರಹ್ಮೋದುಂಬರವೆಂದು ಲೋಕಪ್ರಸಿದ್ಧವಾದ ಕ್ಷೇತ್ರಕ್ಕೆ ಹೋಗಬೇಕು. ಅಲ್ಲಿರುವ ಬ್ರಹ್ಮರ್ಷಿಕುಂಡದಲ್ಲಿ ಸ್ನಾನಮಾಡಿದವನಿಗೆ ಸಪ್ತರ್ಷಿಗಳ ಅನುಗ್ರಹದಿಂದ ಸಪ್ತಸೋಮಫಲವೇ ಲಭಿಸುತ್ತದೆ. (ಏಳು ಸೋಮಯಜ್ಞಗಳು, ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ಪ್ರತಿಪಾದಿತವಾಗಿವೆ.) ಭರದ್ವಾಜ, ಗೌತಮ, ಜಮದಗ್ನಿ, ಕಶ್ಯಪ, ವಿಶ್ವಾಮಿತ್ರ, ವಸಿಷ್ಠ, ಅತ್ರಿ ಈ ಏಳು ಋಷಿಗಳೂ ಸೇರಿ ಇತರ ಕ್ಷೇತ್ರಗಳಲ್ಲಿ ದುರ್ಲಭವಾದ ಈ ಕುಂಡವನ್ನು ಇಲ್ಲಿ ಸ್ಥಾಪಿಸಿದರು. ಚತುರ್ಮುಖನು ಇದನ್ನು ಸೇವಿಸಿದುದರಿಂದ ಇದಕ್ಕೆ ಬ್ರಹ್ಮೋದುಂಬರವೆಂಬ ಹೆಸರು ಬಂದಿದೆ.

ತಸ್ಮಿಂಸ್ತೀರ್ಥವರೆ ಸ್ನಾತ್ವಾ ಬ್ರಹ್ಮಣೋऽವ್ಯಕ್ತಜನ್ಮನಃ।
ಬ್ರಹ್ಮಲೋಕಮವಾಪ್ನೋತಿ ನಾತ್ರ ಕಾರ್ಯಾ ವಿಚಾರಣಾ ॥ ೧೧ ॥

ದೇವಾನ್ಪಿತೄನ್ ಸಮುದ್ದಿಶ್ಯ ಯೋ ವಿಪ್ರಂ ಪೂಜಯಿಷ್ಯತಿ।
ಪಿತರಸ್ತಸ್ಯ ಸುಖಿತಾ ದಾಸ್ಯಂತಿ ಭುವಿ ದುರ್ಲಭಂ ॥ ೧೨ ॥

ಸಪ್ತರ್ಷೀಂಶ್ಚ ಸಮುದ್ದಿಶ್ಯ ಪೃಥಕ್‌ಸ್ನಾನಂ ಸಮಾಚರೇತ್।
ಋಷೀಣಾಂ ಚ ಪ್ರಸಾದೇನ ಸಪ್ತಲೋಕಾಧಿಪೋ ಭವೇತ್ ॥ ೧೩ ॥

ಕಪಿಲಸ್ಥೇತಿ ವಿಖ್ಯಾತಂ ಸರ್ವಪಾತಕನಾಶನಂ।
ಯಸ್ಮಿಂಸ್ಥಿತಃ ಸ್ವಯಂ ದೇವೋ ವೃದ್ಧಕೇದಾರಸಂಜ್ಞಿತಃ ॥ ೧೪ ॥

ತತ್ರ ಸ್ನಾತ್ವಾರ್ಚಯಿತ್ವಾ ಚ ರುದ್ರಂ ದಂಡಿಸಮನ್ವಿತಂ।
ಅಂತರ್ಧಾನಮವಾಪ್ನೋತಿ ಶಿವಲೋಕೆ ಸ ಮೋದತೆ ॥ ೧೫ ॥

೧೧-೧೩. ಅವ್ಯಕ್ತಸ್ವರೂಪನಾದ ಪರಮಾತ್ಮನಿಂದ ಜನಿಸಿದ (ಆದಿಪುರುಷನಾದ ಎಂದು ತಾತ್ಪರ್ಯ) ಚತುರ್ಮುಖನ ಅಭಿಮಾನಕ್ಕೆ ಪಾತ್ರವಾದ ಆ ತೀರ್ಥದಲ್ಲಿ ಸ್ನಾನಮಾಡಿದವನು ಬ್ರಹ್ಮಲೋಕವನ್ನೇ ಹೊಂದುತ್ತಾನೆ. ಈ ವಿಷಯದಲ್ಲಿ ವಿಮರ್ಶೆಮಾಡಬೇಕಾದುದಿಲ್ಲ. ಈ ಕ್ಷೇತ್ರದಲ್ಲಿ ದೇವತೆಗಳನ್ನೂ, ಪಿತೃಗಳನ್ನೂ ಉದ್ದೇಶಿಸಿ (ಅವರ ಪ್ರೀತಿಗಾಗಿ ಎಂದರ್ಥ) ಯಾರು ಬ್ರಾಹ್ಮಣನನ್ನು ಸತ್ಕರಿಸುತ್ತಾರೆಯೋ ಅವರಿಗೆ ತೃಪ್ತಿಹೊಂದಿದ ಪಿತೃಗಳು ದುರ್ಲಭವಾದ ಫಲವನ್ನೂ ಸಹ ಕೊಡುತ್ತಾರೆ. ಮತ್ತು ಇಲ್ಲಿ ಸ್ನಾನಮಾಡತಕ್ಕವರು ಸಪ್ತರ್ಷಿಗಳನ್ನುದ್ದೇಶಿಸಿ ಬೇರೆ ಬೇರೆ ಸ್ನಾನಮಾಡಬೇಕು. ಅಂತಹವನಿಗೆ ಋಷಿಗಳ ಅನುಗ್ರಹದಿಂದ ಸಪ್ತಲೋಕಾಧಿಪತ್ಯವೇ ಲಭಿಸೀತು.

೧೪-೧೫. ಅದಕ್ಕೆ ಮುಂದೆ ಕಪಿಲಸ್ಥವೆಂಬ ಸರ್ವಪಾಪನಾಶಕವಾದ ಒಂದು ಪ್ರಖ್ಯಾತಕ್ಷೇತ್ರವಿದೆ. ಅಲ್ಲಿ ವೃದ್ಧಕೇದಾರನೆಂಬ ಸಂಜ್ಞೆಯಿಂದ ರುದ್ರದೇವನು ನೆಲಸಿದ್ದಾನೆ. ಅಲ್ಲಿ ಸ್ನಾನಮಾಡಿ ದಂಡಿಯೊಡಗೂಡಿರುವ ರುದ್ರದೇವನನ್ನು ಪೂಜಿಸಿದಲ್ಲಿ ಅವನ ಅನುಗ್ರಹದಿಂದ ಅಲ್ಲಿಯೇ ಅಂತರ್ಧಾನಹೊಂದಿ ಶಿವಲೋಕವನ್ನು ಸೇರಿ ಅಲ್ಲಿ ಸುಖಿಸುತ್ತಾನೆ. ಮತ್ತು ಆ ತೀರ್ಥದಲ್ಲಿ ತರ್ಪಣವನ್ನುಮಾಡಿ ದೇವದೇವನನ್ನು

ಯಸ್ತತ್ರ ತರ್ಪಣಂ ಕೃತ್ವಾ ಪಿಬತೆ ಚುಲಕತ್ರಯಂ ।
ದೇವದೇವಂ ನಮಸ್ಕೃತ್ಯ ಕೇದಾರಸ್ಯ ಫಲಂ ಲಭೇತ್ ॥ ೧೬ ॥

ಯಸ್ತತ್ರ ಕುರುತೆ ಶ್ರಾದ್ಧಂ ಶಿವಮುದ್ದಿಶ್ಯ ಮಾನವಃ ।
ಚೈತ್ರಶುಕ್ಲಚತುರ್ದಶ್ಯಾಂ ಪ್ರಾಪ್ನೋತಿ ಪರಮಂ ಪದಂ ॥ ೧೭ ॥

ಕಲಸ್ಯಾಂ ತು ತತೋ ಗಚ್ಛೇದ್ಯತ್ರ ದೇವೀ ಚ ಸಂಸ್ಥಿತಾ ।
ದುರ್ಗಾ ಕಾತ್ಯಾಯನೀ ಭದ್ರಾ ನಿದ್ರಾಮಾಯಾ ಸನಾತನೀ ॥ ೧೮ ॥

ಕಲಸ್ಯಾಂ ಚ ನರಃ ಸ್ನಾತ್ವಾ ದೃಷ್ಟ್ವಾ ದುರ್ಗಾಂ ತಟಸ್ಥಿತಾಂ ।
ಸಂಸಾರಗಹನಂ ದುರ್ಗಂ ನಿಸ್ತರೇನ್ನಾತ್ರ ಸಂಶಯಃ ॥ ೧೯ ॥

ತತೋ ಗಚ್ಛೇದ್ಧಿ ಸರಕಂ ತ್ರೈಲೋಕ್ಯಸ್ಯಾಪಿ ದುರ್ಲಭಂ ।
ಕೃಷ್ಣಪಕ್ಷೆ ಚತುರ್ದಶ್ಯಾಂ ದೃಷ್ಟ್ವಾ ದೇವಂ ಮಹೇಶ್ವರಂ ॥ ೨೦ ॥

ಲಭತೆ ಸರ್ವಕಾಮಾಂಶ್ಚ ಶಿವಲೋಕಂ ಸ ಗಚ್ಛತಿ ।
ತಿಸ್ರಃ ಕೋಟ್ಯಸ್ತು ತೀರ್ಥಾನಾಂ ಸರಕೆ ದ್ವಿಜಸತ್ತಮಾ ॥ ೨೧ ॥

ಸೇವಿಸಿ ಆಚಮನರೀತಿಯಿಂದ ಮೂರುಚುಲಕ ಪ್ರಮಾಣದ ತೀರ್ಥವನ್ನು ಪಾನ ಮಾಡಿದ್ದೇ ಆದರೆ ಅವನು ಗದ್ದೆಗಳ ಪರಿಪೂರ್ಣಫಲವನ್ನು ಹೊಂದುತ್ತಾನೆ. ಮತ್ತು ಅಲ್ಲಿ ಚೈತ್ರ ಶುದ್ಧ ಚತುರ್ದಶಿಯಲ್ಲಿ ಶಿವನ ಪ್ರೀತಿಗಾಗಿ ಯಾರು ಶ್ರಾದ್ಧಮಾಡುತ್ತಾರೆಯೋ ಅವರು ಪರಮಪದಗಾಮಿಗಳೇ ಆಗುತ್ತಾರೆ.

೧೮-೨೧. ಅನಂತರ ಕಲಸೀ ಎಂಬ ಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ಮಂಗಳಾಂಗಿಯಾದ ಕಾತ್ಯಾಯನಿ ಎಂಬ ದುರ್ಗಾದೇವಿಯು ಯೋಗನಿದ್ರೆಯಿಂದ ವಾಸಿಸುತ್ತಿರುವಳು. ಆ ಕಲಸೀ ಕ್ಷೇತ್ರದಲ್ಲಿ ಸ್ನಾನಮಾಡಿ ದಡದಲ್ಲಿರುವ ದುರ್ಗಾ ದೇವಿಯನ್ನು ದರ್ಶನಮಾಡಿದವನು ಸಂಸಾರವೆಂಬ ದುರ್ಗವನ್ನು ದಾಟಿಯೇ ದಾಟುತ್ತಾನೆ. ಅನಂತರ ಸರಕವೆಂಬ ಸುಪ್ರಸಿದ್ಧವಾದ ಕ್ಷೇತ್ರಕ್ಕೆ ಹೋಗಬೇಕು. ದುರ್ಲಭವಾದ ಆ ಕ್ಷೇತ್ರವನ್ನು ಹೊಂದಿ ಕೃಷ್ಣಪಕ್ಷದ ಚತುರ್ದಶೀ ದಿವಸ ಅಲ್ಲಿರುವ ಮಹೇಶ್ವರನನ್ನು ದರ್ಶನಮಾಡಿದಲ್ಲಿ ಅವನು ಸರ್ವಕಾಮುಗಳನ್ನೂ ಹೊಂದಿ ಶಿವಲೋಕಗಾಮಿಯಾಗುತ್ತಾನೆ. ಆ ಸರಕಕ್ಷೇತ್ರದಲ್ಲಿ ಮೂರುಕೋಟಿ ತೀರ್ಥಗಳಿವೆ.

ರುದ್ರಕೋಟಿಸ್ತಥಾ ಕೂಪೇ ಸರೋಮಧ್ಯೇ ವ್ಯವಸ್ಥಿತಾ ।
ತಸ್ಮಿನ್ ಸರಸಿ ಯಃ ಸ್ನಾತ್ವಾ ರುದ್ರಕೋಟಿಂ ಸ್ಮರೇನ್ನರಃ ॥ ೨೨ ॥

ಪೂಜಯಿತ್ವಾ ರುದ್ರಕೋಟಿಂ ಭವಿಷ್ಯತಿ ನ ಸಂಶಯಃ ।
ರುದ್ರಾಣಾಂ ಚ ಪ್ರಸಾದೇನ ಸರ್ವದೋಷ ವಿವರ್ಜಿತಃ ॥ ೨೩ ॥

ಇಂದ್ರಯಾನೇನಸಂಯುಕ್ತಃ ಪರಂ ಪದಮವಾಪ್ನುಯಾತ್ ।
ಇಡಾಸ್ಪದಂ ಚ ತತ್ರೈವ ತೀರ್ಥಂ ಪಾಪಭಯಾಪಹಂ ॥ ೨೪ ॥

ಯಸ್ಮಿನ್ ಮುಕ್ತಿಮವಾಪ್ನೋತಿ ದರ್ಶನಾದೇವ ಮಾನವಃ ।
ತತ್ರ ಸ್ನಾತ್ವಾರ್ಚಯಿತ್ವಾ ಚ ಪಿತೃದೇವಗಣಾನಪಿ ॥ ೨೫ ॥

ನ ದುರ್ಗತಿಮವಾಪ್ನೋತಿ ಚಿಂತಿತಂ ಮನಸಾಪ್ನುಯಾತ್ ।
ಕೇದಾರಂ ಚ ಮಹಾತೀರ್ಥಂ ಸರ್ವಕಲ್ಮಷನಾಶನಂ ।
ತತ್ರ ಸ್ನಾತ್ವಾ ತು ಪುರುಷಃ ಸರ್ವದಾನಫಲಂ ಲಭೇತ್ ॥ ೨೬ ॥

೨೨-೨೩. ಆ ಸರೋಮಧ್ಯದಲ್ಲಿರುವ ಭಾವಿಯಲ್ಲಿ ರುದ್ರಕೋಟಿಯು ನೆಲಸಿದೆ. ಅಲ್ಲಿ ಸ್ನಾನಮಾಡಿ ಆ ಕೋಟಿರುದ್ರರನ್ನು ಯಾವನು ಸ್ಮರಿಸುತ್ತಾನೆಯೋ ಅವನು ರುದ್ರಕೋಟಿಯನ್ನು ಪೂಜೆಮಾಡಿದ ಫಲವನ್ನು ಹೊಂದುತ್ತಾನೆ. ಆ ರುದ್ರರ ಅನುಗ್ರಹದಿಂದ ಸರ್ವದೋಷರಹಿತನಾಗಿ ಇಂದ್ರವಿಮಾನವನ್ನೇರಿ ಪರಮಪದವನ್ನು ಹೊಂದುತ್ತಾನೆ.

೨೪-೨೬. ಅಲ್ಲಿಯೇ ಸರ್ವಪಾಪನಾಶಕವಾದ ಇಡಾಸ್ಪದವೆಂಬ ತೀರ್ಥವಿದೆ. ಮಾನವನಿಗೆ ಅದರ ದರ್ಶನ ಮಾತ್ರವೂ ಮೋಕ್ಷಪ್ರಾಪ್ತಿಗೆ ಸಾಕು. ಅಲ್ಲಿ ಸ್ನಾನಮಾಡಿ ದೇವಪಿತೃಗಣವನ್ನು ಪೂಜಿಸಿದ್ದೇ ಆದರೆ ಅವನಿಗೆಂದಿಗೂ ದುರ್ಗತಿಯುಂಟಾಗದು. ಮನೋರಥಗಳೂ ಫಲಿಸುತ್ತವೆ. ಅಲ್ಲಿಯೇ ಇರುವ ಕೇದಾರವೆಂಬ ಮಹಾತೀರ್ಥವೂ ಸರ್ವಪಾಪನಾಶಕವಾದುದು. ಅಲ್ಲಿ ಸ್ನಾನಮಾಡಿದವನು ಸಕಲ ದಾನದ ಫಲವನ್ನೂ ಹೊಂದುತ್ತಾನೆ.

ವಿಶ್ವರೂಪಂ ಮಹಾತೀರ್ಥಂ ತತ್ರೈವ ಭುವಿ ದುರ್ಲಭಂ ।
ತಸ್ಮಿನ್ ಸ್ನಾತಸ್ತು ಪುರುಷಃ ಸರ್ವಯಜ್ಞಫಲಂ ಲಭೇತ್ ॥ ೨೭ ॥

ಸರಕಸ್ಯ ತು ಪೂರ್ವೇಣ ತೀರ್ಥಂ ತ್ರೈಲೋಕ್ಯವಿಶ್ರುತಂ ।
ಅಸ್ಯ ಜನ್ಮ ಭುವಿ ಖ್ಯಾತಂ ಸರ್ವಪಾಪಪ್ರಣಾಶನಂ ॥ ೨೮ ॥

ನಾರಸಿಂಹಂ ವಪುಃ ಕೃತ್ವಾ ಹತ್ವಾ ದಾನವಮೂರ್ಜಿತಂ ।
ತಿರ್ಯಗ್ಯೋನಿಸ್ಥಿತೋ ವಿಷ್ಣುಃ ಸಿಂಹೀಷು ರತಿಮಾಪ್ತವಾನ್ ॥ ೨೯ ॥

ತತೋ ದೇವಾಸ್ಸಗಂಧರ್ವಾ ಆರಾಧ್ಯ ವರದಂ ಶಿವಂ ।
ಊಚುಃ ಪ್ರಣತಸರ್ವಾಂಗಾ ವಿಷ್ಣುದೇಹಸ್ಯ ಲಂಭನೆ ॥ ೩೦ ॥

ತತೋ ದೇವೋ ಮಹಾತ್ಮಾಸೌ ಶಾರಭಂ ರೂಪಮಾಸ್ಥಿತಃ ।
ಯುದ್ಧಂ ಚಕಾರ ಸುಮಹದ್ದಿವ್ಯಂ ವರ್ಷಸಹಸ್ರಕಂ ॥ ೩೧ ॥

ಯುಧ್ಯಮಾನೌ ತು ತೌ ದೇವೌ ಪತಿತೌ ಹ್ರದಮಧ್ಯತಃ ।
ತಸ್ಮಿನ್ಸರಸ್ತಟೆ ವಿಪ್ರೋ ದೇವರ್ಷಿರ್ನಾರದಃ ಸ್ಥಿತಃ ॥ ೩೨ ॥

೨೭-೨೯. ಅಲ್ಲಿಯೇ ವಿಶ್ವರೂಪವೆಂಬ ದುರ್ಲಭವಾದ ಮಹಾಕ್ಷೇತ್ರವಿರುವದು. ಅಲ್ಲಿ ಸ್ನಾನಮಾಡಿದವನು ಎಲ್ಲಾ ಯಜ್ಞಗಳ ಫಲವನ್ನೂ ಹೊಂದುತ್ತಾನೆ. ಸರಕ ತೀರ್ಥಕ್ಕೆ ಪೂರ್ವಭಾಗದಲ್ಲಿ ಪ್ರಖ್ಯಾತವಾದ ಮತ್ತೊಂದು ತೀರ್ಥವಿರುವದು. ಈ ತೀರ್ಥದ ಉತ್ಪತ್ತಿಯು ಲೋಕಪ್ರಸಿದ್ಧವಾದುದು, ಸರ್ವಪಾಪಗಳಿಗೂ ನಾಶಕವಾದುದು. ಇಲ್ಲಿ ಮಹಾವಿಷ್ಣುವು ನಾರಸಿಂಹಶರೀರವನ್ನು ಹೊಂದಿ ಬಲಿಷ್ಠನಾದ ದಾನವನನ್ನು ನಾಶಪಡಿಸಿ ತೀರ್ಯಗ್ಯೋನಿಯಲ್ಲಿ ಆಸಕ್ತಿಹೊಂದಿ ಹೆಣ್ಣು ಸಿಂಹದಲ್ಲಿ ರತಿಸುಖವನ್ನು ಹೊಂದಿದನು.

೩೦-೩೨. ಅನಂತರದಲ್ಲಿ ದೇವಗಂಧರ್ವರೂ ಏಕೀಭವಿಸಿ ಶಿವನನ್ನು ಆರಾಧಿಸಿ ಈ ವಿಷ್ಣುದೇಹದೊಡನೆ ಸೇರಲು ಪ್ರಾರ್ಥಿಸಿದರು. ಆಗ ಶಿವನು ಶರಭರೂಪವನ್ನಾಶ್ರಯಿಸಿ ಸಿಂಹದ ಎದುರಿಗೆ ನಿಲ್ಲಲು ಅವರಿಬ್ಬರಿಗೂ ದಿವ್ಯವರ್ಷಸಹಸ್ರಪರ್ಯಂತವೂ ಮಹಾಯುದ್ಧ ನಡೆಯಿತು. ಅವರಿಬ್ಬರೂ ಯುದ್ಧಮಾಡುತ್ತಾ ಯುದ್ಧದ ರಭಸದಲ್ಲಿ ಈ ಹ್ರದದ ಮಧ್ಯದಲ್ಲಿ ಬಿದ್ದರು. ಆ ಸರೋವರದ ದಡದಲ್ಲಿ ಅಶ್ವತ್ಥವೃಕ್ಷದ ಬುಡದಲ್ಲಿ

ಆಶ್ರಮಸ್ಥಾನಮಾಶ್ರಿತ್ಯ ಧ್ಯಾನಸ್ತಸ್ಥೌ ದದರ್ಶ ಹ ॥ ೩೩ ॥

ವಿಷ್ಣುಃ ಚತುರ್ಭುಜೋ ಜಜ್ಞೆ ಲಿಂಗಾಕಾರಃ ಶಿವಸ್ಥಿತಃ ।
ತೌ ದೃಷ್ಟ್ವಾ ತತ್ರ ಪುರುಷೌ ತುಷ್ಟಾವ ಭಕ್ತಿಭಾವತಃ । ॥ ೩೪ ॥

ನಮಃ ಶಿವಾಯ ದೇವಾಯ ವಿಷ್ಣವೆ ಪ್ರಭವಿಷ್ಣವೆ ।
ಹರಯೆ ಚ ಉಮಾಭರ್ತ್ರೆ ಸ್ಥಿತಿಕಾಲಭೃತೆ ನಮಃ ॥ ೩೫ ॥

ಹರಾಯ ಬಹುರೂಪಾಯ ವಿಶ್ವರೂಪಾಯ ವಿಷ್ಣವೆ ।
ತ್ರ್ಯಂಬಕಾಯ ಸುಸಿದ್ಧಾಯ ಕೃಷ್ಣಾಯ ಜ್ಞಾನಹೇತವೆ ॥ ೩೬ ॥

ಧನ್ಯೋಽಹಂ ಸುಕೃತೀ ನಿತ್ಯಂ ಯದ್ದೃಷ್ಟೌ ಪುರುಷೋತ್ತಮೌ ।
ಮಮಾಶ್ರಮಮಿದಂ ಪುಣ್ಯಂ ಯುವಾಭ್ಯಾಂ ವಿಮಲೀಕೃತಂ ॥ ೩೭ ॥

ಧ್ಯಾನದಿಂದ ಕುಳಿತಿದ್ದ ದೇವರ್ಷಿಯಾದ ನಾರದನು ಇದೆಲ್ಲವನ್ನೂ ಸಾಕ್ಷಾತ್ಕರಿಸಿದನು.

೩೪-೩೭. ಆಗ ವಿಷ್ಣುವು ಚತುರ್ಭುಜನಾಗಿಯೂ ಶಿವನು ಲಿಂಗಾಕಾರನಾಗಿಯೂ ಸ್ವರೂಪವನ್ನು ತೋರ್ಪಡಿಸಿಕೊಂಡರು. ಆಗ ಆ ಮಹಾಪುರುಷರನ್ನು ನೋಡಿ ಭಕ್ತಿಯಿಂದ ನಾರದಮುನಿಯು ಸ್ತೋತ್ರಮಾಡಿದನು. ದೇವತಾವಿಶೇಷ ಸ್ವರೂಪನಾದ ಶಿವನಿಗೂ ಸಮರ್ಥನಾದ (ಸರ್ವಶಕ್ತನಾದ) ವಿಷ್ಣುವಿಗೂ ನಮಸ್ಕಾರಗಳು. ಜಗತ್ತಿನ ಸ್ಥಿತಿಗೆ ಕಾರಣನಾದ ಹರಿಗೂ ಸಂಹಾರಕ್ಕೆ ಕಾರಣನಾದ ಉಮಾಪತಿಗೂ ನಮಸ್ಕಾರಗಳು. ಮತ್ತು ಅನೇಕ ರೂಪಿಯಾದ ಹರನಿಗೂ ವಿಶ್ವರೂಪಿಯಾದ ವಿಷ್ಣುವಿಗೂ ಸಹ ನಮಸ್ಕಾರಗಳು. ಸಿದ್ಧಪುರುಷನಾದ ತ್ರ್ಯಂಬಕನಿಗೂ ಜ್ಞಾನಪ್ರದನಾದ ಕೃಷ್ಣನಿಗೂ ನಮಸ್ಕಾರಗಳು. ಇಂತಹ ಪುರುಷೋತ್ತಮರನ್ನು ನೋಡಿದ ನಾನೇ ಧನ್ಯನು, ನಾನೇ ಪುಣ್ಯಶಾಲಿ. ನಿಮ್ಮಿಬ್ಬರ ಸಾನ್ನಿಧ್ಯದಿಂದ ನಿರ್ಮಲವಾಗಿ ಮಾಡಲ್ಪಟ್ಟ ನನ್ನ ಈ ಆಶ್ರಮವೇ ಪುಣ್ಯಕರವಾದುದು.

ಅದ್ಯಪ್ರಭೃತಿ ತ್ರೈಲೋಕ್ಯೇ ಧನ್ಯಂ ಜನ್ಮೇತಿ ವಿಶ್ರುತಂ ।
ಯ ಇಹಾಗತ್ಯ ಚ ಸ್ನಾತ್ವಾ ಪಿತೄನ್ ಸಂತರ್ಪಯಿಷ್ಯತಿ ॥ ೩೮ ॥

ತಸ್ಯ ಶ್ರದ್ಧಾನ್ವಿತಸ್ಯೇಹ.ಜ್ಞಾನಮಿಂದ್ರಂ ಭವಿಷ್ಯತಿ ।
ಅಶ್ವತ್ಥಸ್ಯ ಚ ಯನ್ಮೂಲಂ ಸಬಾ ತತ್ರ ವಸಾಮ್ಯಹಂ ॥ ೩೯ ॥

ಅಶ್ವತ್ಥವಂದನಂ ಕೃತ್ವಾ ಶಿವಂ ಕೃಷ್ಣಂ ನಮಸ್ಯತಿ ॥ ೪೦ ॥

ತತೋ ಗಚ್ಛೇದ್ಧಿ ವಿಪ್ರೇಂದ್ರಾ ನಾಗಸ್ಯ ಹ್ರದಮುತ್ತಮಂ ।
ಪುಂಡರೀಕಾಂಭಸಿ ಸ್ನಾತ್ವಾ ಯಜ್ಞಸ್ಯ ಫಲಮಾಪ್ನುಯಾತ್ ॥ ೪೧ ॥

ದಶಮ್ಯಾಂ ಶುಕ್ಲಪಕ್ಷಸ್ಯ ಚೈತ್ರಸ್ಯ ತು ವಿಶೇಷತಃ ।
ಸ್ನಾನಂ ಜಪಃ ತಥಾ ಶ್ರಾದ್ಧಂ ಮುಕ್ತಿಮಾರ್ಗಪ್ರದಾಯಕಂ ॥ ೪೨ ॥

ತತಸ್ತ್ರಿವಿಷ್ಟಪಂ ಗಚ್ಛೇತ್ತೀರ್ಥಂ ದೇವನಿಷೇವಿತಂ ।
ತತ್ರವೈತರಣೀಪುಣ್ಯಾ ನದೀ ಪಾಪವಿಮೋಚನೀ ॥ ೪೩ ॥

೩೮-೪೧. ಇದು ಮೊದಲು ಈ ಕ್ಷೇತ್ರವು ಧನ್ಯಜನ್ಮವೆಂದು ಪ್ರಸಿದ್ಧಿಪಡೆಯುವುದು. ಯಾವನು ಇಲ್ಲಿ ಬಂದು ಸ್ನಾನಮಾಡಿ ಪಿತೃಗಳನ್ನು ತೃಪ್ತಿಪಡಿಸುತ್ತಾನೆಯೋ ಅಂತಹ ಶ್ರದ್ಧಾವಂತನಾದವನಿಗೆ ಇಂದ್ರನ ಜ್ಞಾನದಂತಹ ಜ್ಞಾನವು ಲಭಿಸುತ್ತದೆ. ಈ ಅಶ್ವತ್ಥಮರದ ಬುಡದಲ್ಲಿ ನಾನು ಯಾವಾಗಲೂ ವಾಸಿಸುತ್ತೇನೆ. ಈ ಅಶ್ವತ್ಥವನ್ನು ವಂದಿಸಿ ಹರನನ್ನೂ ಹರಿಯನ್ನೂ ನಮಸ್ಕಾರಮಾಡಬೇಕು. (ಈ ಪ್ರಕಾರ ನಾರದರು ಈ ಕ್ಷೇತ್ರವಿಷಯದಲ್ಲಿ ಪ್ರಶಂಸೆಯನ್ನು ಪ್ರಕಾಶಪಡಿಸಿದ್ದಾರೆ ಎಂದು ಶೇಷಪೂರಣಮಾಡಿಕೊಳ್ಳಬೇಕು.) ಅನಂತರದಲ್ಲಿ ಪೂಜ್ಯವಾದ ನಾಗಹ್ರದವೆಂಬ ಕ್ಷೇತ್ರಕ್ಕೆ ಹೋಗಬೇಕು. ಅಲ್ಲಿರುವ ಪುಂಡರೀಕಸರೋವರದಲ್ಲಿ ಸ್ನಾನಮಾಡಿ ಯಜ್ಞದ ಫಲವನ್ನು ಹೊಂದುತ್ತಾನೆ.

೪೨-೪೩. ಚೈತ್ರಮಾಸದ ಶುಕ್ಲಪಕ್ಷದ ದಶಮಿಯಲ್ಲಿ ಇಲ್ಲಿ ನಡೆಸಲ್ಪಡುವ ಸ್ನಾನ, ಜಪ, ಶ್ರಾದ್ಧ ಮುಂತಾದವು ಬಹಳಮಟ್ಟಿಗೂ ಮೋಕ್ಷಮಾರ್ಗಕ್ಕೆ ಸಾಧಕಗಳಾಗುತ್ತವೆ. ಆಮೇಲೆ ತ್ರಿವಿಷ್ಟಪವೆಂಬ ದೇವಸೇವ್ಯವಾದ ತೀರ್ಥಕ್ಕೆ ಹೋಗಬೇಕು. ಅಲ್ಲಿರುವ ವೈತರಣಿ ಎಂಬ ನದಿಯು ಬಹಳಮಟ್ಟಿಗೆ ಪಾಪನಾಶಕವಾಗಿಯೂ ಪುಣ್ಯಕರವಾಗಿಯೂ ಇದೆ. ಅಲ್ಲಿ ಸ್ನಾನಮಾಡಿ ಶೂಲಪಾಣಿಯಾದ ರುದ್ರದೇವರನ್ನು

ತತ್ರ ಸ್ನಾತ್ವಾರ್ಚಯಿತ್ವಾ ಚ ಶೂಲಪಾಣಿಂ ವೃಷಧ್ವಜಂ।
ಸರ್ವಪಾಪವಿಶುದ್ಧಾತ್ಮಾ ಗಚ್ಛೇಚ್ಚ ಪರಮಾಂಗತಿಂ ॥ ೪೪ ॥

ತತೋ ಗಚ್ಛೇದ್ಧಿ ವಿಪ್ರೇಂದ್ರಾ ರಸಾವರ್ತನಮುತ್ತಮಂ।
ತತ್ರ ಸ್ನಾತ್ವಾ ಭಕ್ತಿಯುಕ್ತಃ ಸಿದ್ಧಿಮಾಪ್ನೋತ್ಯನುತ್ತಮಾಂ ॥ ೪೫ ॥

ಚೈತ್ರಶುಕ್ಲಚತುರ್ದಶ್ಯಾಂ ತೀರ್ಥೇ ಸ್ನಾತ್ವಾ ತ್ವಲೇಪಕೇ।
ಪೂಜಯಿತ್ವಾ ಶಿವಂ ತತ್ರ ಪಾಪಲೇಶೋ ನ ವಿದ್ಯತೆ ॥ ೪೬ ॥

ತತೋ ಗಚ್ಛೇದ್ಧಿವಿಪ್ರೇಂದ್ರಾ ಫಲಕೀವನ ಮುತ್ತಮಂ।
ಯತ್ರದೇವಾಸ್ಸಗಂಧರ್ವಾ ಸಾಧ್ಯಾಶ್ಚ ಋಷಯಸ್ತಥಾ।
ತಪಶ್ಚರಂತಿ ವಿಪುಲಂ ದಿವ್ಯಂ ವರ್ಷಸಹಸ್ರಕಂ ॥ ೪೭ ॥

ದೃಷದ್ವತ್ಯಾಂ ನರಃ ಸ್ನಾತ್ವಾ ತರ್ಪಯಿತ್ವಾ ಚ ದೇವತಾಃ।
ಅಗ್ನಿಷ್ಟೋಮಾತಿರಾತ್ರಸ್ಯ ಫಲಂ ವಿಂದತಿ ಮಾನವಃ ॥ ೪೮ ॥

ಸೋಮಕ್ಷಯೇ ಚ ಸಂಪ್ರಾಪ್ತೇ ಸೋಮಸ್ಯ ಚ ದಿನೇ ತಥಾ।
ಯಃ ಶ್ರಾದ್ಧಂ ಕುರುತೆ ಮರ್ತ್ಯಸ್ತಸ್ಯ ಪುಣ್ಯಫಲಂ ಶೃಣು ॥ ೪೯ ॥

ಪೂಜಿಸಿದುದೇ ಆದರೆ ಅವನು ಸಕಲ ಪಾಪನಿವೃತ್ತಿಯಿಂದ ಶುದ್ಧನಾಗಿ ಪರಮಪದವನ್ನೇ ಹೊಂದುತ್ತಾನೆ. ಅನಂತರದಲ್ಲಿ ಸಾವರ್ತನವೆಂಬ ಕ್ಷೇತ್ರವಿಶೇಷಕ್ಕೆ ಹೋಗಬೇಕು. ಅಲ್ಲಿ ಭಕ್ತಿಯಿಂದ ಸ್ನಾನಾದಿಗಳನ್ನು ಮಾಡಿದಲ್ಲಿ ಉತ್ತಮವಾದ ಸಿದ್ಧಿಯನ್ನು ಹೊಂದುತ್ತಾನೆ.

೪೬-೪೭. ಚೈತ್ರ ಶುದ್ಧ ಚತುರ್ದಶಿಯಲ್ಲಿ ಅಲೇಪಕ ತೀರ್ಥದಲ್ಲಿ ಸ್ನಾನ ಮಾಡಿ ಶಿವನನ್ನು ಪೂಜಿಸಿದಲ್ಲಿ ಅವನಿಗೆ ಪಾಪಲೇಶವೂ ಇರುವುದಿಲ್ಲ. ಅನಂತರ ಪುಣ್ಯಕರವಾದ ಫಲಕೀವನಕ್ಕೆ ಹೋಗಬೇಕು. ಆ ಫಲಕೀವನದಲ್ಲಿ ದೇವತೆಗಳೂ ಗಂಧರ್ವರೂ ಸಾಧ್ಯರೂ ಋಷಿಗಳೂ ಎಲ್ಲರೂ ತಮ್ಮತಮ್ಮ ಇಷ್ಟಾರ್ಥಕ್ಕಾಗಿ ದಿವ್ಯ ವರ್ಷಸಹಸ್ರದಿಂದಲೂ ತಪಸ್ಸನ್ನು ಮಾಡುತ್ತಲಿರುವರು.

೪೮-೫೦. ದೃಷದ್ವತೀನದಿಯಲ್ಲಿ ಸ್ನಾನಮಾಡಿ ದೇವತೆಗಳಿಗೆ ತರ್ಪಣಾದಿಗಳನ್ನು ನಡೆಸಿದವನು ಅಗ್ನಿಷ್ಟೋಮಾತಿರಾತ್ರವೆಂಬ ಮಹಾಯಾಗಗಳ ಫಲವನ್ನು ಹೊಂದುತ್ತಾನೆ. ಅಮಾವಾಸ್ಯಾತಿಥಿಯಲ್ಲಿ ಸೋಮವಾರದಲ್ಲಿ ಯಾವನು ಅಲ್ಲಿ

ಗಯಾಯಾಂ ಚ ಯಥಾ ಶ್ರಾದ್ಧಂ ಪಿತೄನ್ ಪ್ರೀಣಾತಿ ನಿತ್ಯಶಃ ।
ತಥಾ ಶ್ರಾದ್ಧಂ ಚ ಕರ್ತವ್ಯಂ ಫಲಕೀವನಮಾಶ್ರಿತೈಃ ॥ ೫೦ ॥

ಮನಸಾ ಸ್ಮರತೆ ಯಸ್ತು ಫಲಕೀವನಮುತ್ತಮಂ ।
ತಸ್ಯೈವ ಪಿತರಸ್ತೃಪ್ತಿಂ ಪ್ರಯಾಸ್ಯಂತಿ ನ ಸಂಶಯಃ ॥ ೫೧ ॥

ತತ್ರಾಪಿ ತೀರ್ಥಂ ಸುಮಹತ್ಸರ್ವದೇವೈರಲಂಕೃತಂ ।
ತಸ್ಮಿನ್ ಸ್ನಾತಸ್ತು ಪುರುಷೋ ಗೋಸಹಸ್ರಫಲಂ ಲಭೇತ್ ॥ ೫೨ ॥

ಪಾಣಿಖಾತೆ ನರಃ ಸ್ನಾತ್ವಾ ಪಿತೄನ್ ಸಂತರ್ಪ್ಯ ಮಾನವಃ ।
ಅವಾಪ್ನುಯಾದ್ರಾಜಸೂಯಂ ಸಾಂಖ್ಯಂ ಯೋಗಂ ಚ ವಿಂದತಿ ॥ ೫೩ ॥

ತತೋ ಗಚ್ಛೇದ್ಧಿ ಸುಮಹತ್ತೀರ್ಥಮಿಶ್ರಕಮುತ್ತಮಂ ।
ತತ್ರ ತೀರ್ಥಾನಿ ಮುನಿನಾ ಮಿಶ್ರಿತಾನಿ ಮಹಾತ್ಮನಾ ॥ ೫೪ ॥

ವ್ಯಾಸೇನ ಮುನಿಶಾರ್ದೂಲದಧೀಚಾರ್ಥಂ ಮಹಾತ್ಮನಾ ।
ಸರ್ವತೀರ್ಥೇಷು ಸ ಸ್ನಾತೋ ಮಿಶ್ರಕೆ ಸ್ನಾತಿ ಯೋ ನರಃ ॥ ೫೫ ॥

ಶ್ರಾದ್ಧಾದಿಗಳನ್ನು ಮಾಡುತ್ತಾನೆಯೋ ಅವನಿಗೆ ಉಂಟಾಗುವ ಪುಣ್ಯಫಲವನ್ನು ಹೇಳು ತ್ತೇನೆ ಕೇಳಿರಿ. ಗಯೆಯಲ್ಲಿ ಮಾಡಿದ ಶ್ರಾದ್ಧವು ನಿತ್ಯವೂ ಪಿತೃಗಳಿಗೆ ಹೇಗೆ ತೃಪ್ತಿ ಕರವಾದೀತೋ ಹಾಗೆಯೇ ಫಲಕೀವನದಲ್ಲಿ ಶ್ರಾದ್ಧಮಾಡಿದರೂ ಅದು ಪಿತೃಗಳಿಗೆ ತೃಪ್ತಿಕರವಾಗಿಯೇ ಆಗುತ್ತದೆ. ಆ ಫಲಕೀವನವನ್ನು ಮನಸ್ಸಿನಲ್ಲಿ ಸ್ಮರಿಸಿದರೂ ಅವನ ಪಿತೃಗಳು ತೃಪ್ತಿಹೊಂದುವದರಲ್ಲಿ ಸಂದೇಹವಿಲ್ಲ.

೫೨-೫೫. ಆ ಫಲಕೀವನದಲ್ಲಿಯೂ ಎಲ್ಲಾ ದೇವತೆಗಳಿಂದಲೂ ಅಲಂಕೃತ ವಾದ ಪಾಣಿಖಾತವೆಂಬ ತೀರ್ಥವಿದೆ. ಅಲ್ಲಿ ಸ್ನಾನಮಾಡಿದ ಮನುಷ್ಯನು ಗೋ ಸಹಸ್ರದಾನದ ಫಲವನ್ನು ಹೊಂದುತ್ತಾನೆ. ಆ ಪಾಣಿಖಾತಸರೋವರದಲ್ಲಿ ಸ್ನಾನ ಮಾಡಿ ಪಿತೃಗಳಿಗೆ ತರ್ಪಣವನ್ನು ಮಾಡಿದರೆ ರಾಜಸೂಯಯಾಗದ ಫಲವು ಲಭಿಸು ತ್ತದೆ. ಜ್ಞಾನವನ್ನೂ ಯೋಗಸಿದ್ಧಿಯನ್ನೂ ಸಹ ಅವನು ಹೊಂದುತ್ತಾನೆ. ಅನಂತರ ಮಿಶ್ರಕವೆಂಬ ಮಹಾತೀರ್ಥಕ್ಕೆ ಹೋಗಬೇಕು. ಅಲ್ಲಿ ದಧೀಚಮಹರ್ಷಿಗೋಸ್ಕರ ಮಹಾತ್ಮನಾದ ವ್ಯಾಸಮುನಿಯು ಅನೇಕ ತೀರ್ಥಗಳನ್ನು ಮಿಶ್ರಣಮಾಡಿರುವನು. ಆ ಮಿಶ್ರಕದಲ್ಲಿ ಸ್ನಾನಮಾಡಿದವನಿಗೆ ಸರ್ವತೀರ್ಥದ ಸ್ನಾನಫಲವೂ ಲಭಿಸುತ್ತದೆ.

ತತೋ ವ್ಯಾಸವನಂ ಗಚ್ಛೇನ್ನಿಯತೋ ನಿಯತಾಶನಃ ।
ಮನೋಜವೇ ನರಃ ಸ್ನಾತ್ವಾ ದೃಷ್ಟ್ವಾ ದೇವಂ ಮನೀಷಿಣಂ ॥ ೫೬ ॥

ಮನಸಾ ಚಿಂತಿತಂ ಸರ್ವಂ ಸಿದ್ಧ್ಯತೆ ನಾತ್ರ ಸಂಶಯಃ ।
ಗತ್ವಾ ಮಧುವನಂ ಚೈವ ದೇವ್ಯಾಸ್ತೀರ್ಥಂ ನರಃ ಶುಚಿಃ ॥ ೫೭ ॥

ತತ್ರ ಸ್ನಾತ್ವಾ ಚ ವೈ ದೇವಾನ್ಪಿತೄಂಶ್ಚ ಪ್ರಯತೋ ನರಃ ।
ಸ ದೇವ್ಯಾ ಸಮನುಜ್ಞಾತೋ ಯಥಾ ಸಿದ್ಧಿಂ ಲಭೇನ್ನರಃ ॥ ೫೮ ॥

ಕೌಶಿಕ್ಯಾಃಸಂಗಮೆ ಯಸ್ತು ದೃಷದ್ವತ್ಯಾಂ ನರೋತ್ತಮಃ ।
ಸ್ನಾಯೀತ ನಿಯತಾಹಾರಃ ಸರ್ವಪಾಪೈಃ ಪ್ರಮುಚ್ಯತೆ ॥ ೫೯ ॥

ತತೋ ವ್ಯಾಸಸ್ಥಲೀಂ ಗಚ್ಛೇದ್ಯತ್ರ ವ್ಯಾಸೇನ ಧೀಮತಾ ।
ಪುತ್ರಶೋಕಾಭಿಭೂತೇನ ದೇಹತ್ಯಾಗಾಯ ನಿಶ್ಚಯಃ ॥ ೬೦ ॥

ಕೃತೋ ದೇವೈಶ್ಚ ವಿಪ್ರೇಂದ್ರ ಪುನರುತ್ಥಾಪಿತಸ್ತದಾ ।
ಅಭಿಗಮ್ಯ ಸ್ಥಲೀಂ ತಸ್ಯ ಪುತ್ರಶೋಕಂ ನ ವಿಂದತಿ ॥ ೬೧ ॥

೫೬-೫೮. ಅನಂತರ ವ್ಯಾಸವನಕ್ಕೆ ಹೋಗಬೇಕು. ಅಲ್ಲಿ ಆಹಾರನಿಯಮದಿಂದಲೂ ವ್ರತನಿಯಮದಿಂದಲೂ ಇದ್ದು ಮನೋಜವತೀರ್ಥದಲ್ಲಿ ಸ್ನಾನಮಾಡಿ ಅಲ್ಲಿರುವ ಮನೀಷೀ ಎಂಬ ದೇವತೆಯನ್ನು ದರ್ಶನಮಾಡಿದಲ್ಲಿ ಅವನ ಮನೋರಥಗಳೆಲ್ಲವೂ ಸಿದ್ಧಿಸುತ್ತವೆ. ಅನಂತರ ಅಲ್ಲಿಂದ ಮಧುವನಕ್ಕೆ ಹೋಗಿ ಅಲ್ಲಿರುವ ದೇವೀತೀರ್ಥದಲ್ಲಿ ಸ್ನಾನಮಾಡಿ ಶುಚಿಯಾಗಿ ದೇವತೆಗಳನ್ನೂ ಪಿತೃಗಳನ್ನೂ ತೃಪ್ತಿಪಡಿಸಿದಲ್ಲಿ ಅವನಿಗೆ ದೇವಿಯ ಅನುಗ್ರಹದಿಂದ ಸಿದ್ಧಿಯುಂಟಾಗುತ್ತದೆ.

೫೯-೬೧. ಕೌಶಿಕೀಸಂಗಮಸ್ಥಲದಲ್ಲಿ ದೃಷದ್ವತಿಯಲ್ಲಿ ಯಾರು ಆಹಾರನಿಯಮದಿಂದಿದ್ದು ಸ್ನಾನಗಳನ್ನು ಮಾಡುತ್ತಾರೆಯೋ ಅವರಿಗೆ ಸರ್ವಪಾಪದಿಂದಲೂ ಬಿಡುಗಡೆಯುಂಟಾಗುತ್ತದೆ. ಅನಂತರ ವ್ಯಾಸಸ್ಥಲೀ ಎಂಬ ಕ್ಷೇತ್ರಕ್ಕೆ ಹೋಗಬೇಕು. ಆ ಸ್ಥಲದಲ್ಲಿ ಮಹಾತ್ಮನಾದ ವ್ಯಾಸಋಷಿಯು ಪುತ್ರಶೋಕದಿಂದ ದುಃಖಿತನಾಗಿ ದೇಹತ್ಯಾಗಕ್ಕೂ ನಿಶ್ಚಯಮಾಡಿದ್ದನು. ದೇವತೆಗಳೆಲ್ಲರೂ ಅಲ್ಲಿ ಬಂದು ಅವನನ್ನು ಸಮಾಧಾನಪಡಿಸಿ ಪೂರ್ವಸ್ಥಿತಿಗೆ ತಂದರು. ಆದುದರಿಂದ ಆ ಸ್ಥಲಕ್ಕೆ ಹೋದ

ಕಿಂದತ್ತರೂಪಮಾಸಾದ್ಯ ತಿಲಪ್ರಸ್ಥಂ ಪ್ರದಾಯ ಚ
ಗಚ್ಛೇಚ್ಚ ಪರಮಾಂ ಸಿದ್ಧಿಂ ತತೋ ಮುಕ್ತಿಮವಾಪ್ನುಯಾತ್ ॥ ೬೨ ॥

ಅನ್ನಂ ಚ ಸುದಿನಂ ಚೈವ ದ್ವೇ ತೀರ್ಥೆ ಭುವಿ ದುರ್ಲಭೇ ।
ತಯೋಃ ಸ್ನಾತ್ವಾ ವಿಶುದ್ಧಾತ್ಮಾ ಸೂರ್ಯಲೋಕಮವಾಪ್ನುಯಾತ್ ॥ ೬೩ ॥

ಕೃತಪುಣ್ಯಂ ತತೋ ಗಚ್ಛೇ ತ್ರಿಷು ಲೋಕೇಷು ವಿಶ್ರುತಂ ।
ತತ್ರಾಭಿಷೇಕಂ ಕುರ್ವೀತ ಗಂಗಾಯಾಂ ಪ್ರಯತಃ ಸ್ಥಿತಃ ॥ ೬೪ ॥

ಅರ್ಚಯಿತ್ವಾ ಮಹಾದೇವಮಶ್ವಮೇಧಫಲಂ ಲಭೇತ್ ।
ಕೋಟಿತೀರ್ಥಂ ಚ ತತ್ರೈವ ದೃಷ್ಟ್ವಾ ಕೋಟೀಶ್ವರಂ ಪ್ರಭುಂ ॥ ೬೫ ॥

ತತ್ರ ಸ್ನಾತ್ವಾ ಶ್ರದ್ಧಧಾನಃ ಕೋಟಿಯಜ್ಞಫಲಂ ಲಭೇತ್ ।
ತತೋ ವಾಮನಕಂ ಗಚ್ಛೇತ್ತ್ರಿಷು ಲೋಕೇಷು ವಿಶ್ರುತಂ ॥ ೬೬ ॥

ಯತ್ರ ವಾಮನರೂಪೇಣ ವಿಷ್ಣುನಾ ಪ್ರಭವಿಷ್ಣುನಾ ।
ಬಲೇರಪಹೃತಂ ರಾಜ್ಯಂ ಇಂದ್ರಾಯ ಪ್ರತಿಪಾದಿತಂ ॥ ೬೭ ॥

ವನಿಗೆ ಪುತ್ರಶೋಕದ ಭಯವಿಲ್ಲ. ಅಲ್ಲಿಯೇ ಇರುವ ಕಿಂದತ್ತರೂಪವೆಂಬ ಕ್ಷೇತ್ರದಲ್ಲಿ ಒಂದು ಕೊಳಗ ಎಳ್ಳನ್ನು ದಾನಮಾಡಿದಲ್ಲಿ ಅದರಿಂದ ಪರಮಸಿದ್ಧಿಯೂ ಮುಕ್ತಿಯೂ ಉಂಟಾಗುತ್ತದೆ.

೬೩-೬೪. ಅಲ್ಲಿಯೇ ಅನ್ನ, ಸುದಿನವೆಂಬ ಎರಡು ಪುಣ್ಯತೀರ್ಥಗಳಿವೆ. ಅವುಗಳಲ್ಲಿ ಸ್ನಾನಮಾಡಿ ಶುದ್ಧಿಹೊಂದಿದವನು ಸೂರ್ಯಲೋಕವನ್ನು ಹೊಂದುತ್ತಾನೆ. ಅನಂತರ ಕೃತಪುಣ್ಯವೆಂಬ ಪ್ರಸಿದ್ಧವಾದ ಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ಮನಶ್ಶುದ್ಧಿಯಿಂದ ಗಂಗೆಯಲ್ಲಿ ಸ್ನಾನಮಾಡಬೇಕು. ಅಲ್ಲಿರುವ ಮಹಾದೇವನನ್ನು ಪೂಜಿಸಿದಲ್ಲಿ ಅವನು ಅಶ್ವಮೇಧಯಾಗದ ಫಲವನ್ನು ಹೊಂದುತ್ತಾನೆ.

೬೫-೬೮. ಅಲ್ಲಿಯೇ ಇರುವ ಕೋಟಿತೀರ್ಥಕ್ಕೆ ಹೋಗಿ ಅಲ್ಲಿ ಶ್ರದ್ಧೆಯಿಂದ ಸ್ನಾನಮಾಡಿ ಕೋಟೀಶ್ವರನನ್ನು ದರ್ಶನಮಾಡಿದಲ್ಲಿ ಕೋಟಿಯಜ್ಞಫಲವು ಲಭಿಸುತ್ತದೆ. ಅನಂತರ ವಾಮನಕವೆಂಬ ಪ್ರಸಿದ್ಧವಾದ ತೀರ್ಥಕ್ಕೆ ಹೋಗಬೇಕು. ಆ ಕ್ಷೇತ್ರದಲ್ಲಿ ವಾಮನರೂಪಿಯಾದ ಪರಮಾತ್ಮನು ತ್ರಿವಿಕ್ರಮಾವತಾರವನ್ನು ಹೊಂದಿ ಬಲಿಯಿಂದ ರಾಜ್ಯವನ್ನು ಅಪಹರಿಸಿ ಇಂದ್ರನಿಗೆ ಕೊಟ್ಟನು. ಅಲ್ಲಿರುವ ವಿಷ್ಣುಪದ

ತತ್ರ ವಿಷ್ಣುಪದೆ ಸ್ನಾತ್ವಾ ಅರ್ಚಯಿತ್ವಾ ಚ ವಾಮನಂ।
ಸರ್ವಪಾಪವಿಶುದ್ಧಾತ್ಮಾ ವಿಷ್ಣುಲೋಕಮವಾಪ್ನುಯಾತ್ ॥೬೮॥

ಜ್ಯೇಷ್ಠಾಶ್ರಮಂ ಚ ತತ್ರೈವ ಸರ್ವಪಾತಕನಾಶನಂ।
ತಂ ತು ದೃಷ್ಟ್ವಾ ನರೋಮುಕ್ತಿಂ ಸಂಪ್ರಯಾತಿ ನ ಸಂಶಯಃ ॥೬೯॥

ಜ್ಯೇಷ್ಠಮಾಸೆ ಸಿತೆಪಕ್ಷೆ ಏಕಾದಶ್ಯಾಮುಪೋಷಿತಃ।
ದ್ವಾದಶ್ಯಾಂ ಚ ನರಃ ಸ್ನಾತ್ವಾ ಜ್ಯೇಷ್ಠತ್ವಂ ಲಭತೆ ನೃಷು ॥೭೦॥

ತತ್ರ ಪ್ರತಿಷ್ಠಿತಾ ವಿಪ್ರಾ ವಿಷ್ಣುನಾ ಪ್ರಭುವಿಷ್ಣುನಾ।
ದೀಕ್ಷಾಪ್ರತಿಷ್ಠಾಸಂಯುಕ್ತಾ ವಿಷ್ಣುಪ್ರೀಣನತತ್ಪರಾ ॥೭೧॥

ತೇಭ್ಯೋ ದತ್ತಾನಿ ಶ್ರಾದ್ಧಾನಿ ದಾನಾನಿ ವಿವಿಧಾನಿ ಚ।
ಅಕ್ಷಯಾಣಿ ಭವಿಷ್ಯನ್ತಿ ಯಾವನ್ಮನ್ವಂತರಸ್ಥಿತಿಃ ॥೭೨॥

ತತ್ರೈವ ಕೋಟಿತೀರ್ಥಂ ಚ ತ್ರಿಷು ಲೋಕೇಷು ವಿಶ್ರುತಂ।
ತಸ್ಮಿಂಸ್ತೀರ್ಥೆ ನರಃ ಸ್ನಾತ್ವಾ ಕೋಟಿಯಜ್ಞಫಲಂ ಲಭೇತ್ ॥೭೩॥

ತೀರ್ಥದಲ್ಲಿ ಸ್ನಾನಮಾಡಿ ವಾಮನನನ್ನು ಪೂಜಿಸಿದಲ್ಲಿ ಅವನು ಸರ್ವಪಾಪವಿಮುಕ್ತನಾಗಿ ವಿಷ್ಣುಲೋಕವನ್ನು ಹೊಂದುತ್ತಾನೆ.

೬೯-೭೨. ಅಲ್ಲಿಯೇ ಜ್ಯೇಷ್ಠಾಶ್ರಮವೆಂಬ ಸರ್ವಪಾಪನಾಶಕವಾದ ಆಶ್ರಮವಿರುವದು. ಆ ಕ್ಷೇತ್ರವನ್ನು ನೋಡಿದ ಮಾತ್ರಕ್ಕೆ ಮನುಷ್ಯಮಾತ್ರನಿಗೂ ನಿಸ್ಸಂಶಯವಾಗಿ ಮುಕ್ತಿಯುಂಟಾಗುತ್ತದೆ. ಜ್ಯೇಷ್ಠಮಾಸದ ಶುಕ್ಲಪಕ್ಷದಲ್ಲಿ ಏಕಾದಶಿ ಉಪವಾಸಮಾಡಿ ದ್ವಾದಶಿಯ ದಿನ ಇಲ್ಲಿ ಸ್ನಾನಮಾಡಿದ್ದೇ ಆದರೆ ಅವನು ಮನುಷ್ಯರಲ್ಲೆಲ್ಲಾ ದೊಡ್ಡತನವನ್ನು ಹೊಂದುತ್ತಾನೆ. ಆ ಕ್ಷೇತ್ರದಲ್ಲಿ ಸರ್ವಶಕ್ತನಾದ ಮಹಾವಿಷ್ಣುವಿನಿಂದ ವಿಷ್ಣುದೀಕ್ಷೆಯಲ್ಲಿ ನಿರತರಾದ ಬ್ರಾಹ್ಮಣರು ಏರ್ಪಡಿಸಲ್ಪಟ್ಟಿರುತ್ತಾರೆ. ಅಂತಹ ಬ್ರಾಹ್ಮಣರಿಗೆ ಕೊಟ್ಟ ವಿವಿಧ ದಾನಗಳೂ ಶ್ರಾದ್ಧಗಳೂ ಸಹ ಮನ್ವಂತರಪರ್ಯಂತ ಅಕ್ಷಯವಾಗಿ ನಿಲ್ಲುವವು.

೭೩-೭೫. ಅಲ್ಲಿಯೇ ಕೋಟಿ ತೀರ್ಥವೆಂದು ಪ್ರಸಿದ್ಧವಾದ ತೀರ್ಥವಿದೆ. ಅಲ್ಲಿ ಸ್ನಾನಮಾಡಿದ ಮನುಷ್ಯನು ಕೋಟಿ ಯಜ್ಞಫಲವನ್ನು ಹೊಂದುತ್ತಾನೆ. ಆ ತೀರ್ಥ

ಕೋಟೀಶ್ವರಂ ನರೋ ದೃಷ್ಟ್ವಾ ತಸ್ಮಿಂಸ್ತೀರ್ಥೇ ಮಹೇಶ್ವರಂ ।
ಮಹಾದೇವಪ್ರಸಾದೇನ ಗಾಣಪತ್ಯಮವಾಪ್ನುಯಾತ್ ॥ ೨೪ ॥

ತತ್ರೈವ ಸುಮಹತ್ತೀರ್ಥಂ ಸೂರ್ಯಸ್ಯ ಚ ಮಹಾತ್ಮನಃ ।
ತಸ್ಮಿನ್ ಸ್ನಾತ್ವಾ ಭಕ್ತಿಯುತಃ ಸೂರ್ಯಲೋಕೇ ಮಹೀಯತೇ ॥ ೨೫ ॥

ತತೋ ಗಚ್ಛೇಚ್ಚ ವಿಪ್ರೇಂದ್ರಾ ತೀರ್ಥಂ ಕಲ್ಮಷನಾಶನಂ ।
ಕುಲೋತ್ತಾರಣಕಂ ನಾಮ್ನಾ ವಿಷ್ಣುನಾ ಕಲ್ಪಿತಂ ಪುರಾ ॥ ೨೬ ॥

ವರ್ಣಾನಾಮಾಶ್ರಮಾಣಾಂ ಚ ತಾರಣಾಯ ಸುನಿರ್ಮಲಂ ।
ತೇಽಪಿ ತತ್ತೀರ್ಥಮಾಸಾದ್ಯ ಪಶ್ಯಂತಿ ಪರಮಂ ಪದಂ ॥ ೨೭ ॥

ಬ್ರಹ್ಮಚಾರೀ ಗೃಹಸ್ಥಶ್ಚ ವಾನಪ್ರಸ್ಥೋ ಯತಿಸ್ತಥಾ ।
ಕುಲಾನಿ ತಾರಯೇತ್ಸ್ನಾತಃ ಸಪ್ತ ಸಪ್ತ ಚ ಸಪ್ತ ಚ ॥ ೨೮ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಸ್ತ್ರಿಯಶ್ಶೂದ್ರಾಶ್ಚ ತತ್ಪರಾಃ ।
ತೀರ್ಥಸ್ನಾತಾ ಭಕ್ತಿಯುತಾ ಪಶ್ಯಂತಿ ಪರಮಂ ಪದಂ ॥ ೨೯ ॥

ದಲ್ಲಿ ನೆಲಸಿರುವ ಕೋಟೀಶ್ವರನನ್ನು ದರ್ಶನಮಾಡಿದವನು ಆ ಮಹಾದೇವನ ಅನುಗ್ರಹದಿಂದ ಗಣಾಧಿಪತ್ಯವನ್ನು ಹೊಂದುತ್ತಾನೆ. ಅಲ್ಲಿಯೇ ಸೂರ್ಯತೀರ್ಥವೆಂಬ ಮಹಾತೀರ್ಥವೂ ಇದೆ. ಅದರಲ್ಲಿ ಭಕ್ತಿಯಿಂದ ಸ್ನಾನಮಾಡಿದವನು ಸೂರ್ಯಲೋಕದಲ್ಲಿ ಗೌರವಿಸಲ್ಪಡುತ್ತಾನೆ.

೨೬-೨೯. ಓ ವಿಪ್ರೇಂದ್ರರೇ, ಅನಂತರ ಕುಲೋತ್ತಾರಣಕವೆಂಬ ಸರ್ವಪಾಪನಾಶಕವಾದ ತೀರ್ಥಕ್ಕೆ ಹೋಗಬೇಕು. ಆ ತೀರ್ಥವು ಎಲ್ಲಾ ವರ್ಣಾಶ್ರಮಗಳನ್ನೂ ಉತ್ತಾರಣಮಾಡುವದಕ್ಕಾಗಿ ವಿಷ್ಣುವಿನಿಂದ ಪೂರ್ವದಲ್ಲೇ ನಿರ್ಮಿಸಲ್ಪಟ್ಟದ್ದು. ಬ್ರಹ್ಮಚಾರಿಯೇ ಆಗಲೀ, ಗೃಹಸ್ಥನಾಗಲೀ, ವಾನಪ್ರಸ್ಥನಾಗಲೀ, ಯತಿಯಾಗಲೀ, ಬ್ರಾಹ್ಮಣಕ್ಷತ್ರಿಯವೈಶ್ಯಶೂದ್ರರಲ್ಲಿ ಯಾರೇ ಆಗಲಿ ಸ್ತ್ರೀಯರೇ ಆಗಲಿ ಆ ತೀರ್ಥವನ್ನು ಹೊಂದಿ ಸ್ನಾನಮಾಡಿದಲ್ಲಿ ಅವರ ಕುಲ ಮತ್ತು ಕುಲದ ಇಪ್ಪತ್ತೊಂದು ತಲೆಯವರೂ ಕೂಡ ಉದ್ಧರಿಸಲ್ಪಡುತ್ತಾರೆ. ಭಕ್ತಿಯಿಂದ ಸ್ನಾನಮಾಡಿದವನೂ ಸಹ ಪರಮಪದವನ್ನೇ ಹೊಂದುತ್ತಾನೆ.

ದೂರಸ್ಥೋಽಪಿ ಸ್ಮರೇದ್ಯಸ್ತು ಕುರುಕ್ಷೇತ್ರಂ ಸವಾಮನಂ।
ಸೋಽಪಿ ಮುಕ್ತಿಮವಾಪ್ನೋತಿ ಕಿಂಪುನ ಸ್ತು ವಸನ್ನರಃ ॥ ೮೦ ॥

ಇತಿ ಶ್ರಿ ವಾಮನಪುರಾಣೇ ಸರೋಮಹಾತ್ಮ್ಯೇ
ಷಟ್‌ತ್ರಿಂಶೋಽಧ್ಯಾಯಃ

---

೮೦. ದೂರದಲ್ಲಿರುವವನೂ ಸಹ ವಾಮನಾವತಾರಶಾಲಿಯಾಗಿ ನೆಲಸಿರುವ ಮಹಾವಿಷ್ಣುವನ್ನೂ ಆ ಕುರುಕ್ಷೇತ್ರವನ್ನೂ ಸಹ ಸ್ಮರಣೆಮಾಡಿದರೂ ಕೂಡ ಮುಕ್ತಿಯನ್ನು ಹೊಂದುವ ಸಂಭವವಿರುವಾಗ ಅಲ್ಲಿಯೇ ವಾಸಮಾಡಿಕೊಂಡಿರುವವನಿಗೆ ಆ ಫಲವುಂಟಾಗುವುದರಲ್ಲಿ ಸಂದೇಹವೇನು ?

ಇಲ್ಲಿಗೆ ಶ್ರೀ ವಾಮನಪುರಾಣದ ಸರೋಮಾಹಾತ್ಮ್ಯದಲ್ಲಿ ಮೂವತ್ತಾರನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿಯೂ ಕುರುಕ್ಷೇತ್ರದ ತೀರ್ಥಗಳ ಮಾಹಾತ್ಮ್ಯವನ್ನೇ ವಿಸ್ತಾರವಾಗಿ ಪ್ರಪಂಚಿಸಿರುತ್ತಾರೆ.

॥ ಶ್ರೀಃ ॥

ಶ್ರೀವಾಮನಪುರಾಣಂ

ಸಪ್ತತ್ರಿಂಶೋಽಧ್ಯಾಯಃ

ಲೋಮಹರ್ಷಣ ಉವಾಚ

ಪವನಸ್ಯ ಹ್ರದೇ ಸ್ನಾತ್ವಾ ದೃಷ್ಟ್ವಾ ದೇವಂ ಮಹೇಶ್ವರಂ।
ವಿಮುಕ್ತಃ ಸರ್ವಕಲುಷೈಃ ಶೈವಂ ಪದಮವಾಪ್ನುಯಾತ್ ॥ ೧ ॥

ಪುತ್ರಶೋಕೇನ ಪವನೋ ಯಸ್ಮಿನ್ ಲೀನೋ ಬಭೂವ ಹ।
ತತಃ ಸಬ್ರಹ್ಮಕೈಃ ದೇವೈಃ ಸ್ತುತ್ವಾ ತಂ ಭಕ್ತಿಸಂಯುತಃ ॥ ೨ ॥

ತತೋ ಗಚ್ಛೇದ್ಧಿ ಹನೂಮತ್ಸ್ಥಾನಂ ತಚ್ಛೂಲಪಾಣಿನಃ।
ತತ್ರ ದೇವೈಸ್ಸಗಂಧರ್ವೈಃ ಹನೂಮಾನ್ ಪ್ರಕಟೀಕೃತಃ ॥ ೩ ॥

ಮೂವತ್ತೇಳನೆಯ ಅಧ್ಯಾಯವು

೧-೪. ಪುನಃ ಲೋಮಹರ್ಷಣರು ತೀರ್ಥಮಾಹಾತ್ಮ್ಯವನ್ನೇ ಉಪಕ್ರಮಿಸುತ್ತಾರೆ:—ಅನಂತರ ಪವನಹ್ರದವೆಂಬ ತೀರ್ಥದಲ್ಲಿ ಸ್ನಾನಮಾಡಬೇಕು. ಸ್ನಾನಮಾಡಿ ಅಲ್ಲಿರುವ ಮಹೇಶ್ವರನನ್ನು ದರ್ಶನಮಾಡಿದಲ್ಲಿ ಸರ್ವಪಾಪಗಳಿಂದಲೂ ಮುಕ್ತನಾಗಿ ಶಿವನ ಸ್ಥಾನವನ್ನು ಹೊಂದುತ್ತಾನೆ. ಪೂರ್ವಕಾಲದಲ್ಲಿ ಪುತ್ರಶೋಕದಿಂದ ಸಂತಾಪಹೊಂದಿದ ವಾಯುದೇವನು ಆ ಹ್ರದದಲ್ಲಿ ಮುಳುಗಿ ಅವಿತುಕೊಂಡನು. ಆಮೇಲೆ ಬ್ರಹ್ಮನೇ ಮೊದಲಾದ ದೇವತೆಗಳು ಆ ವಾಯುದೇವನನ್ನು ಭಕ್ತಿಯಿಂದ ಸ್ತೋತ್ರಮಾಡಿ ಸಮಾಧಾನಪಡಿಸಿದರು. ಆದುದರಿಂದ ಇದಕ್ಕೆ ಪವನಹ್ರದವೆಂದು ಹೆಸರುಬಂದಿದೆ. ಅನಂತರ ಶೂಲಪಾಣಿಕ್ಷೇತ್ರದಲ್ಲಿರುವ ಹನೂಮತ್ತೀರ್ಥಕ್ಕೆ ಹೋಗಬೇಕು. ಅಲ್ಲಿ ದೇವತೆಗಳೂ ಗಂಧರ್ವರೂ ಹನುಮಂತನನ್ನು ಸಾಕ್ಷಾತ್ಕರಿಸಿದರು. ಆ ತೀರ್ಥದಲ್ಲಿ ಸ್ನಾನಮಾಡಿದವನು ಮೋಕ್ಷವನ್ನೇ ಹೊಂದುತ್ತಾನೆ. ಹೀಗೆಯೇ

ತತ್ರ ತೀರ್ಥೇ ನರಃ ಸ್ನಾತ್ವಾ ಅಮೃತತ್ವಮವಾಪ್ನುಯಾತ್ ।
ಕುಲೋತ್ತಾರಣಮಾಸಾದ್ಯ ತೀರ್ಥಸೇವೀ ದ್ವಿಜೋತ್ತಮಃ ।
ಕುಲಾನಿ ತಾರಯೇತ್ಸರ್ವಾಣ ಮಾತಾಮಹಪಿತಾಮಹಾನ್ ॥ ೪ ॥

ಶಾಲಿಹೋತ್ರಸ್ಯ ರಾಜರ್ಷೇಃ ತೀರ್ಥಂ ತ್ರೈಲೋಕ್ಯವಿಶ್ರುತಂ ॥ ೫ ॥

ತತ್ರ ಸ್ನಾತ್ವಾ ವಿಮುಕ್ತಸ್ತು ಕಲುಷೈಃ ದೇಹಸಂಭವೈಃ ।
ಶ್ರೀಕುಂಜಂ ತು ಸರಸ್ವತ್ಯಾಂ ತೀರ್ಥಂ ತ್ರೈಲೋಕ್ಯವಿಶ್ರುತಂ ॥ ೬ ॥

ತತ್ರ ಸ್ನಾತ್ವಾ ನರೋಭಕ್ತ್ಯಾ ಹ್ಯಗ್ನಿಷ್ಟೋಮಫಲಂ ಲಭೇತ್ ।
ತತೋ ನೈಮಿಷಕುಂಜಂ ತು ಸಮಾಸಾದ್ಯ ನರಃ ಶುಚಿಃ ॥ ೭ ॥

ನೈಮಿಷಸ್ಯ ಚ ಸ್ನಾನೇನ ಯತ್ಪುಣ್ಯಂ ತತ್ಸಮಾಪ್ನುಯಾತ್ ।
ತತ್ರ ತೀರ್ಥಂ ಮಹತ್ಖ್ಯಾತಂ ವೇದವತ್ಯಾ ನಿಷೇವಿತಂ ।
ರಾವಣೇನ ಗೃಹೀತಾಯಾಃ ಕೇಶೇಷು ದ್ವಿಜಸತ್ತಮಾಃ ॥ ೮ ॥

ತೀರ್ಥಯಾತ್ರಾಸೇವಿಯಾದ ಬ್ರಾಹ್ಮಣನು ಅಲ್ಲಿರುವ ಕುಲೋತ್ತಾರಣವೆಂಬ ತೀರ್ಥಕ್ಕೂ ಹೋಗಿ ಅಲ್ಲಿ ಸ್ನಾನಾದಿಗಳನ್ನು ನಡೆಸಿದಲ್ಲಿ ಅವನು ತನ್ನ ಮಾತಾಮಹ ಪಿತಾಮಹವಂಶಗಳೆರಡನ್ನೂ ಹಾಗೆಯೇ ಕುಲವನ್ನೇ ಸಂಸಾರಬಂಧನದಿಂದ ಬಿಡಿಸುತ್ತಾನೆ.

೫-೮. ಅಲ್ಲಿಯೇ ರಾಜರ್ಷಿಯಾದ ಶಾಲಿಹೋತ್ರನ ತೀರ್ಥವು ಲೋಕಪ್ರಸಿದ್ಧಿಯಿಂದ ಪ್ರಕಾಶಿಸುತ್ತಿದೆ. ಅಲ್ಲಿ ಸ್ನಾನಮಾಡಿದಲ್ಲಿ ದೇಹಸಂಬಂಧಿಗಳಾದ ಪಾಪಗಳೆಲ್ಲವೂ ನಾಶವಾಗುತ್ತವೆ. ಮತ್ತು ಅಲ್ಲಿಯೇ ಸರಸ್ವತೀನದಿಯಲ್ಲಿ ಶ್ರೀ ಕುಂಜವೆಂಬ ಮತ್ತೊಂದು ತೀರ್ಥವಿದೆ. ಅಲ್ಲಿ ಸ್ನಾನಮಾಡಿದವನು ಅಗ್ನಿಷ್ಟೋಮದ ಫಲವನ್ನು ಹೊಂದುತ್ತಾನೆ. ಅನಂತರ ನೈಮಿಷಕುಂಜವೆಂಬ ಕ್ಷೇತ್ರಕ್ಕೆ ಹೋಗಬೇಕು. ಶುಚಿಯಾಗಿದ್ದು ಅದನ್ನು ಸೇವಿಸಿದಲ್ಲಿ ನೈಮಿಷತೀರ್ಥದ ಸ್ನಾನದಿಂದ ಲಭಿಸಬಹುದಾದ ಫಲವನ್ನೇ ಹೊಂದುತ್ತಾನೆ. ಅಲ್ಲಿ ಒಂದು ಮಹಾತೀರ್ಥವಿದೆ, ಪೂರ್ವದಲ್ಲಿ ರಾವಣನಿಂದ ಕೇಶಗಳಲ್ಲಿ ಸೆಳೆಯಲ್ಪಟ್ಟ ವೇದವತಿಯು ಈ ತೀರ್ಥವನ್ನು ಸೇವಿಸುತ್ತಿದ್ದಳು.

ತದ್ವಧಾಯಚ ಸಾ ಪ್ರಾಣಾನ್ಮುಮುಚೆ ಶೋಕಕರ್ಶಿತಾ ॥ ೯ ॥
ತತೋ ಜಾತಾ ಗೃಹೆ ರಾಜ್ಞೋ ಜನಕಸ್ಯ ಮಹಾತ್ಮನಃ ।

ಸೀತಾನಾಮೇತಿವಿಖ್ಯಾತಾ ರಾಮಪತ್ನೀ ಪತಿವ್ರತಾ ॥ ೧೦ ॥

ಸಾ ಹೃತಾ ರಾವಣೇನೈವ ವಿನಾಶಾಯಾತ್ಮನಃ ಸ್ವಯಂ ।
ರಾಮೇಣ ರಾವಣಂ ಹತ್ವಾ ಅಭಿಷಿಚ್ಯ ವಿಭೀಷಣಂ ॥ ೧೧ ॥

ಸಮಾನೀತಾ ಗೃಹಂ ಸೀತಾ ಕೀರ್ತಿರಾತ್ಮವನಂ ಯಥಾ ।
ತಸ್ಯಾಸ್ತೀರ್ಥೆ ನರಃ ಸ್ನಾತ್ವಾ ಕನ್ಯಾಯಜ್ಞಫಲಂ ಲಭೇತ್
ವಿಮುಕ್ತಃ ಕಲುಷೈಸ್ಸರ್ವೈಃ ಪ್ರಾಪ್ನೋತಿ ಪರಮಂಪದಂ ॥ ೧೨ ॥

ತತೋ ಗಚ್ಛೇಚ್ಚ ಸುಮಹದ್ಬ್ರಹ್ಮಣಃ ಸ್ಥಾನಮುತ್ತಮಂ ॥ ೧೩ ॥

ಯತ್ರ ವರ್ಣಾವರಃ ಸ್ನಾತ್ವಾ ಬ್ರಾಹ್ಮಣ್ಯಂ ಲಭತೆ ನರಃ ।
ಬ್ರಾಹ್ಮಣಶ್ಚ ವಿಶುದ್ಧಾತ್ಮಾ ಪರಂ ಪದಮವಾಪ್ನುಯಾತ್ ॥ ೧೪ ॥

೯-೧೨. ಆ ವೇದವತಿಯು ಆ ಪ್ರಕಾರವಾದ ಅವಮಾನದಿಂದ ಬಹಳ ದುಃಖ ಪಟ್ಟು ಕೃಶಳಾಗಿ ಕೊನೆಗೆ ಆ ರಾವಣನ ವಧಕ್ಕಾಗಿ ಅಲ್ಲಿ ಪ್ರಾಣವನ್ನೇ ಬಿಟ್ಟಳು. ಅನಂತರ ಜನಕರಾಜನ ಮನೆಯಲ್ಲಿ ಹುಟ್ಟಿ ಸೀತೆಯೆಂಬ ಹೆಸರಿನಿಂದ ರಾಮನಿಗೆ ಪತ್ನಿಯಾಗಿ ಪತಿವ್ರತೆಯೆಂದು ಪರಿಗಣಿಸಲ್ಪಟ್ಟಳು. ಅವಳನ್ನು ರಾವಣನು ತನ್ನ ನಾಶಕ್ಕಾಗಿ ತಾನೇ ಅಪಹರಿಸಿದನು. ಅನಂತರ ರಾಮನು ರಾವಣನನ್ನು ನಾಶಮಾಡಿ ವಿಭೀಷಣನಿಗೆ ಅವನ ರಾಜ್ಯವನ್ನು ಅಭಿಷೇಕಪೂರ್ವಕವಾಗಿ ಕೊಟ್ಟು ಯಶಸ್ಸನ್ನು ತಂದಂತೆ ಸೀತೆಯನ್ನೂ ತನ್ನ ಮನೆಗೆ ಕರೆತಂದನು. ಆ ತೀರ್ಥದಲ್ಲಿ ಸ್ನಾನಮಾಡಿದ ಮನುಷ್ಯನು ಕನ್ಯಾಯಜ್ಞದ ಫಲವನ್ನು ಹೊಂದುತ್ತಾನೆ. ಸರ್ವಪಾಪಗಳನ್ನೂ ಹೋಗಲಾಡಿಸಿಕೊಂಡು ಪರಮಪದವನ್ನೂ ಹೊಂದುತ್ತಾನೆ.

೧೩-೧೮. ಅನಂತರ ಮಹಾಕ್ಷೇತ್ರವಾದ ಬ್ರಹ್ಮಸ್ಥಾನಕ್ಕೆ ಹೋಗಬೇಕು. ಅಲ್ಲಿ ಅಪಕೃಷ್ಟವರ್ಣದವನಾದರೂ ಸ್ನಾನಮಾಡಿದಲ್ಲಿ ಬ್ರಾಹ್ಮಣ್ಯವನ್ನು ಹೊಂದುತ್ತಾನೆ. ಅನಂತರ ಬ್ರಾಹ್ಮಣ್ಯದಿಂದ ಶುದ್ಧನಾಗಿ ಪರಮಪದವನ್ನು ಹೊಂದುತ್ತಾನೆ. ಅಲ್ಲಿಂದ ಸೋಮತೀರ್ಥಕ್ಕೆ ಹೋಗಬೇಕು. ದುರ್ಲಭವಾದ ಆ ಕ್ಷೇತ್ರದಲ್ಲಿಯೇ ಚಂದ್ರನು

ತತೋ ಗಚ್ಛೇತ್ಸೋಮತೀರ್ಥಂ ತ್ರೈಲೋಕ್ಯೇ ಚಾಪಿ ದುರ್ಲಭಂ ।
ಯತ್ರ ಸೋಮಸ್ತಪಸ್ತಪ್ತ್ವಾ ದ್ವಿಜರಾಜ್ಯಮವಾಪ್ತವಾನ್ ॥ ೧೫ ॥

ತತ್ರ ಸ್ನಾತ್ವಾರ್ಚಯಿತ್ವಾ ಚ ಸ್ವಪಿತೄನ್ ದೈವತಾನಿ ಚ ।
ನಿರ್ಮುಕ್ತಃ ಸ್ವರ್ಗಮಾಯಾತಿ ಕಾರ್ತಿಕ್ಯಾಂ ವಾಮನಂ ಯಥಾ ॥ ೧೬ ॥

ಸಪ್ತಸಾರಸ್ವತಂ ತೀರ್ಥಂ ತ್ರೈಲೋಕ್ಯಸ್ಯಾಪಿ ದುರ್ಲಭಂ ।
ಯತ್ರ ಸಪ್ತಸರಸ್ವತ್ಯ ಏಕೀಭೂತಾ ವಿಹಂತಿ ಚ ॥ ೧೭ ॥

ಸುಪ್ರಭಾ ಕಾಂಚನಾಕ್ಷೀಚ ವಿಮಲಾ ಮಾನಸಹ್ರದಾ ।
ಸರಸ್ವತ್ಯೋಘನಾಮ್ನೀ ಚ ಸುವರ್ಣಾ ವಿಮಲೋದಕಾ ॥ ೧೮ ॥

ಪಿತಾಮಹಸ್ಯ ಯಜತಃ ಪುಷ್ಕರೇಷು ಸ್ಥಿತಸ್ಯ ಹ ।
ಅಬ್ರುವನ್ ಋಷಯಸ್ಸರ್ವೇ ನಾಯಂ ಯಜ್ಞೋಮಹಾಫಲಃ ॥ ೧೯ ॥

ನ ದೃಶ್ಯತೇ ಸರಿಚ್ಛ್ರೇಷ್ಠಾ ಪುರಃಸ್ಥಾ ವೈ ಸರಸ್ವತೀ ।
ತಚ್ಛ್ರುತ್ವಾ ಭಗವಾನ್ ಪ್ರೀತಃ ಸಸ್ಮಾರಾಥ ಸರಸ್ವತೀಂ ॥ ೨೦ ॥

ತಪಸ್ಸನ್ನು ಮಾಡಿ ದ್ವಿಜರಾಜನಾದನು ಅಲ್ಲಿ ಸ್ನಾನಮಾಡಿ ಪಿತೃಗಳನ್ನೂ ದೇವತೆಗಳನ್ನೂ ಪೂಜಿಸಿದಲ್ಲಿ ಕಾರ್ತಿಕಿಯಲ್ಲಿ ವಾಮನನ ಪೂಜೆಯಿಂದ ಹೇಗೋ ಹಾಗೆ ಇದರಿಂದಲೂ ಸರ್ವಪಾಪಗಳನ್ನೂ ಹೋಗಲಾಡಿಸಿಕ್ಕೊಂಡು ಸ್ವರ್ಗವನ್ನು ಹೊಂದುತ್ತಾನೆ. ಅಲ್ಲಿಯೇ ಸಪ್ತಸಾರಸ್ವತವೆಂಬ ಪ್ರಸಿದ್ಧಕ್ಷೇತ್ರವಿದೆ. ಆ ಸ್ಥಲದಲ್ಲಿ ಏಳು ನದಿಗಳೂ ಏಕೀಭವಿಸಿ ಸರ್ವಪಾಪಗಳನ್ನೂ ನಾಶಪಡಿಸಲು ಸಿದ್ಧವಾಗಿವೆ. ಸುಪ್ರಭಾ, ಕಾಂಚನಾಕ್ಷೀ, ವಿಮಲಾ, ಮಾನಸಹ್ರದಾ, ಸರಸ್ವತ್ಯೋಘ, ಸುವರ್ಣಾ, ವಿಮಲೋದಕಾ ಈ ಏಳು ನದಿಗಳೂ ಅಲ್ಲಿ ಏಕೀಭವಿಸಿವೆ.

೧೯-೨೨. ಪೂರ್ವಕಾಲದಲ್ಲಿ ಪುಷ್ಕರಕ್ಷೇತ್ರದಲ್ಲಿ ಯಾಗಮಾಡಲುಪಕ್ರಮಿಸಿದ ಚತುರ್ಮುಖನನ್ನು ಕುರಿತು ಋಷಿಗಳು ನಿನ್ನ ಈ ಯಜ್ಞವು ಮಹಾಫಲವಾಗಿ ಪರಿಣಮಿಸುವದಿಲ್ಲ. ಈ ಕ್ಷೇತ್ರದ ಪವಿತ್ರತೆಗೆ ಕಾರಣಳಾದ ಸರಸ್ವತೀನದಿಯು ಕಣ್ಣಿಗೆ ಕಾಣಿಸಿಕೊಳ್ಳದೆ ಅದೃಶ್ಯಳಾಗಿದ್ದಾಳೆ ಎಂದು ಹೇಳಲಾಗಿ ಚತುರ್ಮುಖನು ಸಮಯೋಚಿತವಾದ ಅವರ ಸಲಹೆಯಿಂದ ಸಂತೋಷಪಟ್ಟು ಸರಸ್ವತಿಯನ್ನು ಸ್ಮರಿಸಿಕೊಂಡನು.

ಪಿತಾಮಹೇನ ಯಜತಾಹ್ಯಾಹೂತಾ ಪುಷ್ಕರೇಷು ಚ ।
ಸುಪ್ರಭಾ ನಾಮ ಸಾ ದೇವೀ ತತ್ರ ಖ್ಯಾತಾ ಸರಸ್ವತೀ ॥ ೨೧ ॥

ತಾಂ ದೃಷ್ಟ್ವಾ ಮುನಯಃ ಪ್ರೀತಾ ವೇಗಯುಕ್ತಾಂ ಸರಸ್ವತೀಂ ।
ಪಿತಾಮಹಂ ಮಾನಯಂತೀಂ ತೇ ತು ತಾಂ ಬಹು ಮೇನಿರೆ ॥ ೨೨ ॥

ಏವಮೇಷಾ ಸರಿಚ್ಛ್ರೇಷ್ಠಾ ಪುಷ್ಕರಸ್ಥಾ ಸರಸ್ವತೀ ।
ಸಮಾನೀತಾ ಕುರುಕ್ಷೇತ್ರಂ ಮಾರ್ಕಂಡೇನ ಮಹಾತ್ಮನಾ ॥ ೨೩ ॥

ನೈಮಿಷೇ ಮುನಯಃ ಸ್ಥಿತ್ವಾ ಶೌನಕಾದ್ಯಾಸ್ತಪೋಧನಾಃ ।
ತೆ ಪೃಚ್ಛಂತಿ ಮಹಾತ್ಮಾನಂ ಪುರಾಣಂ ಲೋಮಹರ್ಷಣಂ ॥ ೨೪ ॥

ಕಥಂ ನಃ ಸ್ಯಾತ್ ಯಜ್ಞಫಲಂ ವರ್ತತಾಂ ಸತ್ಪಥೆ ಮುನೆ ।
ತತೋ ಬ್ರವೀನ್ಮಹಾಭಾಗಃ ಪ್ರಣಮ್ಯ ಶಿರಸಾ ಮುನೀನ್ ॥ ೨೫ ॥

ಆರೀತಿ ಪುಷ್ಕರಕ್ಷೇತ್ರದಲ್ಲಿ ಯಜ್ಞಮಾಡುತ್ತಲಿರುವ ಬ್ರಹ್ಮನಿಂದ ಆಹೂತಳಾಗಿ ಸುಪ್ರಭಾ ಎಂಬ ಒಂದು ಶಾಖೆಯೇ ಸರಸ್ವತಿ ಎಂದು ಪ್ರಖ್ಯಾತಳಾದಳು. ವೇಗದಿಂದ ಹರಿಯಲುಪಕ್ರಮಿಸಿದ ಆ ಸರಸ್ವತಿಯನ್ನು ನೋಡಿ ಋಷಿಗಳು ಸಂತುಷ್ಟರಾಗಿ ಚತುರ್ಮುಖನಿಗೂ ಮೇಲ್ಮೆಯನ್ನುಂಟುಮಾಡಿದುದಕ್ಕಾಗಿ ತಾವೂ ಅವಳನ್ನು ಗೌರವಿಸಿ ಕೊಂಡಾಡಿದರು.

೨೩-೨೬. ಈರೀತಿ ಪುಷ್ಕರಕ್ಷೇತ್ರದಲ್ಲಿರುವ ಸರಸ್ವತೀನದಿಯು ಮಹಾತ್ಮನಾದ ಮಾರ್ಕಂಡೇಯ ಮಹಾಮುನಿಯಿಂದ ಕುರುಕ್ಷೇತ್ರಕ್ಕೆ ತರಲ್ಪಟ್ಟಿತು. ನೈಮಿಷಾರಣ್ಯದಲ್ಲಿರುವ ಋಷಿಗಳೆಲ್ಲರೂ ಶೌನಕಾದಿ ಮಹಾಮುನಿಗಳೂ ಸಹ ಪುರಾತನನಾದ ಲೋಮಹರ್ಷಣ ಮುನಿಯನ್ನು ಕುರಿತು ಸನ್ಮಾರ್ಗದಲ್ಲಿರುವ ನಮಗೆ ಯಜ್ಞಫಲವು ಹೇಗೆ ಲಭಿಸುತ್ತದೆ ಎಂದು ಪ್ರಶ್ನೆಮಾಡಲಾಗಿ ಜ್ಞಾನಿಯಾದ ಆ ಲೋಮಹರ್ಷಣನು ಅವರಿಗೆ ಸಾಷ್ಟಾಂಗಪ್ರಣಾಮಮಾಡಿ ಸರಸ್ವತೀನದಿಯ ಸಾನ್ನಿಧ್ಯವು ಎಲ್ಲಿರುವದೋ ಅಲ್ಲಿ ಯಜ್ಞಫಲವು ಮಹಾಫಲವಾಗಿ ಪರಿಣಮಿಸುವುದು ಎಂದು ಉತ್ತರಕೊಟ್ಟನು.

ಸರಸ್ವತೀ ಸ್ಥಿತಾ ಯತ್ರ ತತ್ರ ಯಜ್ಞಫಲಂ ಮಹತ್ ।
ಏತಚ್ಛ್ರುತ್ವಾ ತು ಮುನಯೋ ನಾನಾಸ್ವಾಧ್ಯಾಯವೇದಿನಃ ।
ಸಮಾಗಮ್ಯ ತತಸ್ಸರ್ವೇ ಸಂಸ್ಮರಂತಿ ಸರಸ್ವತೀಂ ॥ ೨೬ ॥

ಸಾ ತು ಧ್ಯಾತಾ ತತಸ್ತತ್ರ ಋಷಿಭಿಃ ಸತ್ರಯಾಜಿಭಿಃ ॥ ೨೭ ॥

ಸಮಾಗತಾ ಪ್ಲಾವನಾರ್ಥಂ ಯಜ್ಞೇ ತೇಷಾಂ ಮಹಾತ್ಮನಾಂ ।
ನೈಮಿಷೇ ಕಾಂಚನಾಕ್ಷೀ ತು ಮಂಕಣೇನ ಮಹೌಜಸಾ ॥ ೨೮ ॥

ಸಮಾಯಾತಾ ಕುರುಕ್ಷೇತ್ರಂ ಪುಣ್ಯತೋಯಾ ಸರಸ್ವತೀ ।
ಗಯಸ್ಯ ಯಜಮಾನಸ್ಯ ಗಯಾಯಾಂ ಚ ಮಹಾಕ್ರತೌ ॥ ೨೯ ॥

ಆಹೂತಾ ಚ ಸರಿಚ್ಛ್ರೇಷ್ಠಾ ಗಯಯಜ್ಞೇ ಸರಸ್ವತೀ ।
ವಿಶಾಲಾಂ ನಾಮ ತಾಂ ಪ್ರಾಹುಃ ಋಷಯಃ ಸಂಶಿತವ್ರತಾಃ ॥ ೩೦ ॥

ಸರಿತ್ಸಾಹಿ ಸಮಾಹೂತಾ ಮಂಕಣೇನ ಮಹಾತ್ಮನಾ ।
ಕುರುಕ್ಷೇತ್ರಂ ಸಮಾಯಾತಾ ಪ್ರವಿಷ್ಟಾ ಚ ಮಹಾನದೀ ॥ ೩೧ ॥

ಈ ಮಾತನ್ನು ಕೇಳಿದ ಆ ಮುನಿಗಳು ನಾನಾ ಶಾಖಾಧ್ಯಯನದಿಂದ ಶುದ್ಧವಾದ ಮನೋವೃತ್ತಿಯುಳ್ಳವರಾದುದರಿಂದ ಎಲ್ಲರೂ ಅಲ್ಲಿ ಸೇರಿ ಆ ಸರಸ್ವತಿಯನ್ನು ಸ್ಮರಿಸಿದರು.

೨೭-೩೦. ಅನಂತರ ಸತ್ರಯಾಗದಲ್ಲಿ ಸೇರಿದ್ದ ಆ ಋಷಿಗಳಿಂದ ಅಲ್ಲಿ ಧ್ಯಾನಿಸಲ್ಪಟ್ಟ ಸರಸ್ವತಿಯು ಆ ಮಹಾತ್ಮರ ಯಜ್ಞವನ್ನು ಪರಿಶುದ್ಧಗೊಳಿಸಲು ಬಂದಳು. ನೈಮಿಷಕ್ಷೇತ್ರದಲ್ಲಿ ಮಹಾತೇಜಸ್ವಿಯಾದ ಮಂಕಣಮಹರ್ಷಿಯ ಧ್ಯಾನದಿಂದ ಆಹೂತಳಾಗಿ ಕಾಂಚನಾಕ್ಷೀ ಎಂಬ ಶಾಖೆಯಿಂದ ಆ ಸರಸ್ವತಿಯೇ ಕುರುಕ್ಷೇತ್ರಕ್ಕೆ ಬಂದಳು. ಗಯಾಕ್ಷೇತ್ರದಲ್ಲಿ ಮಹಾಯಜ್ಞದಲ್ಲಿ ತೊಡಗಿದ್ದ ಗಯನೆಂಬ ಮಹರ್ಷಿಯ ಆಹ್ವಾನವನ್ನು ಪುರಸ್ಕರಿಸಿ ಅಲ್ಲಿಗೂ ಬಂದಳು. ಆ ಸರಸ್ವತಿಯ ಶಾಖೆಯನ್ನು ಮಹರ್ಷಿಗಳು ವಿಶಾಲಾ ಎಂಬ ಹೆಸರಿನಿಂದ ಕರೆದರು.

೩೧-೩೩. ಈರೀತಿ ಮಂಕಣಮಹರ್ಷಿಯಿಂದ ಆಹ್ವಾನಿಸಲ್ಪಟ್ಟು ಮಹಾನದಿಯಾಗಿ ಕುರುಕ್ಷೇತ್ರಕ್ಕೆ ಬಂದಳು. ದೇವರ್ಷಿಗಳಿಂದ ಮಾನ್ಯವಾಗಿರುವ ಉತ್ತರ

ಉತ್ತರೆ ಕೋಶಲಾಭಾಗೆ ಪುಣ್ಯೆ ದೇವರ್ಷಿಸೇವಿತೆ ।
ಉದ್ದಾಲಕೇನ ಮುನಿನಾ ತತ್ರ ಧ್ಯಾತಾ ಸರಸ್ವತೀ ॥ ೩೨ ॥

ಆಜಗಾಮ ಸರಿಚ್ಛ್ರೇಷ್ಠಾ ತಂ ದೇಶಂ ಮುನಿಕಾರಣಾತ್ ।
ಪೂಜ್ಯಮಾನಾ ಮುನಿಗಣೈಃ ವಲ್ಕಲಾಜಿನಸಂವೃತೈಃ ॥ ೩೩ ॥

ಮನೋಹರೇತಿ ವಿಖ್ಯಾತಾ ಕೇದಾರೆ ಯಾ ಸರಸ್ವತೀ ।
ಸರ್ವಪಾಪಕ್ಷಯಾ ಜ್ಞೇಯಾ ಋಷಿಸಿದ್ಧನಿಷೇವಿತಾ ॥ ೩೪ ॥

ಸಾಪಿ ತೇನೇಹ ಮುನಿನಾಹ್ಯಾರಾಧ್ಯ ಪರಮೇಶ್ವರಂ ।
ಋಷೀಣಾಮುಪಕಾರಾರ್ಥಂ ಕುರುಕ್ಷೇತ್ರಂ ಪ್ರವೇಶಿತಾ ॥ ೩೫ ॥

ದಕ್ಷೇಣ ಯಜತಾ ಸಾಪಿ ಗಂಗಾದ್ವಾರೆ ಸರಸ್ವತೀ ।
ವಿಮಲೋದಾ ಭಗವತೀ ದಕ್ಷೇಣ ಪ್ರಕಟೀಕೃತಾ ॥ ೩೬ ॥

ಸಮಾಹೂತಾ ಯಯೌ ತತ್ರ ಮಂಕಣೇನ ಮಹಾತ್ಮನಾ ।
ಕುರುಕ್ಷೇತ್ರೇ ತು ಕುರುಣಾ ಯಜತಾ ಚ ಸರಸ್ವತೀ ॥ ೩೭ ॥

ಕೋಸಲದೇಶದಲ್ಲಿ ಉದ್ದಾಲಕಮುನಿಯಿಂದ ಧ್ಯಾನಿಸಲ್ಪಟ್ಟು ಅವನಿಗೋಸ್ಕರ ಆ ದೇಶಕ್ಕೆ ಬಂದಳು. ಈಗಲೂ ಅಲ್ಲಿ ನಾರುಮಡಿ ಮತ್ತು ಕೃಷ್ಣಾಜಿನಧಾರಿಗಳಾದ ಮಹರ್ಷಿವೃಂದದಿಂದ ಅವಳು ಪೂಜಿಸಲ್ಪಡುತ್ತಿರುತ್ತಾಳೆ.

೩೪-೩೬. ಕೇದಾರಕ್ಷೇತ್ರದಲ್ಲಿ ಋಷಿಗಳಿಂದಲೂ ಸಿದ್ಧರಿಂದಲೂ ಸೇವಿಸಲ್ಪಡುತ್ತಿರುವ ಆ ಸರಸ್ವತಿಯು ಮನೋಹರಾ ಎಂದು ಪ್ರಸಿದ್ಧಿಹೊಂದಿದ್ದಳು. ಆ ಉದ್ದಾಲಕ ಮುನಿಯೇ ಪರಮೇಶ್ವರನನ್ನು ಪೂಜಿಸಿ ಋಷಿಗಳ ಉಪಕಾರಕ್ಕಾಗಿ ಆ ನದಿಯನ್ನು ಕುರುಕ್ಷೇತ್ರಕ್ಕೆ ತಂದನು. ಹಾಗೆಯೇ ಗಂಗಾದ್ವಾರದಲ್ಲಿ ಯಜ್ಞಮಾಡಲುಪಕ್ರಮಿಸಿದ ದಕ್ಷನಿಂದ ವಿಮಲೋದಾ ಎಂಬ ಸರಸ್ವತಿಯ ಶಾಖೆಯು ಪ್ರಕಾಶಗೊಳಿಸಲ್ಪಟ್ಟಿತು.

೩೭-೩೮. ಈ ಪ್ರಕಾರ ಮಂಕಣಮುನಿಯಿಂದ ಆಹೂತಳಾದ ಸರಸ್ವತಿಯು ಕುರುಕ್ಷೇತ್ರದಲ್ಲಿ ಯಾಗಮಾಡಿದ ಕುರುವಿನಿಂದ ಅಲ್ಲಿಗೆ ಒಯ್ಯಲ್ಪಟ್ಟಳು. ಅನಂತರ ಮಹಾಮತಿಯಾದ ಮಾರ್ಕಂಡೇಯನು ಆ ಸರಸ್ವತಿಯನ್ನು ಸರೋವರದ ಮಧ್ಯದಲ್ಲಿ

**ಸರೋಮಧ್ಯೇ ಸಮಾನೀತಾ ಮಾರ್ಕಂಡೇಯೇನ ಧೀಮತಾ ।
ಅಭಿಷ್ಲಾಯ ಮಹಾಭಾಗಃ ಪುಣ್ಯತೋಯಾಂ ಸರಸ್ವತೀಂ ।
ಯತ್ರ ಮಂಕಣಕಃ ಸಿದ್ಧಃ ಸಪ್ತಸಾರಸ್ವತೇ ಸ್ಥಿತಃ ॥ ೩೮ ॥**

**ಇತಿ ಶ್ರೀ ವಾಮನಪುರಾಣೇ ಸರೋಮಾಹಾತ್ಮ್ಯೇ
ಸಪ್ತತ್ರಿಂಶೋಽಧ್ಯಾಯಃ**

ಯೋಜಿಸಿದನು. ಆ ಸಪ್ತಸಾರಸ್ವತಕ್ಷೇತ್ರದಲ್ಲಿಯೇ ಪುಣ್ಯನದಿಯಾದ ಈ ಸರಸ್ವತಿಯನ್ನು ಸ್ತೋತ್ರಮಾಡುತ್ತಾ ಭಾಗ್ಯಶಾಲಿಯಾದ ಮಂಕಣಕಮುನಿಯೂ ಸಿದ್ಧನಾಗಿ ಪರಿಣಮಿಸಿದನು.

ಇಲ್ಲಿಗೆ ಶ್ರೀ ವಾಮನಪುರಾಣದಲ್ಲಿ ಸರೋಮಾಹಾತ್ಮ್ಯವೆಂಬ
ಮೂವತ್ತೇಳನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿಯೂ ತೀರ್ಥವಿಶೇಷಗಳನ್ನೂ, ಮಾಹಾತ್ಮ್ಯವನ್ನೂ ಹಿಂದಿನಂತೆಯೇ ಉಪಪಾದಿಸಲಾಗಿದೆ. ಸರಸ್ವತೀನದಿಯ ಏಳುಶಾಖೆಗಳಿಂದ ಪ್ರಸಿದ್ಧಿ ಹೊಂದಿರುವ ಸಪ್ತಸಾರಸ್ವತದ ಉತ್ಕರ್ಷವನ್ನೂ ಆ ಸಪ್ತಶಾಖೆಗಳ ಪ್ರಸಿದ್ಧ ನಾಮಧೇಯಗಳನ್ನೂ ಹೇಳಿ ಧ್ಯಾನಮಾತ್ರದಿಂದ ಅವುಗಳನ್ನು ಸಾಕ್ಷಾತ್ಕರಿಸಿ ಕುರುಕ್ಷೇತ್ರಕ್ಕೆ ತಂದ ಮಹರ್ಷಿಗಳನ್ನೂ ಕೊಂಡಾಡಿರುತ್ತಾರೆ. ಕುರುಕ್ಷೇತ್ರದ ಸರೋವರಕ್ಕೆ ಸರಸ್ವತೀ ನದಿಯಿಂದ ಉತ್ಕರ್ಷವನ್ನು ಹೇಳುವ ಈ ಕಥಾಭಾಗವೂ ಸರೋಮಾಹಾತ್ಮ್ಯಕ್ಕೇ ಸೇರಿದುದು.

॥ ಶ್ರೀಃ ॥

ಶ್ರೀವಾಮನಪುರಾಣಂ

ಅಷ್ಟತ್ರಿಂಶೋಽಧ್ಯಾಯಃ

ಋಷಯ ಊಚುಃ

ಕಥಂ ಮಂಕಣಕಸ್ಸಿದ್ಧಃ ಕಸ್ಮಾಜ್ಜಾತೋಮಹಾನ್ ಋಷಿಃ ।
ನೃತ್ಯಮಾನಸ್ತು ದೇವೇನ ಕಿಮರ್ಥಂ ಸ ನಿವಾರಿತಃ ॥ ೧ ॥

ಲೋಮಹರ್ಷಣ ಉವಾಚ

ಕಶ್ಯಪಾಚ್ಚ ಸುತೋ ಜಜ್ಞೇ ಮಾನಸೋ ಮಂಕಣೋ ಮುನಿಃ ।
ಸ್ನಾನಂ ಕರ್ತುಂ ವ್ಯವಸಿತೋ ಗೃಹೀತ್ವಾ ವಲ್ಕಲಂ ದ್ವಿಜಾಃ ॥ ೨ ॥

ತತ್ರಾಗತಾಹ್ಯಪ್ಸರಸೋ ರಂಭಾದ್ಯಾಃ ಪ್ರಿಯದರ್ಶನಾಃ ।
ಸ್ನಾಂತ್ಯೇವ ರುಚಿರಾಕಾರಾ ಮುಕ್ತವಸ್ತ್ರಾ ಅನಿಂದಿತಾಃ ॥ ೩ ॥

ಮೂವತ್ತೆಂಟನೆಯ ಅಧ್ಯಾಯವು

೧-೩. ಋಷಿಗಳು ಪುನಃ ಪ್ರಶ್ನೆಮಾಡುತ್ತಾರೆ:—ಮಂಕಣಮುನಿಯು ಹೇಗೆ ಹುಟ್ಟಿದನು, ಅವನು ಸಿದ್ಧನಾದುದು ತಾನೆ ಹೇಗೆ, ನರ್ತನಮಾಡುವ ಕಾಲದಲ್ಲಿ ಅವನನ್ನು ಶಂಭುದೇವನು ಏತಕ್ಕೆ ತಡೆದನು. ಈ ಪ್ರಶ್ನೆಗೆ ಉತ್ತರವಾಗಿ ಲೋಮಹರ್ಷಣರು ಹೇಳುತ್ತಾರೆ:—ಮಂಕಣಮುನಿಯು ಕಶ್ಯಪಋಷಿಯ ಮಾನಸಪುತ್ರನಾಗಿ ಜನಿಸಿದನು. ಅವನು ಒಂದಾನೊಂದುಕಾಲದಲ್ಲಿ ಸ್ನಾನಮಾಡಲು ನಾರುಮಡಿಯನ್ನು ಧರಿಸಿ ಸರೋವರದ ಸಮೀಪಕ್ಕೆ ಬಂದನು. ಆ ಸರೋವರದಲ್ಲಿ ರಂಭೆಯೇ ಮೊದಲಾದ ಅಪ್ಸರಸ್ತ್ರೀಯರು ವಿವಸ್ತ್ರರಾಗಿ ರಮಣೀಯವಾದ ಅವಯವ ಶೋಭೆಯನ್ನು ತೋರ್ಪಡಿಸುತ್ತ ಸ್ನಾನಮಾಡುತ್ತಿದ್ದರು.

ತತೋ ಮುನೇಸ್ತದಾ ಕ್ಷೋಭಾದ್ರೇತಃ ಸ್ಕನ್ನಂ ಯದಂಭಸಿ ।
ವ್ಯಾಧೋ ಜಗ್ರಾಹ ತದ್ರೇತಃ ಕಲಶೆ ನ್ಯಕ್ಷಿಪತ್ತಥಾ ॥ ४ ॥

ಸಪ್ತಧಾ ಪ್ರವಿಭಾಗಂ ತು ಕಲಶಸ್ಥಂ ಜಗಾಮ ಹ ।
ತತ್ರರ್ಷಯಃ ಸಪ್ತ ಜಾತಾ ವಿದುರ್ಯಾನ್ಮರುತೋ ಗಣಾನ್ ॥ ೫ ॥

ವಾಯುವೇಗೋ ವಾಯುಬಲೋ ವಾಯುಹಾ ವಾಯುಮಂಡಲಃ ।
ವಾಯುಕಾಲೋ ವಾಯುರೇತಾ ವಾಯುಚಕ್ರಶ್ಚ ವೀರ್ಯವಾನ್ ॥ ೬ ॥

ಏತೇ ತನಯಾಸ್ತಸ್ಯರ್ಷೇರ್ಧಾರಯಂತಿ ಚರಾಚರಂ ।
ಪುರಾ ಮಂಕಣಕಃ ಸಿದ್ಧಃ ಕುಶಾಗ್ರೇಣೇತಿ ಮೆ ಶ್ರುತಂ ॥ ೭ ॥

ಕ್ಷತಾತ್ಕಿಲಕರೆ ವಿಪ್ರಾಸ್ತಸ್ಯ ಶಾಕರಸೋಽಸ್ರವತ್ ।
ಸವೈ ಶಾಕರಸಂ ದೃಷ್ಟ್ವಾ ಹರ್ಷಾವಿಷ್ಟಃ ಸ ನೃತ್ತವಾನ್ ॥ ೮ ॥

೪-೬. ಆಗ ಆ ಮಂಕಣಮುನಿಗೆ ಚಿತ್ತಕ್ಷೋಭದಿಂದ ಸ್ನಾನಮಾಡುವಾಗಲೇ ವೀರ್ಯವು ಜಲದಲ್ಲಿ ಸ್ಖಲಿತವಾಯಿತು. ಅದನ್ನು ಅಲ್ಲಿದ್ದ ಒಬ್ಬ ಬೇಡನು ಗ್ರಹಿಸಿ ಅದನ್ನು ಗಡಿಗೆಯಲ್ಲಿಟ್ಟು ರಕ್ಷಿಸಿದನು. ಆ ಗಡಿಗೆಯಲ್ಲಿದ್ದ ವೀರ್ಯವು ಏಳು ಭಾಗವಾಗಿ ಅದರಿಂದ ಏಳುಜನ ಋಷಿಗಳು ಉಂಟಾದರು. ವಾಯುವೇಗ, ವಾಯುಬಲ, ವಾಯುಹಾ, ವಾಯುಮಂಡಲ, ವಾಯುಕಾಲ, ವಾಯುರೇತಾಃ, ವಾಯುಚಕ್ರ ಎಂಬ ಹೆಸರಿನ ಆ ಋಷಿಗಳನ್ನು ಈಗಲೂ ಮರುದ್ಗಣಗಳೆಂದು ವ್ಯವಹರಿಸುತ್ತಿದ್ದಾರೆ. ಆ ಮಹರ್ಷಿಯಿಂದ ಹುಟ್ಟಿದ ಈ ಏಳು ಋಷಿಗಳೇ ವಾಯುವಿಗೆ ಅಧಿದೇವತೆಯಾಗಿ ಚರಾಚರಪ್ರಪಂಚವನ್ನೇ ಧರಿಸಿರುತ್ತಾರೆ.

೭-೧೦. ಪೂರ್ವದಲ್ಲಿಯೇ ಮಂಕಣಕನು ಕುಶಾಗ್ರಕ್ಷೇತ್ರದಿಂದ ಸಿದ್ಧನಾಗಿದ್ದನೆಂದು ನಾನು ಕೇಳಿರುತ್ತೇನೆ. ಆ ಮಂಕಣಕನಿಗೆ ಒಂದಾನೊಂದುಕಾಲದಲ್ಲಿ ಗಾಯವಾದ ಕೈಯ್ಯಿನಿಂದ ಶಾಕರಸವು ಹೊರಗೆ ಸ್ರವಿಸಿತು. ಅವನು ಅದನ್ನು ನೋಡಿ ಇದೂ ಒಂದು ಆಶ್ಚರ್ಯವೆಂದು ತಿಳಿದು ನರ್ತನಮಾಡಲಾರಂಭಿಸಿದನು. ಸಿದ್ಧನಾದ

ತತಃ ಸರ್ವಂ ಪ್ರನೃತ್ತಂ ಚ ಸ್ಥಾವರಂ ಜಂಗಮಂ ಚ ಯತ್ ।
ಪ್ರನೃತ್ತಂ ಚ ಜಗದ್ದೃಷ್ಟ್ವಾ ತೇಜಸಾ ತಸ್ಯ ಮೋಹಿತಂ ॥೯॥

ಬ್ರಹ್ಮಾದಿಭಿಃ ಸುರೈಸ್ತತ್ರ ಋಷಿಭಿಶ್ಚ ತಪೋಧನೈಃ ।
ವಿಜ್ಞಪ್ತೋ ವೈ ಮಹಾದೇವೋ ಮುನೇರರ್ಥೇ ದ್ವಿಜೋತ್ತಮಾಃ ॥೧೦॥

ನಾಯಂ ನೃತ್ಯೇದ್ಯಥಾ ದೇವ ತಥಾ ತ್ವಂ ಕರ್ತುಮರ್ಹಸಿ ।
ತತೋ ದೇವೋ ಮುನಿಂ ದೃಷ್ಟ್ವಾ ಹರ್ಷಾವಿಷ್ಟಮತಿಂ ತದಾ ॥೧೧॥

ಸುರಾಣಾಂ ಹಿತಕಾಮಾರ್ಥಂ ಮಹಾದೇವೋಭ್ಯಭಾಷತ ।
ಹರ್ಷಸ್ಥಾನಂ ಕಿಮರ್ಥಂ ಚ ತವೈವಂ ಮುನಿಸತ್ತಮ ॥
ತಪಸ್ವಿನೋ ಧರ್ಮಪಥೇ ಸ್ಥಿತಸ್ಯ ದ್ವಿಜಸತ್ತಮ ॥೧೨॥

ಋಷಿರುವಾಚ

ಕಿಂ ನ ಪಶ್ಯಸಿ ಮೇ ಬ್ರಹ್ಮನ್ ಕರಾಚ್ಛಾಕರಸಂ ಸ್ರುತಂ ।
ಯಂ ದೃಷ್ಟ್ವಾ ಚ ಪ್ರನೃತ್ತೋ ವೈ ಹರ್ಷೇಣ ಮಹತಾನ್ವಿತಃ ॥೧೩॥

ಅವನ ಮಹಿಮೆಯಿಂದ ಜಗತ್ತೆಲ್ಲವೂ ಹಾಗೇ ನರ್ತನಮಾಡಲಾರಂಭಿಸಿತು. ಹೀಗೆ ಜಗತ್ತೂ ಮೋಹಗೊಂಡು ನರ್ತಿಸುತ್ತಿರುವದನ್ನು ನೋಡಿ ಬ್ರಹ್ಮಾದಿದೇವತೆಗಳೂ, ಮಹರ್ಷಿಗಳೂ ಏಕೀಭವಿಸಿ ರುದ್ರನಲ್ಲಿ ಹೋಗಿ ಈ ಋಷಿಯ ಉನ್ಮತ್ತಾವಸ್ಥೆಯನ್ನು ತಪ್ಪಿಸಲು ಪ್ರಾರ್ಥಿಸಿದರು.

೧೧-೧೩. ಈ ಮುನಿಯು ನರ್ತನಮಾಡದಂತೆ ನೀನು ಹೇಗಾದರೂ ಮಾಡಬೇಕೆಂಬ ಅವರ ಪ್ರಾರ್ಥನೆಯನ್ನು ಕೇಳಿ ಮಹಾದೇವನು ಹರ್ಷದಿಂದ ಕುಣಿಯುತ್ತಿರುವ ಆ ಮುನಿಯನ್ನು ನೋಡಿ ಸುರರಿಗೆ ಉಪಕಾರಮಾಡುವ ದೃಷ್ಟಿಯಿಂದ ಹೀಗೆ ಹೇಳಿದನು. ಎಲೈ ಮುನಿವರ್ಯನೇ, ನೀನು ಹೀಗೆ ಹರ್ಷವನ್ನು ಹೊಂದಲು ಕಾರಣವೇನು, ಧರ್ಮಮಾರ್ಗದಲ್ಲಿ ತಪಸ್ವಿಯಾಗಿ ಜೀವಿಸುವ ನಿನಗೆ ಮನಶ್ಶಾಂತಿಗೆ ವಿರೋಧಿಯಾದ ಈ ಹರ್ಷವು ನ್ಯಾಯವೇ, ಈ ಮಾತನ್ನು ಕೇಳಿ ಆ ಮುನಿಯು ಮಹಾತ್ಮನೇ, ನನ್ನ ಕೈಯ್ಯಿಂದ ಸುರಿಯುತ್ತಿರುವ ಈ ಶಾಕರಸವನ್ನು ನೀನು ನೋಡಲಿಲ್ಲವೇ, ಇದರಿಂದಲೇ ನಾನು ಹರ್ಷಗೊಂಡು ನರ್ತನಮಾಡುತ್ತಿದ್ದೇನೆ ಎಂದು ಉತ್ತರ ಕೊಟ್ಟನು. (ಗಾಯವಾದ ಕೈಯ್ಯಿನಿಂದ ರಕ್ತಬರದೆ ಶಾಕರಸವು ಬಂದದ್ದೇ ಅವನ ಆಶ್ಚರ್ಯಕ್ಕೆ ಕಾರಣವೆಂದು ತೋರುತ್ತದೆ.)

ತಂ ಪ್ರಹಸ್ಯಾಬ್ರವೀದ್ದೇವೋ ಮುನಿಂ ರಾಗೇಣ ಮೋಹಿತಂ ।
ಅಹಂ ನ ವಿಸ್ಮಯಂ ವಿಪ್ರ ಗಚ್ಛಾಮೀಹ ಪ್ರಪಶ್ಯತಾಂ ॥ ೧೪ ॥

ಏವಮುಕ್ತ್ವಾ ಮುನಿಶ್ರೇಷ್ಠಂ ದೇವದೇವೋ ಮಹಾದ್ಯುತಿಃ ।
ಅಂಗುಲ್ಯಗ್ರೇಣ ವಿಪ್ರೇಂದ್ರಾಃ ಸ್ವಾಂಗುಷ್ಠಃ ತಾಡಿತೋ ಭವತ್ ॥ ೧೫ ॥

ತತೋ ಭಸ್ಮ ಕ್ಷತಾತ್ತಸ್ಮಾನ್ನಿರ್ಗತಂ ಹಿಮಸನ್ನಿಭಂ ।
ತದ್ದೃಷ್ಟ್ವಾ ವ್ರೀಳಿತೋ ವಿಪ್ರಃ ಪಾದಯೋಃ ಪತಿತೋಽಬ್ರವೀತ್ ॥ ೧೬ ॥

ನಾನ್ಯದ್ದೇವಾದಹಂ ಮನ್ಯೇ ಶೂಲಪಾಣೇರ್ಮಹಾತ್ಮನಃ ।
ಚರಾಚರಸ್ಯ ಜಗತೋ ಗುರುಸ್ತ್ವಮಸಿ ಶೂಲಧೃಕ್ ॥ ೧೭ ॥

ತ್ವದಾಶ್ರಯಾಶ್ಚ ದೃಶ್ಯಂತೆ ಸುರಾ ಬ್ರಹ್ಮಾದಯೋಽನಘ ।
ಸರ್ವಸ್ತ್ವಮಸಿ ದೇವಾನಾಂ ಕರ್ತಾ ಕಾರಯಿತಾ ಮಹಾ ॥ ೧೮ ॥

ತ್ವತ್ಪ್ರಸಾದಾತ್ಸುರಾಸ್ಸರ್ವೇ ಮೋದಂತೇಹ್ಯಕುತೋಭಯಾಃ ।
ಸುರಾಸುರಸ್ಯ ಚಾಧೀಶ ನ ತಪೋಮೇಕ್ಷರೇನ್ಮಹತ್ ॥ ೧೯ ॥

೧೪-೧೬. ಹೀಗೆ ಮೋಹಿತನಾದ ಆ ಋಷಿಯನ್ನು ನೋಡಿ ನಗುತ್ತಾ ಈಶ್ವರನು ಎಲೈ ವಿಪ್ರನೇ ಈ ವಿಷಯದಲ್ಲಿ ನನಗೆ ಆಶ್ಚರ್ಯವೇನೂ ಇಲ್ಲ, ನೋಡು ಎಂದು ಹೇಳಿ ತನ್ನ ಅಂಗುಲಿಯ ಅಗ್ರಭಾಗದಿಂದ ತನ್ನ ಅಂಗುಷ್ಠವನ್ನು ಹೊಡೆದನು. ಆಗ ಅದರಿಂದುಂಟಾದ ಗಾಯದಿಂದ ಮಂಜಿನಂತೆ ಬಿಳುಪಾಗಿರುವ ಭಸ್ಮವು ಹೊರಗೆ ಬಂದಿತು. ಅದನ್ನು ನೋಡಿ ಬ್ರಾಹ್ಮಣನು ಲಜ್ಜಿತನಾಗಿ ಶಂಕರನ ಪಾದಕ್ಕೆ ನಮಸ್ಕರಿಸಿ ಹೀಗೆ ಹೇಳುತ್ತಾನೆ.

೧೭-೧೯. ಎಲೈ ಪ್ರಭುವೇ, ಶೂಲಪಾಣಿಯಾದ ನಿನಗಿಂತಲೂ ಉತ್ಕೃಷ್ಟವಾದ ಬೇರೊಂದು ವಸ್ತುವಿಲ್ಲವೆಂದು ನನಗೆ ನಂಬಿಕೆ. ಈ ಚರಾಚರಜಗತ್ತಿಗೆ ನೀನೇ ಗುರುವಾಗಿದ್ದೀಯೆ. ಬ್ರಹ್ಮಾದಿದೇವತೆಗಳೆಲ್ಲರೂ ನಿನ್ನನ್ನೇ ಆಶ್ರಯಿಸಿರುವರು. ದೇವತೆಗಳಿಗೆ ಎಲ್ಲ ಉಪಕಾರಗಳನ್ನು ಮಾಡುವವನೂ, ಮಾಡಿಸುವವನೂ ನೀನೇ ಆಗಿದ್ದೀಯೆ. ದೇವತೆಗಳು ನಿನ್ನ ಅನುಗ್ರಹದಿಂದಲೇ ನಿರ್ಭಯರಾಗಿಯೂ, ಸಂತುಷ್ಟರಾಗಿಯೂ ಇರುತ್ತಾರೆ. ಸುರಾಸುರರಿಗೂ ನಿಯಾಮಕನಾಗಿರುವ ಎಲೈ ಪ್ರಭುವೇ, ನನಗೆ ಉಂಟಾದ ಈ ಮನೋವಿಕಾರದಿಂದ ನನ್ನ ತಪಸ್ಸು ನಾಶವಾಗದಿರುವಂತೆ ನನ್ನನ್ನು ಅನುಗ್ರಹಿಸು.

ಲೋಮಹರ್ಷಣ ಉವಾಚ

ಏವಂ ಸ್ತುತ್ವಾ ಮಹಾದೇವಮೃಷಿಃ ಸ ಪ್ರಣತೋ ಭವತ್ ।
ತತೋ ದೇವಃ ಪ್ರಸನ್ನಾತ್ಮಾ ತಮೃಷಿಂ ವಾಕ್ಯಮಬ್ರವೀತ್ ॥ ೨೦ ॥

ಈಶ್ವರ ಉವಾಚ

ತಪಸ್ತೇ ವರ್ಧತಾಂ ವಿಪ್ರ ಮತ್ಪ್ರಸಾದಾತ್ಸಹಸ್ರಧಾ ।
ಆಶ್ರಮೇ ಚೇಹವತ್ಸ್ಯಾಮಿ ತ್ವಯಾ ಸಾರ್ಧಮಹಂಸದಾ ॥ ೨೧ ॥

ಸಪ್ತಸಾರಸ್ವತೆ ಸ್ನಾತ್ವಾ ಯೋಮಾಮರ್ಚಿಷ್ಯತೆ ನರಃ ।
ನ ತಸ್ಯ ದುರ್ಲಭಂ ಕಿಂಚಿತ್ ಇಹಲೋಕೆ ಪರತ್ರ ಚ ॥ ೨೨ ॥

ಸಾರಸ್ವತಂ ಚ ತೆ ಲೋಕಂ ಗಮಿಷ್ಯಂತಿ ನ ಸಂಶಯಃ ।
ಶಿವಸ್ಯ ಚ ಪ್ರಸಾದೇನ ಪ್ರಾಪ್ನೋತಿ ಪರಮಂ ಪದಂ ॥ ೨೩ ॥

ಇತಿ ಶ್ರೀ ವಾಮನಪುರಾಣೇ ಸರೋಮಾಹಾತ್ಮ್ಯೆ
ಅಷ್ಟತ್ರಿಂಶೋಽಧ್ಯಾಯಃ

೨೦-೨೩. ಈ ಪ್ರಕಾರ ಆ ಋಷಿಯು ಈಶ್ವರನನ್ನು ಸ್ತೋತ್ರಮಾಡಿ ಅವನನ್ನು ನಮಸ್ಕರಿಸಿ ಬೇಡಿಕೊಂಡನು. ಆಗ ಪ್ರಸನ್ನನಾದ ಈಶ್ವರನು ಆ ಋಷಿಯನ್ನು ಕುರಿತು ಎಲೈ ಬ್ರಾಹ್ಮಣೋತ್ತಮನೇ, ನನ್ನ ಅನುಗ್ರಹದಿಂದ ನಿನ್ನ ತಪಸ್ಸು ಸಹಸ್ರಶಾಖೆಯಾಗಿ ಅಭಿವೃದ್ಧಿಹೊಂದಲಿ. ಭಕ್ತನಾದ ನಿನ್ನ ಈ ಆಶ್ರಮದಲ್ಲಿಯೇ ನಾನು ನಿನ್ನೊಡನೆ ಯಾವಾಗಲೂ ವಾಸಮಾಡುತ್ತೇನೆ. ಈ ಸಪ್ತಸಾರಸ್ವತಕ್ಷೇತ್ರದಲ್ಲಿ ಯಾರು ಸ್ನಾನಮಾಡಿ ನನ್ನನ್ನು ಪೂಜಿಸುವರೋ ಅವರಿಗೆ ಇಹಲೋಕದ ಸುಖ ಸಾಧನಗಳಲ್ಲಿ ಒಂದೂ ಕುಂದಿರುವುದಿಲ್ಲ. ಅವರು ಸಾರಸ್ವತಲೋಕಕ್ಕೂ ಹೋಗಿ ಶಿವನ ಅನುಗ್ರಹದಿಂದ ಪರಮಪದಕ್ಕೂ ಹೋಗುತ್ತಾರೆ ಎಂದು ಅನುಗ್ರಹಿಸಿದನು.

ಇಲ್ಲಿಗೆ ಶ್ರೀ ವಾಮನಪುರಾಣದಲ್ಲಿ ಸರೋಮಾಹಾತ್ಮ್ಯವೆಂಬ ಮೂವತ್ತೆಂಟನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯ ೩೮

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿಯೂ ಮಂಕಣಕನ ವಿಷಯವನ್ನು ಪ್ರಶ್ನೆಮಾಡಿ ಅವನಿಗೆ ಉಂಟಾದ ಈಶ್ವರನ ಅನುಗ್ರಹದಿಂದ ಸಪ್ತಸಾರಸ್ವತದ ಮಹಿಮೆಯನ್ನು ನಿರೂಪಿಸಲಾಯಿತು.

॥ ಶ್ರೀ ॥

ಶ್ರೀವಾಮನಪುರಾಣಂ

ಏಕೋನಚತ್ವಾರಿಂಶೋಽಧ್ಯಾಯಃ

ಲೋಮಹರ್ಷಣ ಉವಾಚ

ತತಶ್ಚೌಶನಸಂ ತೀರ್ಥಂ ಗಚ್ಛೇತ್ತು ಶ್ರದ್ಧಯಾನ್ವಿತಃ ।
ಉಶನಾ ಯತ್ರ ಸಂಸಿದ್ಧೋ ಗ್ರಹತ್ವಂ ಸಮವಾಪ್ತವಾನ್ ॥ ೧ ॥

ತಸ್ಮಿನ್ ಪುಣ್ಯೇ ಕುರುಕ್ಷೇತ್ರೇ ಪಾತಕೈರ್ಜನ್ಮಸಂಭವೈಃ ।
ಮುಕ್ತೋ ಯಾತಿ ಪರಂ ಬ್ರಹ್ಮ ಯತೋ ನಾವರ್ತತೇ ಪುನಃ ॥ ೨ ॥

ರಹೋದರೋ ನಾಮ ಮುನಿ ರ್ಯತ್ರ ಮುಕ್ತೋ ಬಭೂವ ಹ ।
ಮಹತಾ ಶಿರಸಾ ಗ್ರಸ್ತಸ್ತೀರ್ಥಮಾಹಾತ್ಮ್ಯದರ್ಶನಾತ್ ॥ ೩ ॥

ಮೂವತ್ತೊಂಭತ್ತನೆಯ ಅಧ್ಯಾಯವು

೧-೩. ಲೋಮಹರ್ಷಣರು ಪುನಃ ಮುಂದುವರಿಯುತ್ತಾರೆ:—ಅನಂತರ ಶ್ರದ್ಧೆಯಿಂದ ಕೂಡಿದವನಾಗಿ ಔಶನಸವೆಂಬ ತೀರ್ಥಕ್ಕೆ ಹೋಗಬೇಕು. ಆ ತೀರ್ಥದಲ್ಲಿ ಶುಕ್ರನು ಸಿದ್ಧನಾಗಿ ಗ್ರಹವಾಗಿ ನಿಲ್ಲುವ ಯೋಗವನ್ನು ಪಡೆದನು. ರಹೋದರನೆಂಬ ಮುನಿಯು ದೊಡ್ಡದೊಂದು ತಲೆಯಿಂದ ಆಕ್ರಮಿಸಲ್ಪಟ್ಟು ಈ ತೀರ್ಥಮಾಹಾತ್ಮ್ಯದರ್ಶನದಿಂದಲೇ ಮುಕ್ತನಾದನು. ಅಂತಹ ಈ ಪುಣ್ಯಕ್ಷೇತ್ರವು ಯಾರಿಗಾದರೂ ಸರ್ವಪಾಪನಿವೃತ್ತಿಯನ್ನುಂಟುಮಾಡಿ ಕೊನೆಗೆ ಪುನರಾವೃತ್ತಿರಹಿತವಾದ ಮೋಕ್ಷಕ್ಕೆ ಕಾರಣವಾಗುತ್ತದೆ.

ಋಷಯ ಊಚುಃ

ಕಥಂ ರಹೋದರೋ ಗ್ರಸ್ತಃ ಕಥಂ ಮೋಕ್ಷಮವಾಪ್ತವಾನ್ ।
ತೀರ್ಥಸ್ಯ ತಸ್ಯ ಮಾಹಾತ್ಮ್ಯಂ ಶ್ರೋತುಮಿಚ್ಛಾಮಹೆ ವಯಂ ॥ ೪ ॥

ಲೋಮಹರ್ಷಣ ಉವಾಚ

ಪುರಾ ವೈ ದಂಡಕಾರಣ್ಯೆ ರಾಘವೇಣ ಮಹಾತ್ಮನಾ ।
ವಸತಾ ದ್ವಿಜಶಾರ್ದೂಲಾ ರಾಕ್ಷಸಾಸ್ತತ್ರಹಿಂಸಿತಾಃ ॥ ೫ ॥

ತತ್ರೈಕಸ್ಯ ಶಿರಶ್ಛಿನ್ನಂ ರಾಕ್ಷಸಸ್ಯ ದುರಾತ್ಮನಃ ।
ಕ್ಷುರೇಣ ಶಿತಧಾರೇಣ ತತ್ಪಪಾತ ಮಹಾವನೆ ॥ ೬ ॥

ರಹೋದರಸ್ಯ ತಲ್ಲಗ್ನಂ ಗ್ರೀವಾಯಾಂ ಚ ಯದೃಚ್ಛಯಾ ।
ವನೇವಿಚರತಸ್ತಸ್ಯಹ್ಯಸ್ಥಿ ಭಿತ್ವಾ ವಿವೇಶ ಹ ॥ ೭ ॥

ಸ ತೇನ ಲಗ್ನೇನ ತದಾ ವಿಹರ್ತುಂ ನ ಶಶಾಕ ಹ ।
ಅಭಿಗಮ್ಯ ಮಹಾಪ್ರಾಜ್ಞಸ್ತೀರ್ಥಾನ್ಯಾಯತನಾನಿ ಚ ॥ ೮ ॥

೪-೭. ಪುನಃ ಋಷಿಗಳು ರಹೋದರನು ಆ ಶಿರಸ್ಸಿನಿಂದ ಹೇಗೆ ಆಕ್ರಾಂತನಾದನು. ಅದರ ನಿವೃತ್ತಿಯೂ ಅವನಿಗೆ ಹೇಗೆ ಉಂಟಾಯಿತು. ಆ ತೀರ್ಥದ ಮಾಹಾತ್ಮ್ಯವಾದರೂ ಎಂತಹುದು ಇದನ್ನೆಲ್ಲಾ ಕೇಳಲು ನಮಗೆ ಇಚ್ಛೆಯಾಗುತ್ತಿದೆ ಎಂದು ಪ್ರಶ್ನೆಮಾಡಲಾಗಿ ಲೋಮಹರ್ಷಣರು ಹೇಳುತ್ತಾರೆ:—ಪೂರ್ವದಲ್ಲಿ ದಂಡಕಾರಣ್ಯದಲ್ಲಿ ವಾಸಿಸುತ್ತಿರುವಾಗ ಮಹಾವೀರನಾದ ರಾಮನಿಂದ ಅನೇಕ ರಾಕ್ಷಸರ ಹಿಂಸೆಯು ಜರುಗಿತು. ಆಗ ದುರಾತ್ಮನಾದ ಒಬ್ಬ ರಾಕ್ಷಸನ ತಲೆಯೂ ಹರಿತವಾದ ರಾಮನ ಬಾಣದಿಂದ ಕತ್ತರಿಸಲ್ಪಟ್ಟು ವೇಗದಿಂದ ಆ ಮಹಾವನದಲ್ಲಿ ಬಿದ್ದಿತು. ಆಗ ಅಲ್ಲಿದ್ದ ರಹೋದರನೆಂಬ ಮುನಿಯ ಕತ್ತಿನಲ್ಲಿ ಅದು ಹಠಾತ್ತಾಗಿ ಅಂಟಿಕೊಂಡಿತು.

೮-೧೦. ಅದು ಅರಣ್ಯದಲ್ಲಿ ಸಂಚರಿಸುತ್ತಿದ್ದ ಆ ಋಷಿಯ ಮೂಳೆಯನ್ನು ಕೊರೆದುಕೊಂಡು ದೃಢವಾಗಿ ಅಂಟಿದ್ದರಿಂದ ಅದು ಆ ಋಷಿಯ ಸಂಚಾರವನ್ನೂ ತಡೆಯಿತು. ರಕ್ತವನ್ನು ಸುರಿಸುತ್ತಿರುವ ಆ ತಲೆಯ ಹಿಂಸೆಯಿಂದ ಬಹಳ ವೇದನೆಯನ್ನು ಹೊಂದಿದ ಆ ಮುನಿಯು ಪ್ರಾಜ್ಞನಾದುದರಿಂದ ಭೂಮಿಯಲ್ಲಿರುವ ಅನೇಕ

ಸ ತು ತೇನಾಪಿ ಶ್ರವತಾ ವೇದನಾರ್ತೋ ಮಹಾಮುನಿಃ ।
ಜಗಾಮ ಸರ್ವತೀರ್ಥಾನಿ ಪೃಥಿವ್ಯಾಂ ಯಾನಿ ಕಾನಿಚಿತ್ ॥ ೯ ॥

ತತಃ ಸ ಕಥಯಾಮಾಸ ಋಷೀಣಾಂ ಭಾವಿತಾತ್ಮನಾಂ ।
ತೈರುಕ್ತಶ್ಚ ಋಷಯೋ ವಿಪ್ರ ಪ್ರಯಾಹ್ಯೌಶನಸಂ ಪ್ರತಿ ॥ ೧೦ ॥

ತೇಷಾಂ ತದ್ವಚನಂ ಶ್ರುತ್ವಾ ಜಗಾಮ ಸ ರಹೋದರಃ ।
ತತ ಔಶನಸಂ ತೀರ್ಥಂ ತಸ್ಯಾಪಃ ಸ್ಪೃಶತಃ ತದಾ ॥ ೧೧ ॥

ತಚ್ಛಿರಃ ಶರಣಂ ಮುಕ್ತ್ವಾ ಪಪಾತಾಂತರ್ಜಲೇ ದ್ವಿಜಾಃ ।
ತತಃ ಸ ವಿರಜಾ ಭೂತ್ವಾ ಪೂತಾತ್ಮಾ ವೀತಕಲ್ಮಷಃ ॥ ೧೨ ॥

ಆಜಗಾಮಾಶ್ರಮಂ ಪ್ರೀತಃ ಕಥಯಾಮಾಸ ಚಾಖಿಲಂ ।
ತೇ ಶ್ರುತ್ವಾ ಋಷಯಸ್ಸರ್ವೇ ತೀರ್ಥಮಾಹಾತ್ಮ್ಯಮುತ್ತಮಂ । ॥ ೧೩ ॥

ಕಪಾಲಮೋಚನಮಿತಿ ನಾಮಚಕ್ರುಃ ಸಮಾಗತಾಃ
ತತ್ರಾಪಿ ಸುಮಹತ್ತೀರ್ಥಂ ವಿಶ್ವಾಮಿತ್ರಸ್ಯ ವಿಶ್ರುತಂ ॥ ೧೪ ॥

ತೀರ್ಥಗಳನ್ನೂ, ದೇವಾಲಯಗಳನ್ನೂ ಸುತ್ತಿಸುತ್ತಿ ಈ ವೇದನೆಯ ನಿವೃತ್ತಿಗಾಗಿ ಅಲ್ಲಿರುವ ಋಷಿಗಳನ್ನು ಕುರಿತು ಪ್ರಶ್ನೆಮಾಡಿದನು. ಆ ಋಷಿಗಳು ಔಶನಸಕ್ಷೇತ್ರಕ್ಕೆ ಹೋದರೆ ಈ ದುಃಖವು ನಿವೃತ್ತವಾಗುತ್ತದೆ ಎಂದು ಹೇಳಿದರು.

೧೧-೧೩. ಋಷಿಗಳು ಹೇಳಿದ ಆ ಮಾತನ್ನು ಕೇಳಿದೊಡನೆಯೇ ರಹೋದರನು ಔಶನಸತೀರ್ಥಕ್ಕೆ ಬಂದು ಅಲ್ಲಿ ಸ್ನಾನಮಾಡುವಾಗಲೇ ಅವನ ಕತ್ತಿನಲ್ಲಿ ಅಂಟಿಕೊಂಡಿದ್ದ ಆ ತಲೆಯು ಸ್ವಸ್ಥಾನದಿಂದ ಜಗುಳಿ ನೀರಿನ ಮಧ್ಯದಲ್ಲಿ ಬಿದ್ದಿತು. ಅನಂತರ ನಿಷ್ಪಾಪನಾಗಿಯೂ, ಪರಿಶುದ್ಧನಾಗಿಯೂ ಆದ ಆ ರಹೋದರನು ಸಂತೋಷದಿಂದ ತನ್ನ ಆಶ್ರಮಕ್ಕೆ ಮರಳಿಬಂದನು. ಅಲ್ಲಿದ್ದ ಋಷಿಗಳಿಗೆ ಈ ತೀರ್ಥದ ಮಾಹಾತ್ಮ್ಯವನ್ನೆಲ್ಲಾ ಅವನು ವಿವರಿಸಿದುದರ ಫಲವಾಗಿ ಆ ಋಷಿಗಳೆಲ್ಲರೂ ಅಲ್ಲಿ ಬಂದು ಆ ತೀರ್ಥಕ್ಕೆ ಕಪಾಲಮೋಚನವೆಂದು ಹೆಸರಿಟ್ಟರು.

೧೪-೧೬. ಅಲ್ಲಿಯೂ ಕೂಡ ವಿಶ್ವಾಮಿತ್ರತೀರ್ಥವೆಂದು ಪ್ರಸಿದ್ಧಿಹೊಂದಿದ ಮಹಾತೀರ್ಥವೊಂದಿದೆ. ಅಲ್ಲಿಯೇ ವಿಶ್ವಾಮಿತ್ರನು ಬ್ರಾಹ್ಮಣ್ಯವನ್ನು ಹೊಂದಿದುದು.

ಬ್ರಾಹ್ಮಣ್ಯಂ ಲಬ್ಧವಾನ್ಯತ್ರ ವಿಶ್ವಾಮಿತ್ರೋ ಮಹಾಮುನಿಃ ।
ತಸ್ಮಿಂಸ್ತೀರ್ಥವರೇ ಸ್ನಾತ್ವಾ ಬ್ರಾಹ್ಮಣ್ಯಂ ಲಭತೇ ಧ್ರುವಂ ॥ ೧೫ ॥

ಬ್ರಾಹ್ಮಣಸ್ತು ವಿಶುದ್ಧಾತ್ಮಾ ಪರಂ ಪದಮವಾಪ್ನುಯಾತ್ ।
ತತಃ ಪೃಥೂದಕಂ ಗಚ್ಛೇನ್ನಿಯತೋ ನಿಯತಾಶನಃ ॥ ೧೬ ॥

ತತ್ರ ಸಿದ್ಧಸ್ತು ಬ್ರಹ್ಮರ್ಷಿರ್ಋಷಂಗುರಿತಿ ನಾಮತಃ ।
ಜಾತಿಸ್ಮರಋಷಂಗುಸ್ತು ಗಂಗಾದ್ವಾರೇ ಸದಾಸ್ಥಿತಃ ॥ ೧೭ ॥

ಅಂತಕಾಲಂ ತತೋ ದೃಷ್ಟ್ವಾ ಪುತ್ರಾನ್ವಚನಮಬ್ರವೀತ್ ।
ಸ್ಮೃತ್ವಾ ತೀರ್ಥಗುಣಾನ್ಸರ್ವಾನ್ ಪ್ರಾಹೇದಮೃಷಿಸತ್ತಮಃ ॥ ೧೮ ॥

ಸರಸ್ವತ್ಯುತ್ತರೇ ತೀರ್ಥೇ ಯಸ್ತ್ಯಜೇದಾತ್ಮನಸ್ತನುಂ ।
ಪೃಥೂದಕೇ ಜಪ್ಯಪರೋ ನೈತಸ್ಯಮರಣಂ ಭವೇತ್ ॥ ೧೯ ॥

ಆ ತೀರ್ಥದಲ್ಲಿ ಸ್ನಾನಮಾಡಿದವನು ಅಬ್ರಾಹ್ಮಣನಾಗಿದ್ದಲ್ಲಿ ಅವನು ಬ್ರಾಹ್ಮಣನಾಗುತ್ತಾನೆ. ಶುದ್ಧನಾದ ಬ್ರಾಹ್ಮಣನೇ ಆಗಿದ್ದಲ್ಲಿ ಅವನು ಪರಮಪದವನ್ನೇ ಹೊಂದುವನು. ಅನಂತರ ಅಲ್ಲಿಂದ ಪೃಥೂದಕವೆಂಬ ತೀರ್ಥಕ್ಕೆ ವ್ರತನಿಯಮಶಾಲಿಯಾಗಿ ಹೋಗಬೇಕು.

೧೭-೧೯. ಆ ಪೃಥೂದಕತೀರ್ಥದಲ್ಲಿ ಋಷಂಗುವೆಂಬ ಬ್ರಹ್ಮರ್ಷಿಯು ಸಿದ್ಧನಾದನು. ಪೂರ್ವಜನ್ಮದ ಸ್ಮೃತಿಯುಳ್ಳ ಆ ಋಷಂಗುವು ಗಂಗಾದ್ವಾರದಲ್ಲಿ ಬಹುಕಾಲ ಇದ್ದು ತನಗೆ ಅಂತ್ಯಕಾಲವು ಸನ್ನಿಹಿತವಾದುದನ್ನು ತಿಳಿದು ತನ್ನ ಮಕ್ಕಳಿಗೆ ಹೀಗೆ ಹೇಳಿದನು. ಎಲ್ಲಾ ತೀರ್ಥಗಳ ಗುಣಗಳನ್ನೂ ಅವನು ತಿಳಿದವನು. ಸರಸ್ವತಿಯ ಉತ್ತರತೀರದಲ್ಲಿರುವ ಪೃಥೂದಕವೆಂಬ ತೀರ್ಥದಲ್ಲಿ ಯಾರು ದೇಹವನ್ನು ಬಿಡುತ್ತಾರೆಯೋ ಅವರು ಜಪಾದಿಗಳಲ್ಲಿ ನಿರತರಾಗಿ ಸಿದ್ಧರಾಗುವರು. ಅವರಿಗೆ ಮರಣವೆಂಬುದೇ ಅನಂತರ ಇರುವುದಿಲ್ಲ. (ಪಂಚಭೂತಮಯವಾದ ಈ ದೇಹವನ್ನು ಬಿಟ್ಟು ಸಿದ್ಧಿಯಿಂದುಂಟಾದ ತೇಜೋಮಯವಾದ ದೇಹದಿಂದ ಪ್ರಕಾಶಿಸುತ್ತಾರೆ ಎಂದು ತಾತ್ಪರ್ಯ)

ತತ್ರೈವ ಬ್ರಹ್ಮಯೋನ್ಯಸ್ತಿ ಬ್ರಹ್ಮಣಾ ಯತ್ರ ವೈ ಪುರಾ ।
ಪೃಥೂದಕಂ ಸಮಾಶ್ರಿತ್ಯ ಸರಸ್ವತ್ಯಾಸ್ತಟೆ ಸ್ಥಿತಂ ॥ ೨೦ ॥

ಚಾತುರ್ವರ್ಣ್ಯಸ್ಯ ಸೃಷ್ಟ್ಯರ್ಥಮಾತ್ಮಜ್ಞಾನಪರೋಽಭವತ್ ।
ತಸ್ಯಾಭಿಧ್ಯಾಯತಃ ಸೃಷ್ಟಿಂ ಬ್ರಹ್ಮಣೋಽವ್ಯಕ್ತಜನ್ಮನಃ ॥ ೨೧ ॥

ಮುಖತೋ ಬ್ರಾಹ್ಮಣಾ ಜಾತಾ ಬಾಹುಭ್ಯಾಂ ಕ್ಷತ್ರಿಯಾ ಸ್ತಥಾ ।
ಊರುಭ್ಯಾಂ ವೈಶ್ಯಜಾತೀಯಾಃ ಪದ್ಭ್ಯಾಂ ಶೂದ್ರಾಸ್ತತೋ ಭವನ್ ॥ ೨೨ ॥

ಚಾತುರ್ವರ್ಣ್ಯಂ ತತೋದೃಷ್ಟ್ವಾ ಆಶ್ರಮಾಃ ಸ್ಥಾಪಿತಾಃ ತತಃ ।
ಏವಂ ಪ್ರತಿಷ್ಠಿತಂ ತೀರ್ಥಂ ಬ್ರಹ್ಮಯೋನೀತಿ ಸಂಜ್ಞಿತಂ ॥ ೨೩ ॥

ತತ್ರ ಸ್ನಾತ್ವಾ ಮುಕ್ತಿಕಾಮಃ ಪುನರ್ಯೋನಿಂ ನ ಪಶ್ಯತಿ ।
ತತ್ರೈವ ತೀರ್ಥಂ ವಿಖ್ಯಾತಂ ಅವಕೀರ್ಣೇತಿ ನಾಮತಃ ॥ ೨೪ ॥

ಯಸ್ಮಿಂಸ್ತೀರ್ಥೆ ಬಕೋದಾಲ್ಭ್ಯೋರಾಷ್ಟ್ರಂ ವೈಚಿತ್ಯಧರ್ಷಣಾತ್ ।
ಜುಹಾವ ಬ್ರಾಹ್ಮಣೈಸ್ಸಾರ್ಧಂ ತತ್ರಾಬುದ್ಧ್ಯತ್ತತೋ ನೃಪಃ ॥ ೨೫ ॥

೨೦-೨೨. ಅಲ್ಲಿಯೇ ಬ್ರಹ್ಮಯೋನಿ ಎಂಬ ತೀರ್ಥವಿದೆ. ಆ ಸರಸ್ವತೀ ದಡದಲ್ಲಿರುವ ಪೃಥೂದಕಕ್ಷೇತ್ರವನ್ನು ಆಶ್ರಯಿಸಿಕೊಂಡಿದ್ದ ಬ್ರಹ್ಮನಿಗೆ ಚಾತುರ್ವರ್ಣ್ಯ ಸೃಷ್ಟಿಗಾಗಿ ಬೇಕಾಗಿದ್ದ ಆತ್ಮಜ್ಞಾನವು ಅಲ್ಲಿಯೇ ಉಂಟಾದುದು. ಅವ್ಯಕ್ತಸ್ವರೂಪದಲ್ಲಿದ್ದು ಅಲ್ಲಿ ಸೃಷ್ಟಿಯನ್ನು ಧ್ಯಾನಮಾಡುತ್ತ ಕುಳಿತ ಆ ಬ್ರಹ್ಮನ ಮುಖದಿಂದ ಬ್ರಾಹ್ಮಣರೂ, ತೋಳುಗಳಿಂದ ಕ್ಷತ್ರಿಯರೂ, ತೊಡೆಗಳಿಂದ ವೈಶ್ಯರೂ, ಕಾಲುಗಳಿಂದ ಶೂದ್ರರೂ ಉಂಟಾದರು.

೨೩-೨೫. ಈರೀತಿ ಸೃಷ್ಟಿಮಾಡಿದ ಚಾತುರ್ವರ್ಣ್ಯವನ್ನು ನೋಡಿ ಆ ಬ್ರಹ್ಮನು ಅವರವರಿಗೆ ತಕ್ಕ ಆಶ್ರಮಗಳನ್ನೂ ಏರ್ಪಡಿಸಿದನು. ಹೀಗೆ ಸ್ಥಾಪಿತವಾದ ಆ ತೀರ್ಥಕ್ಕೆ ಬ್ರಹ್ಮಯೋನಿಯೆಂದು ಹೆಸರು ಬಂದಿತು. ಅಲ್ಲಿ ಮೋಕ್ಷವನ್ನುದ್ದೇಶಿಸಿ ಸ್ನಾನಮಾಡಿದವನಿಗೆ ಪುನಃ ಜನ್ಮಬರುವುದಿಲ್ಲ. ಅಲ್ಲಿಯೇ ಅವಕೀರ್ಣವೆಂಬ ಪ್ರಸಿದ್ಧ ತೀರ್ಥವಿದೆ. ಆ ತೀರ್ಥದಲ್ಲಿಯೇ ಬಕದಾಲ್ಭ್ಯನೆಂಬ ಬ್ರಾಹ್ಮಣನು ಧೃತರಾಷ್ಟ್ರನೆಂಬ ಧೊರೆಯ ಬುದ್ಧಿದೋಷದಿಂದ ಆಕ್ಷೇಪಿಸಲ್ಪಟ್ಟು ಬ್ರಾಹ್ಮಣರೊಡಗೂಡಿ ರಾಷ್ಟ್ರವನ್ನೇ ಹೋಮಮಾಡಿದನು. ಅನಂತರ ಆ ಧೊರೆಗೆ ಜ್ಞಾನೋದಯವಾಯಿತು.

ಋಷಯ ಊಚುಃ

ಕಥಂ ಪ್ರತಿಷ್ಠಿತಂ ತೀರ್ಥಮವಕೀರ್ಣೇತಿ ನಾಮತಃ ।
ಧೃತರಾಷ್ಟ್ರೇಣ ರಾಜ್ಞಾ ಸ ಕಿಮರ್ಥಂ ನ ಪ್ರಸಾದಿತಃ ॥ ೨೬ ॥

ಲೋಮಹರ್ಷಣ ಉವಾಚ

ನೈಮಿಷೇಯಾಶ್ಚ ಋಷಯೋ ದಕ್ಷಿಣಾರ್ಥಂ ಯಯುಃ ಪುರಾ ।
ತತ್ರೈವ ಚ ಬಕೋದಾಲ್ಭ್ಯಃ ಧೃತರಾಷ್ಟ್ರಮಯಾಚತ ॥ ೨೭ ॥

ತೇನಾಪಿ ತತ್ರ ನಿಂದಾರ್ಥಮುಕ್ತಂ ಯಚ್ಚಾಧೃತಂ ತು ತತ್ ।
ತತಃ ಕ್ರೋಧೇನ ಮಹತಾ ಮಾಂಸಾನ್ಯುತ್ಕೃತ್ಯ ತತ್ರ ಹ ॥ ೨೮ ॥

ಪೃಥೂದಕೇ ಮಹಾತೀರ್ಥೆ ಅವಕೀರ್ಣೇತಿ ನಾಮತಃ ।
ಜುಹಾವ ಧೃತರಾಷ್ಟ್ರಸ್ಯ ರಾಷ್ಟ್ರಂ ನರಪತೇಸ್ತುತಃ ॥ ೨೯ ॥

ಹೂಯಮಾನೆ ತದಾ ರಾಷ್ಟ್ರೆ ಪ್ರವೃತ್ತೆ ಯಜ್ಞಕರ್ಮಣಿ ।
ಅಕ್ಷೀಯತ ತತೋ ರಾಷ್ಟ್ರಂ ನೃಪತೇರ್ದುಷ್ಕೃತೇನ ವೈ ॥ ೩೦ ॥

೨೬-೩೦. ಪುನಃ ಋಷಿಗಳು ಅವಕೀರ್ಣಕ್ಷೇತ್ರವು ಹೇಗೆ ಸ್ಥಾಪಿತವಾಯಿತು. ರಾಜನಾದ ಆ ಧೃತರಾಷ್ಟ್ರನು ಬಕದಾಲ್ಭ್ಯನನ್ನು ಏಕೆ ಸಮಾಧಾನಪಡಿಸಲಿಲ್ಲ ಎಂದು ಪ್ರಶ್ನೆಮಾಡಲಾಗಿ ಲೋಮಹರ್ಷಣರು ಹೇಳುತ್ತಾರೆ:–ಪೂರ್ವದಲ್ಲಿ ನೈಮಿಷಕ್ಷೇತ್ರದ ಕೆಲವು ಋಷಿಗಳು ದಕ್ಷಿಣೆಗಾಗಿ ಹೊರಟರು. ಅವರಲ್ಲೊಬ್ಬನಾದ ಬಕದಾಲ್ಭ್ಯನು ಧೃತರಾಷ್ಟ್ರನನ್ನು ಯಾಚಿಸಿದನು. ಆ ಧೊರೆಯು ದಕ್ಷಿಣೆಯನ್ನು ಕೊಡುವುದರ ಬದಲು ಆ ಬಕದಾಲ್ಭ್ಯನನ್ನು ನಿಂದಿಸಿ ಮಾತನಾಡಿದನು. ಆ ಬ್ರಾಹ್ಮಣನು ಆ ಮಾತಿನಿಂದ ಕೋಪಗೊಂಡು ಪೃಥೂದಕಕ್ಷೇತ್ರದಲ್ಲಿರುವ ಅವಕೀರ್ಣಕ್ಷೇತ್ರದಲ್ಲಿ ತನ್ನ ಮಾಂಸವನ್ನೂ ಕಿತ್ತು ಅವನ ರಾಷ್ಟ್ರದೊಡನೆ ಹೋಮಮಾಡತೊಡಗಿದನು. ಹೀಗೆ ರಾಷ್ಟ್ರವನ್ನೇ ಹೋಮವಾಗಿ ಉಳ್ಳ ಆ ಯಜ್ಞವು ನಡೆಯುತ್ತಿರುವಾಗ ಧೊರೆಯ ಅಪರಾಧದಿಂದ ರಾಷ್ಟ್ರವೇ ಕ್ಷಯಿಸುತ್ತ ಬಂದಿತು.

ತತಃ ಸಚಿಂತಯಾಮಾಸ ಬ್ರಾಹ್ಮಣಸ್ಯ ವಿಚೇಷ್ಟಿತಂ ।
ಪುರೋಹಿತೇನ ಸಹಿತೋ ರತ್ನಾನ್ಯಾದಾಯ ಸರ್ವಶಃ ॥ ೩೧ ॥

ಪ್ರಸಾದನಾರ್ಥಂ ವಿಪ್ರಸ್ಯ ಹ್ಯವಕೀರ್ಣಯಯೌ ತದಾ ।
ಪ್ರಸಾದಿತಃ ಸ ರಾಜ್ಞಾ ಚ ತುಷ್ಟಃ ಪ್ರೋವಾಚ ತಂ ನೃಪಂ ॥ ೩೨ ॥

ಬ್ರಾಹ್ಮಣಾ ನಾವಮಂತವ್ಯಾಃ ಪುರುಷೇಣ ವಿಜಾನತಾ ।
ಬ್ರಾಹ್ಮಣಶ್ಚೇದವಜ್ಞಾತೋ ಹನ್ಯಾತ್ರಿಪುರುಷಂ ಕುಲಂ ॥ ೩೩ ॥

ಏವಮುಕ್ತ್ವಾ ಸ ನೃಪತಿಂ ಆಜ್ಯೇನ ಪಯಸಾ ಪುನಃ ।
ಉತ್ಥಾಪಯಾಮಾಸ ಮೃತಾಂಸ್ತಸ್ಯ ರಾಜ್ಞೋಹಿತೆ ಸ್ಥಿತಃ ॥ ೩೪ ॥

ತಸ್ಮಿಂಸ್ತೀರ್ಥೇ ತು ಯಃ ಸ್ನಾತಿ ಶ್ರದ್ಧಧಾನೋ ಜಿತೇಂದ್ರಿಯಃ ।
ಸ ಪ್ರಾಪ್ನೋತಿ ನರೋ ದಿವ್ಯಂ ಮನಸಾ ಚಿಂತಿತಂ ಫಲಂ ॥ ೩೫ ॥

ತತ್ರ ತೀರ್ಥಂ ಸುವಿಖ್ಯಾತಂ ಯಾಯಾತಂ ನಾಮ ನಾಮತಃ ।
ಯಸ್ಯೇಹ ಯಜಮಾನಸ್ಯ ಮಧು ಸುಸ್ರಾವ ವೈ ನದೀ ॥ ೩೬ ॥

೩೧-೩೩. ಆಗ ಆ ದೊರೆಯು ಈ ಬ್ರಾಹ್ಮಣನ ವ್ಯಾಪಾರವನ್ನು ನೋಡಿ ರತ್ನಗಳೇ ಮೊದಲಾದ ಉತ್ತಮ ದಕ್ಷಿಣೆಯನ್ನು ತೆಗೆದುಕೊಂಡು ತನ್ನ ಪುರೋಹಿತ ನೊಡನೆ ಆ ಋಷಿಯನ್ನು ಸಮಾಧಾನಪಡಿಸಲು ಅವಕೀರ್ಣಕ್ಷೇತ್ರಕ್ಕೆ ಬಂದನು. ಅಲ್ಲಿ ಅವನಿಂದ ಸಮಾಧಾನಪಡಿಸಲ್ಪಟ್ಟ ಶಾಂತನಾದ ಆ ದಾಲ್ಭ್ಯಋಷಿಯು ದೊರೆ ಯನ್ನು ಕುರಿತು ವಿವೇಕಿಯಾದ ಮನುಷ್ಯನು ಬ್ರಾಹ್ಮಣರನ್ನು ಅವಮಾನಪಡಿಸ ಬಾರದು. ಬ್ರಾಹ್ಮಣನಿಗೆ ಅವಮಾನ ಮಾಡಿದ್ದೇ ಆದರೆ ಅದು ತ್ರಿಪೂರುಷವಾದ ಕುಲವನ್ನೇ ನಾಶಮಾಡೀತು.

೩೪-೩೬. ಹೀಗೆಂದು ಬುದ್ಧಿವಾದವನ್ನು ಹೇಳಿ ಆಜ್ಯದಿಂದಲೂ, ಹಾಲಿ ನಿಂದಲೂ ಪುನಃ ಹೋಮಮಾಡಿ ಆ ರಾಜನ ಹಿತಕ್ಕಾಗಿ ಸತ್ತವರೆಲ್ಲರನ್ನೂ ಬದುಕಿಸಿ ದನು. ಆ ಮಹಾತೀರ್ಥದಲ್ಲಿ ಯಾವನು ಜಿತೇಂದ್ರಿಯನಾಗಿ ಶ್ರದ್ಧೆಯಿಂದ ಸ್ನಾನ ಮಾಡುತ್ತಾನೆಯೋ ಅವನು ತನ್ನ ಮನಸ್ಸಿನಿಂದ ಕೋರಿಕೊಂಡ ಎಲ್ಲಾ ಫಲಗಳನ್ನೂ ಹೊಂದುತ್ತಾನೆ. ಅಲ್ಲಿಯೇ ಯಾಯಾತವೆಂಬ ಹೆಸರಿನ ಮತ್ತೊಂದು ಪ್ರಸಿದ್ಧ ತೀರ್ಥವುಂಟು. ಅಲ್ಲಿ ಯಜ್ಞಮಾಡಿದ ಯಜಮಾನನಿಗೆ ನದಿಯೇ ಮಧುವನ್ನು ಸ್ರವಿಸಿತು.

ತಸ್ಮಿನ್ ಸ್ನಾತೋಽಥ ಭಕ್ತ್ಯಾ ತು ಮುಚ್ಯತೆ ಸರ್ವಕಿಲ್ಬಿಷೈಃ ।
ಫಲಂ ಪ್ರಾಪ್ನೋತಿ ಯಜ್ಞಸ್ಯ ಹ್ಯಶ್ವಮೇಧಸ್ಯ ಮಾನವಃ ॥ ೩೭ ॥

ಮಧುಸ್ರವಂ ಚ ತತ್ರೈವ ತೀರ್ಥಂ ಪುಣ್ಯತಮಂ ದ್ವಿಜಾಃ ।
ತಸ್ಮಿನ್ ಸ್ನಾತ್ವಾ ನರೋಭಕ್ತ್ಯಾ ಮಧುನಾ ತರ್ಪಯೇತ್ಪಿತೄನ್ ॥ ೩೮ ॥

ತತ್ರಾಪಿ ಸುಮಹತ್ತೀರ್ಥಂ ವಸಿಷ್ಠೋದ್ವಾಹಸಂಜ್ಞಿತಂ ।
ತತ್ರಸ್ನಾತೋ ಭಕ್ತಿಯುತೋ ವಾಸಿಷ್ಠಂ ಲೋಕಮಾಪ್ನುಯಾತ್ ॥ ೩೯ ॥

ಇತಿ ಶ್ರೀ ವಾಮನಪುರಾಣೇ ಸರೋಮಾಹಾತ್ಮ್ಯೇ
ಏಕೋನಚತ್ವಾರಿಂಶೋಽಧ್ಯಾಯಃ

೩೭-೩೯. ಅಲ್ಲಿ ಭಕ್ತಿಯಿಂದ ಸ್ನಾನಮಾಡಿದವನಿಗೆ ಸರ್ವಪಾಪಗಳೂ ನಾಶ ಹೊಂದುತ್ತವೆ. ಅವನು ಅಶ್ವಮೇಧಯಾಗದ ಫಲವನ್ನೂ ಹೊಂದುತ್ತಾನೆ. ಅಲ್ಲಿಯೇ ಮಧುಸ್ರವವೆಂಬ ಪುಣ್ಯಕರವಾದ ಮತ್ತೊಂದು ತೀರ್ಥವಿದೆ. ಅಲ್ಲಿ ಸ್ನಾನಮಾಡಿ ಜೇನುತುಪ್ಪದಿಂದ ಪಿತೃತರ್ಪಣವನ್ನು ಮಾಡಬೇಕು. ಅಲ್ಲಿಯೇ ವಸಿಷ್ಠೋದ್ವಾಹ ವೆಂಬ ಮತ್ತೊಂದು ಮಹಾತೀರ್ಥವಿದೆ. ಅಲ್ಲಿ ಭಕ್ತಿಯಿಂದ ಸ್ನಾನಾದಿಗಳನ್ನು ಮಾಡಿದವನು ವಾಸಿಷ್ಠಲೋಕಕ್ಕೆ ಹೋಗುತ್ತಾನೆ.

ಇಲ್ಲಿಗೆ ಶ್ರೀ ವಾಮನಪುರಾಣದಲ್ಲಿ ಸರೋಮಾತ್ಮ್ಯವೆಂಬ ಮೂವತ್ತೊಂಭತ್ತನೆಯ
ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿಯೂ ಕುರುಕ್ಷೇತ್ರದ ತೀರ್ಥಮಾಹಾತ್ಮ್ಯವನ್ನೇ ಮುಂದುವರಿಸಿರುತ್ತಾರೆ.

॥ ಶ್ರೀಃ ॥

ಶ್ರೀವಾಮನಪುರಾಣಂ

ಚತ್ವಾರಿಂಶೋಽಧ್ಯಾಯಃ

ಋಷಯ ಊಚುಃ

ವಸಿಷ್ಠಸ್ಯಾಪವಾಹೋಽಸೌ ಮಹಾವೇಗೋ ಬಭೂವ ಹ ।
ಕಿಮರ್ಥಂ ಸಾಸರಿಚ್ಛ್ರೇಷ್ಠಾ ತಮೃಷಿಂ ಪ್ರತ್ಯವಾಹಯತ್ ॥ ೧ ॥

ಲೋಮಹರ್ಷಣ ಉವಾಚ

ವಿಶ್ವಾಮಿತ್ರಸ್ಯ ರಾಜರ್ಷೇರ್ವಸಿಷ್ಠಸ್ಯ ಮಹಾತ್ಮನಃ ।
ಭೃಶಂ ವೈರಂ ಬಭೂವೇಹ ತಪಃ ಸ್ಪರ್ಧಾಕೃತೇ ಮಹತ್ ॥ ೨ ॥

ಆಶ್ರಮೋಽವೈ ವಸಿಷ್ಠಸ್ಯ ಸ್ಥಾಣುತೀರ್ಥೆ ಬಭೂವ ಹ ।
ತಸ್ಯ ಪಶ್ಚಿಮದಿಗ್ಭಾಗೆ ವಿಶ್ವಾಮಿತ್ರಸ್ಯ ಧೀಮತಃ ॥ ೩ ॥

ಯತ್ರೇಷ್ಟ್ವಾ ಭಗವಾನ್ ಸ್ಥಾಣುಃ ಪೂಜಯಿತ್ವಾ ಸರಸ್ವತೀಂ ।
ಸ್ಥಾಪಯಾಮಾಸ ದೇವೇಶೋಽಲಿಂಗಾಕಾರಾಂ ಸರಸ್ವತೀಂ ॥ ೪ ॥

ನಲವತ್ತನೆಯ ಅಧ್ಯಾಯವು

೧-೪. ಋಷಿಗಳು ಪುನಃ ವಸಿಷ್ಠನನ್ನು ಹಿಂದಕ್ಕೆ ಎತ್ತಿಕೊಂಡುಹೋದ ಆ ಪ್ರವಾಹವು ಮಹಾವೇಗದಿಂದ ಹರಿಯುತಷ್ಟೆ. ಆ ಸರಸ್ವತೀನದಿಯು ವಸಿಷ್ಠರನ್ನು ಅಷ್ಟುವೇಗವಾಗಿ ಏಕೆ ಒಯ್ದಳು ಎಂದು ಪ್ರಶ್ನೆಮಾಡಲಾಗಿ ಲೋಮಹರ್ಷಣರು ಹೇಳುತ್ತಾರೆ:—ರಾಜರ್ಷಿಯಾದ ವಿಶ್ವಾಮಿತ್ರನಿಗೂ, ಬ್ರಹ್ಮರ್ಷಿಯಾದ ವಸಿಷ್ಠರಿಗೂ ಸಹ ತಪಸ್ಸಿನ ವಿಷಯದಲ್ಲಿ ಇಲ್ಲಿ ಬಹಳ ಹೋರಾಟ ನಡೆದು ಬಹಳ ವೈರಕ್ಕೇ ಅದು ಕಾರಣವಾಯಿತು. ವಸಿಷ್ಠರ ಆಶ್ರಮವು ಸ್ಥಾಣುತೀರ್ಥದಲ್ಲಿದ್ದಿತು. ಅದಕ್ಕೆ ಪಶ್ಚಿಮ ದಿಕ್ಕಿನಲ್ಲಿ ವಿಶ್ವಾಮಿತ್ರರ ಆಶ್ರಮವಿದ್ದಿತು. ಆ ಸ್ಥಾಣುತೀರ್ಥದಲ್ಲಿಯೇ ರುದ್ರದೇವರು ಯಾಗಮಾಡಿ ಸರಸ್ವತಿಯನ್ನೂ ಪೂಜಿಸಿ ಲಿಂಗಾಕಾರಳಾದ ಸರಸ್ವತಿಯನ್ನು ಅಲ್ಲಿ ಪ್ರತಿಷ್ಠೆಮಾಡಿದ್ದರು.

ವಸಿಷ್ಠಸ್ತತ್ರ ತಪಸಾ ಘೋರರೂಪೇಣ ಸಂಸ್ಥಿತಃ ।
ತಸ್ಯೇಹ ತಪಸಾ ಹೀನೋ ವಿಶ್ವಾಮಿತ್ರೋ ಬಭೂವ ಹ ॥ ೫ ॥

ಸರಸ್ವತೀಂ ಸಮಾಹೂಯ ಇದಂ ವಚನಮಬ್ರವೀತ್ ।
ವಸಿಷ್ಠಂ ಮುನಿಶಾರ್ದೂಲಂ ಸ್ವೇನವೇಗೇನ ಚಾನಯ ॥ ೬ ॥

ಇಹಾಯಾತಂ ಮುನಿಶ್ರೇಷ್ಠಂ ಹನಿಷ್ಯಾಮಿ ನ ಸಂಶಯಃ ।
ಏತಚ್ಛ್ರುತ್ವಾ ತು ವಚನಂ ವ್ಯಥಿತಾ ಸಾ ನದೀ ಕಿಲ ॥ ೭ ॥

ತಥಾ ತಾಂ ವ್ಯಥಿತಾಂ ದೃಷ್ಟ್ವಾ ವೇಪಮಾನಾಂ ಮಹಾನದೀಂ ।
ವಿಶ್ವಾಮಿತ್ರೋऽವದತ್ ಕ್ರುದ್ಧೋ ವಸಿಷ್ಠಂ ಶೀಘ್ರಮಾನಯ ॥ ೮ ॥

ತತೋ ಗತ್ವಾ ಸರಿಚ್ಛ್ರೇಷ್ಠಾ ವಸಿಷ್ಠಂ ಮುನಿಸತ್ತಮಂ ।
ಕಥಯಾಮಾಸ ರುದತೀ ವಿಶ್ವಾಮಿತ್ರಸ್ಯ ತದ್ವಚಃ ॥ ೯ ॥

ತಪಃಕೃಶಾಂ ವಿವರ್ಣಾಂ ಚ ಭೃಶಂ ಶೋಕಸಮನ್ವಿತಾಂ ।
ಉವಾಚ ತಾಂ ಸರಿಚ್ಛ್ರೇಷ್ಠಾಂ ವಿಶ್ವಾಮಿತ್ರಾಯ ಮಾಂ ವಹ ॥ ೧೦ ॥

೫-೮. ಆ ಸ್ಥಾಣುತೀರ್ಥದಲ್ಲಿ ವಸಿಷ್ಠರು ಘೋರವಾದ ತಪಸ್ಸಿನಲ್ಲಿ ನಿರತರಾಗಿದ್ದರು. ಅದಕ್ಕೆ ಪಶ್ಚಿಮದಲ್ಲಿ ತನ್ನ ಆಶ್ರಮದಲ್ಲಿದ್ದ ವಿಶ್ವಾಮಿತ್ರರು ತಪಸ್ಸಿನಲ್ಲಿ ವಸಿಷ್ಠರಿಗಿಂತ ಕಡಿಮೆಯಾಗಿದ್ದರು. ಆಗ ಅಸೂಯಾಕ್ರಾಂತರಾದ ವಿಶ್ವಾಮಿತ್ರರು ಸರಸ್ವತಿಯನ್ನು ಕರೆದು ಈ ವಸಿಷ್ಠಮುನಿಯನ್ನು ನಿನ್ನ ವೇಗದಿಂದ ಒಯ್ದು ಇಲ್ಲಿಗೆ ತಾ. ಇಲ್ಲಿ ಬಂದ ಅವನನ್ನು ಕೊಂದು ನನ್ನ ಹಣಾಹಣಿಯನ್ನು ಸಾಧಿಸಿಕೊಳ್ಳುತ್ತೇನೆ, ಇದರಲ್ಲಿ ಸಂಶಯವಿಲ್ಲ ಎಂದರು. ಈ ಮಾತನ್ನು ಕೇಳಿ ಸರಸ್ವತಿಯು ವ್ಯಥೆಪಟ್ಟಳು. ಹಾಗೂ ಭಯದಿಂದ ನಡುಗಿದಳು. ಹಾಗೆ ನಡುಗಿದ ಸರಸ್ವತಿಯನ್ನೂ ದಯೆಯಿಲ್ಲದ ವಿಶ್ವಾಮಿತ್ರರು ಕೋಪದಿಂದ ಜಾಗ್ರತೆಯಾಗಿ ಕರೆದುಕೊಂಡುಬಾ ಎಂದೂ ಗರ್ಜಿಸಿದರು

೯-೧೧. ಆಮೇಲೆ ಆ ಸರಸ್ವತಿಯು ದುಃಖದಿಂದ ಅಳುತ್ತಾ ವಸಿಷ್ಠರಲ್ಲಿ ಹೋಗಿ ವಿಶ್ವಾಮಿತ್ರರ ಈ ಮಾತನ್ನು ಹೇಳಿದಳು. ಯೋಚನೆಯಿಂದ ಕೃಶಳಾಗಿಯೂ ದುಃಖದಿಂದ ರೂಪು ಬದಲಾಯಿಸಿಯೂ ಇರುವ ಆ ಸರಸ್ವತಿಯನ್ನು ನೋಡಿ ವಸಿಷ್ಠರು ವಿಶ್ವಾಮಿತ್ರರಿಂದ ಅವಳಿಗೆ ಅನರ್ಥವುಂಟಾಗಬಾರದೆಂಬ ದಯೆಯಿಂದ ನನ್ನನ್ನು ಕರೆದುಕೊಂಡು ಹೋಗಿ ವಿಶ್ವಾಮಿತ್ರರಿಗೆ ಒಪ್ಪಿಸಬಹುದೆಂದರು. ಅವರ

ತಸ್ಯ ತದ್ವಚನಂ ಶ್ರುತ್ವಾ ಕೃಪಾಶೀಲಸ್ಯ ಸಾ ಸರಿತ್ ।
ಪ್ಲಾವಯಾಮಾಸ ತತ್‌ಸ್ಥಾನಂ ಪ್ರವಾಹೇಣಾಂಭಸಸ್ತದಾ ॥ ೧೧ ॥

ಸ ಚ ಕೂಲಾಪಹಾರೇಣ ಮೈತ್ರಾವರುಣಿರುದ್ಧೃತಃ ।
ವಹಮಾನಶ್ಚ ತುಷ್ಟಾವ ತದಾ ದೇವೀಂ ಸರಸ್ವತೀಂ ॥ ೧೨ ॥

ಪಿತಾಮಹಸ್ಯ ಸರಸಃ ಪ್ರವೃತ್ತಾಸಿ ಸರಸ್ವತಿ ।
ವ್ಯಾಪ್ತಂ ತ್ವಯಾ ಜಗತ್ಸರ್ವಂ ತವೈವಾಂಭೋಭಿರುತ್ತಮೈಃ ॥ ೧೩ ॥

ತ್ವಮೇವ ಕಾಮಗಾ ದೇವೀ ಮೇಘೇಷು ಸೃಜಸೆ ಪಯಃ ।
ಸರ್ವಾಸ್ತ್ವಾಪಸ್ತ್ವಮೇವೇತಿ ತ್ವತ್ತೋ ವಯಂ ವಹಾಮಹೆ ॥ ೧೪ ॥

ಪುಷ್ಟಿರ್ಧೃತಿಸ್ತಥಾ ಕೀರ್ತಿಃ ಸಿದ್ಧಿಃ ಕಾಂತಿಃ ಕ್ಷಮಾ ತಥಾ ।
ಸ್ವಧಾ ಸ್ವಾಹಾ ತಥಾ ವಾಣೀ ತವಾಯತ್ತಮಿದಂ ಜಗತ್ ॥ ೧೫ ॥

ದಯಾಮಯವಾದ ಮಾತನ್ನು ಕೇಳಿದೊಡನೆಯೇ ಸರಸ್ವತಿಯು ತನ್ನ ನೀರಿನ ಪ್ರವಾಹದಿಂದ ಆ ವಸಿಷ್ಠರ ಸ್ಥಾನವನ್ನು ಆಕ್ರಮಿಸಿ ತೋಯಿಸಿದಳು.

೧೨-೧೪. ಈ ರೀತಿಯಾದ ಪ್ರವಾಹದ ಉಬ್ಬರದಿಂದ ವಸಿಷ್ಠಾಶ್ರಮದ ದಡವು ಕುಸಿದುದರಿಂದ ಅಲ್ಲಿದ್ದ ವಸಿಷ್ಠರು ಪ್ರವಾಹದಲ್ಲಿ ತೇಲುತ್ತಾ ಮೇಲೆ ಬಂದರು. ಹೀಗೆ ಒಯ್ಯಲ್ಪಡುತ್ತಿರುವ ಆ ವಸಿಷ್ಠರು ಸರಸ್ವತಿಯನ್ನು ಸ್ತೋತ್ರಮಾಡಿದರು. ಎಲೈ ಸರಸ್ವತಿಯೇ, ಬ್ರಹ್ಮನ ಸರೋವರದಿಂದ ನೀನು ಹೊರಟಿದ್ದೀಯೆ. (ಬ್ರಹ್ಮನಿಗೂ ನನಗೂ ಇರುವ ಸಂಬಂಧವನ್ನು ನೆನಸಿಕೋ ಎಂದು ಭಾವ) ನಿನ್ನ ನೀರಿನಿಂದ ಜಗತ್ತೆಲ್ಲವೂ ವ್ಯಾಪ್ತವಾಗಿರುವದ್ದರಿಂದ ನೀನು ಜಗದ್ವ್ಯಾಪಕಳಾಗಿರುವೆ. ನೀನೇ ನಿನ್ನ ಸ್ವೇಚ್ಛೆಯಿಂದ ಆವಿಯರೂಪದಲ್ಲಿ ಹೋಗಿ ಸೇರಿ ಮೇಘಗಳಲ್ಲಿಯೂ ನೀರನ್ನು ಸೃಷ್ಟಿಸುತ್ತೀಯೆ. ಎಲ್ಲಾ ತೀರ್ಥದ ಜಲವೂ ನಿನ್ನದೇ ಆಗಿರುವದ್ದರಿಂದ ನೀನು ಸರ್ವತೀರ್ಥಮಯಳಾಗಿರುತ್ತೀಯೆ. ಅಂತಹ ನಿನ್ನಿಂದ ನಾನು ಈಗ ಒಯ್ಯಲ್ಪಡುತ್ತಿರುತ್ತೇನೆ.

೧೫-೧೭. ಪುಷ್ಟಿ, ಧೃತಿ (ಧೈರ್ಯ ಅಥವಾ ಧಾರಣಶಕ್ತಿ) ಕೀರ್ತಿ, ಅಣಿಮಾದಿ ಸಿದ್ಧಿಗಳು, ಕಾಂತಿ, ಕ್ಷಮಾ (ಸಹನಶಕ್ತಿ) ಸ್ವಧಾ (ಪಿತ್ರಾದಿತೃಪ್ತಿ) ಸ್ವಾಹಾ (ದೇವತಾ

ತ್ವಮೇವ ಸರ್ವಭೂತೇಷು ವಾಣೀರೂಪೇಣ ಸಂಸ್ಥಿತಾ ।
ಏವಂ ಸರಸ್ವತೀ ತೇನ ಸ್ತುತಾ ಭಗವತೀ ತದಾ ॥ ೧೬ ॥

ಸುಖೇನೋವಾಹ ತಂ ವಿಪ್ರಂ ವಿಶ್ವಾಮಿತ್ರಾಶ್ರಮಂ ಪ್ರತಿ ।
ನ್ಯವೇದಯತ್ತದಾರ್ಚಿತ್ವಾ ವಿಶ್ವಾಮಿತ್ರಾಯ ತಂ ಮುನಿಂ ॥ ೧೭ ॥

ತಮಾನೀತಂ ಸರಸ್ವತ್ಯಾ ದೃಷ್ಟ್ವಾ ಕೋಪಸಮನ್ವಿತಃ ।
ಅಥಾನ್ವಿಷತ್ಪ್ರಹರಣಂ ವಸಿಷ್ಠಾಂತಕರಂ ತದಾ ॥ ೧೮ ॥

ತಂ ತು ಕ್ರುದ್ಧಮಭಿಪ್ರೇಕ್ಷ್ಯ ಬ್ರಹ್ಮಹತ್ಯಾಭಯಾನ್ನದೀ ।
ಅಪೋವಾಹ ವಸಿಷ್ಠಂ ಚ ಮಧ್ಯೇನ ಸ್ವಾಂಭಸಸ್ತತಃ ॥ ೧೯ ॥

ಉಭಯೋಃ ಕುರ್ವತೀವಾಕ್ಯಂ ವಂಚಯಿತ್ವಾ ಚ ಗಾಧಿಜಂ ।
ತತೋಪವಾಹಿತಂ ದೃಷ್ಟ್ವಾ ವಸಿಷ್ಠಮೃಷಿಸತ್ತಮಂ ।
ಅಬ್ರವೀತ್‌ಕ್ರೋಧರಕ್ತಾಕ್ಷೋ ವಿಶ್ವಾಮಿತ್ರೋಮಹಾತಪಾಃ ॥ ೨೦ ॥

ತೃಪ್ತಿ) ವಾಣೀ ಇವೆಲ್ಲವೂ ಹಾಗೂ ಜಗತ್ತೂ ನಿನಗೆ ಅಧೀನವಾಗಿದೆ. ನೀನೇ ಸಕಲ ಪ್ರಾಣಿಗಳಲ್ಲೂ ಲೋಕವ್ಯವಹಾರಕ್ಕೆ ತಕ್ಕ ವಾಗ್ರೂಪದಿಂದಿದ್ದೀಯೆ. ಈ ಪ್ರಕಾರ ವಾದ ವಸಿಷ್ಠರ ಸ್ತುತಿಯಿಂದ ಪ್ರಸನ್ನಳಾದ ಆ ಸರಸ್ವತಿಯು ವಸಿಷ್ಠರನ್ನು ಅನಾಯಾಸದಿಂದ ವಿಶ್ವಾಮಿತ್ರಾಶ್ರಮಕ್ಕೆ ಒಯ್ದಳು. ಅಲ್ಲಿದ್ದ ವಿಶ್ವಾಮಿತ್ರರನ್ನೂ ಸಂತೋಷಪಡಿಸಿ ಈ ವಸಿಷ್ಠರನ್ನು ಅವನಿಗೆ ಒಪ್ಪಿಸಿದ್ಧಳು.

೧೮-೨೦. ಸರಸ್ವತಿಯಿಂದ ತರಲ್ಪಟ್ಟ ವಸಿಷ್ಠರನ್ನು ನೋಡಿ ವಿಶ್ವಾಮಿತ್ರರು ಅವರನ್ನು ನಾಶಪಡಿಸಲು ತಕ್ಕ ಆಯುಧವನ್ನು ಹುಡುಕಿದನು. ಆ ವಿಶ್ವಾಮಿತ್ರರ ಕೋಪವನ್ನು ನೋಡಿ ಬ್ರಹ್ಮಹತ್ಯೆಯುಂಟಾಗುವದೆಂದು ಭಯಪಟ್ಟು ಸರಸ್ವತಿಯು ತನ್ನ ಪ್ರವಾಹ ಮಧ್ಯದಿಂದ ವಸಿಷ್ಠರನ್ನು ಹಿಂದಕ್ಕೆ ಸರಿಸಿದಳು. (ಮಧ್ಯಸ್ಥೆಯಾದ ಸರಸ್ವತಿಯು ಇಬ್ಬರ ವಾಕ್ಯವನ್ನೂ ನಡೆಸಲೊಪ್ಪಿದರೂ, ವಸಿಷ್ಠರಿಗೆ ಅಪಾಯವುಂಟಾದರೆ ಆ ಬ್ರಹ್ಮಹತ್ಯಾದೋಷದಲ್ಲಿ ತಾನೂ ಭಾಗಿಯಾಗಬೇಕಾಗಿಬರುತ್ತದೆ ಎಂದು ಭಾವಿಸಿ ವಿಶ್ವಾಮಿತ್ರರನ್ನೇ ವಂಚಿಸಿ ವಸಿಷ್ಠರನ್ನು ರಕ್ಷಿಸಲು ಪ್ರವಾಹದ ಮಧ್ಯದಲ್ಲಿ ನುಸುಳಿಸಿ ವಿಶ್ವಾಮಿತ್ರನಿಗೆ ಸಿಕ್ಕದಂತೆ ಮಾಡಿದಳೆಂದು ತಾತ್ಪರ್ಯ.) ಅನಂತರ ವಸಿಷ್ಠರನ್ನು ಹಿಂದಕ್ಕೆ ಸೆಳೆದುದಕ್ಕಾಗಿ ಕೋಪಗೊಂಡ ವಿಶ್ವಾಮಿತ್ರರು ಸರಸ್ವತಿಯನ್ನು ಕುರಿತು ಹೇಳುತ್ತಾರೆ

ಯಸ್ಮಾನ್ಮಾಂ ಸರಿತಾಂ ಶ್ರೇಷ್ಠೇ ವಂಚಯಿತ್ವಾ ವಿನಿರ್ಗತಾ ।
ಶೋಣಿತಂ ವಹ ಕಲ್ಯಾಣಿ ರಕ್ಷೋಗ್ರಾಮಸುಸಂಯುತಾ ॥ ೨೧ ॥

ತತಃ ಸರಸ್ವತೀ ಶಪ್ತಾ ವಿಶ್ವಾಮಿತ್ರೇಣ ಧೀಮತಾ ।
ಅವಹಚ್ಛೋಣಿತೋನ್ಮಿಶ್ರಂ ತೋಯಂ ಸಂವತ್ಸರಂ ತದಾ ॥ ೨೨ ॥

ಅಥರ್ಷಯಶ್ಚ ದೇವಾಶ್ಚ ಗಂಧರ್ವಾಪ್ಸರಸಸ್ತದಾ ।
ಸರಸ್ವತೀಂ ತದಾ ದೃಷ್ಟ್ವಾ ಬಭೂವುಃ ಭೃಶದುಃಖಿತಾಃ ॥ ೨೩ ॥

ತಸ್ಮಿಂಸ್ತೀರ್ಥವರೇ ರಮ್ಯೇ ಶೋಣಿತಂ ಸಮುಪಾವಹತ್ ॥ ೨೪ ॥

ತತೋ ಭೂತಪಿಶಾಚಾಶ್ಚ ರಾಕ್ಷಸಾಶ್ಚ ಸಮಾಗತಾಃ ।
ತತಸ್ತೇ ಶೋಣಿತಂ ಸರ್ವೇ ಪಿಬಂತಿ ಸುಖಮಾಸತೇ ॥ ೨೫ ॥

ದೃಷ್ಟ್ವಾಶ್ಚ ತೇನ ಸುಭೃಶಂ ಸುಖಿತಾ ವಿಗತಜ್ವರಾಃ ।
ನೃತ್ಯಂತಶ್ಚ ಹಸಂತಶ್ಚ ಯಥಾಸ್ವರ್ಗಜಿತಃ ತಥಾ ॥ ೨೬ ॥

೨೧-೨೪. ಎಲೈ ಸರಿಚ್ಛ್ರೇಷ್ಠಳೇ, ನೀನು ಯಾವ ಕಾರಣದಿಂದ ನನ್ನನ್ನು ಮೋಸಮಾಡಿ ಹಿಂದೆ ಸರಿದೆಯೋ ಆದುದರಿಂದ ಮಾಂಸಾಹಾರಿಗಳಾದ ರಾಕ್ಷಸರಿಂದ ಸೇವಿತಳಾಗಿ ರಕ್ತದ ಪ್ರವಾಹವನ್ನು ಹೊಂದು. ಅನಂತರ ಈ ರೀತಿಯಾದ ವಿಶ್ವಾಮಿತ್ರರ ಶಾಪಕ್ಕೆ ತುತ್ತಾಗಿ ಆ ಸರಸ್ವತಿಯು ಸಂವತ್ಸರಪರ್ಯಂತವೂ ರಕ್ತಮಿಶ್ರವಾದ ಜಲವನ್ನೇ ಹೊಂದಿದಳು. ಋಷಿಗಳೂ, ದೇವತೆಗಳೂ, ಗಂಧರ್ವಾಪ್ಸರಸೆಯರೇ ಮೊದಲುಗೊಂಡು ಎಲ್ಲರೂ ಸರಸ್ವತಿಯ ಈ ದುರವಸ್ಥೆಯನ್ನು ನೋಡಿ ಬಹಳ ದುಃಖಗೊಂಡರು. ಆ ತೀರ್ಥದಲ್ಲಿ ಸರಸ್ವತಿಯ ನೀರೆಲ್ಲವೂ ರಕ್ತಮಯವೇ ಆಗಿ ಹೋಯಿತು.

೨೫-೨೬. ಆಗ ಭೂತಪಿಶಾಚಗಳೂ, ರಾಕ್ಷಸರೂ ಅಲ್ಲಿ ಬಂದು ರಕ್ತಪಾನವನ್ನು ಮಾಡಿ ಸುಖಿಸಿದರು. ಯಥೇಷ್ಟವಾದ ಆಹಾರದಿಂದ ಕೊಬ್ಬಿದವರಾಗಿ ಯಾವ ಆತಂಕವೂ ಇಲ್ಲದೆ ಸ್ವರ್ಗಸುಖವನ್ನು ಅನುಭವಿಸುವವರಂತೆ ಆನಂದದಿಂದ ನರ್ತನ ಮಾಡುತ್ತಾ, ಹಾಸ್ಯಮಾಡುತ್ತಾ ವಿಹರಿಸಿದರು. ಹೀಗೆ ಸ್ವಲ್ಪಕಾಲ ಕಳೆಯಲಾಗಿ

ಕಸ್ಯಚಿತ್ತ್ವಥಕಾಲಸ್ಯ ಮುನಯಶ್ಶತಯೋಜನಾತ್ ।
ತೀರ್ಥಯಾತ್ರಾಂ ಸಮಾಜಗ್ಮುಃ ಸರಸ್ವತ್ಯಾಂ ತಪೋಧನಾಃ ॥ ೨೭ ॥

ತಾಂ ದೃಷ್ಟ್ವಾ ರಾಕ್ಷಸೈರ್ಘೋರೈಃ ಪೀಯಮಾನಾಂ ಮಹಾನದೀಂ ।
ಪರಿತ್ರಾಣೇ ಸರಸ್ವತ್ಯಾಃ ಪರಂ ಯತ್ನಂ ಪ್ರಚಕ್ರಿರೇ ॥ ೨೮ ॥

ತೇ ತು ಸರ್ವೇ ಮಹಾಭಾಗಾಃ ಸಮಾಗಮ್ಯ ಮಹಾವ್ರತಾಃ ।
ಆಶ್ರಿತ್ಯ ಸರಿತಾಂ ಶ್ರೇಷ್ಠಾಮಿದಂ ವಚನಮಬ್ರುವನ್ ॥ ೨೯ ॥

ಕಿಂ ಕಾರಣಂ ಸರಿಚ್ಛ್ರೇಷ್ಠೇ ಶೋಣಿತೇನ ವಹಸ್ಯಹೋ ।
ಏವಮಾಕುಲತಾಂ ಯಾತಾಂ ಶ್ರುತ್ವಾ ಪೃಚ್ಛಾಮಹೇ ವಯಂ ॥ ೩೦ ॥

ತತಃ ಸಾ ಸರ್ವಮಾಚಷ್ಟೇ ವಿಶ್ವಾಮಿತ್ರವಿಚೇಷ್ಟಿತಂ ।
ತತಸ್ತೇ ಮುನಯಃ ಪ್ರೀತಾಃ ಸರಸ್ವತ್ಯಾಂ ಸಮಾನಯನ್ ॥ ೩೧ ॥

ಅರುಣಾಂ ಪುಣ್ಯತೋಯೌಘಾಂ ಸರ್ವದುಷ್ಕೃತನಾಶನೀಂ ।
ದೃಷ್ಟ್ವಾ ತೋಯಂ ಸರಸ್ವತ್ಯಾ ರಾಕ್ಷಸಾ ದುಃಖಿತಾ ಭೃಶಂ ॥ ೩೨ ॥

ನೂರಾರು ಯೋಜನ ದೂರದಿಂದ ತೀರ್ಥಯಾತ್ರೆಗಾಗಿ ಹೊರಟ ಕೆಲವು ಋಷಿಗಳು ಆ ಸರಸ್ವತೀನದಿಯ ಸ್ನಾನಕ್ಕಾಗಿ ಅಲ್ಲಿ ಬಂದರು.

೨೮-೩೦. ಅಲ್ಲಿ ರಕ್ತಪಾಯಿಗಳಾದ ಘೋರರಾಕ್ಷಸರಿಂದ ಪಾನಮಾಡಲ್ಪಡುತ್ತಲಿರುವ ಮಹಾನದಿಯಾದ ಸರಸ್ವತಿಯನ್ನು ನೋಡಿ ದಯೆಯಿಂದ ಅವಳಿಗೆ ಉಂಟಾಗಿರುವ ಈ ದುರಂತವನ್ನು ಪರಿಹರಿಸಲು ಆ ಋಷಿಗಳು ಪ್ರಯತ್ನಿಸಿದರು. ಮಹಾತಪಸ್ವಿಗಳಾದ ಅವರೆಲ್ಲರೂ ಅಲ್ಲಿ ಸೇರಿ ಸರಸ್ವತಿಯನ್ನು ಕುರಿತು ಎಲೈ ಸರಿನ್ಮಣಿಯೇ, ನೀನು ಈ ದುರವಸ್ಥೆಹೊಂದಿರುವುದನ್ನು ನಾವು ನೋಡಿ ಹೀಗೆ ಕೇಳುತ್ತಿದ್ದೇವೆ. ಹೀಗೆ ನೀನು ರಕ್ತಪ್ರವಾಹದಿಂದ ಹರಿಯಲು ಕಾರಣವೇನು ಎಂದು ಪ್ರಶ್ನೆಮಾಡಿದರು.

೩೧-೩೨. ಅನಂತರ ಆ ಸರಸ್ವತಿಯು ವಿಶ್ವಾಮಿತ್ರರ ಈ ಚೇಷ್ಟೆ ಎಲ್ಲವನ್ನೂ ಹೇಳಿದಳು. ಆಗ ಆ ಮುನಿಗಳು ಸರಸ್ವತಿಯ ಆ ನಡೆವಳಿಕೆಗೆ ಸಂತೋಷಪಟ್ಟು ತಮ್ಮ ತಪಸ್ಸಿನ ಮಹಾತ್ಮ್ಯದಿಂದ ಆ ಸರಸ್ವತಿಯಲ್ಲಿ ಕೆಂಪಾಗಿಯೂ ಪುಣ್ಯಕರವಾಗಿಯೂ ಸರ್ವಪಾಪನಾಶಕವಾಗಿಯೂ ಇರುವ ಪ್ರವಾಹವನ್ನುಂಟುಮಾಡಿ ಅವಳ ಪವಿತ್ರತೆಯನ್ನು ರಕ್ಷಿಸಿದರು. ಆಗ ಅಲ್ಲಿ ನೆರೆದಿದ್ದ ಪಾಪಿಗಳಾದ ರಾಕ್ಷಸರು ಆ ಪುಣ್ಯಪ್ರವಾಹವನ್ನು ನೋಡಿ ಬಹಳ ದುಃಖಗೊಂಡು, ಆ ಋಷಿಗಳನ್ನು ಕುರಿತು ದೈನ್ಯದಿಂದ

ಊಚುಸ್ತಾನ್ಸೈ ಮುನೀನ್ಸರ್ವಾನ್ ದೈನ್ಯಯುಕ್ತಾಃ ಪುನಃ ಪುನಃ ।
ವಯಂ ಹಿ ಕ್ಷುಧಿತಾಸ್ಸರ್ವೇ ಧರ್ಮಹೀನಾಶ್ಚ ಶಾಶ್ವತಾಃ ॥ ೩೩ ॥

ನ ಚ ನಃ ಕಾಮಕಾರೋಽಯಂ ಯದ್ವಯಂ ಪಾಪಕಾರಿಣಃ ।
ಯುಷ್ಮಾಕಂ ಚಾಪ್ರಸಾದೇನ ದುಷ್ಕೃತೇನ ಚ ಕರ್ಮಣಾ ॥ ೩೪ ॥

ಪಕ್ಷೋಽಯಂ ವರ್ಧತೇ ಸ್ಮಾಕಂ ಯತಶ್ಚ ಬ್ರಹ್ಮರಾಕ್ಷಸಾಃ ।
ಏವಂ ವೈಶ್ಯಾಶ್ಚ ಶೂದ್ರಾಶ್ಚ ಕ್ಷತ್ರಿಯಾಶ್ಚಃ ವಿಕರ್ಮಿಭಿ ॥ ೩೫ ॥

ಯೇ ಬ್ರಾಹ್ಮಣಾನ್ ಪ್ರದ್ವಿಷಂತಿ ತೇ ಭವಂತೀಹ ರಾಕ್ಷಸಾಃ ।
ಆಚಾರ್ಯಂ ಮಾತರಂ ಚೈವ ಪಿತರಂ ಯೇ ದ್ವಿಷಂತಿ ಹ ॥ ೩೬ ॥

ವೃದ್ಧಾನಾಮವಮಾನೇನ ತೇ ಭವಂತೀಹ ರಾಕ್ಷಸಾಃ ।
ಯೋಷಿತಾಂ ಚೈವ ಪಾಪಾನಾಂ ಯೋನಿದೋಷೇಣ ವರ್ಧತೇ ॥ ೩೭ ॥

ಹೀಗೆ ಹೇಳಿದರು. ನಾವೆಲ್ಲರೂ ಹಸಿವಿನಿಂದ ಬಳಲಿದ್ದೇವೆ. ನಿತ್ಯವೂ ನಾವು ಧರ್ಮಹೀನರು, ಈ ನದಿಯು ಈಗ ದೀನರಾದ ನಮ್ಮ ಜೀವನಕ್ಕೆ ವಿರೋಧಿಯಾಯಿತು. ನಾವು ಪಾಪಿಗಳಾಗಿರುವದು ನಿಜ. ಆದರೆ ನಾವು ಹಾಗಾಗಿರುವದು ನಮ್ಮ ಇಚ್ಛೆಯಿಂದಲ್ಲ.

೩೪-೩೭. ನಿಮ್ಮಂತಹ ಮಹಾತ್ಮರ ಅನುಗ್ರಹವಿಲ್ಲದಿರುವದ್ದರಿಂದಲೂ ದುಷ್ಕರ್ಮಪರಿಪಾಕದಿಂದಲೂ ನಮ್ಮ ಈ ಪಕ್ಷವು (ಗುಂಪು) ಅಭಿವೃದ್ಧಿ ಹೊಂದುತ್ತಿದೆ. ಆದುದರಿಂದಲೇ ನಾವು ಬ್ರಹ್ಮರಾಕ್ಷಸರಾಗಿಯೇ ಉಳಿದಿರುತ್ತೇವೆ. ಹೀಗೆಯೇ ವೈಶ್ಯನೇ ಆಗಲಿ ಶೂದ್ರನೇ ಆಗಲಿ ಕ್ಷತ್ರಿಯನೇ ಆಗಲಿ ಕರ್ಮಭ್ರಷ್ಟರೊಡನೆ ಹೋರಾಡಿದರೂ ಬ್ರಾಹ್ಮಣರೊಡನೆ ದ್ವೇಷಿಸಿದರೂ ಅವರು ಇಲ್ಲಿ ರಾಕ್ಷಸರೇ ಆಗುತ್ತಾರೆ. ಹಾಗೇ ಗುರುವನ್ನೂ ತಾಯಿ ತಂದೆಗಳನ್ನೂ ಯಾರು ದ್ವೇಷಿಸುತ್ತಾರೆಯೋ, ಮತ್ತು ವೃದ್ಧರಿಗೂ ಅವಮಾನಮಾಡುತ್ತಾರೆಯೋ ಅವರೂ ರಾಕ್ಷಸರಾಗುತ್ತಾರೆ. ಪಾಪಿಗಳಾದ ಸ್ತ್ರೀಯರ ಯೋನಿದೋಷದಿಂದಲೂ ಈ ರಾಕ್ಷಸರ ಗುಂಪು ಹೆಚ್ಚುತ್ತದೆ. (ಹೀಗೆ ರಾಕ್ಷಸರ ಗುಂಪು ಹೆಚ್ಚುವುದಕ್ಕೆ ಮಹಾತ್ಮರ ಅನುಗ್ರಹವಿಲ್ಲದಿರುವದೂ, ಕರ್ಮಪರಿಪಾಕವೂ ಕಾರಣವೆಂದೂ ಈಗ ತಮ್ಮ ಅನುಗ್ರಹದಿಂದ ಈ ನಮ್ಮ ದುರ್ಜನ್ಮವೂ ಹೋಗಬೇಕಾಗಿದೆ ಎಂದೂ ತಾತ್ಪರ್ಯ.) ತಮ್ಮಂತಹ ಮಹಾತ್ಮರು ಸರ್ವಲೋಕ

ಶಕ್ತಾ ಭವಂತ ಸ್ಸರ್ವೇಷಾಂ ಲೋಕಾನಾಮಪಿ ತಾರಣೆ ।
ತೇಷಾಂ ತೆ ಮುನಯಃ ಶ್ರುತ್ವಾ ಕೃಪಾಶೀಲಾಃ ಪುನಶ್ಚ ತೇ ॥ ೩೮ ॥

ಊಚುಃ ಪರಸ್ಪರಂ ಸರ್ವೆ ತಪಮಾನಾಶ್ಚ ತೇ ದ್ವಿಜಾಃ ।
ಕ್ಷುತಕೀಟಾವಪನ್ನಂ ಚ ಯತ್ತ್ವಶಿಷ್ಟಾಶಿತಂ ಭವೇತ್ ॥ ೩೯ ॥

ಕೇಶಾವಪನ್ನಮಾಧೂತಂ ಮಾರುತಶ್ವಾಸದೂಷಿತಂ ।
ಏತೈಃ ಸಂಸ್ಪೃಷ್ಟಮನ್ನಂ ಚ ಭಾಗೋ ವೈರಾಕ್ಷಸೋ ಭವೇತ್ ॥ ೪೦ ॥

ತಸ್ಮಾತ್ ಜ್ಞಾತ್ವಾ ಸದಾ ವಿದ್ವಾಂಸ್ತಾನ್ಯೇತಾನಿ ವಿವರ್ಜಯೇತ್ ।
ರಾಕ್ಷಸಾನ್ನೈಭೋಜಯತೆ ಯೋ ಭುಂಕ್ತೆ ಸ್ವಯಮೀದೃಶಂ ॥ ೪೧ ॥

ಶೋಧಯಿತ್ವಾ ತು ತತ್ತೀರ್ಥಮ್ಮೃಷಯಸ್ತೇ ತಪೋಧನಾಃ ।
ಮೋಕ್ಷಾರ್ಥಂ ರಕ್ಷಸಾಂ ತೇಷಾಂ ಸಂಗಮಂ ಚಾಪ್ಯಕಲ್ಪಯನ್ ॥ ೪೨ ॥

ಅರುಣಾಯಾಃ ಸರಸ್ವತ್ಯಾಃ ಸಂಗಮೆ ಲೋಕವಿಶ್ರುತೆ ।
ತ್ರಿರಾತ್ರೋಪೋಷಿತಃ ಸ್ನಾತೋ ಮುಚ್ಯತೆ ಸರ್ವಕಿಲ್ಬಿಷೈಃ ॥ ೪೩ ॥

ವನ್ನೂ ಉದ್ಧಾರಮಾಡಲು ಸಮರ್ಥರಾಗಿರುತ್ತೀರಿ. ಈ ಪ್ರಕಾರ ಆ ರಾಕ್ಷಸರ ದೀನ ವಚನಗಳನ್ನು ಕೇಳಿ ಆ ಋಷಿಗಳು ಪುನಃ ದಯಾಶೀಲರಾಗಿ ತಮ್ಮ ತಮ್ಮಲ್ಲಿ ಆಲೋಚಿಸಿ ಹೀಗೆ ಹೇಳಿದರು.

೩೯-೪೧. ಕ್ಷುತ (ಶೀನು) ದಿಂದಲೂ ಹುಳುಗಳಿಂದಲೂ ದುಷ್ಟವಾದ ಮತ್ತು ಅಸದ್ವ್ಯವಹಾರಿಗಳಿಂದ ಉಂಡು ಮಿಕ್ಕಿರುವ ಯಾವ ಅನ್ನವುಂಟೋ ಮತ್ತು ಕೂದಲಿನಿಂದಲೂ ಕೈಯಿನ ಕೊಡಹುವಿಕೆಯಿಂದಲೂ ನಿಶ್ವಾಸದಿಂದಲೂ ದೂಷಿತವಾದ ಯಾವ ಅನ್ನವುಂಟೋ ಇವು ರಾಕ್ಷಸರ ಭಾಗವೆಂದು ತಿಳಿಯಬೇಕು. ಆದುದರಿಂದ ಜ್ಞಾನಿಯಾದವನು ಈ ರಾಕ್ಷಸರ ಭಾಗಕ್ಕೆ ಸೇರಿದ ಅನ್ನವನ್ನು ಬಿಡಬೇಕು. ಅದನ್ನೂ ಊಟಮಾಡಿದ್ದೇ ಆದರೆ ಅವನು ರಾಕ್ಷಸರನ್ನೇ ಭೋಜನಮಾಡಿಸಿದಂತಾಗುತ್ತದೆ.

೪೨-೪೩ ಈ ರೀತಿ ರಾಕ್ಷಸರ ಆಹಾರಾರ್ಥವಾಗಿ ಬೇರೆ ಅಂಶವನ್ನು ಕಲ್ಪಿಸಿ ಆ ತಪೋಧನರಾದ ಋಷಿಗಳು ಆ ಸರಸ್ವತೀ ತೀರ್ಥವನ್ನು ಶೋಧನಮಾಡಿ ರಾಕ್ಷಸರ ಮೋಕ್ಷಕ್ಕಾಗಿಯೇ ಅಲ್ಲಿ ಒಂದು ಸಂಗಮವನ್ನೂ ಕಲ್ಪಿಸಿದರು. ಅಂತಹ ಸರಸ್ವತಿಯು ಅರುಣಾ ಸಂಗಮದಲ್ಲಿ ಮೂರು ರಾತ್ರಿ ಉಪವಾಸದಿಂದಿದ್ದು ಯಾರು ಸ್ನಾನಮಾಡು

ಪ್ರಾಪ್ತೇ ಕಲಿಯುಗೇ ಘೋರೇ ಹ್ಯಧರ್ಮೇ ಪ್ರತ್ಯುಪಸ್ಥಿತೇ।
ಅರುಣಾಸಂಗಮೇ ಸ್ನಾತ್ವಾ ಮುಕ್ತಿಮಾಪ್ನೋತಿ ಮಾನವಃ ॥ ೪೪ ॥

ತತಸ್ತೇ ರಾಕ್ಷಸಾಸ್ಸರ್ವೇ ಸ್ನಾತಾಃ ಪಾಪವಿವರ್ಜಿತಾಃ।
ದಿವ್ಯಮಾಲಾಂಬರಧರಾಃ ಸ್ವರ್ಗಸ್ತ್ರೀಭಿಸ್ಸಮನ್ವಿತಾಃ ॥ ೪೫ ॥

ಇತಿ ಶ್ರೀ ವಾಮನಪುರಾಣೇ ಸರೋಮಾಹಾತ್ಮ್ಯೇ
ಚತ್ವಾರಿಂಶೋಽಧ್ಯಾಯಃ

ತ್ತಾರೆಯೋ ಅವರು ಸರ್ವವಿಧ ಪಾಪದಿಂದಲೂ ಬಿಡುಗಡೆಯನ್ನು ಹೊಂದುತ್ತಾರೆ. ಘೋರವಾದ ಕಲಿಯುಗವು ಪ್ರಾಪ್ತವಾದಾಗ ಅಧರ್ಮವು ಹಬ್ಬಲುಪಕ್ರಮಿಸಿದಾಗ ಈ ಅರುಣಾಸಂಗಮ ಸ್ನಾನವು ಮನುಷ್ಯನ ಮೋಕ್ಷಕ್ಕೆ ಸಾಧನವಾಗುತ್ತದೆ. ಅನಂತರ ಆ ರಾಕ್ಷಸರೆಲ್ಲರೂ ಅಲ್ಲಿ ಸ್ನಾನಮಾಡಿ ತಮ್ಮ ರಾಕ್ಷಸ ಜನ್ಮಕ್ಕೆ ಕಾರಣವಾದ ಪಾಪಗಳನ್ನೆಲ್ಲಾ ಹೋಗಲಾಡಿಸಿಕ್ಕೊಂಡು ದಿವ್ಯಮಾಲ್ಯಾಲಂಕೃತರಾಗಿ ಸ್ವರ್ಗ ಸ್ತ್ರೀಗಳೊಡಗೂಡಿ ಸ್ವರ್ಗಸುಖಕ್ಕೆ ಭಾಗಿಗಳಾದರು.

ಇಲ್ಲಿಗೆ ಶ್ರೀ ವಾಮನಪುರಾಣದಲ್ಲಿ ಸರೋಮಾಹಾತ್ಮ್ಯವೆಂಬ
ನಲವತ್ತನೆಯ ಅಧ್ಯಾಯ ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ವಸಿಷ್ಠೋದ್ವಾಹತೀರ್ಥದ ಮಾಹಾತ್ಮ್ಯವನ್ನು ಅದರ ಇತಿಹಾಸದಿಂದ ವಿಶೇಷವಾಗಿ ಪ್ರತಿಪಾದಿಸಲಾಗಿದೆ.

॥ ಶ್ರೀಃ ॥

ಶ್ರೀವಾಮನಪುರಾಣಂ

ಏಕಚತ್ವಾರಿಂಶೋಽಧ್ಯಾಯಃ

ಲೋಮಹರ್ಷಣ ಉವಾಚ

ಸಮುದ್ರಾಸ್ತತ್ರ ಚತ್ವಾರಃ ಋಷಿಣಾ ನಿರ್ಮಿತಾಃ ಪುರಾ ।
ಪ್ರತ್ಯೇಕಂ ಚ ನರಃ ಸ್ನಾತೋ ಗೋಸಹಸ್ರಫಲಂ ಲಭೇತ್ ॥ ೧ ॥

ಯತ್ಕಿಂಚಿತ್ಕ್ರಿಯತೇ ತಸ್ಮಿಂ ಸ್ತಪಸ್ತೀರ್ಥೆ ದ್ವಿಜೋತ್ತಮಾಃ ।
ಪರಿಪೂರ್ಣಂ ಹಿ ತತ್ಸರ್ವಮಪಿ ದುಷ್ಕೃತಕರ್ಮಣಃ ॥ ೨ ॥

ಶತಸಾಹಸ್ರಕಂ ತೀರ್ಥಂ ತತ್ರೈವ ಶತಿಕಂ ದ್ವಿಜಾಃ ।
ಉಭಯೋರಿಹ ಸುಸ್ನಾತೋ ಗೋಸಹಸ್ರಫಲಂ ಲಭೇತ್ ॥ ೩ ॥

ನಲವತ್ತೊಂದನೆಯ ಅಧ್ಯಾಯವು

೧-೩ ಲೋಮಹರ್ಷಣರು ಪುನಃ ಹೇಳುತ್ತಾರೆ. ಅದೇ ಕ್ಷೇತ್ರದಲ್ಲಿ ಋಷಿಯೂ ಪೂರ್ವದಲ್ಲೇ ನಾಲ್ಕು ಸಮುದ್ರಗಳನ್ನು ನಿರ್ಮಿಸಿರುತ್ತಾನೆ. ಮನುಷ್ಯನಾದವನು ಅವುಗಳಲ್ಲಿ ಒಂದೊಂದರಲ್ಲಿ ಸ್ನಾನಮಾಡಿದರೂ ಸಹಸ್ರ ಗೋದಾನದ ಫಲವನ್ನು ಹೊಂದುತ್ತಾನೆ. ಎಲೈ ಬ್ರಾಹ್ಮಣೋತ್ತಮರೇ ಆ ತೀರ್ಥದಲ್ಲಿ ತಪಸ್ಸೇ ಮೊದಲಾದ ಸತ್ಕರ್ಮಗಳನ್ನು ಅಲ್ಪಸ್ವಲ್ಪಮಾಡಿದರೂ ಮಾಡಿದವನು ಪಾಪಿಯಾಗಿದ್ದರೂ ಅದು ಪರಿಪೂರ್ಣಫಲಪ್ರದವಾಗಿಯೇ ಆಗುತ್ತದೆ. ಅಲ್ಲಿಯೇ ಶತಸಾಹಸ್ರಕವೆಂದೂ ಶತಿಕವೆಂದೂ ಎರಡು ತೀರ್ಥಗಳಿವೆ. ಎರಡರಲ್ಲೂ ಸ್ನಾನಮಾಡಿದವನಿಗೆ ಗೋಸಹಸ್ರದಾನದ ಫಲವೇ ಲಭಿಸೀತು.

ಸೋಮತೀರ್ಥಂ ಚ ತತ್ರಾಪಿ ಸರಸ್ವತ್ಯಾಸ್ತಟೆ ಸ್ಥಿತಂ ।
ಯಸ್ಮಿನ್ ಸ್ನಾತಸ್ತು ಪುರುಷೋ ರಾಜಸೂಯಫಲಂ ಲಭೇತ್ ॥ ೪ ॥

ರೇಣುಕಾಷ್ಟಕಮಾಸಾದ್ಯ ಶ್ರದ್ಧಧಾನೋ ಜಿತೇಂದ್ರಿಯಃ ।
ಮಾತೃಭಕ್ತ್ಯಾ ತು ಯತ್ಪುಣ್ಯಂ ತತ್ಪುಣ್ಯಂ ಪ್ರಾಪ್ನುಯಾನ್ನರಃ ॥ ೫ ॥

ಋಣಮೋಚನಮಾಸಾದ್ಯ ತೀರ್ಥಂ ಬ್ರಾಹ್ಮಣಸೇವಿತಂ ।
ಕುಮಾರಸ್ಯಾಭಿಷೇಕಂ ಚ ಓಜಸಂ ನಾಮ ವಿಶ್ರುತಂ ॥ ೬ ॥

ತಸ್ಮಿನ್ ಸ್ನಾತಸ್ತು ಪುರುಷೋ ಯಶಸಾ ಚ ಸಮನ್ವಿತಃ ।
ಕೌಮಾರಂ ಪುರಮಾಪ್ನೋತಿ ಕೃತ್ವಾ ಸ್ನಾನಂ ತು ಮಾನವಃ ॥ ೭ ॥

ಚೈತ್ರಷಷ್ಠ್ಯಾಂ ಶುಕ್ಲಪಕ್ಷೆ ಯಸ್ತು ಶ್ರಾದ್ಧಂ ಕರಿಷ್ಯತಿ ।
ಗಯಾಶ್ರಾದ್ಧೆ ಚ ಯತ್ಪುಣ್ಯಂ ತತ್ಫಲಂ ಪ್ರಾಪ್ನುಯಾನ್ನರಃ ॥ ೮ ॥

ಸನ್ನಿಹತ್ಯಾಂ ಯಥಾ ಶ್ರಾದ್ಧಂ ವಾಯುನಾ ಕಥಿತಂ ಪುರಾ ।
ತಸ್ಮಾತ್ಸರ್ವಪ್ರಯತ್ನೇನ ಶ್ರಾದ್ಧಂ ತತ್ರ ಸಮಾಚರೇತ್ ॥ ೯ ॥

೪-೬. ಅಲ್ಲಿಯೇ ಸರಸ್ವತಿಯ ದಡದಲ್ಲಿ ಸೋಮ ತೀರ್ಥವಿದೆ. ಅಲ್ಲಿ ಸ್ನಾನ ಮಾಡಿದವನಿಗೆ ರಾಜಸೂಯಯಾಗದ ಫಲವು ಲಭಿಸೀತು. ಅಲ್ಲಿರುವ ರೇಣುಕಾಷ್ಟಕವೆಂಬ ತೀರ್ಥವನ್ನು ಶ್ರದ್ಧೆಯಿಂದ ಸೇವಿಸಿದಲ್ಲಿ ಅವನು ಮಾತೃಭಕ್ತಿಯಿಂದ ಹೊಂದಬಹುದಾದ ಫಲವನ್ನು ಹೊಂದಬಲ್ಲನು. ಅಲ್ಲಿಯೇ ಬ್ರಾಹ್ಮಣೋತ್ತಮರಿಂದ ಸೇವಿತವಾದ ಋಣಮೋಚನವೆಂಬ ತೀರ್ಥವನ್ನೂ ಓಜಸವೆಂದು ಖ್ಯಾತಿಹೊಂದಿರುವ ಕುಮಾರಾಭಿಷೇಕ ತೀರ್ಥವನ್ನೂ ಸ್ನಾನಾದಿಗಳಿಂದ ಸೇವಿಸುವವನು ಯಶಸ್ವಿಯಾಗಿ ಆಗುತ್ತಾನೆ.

೭-೧೦. ಮತ್ತು ಇಲ್ಲಿ ಸ್ನಾನಮಾಡಿದವನು ಕೌಮಾರ ಲೋಕವನ್ನು ಹೊಂದುತ್ತಾನೆ. ಜ್ಯೇಷ್ಠಮಾಸದ ಶುದ್ಧ ಷಷ್ಠಿಯದಿನ ಯಾರು ಇಲ್ಲಿ ಯಥಾವಿಧಿಯಾಗಿ ಶ್ರಾದ್ಧಮಾಡುತ್ತಾರೆಯೋ ಅವರಿಗೆ ಗಯೆಯಲ್ಲಿ ಶ್ರಾದ್ಧಮಾಡುವದರಿಂದ ಲಭಿಸಬಹುದಾದ ಪುಣ್ಯ ಉಂಟಾಗುತ್ತದೆ. ಸನ್ನಿಹತಿ ಎಂಬ ಈ ಕ್ಷೇತ್ರದಲ್ಲಿ ಶ್ರಾದ್ಧ ಮಾಡಬೇಕೆಂದು ವಾಯುದೇವನು ಪೂರ್ವದಲ್ಲೇ ಹೇಳಿರುವದ್ದರಿಂದ ಸರ್ವಪ್ರಯತ್ನದಿಂದಲೂ ಇಲ್ಲಿ ಶ್ರಾದ್ಧವನ್ನು ಮಾಡಿಯೇ ಮಾಡಬೇಕು. ಶುಕ್ಲಪಕ್ಷದ ಚೈತ್ರ ಷಷ್ಠಿ

ಯಸ್ತು ಸ್ನಾನಂ ಶ್ರದ್ಧಧಾನ ಶ್ಚೈತ್ರಸಪ್ತಾಂ ಕರಿಷ್ಯತಿ।
ಅಕ್ಷಯಂ ಚೋದಕಂ ತಸ್ಯ ಪಿತೄಣಾಮುಪಜಾಯತೆ ॥೧೦॥

ತತ್ರ ಪಂಚವಟಂ ನಾಮ ತೀರ್ಥಂ ತ್ರೈಲೋಕ್ಯ ವಿಶ್ರುತಂ।
ಮಹಾದೇವಃ ಸ್ಥಿತೋ ಯತ್ರ ಯೋಗಮೂರ್ತಿಧರಃ ಸ್ವಯಂ ॥೧೧॥

ತತ್ರ ಸ್ನಾತ್ವಾರ್ಚಯಿತ್ವಾ ಚ ದೇವದೇವಂ ಮಹೇಶ್ವರಂ।
ಗಾಣಪತ್ಯಮವಾಪ್ನೋತಿ ದೈವತೈಸ್ಸಹ ಮೋದತೆ ॥ ೧೨ ॥

ಕುರುಕ್ಷೇತ್ರಂ ಚ ವಿಖ್ಯಾತಂ ಕುರುಣಾ ಯತ್ರವೈ ತಪಃ ।
ತಪ್ತಂ ಸುಘೋರಂ ಕ್ಷೇತ್ರಸ್ಯ ಕರ್ಷಣಾರ್ಥಂ ದ್ವಿಜೋತ್ತಮಾಃ ॥ ೧೩ ॥

ತಸ್ಯ ಘೋರೇಣ ತಪಸಾ ತುಷ್ಟ ಇಂದ್ರೋಽಬ್ರವೀದ್ವಚಃ ।
ರಾಜರ್ಷೇ ಪರಿತುಷ್ಟೋಽಸ್ಮಿ ತಪಸಾನೇನ ಸುವ್ರತ ॥ ೧೪ ॥

ಯಜ್ಞಂ ಚ ಯೇ ಕುರುಕ್ಷೇತ್ರೆ ಕರಿಷ್ಯಂತಿ ಶತಕ್ರತುಂ ।
ತೆ ಗಮಿಷ್ಯಂತಿ ಸುಕೃತಾನ್ ಲೋಕಾನ್ಪಾಪವಿವರ್ಜಿತಾನ್ ॥ ೧೫ ॥

ಯಲ್ಲಿ ಶ್ರದ್ಧೆಯಿಂದ ಯಾರು ಇಲ್ಲಿ ಸ್ನಾನಮಾಡುತ್ತಾರೆಯೋ ಅವರು ಪಿತೃಗಳಿಗೆ ಮಾಡುವ ಉದಕದಾನವು ಅಕ್ಷಯವಾಗಿ ಆಗುತ್ತದೆ.

೧೧-೧೫. ಅಲ್ಲಿಯೇ ಪಂಚವಟವೆಂಬ ಪ್ರಸಿದ್ಧ ತೀರ್ಥವಿದೆ. ಅಲ್ಲಿ ಮಹಾದೇವನು ಯೋಗಮೂರ್ತಿಯಾಗಿ ಸನ್ನಿಹಿತನಾಗಿರುತ್ತಾನೆ. ಅಲ್ಲಿ ಸ್ನಾನಮಾಡಿ ಮಹೇಶ್ವರನನ್ನು ಪೂಜಿಸಿದಲ್ಲಿ ಅವನು ಗಣಾಧಿಪತಿತ್ವವನ್ನು ಹೊಂದಿ ದೇವತೆಗಳೊಡನೆ ಸುಖಿಸುತ್ತಾನೆ. ಅಲ್ಲಿಯೇ ಪ್ರಖ್ಯಾತವಾದ ಕುರುಕ್ಷೇತ್ರವೆಂಬ ಕ್ಷೇತ್ರವೂ ಇದೆ. ಅಲ್ಲಿಯೇ ಕ್ಷೇತ್ರದ ಕರ್ಷಣ (ಉಳುವುದು) ಕ್ಕಾಗಿ ಕುರುವು ಘೋರವಾದ ತಪಸ್ಸನ್ನು ಆಚರಿಸಿದನು. ಅವನ ಘೋರತಪಸ್ಸಿನಿಂದ ಸಂತುಷ್ಟನಾದ ಇಂದ್ರನು ಕುರುವನ್ನು ಕುರಿತು, ಎಲೈ, ರಾಜರ್ಷಿಯೇ ನಿನ್ನ ಈ ತಪಸ್ಸಿನಿಂದ ನಾನು ಸಂತುಷ್ಟನಾಗಿರುವೆನು, ಇನ್ನು ಮುಂದೆ ಈ ಕುರುಕ್ಷೇತ್ರದಲ್ಲಿ ಶತಕ್ರತುವೆಂಬ ಯಜ್ಞವನ್ನು ಯಾರು ಮಾಡುತ್ತಾರೆಯೋ ಅವರು ನಿಷ್ಪಾಪವಾದ ಪುಣ್ಯಲೋಕವನ್ನು ಹೊಂದುತ್ತಾರೆ.

ಅಪಹಸ್ಯ ತತ ಶ್ಶಕ್ರೋ ಜಗಾಮ ತ್ರಿದಿವಂ ಪ್ರಭುಃ ।
ಆಗಮ್ಯಾಗಮ್ಯ ಚೈವೈನಂ ಭೂಯೋಭೂಯೋ ಪಹಸ್ಯಚ ॥ ೧೬ ॥
ಶತಕ್ರತುರನಿರ್ವಿಣ್ಣಃ ಪೃಷ್ಟ್ವಾ ಪೃಷ್ಟ್ವಾ ಜಗಾಮ ಹ ।

ಯದಾ ತು ತಪಸೋಗ್ರೇಣ ಸಂತಪ್ತಂ ದೇಹಮಾತ್ಮನಃ ।
ತತಃ ಶಕ್ರೋಽಬ್ರವೀತ್ಪ್ರೀತಃ ಬ್ರೂಹಿ ಯತ್ತೇ ಚಿಕೀರ್ಷಿತಂ ॥ ೧೭ ॥

ಕುರುರುವಾಚ

ಯೇ ಶ್ರದ್ಧಧಾನಾಸ್ತೀರ್ಥೇಽಸ್ಮಿನ್ ಮಾನವಾ ನಿವಸಂತಿ ಹಿ ।
ತೇ ಪ್ರಾಪ್ನುವಂತಿ ಸದನಂ ಬ್ರಹ್ಮಣಃ ಪರಮಾತ್ಮನಃ ॥ ೧೮ ॥

ಅನ್ಯತ್ರ ಕೃತಪಾಪಾ ಯೇ ಪಂಚಪಾತಕದೂಷಿತಾಃ ।
ಅಸ್ಮಿಂಸ್ತೀರ್ಥೇ ನರಾಸ್ನಾತಾ ಮುಕ್ತಾ ಯಾಂತು ಪರಾಂಗತಿಂ ॥ ೧೯ ॥

ಕುರುಕ್ಷೇತ್ರೇ ಪುಣ್ಯತಮೋ ಕುರುಕ್ಷೇತ್ರಂ ದ್ವಿಜೋತ್ತಮಾಃ ।
ತಂ ದೃಷ್ಟ್ವಾ ಮುಕ್ತಪಾಪಸ್ತು ಪರಂ ಪದಮವಾಪ್ನುಯಾತ್ ॥ ೨೦ ॥

೧೬-೧೭. ಹೀಗೆ ಹೇಳಿ ಇಂದ್ರನು ನಗುತ್ತಾ ಪುನಃ ಸ್ವರ್ಗಕ್ಕೆ ಹೊರಟನು. ಆಗಾಗ ಮರಳಿಬರುತ್ತಾ ನಗುತ್ತ ಸಂತೋಷದಿಂದ ಹೋಗುತ್ತಿದ್ದನು. ಕುರುವು ಉಗ್ರವಾದ ತಪಸ್ಸಿನಿಂದ ದೇಹವನ್ನು ಶೋಷಣೆಮಾಡಲುಪಕ್ರಮಿಸಿದಾಗ ಇಂದ್ರನು ಅವನ ತಪಸ್ಸನ್ನು ನೋಡಿ ಸಹಿಸಲಾರದೆ ಸಂತೋಷದಿಂದ ಕುರುವನ್ನು ಕುರಿತು ನಿನ್ನ ಇಷ್ಟವೇನು ಎಂದು ಕೇಳಿದನು.

೧೮-೨೦. ಅದಕ್ಕೆ ಕುರುವು ಈ ತೀರ್ಥದಲ್ಲಿ ಯಾರು ಶ್ರದ್ಧೆಯಿಂದ ವಾಸ ಮಾಡುತ್ತಾರೆಯೋ ಅವರು ಪರಮಾತ್ಮನ ಸ್ಥಾನವನ್ನೇ ಹೊಂದಬೇಕು. ಇತರ ಕಡೆಯಲ್ಲಿ ಅನೇಕ ಪಾಪಗಳನ್ನು ಮಾಡಿಯೂ, ಪಂಚಮಹಾಪಾತಕಗಳಿಂದ ದೂಷಿತರಾಗಿಯೂ ಇರುವವರು ಈ ತೀರ್ಥದಲ್ಲಿ ಸ್ನಾನಮಾಡಿದ್ದೇ ಆದರೆ ಅವರೂ ಮುಕ್ತರಾಗಿ ಉತ್ತಮಗತಿಯನ್ನು ಹೊಂದಬೇಕು. ಪುಣ್ಯಕರವಾದ ಕುರುಕ್ಷೇತ್ರದಲ್ಲಿಯೂ ಈ ಕುರುಕ್ಷೇತ್ರವೆಂಬ ತೀರ್ಥವು ದರ್ಶನಮಾತ್ರದಿಂದಲೇ ಸರ್ವಪಾಪನಾಶಕವಾಗಿಯೂ ಮುಕ್ತಿಪ್ರದವಾಗಿಯೂ ಆಗಬೇಕು, ಎಂದು ಪ್ರಾರ್ಥಿಸಿದನು.

ಕುರುಕ್ಷೇತ್ರೇ ನರಃ ಸ್ನಾತ್ವಾ ಮುಕ್ತೋ ಭವತಿ ಕಿಲ್ಬಿಷೈಃ ।
ಕುರುಣಾಸಮನುಜ್ಞಾತಃ ಪ್ರಾಪ್ನೋತಿ ಪರಮಂ ಪದಂ ॥ ೨೧ ॥

ತತೋಗಚ್ಛೇದನರಕಂ ತೀರ್ಥಂ ತ್ರೈಲೋಕ್ಯವಿಶ್ರುತಂ ।
ಯತ್ರ ಪೂರ್ವಂ ಸ್ಥಿತೋ ಬ್ರಹ್ಮಾ ದಕ್ಷಿಣೇ ಚ ಮಹೇಶ್ವರಃ ॥ ೨೨ ॥

ರುದ್ರಪತ್ನೀ ಪಶ್ಚಿಮತಃ ಪದ್ಮನಾಭೋತ್ತರೆ ಸ್ಥಿತಃ ।
ಮಧ್ಯೇಹ್ಯನರಕರಂ ತೀರ್ಥಂ ತ್ರೈಲೋಕ್ಯಸ್ಯಾಪಿ ದುರ್ಲಭಂ ॥ ೨೩ ॥

ಯಸ್ಮಿನ್ ಸ್ನಾತಾಸ್ತು ಪುರುಷಾಃ ಪ್ರಮುಚ್ಯಂತೆ ಚ ಪಾತಕೈಃ ।
ವೈಶಾಖೆ ಚ ಯದಾಷ್ಟಮ್ಯಾಂ ಮಂಗಲಸ್ಯದಿನಂ ಭವೇತ್ ॥ ೨೪ ॥

ತದಾ ಸ್ನಾನಂ ತತ್ರ ಕೃತ್ವಾ ಮುಕ್ತೋಭವತಿ ಪಾತಕೈಃ ।
ಯಃ ಪ್ರಯಚ್ಛೇಚ್ಚ ಕನಕಂ ತುರ್ಯಭಾಗೇನ ಸಂಯುತಂ ॥ ೨೫ ॥

ಕಲಶಂ ಚ ತದಾ ದದ್ಯಾದಪೂಪೈಃ ಪರಿಶೋಭಿತಂ ।
ದೇವತಾಃ ಪ್ರೀಣಯೇತ್ಪೂರ್ವಂ ಕರಕೈರತ್ನಸಂಯುತೈಃ ॥ ೨೬ ॥

೨೧-೨೩. ಈ ಕುರುಕ್ಷೇತ್ರದಲ್ಲಿ ಸ್ನಾನಮಾಡಿದವನು ಸರ್ವ ಪಾಪಗಳಿಂದಲೂ ಮೋಕ್ಷ ಹೊಂದುತ್ತಾನೆ. ಕುರುವಿನ ಅಪ್ಪಣೆಯನ್ನು ಹೊಂದಿ ಅವನು ಪರಮಪದವನ್ನೇ ಹೊಂದುತ್ತಾನೆ. ಅನಂತರ ಅನರಕವೆಂಬ ಪ್ರಸಿದ್ಧ ತೀರ್ಥಕ್ಕೆ ಹೋಗಬೇಕು. ಆ ತೀರ್ಥದ ಪೂರ್ವಭಾಗದಲ್ಲಿ ಚತುರ್ಮುಖನೂ, ದಕ್ಷಿಣಭಾಗದಲ್ಲಿ ಮಹೇಶ್ವರನೂ, ಪಶ್ಚಿಮಭಾಗದಲ್ಲಿ ರುದ್ರಪತ್ನಿಯೂ, ಉತ್ತರಭಾಗದಲ್ಲಿ ಪದ್ಮನಾಭನೂ ನೆಲಸಿರುತ್ತಾರೆ. ಈ ಮಧ್ಯದಲ್ಲಿರುವ ಅನರಕ ತೀರ್ಥವು ಮೂರು ಲೋಕಕ್ಕೂ ದುರ್ಲಭವಾದದ್ದು.

೨೪-೨೬. ಅಲ್ಲಿ ಸ್ನಾನ ಮಾಡಿದವರಿಗೆ ಯಾವ ಪಾಪಗಳ ಸಂಬಂಧವೂ ಇರುವದಿಲ್ಲ. ವೈಶಾಖಮಾಸದಲ್ಲಿ ಮಂಗಳವಾರದೊಡನೆ ಕೂಡಿರುವ ಅಷ್ಟಮಿಯು ಬಂದಲ್ಲಿ ಆ ದಿವಸ ಅಲ್ಲಿ ಸ್ನಾನಮಾಡಿದವನಿಗೆ ಸರ್ವಪಾತಕಗಳಿಂದಲೂ ಮೋಕ್ಷವುಂಟಾಗುತ್ತದೆ. ಮತ್ತು ಆ ಕ್ಷೇತ್ರದಲ್ಲಿ ಚಿನ್ನವನ್ನೂ ಅದರ ನಾಲ್ಕರಲ್ಲೊಂದು ಬೆಲೆಯ ಪರಿಮಾಣದ ಕಲಶವನ್ನೂ ಸಹ ಅಪೂಪಾದಿಪರಿಕರಗಳೊಡನೆ ದಾನ ಮಾಡಬೇಕು. ಮೊದಲು ರತ್ನಗಳಿಂದ ಕೂಡಿದ ದಾಳಿಂಬೆ ಬೀಜವನ್ನು ದೇವತಾ ಪೂಜೆಗೆ ಉಪಯೋಗಿಸಿ ದೇವತಾ ಪ್ರೀತಿಯನ್ನು ಹೊಂದಬೇಕು.

ತತಸ್ತು ಕಲಶೌ ದದ್ಯಾತ್ಸರ್ವಪಾತಕನಾಶನೌ ।
ಅನೇನೈವ ವಿಧಾನೇನ ಯಸ್ತು ಸ್ನಾನಂ ಸಮಾಚರೇತ್ ॥ ೨೭ ॥

ಸ ಮುಕ್ತಃ ಕಲುಷೈಸ್ಸರ್ವೈಃ ಪ್ರಯಾತಿ ಪರಮಂಪದಂ ।
ಅನ್ಯತ್ರಾಪಿ ಯದಾಷಷ್ಠೀ ಮಂಗಲೇನ ಭವಿಷ್ಯತಿ ॥ ೨೮ ॥

ತತ್ರಾಪಿ ಮುಕ್ತಿಫಲದಾ ಕೃತ್ವಾ ತಸ್ಮಿನ್ ಭವಿಷ್ಯತಿ ।
ತೀರ್ಥೇ ಚ ಸರ್ವತೀರ್ಥಾನಾಂ ಯಸ್ಮಿನ್ ಸ್ನಾತೋ ದ್ವಿಜೋತ್ತಮಾಃ॥ ೨೯ ॥

ಸರ್ವದೇವೈರನುಜ್ಞಾತಃ ಪರಮಂ ಚಾಪ್ನುಯಾತ್ಪದಂ ।
ಕಾಮ್ಯಕಂ ಚ ವನಂ ಪುಣ್ಯಂ ಸರ್ವಪಾತಕನಾಶನಂ ॥ ೩೦ ॥

ಯಸ್ಮಿನ್ ಪ್ರವಿಷ್ಟಮಾತ್ರಸ್ತು ಮುಕ್ತೋ ಭವತಿ ಕಿಲ್ಬಿಷೈಃ ।
ಸಮಾಶ್ರಿತ್ಯ ವನಂ ಪುಣ್ಯಂ ಸವಿತಾ ಪ್ರಕಟಃ ಸ್ಥಿತಃ ॥ ೩೧ ॥

೨೭-೨೯. ಅನಂತರ ಕಲಶದ್ವಯವನ್ನು ಸರ್ವಪಾಪನಾಶಕ್ಕಾಗಿ ಅಲ್ಲಿ ದಾನ ಮಾಡಬೇಕು. ಈ ವಿಧಾನದಿಂದ ಯಾವನು ಅಲ್ಲಿ ಸ್ನಾನಮಾಡುತ್ತಾನೆಯೋ ಅವನು ಸರ್ವಪಾಪನಾಶವನ್ನು ಹೊಂದಿ ಪರಮಪದಗಾಮಿಯಾಗುತ್ತಾನೆ. ವೈಶಾಖ ಮಾಸ ವಲ್ಲದೆ ಬೇರೆ ಮಾಸದಲ್ಲಿಯಾದರೂ ಮಂಗಲವಾರದಿಂದ ಕೂಡಿದ ಷಷ್ಠೀ ತಿಥಿಯಲ್ಲಿ ಆ ತೀರ್ಥದಲ್ಲಿ ಸ್ನಾನಮಾಡಿ ಮೇಲಿನ ಕ್ರಮವನ್ನು ಅನುಸರಿಸಿದಲ್ಲಿ ಅವನು ಸಕಲ ದೇವತೆಗಳ ಅನುಗ್ರಹವನ್ನೂ ಹೊಂದಿ ಪರಮಪದಗಾಮಿಯಾಗುತ್ತಾನೆ.

೩೦-೩೨. ಅಲ್ಲಿಯೇ ಕಾಮ್ಯಕವೆಂಬ ಪುಣ್ಯಕರವಾದ ವನವಿದೆ. ಅದರ ಪ್ರವೇಶ ಮಾತ್ರದಿಂದಲೇ ಸರ್ವಪಾಪ ಮೋಕ್ಷ ವುಂಟಾಗುತ್ತದೆ. ಆ ಪುಣ್ಯ ವನವನ್ನು ಆಶ್ರಯಿಸಿ ಪೂಷಾ ಎಂಬ ಸೂರ್ಯನು ಪ್ರಕಾಶದಿಂದಿರುತ್ತಾನೆ. ಅದರ ದರ್ಶನವೇ

ಪೂಷಾ ನಾಮ ದ್ವಿಜಶ್ರೇಷ್ಠಾ ದರ್ಶನಾನ್ಮುಕ್ತಿಮಾಪ್ನುಯಾತ್ ।
ಆದಿತ್ಯಸ್ಯ ದಿನೆ ಪ್ರಾಪ್ತೆ ತಸ್ಮಿನ್ ಸ್ನಾತಸ್ತು ಮಾನವಃ
ವಿಶುದ್ಧಮಾನಸೋಽಭ್ಯೇತಿ ಮನಸಾ ಚಿಂತಿತಂ ಫಲಂ ॥ ೩೨ ॥

ಇತಿ ಶ್ರಿ ವಾಮನಪುರಾಣೇ ಸರೋಮಹಾತ್ಮ್ಯೇ
ಏಕಚತ್ವಾರಿಂಶೋಽಧ್ಯಾಯಃ

ಮುಕ್ತಿಗೂ ಕಾರಣವಾದೀತು ಭಾನುವಾರದದಿನ ಅಲ್ಲಿ ಸ್ನಾನಮಾಡಿದ್ದೇ ಆದರೆ ಅವನು ಮನಶ್ಶುದ್ಧಿಯನ್ನು ಹೊಂದಿ ಇಷ್ಟಾರ್ಥವನ್ನೂ ಹೊಂದುತ್ತಾನೆ.

ಇಲ್ಲಿಗೆ ಶ್ರೀ ವಾಮನಪುರಾಣದ ಸರೋಮಾಹಾತ್ಮ್ಯವೆಂಬ
ನಲವತ್ತೊಂದನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿಯೂ ತೀರ್ಥಮಾಹಾತ್ಮ್ಯವನ್ನೇ ಮುಂದುವರಿಸಿರುತ್ತಾರೆ.

॥ ಶ್ರೀಃ ॥

ಶ್ರೀವಾಮನಪುರಾಣಂ

ದ್ವಿಚತ್ವಾರಿಂಶೋಽಧ್ಯಾಯಃ

ಋಷಯ ಊಚುಃ

ಕಾಮ್ಯಕಸ್ಯ ತು ಪೂರ್ವೇಣ ಕುಜಂ ದೇವೈರ್ನಿಷೇವಿತಂ ।
ತಸ್ಯ ತೀರ್ಥಸ್ಯ ಸಂಭೂತಿಂ ವಿಸ್ತರೇಣ ಬ್ರವೀತುನಃ ॥ ೧ ॥

ಲೋಮಹರ್ಷಣ ಉವಾಚ

ಶೃಣ್ವಂತು ಮುನಯಸ್ಸರ್ವೇ ತೀರ್ಥಮಾಹಾತ್ಮ್ಯಮುತ್ತಮಂ ।
ಋಷೀಣಾಂ ಚರಿತಂ ಶ್ರುತ್ವಾ ಮುಕ್ತೋ ಭವತಿ ಕಿಲ್ಬಿಷೈಃ ॥ ೨ ॥

ನೈಮಿಷೇಯಾಶ್ಚ ಋಷಯಃ ಕುರುಕ್ಷೇತ್ರಂ ಸಮಾಗತಾಃ ।
ಸರಸ್ವತ್ಯಾಂ ಚ ಸ್ನಾನಾರ್ಥಂ ಪ್ರವೇಶಂ ನಚ ಲೇಭಿರೆ ॥ ೩ ॥

ತತಸ್ತು ಕಲ್ಪಯಾಮಾಸುಸ್ತೀರ್ಥಂ ಯಜ್ಞೋಪವೀತಿನಂ ।
ಶೇಷಾಸ್ತು ಮುನಯಸ್ತತ್ರ ನ ಪ್ರವೇಶಂ ಹಿ ಲೇಭಿರೆ ॥ ೪ ॥

ನಲವತ್ತೆರಡನೆಯ ಅಧ್ಯಾಯವು

೧-೪. ಋಷಿಗಳು ಪುನಃ ಕಾಮ್ಯಕಕ್ಕೆ ಪೂರ್ವಭಾಗದಲ್ಲಿ ದೇವತಾಸೇವ್ಯವಾಗಿರುವ ಕುಂಜವೆಂಬ ತೀರ್ಥವಿದೆಯಷ್ಟೆ. ಅದರ ಉತ್ಪತ್ತಿಯು ಹೇಗೆ ಉಂಟಾಯಿತೆಂಬುವುದನ್ನು ಹೇಳಬೇಕು ಎಂದು ಪ್ರಶ್ನೆಮಾಡಲಾಗಿ ಲೋಮಹರ್ಷಣರು ಹೇಳುತ್ತಾರೆ. ಎಲೈ ಮುನಿಗಳಿರಾ, ಈ ತೀರ್ಥಗಳ ಮಾಹಾತ್ಮ್ಯವನ್ನು ಎಲ್ಲರೂ ಕೇಳಿರಿ. ಈ ಋಷಿಗಳ ಚರಿತ್ರೆಯನ್ನು ಕೇಳುವವರೂ ಪಾಪಗಳಿಂದ ದೂರರಾಗುತ್ತಾರೆ. ಒಂದಾನೊಂದು ಕಾಲದಲ್ಲಿ ನೈಮಿಷಕ್ಷೇತ್ರದಲ್ಲಿದ್ದ ಋಷಿಗಳು ಕುರುಕ್ಷೇತ್ರಕ್ಕೆ ಯಾತ್ರಾಭಿಲಾಷೆಯಿಂದ ಬಂದರು. ಅವರು ಸರಸ್ವತೀನದಿಯಲ್ಲಿ ಸ್ನಾನಮಾಡಲು ಅವಕಾಶ ಸಿಕ್ಕಲಿಲ್ಲ. ಅದಕ್ಕಾಗಿ ಅಲ್ಲಿ ಯಜ್ಞೋಪವೀತಿ ಎಂಬ ತೀರ್ಥವನ್ನು ಕಲ್ಪಿಸಿದರು. ಆದರೆ ಎಲ್ಲಾ ಮುನಿಗಳಿಗೂ ಅಲ್ಲಿ ಪ್ರವೇಶ ದೊರಕಲಿಲ್ಲ.

ರಂತುಕಾಸ್ಯಾಶ್ರಮಾದ್ಯಾವತ್ತಾವತ್ತೀರ್ಥಂ ಚ ಚಕ್ರಕಂ ।
ಬ್ರಾಹ್ಮಣೈಃ ಪರಿಪೂರ್ಣಂ ತು ದೃಷ್ಟ್ವಾ ದೇವೀ ಸರಸ್ವತೀ ॥ ೫ ॥

ಹಿತಾರ್ಥಂ ಸರ್ವವಿಪ್ರಾಣಾಂ ಕೃತ್ವಾ ಕುಂಡಾನಿ ಸಾ ನದೀ ।
ಪ್ರಯಾತಾ ಪಶ್ಚಿಮಂ ಮಾರ್ಗಂ ಸರ್ವಭೂತಹಿತೇ ಸ್ಥಿತಾ ॥ ೬ ॥

ಪೂರ್ವಪ್ರವಾಹೇ ಯಃ ಸ್ನಾತಿ ಗಂಗಾಸ್ನಾನಫಲಂ ಲಭೇತ್ ।
ಪ್ರವಾಹೇ ದಕ್ಷಿಣೇ ತಸ್ಯಾ ನರ್ಮದಾ ಸರಿತಾಂ ವರಾ ॥ ೭ ॥

ಪಶ್ಚಿಮೇ ತು ದಿಶಾಭಾಗೇ ಯಮುನಾಚಾಶ್ರಿತಾ ನದೀ ।
ಯದಾಹ್ಯುತ್ತರತೋ ಯಾತಿ ಸಿಂಧುರ್ಭವತಿ ಸಾ ನದೀ ॥ ೮ ॥

ಏವಂ ದಿಶಾಪ್ರವಾಹೇಣ ಹ್ಯತಿಪುಣ್ಯಾ ಸರಸ್ವತೀ ।
ತಸ್ಯಾಂ ಸ್ನಾತಃ ಸರ್ವತೀರ್ಥೇ ಸ್ನಾತೋ ಭವತಿ ಮಾನವಃ ॥ ೯ ॥

ತತೋ ಗಚ್ಛೇದ್ದ್ವಿಜಶ್ರೇಷ್ಠಾ ಮದನಸ್ಯ ಮಹಾತ್ಮನಃ ।
ತೀರ್ಥಂ ತ್ರೈಲೋಕ್ಯವಿಖ್ಯಾತಂ ವಿಹಾರಂ ನಾಮ ನಾಮತಃ ॥ ೧೦ ॥

೫-೭. ರಂತುಕರ ಆಶ್ರಮ ಮೊದಲುಗೊಂಡು ಇರುವ ಎಲ್ಲಾ ಪ್ರದೇಶದಲ್ಲೂ ಚಕ್ರಕವೆಂಬ ತೀರ್ಥ. ಆ ಭಾಗವೆಲ್ಲವೂ ಬ್ರಾಹ್ಮಣರಿಂದಲೇ ತುಂಬಿದುದನ್ನು ನೋಡಿ ಸರಸ್ವತೀದೇವಿಯು ಎಲ್ಲಾ ಬ್ರಾಹ್ಮಣರ ಹಿತಕ್ಕಾಗಿ ಅಲ್ಲಲ್ಲಿ ಕುಂಡಗಳನ್ನು ಏರ್ಪಡಿಸಿ ಪಶ್ಚಿಮಾಭಿಮುಖಳಾಗಿ ಹರಿದಳು. ಆ ನದಿಯ ಪೂರ್ವಭಾಗದ ಪ್ರವಾಹದಲ್ಲಿ ಸ್ನಾನ ಮಾಡಿದವನು ಗಂಗಾಸ್ನಾನದ ಫಲವನ್ನು ಹೊಂದುತ್ತಾನೆ. ದಕ್ಷಿಣಭಾಗದ ಪ್ರವಾಹ ವಿರುವಕಡೆಯಲ್ಲಿ ನರ್ಮದಾ ಎಂಬ ಮಹಾನದಿ ಇದೆ.

೮-೧೦. ಪಶ್ಚಿಮದಿಕ್ಕಿನಲ್ಲಿ ಯಮುನಾನದಿಯು ಇದನ್ನು ಆಶ್ರಯಿಸಿದೆ. ಉತ್ತರಕ್ಕೆ ಹೋದರೆ ಅದೇ ಸಿಂಧೂನದಿಯಾಗುತ್ತದೆ. ಈರೀತಿ ನಾಲ್ಕು ದಿಕ್ಕಿನಲ್ಲೂ ನಾಲ್ಕು ಮಹಾನದಿಯ ರೂಪವನ್ನು ತಾಳಿರುವ ಆ ಸರಸ್ವತಿಯು ಬಹಳ ಪುಣ್ಯಕರ ಳಾಗಿರುವಳು. ಅಲ್ಲಿ ಸ್ನಾನಮಾಡಿದವನು ಸರ್ವ ತೀರ್ಥದಲ್ಲೂ ಸ್ನಾನಮಾಡಿದಂತೆಯೆ ಅನಂತರ ಅಲ್ಲಿಂದ ವಿಹಾರವೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಮನ್ಮಥನ ತೀರ್ಥಕ್ಕೆ ಹೋಗಬೇಕು.

ಯತ್ರ ದೇವಾಸ್ಸಮಾಗಮ್ಯ ಶಿವದರ್ಶನಕಾಂಕ್ಷಿಣಃ ।
ಸಮಾಗತಾ ನಚಾಪಶ್ಯನ್ ದೇವಂ ದೇವ್ಯಾಸಮನ್ವಿತಂ ॥ ೧೧ ॥

ತೈಸ್ತುವಂತ ಮಹಾದೇವಂ ನಂದಿನಂ ಗಣನಾಯಕಂ ।
ತತಃ ಪ್ರಸನ್ನೋ ನಂದೀಶಃ ಕಥಯಾಮಾಸ ಚೇಷ್ಟಿತಂ ॥ ೧೨ ॥

ಭವಸ್ಯ ಉಮಯಾ ಸರ್ವವಿಹಾರೆ ಕ್ರೀಡಿತಂ ಮಹತ್ ।
ತಚ್ಛ್ರುತ್ವಾ ದೇವತಾಸ್ಸರ್ವಾ ಪತ್ನೀಮಾಹೂಯ ತೇ ಗತಾಃ ॥ ೧೩ ॥

ತೇಷಾಂ ಕ್ರೀಡಾವಿನೋದೇನ ತುಷ್ಟಃ ಪ್ರೋವಾಚ ಶಂಕರಃ ।
ಯೋಽಸ್ಮಿಂಸ್ತೀರ್ಥೆ ನರಃ ಸ್ನಾತಿ ವಿಹಾರೆ ಶ್ರದ್ಧಯಾನ್ವಿತಃ ॥ ೧೪ ॥

ಧನಧಾನ್ಯಪ್ರಿಯೈರ್ಯುಕ್ತಃ ಜಾಯತೆ ನಾತ್ರ ಸಂಶಯಃ ।
ದುರ್ಗಾತೀರ್ಥಂ ತತೋ ಗಚ್ಛೇದ್ದುರ್ಗಯಾ ಸೇವಿತಂ ಮಹತ್ ॥ ೧೫ ॥

ಯತ್ರ ಸ್ನಾತ್ವಾ ಪಿತೄನ್ ಪೂಜ್ಯ ನ ದುರ್ಗತಿಮವಾಪ್ನುಯಾತ್ ।
ತತ್ರಾಪಿ ಚ ಸರಸ್ವತ್ಯಾಃ ಕೂಲಂ ತ್ರೈಲೋಕ್ಯವಿಶ್ರುತಂ ॥ ೧೬ ॥

೧೧-೧೪. ಆ ಮನ್ಮಥನ ವಿಹಾರಕ್ಷೇತ್ರದಲ್ಲಿ ದೇವತೆಗಳು ಶಂಕರನನ್ನು ನೋಡಲು ಹೋಗಿದ್ದಾಗ ಪಾರ್ವತೀಸಮೇತನಾದ ಆ ಶಿವನನ್ನು ನೋಡಲಾಗಲಿಲ್ಲ. ಆಗ ದೇವತೆಗಳು ಮಹಾದೇವನನ್ನೂ ಗಣಾಧಿಪತಿಯಾದ ನಂದಿಯನ್ನೂ ಸ್ತೋತ್ರ ಮಾಡಿದರು. ಆಗ ಪ್ರಸನ್ನನಾದ ನಂದೀಶ್ವರನು ಶಂಕರನಿಗೆ ಪಾರ್ವತಿಯೊಡನೆ ಉಂಟಾಗಿರುವ ಮಹಾವಿಹಾರವೇ ಇದಕ್ಕೆ ಕಾರಣವೆಂದು ಹೇಳಿದನು. ಅದನ್ನು ಕೇಳಿ ದೇವತೆಗಳು ಪತ್ನಿಯರೊಡನೆ ಅಲ್ಲಿಗೇ ವಿಹರಿಸಲು ಹೊರಟರು. ದೇವತೆಗಳ ಆ ಕ್ರೀಡೆಯಿಂದ ಸಂತುಷ್ಟನಾದ ಶಂಕರನು ಈ ವಿಹಾರತೀರ್ಥದಲ್ಲಿ ಯಾರು ಶ್ರದ್ಧೆಯಿಂದ ಸ್ನಾನಮಾಡುತ್ತಾರೆಯೋ ಅವರು ಧನಧಾನ್ಯವೇ ಮೊದಲಾದ ಇಷ್ಟವಸ್ತುವನ್ನು ಹೊಂದುತ್ತಾರೆ. ಇದರಲ್ಲಿ ಸಂಶಯವಿಲ್ಲ ಎಂದನು.

೧೫-೧೮. ಅನಂತರ ದುರ್ಗಾದೇವಿಯಿಂದಲೇ ಸೇವಿಸಲ್ಪಟ್ಟ ದುರ್ಗಾತೀರ್ಥಕ್ಕೆ ಹೋಗಬೇಕು. ಅಲ್ಲಿ ಸ್ನಾನಮಾಡಿ ಪಿತೃಗಳನ್ನು ಪೂಜಿಸಿದಲ್ಲಿ ಅವನಿಗೆ ದುರ್ಗತಿಯೇ ಉಂಟಾಗುವುದಿಲ್ಲ. ಅಲ್ಲಿಯೇ ಸರಸ್ವತಿಯ ಪ್ರಖ್ಯಾತವಾದ ತೀರವಿದೆ. ಅದರ ದರ್ಶನಮಾತ್ರವೂ ಸರ್ವಪಾಪನಾಶಕವಾಗಿ ಮೋಕ್ಷವನ್ನುಂಟುಮಾಡುತ್ತದೆ. ಅಲ್ಲಿ

ದರ್ಶನಾನ್ಮುಕ್ತಿಮಾಪ್ನೋತಿ ಸರ್ವಪಾತಕವರ್ಜಿತಃ ।
ಯತ್ರತತ್ರ ತರ್ಪಯೇದ್ದೇವಾನ್ಪಿತೄಂಶ್ಚ ಶ್ರದ್ಧಯಾ ನರಃ ॥ ೧೭ ॥

ಅಕ್ಷಯ್ಯಂ ಲಭತೆ ಸರ್ವಂ ಪಿತೃತೀರ್ಥಂ ವಿಶಿಷ್ಯತೆ ।
ಮಾತೃಹಾ ಪಿತೃಹಾ ಯಶ್ಚ ಬ್ರಹ್ಮಹಾ ಗುರುತಲ್ಪಗಃ ॥ ೧೮ ॥

ಸ್ನಾತ್ವಾ ಶುದ್ಧಿಮವಾಪ್ನೋತಿ ಯತ್ರ ಪ್ರಾಚೀ ಸರಸ್ವತೀ ।
ದೇವಮಾರ್ಗಂ ಪ್ರತಿಷ್ಠಾಯ ದೇವಮಾರ್ಗೇಣ ನಿಃಸೃತಾ ॥ ೧೯ ॥

ಪ್ರಾಚೀ ಸರಸ್ವತೀ ಪುಣ್ಯಾ ಅಪಿ ದುಷ್ಕೃತ ಕರ್ಮಣಾಂ ।
ತ್ರಿರಾತ್ರಂ ಯೇ ಕರಿಷ್ಯಂತಿ ಪ್ರಾಚೀಂ ಪ್ರಾಪ್ಯ ಸರಸ್ವತೀಂ ॥ ೨೦ ॥

ತೇಷಾಂ ನ ದುಷ್ಕೃತಂ ಕಿಂಚಿದ್ದೇಹಮಾಶ್ರಿತ್ಯ ತಿಷ್ಠತಿ ।
ನರನಾರಾಯಣೌ ದೇವೌ ಬ್ರಹಾ ಸ್ಥಾಣುಸ್ತಥಾ ಋಷಿಃ ॥ ೨೧ ॥

ಪ್ರಾಚೀಂ ದಿಶಂ ನಿಷೇವಂತಃ ಸದಾ ದೇವಾಃ ಸವಾಸವಾಃ ।
ಯೇ ತು ಶ್ರಾದ್ಧಂ ಕರಿಷ್ಯಂತಿ ಪ್ರಾಚೀಮಾಶ್ರಿತ್ಯ ಮಾನವಾಃ ॥ ೨೨ ॥

ಸ್ನಾನಮಾಡಿ ದೇವತೆಗಳನ್ನೂ ಪಿತೃಗಳನ್ನೂ ಯಾವನು ತೃಪ್ತಿಪಡಿಸುತ್ತಾನೋ ಅವನಿಗೆ ಅಕ್ಷಯ್ಯವಾದ ಫಲವು ಲಭಿಸುತ್ತದೆ. ಅಲ್ಲಿ ಮಾಡಿದ ಪಿತೃಕರ್ಮವು ಬಹಳ ವಿಶೇಷವುಳ್ಳದ್ದು. ಅಲ್ಲಿ ತಾಯಿಯನ್ನು ಕೊಂದವನೂ ತಂದೆಯನ್ನು ಕೊಂದವನೂ ಬ್ರಹ್ಮಹತ್ಯೆಯನ್ನು ಮಾಡಿದವನೂ ಗುರುಕಳತ್ರವನ್ನು ಸೇವಿಸಿದವನೂ ಇಂತಹ ಮಹಾಪಾತಕಮಾಡಿದವರೂ ಸಹ ಸ್ನಾನದಿಂದ ಶುದ್ಧಿಹೊಂದುತ್ತಾರೆ.

೧೯-೨೨. ಯಾವ ಆ ಕ್ಷೇತ್ರದಲ್ಲಿ ಪೂರ್ವಭಾಗದ ಸರಸ್ವತೀನದಿಯು ದೇವ ಮಾರ್ಗವನ್ನಾಶ್ರಯಿಸಿ ಆ ದೇವಮಾರ್ಗದಿಂದಲೇ ಹೊರಗೆ ಹೊರಡುತ್ತದೆಯೋ ಆ ಸರಸ್ವತಿಯ ಭಾಗವು ದುಷ್ಕರ್ಮದಿಂದ ದೂಷಿತರಾದವರಿಗೂ ಬಹಳ ಪುಣ್ಯಕರ ವಾದದ್ದು. ಅಂತಹ ಪೂರ್ವಭಾಗದ ಸರಸ್ವತೀತೀರದಲ್ಲಿ ಯಾರು ಮೂರು ರಾತ್ರಿ ವಾಸವಾಗಿರುತ್ತಾರೆಯೋ ಅವರಿಗೆ ಯಾವ ದುಷ್ಕರ್ಮವೂ ಅಂಟುವುದಿಲ್ಲ. ಆ ಸರಸ್ವತಿಯ ಭಾಗವನ್ನು ನರನಾರಾಯಣರೂ ಬ್ರಹ್ಮನೂ ರುದ್ರನೂ ಋಷಿಗಳೂ ಇಂದ್ರನೊಡಗೂಡಿದ ದೇವತಗಳೂ ಸಹ ಯಾವಾಗಲೂ ಆಶ್ರಯಿಸಿರುವರು. ಆ ತೀರ್ಥದಲ್ಲಿ ಯಾರು ಶ್ರಾದ್ಧವನ್ನು ಮಾಡುತ್ತಾರೆಯೋ ಅವರಿಗೆ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ದುರ್ಲಭವಾದುದೊಂದೂ ಇರುವದಿಲ್ಲ.

ತೇಷಾಂ ನ ದುರ್ಲಭಂ ಕಿಂಚಿದಿಹ ಲೋಕೇ ಪರತ್ರ ಚ ।
ತಸ್ಮಾತ್ಪ್ರಾಚೀ ಸದಾ ಸೇವ್ಯಾ ಪಂಚಮ್ಯಾಂ ಚ ವಿಶೇಷತಃ ॥ ೨೩ ॥

ಪಂಚಮ್ಯಾಂ ಸೇವಮಾನಸ್ತು ಲಕ್ಷ್ಮೀವಾಂಶ್ಚ ಭವೇನ್ನರಃ ।
ತೀರ್ಥಮೌಶನಸಂ ತತ್ರ ತ್ರೈಲೋಕ್ಯಸ್ಯಾಪಿ ದುರ್ಲಭಂ ॥ ೨೪ ॥

ಉಶನಾ ಯತ್ರ ಸಂಸಿದ್ಧ ಆರಾಧ್ಯ ಪರಮೇಶ್ವರಂ ।
ಗ್ರಹಮಧ್ಯೇಷೂಚ್ಯತೇ ಸ ತಸ್ಯ ತೀರ್ಥಸ್ಯ ಸೇವನಾತ್ ॥ ೨೫ ॥

ಏವಂ ಶುಕ್ರೇಣ ಮುನಿನಾ ಸೇವಿತಂ ತೀರ್ಥಮುತ್ತಮಂ ।
ಯೇ ಸೇವಂತೇ ಶ್ರದ್ಧಧಾನಾಃ ತೇ ಯಾಂತಿ ಪರಮಾಂ ಗತಿಂ ॥ ೨೬ ॥

ಯಸ್ತು ಶ್ರಾದ್ಧಂ ನರೋ ಭಕ್ತ್ಯಾ ತಸ್ಮಿಂಸ್ತೀರ್ಥೇ ಕರಿಷ್ಯತಿ ।
ಪಿತರಸ್ತಾರಿತಾ ಸ್ತೇನ ಭವಿಷ್ಯಂತಿ ನ ಸಂಶಯಃ ॥ ೨೭ ॥

ಚತುರ್ಮುಖಂ ಬ್ರಹ್ಮತೀರ್ಥಂ ಯತ್ರ ಮರ್ಯಾದಯಾ ಸ್ಥಿತಂ ।
ಯೇ ಸೇವಂತೇ ಚತುರ್ದಶ್ಯಾಂ ಸೋಪವಾಸಾ ವಸಂತಿ ಚ ॥ ೨೮ ॥

೨೩-೨೬. ಆದುದರಿಂದ ಸರಸ್ವತಿಯ ಆ ಪೂರ್ವಭಾಗವೂ ಯಾವಾಗಲೂ ಸೇವಿಸಲ್ಪಡತಕ್ಕದ್ದು. ಅದರಲ್ಲೂ ಪಂಚಮಿಯ ದಿನ ಅದನ್ನು ಸೇವಿಸಿದಲ್ಲಿ ಅವನು ಐಶ್ವರ್ಯವಂತನೇ ಆಗುತ್ತಾನೆ. ಅಲ್ಲಿಯೇ ಔಶನಸವೆಂಬ ಲೋಕಪ್ರಸಿದ್ಧವಾದ ತೀರ್ಥವಿದೆ. ಅಲ್ಲಿಯೇ ಶುಕ್ರನು ಪರಮೇಶ್ವರಾರಾಧನದಿಂದ ಸಿದ್ಧನಾದನು. ಹಾಗೂ ಆ ತೀರ್ಥದ ಸೇವನದಿಂದ ಗ್ರಹಗಳ ಮಧ್ಯದಲ್ಲಿ ತಾನೂ ಗಣನೆಗೆ ಅರ್ಹನಾದನು. ಹೀಗೆ ಶುಕ್ರನಿಂದ ಸೇವಿಸಲ್ಪಟ್ಟ ಆ ತೀರ್ಥವನ್ನು ಯಾರು ಶ್ರದ್ಧೆಯಿಂದ ಸೇವಿಸುತ್ತಾರೆಯೋ ಅವರು ಪರಮಪದಗಾಮಿಗಳಾಗುತ್ತಾರೆ.

೨೭-೩೦. ಆ ತೀರ್ಥದಲ್ಲಿ ಯಾರು ಭಕ್ತಿಯಿಂದ ಶ್ರಾದ್ಧಮಾಡುತ್ತಾರೆಯೋ ಅವರು ತಮ್ಮ ಪಿತೃಗಳನ್ನು ಉತ್ತಾರಣೆಮಾಡಿಯೇ ಮಾಡುವರು. ಇದರಲ್ಲಿ ಸಂಶಯವಿಲ್ಲ. ಚತುರ್ಮುಖವೆಂಬ ಬ್ರಹ್ಮತೀರ್ಥವೂ ಅದರ ಎಲ್ಲೆಯಲ್ಲಿಯೇ ಸಂಬಂಧಿಸಿಕೊಂಡಿದೆ. ಚೈತ್ರಮಾಸದ ಕೃಷ್ಣಾಷ್ಟಮಿಯ ದಿನ ಯಾರು ಆ ತೀರ್ಥವನ್ನು ಸೇವಿ

ಅಷ್ಟಮ್ಯಾಂ ಕೃಷ್ಣಪಕ್ಷಸ್ಯ ಚೈತ್ರೇ ಮಾಸಿ ದ್ವಿಜೋತ್ತಮಾಃ ।
ತೇ ಪಶ್ಯಂತಿ ಪರಂ ಸೂಕ್ಷ್ಮಂ ಯಸ್ಮಾನ್ನಾವರ್ತನಂ ಪುನಃ ॥ ೨೯ ॥

ಸ್ಥಾಣುತೀರ್ಥಂ ತತೋ ಗಚ್ಛೇತ್ಸಹಸ್ರಲಿಂಗಶೋಭಿತಂ ।
ತತ್ರ ಸ್ಥಾಣುವಟಂ ದೃಷ್ಟ್ವಾ ಮುಕ್ತೋ ಭವತಿ ಕಿಲ್ಬಿಷೈಃ ॥ ೩೦ ॥

ಇತಿ ಶ್ರೀ ವಾಮನಪುರಾಣೇ ಸರೋಮಾಹಾತ್ಮ್ಯೇ
ದ್ವಿಚತ್ವಾರಿಂಶೋಽಧ್ಯಾಯಃ

ಸುತ್ತಾರೆಯೋ ಚತುರ್ದಶಿಯಲ್ಲಿ ಉಪವಾಸದಿಂದ ಅಲ್ಲಿ ವಾಸಮಾಡುತ್ತಾರೆಯೋ ಅಂತಹ ಪುಣ್ಯಶಾಲಿಗಳು ಅತಿ ಸೂಕ್ಷ್ಮವಾಗಿರುವ ಪರಬ್ರಹ್ಮವನ್ನೇ ಪ್ರತ್ಯಕ್ಷೀಕರಿಸುತ್ತಾರೆ. ಮುಕ್ತರಾದ ಅವರಿಗೆ ಪುನರಾವೃತ್ತಿಯೇ ಇರುವುದಿಲ್ಲ. ಅನಂತರ ಸ್ಥಾಣುತೀರ್ಥವೆಂಬ ಸಹಸ್ರಲಿಂಗಗಳಿಂದ ಕೂಡಿರುವ ಕ್ಷೇತ್ರಕ್ಕೆ ಹೋಗಬೇಕು. ಅಲ್ಲಿರುವ ಸ್ಥಾಣುವಟದ ದರ್ಶನದಿಂದ ಪಾಪಮೋಕ್ಷವನ್ನು ಹೊಂದುತ್ತಾನೆ.

ಇಲ್ಲಿಗೆ ಶ್ರೀ ವಾಮನಪುರಾಣದ ಸರೋಮಾಹಾತ್ಮ್ಯವೆಂಬ
ನಲವತ್ತೆರಡನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿಯೂ ತೀರ್ಥಮಾಹಾತ್ಮ್ಯವನ್ನೇ ಮುಂದುವರಿಸಿದ್ದಾರೆ.

॥ ಶ್ರೀಃ ॥

ಶ್ರೀವಾಮನಪುರಾಣಂ

ತ್ರಿಚತ್ವಾರಿಂಶೋಽಧ್ಯಾಯಃ

ಋಷಯ ಊಚುಃ

ಸ್ಥಾಣುತೀರ್ಥಸ್ಯ ಮಾಹಾತ್ಮ್ಯಂ ವಟಸ್ಯಾಪಿ ಮಹಾಮುನೇ ।
ಸನ್ನಿಹತ್ಯಾಃ ಪುರೋತ್ಪತ್ತಿಂ ಪೂರಣಂ ಪಾಂಸುನಾ ತತಃ ॥ ೧ ॥

ಲಿಂಗಾನಾಂ ದರ್ಶನಾತ್ಪುಣ್ಯಂ ಸ್ಪರ್ಶನೇನ ಚ ಕಿಂಫಲಂ
ತಥೈವ ಸರಮಾಹಾತ್ಮ್ಯಂ ಬ್ರೂಹಿ ಸರ್ವಮಶೇಷತಃ ॥ ೨ ॥

ಲೋಮಹರ್ಷಣ ಉವಾಚ

ಶೃಣ್ವಂತು ದೇವತಾಃ ಸರ್ವಾಃ ಪುರಾಣಂ ವಾಮನಂ ಮಹತ್ ।
ಯಚ್ಛ್ರುತ್ವಾ ಮುಕ್ತಿಮಾಪ್ನೋತಿ ಪ್ರಸಾದಾದ್ವಾಮನಸ್ಯ ತು ॥ ೩ ॥

ನಲವತ್ತಮೂರನೆಯ ಅಧ್ಯಾಯವು

೧-೩. ಪುನಃ ಆ ಋಷಿಗಳು, ಸ್ಥಾಣುತೀರ್ಥದ ಮತ್ತು ಸ್ಥಾಣುವಟದ ಮಾಹಾತ್ಮ್ಯವನ್ನೂ ಸನ್ನಿಹತಿ ಎಂಬ ಕ್ಷೇತ್ರದ ಉತ್ಪತ್ತಿಯನ್ನೂ ಧೂಳಿಗಳಿಂದ ಅದರ ಪೂರಣವನ್ನೂ ಲಿಂಗಗಳ ದರ್ಶನದಿಂದಲೂ ಸ್ಪರ್ಶನದಿಂದಲೂ ಉಂಟಾಗುವ ಪುಣ್ಯ ವಿಶೇಷವನ್ನೂ ಸರಸ್ಸಿನ ಮಾಹಾತ್ಮ್ಯವನ್ನೂ ಹೇಳಬೇಕೆಂದು ಪ್ರಶ್ನೆಮಾಡಲಾಗಿ ಲೋಮಹರ್ಷಣರು ಹೇಳುತ್ತಾರೆ. ಎಲ್ಲಾ ದೇವತೆಗಳೂ ಈ ವಾಮನ ಮಹಾ ಪುರಾಣವನ್ನು ಕೇಳಲಿ. ಇದನ್ನು ಕೇಳಿದವರು ಕೇಳಿದೊಡನೆಯೇ ಆ ವಾಮನನ ಅನುಗ್ರಹದಿಂದ ಮುಕ್ತಿಹೊಂದುತ್ತಾರೆ.

ಸನತ್ಕುಮಾರಮಾಸೀನಂ ಸ್ಥಾಣೋರ್ವಟಸಮೀಪತಃ ।
ಋಷಿಭಿರ್ವಾಲಖಿಲ್ಯಾದ್ಯೈಃ ಬ್ರಹ್ಮಪುತ್ರೈರ್ಮಹಾತ್ಮಭಿಃ ॥ ೪ ॥

ಮಾರ್ಕಂಡೇಯೋ ಮುನಿಸ್ತತ್ರ ವಿನಯೇನಾಭಿಗಮ್ಯ ಚ ।
ಪಪ್ರಚ್ಛ ಸರಮಾಹಾತ್ಮ್ಯಂ ಪ್ರಮಾಣಂ ಚ ಸ್ಥಿತಂ ತಥಾ ॥ ೫ ॥

ಮಾರ್ಕಂಡೇಯ ಉವಾಚ

ಬ್ರಹ್ಮಪುತ್ರ ಮಹಾಭಾಗ ಸರ್ವಶಾಸ್ತ್ರವಿಶಾರದ ।
ಬ್ರೂಹಿ ಮೆ ಸರಮಾಹಾತ್ಮ್ಯಂ ಸರ್ವಪಾಪಭಯಾಪಹಂ ॥ ೬ ॥

ಕಾನಿ ತೀರ್ಥಾನಿ ದೃಶ್ಯಾನಿ ಗುಹ್ಯಾನಿ ದ್ವಿಜಸತ್ತಮ ।
ಲಿಂಗಾನಿ ಕತಿ ಪುಣ್ಯಾನಿ ಸ್ಥಾಣೋರ್ಯಾನಿ ಸಮೀಪತಃ ॥ ೭ ॥

ಯೇಷಾಂ ದರ್ಶನಮಾತ್ರೇಣ ಮುಕ್ತಿಮಾಪ್ನೋತಿ ಮಾನವಃ ।
ವಟಸ್ಯ ದರ್ಶನಂ ಪುಣ್ಯಮುತ್ಪತ್ತಿಂ ಕಥಯಸ್ವ ಮೆ । ॥ ೮ ॥

ಪ್ರದಕ್ಷಿಣಾಯಾಂ ಯತ್ಪುಣ್ಯಂ ತೀರ್ಥಸ್ನಾನೇಸ ಯತ್ಫಲಂ ।
ಗುಹ್ಯೇಷು ದೇವದೃಷ್ಟೇಷು ಯತ್ಪುಣ್ಯಮಭಿಜಾಯತೆ ॥ ೯ ॥

೪-೭. ಸ್ಥಾಣುವಟದ ಸಮೀಪದಲ್ಲಿ ಬ್ರಹ್ಮಮಾನಸಪುತ್ರರಾದ ವಾಲಖಿಲ್ಯಾದಿ ಋಷಿಗಳೊಡನೆ ಕುಳಿತಿರುವ ಸನತ್ಕುಮಾರರನ್ನು ನೋಡಿ ಮಾರ್ಕಂಡೇಯ ಮುನಿಯು ವಿನಯದಿಂದ ಅಭಿವಾದನಾದಿ ಸತ್ಕಾರಗಳನ್ನು ಮಾಡಿ ಸರೋಮಾಹಾತ್ಮ್ಯವನ್ನೂ ಅದರ ಪ್ರಮಾಣವನ್ನೂ ಕುರಿತು ಹೀಗೆ ಪ್ರಶ್ನೆ ಮಾಡುತ್ತಾನೆ. ಎಲೈ, ಬ್ರಹ್ಮಪುತ್ರನೇ, ಭಾಗ್ಯಶಾಲಿಯೇ ಸರ್ವಶಾಸ್ತ್ರವಿಶಾರದನೇ ಸರ್ವಪಾಪನಾಶಕವಾದ ಸರೋಮಾಹಾತ್ಮ್ಯ ವನ್ನು ದಯವಿಟ್ಟು ಹೇಳು, ನಾವು ನೋಡತಕ್ಕ ರಹಸ್ಯವಾದ ತೀರ್ಥಗಳಾವುವು, ಸ್ಥಾಣುವಟದ ಸಮೀಪದಲ್ಲಿರುವ ಲಿಂಗಗಳಲ್ಲಿ ಪುಣ್ಯಕರವಾದ ಲಿಂಗಗಳೆಷ್ಟು ಮತ್ತು,

೮-೧೦. ಅಂತಹ ಯಾವ ಲಿಂಗಗಳ ದರ್ಶನದಿಂದ ಮುಕ್ತಿಯನ್ನೇ ಹೊಂದ ಬಹುದೋ ಅವುಗಳನ್ನೂ ಮತ್ತು ಅಲ್ಲಿರುವ ಸ್ಥಾಣುವಟದ ದರ್ಶನದಿಂದುಂಟಾಗುವ ಪುಣ್ಯವನ್ನೂ ಮತ್ತು ಆ ವಟದ ಉತ್ಪತ್ತಿಯನ್ನೂ ಸಹ ಹೇಳಬೇಕು. ತೀರ್ಥಗಳ ಪ್ರದಕ್ಷಿಣದಿಂದಲೂ ಸ್ನಾನದಿಂದಲೂ ಉಂಟಾಗುವ ಪುಣ್ಯದಲ್ಲಿ ವಿಶೇಷವೇನು ರಹಸ್ಯ,

ದೇವದೇವೋ ಯಥಾ ಸ್ಥಾಣುಃ ಸರಮಧ್ಯೆ ವ್ಯವಸ್ಥಿತಃ ।
ಕಿಮರ್ಥಂ ಪಾಂಸುನಾ ಶಕ್ರಸ್ತೀರ್ಥಂ ಪೂರಿತವಾನ್ಪುನಃ ॥ ೧೦ ॥

ಸ್ಥಾಣುತೀರ್ಥಸ್ಯ ಮಾಹಾತ್ಮ್ಯಂ ಚಕ್ರತೀರ್ಥಸ್ಯ ಯತ್ಫಲಂ ।
ಸೂರ್ಯತೀರ್ಥಸ್ಯ ಮಾಹಾತ್ಮ್ಯಂ ಸೋಮತೀರ್ಥಸ್ಯ ಬ್ರೂಹಿ ಮೆ ॥ ೧೧ ॥

ಶಂಕರಸ್ಯ ಚ ಗುಪ್ತಾನಿ ವಿಷ್ಣೋಃ ಸ್ಥಾನಾನಿ ಯಾನಿ ಚ ।
ಕಥಯಸ್ವ ಮಹಾಭಾಗ ಸರಸ್ವತ್ಯಾಸ್ಸವಿಸ್ತರಂ ॥ ೧೨ ॥

ತ್ವಂ ದೇಹೀಚಾಪಿ ದೇವಸ್ಯ ಮಾಹಾತ್ಮ್ಯಂ ವೇತ್ಸಿತತ್ವತಃ ।
ವಿರಂಚಸ್ಯ ಪ್ರಸಾದೇನ ವಿದಿತಂ ಸರ್ವಮೇವ ಚ ॥ ೧೩ ॥

ಲೋಮಹರ್ಷಣ ಉವಾಚ

ಮಾರ್ಕಂಡೇಯವಚಃ ಶ್ರುತ್ವಾ ಬ್ರಹ್ಮಾತ್ಮಾ ಸ ಮಹಾಮುನಿಃ ।
ಅತಿಭಕ್ತ್ಯಾ ತು ತೀರ್ಥಸ್ಯ ಪ್ರವಣೀಕೃತಮಾನಸಃ ॥ ೧೪ ॥

ವಾಗಿರುವ ಆ ಲಿಂಗಗಳ ದರ್ಶನದಿಂದ ಉಂಟಾಗುವ ಪುಣ್ಯವಾವುದು. ದೇವದೇವ ನಾದ ಸ್ಥಾಣುವು ಸರೋಮಧ್ಯವನ್ನು ಹೇಗೆ ಸೇರಿದನು. ಆ ತೀರ್ಥವನ್ನು ಇಂದ್ರನು ಏತಕ್ಕೆ ಧೂಳಿಯಿಂದ ಪುನಃ ಮುಚ್ಚಿದನು.

೧೧-೧೩. ಸ್ಥಾಣುತೀರ್ಥದ ಮಹಾತ್ಮ್ಯವನ್ನೂ ಚಕ್ರತೀರ್ಥದ ಫಲವನ್ನೂ ಸೂರ್ಯತೀರ್ಥದ ಮತ್ತು ಸೋಮತೀರ್ಥದ ಮಾಹಾತ್ಮ್ಯಫಲಗಳನ್ನೂ ಮತ್ತು ಸರಸ್ವತೀ ತೀರದಲ್ಲಿರುವ ಶಂಕರನ ಮತ್ತು ವಿಷ್ಣುವಿನ ಗುಪ್ತಸ್ಥಾನಗಳಾವುವು ಎಂಬುದನ್ನೂ ದಯವಿಟ್ಟು ಹೇಳಬೇಕು. ನೀನು ಚತುರ್ಮುಖನಿಂದ ಉದ್ಭವಿಸಿದ ಮೊದಲನೇ ಶರೀರಿಯಾದುದರಿಂದ ಆ ಬ್ರಹ್ಮನ ಅನುಗ್ರಹದಿಂದ ಎಲ್ಲವನ್ನೂ ತಿಳಿದಿರುವೆ.

೧೪-೧೫. ಈ ರೀತಿಯಾದ ಮಾರ್ಕಂಡೇಯನ ಪ್ರಶ್ನೆಯನ್ನು ಕೇಳಿ ಬ್ರಹ್ಮ ಮಾನಸಪುತ್ರನಾದುದರಿಂದ ಬ್ರಹ್ಮಸ್ವರೂಪನೇ ಆದ ಆ ಸನತ್ಕುಮಾರ ಮಹಾ ಮುನಿಯು ಆ ತೀರ್ಥದಲ್ಲಿ ಭಕ್ತಿಯುಳ್ಳವನಾದುದರಿಂದ ನಮ್ರವಾದ ಮನಸ್ಸುಳ್ಳವ

ಪರ್ಯಂಕಂ ಶಿಥಿಲೀಕೃತ್ಯ ನಮಸ್ಕೃತ್ಯ ಮಹೇಶ್ವರಂ।
ಕಥಯಾಮಾಸ ತತ್ಸರ್ವಂ ಯಚ್ಛ್ರುತಂ ಬ್ರಹ್ಮಣಃ ಪುರಾ ॥ ೧೫ ॥

ಸನತ್ಕುಮಾರ ಉವಾಚ

ನಮಸ್ಕೃತ್ವಾ ಮಹಾದೇವಮೀಶಾನಂ ವರದಂ ಶುಭಂ।
ಉತ್ಪತ್ತಿಂ ಚ ಪ್ರವಕ್ಷ್ಯಾಮಿ ತೀರ್ಥಾನಾಂ ಬ್ರಹ್ಮಭಾಷಿತಾಂ ॥ ೧೬ ॥

ಪೂರ್ವಮೇಕಾರ್ಣವೇ ಘೋರೇ ನಷ್ಟೇ ಸ್ಥಾವರಜಂಗಮೇ।
ಬೃಹದಂಡಮಭೂದೇಕಂ ಪ್ರಜಾನಾಂ ಬೀಜಸಂಭವಂ ॥ ೧೭ ॥

ತಸ್ಮಿಂನ್ನಂಡೆ ಸ್ಥಿತೋ ಬ್ರಹ್ಮಾ ಶಯನಾಯೋಪಚಕ್ರಮೇ।
ಸಹಸ್ರಯುಗಪರ್ಯಂತಂ ಸುಪ್ತ್ವಾ ಸ ಪ್ರತ್ಯಬುಧ್ಯತ ॥ ೧೮ ॥

ಸತ್ವೋದ್ರಿಕ್ತಸ್ತಥಾ ಬ್ರಹ್ಮಾ ಶೂನ್ಯಂ ಲೋಕಮಪಶ್ಯತ।
ಸೃಷ್ಟಿಂ ಚಿಂತಯತಸ್ತಸ್ಯ ರಜಸಾ ಮೋಹಿತಸ್ಯ ಚ ॥ ೧೯ ॥

ನಾಗಿ ಕುಳಿತುಕೊಳ್ಳುವ ಕಾಲದಲ್ಲಿ ಮಂಡಿಗಳಿಗೆ ಹಾಕಿಕೊಂಡಿದ್ದ ಕಟ್ಟನ್ನು ಸಡಿಲಿಸಿ ಮಹೇಶ್ವರನನ್ನು ವಂದಿಸಿ ತಾನು ಹಿಂದೆ ಚತುರ್ಮುಖನಿಂದ ಯಾವ ರೀತಿಯಾಗಿ ಕೇಳಿದ್ದನೋ ಅದೇ ರೀತಿಯಿಂದ ಹೇಳಲುಪಕ್ರಮಿಸಿದನು.

೧೬-೨೦. ಪ್ರಭುವಾಗಿಯೂ ವರಪ್ರದನಾಗಿಯೂ ಮಂಗಲಸ್ವರೂಪನಾಗಿಯೂ ಇರುವ ಮಹಾದೇವನನ್ನು ನಮಸ್ಕರಿಸಿ ತೀರ್ಥಗಳ ಉತ್ಪತ್ತಿಯನ್ನು ಚತುರ್ಮುಖನು ಹೇಳಿರುವ ಕ್ರಮದಿಂದ ಹೇಳುತ್ತೇನೆ. ಪೂರ್ವಕಾಲದಲ್ಲಿ ಮಹಾಪ್ರಳಯವುಂಟಾಗಿ ಸಕಲಸ್ಥಾವರ ಜಂಗಮ ಪದಾರ್ಥಗಳೂ ನಷ್ಟವಾಗಿ ಪ್ರಪಂಚವೆಲ್ಲವೂ ಜಲಮಯವಾದ ಕಾಲದಲ್ಲಿ ಪ್ರಜೆಗಳ ಉತ್ಪತ್ತಿಗೆ ಕಾರಣವಾದ ದೊಡ್ಡದೊಂದು ಅಂಡವು (ಮೊಟ್ಟೆ) ಆ ಜಲದಲ್ಲಿ ಕಾಣಿಸಿಕೊಂಡಿತು. ಆ ಅಂಡದಲ್ಲಿದ್ದ ಬ್ರಹ್ಮನು ಮಲಗಲು ಅಲ್ಲೀ ಪ್ರಾರಂಭಿಸಿದನು. ಸಹಸ್ರಯುಗ ಪರ್ಯಂತವೂ ಮಲಗಿದ್ದು ಎಚ್ಚರಗೊಂಡನು. ಸತ್ವೋದ್ರಿಕ್ತವಾದ ಆ ಕಾರಣವಸ್ತುವು ಜಗತ್ತೆಲ್ಲವನ್ನೂ ಶೂನ್ಯವನ್ನಾಗಿ ಕಂಡಿತು. ಜಗತ್ಸೃಷ್ಟಿಯ ಆಲೋಚನೆಯು ಬಂದ ಕಾಲದಲ್ಲಿ ರಜೋಗುಣದಿಂದ ಕೂಡಿ ಸೃಷ್ಟಿಗಾಗಿ ಆ ಗುಣವನ್ನೇ ಪುರಸ್ಕರಿಸಿತು. ರಜೋಗುಣವೇ ಸೃಷ್ಟಿಗೆ ಕಾರಣವೆಂದೂ

ರಜಃ ಸೃಷ್ಟಿಗುಣಂ ಪ್ರೋಕ್ತಂ ಸತ್ವಂ ಸ್ಥಿತಿಗುಣಂ ವಿದುಃ ।
ಉಪಸಂಹಾರಕಾಲೇ ಚ ಪ್ರವರ್ತೇತ ತಮೋಗುಣಃ ॥ ೨೦ ॥

ಗುಣಾತೀತಸ್ಸ ಭಗವಾನ್ ವ್ಯಾಪಕಃ ಪುರುಷಃ ಸ್ಮೃತಃ ।
ತೇನೇದಂ ಸಕಲಂ ವ್ಯಾಪ್ತಂ ಯತ್ಕಿಂಚಿಜ್ಜೀವಸಂಜ್ಞಿತಂ ॥ ೨೧ ॥

ಸ ಬ್ರಹ್ಮಾ ಸ ಚ ಗೋವಿಂದ ಈಶ್ವರಸ್ಸ ಸನಾತನಃ ।
ಯಸ್ತಂ ವೇದ ಮಹಾತ್ಮಾನಂ ಸ ಸರ್ವಂ ವೇದ ನಿಶ್ಚಿತಂ ॥ ೨೨ ॥

ಸತ್ವಗುಣವು ಸ್ಥಿತಿಗೆ ಕಾರಣವೆಂದೂ ಶಾಸ್ತ್ರಜ್ಞರು ತಿಳಿಯುತ್ತಾರೆ. ಉಪಸಂಹಾರ (ಪ್ರಲಯ) ಕಾಲದಲ್ಲಿ ತಮೋಗುಣವೇ ಕಾರಣವಾಗುತ್ತದೆ.

೨೧-೨೨. ಗುಣತ್ರಯಗಳನ್ನೂ ಅತಿಕ್ರಮಿಸಿ ಅವುಗಳ ಸಂಬಂಧವಿಲ್ಲದೆ ಇರುವ ಪುರುಷಪದವಾಚ್ಯನಾಗಿರುವ ನಾರಾಯಣನೇ ಸರ್ವವ್ಯಾಪಕ ವಸ್ತುವೆಂದು ತಿಳಿಯಬೇಕು. ಅವನಿಂದಲೇ ಎಲ್ಲಾ ಪದಾರ್ಥಗಳೂ ಚೇತನವರ್ಗಕ್ಕೆ ಸೇರಿರುವ ಜೀವವೆಂಬ ವಸ್ತುವೂ ವ್ಯಾಪ್ತವಾಗಿವೆ. ಅವನೇ ಬ್ರಹ್ಮನೆಂದೂ ಗೋವಿಂದನೆಂದೂ ಈಶ್ವರನೆಂದೂ ಕರೆಯಲ್ಪಡುತ್ತಾನೆ. ಆ ಮಹಾತ್ಮನನ್ನು ತಿಳಿದವನೇ ಸರ್ವಜ್ಞನಾಗುತ್ತಾನೆ. ಗುಣಾತೀತವಾದ ಆ ಕಾರಣವಸ್ತುವನ್ನು ತಿಳಿದವನೇ ಮೋಕ್ಷದ ಸ್ವರೂಪವನ್ನೂ ಬಲ್ಲವನು. (ಈ ಸಂದರ್ಭದಲ್ಲಿ ಇದನ್ನು ಗಮನಿಸಬೇಕು. ಇಲ್ಲಿ ಹೇಳಿರುವ ಸೃಷ್ಟಿಕ್ರಮವು ಕೇವಲ ಸ್ಥೂಲವಾಗಿದೆ. ಗ್ರಂಥಾಂತರ ಸಂವಾದದಿಂದ ಇದರಲ್ಲಿ ಅರ್ಥಕ್ರಮಕ್ಕೆ ತಕ್ಕಂತೆ ಪ್ರಮೇಯವನ್ನು ಸರಿಪಡಿಸಿಕೊಳ್ಳಬೇಕು. ಪ್ರಳಯಕಾಲದಲ್ಲಿ ಎಲ್ಲಾ ಪದಾರ್ಥಗಳೂ ಸ್ಥೂಲರೂಪವನ್ನು ಬಿಟ್ಟು ಸೂಕ್ಷ್ಮರೂಪದಿಂದ ಪರಮಾತ್ಮನಲ್ಲಿ ಲಯಹೊಂದುತ್ತವೆ. ಜಲಮಯವಾದ ಪ್ರಲಯಮಹಾಸಮುದ್ರದಲ್ಲಿ ಪರಮಾತ್ಮನು ಯೋಗಶಾಯಿಯಾಗಿರುತ್ತಾನೆ. ಸಹಸ್ರಾರುವರ್ಷ ಕಳೆದನಂತರ ಅವನಿಗೆ ತನ್ನ ಕ್ರೀಡಾರ್ಥವಾಗಿ ಪ್ರಪಂಚವನ್ನು ಸೃಷ್ಟಿಸುವ ಸಂಕಲ್ಪವುಂಟಾಗುತ್ತದೆ. ಅದಾದ ಒಡನೆ ಭೂತಸೂಕ್ಷ್ಮಾವಸ್ಥೆಯಲ್ಲಿ ತನ್ನಲ್ಲಡಗಿರುವ ಪ್ರಕೃತಿಯನ್ನು ಅಧಿಷ್ಠಾನಮಾಡಿ ವ್ಯಕ್ತಾವಸ್ಥೆಯನ್ನು ಹೊಂದಿದ ಆ ಪ್ರಕೃತಿಯಿಂದ ಪ್ರಪಂಚವನ್ನು ಸೃಷ್ಟಿಸುತ್ತಾನೆ. "ಮಯಾಧ್ಯಕ್ಷೇಣಪ್ರಕೃತಿಃ ಸೂಯತೆ ಸಚರಾಚರಂ" ಎಂದು ಗೀತಾ ವಚನವಿದೆ. ಪಂಚೀಕೃತವಾದ ಭೂತಗಳ ಸಂಬಂಧವುಳ್ಳ ಪ್ರಕೃತಿಯೇ ಅಂಡಾಕಾರವಾಗಿ ಬ್ರಹ್ಮಾಂಡವೆನಿಸಿಕೊಳ್ಳುತ್ತದೆ. ಪ್ರಕೃತಿಯು ಗುಣತ್ರಯಾಶ್ರಯ ಅಥವಾ ಸಾಂಖ್ಯರ ಕ್ರಮದಿಂದ ಗುಣತ್ರಯರೂಪವಾದುದು. ಪ್ರಕೃತಿಯಲ್ಲಿರುವ ಮೂರು ಗುಣಗಳ ಸಾಮ್ಯಾ

ಗುಣಾತೀತಸ್ಸಪುರುಷಃ ಪರಮಾತ್ಮಾ ಸನಾತನಃ ।
ಯಸ್ತಂ ವೇದ ಮಹಾತ್ಮಾನಂ ಸ ಸರ್ವಂ ವೇದ ಮೋಕ್ಷವಿತ್ ॥ ೨೩ ॥

ವಸ್ಥೆಯೇ ಪ್ರಲಯ ಅವುಗಳ ವೈಷಮ್ಯಾವಸ್ಥೆಯೇ ಸೃಷ್ಟಿಗೆ ಕಾರಣ, ಈ ವೈಷ ಮ್ಯಕ್ಕೂ ಅಧಿಷ್ಠಾನವನ್ನು ಹೊಂದಿರುವ ಪರಮಾತ್ಮನ ಸಂಕಲ್ಪವೇ ಕಾರಣ. ಚೇತನ ರೆಲ್ಲರೂ ಜ್ಞಾನವಿಕಾಸವಿಲ್ಲದ ಸೂಕ್ಷ್ಮಾವಸ್ಥೆಯಿಂದ ಅಚೇತನ ಸದೃಶರಾಗಿರುವಾಗ ಪರಮಾತ್ಮ ಸಂಕಲ್ಪದಿಂದ ಇವರಿಗೆ ಉಂಟಾಗುವ ಪ್ರಕೃತಿ ಸಂಬಂಧವೇ ಸೃಷ್ಟಿ. ಇಂತಹ ಸೃಷ್ಟಿಯಲ್ಲಿ ಚತುರ್ಮುಖ ಬ್ರಹ್ಮನ ಸೃಷ್ಟಿಯು ಮೊದಲನೆಯದು. "ಮಹಾ ರ್ಣವೇ ಶಯಾನೋಽಪ್ಸುಮಾಂ ತ್ವಂ ಪೂರ್ವಮಜೀಜನಃ" ಎಂಬ ಚತುರ್ಮುಖನ ವಾಕ್ಯವೇ ಇದಕ್ಕೆ ಪ್ರಮಾಣ, ಚತುರ್ಮುಖನು ಅಧಿಕಾರಿ ಪುರುಷನಾದುದರಿಂದ ಬ್ರಹ್ಮಾಂಡವು ಅವನ ಅಧಿಕಾರಕ್ಕೊಳಪಟ್ಟದ್ದು. ಪ್ರಕೃತಿ ಸಂಬಂಧದಿಂದುಂಟಾದ ರಜೋಗುಣಾಧಿಕ್ಯವು ಚತುರ್ಮುಖನಲ್ಲಿರುವದ್ದರಿಂದ ಅವನು ಸೃಷ್ಟಿಕಾರ್ಯದಲ್ಲಿ ಅಧಿ ಕಾರಿಯಾದನು. ಪ್ರಕೃತಿಯು ಗುಣತ್ರಯರೂಪವಾಗಿರುವದ್ದರಿಂದ ಭೋಗ್ಯವೆಂದು ತಿಳಿದು ಅದಕ್ಕೆ ಅಧೀನರಾಗಿರುವವರೆಲ್ಲಾ ಗುಣಾಧೀನರು ಈ ರೀತಿಯಾದ ಪ್ರಕೃತಿ ಪರತಂತ್ರತೆ ಇಲ್ಲದಿರುವವನೇ ಗುಣಾತೀತನೆಂದರ್ಥ ಅವನನ್ನೇ ಪರಮಾತ್ಮಾ ಸನಾ ತನಃ ಎಂದು ಇಲ್ಲಿ ಕರೆದಿರುತ್ತಾರೆ. ಒಟ್ಟಿನಲ್ಲಿ ಪ್ರಪಂಚದ ಸೂಕ್ಷ್ಮಾವಸ್ಥೆಯೇ ಪ್ರಲಯ ಸ್ಥೂಲಾವಸ್ಥೆಯೇ ಸೃಷ್ಟಿ, ಇದರ ಸೂಕ್ಷ್ಮಾವಸ್ಥೆಯಲ್ಲಿಯೂ ಸ್ಥೂಲಾವಸ್ಥೆ ಯಲ್ಲಿಯೂ ಕಾರಣವಾಗಿರುವ ಪರಮಾತ್ಮ ಸಂಬಂಧವು ಇದಕ್ಕೆ ತಪ್ಪಿದ್ದಲ್ಲ. ಆದುದ ರಿಂದಲೇ ಪರಮಾತ್ಮ ಸ್ವರೂಪವು ವ್ಯಾಪಕವೆಂದೂ ಶಾಶ್ವತವೆಂದೂ ವರ್ಣಿಸಲ್ಪಟ್ಟಿವೆ. ನಾಮರೂಪ ವಿಭಾಗವಿಲ್ಲದೆ ಸೂಕ್ಷ್ಮವಾಗಿರುವ ಚಿದಚಿತ್ಪದಾರ್ಥಗಳನ್ನು ಸ್ವಪರ್ಯಂತ ವಾಗಿ ಮಾಡಿಕೊಳ್ಳುವುದೇ ಸೃಷ್ಟಿ. ಸೂಕ್ಷ್ಮವಾದ ವಿಶೇಷಣಗಳಿಂದ ಕೂಡಿರುವ ಬ್ರಹ್ಮವು ಸ್ಥೂಲವಾದ ಚಿದಚಿತ್ಪದಾರ್ಥಗಳಿಂದ ಕೂಡಿರುವುದೇ ಸೃಷ್ಟಿಯೆಂದಾಗುತ್ತದೆ. ಇದರಿಂದ ಕಾರಣಾವಸ್ಥೆಯಲ್ಲೂ ಕಾರ್ಯಾವಸ್ಥೆಯಲ್ಲೂ ಪರಮಾತ್ಮನ ಅನುವೃತ್ತಿ ಇದ್ದಂತಾಯಿತು. ಎಲ್ಲಾ ವಸ್ತುಗಳೂ ಅವನ ಶರೀರವಾದುದರಿಂದ ಎಲ್ಲಾ ಶಬ್ದ ಗಳೂ ಅವನಿಗೇ ಮುಖ್ಯವೃತ್ತಿಯಿಂದ ಬೋಧಕಗಳಾಗುತ್ತವೆ. ಹೀಗಿರುವಾಗ ಇಂದ್ರ, ಚಂದ್ರ, ಬ್ರಹ್ಮ, ಈಶ್ವರ, ಇತ್ಯಾದಿ ಶಬ್ದಗಳ ಮುಖ್ಯಾರ್ಥವು ಆ ಪರಮಾತ್ಮನಲ್ಲೇ ಇದೆ ಎಂಬುದಕ್ಕೆ ಅಡ್ಡಿ ಇಲ್ಲ, ಈಗ ಪ್ರಪಂಚದಲ್ಲಿರುವ ಶಬ್ದಗಳೆಲ್ಲಾ ಅಮುಖ್ಯ (ಗೌಣ) ವೃತ್ತಿಯಿಂದಲೇ ಲೌಕಿಕವಾದ ಆಯಾಯ ಅರ್ಥಕ್ಕೆ ಬೋಧಕಗಳಾಗುತ್ತಿವೆ. ಸರ್ವಶಬ್ದಗಳನ್ನೂ ತನ್ನ ಪರ್ಯಂತವಾಗಿ ಮಾಡಿಕೊಳ್ಳುವುದೇ ಸೃಷ್ಟಿಯೆಂದು ಹಿಂದೆಯೂ ನಿರೂಪಿಸಲಾಗಿದೆ. ಈ ತಾತ್ಪರ್ಯದಿಂದಲೇ ಅಂತರ್ಯಾಮಿರೂಪದಿಂದ

ಕಿಂ ತೇಷಾಂ ಸಕಲೈಸ್ತೀರ್ಥೈರಾಶ್ರಮೈರ್ವಾ ಪ್ರಯೋಜನಂ।
ಯೇಷಾಂ ಚಾನಂತಕಂ ಚಿತ್ತಮಾತ್ಮನ್ಯೇವ ವ್ಯವಸ್ಥಿತಂ ॥ ೨೪ ॥

ಆತ್ಮಾ ನದೀ ಸಂಯಮಪುಣ್ಯತೀರ್ಥಾ
ಸತ್ಯೋದಕಾ ಶೀಲಶಮಾದಿಯುಕ್ತಾ।
ತಸ್ಯಾಂ ಸ್ನಾತಃ ಪುಣ್ಯಕರ್ಮಾ ಪುನಾತಿ
ನ ವಾರಿಣಾ ಶುದ್ಧ್ಯತಿ ಚಾಂತರಾತ್ಮಾ ॥ ೨೫ ॥

ಸರ್ವಜಗತ್ತನ್ನೂ ವ್ಯಾಪಿಸಿರುವ ಆ ಪರಮಾತ್ಮನನ್ನೇ ಸನಾತನಃ ಪುರುಷಃ ಎಂದು ಇಲ್ಲಿ ನಿರ್ದೇಶಮಾಡಿರುತ್ತಾರೆ. "ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ" ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ಎಂಬ ಗೀತಾವಚನವೂ ಇದಕ್ಕೆ ಸಂವಾದಿಯಾಗಿದೆ. ಎಂದು ಸಂಗ್ರಹಿಸಬಹುದು)

೨೪-೨೬. ಯಾರ ಅಂತಃಕರಣವು ಅನಂತವಾದ ಬಾಹ್ಯವಸ್ತುಗಳ ತಿಳಿವನ್ನು ಹೊಂದಿದ್ದರೂ ದೇಹಾತಿರಿಕ್ತನಾದ ಆತ್ಮನಲ್ಲಿ ಆಸಕ್ತವಾಗಿದೆಯೋ (ಇಲ್ಲಿ ಆತ್ಮಜ್ಞಾನವು ಸಂಪುಟದಲ್ಲಿರುವ ರತ್ನಜ್ಞಾನಕ್ಕೆ ಸಂಪುಟಜ್ಞಾನವು ಕಾರಣವಾಗಿರುವಂತೆ ಜೀವಾತ್ಮ ಅಂತರ್ಯಾಮಿಯಾಗಿರುವ ಪರಮಾತ್ಮಜ್ಞಾನಕ್ಕೆ ಜೀವಾತ್ಮಜ್ಞಾನವೂ ಕಾರಣವಾಗುತ್ತದೆಯೆಂಬ ನ್ಯಾಯದಿಂದ ಎಂದು ತಿಳಿಯಬೇಕು. ಇದರಿಂದ ಜ್ಞಾನಯೋಗಿಯ ಸ್ವರೂಪವನ್ನು ಹೇಳಿದಂತಾಗುತ್ತದೆ.) ಅಂತಹ ಅಧಿಕಾರಿಗಳಿಗೆ ಸಕಲ ತೀರ್ಥಗಳಿಂದಲೂ ಆಶ್ರಮಗಳಿಂದಲೂ ಫಲವೇನು, (ತೀರ್ಥಯಾತ್ರಾದಿಗಳು ಕರ್ಮಯೋಗಕ್ಕೆ ಸೇರಿರುವದ್ದರಿಂದ ಜ್ಞಾನಿಗೆ ಇವುಗಳಿಂದ ಆಗಬೇಕಾದುದೇನೂ ಇಲ್ಲ. ಇವು ಜ್ಞಾನಯೋಗಕ್ಕೆ ವಿರೋಧಿಗಳಾದ ಪಾಪಗಳನ್ನು ನಾಶಮಾಡುವುದರ ಮೂಲಕ ಅಧಿಕಾರಸಂಪಾದಕವೇ ಹೊರತು ನಿಷ್ಪನ್ನಜ್ಞಾನಯೋಗಿಗೆ ಇವುಗಳಿಂದ ಫಲವಿಲ್ಲವೆಂದು ಭಾವ) ಈ ಅಂಶವನ್ನೇ ರೂಪಣಕ್ರಮದಿಂದ ವಿವರಿಸುತ್ತಾರೆ. ಆತ್ಮವೇ ನದಿ, ಇಂದ್ರಿಯನಿಗ್ರಹಾದಿಸಂಯಮವೇ ಆ ನದಿಯ ಪುಣ್ಯ ತೀರ್ಥಗಳು, ಸತ್ಯವೇ ನೀರು, ಶೀಲಶಮಾದಿಗಳೇ ಆ ನೀರಿಗೆ ಸಹಕಾರಿ ಇಂತಹ ಆತ್ಮನದಿಯಲ್ಲಿ ಸ್ನಾನಮಾಡಿದ ಪುಣ್ಯಶಾಲಿಯು ತನ್ನನ್ನು ತಾನೇ ಪವಿತ್ರಗೊಳಿಸಿಕೊಳ್ಳುತ್ತಾನೆ, ಅಂತರಾತ್ಮಶುದ್ಧಿಯು

ಏತತ್ಪ್ರಧಾನಂ ಪುರುಷಸ್ಯ ಕರ್ಮ
ಯದಾತ್ಮಸಂಬೋಧ ಸುಖೇ ಪ್ರವಿಷ್ಟಂ ।
ಜ್ಞೇಯಂ ತದೇವ ಪ್ರವದಂತಿ ಸಂತಃ
ತತ್ಪ್ರಾಪ್ಯ ದೇಹೀ ವಿಜಹಾತಿ ಕಾಮಾನ್ ॥ ೨೬ ॥

ನೈತಾದೃಶಂ ಬ್ರಾಹ್ಮಣಸ್ಯಾಸ್ತಿ ವಿತ್ತಂ
ಯಥೈಕತಾ ಸಮತಾ ಸತ್ಯತಾ ಚ ।
ಶೀಲಂ ಸ್ಥಿತಿಃ ದಂಡವಿಧಾನಮಾರ್ಜವಂ
ತತಃ ತತಶ್ಚೋ ಪರಮಃ ಕ್ರಿಯಾಸು ॥ ೨೭ ॥

ಅಪಿ ಬ್ರಹ್ಮ ಸಮಾಸೇನ ಯದುಕ್ತಂ ತೇ ದ್ವಿಜೋತ್ತಮ ।
ಯತ್ ಜ್ಞಾತ್ವಾ ಬ್ರಹ್ಮಪರಮಂ ಪ್ರಾಪ್ಸ್ಯಸಿ ತ್ವಂ ನ ಸಂಶಯಃ ॥ ೨೮ ॥

ಬಾಹ್ಯವಾದ ನೀರಿನಿಂದ ಉಂಟಾಗುವುದಿಲ್ಲ (ಅಂದರೆ ಶೀಲಶಮಾದಿಗಳಿಂದ ಕೂಡಿದ ಸತ್ಯವನ್ನೇ ಪುರಸ್ಕರಿಸಿ ಸಂಯಮಹೊಂದಿ ಅದರಿಂದ ಅನುಭವಿಸುವ ಆತ್ಮತತ್ವವೇ ತನ್ನ ಪರಿಶುದ್ಧತೆಗೆ ಕಾರಣವೆಂದು ಹೇಳಿದಂತಾಯಿತು.) ಆತ್ಮಜ್ಞಾನದಿಂದ ಸುಖಿಸುವುದೊಂದೇ ಮನುಷ್ಯನ ಮುಖ್ಯವಾದ ಕೆಲಸ, ಅದೇ ಜ್ಞೇಯವಸ್ತುವಾದುದರಿಂದ ಅದನ್ನು ಹೊಂದಿದ ಪುಣ್ಯಶಾಲಿಯು ಬಾಹ್ಯವಾದ ಕಾಮ್ಯವಸ್ತುಗಳೆಲ್ಲವನ್ನೂ ಬಿಟ್ಟು ಬಿಡುತ್ತಾನೆ.

೨೭-೨೮. ಬ್ರಾಹ್ಮಣನಾಗಿ ಹುಟ್ಟಿದವನಿಗೆ ಏಕತಾ ಸಮತೆ ಸತ್ಯತೆ ಈ ಬುದ್ಧಿಗಳಿಗಿಂತ ಬೇರೊಂದು ಐಶ್ವರ್ಯವಿಲ್ಲ. ಏಕತಾ ಬುದ್ಧಿ ಸಮತಾಬುದ್ಧಿ ಸತ್ಯ ಶೀಲತೆ ಇವುಗಳೇ ಐಶ್ವರ್ಯವೆಂದು ತಾತ್ಪರ್ಯ. ಏಕತಾಬುದ್ಧಿಯೆಂದರೆ ಜಗತ್ತೆಲ್ಲವೂ ಪರಬ್ರಹ್ಮದ ಕಾರ್ಯರೂಪವಾದುದರಿಂದಲೂ ಅವನನ್ನೇ ಅಂತರ್ಯಾಮಿಯನ್ನಾಗಿ ಹೊಂದಿರುವದ್ದರಿಂದಲೂ ಬ್ರಹ್ಮಾತ್ಮಕವೆಂದೂ ಅಬ್ರಹ್ಮಾತ್ಮಕವಸ್ತುವಾವುದೂ ಇಲ್ಲವೆಂದು ತಿಳಿಯುವಿಕೆ. ಸಮತಾಬುದ್ಧಿಯೆಂದರೆ ಕರ್ಮಕರ್ತೃಕೃತವಾದ ಬಾಹ್ಯಭೇದವನ್ನು ಬಿಟ್ಟು ಜ್ಞಾನಾಕಾರದಿಂದ ಆತ್ಮವಸ್ತುವಿನ ಸಾಮ್ಯಾನುಸನ್ಧಾನ. "ಶುನಿಚೈವಶ್ವಪಾಕೇಚ ಪಂಡಿತಾಃ ಸಮದರ್ಶಿನಃ" ಎಂಬ ಗೀತಾವಚನದಂತೆ, ಸತ್ಯಶೀಲತೆಯೆಂದರೆ ತ್ರಿಕರಣಗಳ ಏಕರೂಪತೆ, ಸ್ವಭಾವ, ಸ್ಥಿತಿ, ದೇಹದಂಡನ, ಋಜುಸ್ವಭಾವ ಇವುಗಳು ಮೊದಮೊದಲು ಲೋಕಾನುಸಾರಿಯಾಗಿ ನಡೆದರೂ ಜ್ಞಾನಿಯಾದವನಿಗೆ ಕ್ರಮಕ್ರಮವಾಗಿ ಇವುಗಳಿಂದಲೂ ಇತರ ವ್ಯಾಪಾರಗಳಿಂದಲೂ ನಿವೃತ್ತಿಯೇ ಉಂಟಾದೀತು. ಎಲ್ಲೈ

ಇದಾನೀಂ ಶೃಣು ಚೋತ್ಪತ್ತಿಂ ಬ್ರಹ್ಮಣಃ ಪರಮಾತ್ಮನಃ ।
ಇಮಂ ಚೋದಾಹರಂ ಸ್ತತ್ರ ಶ್ಲೋಕಂ ನಾರಾಯಣಂ ಪ್ರತಿ ॥ ೨೯ ॥

ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ ।
ತಾಸು ಶೇತೆ ಸ ಯಸ್ಮಾಚ್ಚ ತೇನ ನಾರಾಯಣಃ ಸ್ಮೃತಃ ॥ ೩೦ ॥

ವಿಶುದ್ಧಸಲಿಲೆ ತಸ್ಮಿನ್ವಿಜ್ಞಾಯಾಂತರ್ಗತಂ ಜಗತ್ ।
ಅಂಡಂ ವಿಭಜ್ಯ ಭಗವಾಂಸ್ತಸ್ಮಾದೋಮಿತ್ಯಜಾಯತ ॥ ೩೧ ॥

ಬ್ರಾಹ್ಮಣೋತ್ತಮನೇ. ಬ್ರಹ್ಮಪ್ರಾಪ್ತಿಗೆ ಸಾಧನವಾದ ಈ ಆತ್ಮಜ್ಞಾನವನ್ನು ಹೇಳಿದುದರಿಂದ ಬ್ರಹ್ಮಸ್ವರೂಪವನ್ನೂ ಸಂಗ್ರಹವಾಗಿ ನಿನಗೆ ಹೇಳಿದಂತಾಯಿತು. ಇದರಿಂದ ನಿನಗೆ ಬ್ರಹ್ಮಪ್ರಾಪ್ತಿಯೂ ಉಂಟಾಗುವುದರಲ್ಲಿ ಸಂದೇಹವಿಲ್ಲ. ಜ್ಞಾತ್ವಾ ಎಂದು ಹೇಳಿರುವುದರಿಂದ ಈ ಆತ್ಮಜ್ಞಾನದಿಂದ ಬ್ರಹ್ಮಪ್ರಾಪ್ತಿಯೂ ಉಂಟಾಗುತ್ತದೆ ಎಂದು ಜ್ಞಾನಯೋಗಿಯ ಸ್ಥಿತಿಯನ್ನು ಹೇಳಿದಂತಾಯಿತು. ಈಗ ಅಂತಹ ಪರಮಾತ್ಮನಿಂದ ಉಂಟಾಗಿರುವ ಸೃಷ್ಟಿಯನ್ನು ಹೇಳುತ್ತೇನೆ ಕೇಳು. ಆ ಸರ್ವಕಾರಣನಾದ ನಾರಾಯಣನನ್ನು ನಿರ್ದೇಶಿಸಿ ಈ ಶ್ಲೋಕವನ್ನು ಮಹಾತ್ಮರಾದ ಹಿರಿಯರು ಹೇಳಿದ್ದಾರೆ.

೩೦-೩೧. ನೀರು ನಾರಾ ಎಂಬ ಹೆಸರಿನಿಂದ ಕರೆಯಲ್ಪಡುತ್ತವೆ. ಏಕೆಂದರೆ ಅವು ನರನಿಂದ ಉತ್ಪನ್ನವಾದುವು. (ಇಲ್ಲಿ ಕಾರಣರೂಪನಾದ ಪರಮಾತ್ಮನು ನರನೆಂದೂ ಅವನಿಂದ ಮೊದಲು ಸೃಷ್ಟಿಸಲ್ಪಟ್ಟದ್ದರಿಂದ ಜಲಕ್ಕೆ ನಾರಾ ಎಂಬ ಹೆಸರು ಬಂತೆಂದೂ ತಾತ್ಪರ್ಯ.) ಆ ನೀರನ್ನೇ ಆಶ್ರಯಿಸಿ ಮಲಗಿದ್ದುದರಿಂದ ಈ ಕಾರಣರೂಪನಾದ ಪರಮಾತ್ಮನಿಗೆ ನಾರಾಯಣನೆಂಬ ಹೆಸರು ಶಾಸ್ತ್ರಗಳಲ್ಲಿ ಪ್ರಸಿದ್ಧಿಗೆ ಬಂದಿತು. ಇಂತಹ ನಾರಾಯಣನ ಸೃಷ್ಟಿಸಂಕಲ್ಪದಿಂದ ಆ ಜಲದಲ್ಲಿ ಒಂದು ಬೃಹದಾಕಾರವಾದ ಅಂಡವು ಉದ್ಭವಿಸಿತೆಂದೂ ಆ ಅಂಡದಲ್ಲಿ ಚತುರ್ಮುಖನು ಸೃಷ್ಟಿಸಲ್ಪಟ್ಟಿದ್ದನೆಂದೂ ಇಲ್ಲಿ ಶೇಷಪೂರಣಮಾಡಿಕೊಳ್ಳಬೇಕು. ಶುದ್ಧವಾದ ಆ ನೀರಿನಲ್ಲಿ

ತತೋ ಭೂರಭವತ್ತಸ್ಮಾದ್ಭುವ ಇತ್ಯಪರಃ ಸ್ಮೃತಃ ।
ಸ್ವರ್ಶಬ್ದಶ್ಚ ತೃತೀಯೋಭೂದ್ಭೂರ್ಭುವಃ ಸ್ವೇತಿ ಸಂಜ್ಞಿತಾಃ ॥ ೩೨ ॥

ತಸ್ಯಾಂ ತೇಜಸ್ಸಮಭವತ್ತತ್ಸವಿತುರ್ವರೇಣ್ಯಂ ಯತ್ ।
ಉದಕಂ ಶೋಷಯಾಮಾಸ ಯತ್ತೇಜೋಣುವಿನಿಸ್ಸೃತಂ ॥ ೩೩ ॥

ತೇಜಸಾ ಶೋಷಿತಂ ಶೇಷಂ ಕಲಲತ್ವಮುಪಾಗತಂ ।
ಕಲಲಾದ್ಬುದ್ಬುದಂ ಜ್ಞೇಯಂ ತತಃ ಕಾಠಿನ್ಯತಾಂ ಗತಂ ॥ ೩೪ ॥

ಕಾಠಿನ್ಯಾದ್ಧರಣೀ ಜ್ಞೇಯಾ ಭೂತಾನಾಂ ಧಾರಿಣೀ ಹಿ ಸಾ ।
ಯಸ್ಮಿನ್ಸ್ಥಾನೆ ಸ್ಥಿತಂ ಹ್ಯಂಡಂ ತಸ್ಮಿನ್ ಸನ್ನಿಹಿತಂ ಸರಃ ॥ ೩೫ ॥

ತೇಲುತ್ತಿದ್ದ ಆ ಅಂಡದಲ್ಲಿ ಜಗತ್ತೆಲ್ಲವೂ ಅಂತರ್ಗತವಾಗಿರುವುದನ್ನು ತಿಳಿದು ಅಲ್ಲಿದ್ದ ಚತುರ್ಮುಖನು ಆ ಅಂಡವನ್ನು ಎರಡುಭಾಗವನ್ನಾಗಿ ಸೀಳಿ ಓಂ ಎಂದು ಹೇಳುತ್ತಾ ತನ್ನ ರೂಪವನ್ನು ಹೊರಗೆ ವ್ಯಕ್ತಪಡಿಸಿಕೊಂಡನು. ಹಾಗೆ ಹೇಳಿದೊಡನೆಯೇ ಭೂಲೋಕವು ಅಲ್ಲಿಂದ ವ್ಯಕ್ತಗೊಂಡಿತು. ಅನಂತರ ಭುವಃ ಎಂದೂ ಸ್ವಃ ಎಂದೂ ಉಚ್ಚರಿಸಲಾಗಿ ಭುವರ್ಲೋಕವೂ ಸುವರ್ಲೋಕವೂ ವ್ಯಕ್ತವಾದುವು.

೩೩-೩೫. ಆ ಲೋಕದಿಂದ ಸರ್ವಪ್ರೇರಕವಾಗಿಯೂ ಆಶ್ರಯಣೀಯವಾಗಿಯೂ ಇರುವ ಒಂದು ತೇಜಸ್ಸು ಉಂಟಾಯಿತು. ಅಣುಗಳಾಗಿ ವ್ಯಾಪಿಸಿದ ಆ ತೇಜಸ್ಸು ಅಲ್ಲಿದ್ದ ನೀರನ್ನೆಲ್ಲಾ ಶೋಷಿಸಿತು. ಆ ತೇಜಸ್ಸಿನಿಂದ ಶೋಷಿಸಲ್ಪಟ್ಟ ಆ ಜಲವು ಕಲಲವಾಗಿ ಪರಿಣಮಿಸಿತು. (ಕಲಲವೆಂದರೆ ದ್ರವಾವಸ್ಥೆಗೂ ಸ್ವಲ್ಪ ಗಟ್ಟಿಯಾಗುವ ಬುದ್ಬುದಾವಸ್ಥೆಗೂ ಮಧ್ಯದಲ್ಲಿ ಉಂಟಾಗುವ ಒಂದು ಪರಿಣಾಮ.) ಕಲಲಾವಸ್ಥೆಯಿಂದ ಬುದ್ಬುದಾವಸ್ಥೆಯುಂಟಾಗಿ ಅನಂತರ ಆ ನೀರೆಲ್ಲಾ ಕಠಿನಾವಸ್ಥೆಯನ್ನು ಹೊಂದಿತು. ಆ ಕಾಠಿನ್ಯಾವಸ್ಥೆಯಿಂದ ಅದೇ ಸರ್ವಭೂತಧಾರಿಣಿಯಾದ ಭೂಮಿಯಾಗಿ ಪರಿಣಮಿಸಿತು. ಯಾವ ಜಲಮಧ್ಯದಲ್ಲಿ ಈ ಬ್ರಹ್ಮಾಂಡವಿದ್ದಿತೋ ಅಲ್ಲಿಯೇ ಸರಸ್ಸು ಸನ್ನಿಹಿತವಾಗಿದ್ದಿತು.

ಯದಾದ್ಯಂ ನಿಸ್ಸೃತಂ ತೇಜಃ ತಸ್ಮಾದಾದಿತ್ಯ ಉಚ್ಯತೇ ।
ಅಂಡಮಧ್ಯೇ ಸಮುತ್ಪನ್ನೋ ಬ್ರಹ್ಮಾ ಲೋಕಪಿತಾಮಹಃ ॥ ೩೬ ॥

ತಸ್ಯೋಲ್ಬಂ ಮೇರುರಭವಜ್ಜರಾಯುಃ ಪರ್ವತಾಃ ಸ್ಮೃತಾಃ ।
ಗರ್ಭೋದಕಂ ಸಮುದ್ರಾಶ್ಚ ತಥಾ ನದ್ಯಃ ಸಹಸ್ರಶಃ ॥ ೩೭ ॥

ನಾಭಿಸ್ಥಾನಾದ್ಯದುದಕಂ ಬ್ರಹ್ಮಣೋ ನಿರ್ಮಲಂ ಮಹತ್ ।
ಮಹತ್ಸರಃ ತೇನ ಪೂರ್ಣಂ ವಿಮಲೇನ ವರಾಂಭಸಾ ॥ ೩೮ ॥

ತಸ್ಮಿನ್ಮಧ್ಯೇ ಸ್ಥಾಣುರೂಪೀ ವಟವೃಕ್ಷೋ ಮಹಾಮನಾಃ ।
ತಸ್ಮಾದ್ವಿನಿರ್ಗತಾ ವರ್ಣಾ ಬ್ರಾಹ್ಮಣಾಃ ಕ್ಷತ್ರಿಯಾ ವಿಶಃ ॥ ೩೯ ॥

ಶೂದ್ರಾಶ್ಚ ತಸ್ಮಾದುತ್ಪನ್ನಾಃ ಶುಶ್ರೂಷಾರ್ಥಂ ದ್ವಿಜನ್ಮನಾಂ ।
ತತಶ್ಚಿಂತಯತಃ ಸೃಷ್ಟಿಂ ಬ್ರಹ್ಮಣೋ ವ್ಯಕ್ತಜನ್ಮನಃ ॥ ೪೦ ॥

೩೬-೩೯. ಜಲಕ್ಕೆ ಶೋಷಕವಾಗಿ ಆದಿಯಲ್ಲಿ ಹುಟ್ಟಿದ ತೇಜಸ್ಸೇ ಆದಿತ್ಯನೆಂದು ಕರೆಯಲ್ಪಟ್ಟಿತು. ಆ ಅಂಡದ ಮಧ್ಯಭಾಗದಲ್ಲಿ ಲೋಕಪಿತಾಮಹನಾದ ಚತುರ್ಮುಖನಿಗೆ ಮೇರುವೇ ಗರ್ಭದ ಹೊದಿಕೆಯ ಜಲವಾಗಿಯೂ ಪರ್ವತಗಳೇ ಗರ್ಭಸ್ಥಾನವಾಗಿಯೂ ಆದವು. ಅದರ ಅಂತರ್ಭಾಗದಲ್ಲಿದ್ದ ಜಲವೇ ಸಮುದ್ರಗಳಾಗಿಯೂ ಸಾವಿರಾರು ನದಿಗಳಾಗಿಯೂ ಆಯಿತು. ಆ ಚತುರ್ಮುಖನ ನಾಭಿ (ಹೊಕ್ಕಳು) ಸ್ಥಾನದಿಂದ ಬಂದ ಶುದ್ಧವಾದ ನೀರಿನಿಂದ ಸಮೀಪದಲ್ಲಿದ್ದ ಸರಸ್ಸು ಪೂರ್ಣವಾಗಿ ತುಂಬಿತು. ಆ ಸರಸ್ಸಿನ ಮಧ್ಯದಲ್ಲಿ ಸ್ಥಾಣುರೂಪಿಯಾದ ವಟವೃಕ್ಷವು ಉದ್ಭವಿಸಿತು. ಆ ಮಧ್ಯಭಾಗದಿಂದಲೇ ಬ್ರಾಹ್ಮಣಕ್ಷತ್ರಿಯವೈಶ್ಯಾದಿವರ್ಣಗಳೂ ಉಂಟಾದವು. (ಮನುಸ್ಮೃತಿಯಲ್ಲಿ ವಿಸ್ತಾರವಾಗಿರುವ ಈ ಭಾಗವು ಸರೋವರ್ಣನೆಗೆ ತಕ್ಕಂತೆ ಇಲ್ಲಿ ಸಂಗ್ರಹಿಸಲ್ಪಟ್ಟಿದೆ.)

೪೦-೪೨. ಬ್ರಾಹ್ಮಣಾದಿ ದ್ವಿಜರ ಶುಶ್ರೂಷೆಗಾಗಿ ಶೂದ್ರರೂ ಉದ್ಭವಿಸಿದರು ಪುನಃ ಅವ್ಯಕ್ತಾವಸ್ಥೆಯಿಂದ ವ್ಯಕ್ತವಾದರೂಪವನ್ನು ಹೊಂದಿದ ಆ ಚತುರ್ಮುಖನು ಸೃಷ್ಟಿವಿಷಯವಾದ ಸಂಕಲ್ಪಕ್ಕೆ ತೊಡಗಿದನು. ಆಗ ಅವನ ಮಾನಸಪುತ್ರರಾಗಿ ವಾಲ

ವಾಲಖಿಲ್ಯಾಃ ಸಮುತ್ಪನ್ನಾ ಮಾನಸಾಃ ಶುದ್ಧಿರೂಪಿಣಃ ।
ಅಷ್ಟಾಶೀತಿಸಹಸ್ರಾಣಿ ಬಭೂವು ಶ್ಚೋರ್ಧ್ವರೇತಸಃ ॥ ೪೧ ॥

ತತಃ ಸೃಷ್ಟಿಂ ಚಿಂತಯತೋ ಬ್ರಹ್ಮಣೋ ವ್ಯಕ್ತಜನ್ಮನಃ ।
ಮನಸೋ ಮಾನಸಾ ಜಾತಾಃ ಸನಕಾದ್ಯಾ ಮಹರ್ಷಯಃ ॥ ೪೨ ॥

ಪುನಶ್ಚಿಂತಯತಸ್ತಸ್ಯ ಪ್ರಜಾಕಾಮಸ್ಯ ಧೀಮತಃ ।
ಋಷಯಸ್ಸಪ್ತಚೋತ್ಪನ್ನಾಃ ತೆ ಪ್ರಜಾಪತಯೋಭವನ್ ॥ ೪೩ ॥

ಪುನಶ್ಚಿಂತಯತಸ್ತಸ್ಯ ರಜಸಾ ಮೋಹಿತಸ್ಯ ಚ ।
ವಾಲಖಿಲ್ಯಾಃ ಸಮುತ್ಪನ್ನಾಃ ತಪಸ್ಸ್ವಾಧ್ಯಾಯತತ್ಪರಾಃ ॥ ೪೪ ॥

ತೇ ಸದಾ ಸ್ನಾನನಿರತಾಃ ದೇವಾರ್ಚನಪರಾಯಣಾಃ ।
ಉಪವಾಸವ್ರತೈಃ ತೀವ್ರೈಃ ಶೋಷಯಂತಿ ಕಲೇಬರಂ ॥ ೪೫ ॥

ದಿವ್ಯಂ ವರ್ಷಸಹಸ್ರಂ ತೆ ಕೃಶಾ ಧಮನಿಸಂತತಾಃ ।
ಆರಾಧಯಂತಿ ದೇವೇಶಂ ನಚ ತುಷ್ಯತಿ ಶಂಕರಃ ॥ ೪೬ ॥

ಖಿಲ್ಯರೇ ಮಹರ್ಷಿಗಳಾಗಿ ಜನಿಸಿದರು. ಹಾಗೂ ಎಂಭತ್ತೆಂಟುಸಾವಿರ ಸಂಖ್ಯೆಯುಳ್ಳ ತೇಜಸ್ವಿಗಳಾದ ಮುನಿಗಳೂ ಉದಯಿಸಿದರು. ಪುನಃ ಆ ಚತುರ್ಮುಖನಿಗೆ ಸೃಷ್ಟಿಸಂಕಲ್ಪವುಂಟಾಗಲು ಸನಕಾದಿಮಹರ್ಷಿಗಳು ಮಾನಸಪುತ್ರರಾಗಿ ಜನಿಸಿದರು.

೪೩-೪೫. ಪ್ರಜೆಗಳನ್ನು ಹೊಂದುವ ಇಚ್ಛೆಯಿಂದ ಪುನಃ ಸೃಷ್ಟಿಸಂಕಲ್ಪದಲ್ಲಿ ನಿರತನಾದ ಆ ಚತುರ್ಮುಖನಿಗೆ ಸಪ್ತಋಷಿಗಳು ಉದ್ಭವಿಸಿದರು. ಆ ಏಳು ಜನಗಳೂ ಪ್ರಜಾಪತಿಗಳಾಗಿ ಆದರು. ಪುನಃ ರಜೋಗುಣ ಸಂಬಂಧದಿಂದ ಸೃಷ್ಟಿಸಂಕಲ್ಪ ಹೊಂದಿದ ಆ ಚತುರ್ಮುಖನಿಗೆ ವಾಲಖಿಲ್ಯರೆಂಬ ಮಹರ್ಷಿಗಳುದಯಿಸಿದರು. ತಪಸ್ಸಿನಿಂದಲೂ ಅಧ್ಯಯನದಿಂದಲೂ ಪರಿಶುದ್ಧರಾದ ಅವರು ಸ್ನಾನ ದೇವತಾರ್ಚನೆ ಮುಂತಾದ ವೈದಿಕಕರ್ಮದಲ್ಲಿ ನಿರತರಾಗಿ ಉಪವಾಸವೇ ಮೊದಲಾದ ವ್ರತಗಳಿಂದ ದೇಹಶೋಷಣೆ ಮಾಡುತ್ತಿದ್ದರು.

೪೬-೪೮. ಅವರು ದಿವ್ಯವರ್ಷಸಹಸ್ರದವರಿಗೂ ತಪಸ್ಸಿನಿಂದ ಕೃಶರಾಗಿ ಕೇವಲ ನರಗಳಿಂದ ಬದುಕಿಕೊಂಡು ಆರಾಧಿಸಿದರೂ ಶಂಕರನು ಅವರ ತಪಸ್ಸಿನಿಂದ

ತತಃ ಕಾಲೇನ ಮಹತಾ ಉಮಯಾ ಸಹ ಶಂಕರಃ ।
ಆಕಾಶಮಾರ್ಗೇಣ ತದಾ ದೃಷ್ಟ್ವಾ ದೇವೀ ಸುದುಃಖಿತಾ ॥ ೪೭ ॥

ಪ್ರಸಾದ್ಯ ದೇವದೇವೇಶಂ ಶಂಕರಂ ಪ್ರಾಹ ಸುವ್ರತಾ ।
ಕ್ಲಿಶ್ಯಂತಿ ತೇ ಮುನಿಗಣಾ ದೇವದಾರುವನಾಶ್ರಯಾಃ ।
ತೇಷಾಂ ಕ್ಲೇಶಕ್ಷಯಂ ದೇವ ವಿಧೇಹಿ ಕುರು ಮೆ ದಯಾಂ ॥ ೪೮ ॥

ಕಿಂ ದೇವ ಧರ್ಮನಿಷ್ಠಾನಾಮನಂತಂ ದೇವ ದುಷ್ಕೃತಂ ॥ ೪೯ ॥

ನಾದ್ಯಾಪಿ ಯೇನ ಸಿದ್ಧ್ಯಂತಿ ಶುಷ್ಕಸ್ನಾಯ್ವಸ್ಥಿಶೋಷಿತಾಃ ।
ತಚ್ಛ್ರುತ್ವಾ ವಚನಂ ದೇವ್ಯಾಃ ಪಿನಾಕೀ ಪಾತಿತಾಂತಕಃ ।
ಪ್ರೋವಾಚ ಪ್ರಹಸನ್ ಮೂರ್ಧ್ನಾ ಚಾರುಚಂದ್ರಾಂಶುಶೋಭಿತಃ ॥ ೫೦ ॥

ಶ್ರೀಮಹಾದೇವ ಉವಾಚ

ನವೇತ್ಸಿ ದೇವಿ ತತ್ತ್ವೇನ ಧರ್ಮಸ್ಯ ಗಹನಾಂ ಗತಿಂ ।
ನೈತೇ ಧರ್ಮಂ ವಿಜಾನಂತಿ ನಚ ಕಾಮವಿವರ್ಜಿತಾಃ ॥ ೫೧ ॥

ಸಂತುಷ್ಟನಾಗಲಿಲ್ಲ. ಹೀಗೆ ಕಾಲಕಳೆಯುತ್ತಿರಲು ಒಂದಾನೊಂದು ಸಮಯದಲ್ಲಿ ಪಾರ್ವತೀಸಮೇತನಾದ ಶಂಕರನು ಆಕಾಶಮಾರ್ಗದಿಂದ ಬರುತ್ತಿರುವಾಗ ಪಾರ್ವತಿಯು ಇವರನ್ನು ನೋಡಿ ದುಃಖಪಟ್ಟು ಶಂಕರನನ್ನು ಸತ್ಕರಿಸಿ, ಅವನನ್ನು ಕುರಿತು ಈ ಋಷಿಗಳೆಲ್ಲರೂ ದೇವದಾರುವನವನ್ನಾಶ್ರಯಿಸಿ ತಪಸ್ಸಿನಿಂದ ಕೃಶರಾಗುತ್ತಿದ್ದಾರೆ. ನನ್ನಲ್ಲಿ ದಯೆಯಿಟ್ಟು ಇವರ ಈ ಕ್ಲೇಶವನ್ನು ಹೋಗಲಾಡಿಸು.

೪೯-೫೧. ಎಲೈ ಸ್ವಾಮಿಯೇ, ದೇವರಲ್ಲಿಯೂ ಧರ್ಮದಲ್ಲಿಯೂ ಬಹಳ ಆಸಕ್ತರಾಗಿರುವ ಇವರು ಮಾಡಿರುವ ಅಪರಾಧವೇನು. ಅಸ್ಥಿಮಾಂಸಗಳ ಶೋಷಣೆಯಿಂದ ತಪಸ್ಸನ್ನುಮಾಡುತ್ತಿದ್ದರೂ ಇವರು ಇನ್ನೂ ಸಿದ್ಧರಾಗಲಿಲ್ಲ ಎಂದು ಪಾರ್ವತಿಯು ಹೇಳಲಾಗಿ ಶಂಕರನು ಈ ಮಾತನ್ನು ಕೇಳಿ ಚಂದ್ರಕಿರಣಗಳಿಂದ ಶೋಭಿಸುತ್ತಿರುವ ತಲೆಯನ್ನು ಅಲ್ಲಾಡಿಸಿ ನಗುತ್ತಾ ಹೀಗೆ ಹೇಳುತ್ತಾನೆ. ಎಲೈ ದೇವಿಯೇ, ಧರ್ಮದ ಸೂಕ್ಷ್ಮವಾದ ಮಾರ್ಗವನ್ನು ನೀನು ಸರಿಯಾಗಿ ತಿಳಿದಿಲ್ಲ. ಇವರು ಧರ್ಮವನ್ನು ತಿಳಿದವರೂ ಅಲ್ಲ. ಕಾಮಕ್ರೋಧಾದಿದೋಷಗಳಿಂದ ಬಿಡುಗಡೆ ಹೊಂದಿಯೂ ಇಲ್ಲ.

ನಚ ಕ್ರೋಧೇನ ನಿರ್ಮುಕ್ತಾಃ ಕೇವಲಂ ಮೂಢಬುದ್ಧಯಃ ।
ಏತಚ್ಛ್ರುತ್ವಾ ಬ್ರವೀದ್ದೇವೀ ಮಾವೇವಂ ಸಂಶಿತವ್ರತಂ ॥ ೫೨ ॥

ದೇವ ಪ್ರದರ್ಶಯಾತ್ಮಾನಂ ಪರಂ ಕೌತೂಹಲಂ ಹಿ ಮೇ ।
ಸ ಇತ್ಯುಕ್ತ ಉವಾಚೇದಂ ದೇವದೇವಃ ಸ್ಮಿತಾನನಃ ॥ ೫೩ ॥

ತಿಷ್ಠ ತ್ವಮತ್ರ ಯಾಸ್ಯಾಮಿ ಯತ್ರೈತೆ ಮುನಿಪುಂಗವಾಃ ।
ಸಾಧಯಂತಿ ತಪೋಘೋರಂ ದರ್ಶಯಿಷ್ಯಾಮಿ ಚೇಷ್ಟಿತಂ ॥ ೫೪ ॥

ಇತ್ಯುಕ್ತಾ ತು ತತೋ ದೇವೀ ಶಂಕರೇಣ ಮಹಾತ್ಮನಾ ।
ಗಚ್ಛಸ್ವೇತ್ಯಾಹ ಮುದಿತಾ ಭರ್ತಾರಂ ಭುವನೇಶ್ವರೀ ॥ ೫೫ ॥

ಯತ್ರ ತೇ ಮುನಯಃ ಸರ್ವೆ ಕಾಷ್ಠಲೋಷ್ಠಸಮಾಃ ಸ್ಥಿತಾಃ ।
ಅಧೀಯಾನಾ ಮಹಾಭಾಗಾ ಕೃತಾಗ್ನಿಸದನಕ್ರಿಯಾಃ ॥ ೫೬ ॥

ತಾನ್ವಿಲೋಕ್ಯ ತತೋ ದೇವೋ ನಗ್ನಃ ಸರ್ವಾಂಗಸುಂದರಃ ।
ವನಮಾಲಾಕೃತಾಪೀಡೋ ಯುವಾ ಭಿಕ್ಷಾಕಪಾಲಭೃತ್ ॥ ೫೭ ॥

೫೨-೫೪. ಕ್ರೋಧದಿಂದ ಕೂಡಿರುವ ಇವರು ಕೇವಲ ಮೂಢಬುದ್ಧಿಯುಳ್ಳವರಾಗಿರುವರು. ಇಂತಹ ಶಂಕರನ ಮಾತನ್ನು ಕೇಳಿದ ದೇವಿಯು ಆದರೆ ಈ ರೀತಿ ವ್ರತನಿಯಮದೊಡನೆ ಕೂಡಿರುವ ನಿನ್ನ ಸ್ವರೂಪವನ್ನು ನನಗೆ ತೋರಿಸು. ಈ ವಿಷಯದಲ್ಲಿ ನನಗೆ ಬಹಳ ಕುತೂಹಲವಿದೆ ಎಂಬ ಪಾರ್ವತಿಯ ಪ್ರತ್ಯುತ್ತರವನ್ನು ಕೇಳಿ ನಗುತ್ತಾ ಶಂಕರನು ಪಾರ್ವತಿಯನ್ನು ಕುರಿತು ನೀನು ಇಲ್ಲಿಯೇ ಇರು ನಾನು ಈ ಮುನಿಗಳಿರುವ ಸ್ಥಲಕ್ಕೆ ಹೋಗಿ ಅವರು ಘೋರತಪಸ್ಸನ್ನು ಮಾಡುತ್ತಿರುವಾಗ ನನ್ನ ವ್ಯಾಪಾರವನ್ನು ತೋರಿಸುತ್ತೇನೆ.

೫೫-೫೭. ಹೀಗೆ ಶಂಕರನಿಂದ ಹೇಳಲ್ಪಟ್ಟ ದೇವಿಯು ಸಂತೋಷದಿಂದ ಆಗಲಿ ಹೋಗಿಬರಬಹುದೆಂದು ಸಮ್ಮತಿಯನ್ನಿತ್ತಳು. ಯಾವ ಪ್ರದೇಶದಲ್ಲಿ ಆ ಮುನಿಗಳು ಕಲ್ಲುಗಳಂತೆಯೂ ಮರಗಳಂತೆಯೂ ನಿಶ್ಚೇಷ್ಟೆಯಿಂದ ಅಧ್ಯಯನ ಮತ್ತು ಅಗ್ನಿಶುಶ್ರೂಷೆಯಲ್ಲಿ ನಿರತರಾಗಿದ್ದರೋ ಆ ಪ್ರದೇಶಕ್ಕೆ ಶಂಕರನು ಹೋಗಿ ಅವರನ್ನು ನೋಡಿದನು. ತಾನು ದಿಗಂಬರನಾಗಿ (ವಸ್ತ್ರವಿಲ್ಲದೆ ಬೆತ್ತಲೆಯಾಗಿ) ಸರ್ವಾಂಗ ಸುಂದರನಾದ ಭಿಕ್ಷುವೇಷವನ್ನು ಹೊಂದಿ ವನಮಾಲಾಧಾರಿಯಾಗಿ ಯುವಕನಾಗಿ

ಆಶ್ರಮೇ ಪರ್ಯಟೇ ಭಿಕ್ಷಾಂ ಮುನೀನಾಮಾಶ್ರಮಂ ಪ್ರತಿ ।
ದೇಹಿಭಿಕ್ಷಾಂ ತತಶ್ಚೋಕ್ತ್ವಾ ಸಂಭ್ರಮನ್ನಾಶ್ರಮಂ ಯಯೌ ॥ ೫೮ ॥

ತಂ ವಿಲೋಕ್ಯಾಶ್ರಮಗತಂ ಯೋಷಿತೋ ಬ್ರಹ್ಮವಾದಿನಾಂ ।
ಸಕೌತುಕಸ್ವಭಾವೇನ ತಸ್ಯ ರೂಪೇಣ ಮೋಹಿತಾಃ ॥ ೫೯ ॥

ಪ್ರೋಚುಃ ಪರಸ್ಪರಂ ನಾರ್ಯಃ ಏಹಿ ಪಶ್ಯಾಮ ಭಿಕ್ಷುಕಂ ।
ಪರಸ್ಪರಮಿತಿ ಪ್ರೋಕ್ತ್ವಾ ಗೃಹ್ಯಮೂಲ ಫಲಂ ಬಹು ॥ ೬೦ ॥

ಗೃಹಾಣ ಭಿಕ್ಷಾಮೂಚುಸ್ತಾ ಸ್ತಂ ದೇವಂ ಮುನಿಯೋಷಿತಃ ।
ಸ ತು ಭಿಕ್ಷಾಕಪಾಲಂ ತತ್ಪ್ರಸಾರ್ಯ ಬಹುಸಾದರಂ ॥ ೬೧ ॥

ದೇಹಿ ಭಿಕ್ಷಾಂ ಶಿವಂವೋಸ್ತು ಭವತೀಭ್ಯಸ್ತಪೋಧನಾಃ ।
ಹಸಮಾನಸ್ತು ದೇವೇಶಸ್ತತ್ರ ದೇವ್ಯಾ ನಿರೀಕ್ಷಿತಃ ॥ ೬೨ ॥

ಭಿಕ್ಷಾಕಪಾಲವನ್ನು ಹಿಡಿದು ಆಶ್ರಮಗಳಲ್ಲಿ ಸುತ್ತುತ್ತಾ ಋಷಿಗಳ ಆಶ್ರಮದಲ್ಲಿ ಭಿಕ್ಷಾಂ ದೇಹಿ ಎಂದು ಹೇಳುತ್ತಾ ಸಂಭ್ರಮದಿಂದ ಓಡಾಡಿದನು.

೫೯-೬೧. ತನ್ನ ಆಶ್ರಮಕ್ಕೆ ಬಂದ ನಗ್ನನಾದ ಯುವಕ ಭಿಕ್ಷುವನ್ನು ಬ್ರಹ್ಮವಾದಿಗಳಾದ ಮಹರ್ಷಿಗಳ ಆ ಪತ್ನಿಯರು ನೋಡಿ ಅವನ ಆ ರೂಪದಿಂದ ಮೋಹಿತರಾಗಿ ಕುತೂಹಲದಿಂದ ಈ ಭಿಕ್ಷುಕನನ್ನು ನೋಡೋಣ ಬನ್ನಿ ಎಂದು ಪರಸ್ಪರ ಸಲ್ಲಾಪಮಾಡತೊಡಗಿದರು. ಹೀಗೆ ಕುತೂಹಲದಿಂದ ಪರಸ್ಪರ ಮಾತನಾಡಿಕೊಂಡು ಫಲಮೂಲಾದಿಗಳನ್ನು ಹೆಚ್ಚುಹೆಚ್ಚಾಗಿ ತೆಗೆದುಕೊಂಡು ಆ ಭಿಕ್ಷುವಿನ ಸಮೀಪಕ್ಕೆ ಹೋಗಿ ಭಿಕ್ಷೆಯನ್ನು ತೆಗೆದುಕೋ ಎಂದು ಶಂಕರನನ್ನು ಕೇಳಲಾರಂಭಿಸಿದರು. ಭಿಕ್ಷುಕ ವೇಷಧಾರಿಯಾದ ಶಂಕರನೂ ಆದರದಿಂದ ತನ್ನ ಭಿಕ್ಷಾಕಪಾಲವನ್ನು ವಿಸ್ತರಿಸುತ್ತಾ ಕೊಡಿರಿ, ಭಿಕ್ಷೆಯನ್ನು ನೀಡಿರಿ. ತಾಪಸವ್ರತದಿಂದಿರುವ ನಿಮಗೆ ಮಂಗಳವಾಗಲಿ ಎಂದು ಹರಸಿದನು.

೬೨-೬೫. ಆ ಸಮಯದಲ್ಲಿ ಹಾಸದಿಂದ ಕೂಡಿರುವ ಆ ಶಂಕರನನ್ನು ಪಾರ್ವತೀದೇವಿಯೂ ನೋಡುತ್ತಿದ್ದಳು. ಆಗ ಭಿಕ್ಷೆಯನ್ನು ಕೊಟ್ಟನಂತರ ಆ ಭಿಕ್ಷುವನ್ನು ನೋಡಿ ಮನ್ಮಥಪೀಡಿತರಾದ ಆ ಸ್ತ್ರೀಯರು ಅವನನ್ನು ಕುರಿತು ಹೀಗೆ ಹೇಳು

ತತ್ರ ಪಕ್ಷ್ಯೈವ ತಾಂ ಭಿಕ್ಷಾಂ ಪಪ್ರಚ್ಛುಸ್ತಾಃ ಸ್ಮರಾತುರಾಃ ।

ನಾರ್ಯ ಊಚುಃ

ಕೋಽಸೌ ನಾಮ ವ್ರತವಿಧಿಃ ತ್ವಯಾ ತಾಪಸ ಸೇವ್ಯತೇ ॥ ೬೩ ॥

ಯತ್ರ ನಗ್ನೇನ ಲಿಂಗೇನ ವನಮಾಲಾವಿಭೂಷಿತಃ ।
ಭವಾನ್ ವೈ ತಾಪಸೋ ಹೃದ್ಯೋ ಬ್ರೂಹಿ ಸ್ಮ ಯದಿ ಮನ್ಯಸೆ ॥ ೬೪ ॥

ಇತ್ಯುಕ್ತಸ್ತಾಪಸಸ್ತಾಭಿಃ ಪ್ರೋವಾಚ ಹಸಿತಾನನಃ ।
ಇದಂ ಮಮ ವ್ರತಂ ಕಿಂಚಿನ್ನರಹಸ್ಯಂ ಪ್ರಕಾಶತೆ ॥ ೬೫ ॥

ಶೃಣ್ವಂತಿ ಬಹವೋ ಯತ್ರ ತತ್ರ ವಾಖ್ಯಾನ ವಿದ್ಯತೆ ।
ಅಸ್ಯ ವ್ರತಸ್ಯ ಸುಭಗಾ ಇತಿ ಮತ್ವಾ ಗಮಿಷ್ಯಥ ॥ ೬೬ ॥

ಏವಮುಕ್ತಾಸ್ತದಾ ತೇನ ಪ್ರತ್ಯೂಚುಃ ತಂ ತದಾ ಮುನಿಂ ।
ತತೋಽಭ್ಯೇಹಿ ಗಮಿಷ್ಯಾಮೋ ಮುನೆ ನಃ ಕೌತುಕಂ ಮಹತ್ ॥ ೬೭ ॥

ಇತ್ಯುಕ್ತ್ವಾ ತಾಸ್ತದಾ ತಂ ವೈ ಜಗೃಹುಃ ಪಾಣಿಪಲ್ಲವೈಃ ।
ಕಾಚಿತ್ಕಂಠೆ ಸಕಂದರ್ಪಾ ಕಾಚಿತ್ಕಾಮುಪರಾ ತಥಾ ॥ ೬೮ ॥

ತ್ತಾರೆ. ಎಲೈ, ತಾಪಸನೇ, ನೀನು ಸೇವಿಸುತ್ತಿರುವ ಈ ವ್ರತವಾವುದು, ಈ ವ್ರತದಲ್ಲಿ ನಗ್ನವಾದ ಲಿಂಗದಿಂದ ಕೂಡಿ ವನಮಾಲಾಧಾರಿಯಾಗಿ ರಮಣೀಯನಾಗಿ ತೋರುತ್ತಿದ್ದೀಯೆ, ನಿನ್ನ ಉದ್ದೇಶವನ್ನು ಹೇಳು. ಎಂದು, ಈ ರೀತಿ ಅವರಿಂದ ಪ್ರಶ್ನೆಮಾಡಲ್ಪಟ್ಟ ತಾಪಸನಾದ ಶಂಕರನು ನಗುತ್ತಾ ಇದೊಂದು ನನ್ನ ವ್ರತ ಇದು ರಹಸ್ಯವಾದುದು ಪ್ರಕಾಶಪಡಿಸತಕ್ಕದ್ದಲ್ಲ. (ಈ ವಾಕ್ಯಕ್ಕೆ ಹೀಗೂ ಅರ್ಥವನ್ನು ಹೇಳಬಹುದು. ಇದೊಂದು ನನ್ನ ವ್ರತ ರಹಸ್ಯವಾದುದಲ್ಲ, ಪ್ರತ್ಯಕ್ಷವಾಗಿ ಕಾಣುತ್ತಿದೆಯಷ್ಟೆ ಎಂದು.)

೬೬-೬೯. ಎಲ್ಲಿ ಬಹಳ ಜನಗಳು ಕೇಳಲು ಸಿದ್ಧರಾಗಿರುವರೋ ಅಲ್ಲಿ ಈ ವ್ರತದ ಹೆಸರು ಹೇಳಲ್ಪಡತಕ್ಕುದಲ್ಲ. ಎಲೈ ಸುಭಗೆಯರಿರಾ, ಇಷ್ಟು ಅಂಶವನ್ನು ಮಾತ್ರ ತಿಳಿದುಕೊಂಡು ಹೆದರದಿರಿ ಎಂದು ಪ್ರತ್ಯುತ್ತರಕೊಡಲಾಗಿ ಹೀಗೆ ಹೇಳಲ್ಪಟ್ಟ ಆ ಸ್ತ್ರೀಯರು ನಿನ್ನಲ್ಲಿ ನಮಗೆ ಬಹಳ ಕುತೂಹಲವುಂಟಾಗಿದೆ ಬಾ ಹೋಗೋಣ ಎಂದು ಆ ಮುನಿಯನ್ನು ಕೈಗಳಿಂದ ಕೆಲವರು ಹಿಡಿದುಕೊಂಡು ಎಳೆದರು. ಕೆಲವು ಸ್ತ್ರೀಯರು ಮನ್ಮಥಾತುರರಾಗಿ ಆ ಮುನಿಯ ಕಂಠವನ್ನಾಲಂಗಿಸಿದರು. ಹಾಗೆಯೇ

ಜಾನುಭ್ಯಾಮಪರಾ ನಾರೀ ಕೇಶೇಷು ಲಲಿತಾ ಪರಾ ।
ಅಪರಾ ತು ಕಟೀರಂಧ್ರೇ ಹ್ಯಪರಾ ಪಾದಯೋರಪಿ ॥ ೬೯ ॥

ಕ್ಷೋಭಂ ವಿಲೋಕ್ಯ ಮುನಯ ಆಶ್ರಮೇ ತು ಸ್ವಯೋಷಿತಾಂ ।
ಹನ್ಯತಾಮಿತಿ ಸಂಭಾಷ್ಯ ಕಾಷ್ಠಪಾಷಾಣಪಾಣಯಃ ॥ ೭೦ ॥

ಪಾತಯಂತಿಸ್ಮ ದೇವಸ್ಯ ಲಿಂಗಮೂರ್ಧ್ವಂ ವಿಭೀಷಣಂ ।
ಪಾತಿತೆ ತು ತತೋ ಲಿಂಗೇ ಗತೋಂತರ್ಧಾನಮೀಶ್ವರಃ ॥ ೭೧ ॥

ದೇವ್ಯಾ ಜಹಾಸ ಭಗವಾನ್ಕೈಲಾಸಂ ನಗಮಾಶ್ರಿತಃ ।
ಪತಿತೆ ದೇವದೇವಸ್ಯ ಲಿಂಗಸ್ಪಷ್ಟೆ ಚರಾಚರೆ ॥ ೭೨ ॥

ಕ್ಷೋಭೋ ಬಭೂವ ಸುಮಹಾನೃಷೀಣಾಂ ಭಾವಿತಾತ್ಮನಾಂ ।
ಏವಂ ವಿದಿತ್ವಾ ತೆ ತತ್ರ ವರ್ತಂತೆ ವ್ಯಾಕುಲಾಃ ಸ್ಮೃತಾಃ ॥ ೭೩ ॥

ಕೆಲವರು ಮುಂಡಿಗಳನ್ನೂ, ಮತ್ತೊಬ್ಬಳು ತಲೆಯ ಕೂದಲುಗಳನ್ನೂ, ಇನ್ನೊಬ್ಬಳು ಸೊಂಟವನ್ನೂ, ಮಗದೊಬ್ಬಳು ತೊಡೆಗಳ ಸಂದಿಗಳನ್ನೂ ಆಲಿಂಗಿಸಿದರು.

೭೦-೭೩. ಆ ಋಷಿಗಳು ಆಶ್ರಮದಲ್ಲಿ ತಮ್ಮ ಸ್ತ್ರೀಯರಿಗುಂಟಾದ ಈ ಚಿತ್ತ ಕ್ಷೋಭವನ್ನು ನೋಡಿ ಇವನನ್ನು ಹೊಡೆಯಿರಿ ಹೊಡೆಯಿರಿ ಎಂದು ಪರಸ್ಪರ ಸಂಭಾಷಣೆಯಿಂದ ಪ್ರೇರಿಸಲ್ಪಟ್ಟು ಕಲ್ಲು ಮಣ್ಣು ಹೆಂಟೆಗಳನ್ನು ತೆಗೆದುಕೊಂಡು ಶಂಕರನ ಲಿಂಗದ ಮೇಲೆ ಪ್ರಹರಿಸಿ ಭಯಂಕರವಾದ ಆ ಲಿಂಗವನ್ನು ವೇಗದಿಂದ ಆಕಾಶಕ್ಕೆ ಚಿಮ್ಮುವಂತೆ ಕೆಡಹಿದರು. ಈರೀತಿ ಋಷಿಗಳ ಕ್ರೋಧಾವೇಶಕಾರ್ಯದಿಂದ ಶಂಕರನ ಲಿಂಗವು ಕೆಳಗೆ ಬೀಳಲಾಗಿ ಶಂಕರನೂ ಆ ಕ್ಷಣದಲ್ಲೇ ಅಂತರ್ಧಾನಹೊಂದಿದನು. ತನ್ನ ಈ ವೃತ್ತಾಂತವನ್ನು ತಿಳಿದ ದೇವಿಯೊಡನೆ ನಗುತ್ತಾ ಕೈಲಾಸಕ್ಕೆ ಹೋಗಿ ಸೇರಿದನು. ಈಶ್ವರನ ಈ ಲಿಂಗದ ಭಾಗವು ಜಗತ್ತಿನಲ್ಲಿ ಬಿದ್ದೊಡನೆಯೇ ಆ ಋಷಿಗಳ ಮನಸ್ಸಿನಲ್ಲಿ ಬಹಳ ಕಳವಳಕ್ಕೆ ಅವಕಾಶವಾಯಿತು ಅವರೂ ಆತ್ಮ ಭಾವನೆಯಿಂದ ಈ ವಿಚಾರವನ್ನು ತಿಳಿದು ಬಹಳ ವ್ಯಾಕುಲರಾದರು.

ಉವಾಚೈಕೋ ಮುನಿವರಸ್ತತ್ರ ಬುದ್ಧಿಮತಾಂ ವರಃ ।
ನ ವಯಂ ವಿದ್ಮಃ ಸದ್ಭಾವಂ ತಾಪಸಸ್ಯ ಮಹಾತ್ಮನಃ ॥ ೭೪ ॥

ವಿರಿಂಚಿಂ ಶರಣಂ ಯಾಮಃ ಸಹಿ ಜ್ಞಾಸ್ಯತಿ ಚೇಷ್ಟಿತಂ ।
ಏವಮುಕ್ತಾಃ ಸರ್ವಏವ ಮುನಯಃ ಸಂಜಿತೇಂದ್ರಿಯಾಃ ॥ ೭೫ ॥

ಬ್ರಹ್ಮಣಃ ಸದನಂ ಜಗ್ಮುಃ ದೇವೈಸ್ಸರ್ವೈಃ ನಿಷೇವಿತಂ ।
ಪ್ರಣಿಪತ್ಯಾಥ ದೇವೇಶಂ ಲಜ್ಜಯಾಧೋಮುಖಾಃ ಸ್ಥಿತಾಃ ॥ ೭೬ ॥

ಅಥ ತಾನ್ ದುಃಖಿತಾನ್ ದೃಷ್ಟ್ವಾ ಬ್ರಹ್ಮಾ ವಚನಮಬ್ರವೀತ್ ।
ಅಹೋ ಮುಗ್ಧಾ ಯದಾ ಯೂಯಂ ಕ್ರೋಧೇನ ಕಲುಷೀಕೃತಾಃ ॥ ೭೭ ॥

ನ ಧರ್ಮಂ ಚ ಕ್ರಿಯಾಂ ಕಾಂಚಿಜ್ಜಾನತೇ ಮೂಢಬುದ್ಧಯಃ ।
ಶ್ರೂಯತಾಂ ಧರ್ಮಸರ್ವಸ್ವಂ ತಾಪಸಾಃ ಕ್ರೂರಕರ್ಮಣಃ ॥ ೭೮ ॥

೭೪-೭೭. ಆಗ ಅವರಲ್ಲೊಬ್ಬ ಬುದ್ಧಿವಂತನಾದ ಋಷಿಯು ಆ ಮಹಾತ್ಮನಾದ ತಾಪಸನು ನಮ್ಮ ಆಶ್ರಮಗಳಲ್ಲಿ ಇದ್ದಾನೆಂಬ ವಿಷಯವೇ ನಮಗೆ ಗೊತ್ತಿರಲಿಲ್ಲ. (ಈಶ್ವರನೇ ತಾಪಸನಾಗಿ ಇಲ್ಲಿದ್ದ ವಿಷಯ ನಮಗೆ ತಿಳಿಯದೇಹೋಯಿತು ಎಂದೂ ಇದಕ್ಕೆ ತಾತ್ಪರ್ಯ.) ಆದದ್ದು ಆಗಿಹೋಯಿತು. ಇದನ್ನು ಚಿಂತಿಸಿ ಫಲವಿಲ್ಲ. ಪ್ರಕೃತ ಈ ಅಪರಾಧದ ಪ್ರತೀಕಾರಕ್ಕಾಗಿ ಚತುರ್ಮುಖನಲ್ಲಿ ಶರಣುಹೋಗೋಣ. ಈಶ್ವರನ ಈ ವ್ಯಾಪಾರವು ಏತಕ್ಕೆ ಎಂಬುದನ್ನು ಅವನು ತಿಳಿಯುತ್ತಾನೆ ಎಂದು ಸಲಹೆ ಕೊಡಲಾಗಿ ಎಲ್ಲಾ ಋಷಿಗಳೂ ಅವನ ಮಾತನ್ನು ಒಪ್ಪಿ ಜಿತೇಂದ್ರಿಯರಾಗಿ ದೇವತೆಗಳಿಂದ ಸೇವಿಸಲ್ಪಡುತ್ತಿರುವ ಆ ಚತುರ್ಮುಖಲೋಕಕ್ಕೆ ಹೋಗಿ ಅಲ್ಲಿ ಬ್ರಹ್ಮನನ್ನು ಕಂಡು ನಮಸ್ಕರಿಸಿ ತಾವು ನಡೆಸಿದ ಅಕಾರ್ಯಕ್ಕಾಗಿ ಲಜ್ಜೆಪಡುತ್ತಾ ತಲೆಬಾಗಿಸಿಕೊಂಡು ಮೂಕರಂತೆ ನಿಂತರು. ಹೀಗೆ ದುಃಖಿತರಾಗಿರುವ ಅವರನ್ನು ನೋಡಿ ಚತುರ್ಮುಖನು ಹೀಗೆ ಹೇಳುತ್ತಾನೆ.

೭೮-೮೧. ಎಲೈ ಋಷಿಗಳೇ, ನೀವೂ ಕೋಪದಿಂದ ದೂಷಿತರಾಗಿ ಹೀಗೆ ಅವಿವೇಕಿಗಳಾದಿರಲ್ಲಾ, ಅಯ್ಯೋ! ಧರ್ಮಸ್ವರೂಪವೇನು, ಅದಕ್ಕೆ ತಕ್ಕಂತೆ ತಾನು ಮಾಡಬೇಕಾದ ಕೆಲಸವೇನು ಎಂಬುದನ್ನರಿಯದೆ ಹೀಗೆ ಮೂಢಬುದ್ಧಿಗಳಾದಿರಲ್ಲಾ! ಈ ರೀತಿ ಕ್ರೂರಕರ್ಮಿಗಳಾದ ನೀವು ಮನಶ್ಶುದ್ಧಿಗಾಗಿ ಧರ್ಮದ ಸರ್ವಸ್ವವನ್ನು

ವಿದಿತ್ವಾ ಯದ್ಬುಧಾಃ ಕ್ಷಿಪ್ರಂ ಧರ್ಮಸ್ಯ ಫಲಮಾಪ್ನುಯಾತ್ ।
ಯೋಽಸಾವಾತ್ಮನಿ ದೇಹೇಽಸ್ಮಿನ್ವಿಭುರ್ನಿತ್ಯೋ ವ್ಯವಸ್ಥಿತಃ ॥೭೯॥

ಸೋಽನಾದಿಃ ಸಮಹಾಸ್ಥಾಣುಃ ಪೃಥಕ್ತ್ವೇ ಪರಿಸೂಚಿತಃ ।
ಮಣಿರ್ಯಥೋಪಧಾನೇನ ಧತ್ತೇ ವರ್ಣೋಽಜ್ಜ್ವಲೋಽಪಿ ವೈ ॥೮೦॥

ತನ್ಮಯೋ ಭವತಿ ತದ್ವದಾತ್ಮಾಽಪಿ ಮನಸಾ ಕೃತಃ ।
ಮನಸೋ ಭೇದಮಾಶ್ರಿತ್ಯ ಕರ್ಮಭಿಶ್ಚೋಪಚೀಯತೇ ॥೮೧॥

ತತಃ ಕರ್ಮವಶಾದ್ಭುಂಕ್ತೇ ಯದ್ಭೋಗಾನ್ ಸ್ವರ್ಗನಾರಕಾನ್ ।
ತನ್ಮನಃ ಶೋಧಯೇದ್ಧೀಮಾನ್ ಜ್ಞಾನಯೋಗಮುಪಕ್ರಮೈಃ ॥೮೨॥

ತಿಳಿದುಕೊಳ್ಳಲೇಬೇಕು. ಇದನ್ನು ತಿಳಿದುಕೊಂಡು ಜ್ಞಾನಿಗಳಾಗಿ ನೀವೂ ಧರ್ಮದ ಫಲವನ್ನು ಹೊಂದಲಾಗಬಹುದು. ಯಾವ ಪರಮಾತ್ಮನು ಈ ದೇಹದಲ್ಲಿರುವ ಜೀವಾತ್ಮನಲ್ಲಿ ಅಂತರ್ಯಾಮಿರೂಪದಿಂದ ನೆಲಸಿರುವನೋ ಅವನು ಅನಾದಿಯೆಂದೂ ಶಾಶ್ವತನೆಂದೂ ಹೇಳಲ್ಪಡುತ್ತಾನೆ. ಇಂತಹ ಪರಮಾತ್ಮನು ಸರ್ವವ್ಯಾಪಕನಾಗಿರುವದ್ದರಿಂದ ಅವನಿಲ್ಲದ ಸ್ಥಳವೇ ಇಲ್ಲದಿರುವದ್ದರಿಂದ ಅವನಿಂದ ಬೇರೆಯಾಗಿರುವ ಯಾವ ವಸ್ತುವೂ ಇಲ್ಲ. ಎಲ್ಲವೂ ಆತ್ಮವಸ್ತುವೇ ಆಗಿದ್ದಲ್ಲಿ ದೇವಮನುಷ್ಯಾದಿ ಭೇದ ದೃಷ್ಟಿಗೆ ಕಾರಣವೇನೆಂದು ಆಶಂಕಿಸಿ ಸಮಾಧಾನ ಹೇಳುತ್ತಾರೆ. ಶುದ್ಧವಾದ ಸ್ಫಟಿಕ ಮಣಿಯು ಉಜ್ವಲವಾಗಿದ್ದರೂ ಸಮೀಪದಲ್ಲಿಡಲ್ಪಟ್ಟ ಜಪಾಕುಸುಮ (ಕೆಂಪು ದಾಸವಾಳದ ಹೂವು) ದ ಸಂಬಂಧದಿಂದ ಅದರ ರೂಪವನ್ನು ಹೊಂದಿ ಕೆಂಪಾಗಿ ತೋರಿ ಕೆಂಪಾದ ಸ್ಫಟಿಕವೆಂಬ ವ್ಯವಹಾರಕ್ಕೆ ಕಾರಣವಾಗುವಂತೆ ಆತ್ಮನೂ ಕೂಡ ಗುಣತ್ರಯಮಯವಾದ ಮನೋವೃತ್ತಿಗೆ ವಿಷಯನಾಗಿ ಆಯಾಯ ಗುಣಕ್ಕೆ ತಕ್ಕಂತೆ ದೇವಮನುಷ್ಯಾದಿ ಭೇದದೃಷ್ಟಿಗೆ ಗೋಚರನಾಗುತ್ತಾನೆ. ಈರೀತಿ ಕರ್ಮಾನುಗುಣವಾದ ಮನೋವೃತ್ತಿಗೆ ತಕ್ಕಂತೆ ಕರ್ಮವಾಸನೆಯೇ ಹೆಚ್ಚಾಗಿ ಅದರಿಂದುಂಟಾದ ಕರ್ಮಾನುಷ್ಠಾನದಿಂದ ಸ್ವರ್ಗನರಕಾದಿ ಫಲಗಳನ್ನನುಭವಿಸುತ್ತಾನೆ.

೮೨-೮೫. ಆದುದರಿಂದ ಸರ್ವಾನರ್ಥಕ್ಕೂ ಕಾರಣವಾದ ಈ ಮನಸ್ಸನ್ನು ಬುದ್ಧಿಶಾಲಿಯಾದವನು ಜ್ಞಾನಯೋಗದಿಂದ ಪರಿಶುದ್ಧಿಗೊಳಿಸಬೇಕು. ಮನಸ್ಸು ಶುದ್ಧವಾಗಿರುವ ಪಕ್ಷದಲ್ಲಿ ಅನ್ಯಥಾ ಜ್ಞಾನಾದಿಗಳಿಗೆ ಅವಕಾಶವಿರುವುದಿಲ್ಲವಾದುದರಿಂದ ಆತ್ಮಜ್ಞಾನಕ್ಕೆ ಯಾವ ತೊಂದರೆಯೂ ಇರುವುದಿಲ್ಲ. ಭೇದಬುದ್ಧಿಗೆ ಅವಕಾಶವಿಲ್ಲ

ಯಸ್ಮಿನ್ ಶುದ್ಧೇಽಹ್ಯಂತರಾತ್ಮಾ ಸ್ವಯಮೇವ ನಿರಾಕುಲಃ ।
ನ ಶರೀರಸ್ಯ ಸಂಕ್ಲೇಶೈರಪಿ ನಿರ್ದಹನಾತ್ಮಕೈಃ ॥ ೮೩ ॥

ಶುದ್ಧಿಮಾಪ್ನೋತಿ ಪುರುಷಃ ಸಂಶುದ್ಧಂ ಯಸ್ಯ ನೋ ಮನಃ ।
ಕ್ರಿಯಾನಿಯಮನಾರ್ಥಾಯ ಪಾತಕೇಭ್ಯಃ ಪ್ರಕೀರ್ತಿತಾಃ ॥ ೮೪ ॥

ಯಸ್ಮಾದತ್ಯಾವಿಲಂ ದೇಹಂ ನ ಶೀಘ್ರಂ ಶುದ್ಧ್ಯತೇ ಕಿಲ ।
ತೇನ ಲೋಕೇಷು ಮಾರ್ಗೋಽಯಂ ಸತ್ಪಥಸ್ಯ ಪ್ರವರ್ತಕಃ ॥ ೮೫ ॥

ವೆಂದು ತಾತ್ಪರ್ಯ. ಅಂತಃಕರಣಾದಿ ಸಂಬಂಧವುಳ್ಳ ಈ ಪುರುಷನು ಅಗ್ನಿಯಂತೆ ಸ್ವತಃ ಶುದ್ಧನಾಗಲಾರನು. (ಅಂತಃಕರಣಸಂಬಂಧದಿಂದ ಅಜ್ಞಾನಕ್ಕೆ ಆಶ್ರಯನಾಗುವ ಸಂಭವವಿರುವದ್ದರಿಂದ ಎಂದು ತಾತ್ಪರ್ಯ.) ಕೇವಲ ಕಾಯಕ್ಲೇಶರೂಪವಾದ ತಪಸ್ಸೂ ಆತ್ಮಶುದ್ಧಿಗೆ ಕಾರಣವಲ್ಲ. ಉಪಾಧಿಯಾಗಿರುವ ಮನಶ್ಶುದ್ಧಿ ಹೊಂದುವದೊಂದೇ ಆತ್ಮನ ನಿರಾಕುಲಸ್ಥಿತಿಗೆ ಕಾರಣವಾಗುತ್ತದೆ. ಅದಿಲ್ಲದಿದ್ದರೆ ಎಂದೂ ಇದು ಲಭಿಸುವುದಿಲ್ಲ. ಶಾಸ್ತ್ರೀಯವಾದ ಕ್ರಿಯಾಕಲಾಪಗಳೂ ಸಹ ಪಾಪವುಂಟಾಗದಂತೆ ಇವನನ್ನು ರಕ್ಷಿಸುತ್ತವೆಯೇ ಹೊರತು ಮನಸ್ಸಿನ ಅಪರಿಶುದ್ಧಿಯಿಂದ ಉಂಟಾಗಬಹುದಾದ ದೇಹದ ಅಶುದ್ಧಿಯನ್ನು ಜಾಗ್ರತೆ ಹೋಗಲಾಡಿಸಲು ಸಮರ್ಥಗಳಾಗುವುದಿಲ್ಲ. ಆದುದರಿಂದ ಲೋಕದಲ್ಲಿ ಸನ್ಮಾರ್ಗವನ್ನು ಹೊಂದಿ ಬಾಳಬೇಕಾದರೆ ಮನಶ್ಶುದ್ಧಿಯೇ ಮುಖ್ಯವಾದ ಮಾರ್ಗ. ಇಲ್ಲಿ ಈ ತಾರತಮ್ಯವನ್ನು ಗ್ರಹಿಸಬೇಕು. ಕರ್ಮಗಳು ಎರಡು ವಿಧವಾಗಿವೆ. ಕೆಲವು ಪರಮಾತ್ಮನ ಆಜ್ಞಾರೂಪ, ಕೆಲವು ಅನುಜ್ಞಾರೂಪ, ಇದರಲ್ಲಿ ಮೊದಲನೇಯದಾದ ಸಂಧ್ಯಾವಂದನಾದಿಗಳು ಆಜ್ಞಾರೂಪಗಳಾಗಿರುವದ್ದರಿಂದ ಅದನ್ನು ಮಾಡದಿದ್ದಲ್ಲಿ ಅಪರಾಧಿಯಾಗುತ್ತಾನೆ. ಮಾಡಿದಲ್ಲಿ ಫಲವೇನೂ ಇಲ್ಲ. ಇಂತಹ ಕ್ರಿಯೆಗಳಿಂದ ದೇಹಶುದ್ಧಿಯೇ ಮೊದಲಾದ ಯಾವ ಫಲವೂ ಇಲ್ಲವೆಂಬುದು ನಿರ್ವಿವಾದ ವಿಷಯ. ಮತ್ತೊಂದು ಅನುಜ್ಞಾರೂಪವಾದದ್ದು ತೀರ್ಥಯಾತ್ರಾದಿಗಳು. ಇವುಗಳನ್ನು ಮಾಡದಿದ್ದಲ್ಲಿ ಅಪರಾಧವೇನೂ ಇಲ್ಲ. ಮಾಡುವಪಕ್ಷದಲ್ಲಿ ಪಾಪಕ್ಷಯವೋ ಅಥವಾ ಭಗವತ್ಪ್ರೀತಿಯೋ ಯಾವುದಾದರೊಂದು ಸಂಕಲ್ಪಕ್ಕೆ ತಕ್ಕಂತೆ ಫಲವುಂಟು. ಇದರಿಂದ ಪಾಪನಾಶವನ್ನು ಹೊಂದಿದವನಿಗೆ ಜ್ಞಾನಯೋಗದಲ್ಲಿ ಪ್ರವೇಶವೂ ಲಭಿಸಬಹುದು. ಹೀಗಿರುವಾಗ ಮೇಲೆ ಹೇಳಿರುವ "ಕ್ರಿಯಾಃ ನಿಯಮನಾರ್ಥಾಯ" ಎಂಬ ವಚನಕ್ಕೆ ಹೀಗೆ ತಾತ್ಪರ್ಯವನ್ನು ಊಹಿಸಬಹುದು. ಕರ್ಮಾನುಷ್ಠಾನದಿಂದ ಅನೇಕ ಜನ್ಮಗಳಿಂದ ಅನುಸರಿಸಿ ಬಂದಿರುವ ಅಪರಾಧರಾಶಿ

ವರ್ಣಾಶ್ರಮವಿಭಾಗೋಽಯಂ ಲೋಕಾಧ್ಯಕ್ಷೇಣ ಕೇನ ಚಿತ್ ।
ನಿಮಿತ್ತಂ ಮೋಹಮಾಹಾತ್ಮ್ಯಂ ನಿಹ್ನವೋತ್ತಮಭಾಗಿನಾಂ ॥ ೮೬ ॥

ಭವಂತಃ ಕ್ರೋಧಕಾಮಾಭ್ಯಾಂ ಅಭಿಭೂತಾ*ಶ್ರಮೇಸ್ಥಿತಾಃ ।
ಜ್ಞಾನಿನಾಮಾಶ್ರಮೋ ವೇಶ್ಮ ವೇಶ್ಮಾಶ್ರಮಮಯೋಗಿನಾಂ ॥ ೮೭ ॥

ಕ್ವಚ ನ್ಯಸ್ತಸಮಸ್ತೇಚ್ಛಾ ಕ್ವಚ ನಾರೀಮಯೋ ಭ್ರಮಃ ।
ಕ್ವ ಕ್ರೋಧ ಈದೃಶೋ ಘೋರೋ ಯೇನಾತ್ಮಾನಂ ನ ಜಾನಥ ॥ ೮೮ ॥

ಯತ್ ಕ್ರೋಧನೋ ಯಜತಿ ಯಚ್ಚ ದದಾತಿ ನಿತ್ಯಂ
ಯದ್ವಾ ತಪಸ್ತಪತಿ ಯಚ್ಚ ಜುಹೋತಿ ತಸ್ಯ ।

ಗಳಲ್ಲಿ ಕೆಲವು ನಾಶವಾಗಬಹುದು. ಆದರೂ ಅಪರಾಧೋತ್ಪತ್ತಿಗೆ ಮೂಲವಾದ ಮನೋದೋಷವು ಹಾಗೆಯೇ ಇದ್ದಲ್ಲಿ ತನ್ಮೂಲಕವಾದ ಅಪರಾಧಾನುವೃತ್ತಿಯು ತಪ್ಪಿದುದಲ್ಲ. ಅದಕ್ಕೆ ಮನಸ್ಸನ್ನು ಶುದ್ಧಿಗೊಳಿಸುವುದೇ ಮುಖ್ಯೋಪಾಯವೆಂದು ತಾತ್ಪರ್ಯ.

೮೬-೮೯. ಬ್ರಾಹ್ಮಣಾದಿ ವರ್ಣಗಳ ಹಾಗೂ ಆಶ್ರಮಗಳ ಈ ವಿಭಾಗವೆಲ್ಲಾ ಯಾವುದೋ ಒಂದು ಲೋಕದೃಷ್ಟಿಯಿಂದ ಉಂಟಾಗಿದೆಯೇ ಹೊರತು ಉತ್ತಮ ವರ್ಣವೂ ಆಶ್ರಮವೂ ಮನಶ್ಶುದ್ಧಿಗೆ ಕಾರಣವಾಗಲಾರವು. ಅಪರಾಧಾತಿಶಯದಿಂದ ನಿಮಗೆ ಉಂಟಾಗಿರುವ ಅಜ್ಞಾನದ ಮಹಿಮೆಯೇ ಇಂತಹ ದುಷ್ಕರ್ಮಕ್ಕೆ ಕಾರಣ ವಾಗಿದೆ. ನೀವು ತಾಪಸರಂತೆ ಆಶ್ರಮದಲ್ಲಿದ್ದರೂ ಕಾಮಕ್ರೋಧಗಳಿಂದ ಬಹಳ ದೂಷಿತರಾಗಿರುತ್ತೀರಿ. ಜ್ಞಾನಿಗಳಿಗೆ ಮನೆಯೇ ಆಶ್ರಮವಾದೀತು ಅಜ್ಞಾನಿಗಳಿಗೆ ಆಶ್ರಮವೂ ಸಾಮಾನ್ಯವಾದ ಮನೆಯೇ ಆದೀತು. ಕಾಮ್ಯವಸ್ತುವಿನ ಇಚ್ಛೆಯೆಲ್ಲ ವನ್ನೂ ತೊರೆದಿರುವ ನೀವೆಲ್ಲಿ ? ಸ್ತ್ರೀವಿಷಯವಾದ ಭ್ರಮವೆಲ್ಲಿ? ಅದರಲ್ಲೂ ಅನರ್ಥ ಕರವಾದ ಇಂತಹ ಕ್ರೋಧವೆಲ್ಲಿಂದ ಬಂದಿತು. ಈ ಕ್ರೋಧದಿಂದ ಆತ್ಮಜ್ಞಾನವನ್ನೂ ಬಿಟ್ಟು ಮೂಢರಾದಿರಲ್ಲಾ ! ಲೋಕದಲ್ಲಿ ಕೋಪವು ಸರ್ವಾನರ್ಥಕಾರಣವೆಂದು ತಿಳಿಯಲಿಲ್ಲವೇ ? ಕೋಪಿಯಾದವನು ಯಾಗಮಾಡಿದರೂ ದಾನಮಾಡಿದರೂ ನಿತ್ಯವೂ

---

*ಇಲ್ಲಿ ಆಶ್ರಮದಲ್ಲಿರುವುದಕ್ಕೆ ಬದಲಾಗಿ ಶ್ರಮದಲ್ಲಿರುತ್ತೀರಿ ಎಂಬ ಉಪಹಾಸವೂ ತೋರಿಬರುತ್ತದೆ.

ಪ್ರಾಪ್ನೋತಿ ನೈವ ಕಿಮಪೀಹ ಫಲಂ ಹಿ ಲೋಕೇ
ಮೋಘಂ ಫಲಂ ಭವತಿ ತಸ್ಯ ಹಿ ಕೋಪನಸ್ಯ **॥ ೮೯ ॥**

ಇತಿ ಶ್ರೀ ವಾಮನಪುರಾಣೇ ಸರೋಮಾಹಾತ್ಮ್ಯೇ
ತ್ರಿಚತ್ವಾರಿಂಶೋಽಧ್ಯಾಯಃ

ತಪಸ್ಸನ್ನು ಮಾಡಿದರೂ ಹೋಮಮಾಡಿದರೂ ಅವನು ಈ ಲೋಕದಲ್ಲಿ ಯಾವ ಫಲವನ್ನೂ ಹೊಂದುವುದಿಲ್ಲ. ಅವನ ಆ ವ್ಯಾಪಾರವೆಲ್ಲವೂ ನಿಷ್ಫಲವಾಗುತ್ತವೆ.

ಇಲ್ಲಿಗೆ ಶ್ರೀ ವಾಮನಪುರಾಣದ ಸರೋಮಾಹಾತ್ಮ್ಯದಲ್ಲಿ
ನಲವತ್ತಮೂರನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಸ್ಥಾಣುತೀರ್ಥದ ಮತ್ತು ಸ್ಥಾಣುವಟದ ಮಾಹಾತ್ಮ್ಯವನ್ನು ಹೇಳಬೇಕೆಂದು ಋಷಿಗಳು ಪ್ರಶ್ನೆ ಮಾಡಲಾಗಿ ಲೋಮಹರ್ಷಣರು ಹಿಂದೆ ಆ ತೀರ್ಥದಲ್ಲಿ ವಾಸಿಸುತ್ತಿದ್ದ ಸನತ್ಕುಮಾರರು ಮಾರ್ಕಂಡೇಯಮುನಿಯ ಪ್ರಶ್ನೆಗೆ ಉತ್ತರವಾಗಿ ಹೇಳಿದುದನ್ನು ಅನುವದಿಸುತ್ತಾರೆ. ಸೃಷ್ಟಿಕ್ರಮವನ್ನು ವಿವರಿಸಿ ಗುಣಾತೀತನಾದ ಪರಮಾತ್ಮನ ಸಂಕಲ್ಪದಿಂದ ಬ್ರಹ್ಮಾಂಡದ ಉತ್ಪತ್ತಿಯನ್ನೂ ಅದರಲ್ಲಿ ಸೃಷ್ಟಿಗೆ ತಕ್ಕ ರಜೋಗುಣಮಯ ಪ್ರಕೃತಿ ಸಂಬಂಧದಿಂದ ಚತುರ್ಮುಖನ ಉತ್ಪತ್ತಿಯನ್ನೂ ತಮೋಗುಣಸಂಬಂಧದಿಂದ ರುದ್ರದೇವರ ಉತ್ಪತ್ತಿಯನ್ನೂ ವರ್ಣಿಸಿ ಬ್ರಹ್ಮಾಂಡಾಂತರ್ಗತವಾದ ಜಲದಿಂದ ನದೀಸಮುದ್ರಗಳ ಉತ್ಪತ್ತಿಯನ್ನೂ ವರ್ಣಿಸಿ ಚತುರ್ಮುಖನ ಸಮೀಪದಲ್ಲಿ ನಿರ್ಮಿತವಾಗಿದ್ದ ಈ ಸರೋವರಕ್ಕೆ ಅವನ ನಾಭೀಜಲದಿಂದ ಪೂರ್ಣತೆಯನ್ನೂ ವರ್ಣಿಸಿ ತೀರ್ಥದ ಉತ್ಪತ್ತಿಯನ್ನೂ ಹೇಳಿದಂತಾಯಿತು. ಮುಂದಿನ ಉತ್ತರಕ್ಕೆ ತಕ್ಕಂತೆ ಚತುರ್ಮುಖನಿಂದ ಉತ್ಪನ್ನರಾದ ವಾಲಖಿಲ್ಯರ ತಪಸ್ಸನ್ನು ವರ್ಣಿಸಿ ಅವರ ತಪಸ್ಸು ಮನಶ್ಶುದ್ಧಿಯಿಂದ ಕೂಡಿರಲಿಲ್ಲವೆಂಬುದನ್ನು ಪಾರ್ವತೀ

ದೇವಿಗೆ ಸ್ಥಿರಪಡಿಸಲು ಶಂಕರನು ಮಾಡಿದ ವ್ಯಾಪಾರವನ್ನು **ವರ್ಣಿಸಲಾಯಿತು.** ಈ ಸಂದರ್ಭದಲ್ಲಿ ಶಂಕರನು ಋಷಿಪತ್ನಿಗಳ **ಆಶ್ರಮಕ್ಕೆ ನಗ್ನನಾಗಿ ಹೋದುದು** ಸ್ಥೂಲದೃಷ್ಟಿಯಲ್ಲಿರುವವರಿಗೆ ತಪ್ಪೆಂದು ತೋರಿಬಂದರೂ ಆ ಋಷಿಗಳ **ಕಾಮಕ್ರೋಧ** ಪರವಶತೆಯ ಪರೀಕ್ಷಣಕ್ಕೆ ಅದು ಸಾಧನವೇ ಆಯಿತು ಮತ್ತು ತಮ್ಮ ಅಪರಾಧದ ಪ್ರತೀಕಾರಕ್ಕಾಗಿ ಚತುರ್ಮುಖನಲ್ಲಿ ಶರಣಾಗತರಾದ ಋಷಿಗಳಿಗೆ ಚತುರ್ಮುಖನು ಮಾಡಿದ ಉಪದೇಶವನ್ನು ವಿವರಿಸಲಾಯಿತು. ವಿವೇಕಿಯಾದ ಮನುಷ್ಯನು ದೇಹಾತ್ಮವಿವೇಕವನ್ನು ಹೊಂದಿದಮೇಲೆ ಮನಶ್ಶುದ್ಧಿಹೊಂದಿ ಆತ್ಮಸ್ವರೂಪವನ್ನು ತಿಳಿದಿರಬೇಕು. ಶುದ್ಧವಾಗಿಯೂ ನಿತ್ಯವಾಗಿಯೂ ಜ್ಞಾನಾಕಾರವಾಗಿಯೂ ಇರುವ ಆತ್ಮವಸ್ತುವು ಎಲ್ಲಾ ದೇಹಿಗಳಲ್ಲಿ ಸಮವಾಗಿರುವುದು. ಅದರ ಸ್ವರೂಪದಲ್ಲಿ ಯಾವ ತಾರತಮ್ಯವೂ ಇಲ್ಲ. ದೇವಮನುಷ್ಯಾದಿ ಭೇದಗಳೆಲ್ಲವೂ ಆಯಾಯ ಗುಣಪ್ರಚುರ ವಾದ ಅಂತಃಕರಣಸಂಬಂಧದಿಂದ ಉಂಟಾದುದು. ಇದಕ್ಕೆ ದೃಷ್ಟಾಂತವಾಗಿ ಕೆಂಪು ದಾಸವಾಳದಹೂವಿನ ಸಾನ್ನಿಧ್ಯಹೊಂದಿರುವ ಸ್ಫಟಿಕಮಣಿಯು ಹೇಳಲ್ಪಟ್ಟಿದೆ. ಆತ್ಮ ನಲ್ಲಿ ತೋರಿಬರುವ ದೇವಾದಿ ತಾರತಮ್ಯಗಳು ಭ್ರಮಜ್ಞಾನಸಿದ್ಧವೆಂದು ಹೇಳಿದಂ ತಾಯಿತು. ಆದುದರಿಂದ "ಶುನಿಚೈವಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ" ಎಂಬ ನ್ಯಾಯದಿಂದ ಸಾಮ್ಯಬುದ್ಧಿಯಿಂದ ಶಾಂತರಾಗಿರಬೇಕಾಗಿದ್ದ ನೀವು ಅಂತಃಕರಣ ದೋಷದಿಂದುಂಟಾದ ಕ್ರೋಧಕ್ಕೆ ಅಧೀನರಾಗಿ ಭೇದಬುದ್ಧಿ ಹೊಂದಿ ಈಶ್ವರನಲ್ಲಿ ಅಪರಾಧಿಗಳಾದಿರಿ ಎಂದು ಜ್ಞಾನಯೋಗದ ಮಹಿಮೆಯನ್ನು ಉಪದೇಶಿಸಿದಂತಾ ಯಿತು. ಈ ಸಂದರ್ಭದಲ್ಲಿ ಆತ್ಮಗಳಿಗೆ ಜ್ಞಾನೈಕಾಕಾರತೆಯಿಂದ ಸಾಮ್ಯವಿರುವಂತೆ ಪರಮಾತ್ಮನಲ್ಲಿ ಶರೀರಭಾವವನ್ನು ಹೊಂದಿರುವುದೂ ಒಂದು ಸಾಮ್ಯವೆಂದೂ ಅದರಿಂದ ಎಲ್ಲಾ ಆತ್ಮಗಳಿಗೂ ಶರೀರಭಾವಪಿರುವದ್ದರಿಂದ ಹಸ್ತಪಾದಾದಿ ಶರೀರಭಾಗಗಳಂತೆ ಜೀವಾತ್ಮರುಗಳೂ ಪರಸ್ಪರ ದ್ವೇಷಾಸೂಯಾದಿ ದೋಷಹೊಂದಲು ಅವಕಾಶವಿಲ್ಲ ವೆಂತಲೂ ತಾತ್ಪರ್ಯವನ್ನು ಊಹಿಸಬಹುದು. ಜೀವ ಪರ ಸ್ವರೂಪ ಜ್ಞಾನವಿಲ್ಲದವರು ನಾಸ್ತಿಕ್ಯದಿಂದಲಾದರೂ ದೇಹಾತ್ಮಭ್ರಮದಿಂದಾದರೂ ಅಜ್ಞಾನಿಗಳಾಗಿ ಅಕಾರ್ಯಶೀಲ ರಾಗಬಹುದು. ಜ್ಞಾನಯೋಗ ಹೊಂದಿರುವವನಿಗೆ ಈ ಭ್ರಮವುಂಟಾಗಲು ಕಾರಣ ವಿರುವುದಿಲ್ಲವೆಂಬ ಭಾವನೆಯಿಂದ ಜ್ಞಾನಯೋಗಾಧಿಕಾರದ ಮಹಿಮೆಯನ್ನು ಮಾತ್ರ ಇಲ್ಲಿ ಹೇಳಿರುವರು. ಪರಮಾತ್ಮಜ್ಞಾನವು ಇದಕ್ಕೂ ಮೇಲಿನ ಸೋಪಾನವಾದುದ ರಿಂದ ಅಂತಃಕರಣದೋಷದಿಂದಿರುವವರು ಅಂತಹ ಪರಮಾತ್ಮೋಪದೇಶಕ್ಕೆ ಅನಧಿ ಕಾರಿಗಳೆಂದು ತಿಳಿದು ಆತ್ಮಜ್ಞಾನಮಾತ್ರವನ್ನೇ ಇಲ್ಲಿ ಉಪದೇಶಿಸಿರುತ್ತಾರೆ.

॥ ಶ್ರೀಃ ॥

ಶ್ರೀವಾಮನಪುರಾಣಂ

ಚತುಶ್ಚತ್ವಾರಿಂಶೋಽಧ್ಯಾಯಃ

ಸನತ್ಕುಮಾರ ಉವಾಚ

ಬ್ರಹ್ಮಣೋ ವಚನಂ ಶ್ರುತ್ವಾ ಋಷಯಃ ಸರ್ವ ಏವ ತೇ ।
ಪುನರೇವ ಚ ಪಪ್ರಚ್ಛುಃ ಜಗತಃ ಶ್ರೇಯಕಾರಣಂ ॥ ೧ ॥

ಬ್ರಹ್ಮೋವಾಚ

ಗಚ್ಛಾಮಃ ಶರಣಂ ದೇವಂ ಶೂಲಪಾಣಿಂ ತ್ರಿಲೋಚನಂ ।
ಪ್ರಸಾದಾದ್ದೇವದೇವಸ್ಯ ಭವಿಷ್ಯಥ ಯಥಾಪುರಾ ॥ ೨ ॥

ಇತ್ಯುಕ್ತ್ವಾ ಬ್ರಹ್ಮಣಾ ಸಾರ್ಧಂ ಕೈಲಾಸಂ ಗಿರಿಮುತ್ತಮಂ ।
ದದೃಶು ಸ್ತೇ ಸಮಾಸೀನಂ ಉಮಯಾ ಸಹಿತಂ ಹರಂ ॥ ೩ ॥

ನಲವತ್ತನಾಲ್ಕನೆಯ ಅಧ್ಯಾಯವು

೧-೪. ಪುನಃ ಸನತ್ಕುಮಾರರು ಮುಂದಿನ ವೃತ್ತಾಂತವನ್ನು ಹೇಳುತ್ತಾರೆ:— ಚತುರ್ಮುಖನ ಈ ಮಾತುಗಳನ್ನೆಲ್ಲಾ ಕೇಳಿ ಆ ಋಷಿಗಳೆಲ್ಲರೂ ಆಗತಕ್ಕ ಕೆಲಸವು ಆಗಿಹೋಯಿತು ಇನ್ನುಮುಂದೆ ಜಗತ್ತಿನ ಶ್ರೇಯಸ್ಸಿಗೆ ತಕ್ಕ ಯಾವ ಮಾರ್ಗವನ್ನು ಅನುಸರಿಸಬೇಕೆಂದು ಬ್ರಹ್ಮನನ್ನು ಪ್ರಶ್ನೆಮಾಡಲಾಗಿ ಆಗ ಬ್ರಹ್ಮನು ಶೂಲಪಾಣಿಯಾದ ಆ ತ್ರಿಲೋಚನನಲ್ಲಿಯೇ ಶರಣಾಗತರಾಗಿ ಅಲ್ಲಿಗೆ ಹೋಗೋಣ ಅವನ ಅನುಗ್ರಹದಿಂದಲೇ ನೀವು ಈ ಅಪರಾಧವನ್ನು ಹೋಗಲಾಡಿಸಿಕೊಂಡು ಪೂರ್ವ ಸ್ಥಿತಿಗೆ ಬರಬೇಕು ಎಂದು ಹೇಳಲು ಆ ಬ್ರಹ್ಮನೊಡನೆ ಆ ಋಷಿಗಳೆಲ್ಲರೂ ಕೈಲಾಸ

ತತಃ ಸ್ತೋತುಂ ಸಮಾರಬ್ಧೋ ಬ್ರಹ್ಮಾ ಲೋಕಪಿತಾಮಹಃ ।
ದೇವಾಧಿದೇವಂ ವರದಂ ತ್ರೈಲೋಕ್ಯಸ್ಯ ಶಿವಂ ಪ್ರಭುಂ ॥ ೪ ॥

ಬ್ರಹ್ಮೋವಾಚ

ಅನಂತಾಯ ನಮಸ್ತುಭ್ಯಂ ವರದಾಯ ಪಿನಾಕಿನೆ ।
ಮಹಾದೇವಾಯ ದೇವಾಯ ಸ್ಥಾಣವೇ ಪರಮಾತ್ಮನೆ ॥ ೫ ॥

ನಮೋಽಸ್ತು ಭುವನೇಶಾಯ ತುಭ್ಯಂ ತಾರಕ ಸರ್ವದಾ ।
ಜ್ಞಾನಾನಾಂ ದಾಯಕೋ ದೇವಸ್ತ್ವಮೇಕಃ ಪುರುಷೋತ್ತಮಃ ॥ ೬ ॥

ನಮಸ್ತೆ ಪದ್ಮಗರ್ಭಾಯ ಹೃತ್ಪದ್ಮಶಯಿನೆ ನಮಃ ।
ಘೋರಶಾತಿತಪಾಪಾಯ ಚಂಡಕ್ರೋಧ ನಮೋಽಸ್ತುತೆ ॥ ೭ ॥

ನಮಸ್ತೆ ದೇವ ವಿಶ್ವೇಶ ನಮಸ್ತೇ ಶೂರನಾಯಕ ।
ಶೂಲಪಾಣೇ ನಮಸ್ತೇಽಸ್ತು ನಮಸ್ತೇ ವಿಶ್ವಭಾವನ ॥ ೮ ॥

ಏವಂ ಸ್ತುತೋ ಮಹಾದೇವೋ ಬ್ರಹ್ಮಣಾ ಋಷಿಭಿ ಸ್ತದಾ ।
ಉವಾಚ ತಾನಾವ್ರಜತ ಲಿಂಗಂ ವೋ ಭವಿತಾ ಪುನಃ ॥ ೯ ॥

ಪರ್ವತಕ್ಕೆ ಹೊರಟರು. ಅಲ್ಲಿ ಹೋಗಿ ಪಾರ್ವತಿಯೊಡಗೂಡಿರುವ ಶಂಕರನನ್ನು ನೋಡಿದರು. ಆಗ ಬ್ರಹ್ಮನು ದೇವತಾಗ್ರೇಸರನೂ ಲೋಕಗಳಿಗೆ ವರಪ್ರದನೂ ಆಗಿರುವ ಪ್ರಭುವಾದ ಶಂಕರನನ್ನು ಸ್ತೋತ್ರಮಾಡತೊಡಗಿದನು.

೫-೯. ಅಪರಿಚ್ಛಿನ್ನನಾಗಿಯೂ ವರಪ್ರದನಾಗಿಯೂ ಪಿನಾಕಪಾಣಿಯಾಗಿಯೂ ಶಾಶ್ವತನಾಗಿಯೂ ಪರಮಾತ್ಮಸ್ವರೂಪನಾಗಿಯೂ ಇರುವ ದೇವತಾ ಸಾರ್ವಭೌಮನಾದ ನಿನಗೆ ನಮಸ್ಕಾರಗಳು. ಯಾವಾಗಲೂ ಆಶ್ರಿತರ ಸಂಸಾರಬಂಧವನ್ನು ತೊಲಗಿಸುವ ಲೋಕಾಧಿಪತಿಯಾದ ನಿನಗೆ ನಮಸ್ಕಾರಗಳು. ಎಲೈ ದೇವನೇ, ಎಲ್ಲರಿಗೂ ಜ್ಞಾನಪ್ರದನಾಗಿರುವ ಪುರುಷಶ್ರೇಷ್ಠನು ನೀನೊಬ್ಬನೇ. ಪದ್ಮಗರ್ಭನೂ ಎಲ್ಲರ ಹೃದಯಪದ್ಮವಾಸಿಯೂ ಘೋರಪಾಪನಾಶಕನೂ ಪ್ರಚಂಡಕೋಪಿಯೂ ನೀನೇ ಆಗಿದ್ದೀಯೆ ನಿನಗೆ ನಮಸ್ಕಾರಗಳು. ಎಲೈ ವಿಶ್ವನಾಥನೇ, ಶೂರಾಗ್ರಗಣ್ಯನೇ, ಶೂಲಪಾಣಿಯೇ, ವಿಶ್ವೋತ್ಪತ್ತಿಕಾರಣನೇ, ನಿನಗೆ ಅನಂತ ನಮಸ್ಕಾರಗಳು. ಋಷಿಗಳಿಂದಲೂ ಬ್ರಹ್ಮನಿಂದಲೂ ಹೀಗೆ ಸ್ತೋತ್ರಮಾಡಲ್ಪಟ್ಟ ಶಂಕರನು ಋಷಿಗಳನ್ನು ಕುರಿತು ಬನ್ನಿರಿ. ಆ ಲಿಂಗವು ಪುನಃ ನಿಮಗೆ ಲಭಿಸುತ್ತದೆ.

ಕ್ರಿಯತಾಂ ಮದ್ವಚಃ ಶೀಘ್ರಂ ಯೇನ ಮೇ ಪ್ರೀತಿರುತ್ತಮಾ ।
ಭವಿಷ್ಯತಿ ಪ್ರತಿಷ್ಠಾಯಾಂ ಲಿಂಗಸ್ಯಾತ್ರ ನ ಸಂಶಯಃ ॥೧೦॥

ಯೇ ಲಿಂಗಂ ಪೂಜಯಿಷ್ಯಂತಿ ಮಾಮಕಂ ಭಕ್ತಿಮಾಶ್ರಿತಾಃ ।
ನ ತೇಷಾಂ ದುರ್ಲಭಂ ಕಿಂಚಿದ್ಭವಿಷ್ಯತಿ ಕದಾಚನ ॥೧೧॥

ಸರ್ವೇಷಾಮಪಿ ಪಾಪಾನಾಂ ಕೃತಾನಾಮಪಿ ಜಾನತಾ ।
ಶುದ್ಧ್ಯತೇ ಲಿಂಗಪೂಜಾಯಾ ನಾತ್ರ ಕಾರ್ಯಾ ವಿಚಾರಣಾ ॥೧೨॥

ಯುಷ್ಮಾಭಿಃ ಪಾತಿತಂ ಲಿಂಗಂ ತಾರಯಿತ್ವಾ ಮಹತ್ಸರಃ ।
ಸನ್ನಿಹತ್ಯಾಂ ತು ವಿಖ್ಯಾತಂ ತಸ್ಮಿನ್ ಶೀಘ್ರಂ ಪ್ರತಿಷ್ಠಿತಂ ॥೧೩॥

ಯಥಾಭಿಲಷಿತಂ ಕಾಮಂ ತತಃ ಪ್ರಾಪ್ಸ್ಯಥ ಬ್ರಾಹ್ಮಣಾಃ ।
ಸ್ಥಾಣುನಾಮ್ನಾ ಹಿ ಲೋಕೇಷು ಪೂಜನೀಯೋ ದಿವೌಕಸಾಂ ॥೧೪॥

ಸ್ಥಾಣ್ವೀಶ್ವರೆ ಸ್ಥಿತೋ ಯಸ್ಮಾತ್ತತಃ ಸ್ಥಾಣ್ವೀಶ್ವರಃ ಸ್ಮೃತಃ ।
ಯೇ ಸ್ಮರಂತಿ ಸದಾ ಸ್ಥಾಣುಂ ತೇ ಮುಕ್ತಾಃ ಸರ್ವಕಿಲ್ಬಿಷೈಃ ॥೧೫॥

೧೦-೧೨. ನನಗೆ ಪ್ರೀತಿಯುಂಟಾಗಬೇಕಾದರೆ ನನ್ನ ಮಾತಿನ ಪ್ರಕಾರ ಈ ಲಿಂಗವನ್ನು ಪುನಃ ಪ್ರತಿಷ್ಠೆಮಾಡಿರಿ. ಇದರಲ್ಲಿ ಸಂಶಯವಿಲ್ಲ. ನನ್ನ ಲಿಂಗವನ್ನು ಭಕ್ತಿಯಿಂದ ಯಾರು ಪೂಜಿಸುತ್ತಾರೆಯೋ ಅವರಿಗೆ ದುರ್ಲಭವಾಗಿ ಯಾವ ಮನೋರಥವೂ ಆಗುವುದಿಲ್ಲ. ಯಾವ ಕಾಲದಲ್ಲಾದರೂ ಮನೋರಥಸಿದ್ಧಿಯನ್ನು ಹೊಂದಿಯೇ ಹೊಂದುತ್ತಾರೆ. ಬುದ್ಧಿಪೂರ್ವಕವಾಗಿ ಅನೇಕ ಪಾಪಗಳನ್ನು ಮಾಡಿದ್ದಾಗ್ಯೂ ಈ ಲಿಂಗಪೂಜೆಯಿಂದ ಅವನು ಶುದ್ಧಿಹೊಂದುತ್ತಾನೆ. ಈ ವಿಷಯದಲ್ಲಿ ವಿಚಾರಮಾಡಬೇಕಾದುದಿಲ್ಲ.

೧೩-೧೫. ನಿಮ್ಮಿಂದ ಕೆಡಹಲ್ಪಟ್ಟ ಪ್ರಖ್ಯಾತವಾದ ಆ ಲಿಂಗವು ಸರೋವರವನ್ನು ದಾಟಿಹೋಗಿ ಸನ್ನಿಹಿತ್ಯಾಕ್ಷೇತ್ರದಲ್ಲಿ ಪ್ರತಿಷ್ಠಿತವಾಗಿದೆ. ಎಲೈ ಬ್ರಾಹ್ಮಣೋತ್ತಮರೇ, ಆ ಲಿಂಗವನ್ನು ಪೂಜಿಸಿ ಅದರ ಅನುಗ್ರಹದಿಂದ ನಿಮ್ಮ ಇಷ್ಟಸಿದ್ಧಿಯನ್ನು ಹೊಂದಿರಿ. ಲೋಕದಲ್ಲೆಲ್ಲಾ ದೇವತೆಗಳೂ ಸಹ ಸ್ಥಾಣುವೆಂಬ ಹೆಸರಿನಿಂದ ಆ ಲಿಂಗವನ್ನು ಪೂಜಿಸತಕ್ಕದ್ದು. ಸ್ಥಾಣ್ವೀಶ್ವರದಲ್ಲಿ ನೆಲಸಿದುದರಿಂದ ಆ ಲಿಂಗಕ್ಕೆ ಸ್ಥಾಣ್ವೀಶ್ವರವೆಂಬ ಹೆಸರು ಬಂದಿರುತ್ತೆ. ಆ ಸ್ಥಾಣುಲಿಂಗವನ್ನು ಸ್ಮರಿಸಿದವರೂ ಸಹ

ಶುದ್ಧದೇಹಾ ಭವಿಷ್ಯಂತಿ ದರ್ಶನಾನ್ಮೋಕ್ಷಗಾಮಿನಃ ।
ಇತ್ಯೇವಮುಕ್ತ್ವಾ ದೇವೇನ ಋಷಯೋ ಬ್ರಹ್ಮಣಾ ಸಹ ॥ ೧೬ ॥

ತಸ್ಮಾದ್ದಾರುವನಾಲ್ಲಿಂಗಂ ನೇತುಂ ಸಮುಪಚಕ್ರಮುಃ ।
ಅಶಕ್ತಾಃ ತಂ ಚಾಲಯಿತುಂ ತೇ ದೇವಾ ಋಷಿಭಿ ಸ್ಸಹ ॥ ೧೭ ॥

ಶ್ರಮೇಣ ಮಹತಾ ಯುಕ್ತಾಃ ಬ್ರಹ್ಮಾಣಂ ಶರಣಂ ಯಯುಃ ।
ತೇಷಾಂ ಶ್ರಮಾಭಿಪನ್ನಾನಾಮಿದಂ ಬ್ರಹ್ಮಾಬ್ರವೀದ್ವಚಃ ॥ ೧೮ ॥

ಕಿಂವಾ ಶ್ರಮೇಣ ಮಹತಾ ನ ಯೂಯಂ ವಹನಕ್ಷಮಾಃ ।
ಸ್ವೇಚ್ಛಯಾ ಪತಿತಂ ಲಿಂಗಂ ದೇವದೇವೇನ ಶೂಲಿನಾ ॥ ೧೯ ॥

ತಸ್ಮಾತ್ತಮೇವ ಶರಣಂ ಯಾಸ್ಯಾಮಃ ಸಹಿತಾಃ ಸುರಾಃ ।
ಪ್ರಸನ್ನಶ್ಚ ಮಹಾದೇವಃ ಸ್ವಯಮೇವ ಸನೇಷ್ಯತಿ ॥ ೨೦ ॥

ಇತ್ಯೇವಮುಕ್ತ್ವಾ ಋಷಯೋ ದೇವಾಶ್ಚ ಬ್ರಹ್ಮಣಾ ಸಹ ।
ಕೈಲಾಸಂ ಗಿರಿಮಾಸಾದ್ಯ ರುದ್ರದರ್ಶನಕಾಙ್ಕ್ಷಿಣಃ ॥ ೨೧ ॥

ಸರ್ವಪಾಪಗಳಿಂದ ಮುಕ್ತರಾಗುತ್ತಾರೆ ಶುದ್ಧದೇಹರಾಗಿ ದರ್ಶನಮಾಡಿದಲ್ಲಿ ಮೋಕ್ಷಗಾಮಿಗಳೇ ಆಗುತ್ತಾರೆ. ಈ ಪ್ರಕಾರ ಶಂಕರನಿಂದ ಹೇಳಲ್ಪಟ್ಟ ಆ ಋಷಿಗಳು ಬ್ರಹ್ಮನೊಡಗೂಡಿ ಆ ದಾರುವನದಿಂದ ಲಿಂಗವನ್ನು ಒಯ್ಯಲು ಪ್ರಯತ್ನಿಸಿದರು.

೧೭-೨೦. ಆಗ ದೇವತೆಗಳೂ ಋಷಿಗಳೂ ಸಹ ಆ ಲಿಂಗವನ್ನು ಅಲ್ಲಾಡಿಸಲೂ ಅಶಕ್ತರಾಗಿ ಬಹಳ ಶ್ರಮಪಟ್ಟು ಸಾಧ್ಯವಿಲ್ಲದೆ ಚತುರ್ಮುಖನಲ್ಲಿ ಶರಣಾಗತರಾದರು. ಆಗ ಬಹಳ ಶ್ರಾಂತರಾಗಿದ್ದ ಅವರನ್ನು ಕುರಿತು ಚತುರ್ಮುಖನು ನಿಮ್ಮ ಈ ಶ್ರಮದಿಂದ ಪ್ರಯೋಜನವಿಲ್ಲ. ನೀವು ಎಷ್ಟು ಶ್ರಮಪಟ್ಟರೂ ನಿಮ್ಮಿಂದ ಇದನ್ನು ವಹಿಸುವ ಕೆಲಸವು ಸಾಧ್ಯವಾಗುವುದಿಲ್ಲ. ದೇವದೇವನಾದ ಶಂಕರನು ಸ್ವೇಚ್ಛೆಯಿಂದ ಕೆಳಗೆ ಹಾಕಿದ ಈ ಲಿಂಗವನ್ನು ವಹಿಸಲು ಅವನೇ ಸಮರ್ಥನು. ಅವನಲ್ಲೇ ನಾವು ಶರಣಾಗತರಾಗೋಣ. ಅವನು ಪ್ರಸನ್ನನಾದಲ್ಲಿ ಅವನೇ ಇದನ್ನು ಒಯ್ಯಬಲ್ಲನು.

೨೧-೨೩. ಹೀಗೆ ಬ್ರಹ್ಮನಿಂದ ಹೇಳಲ್ಪಟ್ಟ ಆ ಋಷಿಗಳೆಲ್ಲರೂ ಅದನ್ನು ಒಪ್ಪಿ ಆ ಬ್ರಹ್ಮನೊಡನೆ ಕೈಲಾಸಪರ್ವತಕ್ಕೆ ಹೋಗಿ ಅಲ್ಲಿ ರುದ್ರದೇವರ ದರ್ಶನವನ್ನು

ನ ಚ ಪಶ್ಯಂತಿ ತೇ ದೇವಂ ತತಶ್ಚಿಂತಾ ಸಮನ್ವಿತಾಃ ।
ಬ್ರಹ್ಮಾಣಮೂಚುರ್ಮುನಯಃ ಕ್ವಸ ದೇವೋ ಮಹೇಶ್ವರಃ ॥ ೨೨ ॥

ತತೋ ಬ್ರಹ್ಮಾ ಚಿರಂ ಧ್ಯಾತ್ವಾ ದೇವದೇವಂ ಮಹೇಶ್ವರಂ ।
ಹಸ್ತಿರೂಪೇಣ ತಿಷ್ಠಂತಂ ಮುನಿಭಿರ್ಮಾನಸಃ ಸ್ತುತಂ ॥ ೨೩ ॥

ಅಥ ತೇ ಋಷಯಸ್ಸರ್ವೇ ದೇವಾಶ್ಚ ಬ್ರಹ್ಮಣಾ ಸಹ ।
ಗತಾಃ ಮಹತ್ಸರಃ ಪುಣ್ಯಂ ಯತ್ರದೇವಃ ಸ್ವಯಂ ಸ್ಥಿತಃ ॥ ೨೪ ॥

ನ ಚ ಪಶ್ಯಂತಿ ತೇ ದೇವಂ ಅನ್ವಿಷಂತಸ್ತತಸ್ತತಃ ।
ತತಶ್ಚಿಂತಾನ್ವಿತಾ ದೇವಾ ಬ್ರಹ್ಮಣಾ ಸಹಿತಾಸ್ತಥಾ ॥ ೨೫ ॥

ಪಶ್ಯಂತಿ ದೇವೀಂ ಸುಪ್ರೀತಾಂ ಕಮಂಡಲುವಿಭೂಷಿತಾಂ ।
ಪ್ರೀಯಮಾಣಾಸ್ತದಾ ದೇವೀಮಿದಂ ವಚನಮಬ್ರುವನ್ ॥ ೨೬ ॥

ಕ್ವ ದೇವಿ ಮಾತರ್ದೇವೇಶೋ ದೃಶ್ಯತೆ ಸರ್ವದಾ ಸಮಃ ।
ಶ್ರಮೇಣ ಮಹತಾ ಯುಕ್ತಾ ಅನ್ವಿಷಂತೋ ಮಹೇಶ್ವರಂ ॥ ೨೭ ॥

ಅಪೇಕ್ಷಿಸುವ ವೇಳೆಗೆ ಅಲ್ಲಿ ಅವನು ಪ್ರತ್ಯಕ್ಷನಾಗಲೇ ಇಲ್ಲ. ಆಗ ಬಹಳ ಚಿಂತಾಕ್ರಾಂತರಾದ ಆ ಋಷಿಗಳು ಮಹೇಶ್ವರನೆಲ್ಲಿ ನಮಗೆ ಇಲ್ಲಿ ಗೋಚರನಾಗುತ್ತಿಲ್ಲವಲ್ಲ. ಎಂದು ಬ್ರಹ್ಮನನ್ನೇ ಪ್ರಶ್ನೆಮಾಡಿದರು. ಅನಂತರ ಬ್ರಹ್ಮನೂ ಬಹಳಕಾಲ ಧ್ಯಾನದಿಂದ ಆನೆಯ ರೂಪದಲ್ಲಿರುವ ಮುನಿಜನಗಳ ಮಾನಸಗೋಚರನಾದ ಆ ಮಹೇಶ್ವರನನ್ನು ತಿಳಿದನು.

೨೪-೨೬. ಅನಂತರ ಆ ಋಷಿಗಳೆಲ್ಲರೂ ಚತುರ್ಮುಖನೊಡನೆ ಆ ಶಂಕರನು ತಾನಾಗಿ ನೆಲಸಿರುವ ಪುಣ್ಯಕರವಾದ ಆ ಸರೋವರಕ್ಕೆ ಹೋಗಿ ಸೇರಿದರು. ಅಲ್ಲಿ ಅವರು ಎಲ್ಲಿ ಹುಡುಕಿದರೂ ಆ ದೇವನನ್ನು ನೋಡಲಾಗಲಿಲ್ಲ. ಅನಂತರ ಬ್ರಹ್ಮನೊಡನೆ ಚಿಂತಾಕ್ರಾಂತರಾದ ಆ ಋಷಿಗಳು, ಪ್ರಸನ್ನಳಾಗಿಯೂ, ಕಮಂಡಲುಭೂಷಿತಳಾಗಿಯೂ ಇದ್ದ ದೇವಿಯನ್ನು ನೋಡಿದರು. ಆಗ ಸಂತುಷ್ಟರಾದ ಋಷಿಗಳು ದೇವಿಯನ್ನು ಕುರಿತು ಹೀಗೆ ಹೇಳುತ್ತಾರೆ.

೨೭-೨೯. ಎಲೈ ತಾಯಿಯೇ, ನಾವು ಬಹಳ ಶ್ರಮದಿಂದ ಎಲ್ಲೆಲ್ಲಿಯೂ ದೇವೇಶನನ್ನು ಹುಡುಕುತ್ತಿದ್ದೇವೆ. ಸರ್ವಸಮದೃಷ್ಟಿಯುಳ್ಳ ಆ ಮಹೇಶ್ವರನು

ತತಸ್ತು ಕೃಪಯಾವಿಷ್ಟಾ ದೇವೀ ವಚನಮಬ್ರವೀತ್ ।
ಅತ್ರೈವಾದ್ಯ ಮಹಾಭಾಗಾಸ್ತಂ ದ್ರಕ್ಷ್ಯಥ ಮಹೇಶ್ವರಂ ॥ ೨೮ ॥

ಪೀಯತಾಮಮೃತಂ ದೇವಾಸ್ತತೋ ಜ್ಞಾಸ್ಯಥ ಶಂಕರಂ ।
ಏತಚ್ಛ್ರುತ್ವಾ ತು ವಚನಂ ಭವಾನ್ಯಾ ಸಮುದಾಹೃತಂ ॥ ೨೯ ॥

ಸುಖೋಪವಿಷ್ಟಾಸ್ತೇ ದೇವಾಃ ಪಪುಸ್ತದಮೃತಂ ಶುಚಿ ।
ಅನಂತರಂ ಸುಖಾಸೀನಾಃ ಪಪ್ರಚ್ಛುಃ ಪರಮೇಶ್ವರೀಂ ॥ ೩೦ ॥

ಕ್ವಸ ದೇವ ಇಹಾಯಾತೋ ಹಸ್ತಿರೂಪಧರಃ ಸ್ಥಿತಃ ।
ದರ್ಶಿತಶ್ಚ ತದಾ ದೇವ್ಯಾ ಸರೋಮಧ್ಯೇ ವ್ಯವಸ್ಥಿತಃ ॥ ೩೧ ॥

ದೃಷ್ಟ್ವಾ ದೇವಂ ಹರ್ಷಯುಕ್ತಾಃ ಸರ್ವೇ ದೇವಾಃ ಸವಾಸವಾಃ ।
ಬ್ರಹ್ಮಾಣಮಗ್ರತಃ ಕೃತ್ವಾ ಇದಂ ವಚನಮಬ್ರುವನ್ ॥ ೩೨ ॥

ಎಲ್ಲಿದ್ದಾನೆ ಅವನನ್ನು ಎಲ್ಲಿ ನೋಡಬಹುದು. ಎಂದು ಕೇಳಿಕೊಳ್ಳುತ್ತಿರುವ ಆ ಋಷಿಗಳನ್ನು ನೋಡಿ ದೇವಿಯು ದಯೆಯಿಂದ ಎಲೈ, ಭಾಗ್ಯಶಾಲಿಗಳೇ, ಇಲ್ಲಿಯೇ ನೀವು ಅವನನ್ನು ನೋಡುವಿರಿ. ಈ ಅಮೃತವನ್ನು ಪಾನಮಾಡಿರಿ. ಅನಂತರ ಆ ಶಂಕರನು ನಿಮಗೇ ಗೋಚರನಾಗುತ್ತಾನೆ ಎಂದು ಹೇಳಲಾಗಿ ಆ ದೇವಿಯ ಮಾತನ್ನು ಕೇಳಿ ಆ ದೇವತೆಗಳೆಲ್ಲರೂ ಅಲ್ಲಿಯೇ ಸುಖವಾಗಿ ಕುಳಿತು ದೇವಿಯಿಂದ ದತ್ತವಾದ ಅಮೃತವನ್ನು ಪಾನಮಾಡಿದರು.

೩೦-೩೩. ಹೀಗೆ ಅಮೃತಪಾನದಿಂದ ಸುಖಿತರಾದ ಆ ಋಷಿಗಳು ದೇವಿಯಾದ ಪರಮೇಶ್ವರಿಯನ್ನು ಕುರಿತು ಹಸ್ತಿ (ಆನೆ)ಯ ರೂಪದಿಂದ ಬಂದ ದೇವನು ಇಲ್ಲಿ ಎಲ್ಲಿದ್ದಾನೆ ಎಂದು ಪ್ರಶ್ನೆಮಾಡಲಾಗಿ ದೇವಿಯು ಸರೋಮಧ್ಯದಲ್ಲಿರುವ ಆ ಶಂಕರನನ್ನು ತೋರಿಸಿದಳು. ಆಗ ದೇವತೆಗಳೆಲ್ಲರೂ ಇಂದ್ರಾದಿಗಳೊಡನೆ ಸಂತೋಷದಿಂದ ಈಶ್ವರನನ್ನು ನೋಡಿ ಬ್ರಹ್ಮನನ್ನು ಮುಂದಿಟ್ಟುಕೊಂಡು ಹೀಗೆ ಪ್ರಾರ್ಥಿಸಿದರು. ಎಲೈ ಮಹಾದೇವನೇ, ಲೋಕಸೇವ್ಯವಾದ ಆ ಲಿಂಗವು ನಿನ್ನಿಂದಲೇ ಬಿಡಲ್ಪಟ್ಟಿರು

ತ್ವಯಾ ತ್ಯಕ್ತಂ ಮಹಾದೇವ ಲಿಂಗಂ ತ್ರೈಲೋಕ್ಯವಂದಿತಂ ।
ತಸ್ಯಚಾನಯನೆ ನಾನ್ಯಸ್ಸಮರ್ಥಃ ಸ್ಯಾನ್ಮಹೇಶ್ವರ ॥ ೩೩ ॥

ಇತ್ಯೇವಮುಕ್ತೋ ಭಗವಾನ್ ದೇವೋ ಬ್ರಹ್ಮಾದಿಭಿಃ ಪರಃ ।
ಜಗಾಮ ಋಷಿಭಿಸ್ಸಾರ್ಥಂ ದೇವದಾರುವನಾಶ್ರಯಂ ॥ ೩೪ ॥

ತತ್ರ ಗತ್ವಾ ಮಹಾದೇವೋ ಹಸ್ತಿರೂಪಧರೋ ಪರಃ ।
ಕರೇಣ ಜಗ್ರಾಹತತೋ ಲೀಲಯಾ ಪರಮೇಶ್ವರಂ ॥ ೩೫ ॥

ತಮಾದಾಯ ಮಹಾದೇವಃ ಸ್ತೂಯಮಾನೋ ಮಹರ್ಷಿಭಿಃ ।
ನಿವೇಶಯಾಮಾಸ ತದಾ ಸರಃಪಾರ್ಶ್ವೆ ತು ಪಶ್ಚಿಮೆ ॥ ೩೬ ॥

ತತೋ ದೇವಾ ಸ್ಸರ್ವಏವ ಋಷಯಶ್ಚ ತಪೋಧನಾಃ ।
ಆತ್ಮಾನಂ ಸಫಲಂ ದೃಷ್ಟ್ವಾ ಸ್ತೋತ್ರಂ ಚಕ್ರುರ್ಮಹೇಶ್ವರೆ ॥ ೩೭ ॥

ಗದ್ಯ ॥ ನಮಸ್ತೆ ಪರಮಾತ್ಮನ್ ಅನಂತಯೋನೆ, ಲೋಕಸಾಕ್ಷಿನ್, ಪರಮೇಷ್ಠಿನ್, ಭಗವನ್, ಸರ್ವಜ್ಞ, ಕ್ಷೇತ್ರಜ್ಞ, ಜ್ಞಾನಜ್ಞೇಯ, ಸರ್ವೇಶ್ವರ, ಮಹಾವಿರಂಚೆ, ಮಹಾವಿಭೂತೆ, ಮಹಾಕ್ಷೇತ್ರಜ್ಞ,

---

ವದ್ದರಿಂದ ಪುನಃ ಅದನ್ನು ತರಲು ನೀನೇ ಸಮರ್ಥನೇ ಹೊರತು, ಮತ್ತಾರಿಂದಲೂ ಆ ಕೆಲಸವು ಸಾಧ್ಯವಾಗುವಂತಿಲ್ಲ.

೩೪-೩೭. ಬ್ರಹ್ಮಾದಿದೇವತೆಗಳಿಂದ ಹೀಗೆ ಹೇಳಲ್ಪಟ್ಟ ಶಂಕರನು ಋಷಿಗಳೊಡನೆ ಆ ದೇವದಾರುವನದ ಸ್ಥಾನಕ್ಕೆ ಹೋಗಿ ತಾನು ಗಜರೂಪಧಾರಿಯಾಗಿ ತನ್ನ ಸೊಂಡಲಿನಿಂದ ಆ ಲಿಂಗವನ್ನು ಲೀಲಾಮಾತ್ರದಿಂದ ತೆಗೆದುಕೊಂಡು ಋಷಿ ದೇವತೆಗಳಿಂದ ಸ್ತೋತ್ರಮಾಡಲ್ಪಡುತ್ತಾ ಸರೋವರದ ಪಶ್ಚಿಮಪಾರ್ಶ್ವದಲ್ಲಿಟ್ಟನು. ಆಗ ದೇವತೆಗಳೂ ಋಷಿಗಳೂ ಎಲ್ಲರೂ ತಮ್ಮ ಪ್ರಯತ್ನವು ಸಫಲವಾಯಿತೆಂದು ತಿಳಿದು ಕೃತಕೃತ್ಯತೆಯಿಂದ ಸಂತುಷ್ಟರಾಗಿ ಮಹೇಶ್ವರನನ್ನು ಈ ರೀತಿ ಸ್ತೋತ್ರ ಮಾಡಿದರು.

ಎಲೈ ಪರಮಾತ್ಮಸ್ವರೂಪನೇ, ನಾನಾವಿಧವಾದ ಪ್ರಾಣಿಗಳನ್ನೂ ಆಶ್ರಯಿಸಿ ಉತ್ಪತ್ತಿಹೊಂದುವ ಸಾಮರ್ಥ್ಯವುಳ್ಳವನೇ, ಪ್ರಪಂಚವನ್ನೆಲ್ಲಾ ಪ್ರತ್ಯಕ್ಷೀಕರಿಸುವ ಶಕ್ತಿಯುಳ್ಳವನೇ, ಉತ್ತಮಸ್ಥಾನವಾಸಿಯೇ, ಷಡ್ಗುಣೈಶ್ವರ್ಯಪರಿಪೂರ್ಣನೇ, ಸರ್ವಜ್ಞನೇ, ಶರೀರಿಯಾಗಿಯೂ ಇರುವವನೇ, ಜ್ಞಾನಮಾತ್ರಗಮ್ಯನೇ, ಸರ್ವ

ಮಹಾಪುರುಷ, ಸರ್ವಭೂತಾವಾಸ, ಮನೋನಿವಾಸ, ಆದಿದೇವ, ಮಹಾದೇವ, ಸದಾಶಿವ, ಈಶಾನ, ದುರ್ವಿಜ್ಞೇಯ, ದುರಾರಾಧ್ಯ, ಮಹಾಭೂತೇಶ್ವರ, ಪರಮೇಶ್ವರ

ಮಹಾಯೋಗೇಶ್ವರ, ತ್ರ್ಯಂಬಕ, ಮಹಾಯೋಗಿನ್, ಪರಬ್ರಹ್ಮ ಪರಮಜ್ಯೋತಿಃ, ಬ್ರಹ್ಮವಿದುತ್ತಮ, ಓಂಕಾರ, ವಷಟ್ಕಾರ, ಸ್ವಾಹಾಕಾರ, ಸ್ವಧಾಕಾರ, ಪರಮಕಾರಣ, ಸರ್ವಗತ, ಸರ್ವದರ್ಶನ, ಸರ್ವಶಕ್ತಿ, ಸರ್ವದೇವ, ಅಜ, ಸಹಸ್ರಾರ್ಚಿಃ, ಸುಧಾಮನ್, ಪರಧಾಮ, ವಂಶವರ್ತ, ಸಂವರ್ತ, ಸಂಕರ್ಷಣ, ವಡವಾನಲ, ಅಗ್ನಿಷೋಮಾತ್ಮಕ, ಪವಿತ್ರ, ಮಹಾಪವಿತ್ರ, ಮಹಾಮೇಘ, ಮಹಾಕಾಮಹನ್, ಹಂಸ, ಪರಮಹಂಸ,

---

ನಿಯಾಮಕನೇ, ಸರ್ವೋತ್ತಮನಾದ ಸೃಷ್ಟಿಕರ್ತನೇ, ಮಹದೈಶ್ವರ್ಯಶಾಲಿಯೇ, ಉತ್ತಮಕ್ಷೇತ್ರಜ್ಞರೂಪನೇ, ಪುರುಷಾಗ್ರಗಣ್ಯನೇ, ಸರ್ವಪ್ರಾಣಿಗಳಲ್ಲೂ ವಾಸಿಸುವನೇ, ಮನೋಮಾತ್ರಗೋಚರನೇ, ಆದಿದೇವಸ್ವರೂಪನೇ, ದೇವತಾಗ್ರಗಣ್ಯನೇ, ಸದಾಶಿವಸ್ವರೂಪಿಯೇ, ಪ್ರಭುವೇ, ತಿಳಿವಳಿಕೆಗೆ ನಿಲುಕದಿರುವ ಅಪರಿಮಿತಶಕ್ತಿ ಶಾಲಿಯೇ, ಕ್ಲೇಶಸಾಧ್ಯವಾದ ಪ್ರೀತಿಯುಳ್ಳವನೇ, ಪಂಚಮಹಾಭೂತಗಳಿಗೂ ನಿಯಾಮಕನಾಗಿರುವವನೇ, ಪರಮೇಶ್ವರನೇ, ನಿನಗೆ ಅನಂತನಮಸ್ಕಾರಗಳು.

ಎಲ್ಲೈ ಮಹಾಸಿದ್ಧಿಗಳಿಗೆ ನಿಯಾಮಕನೇ, ತ್ರಿನೇತ್ರನೇ, ಅಪರಿಮಿತಯೋಗ ಶಾಲಿಯೇ, ಪರಬ್ರಹ್ಮಸ್ವರೂಪನೇ, ಪವಿತ್ರತೇಜೋಮೂರ್ತಿಯೇ, ಬ್ರಹ್ಮವಿದಗ್ರೇಸರನೇ, ಓಂಕಾರ, ವಷಟ್ಕಾರ, ಸ್ವಾಹಾಕಾರ, ಸ್ವಧಾಕಾರಾದಿ ರೂಪದಿಂದ ಶ್ರುತಿಪ್ರಸಿದ್ಧಮೂರ್ತಿಯೇ, ಕಾರಣಸ್ವರೂಪನೇ, ಸರ್ವವ್ಯಾಪಕನೇ, ಸರ್ವಸಾಕ್ಷಾತ್ಕಾರಶಾಲಿಯೇ, ಸರ್ವಶಕ್ತಿಶಾಲಿಯೇ, ಸರ್ವದೇವಸ್ವರೂಪನೇ, ಕರ್ಮಕೃತ ಉತ್ಪತ್ತಿರಹಿತನೇ, ಅನಂತತೇಜೋಮೂರ್ತಿಯೇ, ಸುಂದರದೇಹಶಾಲಿಯೇ, (ಅಥವಾ ರಮಣೀಯಾವಾಸಶಾಲಿಯೇ) ಹರಸ್ವರೂಪನೇ, ವಂಶಪ್ರವರ್ತಕನೇ, ಪ್ರಳಯಕಾಲದ ಕಾಲಸ್ವರೂಪಿಯೇ, ಸಂಕರ್ಷಣರೂಪನೇ, (ಅಥವಾ ಜಗನ್ನಾಶಕನೇ) ಬಡಬಾಗ್ನಿಯಂತೆ ದುಸ್ಸಹಸ್ವರೂಪನೇ, ಅಗ್ನೀಷೋಮಹವಿಸ್ಸಿನ ದೇವತಾಸ್ವರೂಪನೇ, ಪವಿತ್ರಮೂರ್ತಿಯೇ, ಮೇಘದಂತೆ ಸರ್ವಸಾಮ್ಯವುಳ್ಳವನೇ ಅಥವಾ ಮಹೋದಾರನೇ, ಅಜೇಯನಾದ ಮನ್ಮಥನನ್ನೂ ಸಂಹರಿಸಿದವನೇ, ಹಂಸಸ್ವರೂಪನೇ, ಪರಮಹಂಸ ಸ್ವರೂಪನೇ ನಿನಗೆ ಅನಂತನಮಸ್ಕಾರಗಳು.

ಮಹಾರಾಜಿಕ, ಮಹೇಶ್ವರ, ಮಹಾಕಾಮುಕ, ಮಹಾಹಂಸ,
ಭವಕ್ಷಯಕರ, ಸುರಸಿದ್ಧಾರ್ಚಿತ, ಹಿರಣ್ಯವಾಹ, ಹಿರಣ್ಯರೇತಃ,
ಹಿರಣ್ಯನಾಭ, ಹಿರಣ್ಯಾಗ್ರಕೇಶ, ಮುಂಜಿಕೇಶಿನ್,
ಸರ್ವಲೋಕವರಪ್ರದ, ಸರ್ವಾನುಗ್ರಹಕರ, ಕಮಲೇಶಯ,
ಹೃದಯೇಶಯ, ಜ್ಞಾನೋದಧೇ, ಶಂಭೋ, ಚ, ವಿಭೋ,
ಮಹಾಯಜ್ಞ, ಮಹಾಯಾಜ್ಞಿಕ, ಸರ್ವಯಜ್ಞಮಯ,
ಸರ್ವಯಜ್ಞಸಂಸ್ತುತ, ನಿರಾಶ್ರಯ, ಸಮುದ್ರೇಶ, ಅತ್ರಿಸಂಭೂತ,
ಭಕ್ತಾನುಕಂಪಕ, ಅಭಗ್ನಯೋಗ, ಯೋಗಧರ, ವಾಸುಕಿ
ಮಹಾಹಿವಿದ್ಯೋತಿತವಿಗ್ರಹ, ಹರಿತನಯನ, ತ್ರಿಲೋಚನ,
ಜಟಾಧರ, ನೀಲಕಂಠ, ಚಂದ್ರಾರ್ಧಧರ, ಉಮಾಶರೀರಾರ್ಧಧರ,

ಎಲೈ ಗಣದೇವತಾಸ್ವರೂಪನೇ, ಮಹಾಪ್ರಭುವೇ, ಮಹಾಕಾಮುಕಸ್ವಭಾವನೇ, ಪರಮಾತ್ಮರೂಪನೇ, ಸಂಸಾರನಾಶಕನೇ, ಸುರಸಿದ್ಧಾದಿದೇವತೆಗಳಿಂದ ಸೇವಿಸಲ್ಪಡುವವನೇ, ಸಕಲದ್ರವ್ಯಪ್ರದನೇ, ರೇತೋರೂಪದಿಂದ ತೇಜಸ್ಸನ್ನು ಧರಿಸುವವನೇ, ಅಥವಾ ಅಗ್ನಿಸ್ವರೂಪನೇ, ಹಿತವಾಗಿಯೂ, ರಮಣೀಯವಾಗಿಯೂ ಇರುವ ನಾಭಿ ಪ್ರದೇಶವುಳ್ಳವನೇ, ಸ್ವರ್ಣದಂತೆ ಜ್ವಲಿಸುತ್ತಿರುವ ಕೇಶಾಗ್ರವುಳ್ಳವನೇ, ಸೂಕ್ಷ್ಮ ದೀರ್ಘಕೇಶವುಳ್ಳವನೇ, ಸಕಲಜನವರಪ್ರದನೇ, ಎಲ್ಲರಿಗೂ ಅನುಗ್ರಹಪ್ರದನಾಗಿರುವವನೇ, ಕಮಲಶಾಯಿಯೇ, ಎಲ್ಲರ ಅಥವಾ ಯೋಗಿಗಳ ಹೃದಯದಲ್ಲಿ ವಾಸಿಸುವನೇ, ಜ್ಞಾನಸಮುದ್ರನೇ, ಮಂಗಲಪ್ರದನೇ, ಸರ್ವಸಮುಚ್ಚಯಸ್ವರೂಪನೇ, ಪ್ರಭುವೇ, ಯಜ್ಞರೂಪವಾದ ಪರಬ್ರಹ್ಮೋಪಾಸನೆಯುಳ್ಳವನೇ, ಯಾಜ್ಞಿಕಸ್ವರೂಪನೇ, ಸರ್ವಯಜ್ಞದಲ್ಲೂ ದೇವತಾರೂಪದಿಂದ ತನ್ಮಯನಾಗಿರುವವನೇ, ಎಲ್ಲಾ ಯಜ್ಞದಲ್ಲೂ ಸ್ತುತಿಸಲ್ಪಡುವವನೇ, ಸ್ವಾಧೀನಸ್ಥಿತಿಯುಳ್ಳವನಾದುದರಿಂದ ಆಶ್ರಯಾಂತರರಹಿತನೇ, ಸಮುದ್ರನಾಯಕನೇ, ಅತ್ರಿಯಿಂದ ಅವತರಿಸಿದವನೇ, ಭಕ್ತರಲ್ಲಿ ದಯೆಯುಳ್ಳವನೇ, ನಿರ್ವಿಘ್ನಯೋಗಮಹಿಮೆಯುಳ್ಳವನೇ, ಜ್ಞಾನಧರನೇ, ವಾಸುಕಿರೂಪವಾದ ಮಹಾಸರ್ಪದಿಂದ ಕಂಗೊಳಿಸುತ್ತಿರುವ ದೇಹವುಳ್ಳವನೇ, ಅಗ್ನಿಸಂಬಂಧದಿಂದ ಕಪ್ಪಾದ ಕಣ್ಣುಳ್ಳವನೇ, ಮೂರು ಕಣ್ಣುಗಳುಳ್ಳವನೇ, ಜಟಾಧಾರಿಯೇ, ಕಂಠಗತವಾದ ವಿಷದಿಂದ ಕಪ್ಪಾದ ಕತ್ತುಳ್ಳವನೇ, ಅರ್ಧಚಂದ್ರಧಾರಿಯೇ, ಪಾರ್ವತಿಯ ಶರೀರಾರ್ಧ

ಶೂಲಧರ, ಪಿನಾಕಧರ, ಖಡ್ಗಚರ್ಮಧರ, ಗಜಚರ್ಮಧರ, ದುಸ್ತರಸಂಸಾರ ಮಹಾಸಂಹಾರಕರ, ಪ್ರಸೀದ, ಭಕ್ತಜನವತ್ಸಲ.

ಏವಂ ಸ್ತುತೋ ದೇವಗಣೈಃ ಸುಭಕ್ತ್ಯಾ
ಸಬ್ರಹ್ಮಮುಖ್ಯೈಶ್ಚ ಪಿತಾಮಹೇನ।
ತ್ಯಕ್ತ್ವಾ ತದಾ ಹಸ್ತಿರೂಪಂ ಮಹಾತ್ಮಾ
ಲಿಂಗಂ ತದಾ ಸನ್ನಿಧಾನಂ ಚಕಾರ ॥ ೩೯ ॥

ಇತಿ ಶ್ರೀ ವಾಮನಪುರಾಣೇ ಸರೋಮಹಾತ್ಮ್ಯೇ
ಚತುಶ್ಚತ್ವಾರಿಂಶೋಽಧ್ಯಾಯಃ

ಧಾರಿಯೇ, ಅಸಾಧಾರಣ ಶೂಲಾಯುಧಧಾರಿಯೇ, ಪಿನಾಕಧನುರ್ಧಾರಿಯೇ, ಖಡ್ಗ ಮೃಗದ ಚರ್ಮವನ್ನು ಧರಿಸಿರುವವನೇ, ಗಜಚರ್ಮಧಾರಿಯೇ, ದಾಟಲಶಕ್ಯವಾದ ಸಂಸಾರಕ್ಕೆ ಮಹಾಸಂಹಾರ ಉಂಟುಮಾಡುವವನೇ, ಭಕ್ತವತ್ಸಲನೇ, ಪ್ರಸನ್ನನಾಗು.

೩೯. ಈ ರೀತಿ ಬ್ರಹ್ಮನಿಂದಲೂ ಅವನನ್ನು ಪುರಸ್ಕರಿಸಿ ಬಂದ ದೇವತೆಗಳಿಂದಲೂ ಸ್ತುತಿಸಲ್ಪಟ್ಟ ಮಹಾದೇವನು ದಯೆಯಿಂದ ಆ ಗಜದರೂಪವನ್ನು ಬಿಟ್ಟು ಸ್ವಸ್ವರೂಪದಿಂದ ಆ ಲಿಂಗದಲ್ಲಿ ಸನ್ನಿಹಿತನಾದನು.

ಇಲ್ಲಿಗೆ ಶ್ರೀ ವಾಮನಪುರಾಣದ ಸರೋಮಾಹಾತ್ಮ್ಯದಲ್ಲಿ
ನಲವತ್ತನಾಲ್ಕನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯ ೪೪

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಹಿಂದಿನ ಅಧ್ಯಾಯದ ವಿಚಾರವನ್ನೇ ಮುಂದುವರಿಸಿ ಅಜ್ಞಾನದಿಂದ ಅಪರಾಧಮಾಡಿ ಬ್ರಹ್ಮನಲ್ಲಿ ಶರಣಾಗತರಾದ ಋಷಿಗಳು ಅವನ ಅಪ್ಪಣೆಯಂತೆ ಕೈಲಾಸಕ್ಕೆ ಬ್ರಹ್ಮನೊಡನೆ ಹೊರಟರೆಂದೂ ಅಲ್ಲಿ ಹೋಗಿ ಚತುರ್ಮುಖನ ಸ್ತೋತ್ರದಿಂದ ಪ್ರಸನ್ನನಾದ ರುದ್ರನ ಅಪ್ಪಣೆಯ ಪ್ರಕಾರ ಸನ್ನಿಹತ್ಯಾಕ್ಷೇತ್ರದಲ್ಲಿರುವ ಆ ಲಿಂಗದ ಅನುಗ್ರಹದಿಂದ ಇಷ್ಟಸಿದ್ಧಿಯನ್ನು ಹೊಂದಲು ಆ ಋಷಿಗಳು ಬ್ರಹ್ಮನೊಡನೆ ಬಂದರೆಂದೂ ಹೇಳಲಾಯಿತು. ಈಶ್ವರನ ಅಪ್ಪಣೆಯ ಪ್ರಕಾರ ದಾರುವನದಲ್ಲಿರುವ ಆ ಲಿಂಗವನ್ನು ಸರೋವರದ ತೀರಕ್ಕೆ ತರಲು ಎಲ್ಲರೂ ಶ್ರಮಪಟ್ಟು ವಿಫಲರಾದರೆಂದೂ ಹೇಳಲಾಯಿತು. ಪುನಃ ಬ್ರಹ್ಮನ ಸಲಹೆಯ ಪ್ರಕಾರ ಶಂಕರನನ್ನೇ ಶರಣುಹೋಗಬೇಕೆಂದೂ ಎಲ್ಲರೂ ನಿಶ್ಚಯಿಸಿ ಕೈಲಾಸಗಿರಿಗೆ ಬರಲು ಅಲ್ಲಿ ಶಂಕರನು ಪ್ರತ್ಯಕ್ಷನಾಗಲಿಲ್ಲ. ಚತುರ್ಮುಖನು ಆಗ ಜ್ಞಾನದೃಷ್ಟಿಯಿಂದ ಗಜರೂಪಧಾರಿಯಾಗಿ ಶಂಕರನು ಸರಸ್ಸಿನಲ್ಲಿರುವದನ್ನು ಅರಿತು ಋಷಿಗಳೊಡನೆ ಅಲ್ಲಿಗೆ ಬರಲಾಗಿ ಕಮಂಡಲುಧಾರಿಣಿಯಾದ ದೇವಿಯು ಅವರಿಗೆ ಗೋಚರಳಾದಳು. ಆಗ ಅವಳ ಅನುಗ್ರಹದಿಂದ ಎಲ್ಲರೂ ಅಮೃತಪಾನವಂಮಾಡಿ ಜ್ಞಾನಿಗಳಾಗಿ ದೇವಿಯ ಉಪದೇಶದಿಂದ ರೂಪಾಂತದಲ್ಲಿರುವ ಶಂಕರನನ್ನು ತಿಳಿದರು. ಗಜರೂಪದಿಂದ ಸರೋಮಧ್ಯದಲ್ಲಿ ಅಡಗಿರುವ ಆ ಶಂಕರನಲ್ಲಿ ಪ್ರಾರ್ಥಿಸಿದರು. ಆಗ ಶಂಕರನು ದಯೆಯಿಂದ ಆ ಲಿಂಗವನ್ನು ತನ್ನ ಸೊಂಡಲಿನಿಂದ ಎತ್ತಿ ತಂದು ಸರಸ್ಸಿನ ಪಶ್ಚಿಮ ತೀರದಲ್ಲಿ ಇಟ್ಟನು. ದೇವತೆಗಳೆಲ್ಲರೂ ಚತುರ್ಮುಖನೊಡನೆ ಸ್ತುತಿಮಾಡಲು ಪ್ರಸನ್ನನಾದ ಶಂಕರನು ಗಜರೂಪವನ್ನು ಬಿಟ್ಟು ತನ್ನ ಸ್ವರೂಪದಿಂದ ಆ ಲಿಂಗದಲ್ಲಿ ಸಾನ್ನಿಧ್ಯಹೊಂದಿ ದೇವತೆಗಳನ್ನೂ, ಋಷಿಗಳನ್ನೂ ಕೃತಕೃತ್ಯರನ್ನಾಗಿ ಮಾಡಿದನೆಂದೂ ವರ್ಣಿಸಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಪಂಚಚತ್ವಾರಿಂಶೋಽಧ್ಯಾಯಃ

ಸನತ್ಕುಮಾರ ಉವಾಚ

ಅಥೋವಾಚ ಮಹಾದೇವೋ ದೇವಾನ್ ಬ್ರಹ್ಮಪುರೋಗಮಾನ್ ।
ಋಷೀಣಾಂ ಚೈವ ಪ್ರತ್ಯಕ್ಷಂ ತೀರ್ಥಮಾಹಾತ್ಮ್ಯಮುತ್ತಮಂ ॥ ೧ ॥

ಏತತ್ಸನ್ನಿಹಿತಂ ಪ್ರೋಕ್ತಂ ಸರಃ ಪುಣ್ಯತಮಂ ಮಹತ್ ।
ಮಯೋಪವೇಶಿತಂ ಯಸ್ಮಾತ್ತಸ್ಮಾನ್ಮುಕ್ತಿಪ್ರದಾಯಕಂ ॥ ೨ ॥

ಇಹ ಯೇ ಪುರುಷಾಃ ಕೇಚಿದ್ಬ್ರಾಹ್ಮಣಾಃ ಕ್ಷತ್ರಿಯಾ ವಿಶಃ ।
ಲಿಂಗಸ್ಯ ದರ್ಶನಾದೇವ ಪಶ್ಯಂತಿ ಪರಮಂ ಪದಂ ॥ ೩ ॥

ಅಹನ್ಯಹನಿ ತೀರ್ಥಾನಿ ಆಸಮುದ್ರಾತ್ಸರಾಂಸಿ ಚ ।
ಸ್ಥಾಣುತೀರ್ಥಂ ಸಮೇಷ್ಯಂತಿ ಮಧ್ಯಂ ಪ್ರಾಪ್ತೇ ದಿವಾಕರೇ ॥ ೪ ॥

ನಲವತ್ತೈದನೆಯ ಅಧ್ಯಾಯವು

೧–೪. ಸನತ್ಕುಮಾರರು ಪ್ರಕರಣವನ್ನು ಮುಂದುವರಿಸುತ್ತಾರೆ :—ಅನಂತರ ಅಲ್ಲಿ ಸಾನ್ನಿಧ್ಯಹೊಂದಿದ ಮಹಾದೇವನು ಚತುರ್ಮುಖನೇ ಮೊದಲಾದ ದೇವತೆಗಳನ್ನೂ, ಆ ಋಷಿಗಳನ್ನೂ ಕುರಿತು ಈ ತೀರ್ಥದ ಮಾಹಾತ್ಮ್ಯವನ್ನು ತಾನೇ ಪ್ರತ್ಯಕ್ಷವಾಗಿ ನಿಂತು ಹೀಗೆ ಹೇಳಿದನು. ನನ್ನ ಈ ಲಿಂಗದ ಸಾನ್ನಿಧ್ಯವಿರುವದ್ದರಿಂದ ಈ ಸರೋವರವು ಸನ್ನಿಹಿತವೆಂದು ಹೇಳಲ್ಪಟ್ಟು ಬಹಳ ಪುಣ್ಯಕರವಾಗಿದೆ. ಇದು ನನ್ನಿಂದಲೇ ಪ್ರತಿಷ್ಠಿತವಾಗಿರುವದ್ದರಿಂದ ಮುಕ್ತಿಪ್ರದವಾಗಿಯೂ ಇದೆ. ಇಲ್ಲಿ ಬಂದು ಈ ಲಿಂಗದ ದರ್ಶನವನ್ನು ಪಡೆದವರು ಬ್ರಾಹ್ಮಣರೇ ಆಗಲಿ, ಕ್ಷತ್ರಿಯ ವೈಶ್ಯರೇ ಆಗಲಿ ಅವರು ಪರಮಪದಗಾಮಿಗಳಾಗುತ್ತಾರೆ ಸಮುದ್ರಪರ್ಯಂತವಾಗಿ ಇರುವ ಎಲ್ಲಾ ತೀರ್ಥಗಳೂ, ಸರಸ್ಸುಗಳೂ ಪ್ರತಿನಿತ್ಯವೂ ಸೂರ್ಯನು ಮಧ್ಯಾಹ್ನ ಸಮಯಕ್ಕೆ ಬರುವವೇಳೆಗೆ ಈ ಸ್ಥಾಣುತೀರ್ಥಕ್ಕೆ ಬಂದು ಸೇರುತ್ತವೆ. ಮತ್ತು

ಸ್ತೋತ್ರೇಣಾನೇನ ಸತತಂ ಯೋಮಾಂ ಸ್ತೋಷ್ಯಂತಿ ಭಕ್ತಿತಃ ।
ತಸ್ಯಾಹಂ ಸುಲಭೋ ನಿತ್ಯಂ ಭವಿಷ್ಯಾಮಿ ನ ಸಂಶಯಃ ॥ ೫ ॥

ಇತ್ಯುಕ್ತ್ವಾ ಭಗವಾನ್ ರುದ್ರೋ ಹ್ಯಂತರ್ಧಾನಂ ಗತಃ ಪ್ರಭುಃ ।
ದೇವಾಶ್ಚ ಋಷಯಃ ಸರ್ವೇ ಸ್ವಾನಿ ಸ್ಥಾನಾನಿ ಭೇಜಿರೆ ॥ ೬ ॥

ತತೋ ನಿರಂತರಂ ಸ್ವರ್ಗಂ ಮಾನುಷ್ಯೈರ್ಮಿಶ್ರಿತಂ ಕೃತಂ ।
ಸ್ಥಾಣುಲಿಂಗಸ್ಯ ಮಾಹಾತ್ಮ್ಯದರ್ಶನಾತ್ಸ್ವರ್ಗಮಾಪ್ನುಯುಃ ॥ ೭ ॥

ತತೋ ದೇವಗಣಾಸ್ಸರ್ವೇ ಬ್ರಹ್ಮಾಣಂ ಶರಣಂ ಯಯುಃ ।
ತಾನುವಾಚ ತದಾ ಬ್ರಹ್ಮಾ ಕಿಮರ್ಥಮಿಹ ಚಾಗತಾಃ ॥ ೮ ॥

ತತೋ ದೇವಾಸ್ಸರ್ವ ಏವ ಇದಂ ವಚನಮಬ್ರುವನ್ ।
ಮಾನುಷೇಭ್ಯೋ ಭಯಂ ತೀವ್ರಂ ರಕ್ಷಾಸ್ಮಾಕಂ ಪಿತಾಮಹ ॥ ೯ ॥

ತಾನುವಾಚ ತದಾ ಬ್ರಹ್ಮಾ ದೇವಂ ತ್ರಿದಶನಾಯಕಂ ।
ಪಾಂಸುನಾ ಪೂರ್ಯತಾಂ ಶೀಘ್ರಂ ಸಾರ್ಧಂ ಶಕ್ರ ಹಿತಂ ಕುರು ॥ ೧೦ ॥

೫-೭. ಈ ಸ್ತೋತ್ರದಿಂದ ಯಾರು ಭಕ್ತಿಪೂರ್ವಕವಾಗಿ ನನ್ನನ್ನು ಸ್ತೋತ್ರ ಮಾಡುತ್ತಾರೆಯೋ ಅವರಿಗೆ ನಾನು ನಿತ್ಯವೂ ಸುಲಭನಾಗಿರುವೆನು ಎಂದು ಹೇಳಿ ಆಗಲೇ ರುದ್ರದೇವನು ಅಂತರ್ಧಾನಹೊಂದಿದನು. ಅನಂತರ ದೇವತೆಗಳೂ, ಋಷಿಗಳೂ ತಮ್ಮ ತಮ್ಮ ಸ್ಥಾನಕ್ಕೆ ತೆರಳಿದರು. ಅನಂತರ ಸ್ಥಾಣುಲಿಂಗವನ್ನು ಸಂದರ್ಶನ ಮಾಡಿದ ಮನುಷ್ಯರೆಲ್ಲರೂ ಅದರ ಮಾಹಾತ್ಮ್ಯದಿಂದ ಸ್ವರ್ಗವನ್ನು ಹೊಂದಲು ಮೊದಲಾಯಿತು. ಹೀಗೆ ಆಗಿ ಸ್ವರ್ಗವೆಲ್ಲವೂ ಮನುಷ್ಯರಿಂದ ತುಂಬಿ ಕಿಕ್ಕಿರಿದು ಹೋಯಿತು.

೮-೧೧. ಅನಂತರ ದೇವತೆಗಳೆಲ್ಲರೂ ತಮ್ಮ ಈ ಕ್ಲೇಶ ನಿವಾರಣೆಗಾಗಿ ಚತುರ್ಮುಖನಲ್ಲಿ ಶರಣಾಗತರಾದರು. ಅವರನ್ನು ಕುರಿತು ಚತುರ್ಮುಖನು ಏತಕ್ಕಾಗಿ ಇಲ್ಲಿ ಬಂದಿರಿ ಎಂದು ಕೇಳಲಾಗಿ ದೇವತೆಗಳೆಲ್ಲರೂ ಮನುಷ್ಯರಿಂದ ಸ್ವರ್ಗವಾಸಿಗಳಾದ ನಮಗೆ ಮಹಾಭಯವುಂಟಾಗಿದೆ ನಮ್ಮನ್ನು ರಕ್ಷಿಸಬೇಕೆಂದು ಬೇಡಿಕೊಂಡರು. ಆಗ ಆ ಚತುರ್ಮುಖನು ಇಂದ್ರನನ್ನು ಕುರಿತು ಆ ಸರೋವರವನ್ನು ಧೂಳಿಗಳಿಂದ ಮುಚ್ಚಿಬಿಡಿ. ಇದು ಇಂದ್ರನ ಹಿತಕ್ಕಾಗಿ ಮಾಡತಕ್ಕದ್ದಾಗಿದೆ ಎಂದು

ತತೋ ವವರ್ಷ ಭಗವಾನ್ ಪಾಂಸುನಾ ಪಾಕಶಾಸನಃ ।
ಸಪ್ತಾಹಂ ಪೂರಯಾಮಾಸುಃ ಸೇಂದ್ರಾದೇವಾಸ್ತದಾ ಸ್ಮೃತಾಃ ॥ ೧೧ ॥

ತಂ ದೃಷ್ಟ್ವಾ ಪಾಂಸುವರ್ಷಂ ಚ ದೇವದೇವೋ ಮಹೇಶ್ವರಃ ।
ಕರೇಣ ಧಾರಯಾಮಾಸ ಲಿಂಗಂ ತೀರ್ಥವಟಂ ತಥಾ ॥ ೧೨ ॥

ತಸ್ಮಾತ್ಪುಣ್ಯತಮಂ ತೀರ್ಥಂ ಪಾದ್ಯಂ ಯತ್ರೋದಕಂ ಸ್ಥಿತಂ ।
ತಸ್ಮಿನ್ ಸ್ನಾತಃ ಸರ್ವತೀರ್ಥೆ ಸ್ನಾತೋ ಭವತಿ ಮಾನವಃ ॥ ೧೩ ॥

ಯಸ್ತತ್ರ ಕುರುತೆ ಶ್ರಾದ್ಧಂ ವಟಲಿಂಗಸ್ಯ ಚಾಂತರೆ ।
ತಸ್ಯ ಪ್ರೀತಾಶ್ಚ ಪಿತರೋ ದಾಸ್ಯಂತಿ ಭುವಿ ದುರ್ಲಭಂ ॥ ೧೪ ॥

ಪೂರಿತಂ ಚ ತತೋ ದೃಷ್ಟ್ವಾ ಋಷಯಃ ಸರ್ವ ಏವ ತೆ ।
ಪಾಂಸುನಾ ಸರ್ವಗಾತ್ರಾಣಿ ಸ್ಪೃಶಂತಿ ಶ್ರದ್ಧಯಾನ್ವಿತಃ ॥ ೧೫ ॥

ಅಪ್ಪಣೆಮಾಡಲಾಗಿ ಇಂದ್ರನೊಡನೆ ದೇವತೆಗಳೆಲ್ಲರೂ ಆ ಸರೋವರವನ್ನು ಧೂಳಿಯ ಮಳೆಯಿಂದ ಏಳು ದಿವಸ ಪರ್ಯಂತವೂ ಪೂರಣಮಾಡಿದರು.

೧೨-೧೪. ಆ ಪ್ರಕಾರವಾದ ಧೂಳಿಯ ವೃಷ್ಟಿಯನ್ನು ನೋಡಿ ಮಹೇಶ್ವರನು ಧೂಳಿಯಿಂದ ಮುಚ್ಚಿಹೋಗದಂತೆ ಆ ಲಿಂಗವನ್ನೂ, ವಟವನ್ನೂ ಸಹ ತನ್ನ ಕೈಯ್ಯಲ್ಲಿ ಧರಿಸಿ ಮೇಲಕ್ಕೆ ಹಿಡಿದುಕೊಂಡನು. ಆಗ ಸರೋವರದಲ್ಲಿದ್ದ ಆ ತೀರ್ಥವು ಪಾದೋದಕರೂಪದಿಂದ ಪುಣ್ಯತಮವಾದ ಪಾದ್ಯವಾಗಿ ಪರಿಣಮಿಸಿತು. ಆ ತೀರ್ಥದಲ್ಲಿ ಸ್ನಾನಮಾಡಿದವನು ಎಲ್ಲಾ ತೀರ್ಥಗಳಲ್ಲೂ ಸ್ನಾನಮಾಡಿದವನಾಗುತ್ತಾನೆ. ಯಾವನೊಬ್ಬನು ಆ ವಟವೃಕ್ಷಕ್ಕೂ, ಲಿಂಗಕ್ಕೂ ಮಧ್ಯದಲ್ಲಿ ಶ್ರಾದ್ಧವನ್ನು ಮಾಡುತ್ತಾನೆಯೋ, ಅವನ ಪಿತೃಗಳು ತೃಪ್ತರಾಗಿ ಪ್ರೀತಿಯಿಂದ ಆ ಶ್ರಾದ್ಧಮಾಡಿದವನಿಗೆ ದುರ್ಲಭವಾದ ಮನೋರಥಗಳನ್ನೂ ಉಂಟುಮಾಡುತ್ತಾರೆ.

೧೫-೧೮. ಆಗ ಋಷಿಗಳೆಲ್ಲರೂ ಧೂಳಿಯಿಂದ ಪೂರಿತವಾಗುತ್ತಿರುವ ಆ ಸರೋವರವನ್ನು ನೋಡಿ ಲಿಂಗಸ್ಪೃಷ್ಟವಾದ ಆ ಧೂಳಿಯನ್ನು ಶ್ರದ್ಧೆಯಿಂದ ಸರ್ವ

ತೇಪಿ ನಿರ್ಧೂತಪಾಪಾಶ್ಚ ಪಾಂಸುನಾ ಮುನಯೋ ಗತಾಃ ।
ಪೂಜ್ಯಮಾನಾಃ ಸುರಗಣೈಃ ಪ್ರಯಾತಾ ಬ್ರಹ್ಮಣಃ ಪದಂ ॥ ೧೬ ॥

ಯೇ ತು ಸಿದ್ಧಾ ಮಹಾತ್ಮಾನಸ್ತೇ ಲಿಂಗಂ ಪೂಜಯಂತಿ ಚ ।
ವ್ರಜಂತಿ ಪರಮಾಂ ಸಿದ್ಧಿಂ ಪುನರಾವೃತ್ತಿದುರ್ಲಭಾಂ ॥ ೧೭ ॥

ಏವಂ ಜ್ಞಾತ್ವಾ ತದಾ ಬ್ರಹ್ಮಾ ಲಿಂಗಂ ಶೈಲಮಯಂ ತದಾ ।
ಆದ್ಯಂ ಲಿಂಗಂ ತದಾ ಸ್ಥಾಪ್ಯ ತಸ್ಯೋಪರಿ ನ್ಯಧೀಯತ ॥ ೧೮ ॥

ತತಃ ಕಾಲೇನ ಮಹತಾ ತೇಜಸಾ ತಸ್ಯ ರಂಜಿತಂ ।
ತಸ್ಯಾಪಿ ಸ್ಪರ್ಶನಾತ್ಸಿದ್ಧಾಃ ಪರಂ ಪದಮವಾಪ್ನುಯುಃ ॥ ೧೯ ॥

ತತೋ ದೇವೈಃ ಪುನರ್ಬ್ರಹ್ಮಾ ವಿಜ್ಞಪ್ತೋ ದ್ವಿಜಸತ್ತಮಾಃ ।
ಏತೇ ಯಾಂತಿ ಪರಾಂ ಸಿದ್ಧಿಂ ಲಿಂಗಸಂದರ್ಶನಾತ್ಪರಂ ॥ ೨೦ ॥

ತಚ್ಛ್ರುತ್ವಾ ಭಗವಾನ್ ಬ್ರಹ್ಮಾ ದೇವಾನಾಂ ಹಿತಕಾಮ್ಯಯಾ ।
ಉಪರ್ಯುಪರಿಲಿಂಗಾನಿ ಸಪ್ತ ತತ್ರ ಚಕಾರ ಹ ॥ ೨೧ ॥

ಗಾತ್ರಗಳಲ್ಲಿಯೂ ಧರಿಸಿದರು. ಅಂತಹ ಧೂಳಿಯ ಸ್ಪರ್ಶದಿಂದ ಆ ಮುನಿಗಳೂ ನಿಷ್ಪಾಪರಾಗಿ ದೇವತೆಗಳ ಪ್ರಶಂಸೆಗೆ ಪಾತ್ರರಾಗಿ ಬ್ರಹ್ಮಲೋಕವನ್ನೇ ಹೊಂದಿದರು. ಮಹಾತ್ಮರಾದ ಸಿದ್ಧರೂ ಸಹ ಆ ಲಿಂಗವನ್ನು ಪೂಜಿಸಿ ಪುನರಾವೃತ್ತಿರಹಿತವಾದ ಉತ್ತಮಸಿದ್ಧಿಯನ್ನು ಹೊಂದಿದರು. ಈ ವಿಧವಾದ ಮಹಾತ್ಮ್ಯವನ್ನರಿತು ಚತುರ್ಮುಖನು ಶಿಲಾಮಯವಾದ ಮತ್ತೊಂದು ಲಿಂಗವನ್ನೇರ್ಪಡಿಸಿ ಮೊದಲಿದ್ದ ಆದಿಲಿಂಗದಮೇಲೆ ಅದನ್ನು ಇಟ್ಟು ಪ್ರತಿಷ್ಠಿಸಿದನು.

೧೯-೨೧. ಹಾಗೆಯೇ ಬಹಳಕಾಲ ಕಳೆಯಲಾಗಿ ಆ ಲಿಂಗವೂ ಮೂಲಭೂತವಾಗಿದ್ದ ಆದ್ಯಲಿಂಗದ ತೇಜಸ್ಸಿನಿಂದ ಜ್ವಲಿಸಿತು. ಅದರ ಸ್ಪರ್ಶದಿಂದಲೂ ಅನೇಕ ಸಿದ್ಧರು ಪರಮಪದವನ್ನು ಹೊಂದಿದರು. ಅನಂತರ ದೇವತೆಗಳು ಲಿಂಗದರ್ಶನದಿಂದಲೇ ಇವರೆಲ್ಲರೂ ಸಿದ್ಧಿಯನ್ನು ಹೊಂದುತ್ತಿದ್ದಾರೆ. ನಮಗೆ ಈ ಭಾಗ್ಯವು ಲಭಿಸಲಿಲ್ಲವೆಂದು ಚತುರ್ಮುಖನಲ್ಲಿ ವಿಜ್ಞಾಪಿಸಲು ಆ ಚತುರ್ಮುಖನೂ ಇವರ ಹಿತದೃಷ್ಟಿಯಿಂದ ಆ ಲಿಂಗದ ಮೇಲೆ ಕ್ರಮವಾಗಿ ಏಳು ಲಿಂಗಗಳನ್ನು ಪ್ರತಿಷ್ಠಿಸಿದನು.

ತತೋ ಯೇ ಮುಕ್ತಿಕಾಮಾಶ್ಚ ಸಿದ್ಧಾಶ್ರಮಪರಾಯಣಾಃ ।
ಸೇವ್ಯ ಪಾಂಸುಂ ಪ್ರಯತ್ನೇನ ಪ್ರಯಾತಾಃ ಪರಮಂ ಪದಂ ॥ ೨೨ ॥

ಪಾಂಸವೋಽಪಿ ಕುರುಕ್ಷೇತ್ರೇ ವಾಯುನಾ ಸಮುದೀರಿತಾಃ ।
ಮಹಾದುಷ್ಕೃತಕರ್ಮಾಣಃ ಪ್ರಾಪಯಂತಿ ಪರಂ ಪದಂ ॥ ೨೩ ॥

ಅಜ್ಞಾನಾತ್ ಜ್ಞಾನತೋ ವಾಪಿ ಸ್ತ್ರಿಯಾ ವಾ ಪುರುಷಸ್ಯ ವಾ ।
ನಶ್ಯತೆ ದುಷ್ಕೃತಂ ಸರ್ವಂ ಸ್ಥಾಣುತೀರ್ಥಪ್ರಭಾವತಃ ॥ ೨೪ ॥

ಲಿಂಗಸ್ಯ ದರ್ಶನಾನ್ಮುಕ್ತಿಃ ಸ್ಪರ್ಶನಾಚ್ಚ ವಟಸ್ಯ ಚ ।
ತತ್ಸನ್ನಿಧೌ ಜಲೆ ಸ್ನಾತ್ವಾ ಪ್ರಾಪ್ನೋತ್ಯಭಿಮತಂ ಫಲಂ ॥ ೨೫ ॥

ಪಿತೄಣಾಂ ತರ್ಪಣಂ ಯಸ್ತು ಜಲೆ ತಸ್ಮಿನ್ ಕರಿಷ್ಯತಿ ।
ಬಿಂದೌ ಬಿಂದೌ ತು ತೋಯಸ್ಯ ಹ್ಯನಂತಫಲಭಾಗ್ಭವೇತ್ ॥ ೨೬ ॥

ಯಸ್ತು ಕೃಷ್ಣತಿಲೈಃ ಶ್ರಾದ್ಧಂ ಸ್ಥಾಣೋರ್ಲಿಂಗಸ್ಯ ಪಶ್ಚಿಮೆ ।
ತರ್ಪಯೇಚ್ಛ್ರದ್ಧಯಾ ಯುಕ್ತಃ ಪ್ರೀಣಯೇತ್ಸ ಯುಗತ್ರಯಂ ॥ ೨೭ ॥

೨೨-೨೪. ಅನಂತರವೂ ಮೋಕ್ಷಾಪೇಕ್ಷೆಯಿಂದ ಸಿದ್ಧಾಶ್ರಮದಲ್ಲಿ ನಿಯಮ ಪರರಾಗಿದ್ದ ಅನೇಕ ಮಹಾತ್ಮರು ಪ್ರಯಾಸದಿಂದ ಆ ಧೂಳಿಯನ್ನು ಸೇವಿಸಿ ಮುಕ್ತ ರಾದರು. ಆ ಧೂಳಿಯು ಗಾಳಿಯಿಂದ ಕುರುಕ್ಷೇತ್ರದಲ್ಲಿಯೂ ಎರೆಚಲ್ಪಟ್ಟು ಮಹಾ ಪಾತಕಿಗಳನ್ನೂ ಪರಿಶುದ್ಧಮಾಡಿ ಮುಕ್ತರನ್ನಾಗಿಮಾಡಿತು. ಸ್ತ್ರೀಯರಿಗೇ ಆಗಲಿ ಪುರುಷರಿಗೇ ಆಗಲಿ ಅಜ್ಞಾನದಿಂದಲೋ ಜ್ಞಾನದಿಂದಲೋ ಸಂಭವಿಸಿದ ಸರ್ವ ಪಾಪ ಗಳೂ ಸ್ಥಾಣುತೀರ್ಥದ ಮಹಿಮೆಯಿಂದ ನಾಶಹೊಂದುತ್ತವೆ.

೨೫-೨೭. ಆ ಲಿಂಗದ ದರ್ಶನದಿಂದಲೂ ವಟವೃಕ್ಷದ ಸ್ಪರ್ಶದಿಂದಲೂ ಮುಕ್ತಿ ಯುಂಟಾಗುತ್ತದೆ ಅದರ ಸಾನ್ನಿಧ್ಯ ಹೊಂದಿರುವ ತೀರ್ಥದ ಸ್ನಾನದಿಂದ ಅಭಿಮತವಾದ ಯಾವ ಫಲವಾದರೂ ಅದು ಲಭಿಸುತ್ತದೆ. ಆ ಜಲದಲ್ಲಿ ಮಾಡಿದ ಪಿತೃತರ್ಪಣವು ಆ ನೀರಿನ ಪ್ರತಿಯೊಂದು ಬಿಂದುವಿನಿಂದಲೂ ಅಪರಿಮಿತವಾದ ಫಲಕ್ಕೆ ಕಾರಣವಾಗು ತ್ತದೆ. ಆ ಸ್ಥಾಣುಲಿಂಗದ ಪಶ್ಚಿಮಭಾಗದಲ್ಲಿ ಯಾವನು ಕಪ್ಪಾದ ಎಳ್ಳಿನಿಂದ ಶ್ರಾದ್ಧ ವನ್ನು ಶ್ರದ್ಧೆಯಿಂದ ಮಾಡುತ್ತಾನೆಯೋ ಅಂತಹ ಧರ್ಮಶಾಲಿಯು ಕೃತ, ತ್ರೇತ, ದ್ವಾಪರವೆಂಬ ಧರ್ಮಮಯವಾದ ಮೂರು ಯುಗಗಳನ್ನೂ ತೃಪ್ತಿಪಡಿಸುತ್ತಾನೆ

ಯಾವನ್ಮನ್ವಂತರಂ ಪ್ರೋಕ್ತಂ ಯಾವಲ್ಲಿಂಗಸ್ಯ ಚ ಸ್ಥಿತಿಃ ।
ತಾವತ್ ಪ್ರೀತಾಶ್ಚ ಪಿತರಃ ಪಿಬಂತಿ ಜಲಮುತ್ತಮಂ ॥ ೨೮ ॥

ಕೃತೇ ಯುಗೇ ಸನ್ನಿಹತ್ಯಾಂ ತ್ರೇತಾಯಾಂ ವಾಯುಸಂಜ್ಞಿತಂ ।
ಕಲಿದ್ವಾಪರಯೋರ್ಮಧ್ಯೇ ಕೂಪೇ ರುದ್ರಹ್ರದಂ ಸ್ಮೃತಂ ॥ ೨೯ ॥

ಚೈತ್ರಸ್ಯ ಕೃಷ್ಣಪಕ್ಷೇ ಚ ಚತುರ್ದಶ್ಯಾಂ ನರೋತ್ತಮಃ ।
ಸ್ನಾತ್ವಾ ರುದ್ರಕರೇ ತೀರ್ಥೆ ಪರಂ ಪದಮವಾಪ್ನುಯಾತ್ ॥ ೩೦ ॥

ವಟೇ ಯಸ್ತು ಸ್ಥಿತೋ ರಾತ್ರೌ ಧ್ಯಾಯತೇ ಪರಮೇಶ್ವರಂ ।
ಸ್ಥಾಣೋರ್ವಟಪ್ರಸಾದೇನ ಮನಸಾ ಚಿಂತಿತಂ ಫಲಂ ॥ ೩೧ ॥

ಇತಿ ಶ್ರೀ ವಾಮನಪುರಾಣೇ ಸರೋಮಾಹಾತ್ಮ್ಯೇ
ಪಂಚಚತ್ವಾರಿಂಶೋಽಧ್ಯಾಯಃ

೨೮-೩೧. ಮನ್ವಂತರವಿರುವವರೆಗೂ ಆ ಲಿಂಗವಿರುವವರೆಗೂ ಅಲ್ಲಿ ಮಾಡಿದ ಶ್ರಾದ್ಧದಿಂದ ಪಿತೃ ದೇವತೆಗಳು ಉತ್ತಮ ತೀರ್ಥಪಾನದಿಂದ ಪ್ರೀತಿ ಹೊಂದುತ್ತಾರೆ. ಕೃತಯುಗದಲ್ಲಿ ಸನ್ನಿಹತ್ಯಾಕ್ಷೇತ್ರದಲ್ಲಿಯೂ ತ್ರೇತಾಯುಗದಲ್ಲಿ ವಾಯುಕ್ಷೇತ್ರದಲ್ಲಿಯೂ ಕಲಿ ದ್ವಾಪರಯುಗಗಳ ಮಧ್ಯದಲ್ಲಿ ರುದ್ರಹ್ರದದಲ್ಲಿಯೂ ಈ ತೀರ್ಥವು ಸನ್ನಿಹಿತವಾಗುತ್ತದೆ. ಚೈತ್ರಮಾಸದ ಕೃಷ್ಣ ಚತುರ್ದಶಿಯಲ್ಲಿ ರುದ್ರಕರವೆಂಬ ತೀರ್ಥದಲ್ಲಿ ಸ್ನಾನ ಮಾಡಿದವನು ಪರಮಪದವನ್ನು ಹೊಂದುತ್ತಾನೆ. ಒಂದು ರಾತ್ರಿ ಆ ವಟವೃಕ್ಷದ ಕೆಳಗೆ ವಾಸಿಸಿ ಯಾವನು ಪರಮೇಶ್ವರನನ್ನು ಧ್ಯಾನಿಸುತ್ತಾನೆಯೋ ಅವನಿಗೆ ಆ ಸ್ಥಾಣುಲಿಂಗದ ಮತ್ತು ವಟದ ಅನುಗ್ರಹದಿಂದ ಇಷ್ಟ ಸಿದ್ಧಿಯುಂಟಾಗುತ್ತದೆ.

ಇಲ್ಲಿಗೆ ಶ್ರೀ ವಾಮನಪುರಾಣದಲ್ಲಿ ಸರೋಮಾಹಾತ್ಮ್ಯವೆಂಬ
ನಲವತ್ತೈದನೆಯ ಅಧ್ಯಾಯ ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಸರಸ್ಸಿನ ಮಾಹಾತ್ಮ್ಯವನ್ನು ಮುಂದುವರಿಸುತ್ತಾ ಸ್ಥಾಣು ಲಿಂಗದಲ್ಲಿ ಸಾನ್ನಿಧ್ಯಹೊಂದಿ ಪ್ರಸನ್ನನಾದ ಈಶ್ವರನು ಬ್ರಹ್ಮಾದಿಗಳನ್ನು ಕುರಿತು ತೀರ್ಥದ ಮಾಹಾತ್ಮ್ಯವನ್ನು ತಾನೇ ಹೇಳಿದನೆಂದು ಪ್ರತಿಪಾದಿಸಲಾಯಿತು. ಮೊದಲಿನ ಮತ್ತೊಂದು ಪ್ರಶ್ನೆಗೆ ಉತ್ತರವಾಗಿ ಈ ತೀರ್ಥದ ಸೇವನೆಯಿಂದ ಮನುಷ್ಯರೆಲ್ಲಾ ಸ್ವರ್ಗಕ್ಕೆ ಹೋಗಿ ಅಲ್ಲಿದ್ದ ದೇವತೆಗಳಿಗೆ ತೊಂದರೆಯಾದುದರಿಂದ ಅವರೆಲ್ಲರೂ ಚತುರ್ಮುಖನಲ್ಲಿ ಮೊರೆಯಿಟ್ಟರೆಂದೂ ಅವನ ಅಪ್ಪಣೆಯಿಂದ ಆ ಸರೋವರವನ್ನು ದೇವತೆಗಳು ಧೂಳಿಯಿಂದ ಮುಚ್ಚಿದರೆಂದೂ ಹೇಳಲಾಯಿತು. ಅದರಲ್ಲಿ ತುಂಬಿದ ಧೂಳಿಯೂ ಪವಿತ್ರಕರವಾಗಿ ಆದುದನ್ನು ನೋಡಿ ಬ್ರಹ್ಮನು ಆ ಮೂಲಲಿಂಗದಮೇಲೆ ಮತ್ತೊಂದು ಲಿಂಗವನ್ನು ಪ್ರತಿಷ್ಠೆಮಾಡಿದನೆಂದೂ ಅದೂ ಸಹ ಮೂಲಲಿಂಗದಂತೆ ತೇಜಸ್ವಿಯಾಗಿ ಆಯಿತೆಂದೂ ಹೇಳಿ ದೇವತೆಗಳ ಪ್ರಾರ್ಥನೆಯಿಂದ ಅದರ ಮೇಲೂ ಏಳು ಲಿಂಗಗಳನ್ನು ಬ್ರಹ್ಮನು ಪ್ರತಿಷ್ಠೆಮಾಡಿದನೆಂದೂ ಉಪಪಾದಿಸಲಾಯಿತು. ಈ ಧೂಳಿಯ ಸಂಬಂಧದಿಂದ ಕುರುಕ್ಷೇತ್ರವೆಲ್ಲಾ ಪುಣ್ಯಕರವಾಯಿತೆಂದು ಹೇಳಿ ಸ್ಥಾಣು ಲಿಂಗದ ಮತ್ತು ವಟವೃಕ್ಷದ ಸಾನ್ನಿಧ್ಯದಿಂದ ಆ ತೀರ್ಥದ ಮೇಲ್ಮೆಯನ್ನು ಉಪಪಾದಿಸಲಾಯಿತು.

॥ ಶ್ರೀಃ ॥

ಷಟ್‌ಚತ್ವಾರಿಂಶೋಽಧ್ಯಾಯಃ

ಶ್ರೀ ವಾ ಮ ನ ಪು ರಾ ಣಂ

ಸನತ್ಕುಮಾರ ಉವಾಚ

ಸ್ಥಾಣೋರ್ವಟಸ್ಯೋತ್ತರತಃ ಶುಕ್ಲತೀರ್ಥಂ ಪ್ರಕೀರ್ತಿತಂ ।
ಸ್ಥಾಣೋರ್ವಟಸ್ಯ ಪೂರ್ವೇಣ ವ್ಯೋಮತೀರ್ಥಂ ದ್ವಿಜೋತ್ತಮಾಃ ॥ ೧ ॥

ಸ್ಥಾಣೋರ್ವಟಂ ದಕ್ಷಿಣತೋ ದಕ್ಷತೀರ್ಥಮುದಾಹೃತಂ ।
ಸ್ಥಾಣೋಃ ಪಶ್ಚಿಮದಿಗ್ಭಾಗೇ ನಕುಲಸ್ಯ ಗಣಃ ಸ್ಮೃತಃ ॥ ೨ ॥

ಏತಾನಿ ಪುಣ್ಯತೀರ್ಥಾನಿ ಮಧ್ಯೇ ಸ್ಥಾಣುರಿತಿ ಸ್ಮೃತಃ ।
ತಸ್ಯ ದರ್ಶನಮಾತ್ರೇಣ ಪ್ರಾಪ್ನೋತಿ ಪರಮಂ ಪದಂ ॥ ೩ ॥

ಅಷ್ಟಮ್ಯಾಂ ಚ ಚತುರ್ದಶ್ಯಾಂ ಯಸ್ತ್ವೇತಾನಿ ಪರಿಕ್ರಮೇತ್ ।
ಉಮಾ ಚ ಲಿಂಗರೂಪೇಣ ಹರಪಾರ್ಶ್ವಂ ನ ಮುಂಚತಿ ॥ ೪ ॥

ನಲವತ್ತಾರನೆಯ ಅಧ್ಯಾಯವು

೧-೪. ಸ್ಥಾಣುವಟದ ಉತ್ತರದಿಕ್ಕಿನಲ್ಲಿ ಶುಕ್ಲತೀರ್ಥವಿದೆ, ಪೂರ್ವದಲ್ಲಿ ವ್ಯೋಮತೀರ್ಥವಿದೆ, ದಕ್ಷಿಣದಲ್ಲಿ ದಕ್ಷತೀರ್ಥವಿದೆ, ಪಶ್ಚಿಮದಿಕ್ಕಿನಲ್ಲಿ ನಕುಲಗಣವೆಂಬ ತೀರ್ಥವಿದೆ, ಈ ತೀರ್ಥಗಳ ಮಧ್ಯಭಾಗದ ಪ್ರದೇಶವೇ ಸ್ಥಾಣುತೀರ್ಥವೆಂದು ಪ್ರಸಿದ್ಧಿ ಹೊಂದಿದೆ. ಅದರ ದರ್ಶನಮಾತ್ರವೂ ಪರಮಪದಪ್ರಾಪ್ತಿಗೆ ಕಾರಣವಾಗುತ್ತದೆ. ಅಷ್ಟಮಿ ಮತ್ತು ಚತುರ್ದಶೀ ತಿಥಿಗಳಲ್ಲಿ ಯಾರು ಪ್ರದಕ್ಷಿಣೆಮಾಡುತ್ತಾರೆಯೋ ಆ ಸಮಯದಲ್ಲಿ ಪಾರ್ವತಿಯೂ ಲಿಂಗರೂಪಿಣಿಯಾಗಿ ಹರನ ಪಾರ್ಶ್ವವನ್ನು ಬಿಡದೆ ಅಲ್ಲಿಯೇ ಸಾನ್ನಿಧ್ಯ ಹೊಂದಿರುತ್ತಾಳೆ.

ತಸ್ಯಾದರ್ಶನಮಾತ್ರೇಣ ಸಿದ್ಧಿಂ ಪ್ರಾಪ್ನೋತಿ ಮಾನವಃ ।
ವಟಸ್ಯ ಉತ್ತರೇ ಪಾರ್ಶ್ವೇ ತಕ್ಷಕೇಣ ಮಹಾತ್ಮನಾ ॥ ೫ ॥

ಪ್ರತಿಷ್ಠಿತಂ ಮಹಾಲಿಂಗಂ ಸರ್ವಕಾಮಪ್ರದಾಯಕಂ ।
ವಟಸ್ಯ ಪೂರ್ವದಿಗ್ಭಾಗೇ ವಿಶ್ವಕರ್ಮಕೃತಂ ಮಹತ್ ॥ ೬ ॥

ಲಿಂಗಂ ಪ್ರತ್ಯಙ್ಮುಖಂ ದೃಷ್ಟ್ವಾ ಸಿದ್ಧಿಮಾಪ್ನೋತಿ ಮಾನವಃ ।
ತತ್ರೈವ ಲಿಂಗರೂಪೇಣ ಸ್ಥಿತಾ ದೇವೀ ಸರಸ್ವತೀ ॥ ೭ ॥

ಪ್ರಣಮ್ಯ ತಾಂ ಪ್ರಯತ್ನೇನ ಬುದ್ಧಿಂ ಮೇಧಾಂ ಚ ವಿಂದತಿ ।
ವಟಪಾರ್ಶ್ವೇ ಸ್ಥಿತಂ ಲಿಂಗಂ ಬ್ರಹ್ಮಣಾ ತತ್ಪ್ರತಿಷ್ಠಿತಂ ॥ ೮ ॥

ದೃಷ್ಟ್ವಾ ವಟೇಶ್ವರಂ ದೇವಂ ಪ್ರಯಾತಿ ಪರಮಂ ಪದಂ ।
ತತಃ ಸ್ಥಾಣುವಟಂ ದೃಷ್ಟ್ವಾ ಕೃತ್ವಾ ಚಾಪಿ ಪ್ರದಕ್ಷಿಣಂ ॥ ೯ ॥

ಪ್ರದಕ್ಷಿಣೀಕೃತಾ ತೇನ ಸಪ್ತದ್ವೀಪಾ ವಸುಂಧರಾ ।
ಸ್ಥಾಣೋಃ ಪಶ್ಚಿಮದಿಗ್ಭಾಗೇ ನಕುಲೀಶೋ ಗಣಃ ಸ್ಮೃತಃ ॥ ೧೦ ॥

೫-೭. ಆ ಪಾರ್ವತಿಯ ದರ್ಶನಮಾತ್ರದಿಂದ ಮನುಷ್ಯನು ಸಿದ್ಧನಾಗುತ್ತಾನೆ. ಆ ವಟದ ಉತ್ತರಭಾಗದಲ್ಲಿ ಮಹಾತ್ಮನಾದ ತಕ್ಷಕನು ಇಷ್ಟಾರ್ಥಪ್ರದವಾದ ಲಿಂಗವನ್ನೂ ಪ್ರತಿಷ್ಠಿಸಿರುವನು. ಆ ವಟದ ಪೂರ್ವಭಾಗದಲ್ಲಿ ವಿಶ್ವಕರ್ಮನಿಂದ ಪ್ರತಿಷ್ಠಿತವಾದ ಲಿಂಗವೊಂದಿರುವುದು, ಪಶ್ಚಿಮಾಭಿಮುಖವಾಗಿರುವ ಆ ಲಿಂಗದ ದರ್ಶನವು ಮನುಷ್ಯಮಾತ್ರಕ್ಕೂ ಸಿದ್ಧಿದಾಯಕವಾಗಿದೆ. ಅಲ್ಲಿಯೇ ಸರಸ್ವತೀದೇವಿಯೂ ಲಿಂಗರೂಪದಿಂದ ಇರುತ್ತಾಳೆ.

೮-೧೦. ಆ ಸರಸ್ವತಿಯನ್ನು ಪ್ರಯತ್ನಪೂರ್ವಕವಾಗಿ ಸೇವಿಸಿದವನು ಬುದ್ಧಿಯನ್ನೂ ಮೇಧಾಶಕ್ತಿಯನ್ನೂ ಹೊಂದುತ್ತಾನೆ ಆ ವಟದ ಪಕ್ಕದಲ್ಲಿ ಬ್ರಹ್ಮನಿಂದ ಪ್ರತಿಷ್ಠಿತವಾದ ಲಿಂಗವೊಂದಿದೆ. ವಟೇಶ್ವರನೆಂಬ ಆ ಲಿಂಗವನ್ನು ದರ್ಶನಮಾಡಿದವನು ಪರಮಪದಗಾಮಿಯಾಗುತ್ತಾನೆ. ಅನಂತರ ಸ್ಥಾಣುವಟವನ್ನು ದರ್ಶನಮಾಡಿ ಪ್ರದಕ್ಷಿಣೆಮಾಡಿದವನು ಸಪ್ತದ್ವೀಪವುಳ್ಳ ಭೂಮಿಯ ಪ್ರದಕ್ಷಿಣದ ಫಲವನ್ನೇ ಹೊಂದುತ್ತಾನೆ. ಆ ಸ್ಥಾಣುವಿನ ಪಶ್ಚಿಮದಿಕ್ಕಿನಲ್ಲಿ ನಕುಲೀಶ ಗಣವಿದೆ. ಅದನ್ನು ತಪ್ಪದೆ ಸೇವಿಸಿದವನು ಸಕಲ ಪಾಪಗಳಿಂದಲೂ, ಮುಕ್ತಿ ಹೊಂದುತ್ತಾನೆ.

ತಮಭ್ಯರ್ಚ್ಯ ಪ್ರಯತ್ನೇನ ಸರ್ವಪಾಪೈಃ ಪ್ರಮುಚ್ಯತೆ ।
ತಸ್ಯ ದಕ್ಷಿಣದಿಗ್ಭಾಗೆ ತೀರ್ಥಂ ರುದ್ರಾಕರಂ ಸ್ಮೃತಂ ॥ ೧೧ ॥

ತಸ್ಮಿನ್ ಸ್ನಾತಃ ಸರ್ವತೀರ್ಥೆ ಸ್ನಾತೋ ಭವತಿ ಮಾನವಃ ।
ತಸ್ಯಚೋತ್ತರದಿಗ್ಭಾಗೆ ರಾವಣೇನ ಮಹಾತ್ಮನಾ ॥ ೧೨ ॥

ಪ್ರತಿಷ್ಠಿತಂ ಮಹಾಲಿಂಗಂ ಗೋಕರ್ಣಂ ನಾಮ ನಾಮತಃ ।
ಆಷಾಢಮಾಸೆ ಯಾ ಕೃಷ್ಣಾ ಭವಿಷ್ಯತಿ ಚತುರ್ದಶೀ ॥ ೧೩ ॥

ತತ್ರ ಸ್ನಾತ್ವಾ ಸೋಪವಾಸೋ ಮುಕ್ತೋ ಭವತಿ ಕಿಲ್ಬಿಷೈಃ ।
ತತ್ರೈವ ಸಿದ್ಧಿದಂ ಲಿಂಗಂ ಮೇಘನಾದೇನ ಸ್ಥಾಪಿತಂ ॥ ೧೪ ॥

ಸಂಪೂಜಯಿತ್ವಾ ಯತ್ನೇನ ಲಭತೆ ಮಹತಾಂ ಶ್ರಿಯಂ ।
ತಸ್ಯ ಪಶ್ಚಿಮದಿಗ್ಭಾಗೆ ಕುಂಭಕರ್ಣೇನ ಪೂಜಿತಂ ॥ ೧೫ ॥

ಜ್ಯೇಷ್ಠೆ ಮಾಸಿ ಸಿತೆ ಪಕ್ಷೆ ಅಷ್ಟಮ್ಯಾಂ ಶ್ರದ್ಧಯಾ ನರಃ ।
ಸೋಪವಾಸೋ ವಸೇದ್ಯಸ್ತು ತಸ್ಯ ಪುಣ್ಯಫಲಂ ಶೃಣು ॥ ೧೬ ॥

ಪದೆ ಪದೆ ಯಜ್ಞಫಲಂ ಸ ಪ್ರಾಪ್ನೋತಿ ನ ಸಂಶಯಃ ।
ಏತಾನಿ ಮುನಿಭಿಃ ಸಾಧ್ಯೈರಾದಿತ್ಯೈರ್ವಸುಭಿಸ್ತಥಾ ॥ ೧೭ ॥

೧೧-೧೩. ಅದರ ದಕ್ಷಿಣಭಾಗದಲ್ಲಿ ರುದ್ರಾಕರವೆಂಬ ತೀರ್ಥವಿದೆ. ಅಲ್ಲಿ ಸ್ನಾನಮಾಡಿದವನು ಸರ್ವ ತೀರ್ಥಗಳಲ್ಲೂ ಸ್ನಾನಮಾಡಿದಂತಾಗುತ್ತಾನೆ. ಅದರ ಉತ್ತರದಿಕ್ಕಿನಲ್ಲಿ ಮಹಾತ್ಮನಾದ ರಾವಣನಿಂದ ಪ್ರತಿಷ್ಠಿತವಾದ ಗೋಕರ್ಣವೆಂಬ ಮಹಾಲಿಂಗವಿರುವುದು. ಆಷಾಢಮಾಸದ ಕೃಷ್ಣ ಚತುರ್ದಶಿಯಲ್ಲಿ ಅಲ್ಲಿ ಸ್ನಾನಮಾಡಿ ಉಪವಾಸವ್ರತದಿಂದ ಇದ್ದಲ್ಲಿ ಅವನು ಪಾಪಬಂಧದಿಂದ ವಿಮೋಚನೆ ಹೊಂದುತ್ತಾನೆ.

೧೪-೧೭. ಅಲ್ಲಿಯೇ ಮೇಘನಾದನಿಂದ ಸ್ಥಾಪಿತವಾದ ಸಿದ್ಧಿಪ್ರದವಾದ ಮತ್ತೊಂದು ಲಿಂಗವಿದೆ. ಅದನ್ನು ಪ್ರಯತ್ನಪಟ್ಟು ಪೂಜಿಸಿದಲ್ಲಿ ಐಶ್ವರ್ಯಶಾಲಿಯಾಗುತ್ತಾನೆ. ಅದಕ್ಕೆ ಪಶ್ಚಿಮದಲ್ಲಿ ಕುಂಭಕರ್ಣನಿಂದ ಸ್ಥಾಪಿತವಾದ ಮತ್ತೊಂದು ಲಿಂಗವಿದೆ. ಜ್ಯೇಷ್ಠ ಶುಕ್ಲ ಅಷ್ಟಮಿಯಲ್ಲಿ ಶ್ರದ್ಧೆಯಿಂದ ಆ ಲಿಂಗವನ್ನು ಪೂಜಿಸಿ

ಮರುದ್ಭಿರ್ವಹ್ನಿಭಿಶ್ಚೈವ ಸೇವಿತಾನಿ ಪ್ರಯತ್ನತಃ ।
ಅನ್ಯೇಽಪಿ ಪ್ರಾಣಿನಃ ಕೇಚಿತ್ಪ್ರವಿಷ್ಟಾಃ ಸ್ಥಾಣುಮುತ್ತಮಂ ॥ ೧೮ ॥

ತೇ ಸರ್ವೇ ಪಾಪನಿರ್ಮುಕ್ತಾಃ ಪ್ರಯಾಂತಿ ಪರಮಂ ಪದಂ ।
ಅಸ್ತಿ ಯತ್ಸನ್ನಿಧೌ ಲಿಂಗಂ ದೇವದೇವಸ್ಯ ಶೂಲಿನಃ ॥ ೧೯ ॥

ಉಮಾ ಸಾ ಲಿಂಗರೂಪೇಣ ಹರಪಾರ್ಶ್ವಂ ನ ಮುಂಚತಿ ।
ಯಶ್ಚ ಪಶ್ಯತಿ ಗೋಕರ್ಣಂ ತಸ್ಯ ಪುಣ್ಯಫಲಂ ಲಭೇತ್ ॥ ೨೦ ॥

ಕಾಮತೋಽಕಾಮತೋ ವಾಪಿ ಯತ್ಪಾಪಂ ತೇನ ಸಂಚಿತಂ ।
ತಸ್ಮಾದ್ವಿಮುಚ್ಯತೇ ಪಾಪಾತ್ಪೂಜಯಿತ್ವಾ ಹರಂ ಶುಚಿಃ ॥ ೨೧ ॥

ಕೌಮಾರೇ ಬ್ರಹ್ಮಚರ್ಯೇಣ ಯತ್ಪುಣ್ಯಂ ಪ್ರಾಪ್ಯತೇ ನರೈಃ ।
ತತ್ಪುಣ್ಯಂ ಶಂಕರಂ ತಸ್ಯಾಮಷ್ಟಮ್ಯಾಂ ಯೋಽರ್ಚಯೇಽಚ್ಛಿವಂ ॥ ೨೨ ॥

ಉಪವಾಸವ್ರತದಿಂದ ಅಲ್ಲಿ ವಾಸಮಾಡಿದಲ್ಲಿ ಅವನಿಗೆ ಹೆಜ್ಜೆಹೆಜ್ಜೆಗೂ ಯಜ್ಞಫಲವೇ ಉಂಟಾಗುತ್ತದೆ. ಈ ಲಿಂಗಗಳೆಲ್ಲವೂ ಮುನಿಗಳಿಂದಲೂ ಸಾಧ್ಯರಿಂದಲೂ ಆದಿತ್ಯರು ವಸುಗಳು ಮರುತ್ತೆಂಬ ದೇವತೆಗಳು ಅಗ್ನಿಗಳು ಇವರೆಲ್ಲರಿಂದಲೂ ಪ್ರಯತ್ನಪೂರ್ವಕ ವಾಗಿ ಸೇವಿಸಲ್ಪಟ್ಟಿವೆ.

೧೮-೨೧. ಇತರ ಪ್ರಾಣಿಗಳೂ ಕೂಡ ಈ ಸ್ಥಾಣುಕ್ಷೇತ್ರಕ್ಕೆ ಪ್ರವೇಶಿಸಿದ ಮಾತ್ರದಿಂದಲೇ ಸಕಲ ಪಾಪಮೋಕ್ಷವನ್ನು ಹೊಂದಿ ಪರಮಪದಕ್ಕೆ ಹೋಗುತ್ತವೆ. ದೇವದೇವನಾದ ಈಶ್ವರನ ಲಿಂಗವು ಸಮೀಪದಲ್ಲಿರುವದ್ದರಿಂದಲೇ ಉಮಾದೇವಿಯೂ ಲಿಂಗರೂಪದಿಂದ ಅಲ್ಲೇ ಇರುತ್ತಾ ಆ ಹರನ ಸಮೀಪವನ್ನು ಬಿಡುತ್ತಿಲ್ಲ. ಗೋಕರ್ಣ ಕ್ಷೇತ್ರವೂ ದರ್ಶನಮಾತ್ರದಿಂದ ಪುಣ್ಯಸಂಪಾದಕವಾಗಿರುತ್ತೆ. ಅಲ್ಲಿರುವ ಹರನನ್ನು ಶುಚಿಯಾಗಿದ್ದು ಪೂಜಿಸಿದಲ್ಲಿ ಅಂತಹವನ ಬುದ್ಧಿಪೂರ್ವಕವಾಗಿಯೂ ಅಬುದ್ಧಿ ಪೂರ್ವಕವಾಗಿಯೂ ಸಂಚಿತವಾಗಿರುವ ಪಾಪಗಳೆಲ್ಲವೂ ಬಿಡುಗಡೆ ಹೊಂದುತ್ತವೆ.

೨೨-೨೪. ಕೌಮಾರಾವಸ್ಥೆಯಲ್ಲಿ ಬ್ರಹ್ಮಚರ್ಯಹೊಂದಿರುವವನು ಯಾವ ಪುಣ್ಯವನ್ನು ಹೊಂದಬಹುದೋ ಅಲ್ಲಿರುವ ಶಂಕರನನ್ನು ಅಷ್ಟಮಿಯದಿವಸ ಪೂಜಿಸಿ

ಯದೀಚ್ಛೇತ್ಪರಮಂ ರೂಪಂ ಸೌಭಾಗ್ಯಂ ಧನಸಂಪದಃ ।
ಕೌಮಾರೇಶ್ವರಮಾಹಾತ್ಮ್ಯಾತ್ಸಿದ್ಧ್ಯತೆ ನಾತ್ರ ಸಂಶಯಃ ॥ ೨೩ ॥

ತಸ್ಯಚೋತ್ತರದಿಗ್ಭಾಗೆ ಲಿಂಗಂ ಪೂಜ್ಯ ವಿಭೀಷಣಃ ।
ಅಜರಶ್ಚಾಮರಶ್ಚೈವ ಕಲ್ಪಯಿತ್ವಾ ಬಭೂವ ಹ ॥ ೨೪ ॥

ಆಷಾಢಸ್ಯ ತು ಮಾಸಸ್ಯ ಶುಕ್ಲಾಯಾ ಚಾಷ್ಟಮಿಾ ಭವೇತ್ ।
ತಸ್ಯಾಂ ಪೂಜ್ಯಃ ಸೋಽಪವಾಸಶ್ಚಾಮೃತತ್ವಮವಾಪ್ನುಯಾತ್ ॥ ೨೫ ॥

ಪೂರ್ವೆ ಪೂರ್ಣೇರಿತಂ ಲಿಂಗಂ ತಸ್ಮಿನ್ ಸ್ಥಾನೆ ದ್ವಿಜೋತ್ತಮ ।
ತಂ ಪೂಜಯಿತ್ವಾ ಯತ್ನೇನ ಸರ್ವಕಾಮಾನವಾಪ್ನುಯಾತ್ ॥ ೨೬ ॥

ದೂಷಣಸ್ತ್ರಿಶಿರಾಶ್ಚೈವ ತತ್ರ ಪೂಜ್ಯ ಮಹೇಶ್ವರಂ ।
ಯಥಾಭಿಲಷಿತಾನ್ಕಾಮಾನಾಪತುಸ್ತೌ ಮುದಾನ್ವಿತೌ ॥ ೨೭ ॥

ಚೈತ್ರಮಾಸೆ ಸಿತೆ ಪಕ್ಷೆ ಯೋ ನರಸ್ತತ್ರ ಪೂಜಯೇತ್ ।
ತಸ್ಯ ತೌ ವರದೌದೇವೌ ಪ್ರಯಚ್ಛೇತೇಽಭಿವಾಂಛಿತಂ ॥ ೨೮ ॥

ದವನು ಆ ಪುಣ್ಯವನ್ನು ಹೊಂದುತ್ತಾನೆ. ಸೌಂದರ್ಯವನ್ನೂ ಸೌಭಾಗ್ಯವನ್ನೂ ಸಂಪತ್ತನ್ನೂ ಅಪೇಕ್ಷಿಸುವವನು ಆ ಕೌಮಾರೇಶ್ವರನನ್ನು ಪೂಜಿಸಿ ಆ ಮಾಹಾತ್ಮ್ಯದಿಂದಲೇ ಇಷ್ಟಸಿದ್ಧಿಯನ್ನು ಹೊಂದಿ ಕೃತಕೃತ್ಯನಾಗುತ್ತಾನೆ. ಅದರ ಉತ್ತರದಿಕ್ಕಿನಲ್ಲಿ ವಿಭೀಷಣನೂ ಒಂದು ಲಿಂಗವನ್ನು ಪ್ರತಿಷ್ಠಿಸಿ ಅದನ್ನು ಪೂಜಿಸಿ ಅಜರನಾಗಿಯೂ ಅಮರನಾಗಿಯೂ ಆದನು.

೨೫-೨೮. ಆಷಾಢಮಾಸದ ಶುಕ್ಲಪಕ್ಷದ ಅಷ್ಟಮಿಯಲ್ಲಿ ಆ ವಿಭೀಷಣಲಿಂಗವನ್ನು ಪೂಜಿಸಿ ಉಪವಾಸವ್ರತದಿಂದಿರುವವನಿಗೆ ಮುಕ್ತಿಯುಂಟಾಗುತ್ತದೆ. ಆ ಲಿಂಗದ ಪೂರ್ವಭಾಗದಲ್ಲಿ ಪೂರ್ಣವೆಂಬ ಹೆಸರಿನ ಮತ್ತೊಂದು ಲಿಂಗವಿದೆ. ಅದನ್ನು ಪ್ರಯತ್ನದಿಂದ ಪೂಜಿಸಿದವನು ಎಲ್ಲಾ ಮನೋರಥಗಳನ್ನೂ ಹೊಂದುತ್ತಾನೆ. ದೂಷಣ ಮತ್ತು ತ್ರಿಶಿರಸ್ಸು ಇವರೂ ಸಹ ಅಲ್ಲಿ ಈಶ್ವರನನ್ನು ಪೂಜಿಸಿ ಇಷ್ಟಸಿದ್ಧಿ ಹೊಂದಿ ಸಂತೋಷಪಟ್ಟರು. ಚೈತ್ರಮಾಸದ ಶುಕ್ಲಪಕ್ಷದಲ್ಲಿ ಅಲ್ಲಿದ್ದು ಯಾವನು ಆ ಲಿಂಗಗಳನ್ನು ಪೂಜಿಸುತ್ತಾನೆಯೋ ಅವನಿಗೆ ಆ ಲಿಂಗಗಳು ಇಷ್ಟಸಿದ್ಧಿಯನ್ನುಂಟುಮಾಡುತ್ತವೆ

ಸ್ಥಾಣೋರ್ವಟಸ್ಯ ಪೂರ್ವೇಣ ಹಸ್ತಿಪಾದೇಶ್ವರಃ ಶಿವಃ ।
ತಂ ದೃಷ್ಟ್ವಾ ಮುಚ್ಯತೇ ಪಾಪೈಃ ಅನ್ಯಜನ್ಮನಿ ಸಂಭವೈಃ ॥ ೨೯ ॥

ತಸ್ಯ ದಕ್ಷಿಣತೋ ಲಿಂಗಂ ಹಾರೀತಸ್ಯ ಋಷೇಃ ಸ್ಥಿತಂ ।
ಯತ್ಪ್ರಣಮ್ಯ ಪ್ರಯತ್ನೇನ ಸಿದ್ಧಿಂ ಪ್ರಾಪ್ನೋತಿ ಮಾನವಃ ॥ ೩೦ ॥

ತಸ್ಯ ದಕ್ಷಿಣಪಾರ್ಶ್ವೇ ತು ವಾಪೀ ತಸ್ಯ ಮಹಾತ್ಮನಃ ।
ಲಿಂಗಂ ತ್ರೈಲೋಕ್ಯವಿಖ್ಯಾತಂ ಸರ್ವಪಾಪಹರಂ ಶಿವಂ ॥ ೩೧ ॥

ಕಂಕಾಲರೂಪಿಣಾ ಚಾಪಿ ರುದ್ರೇಣ ಸುಮಹಾತ್ಮನಾ ।
ಪ್ರತಿಷ್ಠಿತಂ ಮಹಾಲಿಂಗಂ ಸರ್ವಪಾಪಪ್ರಣಾಶನಂ ॥ ೩೨ ॥

ಭುಕ್ತಿದಂ ಮುಕ್ತಿದಂ ಪ್ರೋಕ್ತಂ ಸರ್ವಕಿಲ್ಬಿಷನಾಶನಂ ।
ಲಿಂಗಸ್ಯ ದರ್ಶನಾದೇವ ಹ್ಯಗ್ನಿಷ್ಟೋಮಫಲಂ ಲಭೇತ್ ॥ ೩೩ ॥

ತಸ್ಯ ಪಶ್ಚಿಮದಿಗ್ಭಾಗೇ ಲಿಂಗಂ ಸಿದ್ಧ ಪ್ರತಿಷ್ಠಿತಂ ।
ಸಿದ್ಧೇಶ್ವರಸ್ತು ವಿಖ್ಯಾತಂ ಸರ್ವಸಿದ್ಧಿಪ್ರದಾಯಕಂ ॥ ೩೪ ॥

೨೯-೩೩. ಸ್ಥಾಣುವಟದ ಪೂರ್ವಭಾಗದಲ್ಲಿ ಹಸ್ತಿಪಾದೇಶ್ವರನಿರುವನು ಅವನ ದರ್ಶನದಿಂದಲೂ ಬಹು ಜನ್ಮಕೃತವಾದ ಪಾಪಗಳು ನಾಶಹೊಂದುತ್ತವೆ. ಅದರ ದಕ್ಷಿಣಭಾಗದಲ್ಲಿ ಹಾರೀತಮುನಿಯಿಂದ ಸ್ಥಾಪಿತವಾದ ಲಿಂಗವಿದೆ. ಅದರ ಪ್ರಣಾಮವೂ ಮನುಷ್ಯನಿಗೆ ಸಿದ್ಧಿಪ್ರದವಾದುದು. ಅದರ ದಕ್ಷಿಣ ಪಾರ್ಶ್ವದಲ್ಲಿ ಆ ಮಹಾಮುನಿಯಿಂದಲೇ ನಿರ್ಮಿತವಾದ ಕೊಳವಿದೆ. ಅಲ್ಲಿರುವ ಲಿಂಗವೂ ಸರ್ವಪಾಪನಾಶಕವಾದದ್ದು. ಆ ಲಿಂಗವು ತಪಸ್ಸಿನಿಂದ ಕೃಶನಾಗಿ ಅಸ್ಥಿಪಂಜರಮಾತ್ರದಿಂದಿದ್ದ ರುದ್ರದೇವನಿಂದಲೇ ಪ್ರತಿಷ್ಠಿತವಾದದ್ದು. ಅದು ಭೋಗ ಮೋಕ್ಷಪ್ರದವೂ ಸರ್ವಪಾಪನಾಶಕವೂ ಆಗಿದೆ. ಅದರ ದರ್ಶನಮಾತ್ರದಿಂದಲೂ ಅಗ್ನಿಷ್ಟೋಮಫಲವನ್ನು ಹೊಂದಿಯಾನು.

೩೪-೩೬. ಅದರ ಪಶ್ಚಿಮಭಾಗದಲ್ಲಿ ಸಿದ್ಧಪ್ರತಿಷ್ಠಿತವಾದ ಲಿಂಗವಿದೆ. ಸಿದ್ಧೇಶ್ವರನೆಂಬ ಪ್ರಸಿದ್ಧಿಯುಳ್ಳ ಆ ಲಿಂಗವು ಸರ್ವಸಿದ್ಧಿಗಳನ್ನೂ ಉಂಟುಮಾಡುತ್ತದೆ. ಅದಕ್ಕೆ ದಕ್ಷಿಣದಿಗ್ಭಾಗದಲ್ಲಿ ಮೃಕಂಡು ಮುನಿಯಿಂದ ಪ್ರತಿಷ್ಠಿತವಾದ ಲಿಂಗವಿದೆ.

ತಸ್ಯ ದಕ್ಷಿಣದಿಗ್ಭಾಗೇ ಮೃಕಂಡೇನ ಮಹಾತ್ಮನಾ ।
ತತ್ರ ಪ್ರತಿಷ್ಠಿತಂ ಲಿಂಗಂ ದರ್ಶನಾತ್ಸಿದ್ಧಿದಾಯಕಂ ॥ ೩೫ ॥

ತಸ್ಯ ಪೂರ್ವೇ ಚ ದಿಗ್ಭಾಗೇ ಆದಿತ್ಯೇನ ಮಹಾತ್ಮನಾ ।
ಪ್ರತಿಷ್ಠಿತಂ ಲಿಂಗವರಂ ಸರ್ವಕಿಲ್ಬಿಷನಾಶನಂ ॥ ೩೬ ॥

ಚಿತ್ರಾಙ್ಗದಸ್ತು ಗಂಧರ್ವೋ ರಂಭಾ ಚಾಪ್ಸರಸಾಂ ವರಾ ।
ಪರಸ್ಪರಂ ಸಾನುರಾಗೌ ಸ್ಥಾಣುದರ್ಶನಕಾಙ್ಕ್ಷಿಣೌ ॥ ೩೭ ॥

ದೃಷ್ಟ್ವಾ ಸ್ಥಾಣುಂ ಪೂಜಯಿತ್ವಾ ಸಾನುರಾಗೌ ಪರಸ್ಪರಂ ।
ಆಗಮ್ಯ ವರದಂ ದೇವಂ ಪ್ರತಿಷ್ಠಾಪ್ಯ ಮಹೇಶ್ವರಂ ॥ ೩೮ ॥

ಚಿತ್ರಾಂಗದೇಶ್ವರಂ ದೃಷ್ಟ್ವಾ ತದಾ ರಂಭೇಶ್ವರಂ ದ್ವಿಜ ।
ಸುಭಗೋ ದರ್ಶನೀಯಶ್ಚ ಕುಲೇ ಜನ್ಮ ಸಮಾಪ್ನುಯಾತ್ ॥ ೩೯ ॥

ತಸ್ಯ ದಕ್ಷಿಣತೋ ಲಿಂಗಂ ವಜ್ರಿಣಾ ಸ್ಥಾಪಿತಂ ಪುರಾ ।
ತಸ್ಯ ಪ್ರಸಾದಾತ್ಸಂಪ್ರಾಪ್ತಂ ಮನಸಾ ಚಿಂತಿತಂ ಫಲಂ ॥ ೪೦ ॥

ಪರಾಶರೇಣ ಮುನಿನಾ ತಥೈವಾರಾಧ್ಯ ಶಂಕರಂ ।
ಪ್ರಾಪ್ತಂ ಕವಿತ್ವಂ ಪರಮಂ ದರ್ಶನಾಚ್ಛಂಕರಸ್ಯ ಚ ॥ ೪೧ ॥

ಅದರ ದರ್ಶನವೂ ಸಿದ್ಧಿಪ್ರದವಾದುದು. ಅದಕ್ಕೆ ಪೂರ್ವದಿಕ್ಕಿನಲ್ಲಿ ಮಹಾತ್ಮನಾದ ಆದಿತ್ಯನಿಂದ ಪ್ರತಿಷ್ಠಿತವಾದ ಲಿಂಗವಿದೆ. ಅದೂ ಸರ್ವಪಾಪನಾಶಕವಾದುದು.

೩೭-೪೦. ಗಂಧರ್ವನಾದ ಚಿತ್ರಾಂಗದನೂ ಅಪ್ಸರಶ್ಶ್ರೇಷ್ಠೆಯಾದ ರಂಭೆಯೂ ಸಹ ಪರಸ್ಪರಾನುರಾಗಿಗಳಾಗಿ ಸ್ಥಾಣುದರ್ಶನ ಹೊಂದಲು ಆಶೆಪಟ್ಟು ಸ್ಥಾಣುವನ್ನು ದರ್ಶನಮಾಡಿ ಪೂಜಿಸಿ ಪರಸ್ಪರಾನುರಕ್ತರಾಗಿ ಅಲ್ಲಿಯೇ ವರಪ್ರದನಾದ ಮಹೇಶ್ವರನನ್ನು ಪ್ರತಿಷ್ಠಿಸಿದರು. ಚಿತ್ರಾಂಗದೇಶ್ವರನೆಂದೂ ರಂಭೇಶ್ವರನೆಂದೂ ಹೆಸರುಳ್ಳ ಆ ಲಿಂಗವನ್ನು ದರ್ಶನಮಾಡಿದವನು ಸೌಭಾಗ್ಯಶಾಲಿಯೂ ಸುಂದರನೂ ಆಗಿ ಸತ್ಕುಲದಲ್ಲಿ ಜನಿಸುತ್ತಾನೆ. ಅದಕ್ಕೆ ದಕ್ಷಿಣಭಾಗದಲ್ಲಿ ಇಂದ್ರನಿಂದ ಸ್ಥಾಪಿತವಾದ ಲಿಂಗವಿದೆ. ಅದರ ಅನುಗ್ರಹವೂ ಇಷ್ಟಾರ್ಥಪ್ರಾಪ್ತಿಗೆ ಕಾರಣವಾದದ್ದು.

೪೧-೪೩. ಪರಾಶರಮುನಿಯೂ ಕೂಡ ಶಂಕರನನ್ನು ಆರಾಧಿಸಿ ಅವನ ದರ್ಶನದಿಂದಲೇ ಉತ್ತಮವಾದ ಕವಿತಾಶಕ್ತಿಯನ್ನು ಹೊಂದಿದನು. ವೇದವ್ಯಾಸಮುನಿಯೂ

ವೇದವ್ಯಾಸೇನ ಮುನಿನಾ ಆರಾಧ್ಯ ಪರಮೇಶ್ವರಂ ।
ಸರ್ವಜ್ಞತ್ವಂ ಬ್ರಹ್ಮಜ್ಞಾನಂ ಪ್ರಾಪ್ತಂ ದೇವಪ್ರಸಾದತಃ ॥ ೪೨ ॥

ಸ್ಥಾಣೋಃ ಪಶ್ಚಿಮದಿಗ್ಭಾಗೆ ಲಿಂಗಂ ಹಿಮವತೇಶ್ವರಂ ।
ಪ್ರತಿಷ್ಠಿತಂ ಪುಣ್ಯಕೃತಾಂ ದರ್ಶನಾತ್ಸಿದ್ಧಿಕಾರಕಂ ॥ ೪೩ ॥

ತಸ್ಯಾಪಿ ಪಶ್ಚಿಮೆ ಭಾಗೆ ಕಾರ್ತವೀರ್ಯೇಣ ಸ್ಥಾಪಿತಂ ।
ಲಿಂಗಂ ಪಾಪಹರಂ ಸದ್ಯೋದರ್ಶನಾತ್ಪುಣ್ಯಮಾಪ್ನುಯಾತ್ ॥ ೪೪ ॥

ತಸ್ಯಾಪ್ಯುತ್ತರತೋ ಭಾಗೆ ಸುಪಾರ್ಶ್ವಸ್ಥಾಪಿತಂ ಪುನಃ ।
ಆರಾಧ್ಯ ಹನುಮಾಂಶ್ಚಾಪ ಸಿದ್ಧಿಂ ದೇವಪ್ರಸಾದತಃ ॥ ೪೫ ॥

ತಸ್ಯೈವ ಪೂರ್ವದಿಗ್ಭಾಗೆ ವಿಷ್ಣುನಾ ಪ್ರಭವಿಷ್ಣುನಾ ।
ಆರಾಧ್ಯ ವರದಂ ದೇವಂ ಚಕ್ರಮಧ್ಯೆ ಸುದರ್ಶನಂ ॥ ೪೬ ॥

ತಸ್ಯಾಪಿ ಪೂರ್ವದಿಗ್ಭಾಗೆ ಇಂದ್ರೇಣ ವರುಣೇನ ಚ ।
ಪ್ರತಿಷ್ಠಿತೆ ಲಿಂಗವರೆ ಸರ್ವಕಾಮಪ್ರದಾಯಕೆ ॥ ೪೭ ॥

ಕೂಡ ಪರಮೇಶ್ವರನನ್ನು ಆರಾಧಿಸಿಯೇ ಅವನ ಅನುಗ್ರಹದಿಂದ ಸರ್ವಜ್ಞನೂ ಬ್ರಹ್ಮಜ್ಞಾನಿಯೂ ಆದನು. ಆ ಸ್ಥಾಣುವಿನ ಪಶ್ಚಿಮದಿಕ್ಕಿನಲ್ಲಿ ಹಿಮವಂತನಿಂದ ಪ್ರತಿಷ್ಠಿತವಾದ ಈಶ್ವರಲಿಂಗವಿದೆ. ಪುಣ್ಯಶಾಲಿಗಳು ಅದರ ದರ್ಶನದಿಂದ ಸಿದ್ಧಿ ಹೊಂದುವರು.

೪೪-೪೭. ಅದಕ್ಕೂ ಪಶ್ಚಿಮಭಾಗದಲ್ಲಿ ಕಾರ್ತವೀರ್ಯನಿಂದ ಸ್ಥಾಪಿತವಾದ ಲಿಂಗವಿದೆ. ಅದರ ದರ್ಶನದಿಂದಲೂ ಪಾಪನಾಶವೂ ಮತ್ತು ಪುಣ್ಯವೂ ಉಂಟಾಗುತ್ತದೆ. ಅದಕ್ಕೂ ಉತ್ತರಭಾಗದಲ್ಲಿ ಸುಪಾರ್ಶ್ವನಿಂದ ಸ್ಥಾಪಿತವಾದ ಮತ್ತೊಂದು ಲಿಂಗವಿದೆ. ಅವನ್ನು ಪೂಜಿಸಿ ಹನುಮಂತನು ಸಿದ್ಧಿಯನ್ನು ಹೊಂದಿದನು. ಅದರ ಪೂರ್ವದಿಕ್ಕಿನಲ್ಲಿ ಸರ್ವಶಕ್ತನಾದ ವಿಷ್ಣುವೂ ಕೂಡ ತನ್ನ ಚಕ್ರಮಧ್ಯದಲ್ಲಿ ಸುದರ್ಶನರೂಪದಲ್ಲಿ ಆರಾಧಿಸಿದನು. ಅದಕ್ಕೂ ಪೂರ್ವದಿಕ್ಕಿನಲ್ಲಿ ಇಂದ್ರನಿಂದಲೂ ವರುಣನಿಂದಲೂ ಪ್ರತಿಷ್ಠಿತವಾದ ಸರ್ವಪುರುಷಾರ್ಥಪ್ರದವಾದ ಎರಡು ಲಿಂಗವಿದೆ.

ಏತಾನಿ ಮುನಿಭಿಸ್ಸಾಧ್ಯೈರಾದಿತ್ಯೈರ್ವಸುಭಿಸ್ತಥಾ ।
ಸೇವಿತಾನಿ ಪ್ರಯತ್ನೇನ ಸರ್ವಪಾಪಹರಾಣಿ ವೈ ॥ ೪೮ ॥

ಸ್ವಯಂಭುವಂ ತಥಾ ಸ್ಥಾಣುಮೃಷಿಭಿಸ್ತತ್ತ್ವದರ್ಶಿಭಿಃ ।
ಪ್ರತಿಷ್ಠಿತಾನಿ ಲಿಂಗಾನಿ ಯೇಷಾಂ ಸಂಖ್ಯಾ ನ ವಿದ್ಯತೇ ॥ ೪೯ ॥

ತಸ್ಯಾಮುತ್ತರತಶ್ಚೈವ ಯಾವದೋಘವತೀ ನದೀ ।
ಸಹಸ್ರಮೇಕಂ ಲಿಂಗಾನಾಂ ದೇವಪಶ್ಚಿಮತಃ ಸ್ಥಿತಂ ॥ ೫೦ ॥

ತಸ್ಯಾಪಿ ಪೂರ್ವದಿಗ್ಭಾಗೇ ವಾಲಖಿಲ್ಯೈರ್ಮಹಾತ್ಮಭಿಃ ।
ಪ್ರತಿಷ್ಠಿತಾ ರುದ್ರಕೋಟಿರ್ಯಾವತ್ಸನ್ನಿಹಿತಂ ಸರಃ ॥ ೫೧ ॥

ದಕ್ಷಿಣೇನ ತು ದೇವಸ್ಯ ಗಂಧರ್ವೈರ್ಯಕ್ಷಕಿನ್ನರೈಃ ।
ಪ್ರತಿಷ್ಠಿತಾನಿ ಲಿಂಗಾನಿ ಯೇಷಾಂ ಸಂಖ್ಯಾ ನ ವಿದ್ಯತೇ ॥ ೫೨ ॥

ತಿಸ್ರಃ ಕೋಟ್ಯೋಽರ್ಧಕೋಟೀ ಚ ಲಿಂಗಾನಾಂ ವಾಯುರಬ್ರವೀತ್ ।
ಅಸಂಖ್ಯಾತಾಃ ಸಹಸ್ರಾಣಿ ಯದ್ರುದ್ರಸ್ಥಾನಮಾಶ್ರಿತಾಃ ॥ ೫೩ ॥

ಏತಜ್ಞಾತ್ವಾ ಶ್ರದ್ಧಧಾನಃ ಸ್ಥಾಣುಲಿಂಗಂ ಸಮಾಶ್ರಯೇತ್ ।
ಯಸ್ಯ ಪ್ರಸಾದಾತ್ ಪ್ರಾಪ್ನೋತಿ ಮನಸಾ ಚಿಂತಿತಂ ಫಲಂ ॥ ೫೪ ॥

೪೮-೫೧. ಈ ಲಿಂಗಗಳೆಲ್ಲವೂ ಋಷಿಗಳಿಂದಲೂ ಸಾಧ್ಯರಿಂದಲೂ ಆದಿತ್ಯ ವಸ್ವಾದಿಗಳಿಂದಲೂ ಪ್ರಯತ್ನಪೂರ್ವಕವಾಗಿ ಸೇವಿಸಲ್ಪಟ್ಟು ಸರ್ವಪಾಪನಾಶಕಗಳಾಗಿ ಪ್ರಕಾಶಿಸುತ್ತಿವೆ. ಸ್ವಯಂಭುಲಿಂಗದ ಮತ್ತು ಸ್ಥಾಣುಲಿಂಗದ ಸಮೀಪದಲ್ಲಿ ಋಷಿಗಳು ಪ್ರತಿಷ್ಠೆಮಾಡಿರುವ ಆ ಲಿಂಗಗಳಿಗೆ ಸಂಖ್ಯೆಯೇ ಇಲ್ಲ. ದೇವಲಿಂಗದ ಪಶ್ಚಿಮ ಭಾಗದಿಂದ ಪ್ರಾರಂಭವಾಗಿ ಉತ್ತರದಲ್ಲಿರುವ ಓಘವತೀನದಿಯವರಿಗೂ ಸಾವಿರದ ಒಂದು ಲಿಂಗಗಳು ಪ್ರತಿಷ್ಠಿತವಾಗಿವೆ. ಅದರ ಪೂರ್ವಭಾಗದಲ್ಲಿ ಮಹಾತ್ಮರಾದ ವಾಲಖಿಲ್ಯರು ಸರೋವರದ ದೀರ್ಘತೆಯಿರುವವರಿಗೂ ಕೋಟಿಲಿಂಗಗಳನ್ನು ಪ್ರತಿಷ್ಠೆ ಮಾಡಿರುವರು

೫೨-೫೪. ಆ ದೇವಲಿಂಗದ ದಕ್ಷಿಣದಿಕ್ಕಿನಲ್ಲಿ ಗಂಧರ್ವಯಕ್ಷಕಿನ್ನರಾದಿಗಳು ಲೆಕ್ಕವಿಲ್ಲದಷ್ಟು ಲಿಂಗಗಳನ್ನು ಪ್ರತಿಷ್ಠೆಮಾಡಿರುವರು. ವಾಯುವು ಇಲ್ಲಿ ಮೂರೂವರೆ ಕೋಟಿ ಲಿಂಗಗಳಿವೆ ಎಂದು ಸಂಖ್ಯಾನಿಯಮದಿಂದ ಹೇಳಿರುತ್ತಾನೆ. ಇನ್ನೂ ಅಸಂಖ್ಯಾತವಾದ ಸಾವಿರಾರು ಲಿಂಗಗಳೂ ಆ ಸ್ಥಾನವನ್ನು ಆಶ್ರಯಿಸಿವೆ. ಇದೆಲ್ಲವನ್ನೂ

ಅಕಾಮೋ ವಾ ಸಕಾಮೋ ವಾ ಪ್ರವಿಶ್ಯ ಸ್ಥಾಣುಮಂದಿರಂ ।
ವಿಮುಕ್ತಃ ಪಾತಕೈರ್ಘೋರೈಃ ಪ್ರಾಪ್ನೋತಿ ಪರಮಂ ಪದಂ ॥ ೫೫ ॥

ಚೈತ್ರಮಾಸೆ ತ್ರಯೋದಶ್ಯಾಂ ದಿವ್ಯನಕ್ಷತ್ರಯೋಗತಃ ।
ಶುಕ್ರಾರ್ಕಚಂದ್ರಸಂಯೋಗೆ ದಿನೆ ಪುಣ್ಯತಮೆ ಶುಭೆ ॥ ೫೬ ॥

ಪ್ರತಿಷ್ಠಿತಂ ಸ್ಥಾಣುಲಿಂಗಂ ಬ್ರಹ್ಮಣಾ ಲೋಕಧಾರಿಣಾ ।
ಋಷಿಭಿರ್ದೇವಸಂಘೈಶ್ಚ ಪೂಜಿತಂ ಶಾಶ್ವತೀಸ್ಸಮಾಃ ॥ ೫೭ ॥

ತಸ್ಮಿನ್ಕಾಲೆ ನಿರಾಹಾರಾ ಮಾನವಾಃ ಶ್ರದ್ಧಯಾನ್ವಿತಾಃ ।
ಪೂಜಯಂತಿ ಶಿವಂ ಯೇ ವೈ ತೇ ಯಾಂತಿ ಪರಮಂ ಪದಂ ॥ ೫೮ ॥

ತತ್ರಾರೂಢಮಿದಂ ಜ್ಞಾತ್ವಾ ಕುರ್ವಂತಿ ಚ ಪ್ರದಕ್ಷಿಣಾಂ ।
ಪ್ರದಕ್ಷಿಣೀಕೃತಾ ತೈಸ್ತು ಸಪ್ತದ್ವೀಪಾ ವಸುಂಧರಾ ॥ ೫೯ ॥

ಇತಿ ಶ್ರೀ ವಾಮನಪುರಾಣೇ ಸರೋಮಾಹಾತ್ಮ್ಯೇ
ಷಟ್‌ಚತ್ವಾರಿಂಶೋಽಧ್ಯಾಯಃ

ತಿಳಿದು ಶ್ರದ್ಧೆಯಿಂದ ಆ ಸ್ಥಾಣುಲಿಂಗವನ್ನು ಆಶ್ರಯಿಸಿದ್ದೇ ಆದರೆ ಅದರ ಅನುಗ್ರಹ ದಿಂದ ಇಷ್ಟಾರ್ಥವನ್ನು ಹೊಂದುತ್ತಾನೆ.

೫೫-೫೭. ನಿಷ್ಕಾಮನಾಗಿರಲಿ, ಸಕಾಮನಾಗಿರಲಿ, ಸ್ಥಾಣುಮಂದಿರಕ್ಕೆ ಪ್ರವೇಶ ಮಾಡಿದ್ದೇ ಆದರೆ ಅವನು ಘೋರವಾದ ಪಾಪಗಳಿಂದಲೂ ಮುಕ್ತನಾಗಿ ಪರಮಪದ ಗಾಮಿಯಾಗುತ್ತಾನೆ. ಚೈತ್ರಮಾಸದ ತ್ರಯೋದಶಿಯಲ್ಲಿ ದಿವ್ಯನಕ್ಷತ್ರಯೋಗವನ್ನು ಶುಕ್ರ ಸೂರ್ಯ ಚಂದ್ರ ಇವುಗಳ ಯೋಗವನ್ನೂ ಹೊಂದಿರುವ ಪುಣ್ಯಕರವಾದ ಶುಭ ದಿನದಲ್ಲಿ ಬ್ರಹ್ಮನು ಆ ಲಿಂಗವನ್ನು ಪ್ರತಿಷ್ಠೆಮಾಡಿರುವನು. ಅನಂತರ ಋಷಿಗಳಿಂದಲೂ ಅನೇಕ ದೇವತೆಗಳಿಂದಲೂ ಬಹಳ ವರ್ಷದಿಂದಲೂ ಪೂಜಿಸಲ್ಪಟ್ಟಿದೆ.

೫೮-೫೯. ಆ ಕಾಲದಲ್ಲಿ (ಅಂದರೆ ಚೈತ್ರ ತ್ರಯೋದಶಿಯಲ್ಲಿ) ಉಪವಾಸವ್ರತ ದಿಂದಿದ್ದು ಶ್ರದ್ಧೆಯಿಂದ ಆ ಶಿವನನ್ನು ಪೂಜಿಸುವವರು ಪರಮಪದವನ್ನು ಹೊಂದುತ್ತಾರೆ. ಅಲ್ಲಿ ಶಿವನು ಸನ್ನಿಹಿತನಾಗಿರುವನೆಂದು ತಿಳಿದು ಯಾರು ಪ್ರದಕ್ಷಿಣೆಮಾಡುತ್ತಾರೆಯೋ ಅವರು ಸಪ್ತದ್ವೀಪವುಳ್ಳ ಭೂಮಂಡಲವನ್ನೇ ಪ್ರದಕ್ಷಿಣೆಮಾಡಿದಂತೆ ಆಗುತ್ತದೆ.

ಇಲ್ಲಿಗೆ ಶ್ರೀ ವಾಮನಪುರಾಣದಲ್ಲಿ ಸರೋಮಾಹಾತ್ಮ್ಯವೆಂಬ ನಲವತ್ತಾರನೆಯ
ಅಧ್ಯಾಯವು ಮುಗಿದಿದೆ.

ಅಧ್ಯಾಯ ೪೬

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿಯೂ ಸ್ಥಾಣುವಟದಲ್ಲಿರುವ ತೀರ್ಥದ ಪ್ರಶಂಸೆಗಾಗಿ ಅಲ್ಲಿ ಪ್ರತಿಷ್ಠಿತವಾಗಿರುವ ಅನೇಕ ಲಿಂಗಗಳನ್ನೂ ಅವುಗಳ ಮಾಹಾತ್ಮ್ಯವನ್ನೂ ವಿಸ್ತರಿಸಲಾಗಿದೆ.

॥ ಶ್ರೀಃ ॥

ಶ್ರೀ ವಾ ಮ ನ ಪು ರಾ ಣಂ

ಸಪ್ತಚತ್ವಾರಿಂಶೋಽಧ್ಯಾಯಃ

ಮಾರ್ಕಂಡೇಯ ಉವಾಚ

ಸ್ಥಾಣುತೀರ್ಥಪ್ರಭಾವಂ ತು ಶ್ರೋತುಮಿಚ್ಛಾಮ್ಯಹಂ ಮುನೇ ।
ಕೇನ ಸಿದ್ಧಿರಿಹಪ್ರಾಪ್ತಾ ಸರ್ವಪಾಪಭಯಾಪಹಾ ॥ ೧ ॥

ಸನತ್ಕುಮಾರ ಉವಾಚ

ಶೃಣು ಸರ್ವಮಶೇಷೇಣ ಸ್ಥಾಣುಮಾಹಾತ್ಮ್ಯಮುತ್ತಮಂ ।
ಯಚ್ಛ್ರುತ್ವಾ ಸರ್ವಪಾಪೇಭ್ಯೋ ಮುಕ್ತೋ ಭವತಿ ಮಾನವಃ ॥ ೨ ॥

ಏಕಾರ್ಣವೇ ಜಗತ್ಯಸ್ಮಿನ್ ನಷ್ಟೇ ಸ್ಥಾವರಜಂಗಮೇ ।
ವಿಷ್ಣೋಃ ನಾಭಿಸಮುದ್ಭೂತಃ ಸರ್ವಲೋಕ ಪಿತಾಮಹಃ ॥ ೩ ॥

ತಸ್ಮಾನ್ಮರೀಚಿರಭವನ್ಮರೀಚೇಃ ಕಾಶ್ಯಪಸ್ಸುತಃ ।
ಕಶ್ಯಪಾದಭವದ್ಭಾಸ್ವಾನ್ ತಸ್ಮಾನ್ಮನುರಜಾಯತ ॥ ೪ ॥

ನಲವತ್ತೇಳನೆಯ ಅಧ್ಯಾಯವು

೧-೨. ಪುನಃ ಮಾರ್ಕಂಡೇಯರು ಈ ಸ್ಥಾಣುತೀರ್ಥವನ್ನು ಯಥಾವಿಧಿಯಾಗಿ ಸೇವಿಸಿ ಸಿದ್ಧಿಹೊಂದಿದವರಾರು. ಇದರ ಪ್ರಭಾವವನ್ನು ಕೇಳಲು ನನಗೆ ಇಚ್ಛೆಯುಂಟಾಗುತ್ತಿದೆ ಎಂದು ಪ್ರಶ್ನೆಮಾಡಲು ಸನತ್ಕುಮಾರರು ಯಾವ ಈ ತೀರ್ಥದ ಮಾಹಾತ್ಮ್ಯಶ್ರವಣದಿಂದಲೂ ಮಾನವನಿಗೆ ಸರ್ವಪಾಪಗಳಿಂದ ಮೋಕ್ಷವು ಲಭಿಸಬಹುದೋ ಅಂತಹ ಉತ್ತಮವಾದ ಈ ತೀರ್ಥದ ಮಾಹಾತ್ಮ್ಯವನ್ನು ಹೇಳುತ್ತೇನೆ ಕೇಳು ಎಂದು ಉಪಕ್ರಮಿಸುತ್ತಾರೆ.

೩-೬. ಮಹಾಪ್ರಲಯದಲ್ಲಿ ಜಗತ್ತೆಲ್ಲವೂ ಜಲಮಯವಾಗಿ ಸ್ಥಿರಚರಪದಾರ್ಥಗಳೆಲ್ಲವೂ ನಷ್ಟವಾದಾಗ ವಿಷ್ಣುವಿನ ನಾಭಿಕಮಲದಿಂದ ಲೋಕಸ್ರಷ್ಟೃವಾದ ಚತುರ್ಮುಖನು ಹುಟ್ಟಿದನು. ಅವನಿಂದ ಮರೀಚಿಯೂ, ಮರೀಚಿಯಿಂದ ಕಾಶ್ಯಪನೂ

ಮನೋಸ್ತ್ವಕ್ಷುವತಃ ಪುತ್ರ ಉತ್ಪನ್ನೋ ಮುಖಸಂಭವಃ ।
ಪೃಥಿವ್ಯಾಶ್ಚತುರಂತಾಯಾ ರಾಜಾ ಧರ್ಮಸ್ಯ ರಕ್ಷಿತಾ ॥ ೫ ॥

ತಸ್ಯ ಪತ್ನೀ ಬಭೂವಾಥ ಭಯಾ ನಾಮ ಭಯಾವಹಾ ।
ಮೃತ್ಯೋಸ್ಸಕಾಶಾದುತ್ಪನ್ನಾ ಕಾಲಸ್ಯ ದುಹಿತಾ ತದಾ ॥ ೬ ॥

ತಸ್ಯಾಂ ಸಮಭವದ್ವೇನೋ ದುರಾತ್ಮಾ ವೇದನಿಂದಕಃ ।
ಸ ದೃಷ್ಟ್ವಾ ಪುತ್ರವದನಂ ಕ್ಷುತೋರಾಜಾ ವನಂ ಯಯೌ ॥ ೭ ॥

ತತ್ರ ಕೃತ್ವಾ ತಪೋ ಘೋರಂ ಧರ್ಮೇಣಾವೃತ್ಯ ರೋದಸೀ ।
ಪ್ರಾಪ್ತವಾಂಸ್ತತ್ಪರಂ ಧಾಮ ಪುನರಾವೃತ್ತಿದುರ್ಲಭಂ ॥ ೮ ॥

ವೇನೋ ರಾಜಾ ಸಮಭವತ್ಸಮಸ್ತೇ ಕ್ಷಿತಿಮಂಡಲೇ ।
ಸ ಮಾತಾಮಹದೋಷೇಣ ವೇನಃ ಕಾಲಾತ್ಮಜಾತ್ಮಜಃ ॥ ೯ ॥

ಘೋಷಯಾಮಾಸ ನಗರೇ ದುರಾತ್ಮಾ ವೇದನಿಂದಕಃ ।
ನ ದಾತವ್ಯಂ ನ ಯಷ್ಟವ್ಯಂ ನ ಹೋತವ್ಯಂ ಕದಾಚನ ॥ ೧೦ ॥

ಹುಟ್ಟಿದರು. ಕಶ್ಯಪನಿಂದ ಸೂರ್ಯನೂ, ಸೂರ್ಯನಿಂದ ಮನುವೂ ಉದಯಿಸಿದರು. ಆ ಮನುವಿಗೆ ಶೀನುವ ಕಾಲದಲ್ಲಿ ಮುಖದಲ್ಲಿ ಒಬ್ಬ ಮಗನು ಹುಟ್ಟಿದನು. ಅವನೇ ಚತುಸ್ಸಾಗರಪರ್ಯಂತವಾದ ಭೂಮಿಗೆ ರಾಜನಾಗಿ ಧರ್ಮರಕ್ಷಕನಾದನು. ಅವನಿಗೆ ಭಯಾ ಎಂಬ ಒಬ್ಬ ಪತ್ನಿ ಇದ್ದಳು. ಅವಳು ಮೃತ್ಯುವಿನ ಸಂಬಂಧದಿಂದ ಯಮನಿಗೆ ಪುತ್ರಿಯಾಗಿ ಹುಟ್ಟಿದ್ದುದರಿಂದ ಭಯಂಕರಳಾಗಿಯೇ ಇದ್ದಳು.

೭-೧೦. ಆ ಭಯೆಯಲ್ಲಿ ವೇದನಿಂದಾಪರನೂ, ದುರಾಚಾರಶೀಲನೂ ಆದ ವೇನನು ಹುಟ್ಟಿದನು. ಮಗನ ಮುಖವನ್ನು ನೋಡಿ ಕೃತಕೃತ್ಯನಾದ ವೇನನ ತಂದೆಯಾದ ಕ್ಷುತನೆಂಬ ರಾಜನು ತಪಸ್ಸಿಗಾಗಿ ವನಕ್ಕೆ ತೆರಳಿದನು. ಅಲ್ಲಿ ಘೋರವಾದ ತಪಸ್ಸಿನಿಂದ ಭೂವ್ಯಂತರಿಕ್ಷಗಳನ್ನು ತಪಃಪುಣ್ಯದಿಂದ ಮುಳುಗಿಸಿ ಪುನರಾವೃತ್ತಿರಹಿತವಾದ ದಿವ್ಯಧಾಮವನ್ನು ಹೊಂದಿದನು. ಅನಂತರ ವೇನನೇ ಅಖಂಡ ಭೂಮಂಡಲಕ್ಕೂ ರಾಜನಾದನು. ಅವನು ಯಮನ ಮಮ್ಮಗನಾದುದರಿಂದ ಮಾತಾಮಹನ ದೋಷದಿಂದ ದೂಷಿತನಾಗಿ ವೇದವನ್ನೂ, ವೇದೋಕ್ತಕರ್ಮಗಳನ್ನೂ ನಿಂದಿಸಿ ತನ್ನ ನಗರದಲ್ಲಿರುವ ಎಲ್ಲಾ ಪ್ರಜೆಗಳನ್ನೂ ಉದ್ದೇಶಿಸಿ ಈ ರೀತಿ

ಅಹಮೇಕೋತ್ರ ವೈ ವಂದ್ಯಃ ಪೂಜ್ಯೋಽಹಂ ಭವತಾಂ ಸದಾ।
ಮಯಾ ಹಿ ಪಾಲಿತಾ ಯೂಯಂ ನಿವಸಧ್ವಂ ಯಥಾಸುಖಂ ॥೧೧॥

ತನ್ಮತ್ತೋಽನ್ಯೋ ನ ದೇವೋಽಸ್ತಿ ಯುಷ್ಮಾಕಂ ಯತ್ಪರಾಯಣಂ।
ಏತಚ್ಛ್ರುತ್ವಾ ತು ವಚನಂ ಋಷಯಃ ಸರ್ವ ಏವ ತೇ ॥೧೨॥

ಪರಸ್ಪರಂ ಸಮಾಗಮ್ಯ ರಾಜಾನಂ ವಾಕ್ಯಮಬ್ರುವನ್।
ಶ್ರುತಿಃ ಪ್ರಮಾಣಂ ಧರ್ಮಸ್ಯ ತತೋ ಯಜ್ಞಃ ಪ್ರತಿಷ್ಠಿತಃ ॥೧೩॥

ಯಜ್ಞೈರ್ವಿನಾ ನೋ ಪ್ರೀಯಂತೇ ದೇವಾಃ ಸ್ವರ್ಗನಿವಾಸಿನಃ।
ಅಪ್ರೀತಾ ನ ಪ್ರಯಚ್ಛಂತಿ ಸಸ್ಯಸ್ಯ ಚ ವಿವೃದ್ಧಯೇ ॥೧೪॥

ತಸ್ಮಾದ್ಯಜ್ಞೈಶ್ಚ ದೇವೈಶ್ಚ ಧಾರ್ಯತೇ ಸ ಚರಾಚರಂ।
ಏತಚ್ಛ್ರುತ್ವಾ ಕ್ರೋಧದೃಷ್ಟಿಃ ವೇನಃ ಪ್ರಾಹ ಪುನಃ ಪುನಃ ॥೧೫॥

ಘೋಷಣೆ (ಡಂಗೂರ) ಹೊರಡಿಸಿದನು. ಯಾರೂ ಯಾವಾಗಲೂ ಯಾಗ, ದಾನ, ಹೋಮಗಳೆಂಬ ವೇದೋಕ್ತವಿಧಿಗಳನ್ನು ನಡೆಸಕೂಡದು. ಪೂಜ್ಯನಾದ ನನ್ನನ್ನೇ ಎಲ್ಲರೂ ಯಾವಾಗಲೂ ಪೂಜಿಸಬೇಕು. ನನಗಿಂತಲೂ ಪೂಜ್ಯವಾದ ವಸ್ತುವು ಬೇರೊಂದಿಲ್ಲ.

೧೧-೧೫. ನನ್ನಿಂದಲೇ ರಕ್ಷಿಸಲ್ಪಡುತ್ತಿರುವ ನೀವು ಸುಖಿಗಳಾಗಿ ವಾಸಿಸುತ್ತಿದ್ದೀರಿ. ಆದುದರಿಂದ ನನಗಿಂತ ಬೇರೆಯಾದ ಯಾವ ದೇವತೆಯೂ ನಿಮಗೆ ಇಲ್ಲ. ಈ ಪ್ರಕಾರವಾದ ವೇನನ ಮಾತನ್ನು ಕೇಳಿ ಋಷಿಗಳೆಲ್ಲರೂ ಪರಸ್ಪರ ಸೇರಿ ದೊರೆಯಾದ ವೇನನನ್ನು ಕುರಿತು ಹೀಗೆ ಹೇಳಿದರು. ಯಜ್ಞಯಾಗಾದಿ ಧರ್ಮಗಳು ವೇದವಿಹಿತವಾದುದರಿಂದ ಅದರ ಕರ್ತವ್ಯತೆಯ ವಿಷಯದಲ್ಲಿ ವೇದವೇ ಮುಖ್ಯವಾದ ಪ್ರಮಾಣ. ಆದುದರಿಂದಲೇ ಆ ಧರ್ಮವು ಗೌರವಿಸಲ್ಪಡುತ್ತದೆ. ಯಜ್ಞಗಳನ್ನು ಬಿಟ್ಟಲ್ಲಿ ಸ್ವರ್ಗವಾಸಿಗಳಾದ ದೇವತೆಗಳಿಗೆ ಪ್ರೀತಿಯನ್ನುಂಟುಮಾಡುವ ಸಾಧನವು ಮತ್ತೊಂದಿಲ್ಲ. ಅವರು ಪ್ರೀತಿಹೊಂದದೆ ಇದ್ದಲ್ಲಿ ಸಸ್ಯಗಳ ಅಭಿವೃದ್ಧಿಗೆ ಬೇಕಾಗುವ ಮಳೆಯನ್ನು ಅವರು ಉಂಟುಮಾಡುವದಿಲ್ಲ. ಆದುದರಿಂದ ಯಜ್ಞಗಳೂ, ಅವುಗಳಿಂದ ತೃಪ್ತರಾಗುವ ದೇವತೆಗಳೂ ಪ್ರಪಂಚದ ಸ್ಥಿತಿಗೆ ಮುಖ್ಯಕಾರಣವಾಗಿರುತ್ತಾರೆ. ಆದುದರಿಂದ ಯಜ್ಞಾದಿಧರ್ಮಗಳನ್ನು ನಿರಾಕರಿಸುವುದು ಪ್ರಪಂಚಕ್ಕೆ ಕ್ಷೇಮಕರವಲ್ಲ. ಈ ಮಾತನ್ನು ಕೇಳಿದ ವೇನನು ಬಹಳ ಕೋಪದಿಂದ ಪುನಃ

ನ ಯಷ್ಟವ್ಯಂ ನ ದಾತವ್ಯಮಿತ್ಯಾಹ ಕ್ರೋಧಮೂರ್ಛಿತಃ ।
ತತಃ ಕ್ರೋಧಸಮಾವಿಷ್ಟಾ ಋಷಯಃ ಸರ್ವ ಏವ ತೇ ॥ ೧೬ ॥

ನಿರ್ಜಘ್ನುಃ ಮಂತ್ರಪೂತೈಸ್ತೈ ಕುಶೈರ್ವಜ್ರಸಮನ್ವಿತೈಃ ।
ತತಸ್ತ್ವರಾಜಕೆ ಲೋಕೆ ತಮಸಾ ಸಂವೃತೆ ತದಾ ॥ ೧೭ ॥

ದಸ್ಯುಭಿಃ ಪೀಡ್ಯಮಾನಾಸ್ತಾನೃಷೀಂಸ್ತೇ ಶರಣಂ ಯಯುಃ ।
ತತಸ್ತೇ ಋಷಯಸ್ಸರ್ವೇ ಮಮಂಥುಸ್ತಸ್ಯ ವೈ ಕರಂ ॥ ೧೮ ॥

ಸವ್ಯಂ ತಸ್ಮಾತ್ಸಮುತ್ತಸ್ಥೌ ಪುರುಷೋ ಹ್ರಸ್ವದರ್ಶನಃ ।
ತಮೂಚೂಋಷಯಸ್ಸರ್ವೆ ನಿಷೀದತು ಭವಾನಿತಿ ॥ ೧೯ ॥

ತಸ್ಮಾನ್ನಿಷಾದಾ ಉತ್ಪನ್ನಾ ವೇನ ಕಲ್ಮಷ ಸಂಭವಾಃ ।
ತತಸ್ತೇ ಋಷಯಸ್ಸರ್ವೆ ಮಮಂಥುರ್ದಕ್ಷಿಣಂ ಕರಂ ॥ ೨೦ ॥

ಮಥ್ಯಮಾನೆ ಕರೆ ತಸ್ಮಿನ್ನುತ್ಪನ್ನಃ ಪುರುಷೋಽಪರಃ ।
ಬೃಹಚ್ಛೈಲಪ್ರತೀಕಾಶೋ ದಿವ್ಯಲಕ್ಷಣಲಕ್ಷಿತಃ ॥ ೨೧ ॥

೧೬-೨೦. ಯಾಗವನ್ನೂ, ದಾನವನ್ನೂ ಮಾಡಕೂಡದೆಂದೇ ಹೇಳಿದನು. ಆಗ ಋಷಿಗಳೆಲ್ಲರೂ ಬಹಳ ಕೋಪಾಕ್ರಾಂತರಾಗಿ ಅಭಿಮಂತ್ರಿತವಾದ ದರ್ಭೆಗಳನ್ನೇ ವಜ್ರಾಯುಧವನ್ನಾಗಿ ಮಾಡಿಕೊಂಡು ಆ ದರ್ಭೆಗಳಿಂದಲೇ ವೇನನನ್ನು ಹೊಡೆದು ಕೊಂದರು. ಆಗ ಲೋಕವೆಲ್ಲವೂ ಅರಾಜಕವಾಗಿ ಅಂಧಕಾರಮಯವಾಗಲು ಕಳ್ಳಕಾಕರುಗಳಿಂದ ಪೀಡಿಸಲ್ಪಟ್ಟ ಪ್ರಜೆಗಳು ಆ ಋಷಿಗಳಲ್ಲೇ ಶರಣಾಗತರಾದರು. ಅನಂತರ ಆ ಋಷಿಗಳೆಲ್ಲರೂ ಒಂದಾಗಿ ಆಲೋಚಿಸಿ ಆ ವೇನನ ಎಡತೋಳನ್ನು ಕಡೆದರು. ಆ ತೋಳಿನಿಂದ ಕುಳ್ಳಾದ ಒಬ್ಬ ಮನುಷ್ಯನು ಹೊರಗೆಬಂದನು. ಋಷಿಗಳು ಅವನನ್ನು ನೋಡಿ (ನಿಷೀದತು.) ಕುಳಿತುಕೋ ಎಂದರು. ಅವನಿಂದ ವೇನನ ದೋಷದಿಂದ ಉಂಟಾದ ನಿಷಾದಜಾತಿಯವರು ಪ್ರಕಾಶಹೊಂದಿದರು.

೨೧-೨೪. ಅನಂತರ ಆ ಋಷಿಗಳು ವೇನನ ಬಲಗೈಯ್ಯನ್ನು ಕಡೆದರು. ಆ ಕೈಯಿನಿಂದ ಮತ್ತೊಬ್ಬ ಪುರುಷನು ಉದಯಿಸಿದನು. ಅವನು ಪರ್ವತದಂತೆ ಎತ್ತರವಾಗಿಯೂ, ರಾಜಲಕ್ಷಣದಿಂದ ಕೂಡಿಯೂ ಇದ್ದು ಕೈಯ್ಯಿನಲ್ಲಿ ಧನುರ್ಬಾಣಗಳನ್ನೂ, ಚಕ್ರಧ್ವಜವೊದಲಾದ ರಾಜಚಿಹ್ನೆಯನ್ನು ಧರಿಸಿದ್ದನು. ಅವನನ್ನು

ಧನುರ್ಬಾಣಾಂಕಿತಕರಃ ಚಕ್ರಧ್ವಜಸಮನ್ವಿತಃ ।
ತಮುತ್ಪನ್ನಂ ತದಾ ದೃಷ್ಟ್ವಾ ಸರ್ವೇ ದೇವಾಸ್ಸವಾಸವಾಃ ॥ ೨೨ ॥

ಅಭ್ಯಷಿಂಚನ್ ಪೃಥಿವ್ಯಾಂ ತಂ ರಾಜಾನಂ ಭೂಮಿಪಾಲಕಂ ।
ತತಸ್ಸರಂಜಯಾಮಾಸ ಧರ್ಮೇಣ ಪೃಥಿವೀಂ ತದಾ ॥ ೨೩ ॥

ಪಿತ್ರಾ ವಿರಂಜಿತಾ ತಸ್ಯ ತೇನ ಸಾ ಪರಿಪಾಲಿತಾ ।
ತತೋ ರಾಜೇತಿ ಶಬ್ದೋಽಸ್ಯ ಪೃಥಿವ್ಯಾರಂಜನಾದಭೂತ್ ॥ ೨೪ ॥

ಸರಾಜ್ಯಂ ಪ್ರಾಪ್ಯ ವೈನ್ಯಸ್ತು ಚಿಂತಯಾಮಾಸ ಪಾರ್ಥಿವಃ ।
ಪಿತಾ ಮಮ ಅಧರ್ಮಿಷ್ಠೋ ಯಜ್ಞವಿಚ್ಛಿತ್ತಿಕಾರಕಃ ॥ ೨೫ ॥

ಕಥಂ ತಸ್ಯ ಕ್ರಿಯಾ ಕಾರ್ಯಾ ಪರಲೋಕಸುಖಾವಹಾ ।
ಇತ್ಯೇವಂ ಚಿಂತಯಾನಸ್ಯ ನಾರದೋಭ್ಯಾಜಗಾಮ ಹ ॥ ೨೬ ॥

ನೋಡಿ ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ಇವನೇ ಧೊರೆಯಾಗಿರಲು ಅರ್ಹನೆಂದು ತಿಳಿದು ಅವನನ್ನು ಭೂಮಂಡಲದ ಧೊರೆಯನ್ನಾಗಿಮಾಡಿ ಪಟ್ಟಾಭಿಷೇಕ ಮಾಡಿದರು. ಆ ಧೊರೆಯು ಧರ್ಮದೃಷ್ಟಿಯಿಂದ ಭೂಮಂಡಲವನ್ನೆಲ್ಲಾ ಸಂತೋಷಪಡಿಸಿದನು. ತಂದೆಯಾದ ವೇನನಿಂದ ವಿರಕ್ತಿಗೊಂಡಿದ್ದ ಪೃಥಿವೀಮಂಡಲವು ಈ ಧೊರೆಯಿಂದ ಪ್ರೀತಿಪೂರ್ವಕವಾಗಿ ಪರಿಪಾಲಿಸಲ್ಪಟ್ಟಿತು. ಈ ರೀತಿಯಾದ ಪೃಥಿವೀರಂಜನದಿಂದ ರಾಜಶಬ್ದವು ಈ ಧೊರೆಯಲ್ಲಿ ಅನ್ವರ್ಥವಾಯಿತು.

೨೫-೨೮. ಆ ವೈನ್ಯನು ರಾಜನಾದಮೇಲೆ ಅವನ ಮನಸ್ಸಿನಲ್ಲಿ ಈ ಆಲೋಚನೆಯೊಂದು ತಲೆದೋರಿತು. ನನ್ನ ತಂದೆಯು ಯಜ್ಞಾದಿಕಂಟಕನಾಗಿ ಅಧರ್ಮದಿಂದಿದ್ದು ಮೃತನಾದನು. ಅವನಿಗೆ ಪರಲೋಕದಲ್ಲಿಯಾದರೂ ಸುಖವುಂಟಾಗುವಂತೆ ಯಾವ ರೀತಿಯಲ್ಲಿ ಕ್ರಿಯೆಯನ್ನು ನಡೆಸಬೇಕು. ಹೀಗೆ ಆ ಧೊರೆಯು ಆಲೋಚಿಸುತ್ತಿರುವಾಗಲೇ ನಾರದಮಹರ್ಷಿಗಳು ಅಲ್ಲಿಗೇ ಬಂದರು. ಅವರನ್ನು ಆಸನಾದಿಗಳಿಂದ ಸತ್ಕರಿಸಿ ನಮಸ್ಕರಿಸಿ ಆ ಧೊರೆಯು ಹೀಗೆ ಹೇಳುತ್ತಾನೆ. ಎಲೈ ಪೂಜ್ಯನೇ, ಎಲ್ಲಾ ಜನಗಳ ಶುಭಾಶುಭಕರ್ಮಗಳನ್ನೂ ನೀನು ಯೋಗದೃಷ್ಟಿಯಿಂದ ತಿಳಿಯಬಲ್ಲೆ. ನನ್ನ ತಂದೆಯು ದುರಾಚಾರನಾಗಿ ದೇವಬ್ರಾಹ್ಮಣನಿಂದಕನಾಗಿದ್ದು ಸ್ವಧರ್ಮದಿಂದ ಭ್ರಷ್ಟನಾಗಿ ಪರಲೋಕವನ್ನು ಹೊಂದಿದನು

ತಸ್ಮೈ ಸಚಾಸನಂ ದತ್ವಾ ಪ್ರಣಿಪತ್ಯ ಚ ಪೃಷ್ಟವಾನ್ ।
ಭಗವನ್ ಸರ್ವಲೋಕಸ್ಯ ಜಾನಾಸಿ ತ್ವಂ ಶುಭಾಶುಭಂ ॥ ೨೭ ॥

ಪಿತಾ ಮಮ ದುರಾಚಾರೋ ದೇವಬ್ರಾಹ್ಮಣನಿಂದಕಃ ।
ಸ್ವಧರ್ಮರಹಿತೋ ವಿಪ್ರ ಪರಲೋಕಮವಾಪ್ತವಾನ್ ॥ ೨೮ ॥

ತತೋ ಬ್ರವೀನ್ನಾರದಸ್ತಂ ಜ್ಞಾತ್ವಾ ದಿವ್ಯೇನ ಚಕ್ಷುಷಾ ।
ಮ್ಲೇಚ್ಛಮಧ್ಯೇ ಸಮುತ್ಪನ್ನಃ ಕ್ಷಯಕುಷ್ಠಸಮನ್ವಿತಃ ॥ ೨೯ ॥

ತಚ್ಛ್ರುತ್ವಾ ವಚನಂ ತಸ್ಯ ನಾರದಸ್ಯ ಮಹಾತ್ಮನಃ ।
ಚಿಂತಯಾಮಾಸ ದುಃಖಾರ್ತಃ ಕಥಂ ಕಾರ್ಯಂ ಮಯಾ ಭವೇತ್ ॥ ೩೦ ॥

ಇತ್ಯೇವಂ ಚಿಂತಯಾನಸ್ಯ ಮತಿರ್ಜಾತಾ ಮಹಾತ್ಮನಃ ।
ಪುತ್ರಃ ಸ ಕಥ್ಯತೆ ಲೋಕೆ ಯಃ ಪಿತೄನ್ ತ್ರಾಯತೆ ಭಯಾತ್ ।
ಏವಂ ಸಂಚಿಂತ್ಯ ಸ ತದಾ ನಾರದಂ ಪೃಷ್ಟವಾನ್ಮುನಿಂ ॥ ೩೧ ॥

ನಾರದ ಉವಾಚ

ಗಚ್ಛ ತ್ವಂ ತಸ್ಯ ತಂ ದೇಹಂ ತೀರ್ಥೇಷು ಕುರು ನಿರ್ಮಲಂ ।
ಯತ್ರ ಸ್ನಾತೋ ಮಹತ್ತೀರ್ಥಂ ಸರಸ್ಸನ್ನಿಹಿತಂ ಪ್ರತಿ ॥ ೩೨ ॥

೨೯-೩೧. ಅನಂತರ ನಾರದರು ದಿವ್ಯದೃಷ್ಟಿಯಿಂದ ನಿರೀಕ್ಷಿಸಿ ಆ ನಿನ್ನ ತಂದೆಯು ಮ್ಲೇಚ್ಛರ ಮಧ್ಯದಲ್ಲಿ ಜನಿಸಿ ಕ್ಷಯಕುಷ್ಠರೋಗಗಳಿಂದ ನರಳುತ್ತಿದ್ದಾನೆ ಎಂದು ಉತ್ತರಕೊಟ್ಟರು. ಆ ನಾರದರ ಮಾತನ್ನು ಕೇಳಿ ಬಹಳ ದುಃಖಾರ್ತನಾಗಿ ಆ ಧೊರೆಯು ಈಗ ನಾನು ಏನುಮಾಡುವದುಚಿತವೆಂದು ಆಲೋಚಿಸಿದನು. ಹೀಗೆ ಆಲೋಚನಾಪರನಾದ ಆ ಮಹಾತ್ಮನಿಗೆ ಯಾವನು ಪಿತೃಗಳಿಗುಂಟಾದ ಭಯವನ್ನು ಹೋಗಲಾಡಿಸಿ ಅವರನ್ನು ರಕ್ಷಿಸುತ್ತಾನೆಯೋ ಅವನೇ ಲೋಕದಲ್ಲಿ ಪುತ್ರನೆನಿಸಿ ಕೊಳ್ಳುತ್ತಾನೆ. ಆದುದರಿಂದ ಪುತ್ರನಾದ ನಾನು ತಂದೆಯನ್ನು ರಕ್ಷಿಸುವದು ಮೊದಲನೇ ಕರ್ತವ್ಯವೆಂಬ ಮಹಾವಿವೇಕವು ಆಗ ಉಂಟಾಯಿತು. ಹೀಗೆ ಆಲೋಚಿಸಿ ನಾರದರನ್ನು ಪುನಃ ಪ್ರಶ್ನೆಮಾಡಿದನು.

೩೨-೩೪. ಆಗ ನಾರದರು ಹಾಗಾದರೆ ನೀನು ಈಗಲೇ ಹೊರಡು. ನಿನ್ನ ತಂದೆಯ ಆ ದೇಹವನ್ನು ತೀರ್ಥಗಳಿಂದ ಪರಿಶುದ್ಧಗೊಳಿಸು. ಸರಸ್ಸಿಗೆ ಸಮೀಪ ದಲ್ಲಿರುವ ಮಹಾತೀರ್ಥಗಳಲ್ಲಿ ಸ್ನಾನಮಾಡಿಸು ಎಂದರು. ನಾರದರ ಈ ಮಾತನ್ನು

ಏತಚ್ಛ್ರುತ್ವಾ ತು ವಚನಂ ನಾರದಸ್ಯ ಮಹಾತ್ಮನಃ ।
ಚಿಂತಯಾಮಾಸ ತಂ ದೇಶಂ ರಾಜಾ ಸ ಚ ಜಗಾಮ ಹ ॥ ೩೩ ॥

ಸ ಗತ್ವಾ ಉತ್ತರಂ ದೇಶಂ ಮ್ಲೇಚ್ಛಮಧ್ಯೇ ದದರ್ಶ ಹ ।
ಕುಷ್ಠರೋಗೇಣ ತಂ ವೀಕ್ಷ್ಯ ಕ್ಷಯೇಣ ಚ ಸಮನ್ವಿತಮ್ ॥ ೩೪ ॥

ತತಃ ಶೋಕೇನ ಮಹತಾ ಸಂತಪ್ತೋ ವಾಕ್ಯಮಬ್ರವೀತ್ ।
ಹಾ ಮ್ಲೇಚ್ಛಾ ನೌಮಿ ಪುರುಷಂ ಸ್ವಗೃಹಂ ಚ ನಯಾಮ್ಯಹಂ ॥ ೩೫ ॥

ತತ್ರಾಹ ಮೇನಂ ನಿರುಜಂ ಕರಿಷ್ಯೇ ಯದಿ ಮನ್ಯಥ ।
ತಥೇತಿ ಸರ್ವತೋ ಮ್ಲೇಚ್ಛಾಃ ಪುರುಷಂ ತಂ ದಯಾಪರಂ ॥ ೩೬ ॥

ಊಚುಃ ಪ್ರಣತಸರ್ವಾಂಗಾಃ ಯಥಾ ಜಾನಾಸಿ ತತ್ಕುರು ।
ತತ ಆನೀಯ ಪುರುಷಾನ್ ಶಿಬಿಕಾವಾಹನೋಚಿತಾನ್ ॥ ೩೭ ॥

ದತ್ವಾ ಶುಲ್ಕಂ ಚ ದ್ವಿಗುಣಂ ಸುಖೇನಾನಿಯತಾಂ ದ್ವಿಜ ।
ತತಃ ಶ್ರುತ್ವಾ ತು ವಚನಂ ತಸ್ಯ ರಾಜ್ಞೋ ದಯಾವತಃ ॥ ೩೮ ॥

ಕೇಳಿ ದೊರೆಯು ಮ್ಲೇಚ್ಛಜನ್ಮವನ್ನು ಹೊಂದಿ ತಂದೆಯು ಯಾವ ದೇಶದಲ್ಲಿರುತ್ತಾನೆಂಬುದನ್ನು ಆಲೋಚಿಸಿ ತಾನೇ ಅಲ್ಲಿಗೆ ಹೊರಟನು. ಆ ದೊರೆಯು ಉತ್ತರ ದೇಶಕ್ಕೆ ಹೋಗಿ ಅಲ್ಲಿ ಮ್ಲೇಚ್ಛರ ಮಧ್ಯದಲ್ಲಿ ಕುಷ್ಠರೋಗದಿಂದಲೂ ಕ್ಷಯದಿಂದಲೂ ಕೂಡಿ ದುಃಖಪಡುತ್ತಿರುವ ಮನುಷ್ಯನೊಬ್ಬನನ್ನು ಕಂಡನು. ಅಲ್ಲಿ ಬಹಳ ದುಃಖದಿಂದ ಸಂತಾಪಗೊಂಡ ಆ ದೊರೆಯು ಆ ಮ್ಲೇಚ್ಛರನ್ನು ಕುರಿತು ಹೀಗೆ ಹೇಳಿದನು. ಎಲೈ ಮ್ಲೇಚ್ಛರೇ, ಈ ಮನುಷ್ಯನಿಗೆ ನಮಸ್ಕಾರಮಾಡಿ ಇವನನ್ನು ನನ್ನ ಮನೆಗೆ ಕರೆದುಕೊಂಡುಹೋಗುತ್ತೇನೆ.

೩೫-೩೮. ನೀವು ಒಪ್ಪಿ ಕಳುಹಿಸಿಕೊಡುವುದಾದರೆ ಇವನ ಈ ರೋಗವನ್ನು ಮನೆಯಲ್ಲಿಯೇ ವಾಸಿಮಾಡುತ್ತೇನೆ. ಈ ಮಾತನ್ನು ಕೇಳಿ ಆ ಮ್ಲೇಚ್ಛರು ರಾಜನ ದಯೆಯನ್ನು ನೋಡಿ ಹಾಗೇ ಆಗಲೆಂದು ಒಪ್ಪಿ ದೊರೆಗೆ ನಮಸ್ಕರಿಸಿ ನಿನಗೆ ತಿಳಿದಂತೆ ನಡೆಸಬಹುದೆಂದು ಅನುಮತಿಯನ್ನು ಕೊಟ್ಟರು. ಆಗ ಪಲ್ಲಕ್ಕಿಯನ್ನು ಹೊರಲು ಅರ್ಹರಾದ ವಾಹಕರನ್ನು ಕರೆಸಿ ಅವರಿಗೆ ದ್ವಿಗುಣವಾದ ವೇತನವನ್ನು ಕೊಟ್ಟು ಸುಖದಿಂದ ಪಲ್ಲಕ್ಕಿಯಲ್ಲಿ ಕರೆದುಕೊಂಡು ಬನ್ನಿರಿ ಎಂದು ಅಪ್ಪಣೆಮಾಡಿ

ಗೃಹೀತ್ವಾ ಶಿಬಿಕಾಂ ಕ್ಷಿಪ್ರಂ ಕುರುಕ್ಷೇತ್ರೇಣ ಯಾಂತಿ ತೆ ।
ತತ್ರ ನೀತ್ವಾ ಸ್ಥಾಣುತೀರ್ಥಮವತೀರ್ಯ ತತೋ ಗತಾಃ ॥ ೩೯ ॥

ತತಃ ಸ ರಾಜಾ ಮಧ್ಯಾಹ್ನೆ ತಂ ಸ್ನಾಪಯಿತುಮುದ್ಯತಃ ।
ತತೋ ವಾಯುರಂತರಿಕ್ಷೆ ಇದಂ ವಚನಮಬ್ರವೀತ್ ॥ ೪೦ ॥

ಮಾ ತಾತ ಸಾಹಸಂ ಕಾರ್ಷೀಸ್ತೀರ್ಥಂ ರಕ್ಷ ಪ್ರಯತ್ನತಃ ।
ಅಯಂ ಪಾಪೇನ ಘೋರೇಣ ಅತೀವ ಪರಿವೇಷ್ಟಿತಃ ॥ ೪೧ ॥

ವೇದನಿಂದಾ ಮಹತ್ಪಾಪಂ ತಸ್ಯಾಂತೋ ನೈವ ಲಭ್ಯತೆ ।
ಸೋಽಯಂ ಸ್ನಾತೋ ಮಹತ್ತೀರ್ಥಂ ನಾಶಯಿಷ್ಯತಿ ತತ್ಕ್ಷಣಾತ್ ॥ ೪೨ ॥

ಏತದ್ವಾಯೋರ್ವಚಃ ಶ್ರುತ್ವಾ ದುಃಖೇನ ಮಹತಾನ್ವಿತಃ ।
ಉವಾಚ ಶೋಕಸಂತಪ್ತಸ್ತಸ್ಯ ದುಃಖೇನ ದುಃಖಿತಃ ।
ಏಷ ಘೋರೇಣ ಪಾಪೇನಹ್ಯತೀವ ಪರಿವೇಷ್ಟಿತಃ ॥ ೪೩ ॥

ದನು. ದಯಾಶಾಲಿಯಾದ ರಾಜನ ಆ ಮಾತನ್ನು ಕೇಳಿ ಮ್ಲೇಚ್ಛರು ಅದಕ್ಕೆ ಒಪ್ಪಿ ಆ ಪುರುಷನನ್ನು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಕುರುಕ್ಷೇತ್ರದ ಮಾರ್ಗದಿಂದ ಹೊರಟು ಸ್ಥಾಣುತೀರ್ಥವನ್ನು ಸೇರಿಸಿ ಅಲ್ಲಿ ಅವನನ್ನು ಇಳಿಸಿ ಹೊರಟುಹೋದರು.

೪೦-೪೨. ಅನಂತರ ಧೊರೆಯು ಮಧ್ಯಾಹ್ನಸಮಯದಲ್ಲಿ ರೋಗಪೀಡಿತನಾಗಿದ್ದ ಆ ಪುರುಷನನ್ನು ಸ್ಥಾಣುತೀರ್ಥದಲ್ಲಿ ಸ್ನಾನಮಾಡಿಸಲು ಪ್ರಯತ್ನಪಟ್ಟನು. ಆಗ ವಾಯುವು ಅಂತರಿಕ್ಷದಲ್ಲೇ ನಿಂತು ಹೀಗೆ ಹೇಳಿದನು. ಅಪ್ಪಾ ಸಾಹಸಮಾಡಬೇಡ. ಈ ತೀರ್ಥವನ್ನು ಪ್ರಯತ್ನದಿಂದ ರಕ್ಷಿಸಬೇಕು. ಇವನು ಘೋರವಾದ ಪಾಪದಿಂದ ಸುತ್ತುವರಿಯಲ್ಪಟ್ಟಿದ್ದಾನೆ. ವೇದನಿಂದೆಯು ಮಹಾಪಾಪಕ್ಕೆ ಸೇರಿದುದು. ಅದಕ್ಕೆ ನಾಶವೇ ಇಲ್ಲ. ಇವನು ಇಲ್ಲಿ ಸ್ನಾನಮಾಡಿದೇ ಆದರೆ ಈ ತೀರ್ಥವೇ ಕ್ಷಣದಲ್ಲಿ ನಾಶವಾದೀತು.

೪೩-೪೫. ಈ ಪ್ರಕಾರ ವಾಯುವಿನಿಂದ ತಡೆಯಲ್ಪಟ್ಟ ಆ ಧೊರೆಯು ಬಹಳ ದುಃಖಗೊಂಡು ಆ ರೋಗಿಯ ದುಃಖದಿಂದಲೂ ಇಮ್ಮಡಿಯಾದ ದುಃಖಭಾರದಿಂದ ಸಂತಪಿಸಿ ಹೀಗೆ ಹೇಳಿದನು. ಇವನು ಘೋರವಾದ ಪಾಪದಿಂದ ಸುತ್ತಲ್ಪಟ್ಟಿರುವದು

ಪ್ರಾಯಶ್ಚಿತ್ತಂ ಕರಿಷ್ಯೇಽಹಂ ಯದ್ವದಿಷ್ಯಂತಿ ದೇವತಾಃ ।
ತತಸ್ತಾ ದೇವತಾ ಸ್ಸರ್ವಾ ಇದಂ ವಚನಮಬ್ರುವನ್ ॥ ೪೪ ॥

ಸ್ನಾತ್ವಾ ಸ್ನಾತ್ವಾ ಚ ತೀರ್ಥೇ ತ್ವಮಭಿಷಿಂಚಸ್ವ ವಾರಿಣಾ ।
ಆಗಸೋ ಲುಂಪನಂ ಯಾವತ್ಪ್ರತಿಕೂಲಾಂ ಸರಸ್ವತೀಂ ॥ ೪೫ ॥

ಸ್ನಾತ್ವಾ ಮುಕ್ತಿಮವಾಪ್ನೋತಿ ಪುರುಷಃ ಶ್ರದ್ಧಯಾನ್ವಿತಃ ।
ಏಷಸ್ವಪೋಷಣಪರೋ ದೇವದೂಷಣತತ್ಪರಃ ॥ ೪೬ ॥

ಬ್ರಾಹ್ಮಣೈಶ್ಚ ಪರಿತ್ಯಕ್ತೋ ನೈಷ ಶುಧ್ಯತಿ ಕರ್ಹಿಚಿತ್ ।
ತಸ್ಮಾದೇನಂ ಸಮುದ್ದಿಶ್ಯ ಸ್ನಾತ್ವಾ ತೀರ್ಥೇಷು ಭಕ್ತಿತಃ ॥ ೪೭ ॥

ಅಭಿಷಿಂಚಸ್ವ ತೋಯೇನ ತತಃ ಪೂತೋ ಭವಿಷ್ಯತಿ ।
ಇತ್ಯೇತದ್ವಚನಂ ಶ್ರುತ್ವಾ ಕೃತ್ವಾ ತಸ್ಯಾಶ್ರಮಂ ತತಃ ॥ ೪೮ ॥

ತೀರ್ಥಯಾತ್ರಾಂ ಯಯೌ ರಾಜಾ ಉದ್ದಿಶ್ಯ ಜನಕಂ ಸ್ವಕಂ ।
ಸತೇಷ್ವಾಪ್ಲವನಂ ಕುರ್ವಂ ಸ್ತೀರ್ಥೇಷು ಚ ದಿನೇ ದಿನೇ ॥ ೪೯ ॥

ನಿಜ. ಈ ಪಾಪಕ್ಕೆ ಪ್ರಾಯಶ್ಚಿತ್ತವನ್ನು ನಾನು ಮಾಡುತ್ತೇನೆ. ದೇವತೆಗಳು ಹೇಳು ವಂತೆಯೇ ಅದನ್ನು ನಡೆಸುತ್ತೇನೆ ಎಂದನು. ಆಗ ಆ ದೇವತೆಗಳೆಲ್ಲರೂ ನೀನು ನಿತ್ಯವೂ ಸ್ನಾನಮಾಡಿ ತೀರ್ಥೋದಕದಿಂದ ಇವನನ್ನು ಪ್ರೋಕ್ಷಿಸಿ ಸ್ನಾನಮಾಡಿಸು. ಇವನ ಪಾಪವೆಲ್ಲವೂ ನಾಶವಾಗುವವರಿಗೂ ಸರಸ್ವತಿಯು ಪ್ರತಿಕೂಲಳಾಗಿರುತ್ತಾಳೆ.

೪೬-೪೯. ನಿನ್ನ ಪ್ರೋಕ್ಷಣತೀರ್ಥದಲ್ಲಿ ಶ್ರದ್ಧೆಯಿಂದ ಸ್ನಾನಮಾಡಿದರೂ ಇವನು ಪಾಪದಿಂದ ಮುಕ್ತನಾಗುತ್ತಾನೆ. ಇವನು ಸ್ವಪೋಷಣದಲ್ಲಿ ಆಸಕ್ತನಾಗಿ ದೇವತೆಗಳನ್ನೂ ನಿಂದಿಸಿದವನು ಬ್ರಾಹ್ಮಣರೂ ಇವನನ್ನು ಕೈಬಿಟ್ಟಿರುತ್ತಾರೆ. ಇವನು ಯಾವುದರಿಂದಲೂ ತಾನಾಗಿ ಶುದ್ಧಿಹೊಂದುವ ಸಂಭವವಿಲ್ಲ. ಆದುದರಿಂದ ಇವನನ್ನು ಆ ತೀರ್ಥಜಲದಿಂದ ಪ್ರೋಕ್ಷಣೆಮಾಡಿದಲ್ಲಿ ಕ್ರಮಕ್ರಮವಾಗಿ ಪಾಪಮೋಕ್ಷ ಹೊಂದಿ ಶುದ್ಧನಾಗುತ್ತಾನೆ. ದೇವತೆಗಳ ಈ ಮಾತನ್ನು ಕೇಳಿ ಆ ರಾಜನು ಅಲ್ಲಿಯೇ ತಂದೆಗಾಗಿ ಆಶ್ರಮವೊಂದನ್ನು ನಿರ್ಮಿಸಿ ಆ ತಂದೆಗಾಗಿ ತಾನೇ ತೀರ್ಥಯಾತ್ರೆಯನ್ನು ಮಾಡಲು ಹೊರಟನು.

ಅಭ್ಯಷಿಂಚತ್ಸ್ವಪಿತರಂ ತೀರ್ಥತೋಯೇನ ನಿತ್ಯಶಃ ।
ಏತಸ್ಮಿನ್ನೇವ ಕಾಲೇ ತು ಸಾರಮೇಯೋ ಜಗಾಮ ಹ ॥ ೫೦ ॥

ಸ್ಥಾಣೋರ್ಮಠೇ ಕೌಲಪತಿರ್ದೇವದ್ರವ್ಯಸ್ಯರಕ್ಷಿತಾ ।
ಪರಿಗ್ರಹಸ್ಯ ದ್ರವ್ಯಸ್ಯ ಪರಿಪಾಲಯಿತಾ ಸದಾ ॥ ೫೧ ॥

ಪ್ರಿಯಶ್ಚ ಸರ್ವಲೋಕೇಷು ದೇವಕಾರ್ಯಪರಾಯಣಃ ।
ತಸ್ಯೈವಂ ವರ್ತಮಾನಸ್ಯ ಧರ್ಮಮಾರ್ಗೇ ಸ್ಥಿತಸ್ಯ ಚ ॥ ೫೨ ॥

ಕಾಲೇನ ಚಲಿತಾ ಬುದ್ಧಿರ್ದೇವದ್ರವ್ಯಸ್ಯ ನಾಶನೇ ।
ತೇನಾಧರ್ಮೇಣ ಯುಕ್ತಸ್ಯ ಪರಲೋಕಗತಸ್ಯ ಚ ॥ ೫೩ ॥

ದೃಷ್ಟ್ವಾ ಯಮೋಽಬ್ರವೀದ್ವಾಕ್ಯಂ ಶ್ವಯೋನಿಂ ವ್ರಜಮಾಚಿರಂ ।
ತದ್ವಾಕ್ಯಾನಂತರಂ ಜಾತಃ ಶ್ವಾನ್ವೈ ಸೌಗಂಧಿಕೇ ವನೇ ॥ ೫೪ ॥

ತತಃ ಕಾಲೇನ ಮಹತಾ ಶ್ವಯೂಥಪರಿವಾರಿತಃ ।
ಪರಿಭೂತಸ್ಸಾರಮೇಯೋ ದುಃಖೇನ ಮಹತಾ ವೃತಃ ॥ ೫೫ ॥

೫೦-೫೨. ನಿತ್ಯವೂ ತೀರ್ಥಗಳಲ್ಲಿ ತಾನು ಸ್ನಾನಮಾಡಿ ಆ ತೀರ್ಥದ ಜಲದಿಂದ ತಂದೆಯನ್ನು ಪ್ರೋಕ್ಷಿಸುತ್ತಾ ಬಂದನು. ಈ ಸಮಯದಲ್ಲಿ ಸ್ಥಾಣುಮಠದಲ್ಲಿ ದೇವರ ದ್ರವ್ಯಕ್ಕೆ ರಕ್ಷಕನಾಗಿ ಯಜಮಾನನಾಗಿದ್ದ ಸಾರಮೇಯನೆಂಬ ಒಬ್ಬ ಯಾತ್ರಿಕನು ಅಲ್ಲಿಗೆ ಬಂದನು. ಆ ಸಾರಮೇಯನು ಎಲ್ಲರಲ್ಲಿಯೂ ಪ್ರೀತಿಯುಳ್ಳವನಾಗಿಯೂ ದೇವರ ಕೆಲಸದಲ್ಲಿ ಆಸಕ್ತನಾಗಿಯೂ ಇದ್ದು ದೇವರಿಗಾಗಿ ಬರುವ ದ್ರವ್ಯಕ್ಕೆ ರಕ್ಷಕನಾಗಿಯೂ ಇದ್ದನು. ಈರೀತಿ ಧರ್ಮಮಾರ್ಗದಲ್ಲೇ ಇದ್ದುಕೊಂಡಿದ್ದ ಆ ಸಾರಮೇಯನಿಗೆ ಕೆಲವು ಕಾಲ ಕಳೆದನಂತರ ದ್ರವ್ಯವನ್ನು ನಾಶಮಾಡುವ ವಿಷಯದಲ್ಲಿ ಬುದ್ಧಿಯುಂಟಾಯಿತು.

೫೩-೫೫. ದೇವದ್ರೋಹದಿಂದ ಅಧರ್ಮಹೊಂದಿದ ಆ ಸಾರಮೇಯನು ಪರಲೋಕಕ್ಕೆ ಹೋದಕಾಲದಲ್ಲಿ ಅವನನ್ನು ನೋಡಿ ಯಮನು ನೀನು ಜಾಗ್ರತೆಯಾಗಿ ನಾಯಿನ ಜನ್ಮವನ್ನು ಹೊಂದು ಎಂದು ಆಜ್ಞಾಪಿಸಿದನು. ಒಡನೆಯೇ ಸಾರಮೇಯನು ನಾಯಿನ ಜನ್ಮವನ್ನು ಹೊಂದಿ ಸೌಗಂಧಿಕವನದಲ್ಲಿ ಸಂಚರಿಸತೊಡಗಿದನು. ಅನಂತರ ಹಾಗೆಯೇ ಬಹಳಕಾಲದವರೆಗೂ ನಾಯಿಗಳ ಗುಂಪಿನಲ್ಲಿ ಸೇರಿದ್ದು ಕ್ರಮೇಣ ಅಲ್ಲಿಯೂ ತಿರಸ್ಕೃತನಾಗಿ ಮಹಾದುಃಖಾಕ್ರಾಂತನಾಗಿ ಪುಣ್ಯಕರವಾದ

ತ್ಯಕ್ತ್ವಾ ದ್ವೈತವನಂ ಪುಣ್ಯಂ ಸಾನ್ನಿಹತ್ಯಂ ಯಯೌ ಸರಃ ।
ತಸ್ಮಿನ್ ಪ್ರವಿಷ್ಟಮಾತ್ರಸ್ತು ಸ್ಥಾಣೋರೇವ ಪ್ರಸಾದತಃ ॥ ೫೬ ॥

ಅತೀವ ತೃಷಯಾ ಯುಕ್ತಃ ಸರಸ್ವತ್ಯಾಂ ಮಮಜ್ಜ ಹ ।
ತತ್ರ ಸಂಪ್ಲುತದೇಹಸ್ತು ವಿಮುಕ್ತಃ ಸರ್ವಕಿಲ್ಬಿಷೈಃ ॥ ೫೭ ॥

ಆಹಾರಲೋಭೇನ ತದಾ ಪ್ರವಿವೇಶ ಕುಲಂ ಮಠಂ ।
ಪ್ರವಿಶಂತಂ ತದಾ ದೃಷ್ಟ್ವಾ ಶ್ವಾನಂ ಭಯಸಮನ್ವಿತಂ ॥ ೫೮ ॥

ಸ ತಂ ಪಸ್ಪರ್ಶ ಶನಕೈಃ ಸ್ಥಾಣುತೀರ್ಥೆ ಮಮಜ್ಜ ಹ ।
ಪತಿತಃ ಪೂರ್ವತೀರ್ಥೇಷು ವಿಪ್ರುಷ್ಯೈಃ ಪರಿಷೇಚಿತಃ ॥ ೫೯ ॥

ಶುನೋಸ್ಯ ಗಾತ್ರಸಂಭೂತೈಃ ಅಬ್ಬಿಂದುಭಿಃ ಸ ಸಿಂಚಿತಃ ।
ವಿರಕ್ತದೃಷ್ಟಿಃ ಸಶುನಃ ಕ್ಷಣೇನ ಚ ತತಃ ಪರಂ ॥ ೬೦ ॥

ದ್ವೈತವನದಲ್ಲಿ ಅಲೆದು ಅದನ್ನೂ ಬಿಟ್ಟು ಸನ್ನಿಹತ್ಯಾಕ್ಷೇತ್ರದಲ್ಲಿರುವ ಸರೋವರಕ್ಕೆ ಬಂದನು. ಅಲ್ಲಿ ಪ್ರವೇಶಮಾಡಿದೊಡನೆಯೇ ಸ್ಥಾಣುವಿನ ಅನುಗ್ರಹದಿಂದ ಆ ಸಾರಮೇಯನಿಗೆ ಬಹಳ ಬಾಯಾರಿಕೆಯಾಯಿತು. ಅದರ ಶಾಂತಿಗಾಗಿ ಸರಸ್ವತೀನದಿಯಲ್ಲಿ ಮುಳುಗಿದನು. ಅಲ್ಲಿ ಮುಳುಗಿದೊಡನೆಯೇ ಅವನಿಗೆ ಸರ್ವಪಾಪಗಳಿಂದಲೂ ಬಿಡುಗಡೆಯಾಯಿತು.

೫೮-೬೦. ಅನಂತರ ಆಹಾರವನ್ನು ಹೊಂದುವ ಆಶೆಯಿಂದ ಅಲ್ಲಿದ್ದ ದೇವಾಲಯದೊಳಕ್ಕೆ ಪ್ರವೇಶಿಸಿತು. ಹಾಗೆ ಭಯದಿಂದ ಪ್ರವೇಶಿಸುತ್ತಿರುವ ಸಾರಮೇಯುನನ್ನು ನೋಡಿ ಅಲ್ಲಿದ್ದ ರಾಜನ ತಂದೆಯಾದ ಮ್ಲೇಚ್ಛನು ದಯೆಯಿಂದ ಅದನ್ನು ಮೆಲ್ಲಗೆ ಸವರಿದನು. ಆಗ ಸಾರಮೇಯನು ಪುನಃ ಸ್ನಾನಮಾಡಲು ಸ್ಥಾಣುತೀರ್ಥದಲ್ಲಿ ಬಿದ್ದನು. ಪೂರ್ವತೀರ್ಥದಲ್ಲಿ ಸ್ನಾನಮಾಡಲು ಮುಳುಗಿದ ಆ ನಾಯಿನ ಜನ್ಮ ಹೊಂದಿರುವ ಸಾರಮೇಯನ ದೇಹದಿಂದ ಚದುರಿದ ಜಲಬಿಂದುಗಳಿಂದಲೂ ಸ್ನಾನಕಾಲದಲ್ಲಿ ಮೇಲಕ್ಕೆ ಎರಚಲ್ಪಟ್ಟ ತೀರ್ಥಬಿಂದುಗಳಿಂದಲೂ ಎರಚಲ್ಪಟ್ಟವನಾಗಿ ಆ ಮ್ಲೇಚ್ಛನು ಒಡನೆಯೇ ವಿರಕ್ತನಾಗಿ ಸ್ಥಾಣುತೀರ್ಥದ ಮಾಹಾತ್ಮ್ಯದಿಂದಲೂ ಪುತ್ರನ ಉಪಕಾರದಿಂದಲೂ ದುಃಖದಿಂದ ಪಾರಾದನು.

ಸ್ಥಾಣುತೀರ್ಥಸ್ಯ ಮಹಾತ್ಮ್ಯಾತ್ಸಪುತ್ರೇಣ ಚ ತಾರಿತಃ ।
ನಿಯತಸ್ತತ್ಕ್ಷಣಾಜ್ಜಾತೋ ದಿವ್ಯದೇಹಸಮನ್ವಿತಃ ॥ ೬೧ ॥

ವೇನ ಉವಾಚ

ಪ್ರಪದ್ಯೇ ದೇವಮೀಶಾನಂ ತ್ವಾಮಜಂ ಚಂದ್ರಭೂಷಣಂ ।
ಮಹಾದೇವಂ ಮಹಾತ್ಮಾನಂ ವಿಶ್ವಸ್ಯ ಜಗತಃ ಪತಿಂ ॥ ೬೨ ॥

ನಮಸ್ತೇ ದೇವದೇವೇಶ ಸರ್ವಶತ್ರುನಿಷೂದನ ।
ದೇವೇಶ ಬಲಿವಿಷ್ಟಂಭಿನ್ ದೇವೈರ್ದೈತ್ಯೈಶ್ಚ ಪೂಜಿತ ॥ ೬೩ ॥

ವಿರೂಪಾಕ್ಷ ಸಹಸ್ರಾಕ್ಷ ತ್ರ್ಯಕ್ಷ ಯಕ್ಷೇಶ್ವರಪ್ರಿಯ ।
ಸರ್ವತಃಪಾಣಿಪಾದ ತ್ವಂ ಸರ್ವತೋಕ್ಷಿಶಿರೋಮುಖ ॥ ೬೪ ॥

ಸರ್ವತಃ ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠಸಿ ।
ಶಂಕುಕರ್ಣಮಹಾಕರ್ಣ ಕುಂಭಕರ್ಣಾರ್ಣವಾಲಯ ॥ ೬೫ ॥

೬೧-೬೩. ಒಡನೆಯೇ ದಿವ್ಯದೇಹವನ್ನು ಹೊಂದಿ ಮಹಾಭಕ್ತನಾಗಿ ಸ್ಥಾಣು ಲಿಂಗಕ್ಕೆ ನಮಸ್ಕರಿಸಿ ಆ ವೇನನು ಈರೀತಿ ಸ್ತುತಿಮಾಡತೊಡಗಿದನು. ದೇವತೆಯಾಗಿಯೂ ರಕ್ಷಕನಾಗಿಯೂ ನಿತ್ಯನಾಗಿಯೂ ಚಂದ್ರಭೂಷಿತನಾಗಿಯೂ ಇರುವ ನಿನ್ನನ್ನೇ ನಾನು ಶರಣುಹೊಂದಿದ್ದೇನೆ. ನೀನೇ ದೇವತೋತ್ತಮನಾಗಿಯೂ ಮಹಾತ್ಮನಾಗಿಯೂ ಸಕಲ ಜಗತ್ತಿಗೆ ಪತಿಯಾಗಿಯೂ ಇರುತ್ತೀಯೆ. ಎಲೈ ಇಂದ್ರಾದಿ ದೇವತೆಗಳಿಗೂ ನಿಯಾಮಕನೇ ಸರ್ವಶತ್ರುನಾಶಕನೇ ಬಲಿಯನ್ನೂ ಧ್ವಂಸಮಾಡಿ ದೇವತೆಗಳಿಂದಲೂ ದೈತ್ಯರಿಂದಲೂ ಪೂಜಿಸಲ್ಪಟ್ಟವನೇ ವಿರೂಪಾಕ್ಷನೇ ತ್ರಿನೇತ್ರನೇ ಸಹಸ್ರನೇತ್ರನೇ ಕುಬೇರಪ್ರಿಯನೇ ನಿನಗೆ ಅನೇಕ ನಮಸ್ಕಾರಗಳು.

೬೪-೬೭. ಎಲೈ ಸರ್ವದಿಕ್ಕಿನಲ್ಲೂ ಪ್ರಸರಿಸಿರುವ ಹಸ್ತಪಾದಗಳುಳ್ಳವನೇ ಕಣ್ಣು ತಲೆ ಮುಖಗಳಿಂದ ಸರ್ವದಿಕ್ಕುಗಳಲ್ಲೂ ಪ್ರಸರಿಸಿರುವವನೇ ಸರ್ವವ್ಯಾಪಕವಾದ ಶ್ರವಣೇಂದ್ರಿಯವುಳ್ಳವನೇ ಲೋಕದಲ್ಲಿರುವ ಸರ್ವವನ್ನೂ ನೀನು ಆಕ್ರಮಿಸಿಕೊಂಡಿದ್ದೀಯೆ. (ವ್ಯಾಪಕನೆಂದು ತಾತ್ಪರ್ಯ) ಶಂಕುವಿನಂತೆಯೂ ಕುಂಭದಂತೆಯೂ ಇರುವ ಕರ್ಣವುಳ್ಳವನೇ ಮಹಾಕರ್ಣನೇ ಗಜಸದೃಶವಾದ ಸ್ಥೂಲಕರ್ಣವುಳ್ಳವನೇ ಗೋವಿನಂತೆ ದೀರ್ಘಕರ್ಣವುಳ್ಳವನೇ ಕೈಯ್ಯಿನಂತೆ ವಿಸ್ತಾರವಾದ ಕರ್ಣವುಳ್ಳವನೇ

ಗಜೇಂದ್ರಕರ್ಣ ಗೋಕರ್ಣ ಪಾಣಿಕರ್ಣ ನಮೋಽಸ್ತು ತೇ ।
ಶತಜಿಹ್ವ ಶತಾವರ್ತ ಶತೋದರ ಶತಾನನ ॥ ೬೬ ॥

ಗಾಯಂತಿ ತ್ವಾಂ ಗಾಯತ್ರಿಣೋಽರ್ಚಯಂತ್ಯರ್ಕಮರ್ಕಿಣಃ ।
ಬ್ರಹ್ಮಾಣಂತ್ವಾ ಶತಕ್ರತೋರೂಧ್ವಂತ್ವಾಮಿಹಮೇನಿರೆ ॥ ೬೭ ॥

ಮೂರ್ತೌ ಹಿ ತೇ ಮಹಾಮೂರ್ತೆ ಸಮುದ್ರಾಸ್ತು ಧರಾ ತಥಾ ।
ದೇವತಾಃ ಸರ್ವ ಏವಾತ್ರ ಗೋಷ್ಠೆ ಗಾವ ಇವಾಸತೆ ॥ ೬೮ ॥

ಶರೀರೆ ತವ ಪಶ್ಯಾಮಿ ಸೋಮಮಗ್ನಿಂ ಜಲೇಶ್ವರಂ ।
ನಾರಾಯಣಂ ತಥಾ ಸೂರ್ಯಂ ಬ್ರಹ್ಮಾಣಂ ಚ ಬೃಹಸ್ಪತಿಂ ॥ ೬೯ ॥

ಭಗವನ್ ಕಾರಣಂ ಕಾರ್ಯಂ ಕ್ರಿಯಾ ಕಾರಣಮೇವ ತತ್ ।
ಪ್ರಭವಃ ಪ್ರಲಯಶ್ಚೈವ ಸದಸಚ್ಚಾಪಿ ದೈವತಂ ॥ ೭೦ ॥

(ಈ ಸ್ಥಲದಲ್ಲಿ ಆಯಾಯ ಕರ್ಣಗಳುಳ್ಳ ಪ್ರಾಣಿಗಳೆಲ್ಲವೂ ವ್ಯಾಪಕಮೂರ್ತಿಯಾದ ಈಶ್ವರನ ವಿಭೂತಿಯೆಂದು ತಾತ್ಪರ್ಯ) ಸಮುದ್ರಶಾಯಿಯೇ ಅನೇಕ ನಾಲಗೆಯುಳ್ಳವನೇ ಅನೇಕ ನಾಭಿಯುಳ್ಳವನೇ ಅನೇಕ ಉದರವುಳ್ಳವನೇ ಅನೇಕ ಮುಖವುಳ್ಳವನೇ (ಇಲ್ಲಿ ಜಗದ್ವ್ಯಾಪಕವಾದ ಮೂರ್ತಿಯುಳ್ಳವನೆಂದು ತಾತ್ಪರ್ಯ) ನಿನಗೆ ನಮಸ್ಕಾರಗಳು. ಗಾಯತ್ರಿಯ ಉಪಾಸಕರೆಲ್ಲರೂ ತಮ್ಮ ಮಹಾಮಂತ್ರದಿಂದ ನಿನ್ನನ್ನೇ ಹೊಗಳುತ್ತಿರುತ್ತಾರೆ. ಸೂರ್ಯೋಪಾಸಕರೆಲ್ಲರೂ ನಿನ್ನನ್ನೇ ಸೂರ್ಯರೂಪದಿಂದ ಉಪಾಸನೆಮಾಡುತ್ತಿರುತ್ತಾರೆ. ಇಂದ್ರನಿಗಿಂತಲೂ ಮೇಲಿರುವ ಬ್ರಹ್ಮಮೂರ್ತಿಯನ್ನಾಗಿ ತಿಳಿಯುತ್ತಾರೆ.

೬೮-೭೧. ಎಲೈ ಜಗನ್ಮೂರ್ತಿಯೇ, ನಿನ್ನ ದೇಹದಲ್ಲಿಯೇ ಸಮುದ್ರಗಳು, ಭೂಮಂಡಲ, ದೇವತೆಗಳು ಎಲ್ಲರೂ ಗೋಷ್ಠದಲ್ಲಿ ಹಸುಗಳಂತೆ ರಕ್ಷಿಸಲ್ಪಟ್ಟಿರುತ್ತಾರೆ. ನಿನ್ನ ಈ ವ್ಯಾಪಕವಾದ ಶರೀರದಲ್ಲಿಯೇ ಚಂದ್ರ, ಅಗ್ನಿ, ವರುಣ, ನಾರಾಯಣ, ಸೂರ್ಯ, ಚತುರ್ಮುಖ, ಬೃಹಸ್ಪತಿ ಎಲ್ಲರನ್ನೂ ನಾನು ನೋಡುತ್ತಿದ್ದೇನೆ. ಎಲೈ ಭಗವಂತನೇ, ಲೋಕದಲ್ಲಿ ಕಾರ್ಯವನ್ನು ಕುರಿತು ಕಾರಣವೆಂದು ಹೇಳಲ್ಪಡುತ್ತಿರುವ ವಸ್ತುಗಳೆಲ್ಲಾ ಕ್ರಿಯಾಕಾರಣಗಳೇ ಹೊರತು ಮುಖ್ಯಕಾರಣವಲ್ಲ. ಅವುಗಳ ಮುಖ್ಯ ಕಾರಣನೂ, ಮುಖ್ಯನಾಶಕನೂ ಸದಸದ್ರೂಪದಿಂದಿರುವ ದೇವತಾಸ್ವರೂಪನೂ ನೀನೇ ಆಗಿದ್ದೀಯೆ. (ಕಾರಣವಸ್ತುಗಳಲ್ಲಿರುವ ಕಾರ್ಯೋತ್ಪಾದಕ ಶಕ್ತಿಯೂ ನೀನೇ ಆಗಿ

ನಮೋ ಭವಾಯ ಶರ್ವಾಯ ವರದಾಯೋಗ್ರರೂಪಿಣೆ ।
ಅಂಧಕಾಸುರಹಂತ್ರೆ ಚ ಪಶೂನಾಂ ಪತಯೇ ನಮಃ ॥ ೭೧ ॥

ತ್ರಿಜಟಾಯ ತ್ರಿಶೀರ್ಷಾಯ ತ್ರಿಶೂಲಾಸಕ್ತಪಾಣಯೇ ।
ತ್ರ್ಯಂಬಕಾಯ ತ್ರಿನೇತ್ರಾಯ ತ್ರಿಪುರಘ್ನ ನಮೋಽಸ್ತು ತೇ ॥ ೭೨ ॥

ನಮೋ ದಂಡಾಯ ಚಂಡಾಯ ಅಂಡಾಯೋತ್ಪತ್ತಿಹೇತವೇ ।
ಡಿಂಡಿಮಾಸಕ್ತಹಸ್ತಾಯ ದಂಡಿಮುಂಡಾಯ ತೇ ನಮಃ ॥ ೭೩ ॥

ನಮೋರ್ಧ್ವಕೇಶದಂಷ್ಟ್ರಾಯ ಶುಕ್ಲಾಯಾವಿಕೃತಾಯ ಚ ।
ಧೂಮ್ರಲೋಹಿತಕೃಷ್ಣಾಯ ನೀಲಗ್ರೀವಾಯ ತೇ ನಮಃ ॥ ೭೪ ॥

ದ್ದೀಯೆ. ನಿನ್ನಿಂದ ಶಕ್ತಿಹೊಂದಿದ ಕಾರಣಗಳು ತಮ್ಮ ವ್ಯಾಪಾರಮಾತ್ರದಿಂದ ಕಾರಣಗಳೆಂದು ವ್ಯವಹರಿಸಲ್ಪಡುತ್ತಿವೆ ಎಂದು ತಾತ್ಪರ್ಯ.) ಸರ್ವೋತ್ಪಾದಕನಾಗಿಯೂ, ಸರ್ವಸ್ವರೂಪನಾಗಿಯೂ, ವರಪ್ರದನಾಗಿಯೂ, ಭಯಂಕರಮೂರ್ತಿಯಾಗಿಯೂ, ಅಂಧಕಾಸುರನಾಶಕನಾಗಿಯೂ, ಸರ್ವಪ್ರಾಣಿಗಳಿಗೆ ಪ್ರಭುವಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು.

೭೨ ೭೫. ಮೂರಾಗಿ ವಿಭಾಗಿಸಲ್ಪಟ್ಟ ಜಟೆಯುಳ್ಳವನೇ, ಮೂರುತಲೆಯುಳ್ಳವನೇ, ತ್ರಿಶೂಲದಲ್ಲಿ ಆಸಕ್ತವಾದ ಕೈಯುಳ್ಳವನೇ, ಮೂರುಮುಖವುಳ್ಳವನೇ, ಮೂರು ನೇತ್ರಗಳುಳ್ಳವನೇ, ತ್ರಿಪುರನಾಶಕನೇ ನಿನಗೆ ನಮಸ್ಕಾರಗಳು. ಲೋಕಕ್ಕೆ ಶಿಕ್ಷಾಸ್ವರೂಪನಾಗಿಯೂ, (ಅಥವಾ ದಂಡದಂತೆ ಆಶ್ರಯನಾಗಿಯೂ) ಭಯಂಕರನಾಗಿಯೂ, ಜಗದುತ್ಪತ್ತಿಕಾರಣವಾದ ಅಂಡರೂಪವಾಗಿಯೂ, ಡಮರುಗಾಸಕ್ತನಾಗಿಯೂ, ಮುಂಡಮಾಲಾಧಾರಿಯಾಗಿಯೂ ಇರುವ ನಿನಗೆ ನಮಸ್ಕಾರಗಳು. ನೃತ್ಯಕಾಲದಲ್ಲಿ ಮೇಲ್ಮುಖವಾದ ಕೇಶ ಮತ್ತು ಕೋರದಾಡೆಗಳುಳ್ಳವನೇ, ವಿಶುದ್ಧಮೂರ್ತಿಯೇ, (ಅಥವಾ ಧವಲಮೂರ್ತಿಯೇ) ನಿರ್ವಿಕಾರನೇ, ಬೂದು, ಕೆಂಪು, ಕಪ್ಪು ಮೊದಲಾದ ನಾನಾ ವರ್ಣವುಳ್ಳವನೇ, (ಇದು ನೇತ್ರಾಗ್ನಿಸಂಪರ್ಕದಿಂದ) ವಿಷಪಾನದಿಂದ ಕಪ್ಪಾದ ಕುತ್ತಿಗೆಯುಳ್ಳವನೇ ನಿನಗೆ ನಮಸ್ಕಾರಗಳು. ಅಸದೃಶಸ್ವರೂಪನೇ, ವಿಕೃತರೂಪನೇ, ಮಂಗಲಕರನೇ, ಸೂರ್ಯಪರಂಪರೆಯುಳ್ಳವನೇ, (ಜಗತ್ತಿಗೆ ಪ್ರಕಾಶಕರಾದ ಸೂರ್ಯರು ಉದಯಾಸ್ತಾದಿ ವ್ಯವಹಾರದಿಂದಲೂ, ಕಲ್ಪ

ನಮೋಽಸ್ತ್ವಪ್ರತಿರೂಪಾಯ ವಿರೂಪಾಯ ಶಿವಾಯ ಚ ।
ಸೂರ್ಯಮಾಲಾಯ ಸೂರ್ಯಾಯ ಸ್ವರೂಪಧ್ವಜಮಾಲಿನೇ ॥ ೭೫ ॥

ನಮೋ ನಾನಾಭಿರಾಮಾಯ ನಮಃ ಪಟುತರಾಯ ಚ ।
ನಮೋ ಗಣೇಂದ್ರನಾಥಾಯ ವೃಷಸ್ಕಂಧಾಯ ಧನ್ವಿನೇ ॥ ೭೬ ॥

ಸಂಕ್ರಂದನಾಯ ಚಂಡಾಯ ಪರ್ಣಧಾರಪುಟಾಯ ಚ ।
ನಮೋ ಹಿರಣ್ಯವರ್ಣಾಯ ನಮಃ ಕನಕವರ್ಚಸೆ ॥ ೭೭ ॥

ನಮಃ ಸ್ತುತಾಯ ಸ್ತುತ್ಯಾಯ ಸ್ತುತಿಸ್ಥಾಯ ನಮೋಽಸ್ತು ತೇ ।
ಸರ್ವಾಯ ಸರ್ವಭಕ್ಷಾಯ ಸರ್ವಭೂತಶರೀರಿಣೇ ॥ ೭೮ ॥

ನಮೋ ಹೋತ್ರೇ ಚ ಹಂತ್ರೇ ಚ ಸಿತೋದಗ್ರಪತಾಕಿನೆ ।
ನಮೋ ನಮಾಯ ಮಂತ್ರಾಯ ನಮಃ ಕಟಕಟಾಯ ಚ ॥ ೭೯ ॥

ಭೇದದಿಂದಲೂ ಅಸಂಖ್ಯಾತರಾಗುತ್ತಾರೆ.) ಪ್ರಕಾಶಕನೇ, ಸ್ವಕಾಂತಿ ಎಂಬ ಧ್ವಜಗಳ ಮಾಲೆಯುಳ್ಳವನೇ (ಸ್ವಕಾಂತಿಯೇ ಸೂಚಕಚಿಹ್ನೆಯಾಗಿ ಉಳ್ಳವನೆಂದು ತಾತ್ಪರ್ಯ.) ನಿನಗೆ ನಮಸ್ಕಾರಗಳು.

೭೬-೭೯. ನಾನಾರೂಪವಾದ ರಮಣೀಯವಾದ ಪದಾರ್ಥಗಳುಳ್ಳವನೇ, ಅಥವಾ ರಮಣೀಯ ವಸ್ತುಗಳಲ್ಲಿ ನಾನಾರೂಪದಿಂದಿರುವನೇ, ತೀವ್ರವೇಗಶಾಲಿಯೇ, ಗಣಗಳಿಗೂ, ಇಂದ್ರನಿಗೂ ಯಜಮಾನನಾಗಿರುವವನೇ, ಉನ್ನತವಾದ ಭುಜಶಿರಸ್ಸುಳ್ಳವನೇ ನಿನಗೆ ನಮಸ್ಕಾರಗಳು. ಸಂಹಾರಕಾಲದಲ್ಲಿ ಎಲ್ಲರನ್ನೂ ಆರ್ತಧ್ವನಿಯುಳ್ಳವರನ್ನಾಗಿ ಮಾಡುವವನೇ, ಭಯಂಕರರೂಪನೇ, ತಾಪಸನಾಗಿ ಎಲೆಗಳೊಡನೆ ಕೂಡಿರುವ ಅಂಜಲೀಪುಟವುಳ್ಳವನೇ, ಹಿರಣ್ಯದಂತೆ ರಮಣೀಯರೂಪನೇ, ಜಾಜ್ವಲ್ಯಮಾನವಾದ ತೇಜಸ್ಸುಳ್ಳವನೇ, ಸ್ತೋತ್ರಮಾಡಲ್ಪಟ್ಟವನೇ, ಸ್ತೋತ್ರಾರ್ಹನೇ, ಸ್ತೋತ್ರಾಧೀನನೇ ನಿನಗೆ ನಮಸ್ಕಾರಗಳು. ಸರ್ವಸ್ವರೂಪಿಯೇ, ಸರ್ವಭಕ್ಷಕನೇ, ಸರ್ವಪ್ರಾಣಿಶರೀರಿಯೇ, ಹೋತೃಸ್ವರೂಪನೇ, (ಪ್ರಲಯಾಗ್ನಿಯಲ್ಲಿ ಜಗತ್ತನ್ನು ಹೋಮಮಾಡುವವನು) ನಾಶಕನೇ, ಶುಭ್ರವಾದ ಉನ್ನತವಾದ ಧ್ವಜಶಾಲಿಯೇ, ನಮಃ ಎಂಬ ಮಂತ್ರಮೂರ್ತಿಯೇ, ಬೀಜಾಕ್ಷರಸ್ವರೂಪನೇ, (ಅಥವಾ ಕಟಕಟಾಕಾರವಾದ ಕೋಪಸೂಚಕಧ್ವನಿಯುಳ್ಳವನೇ) ನಿನಗೆ ಅನಂತ ನಮಸ್ಕಾರಗಳು.

ನಮೋಽಸ್ತು ಕೃಶನಾಶಾಯ ಶಯಿತಾಯೋತ್ಥಿತಾಯ ಚ ।
ಸ್ಥಿತಾಯ ಧಾಮಸಾರಾಯ ಮುಂಡಾಯ ಕುಟಿಲಾಯ ಚ ॥ ೮೦ ॥

ನಮೋ ನರ್ತನಶೀಲಾಯ ಲಯವಾದಿತ್ರಶಾಲಿನೆ ।
ನಾಟ್ಯೋಪಹಾರಲುಬ್ಧಾಯ ಮುಖವಾದಿತ್ರಶಾಲಿನೆ ॥ ೮೧ ॥

ನಮೋ ಜ್ಯೇಷ್ಠಾಯ ಶ್ರೇಷ್ಠಾಯ ಬಲಾತಿಬಲಘಾತಿನೆ ।
ಕಾಲನಾಶಾಯ ಕಾಲಾಯ ಸಂಸಾರಕ್ಷಯರೂಪಿಣೆ ॥ ೮೨ ॥

ಹಿಮವದ್ದುಹಿತುರ್ಭರ್ತ್ರೇ ಭೈರವಾಯ ನಮೋಽಸ್ತು ತೇ ।
ಉಗ್ರಾಯ ಚ ನಮೋನಿತ್ಯಂ ನಮೋಽಸ್ತು ದಶಬಾಹವೇ ॥ ೮೩ ॥

೮೦-೮೨. ಸೂಕ್ಷ್ಮಸ್ವರೂಪಿಯಾಗಿಯೇ ಜಗತ್ತಿಗೆಲ್ಲಾ ನಾಶಕನಾಗಿಯೂ, ಮಲಗಿದ್ದರೂ ಎಚ್ಚೆತ್ತಿರುವನಾಗಿಯೂ, (ಯೋಗನಿದ್ರೆ ಎಂದು ತಾತ್ಪರ್ಯ) ಸತ್ತಾಶ್ರಯನಾಗಿಯೂ, ತೇಜೋಮೂರ್ತಿಯಾಗಿಯೂ, ಮುಂಡಮಾಲಾಧಾರಿಯಾಗಿಯೂ, ವಕ್ರಸ್ವಭಾವನಾಗಿಯೂ (ಸಂಹಾರಕಾರ್ಯದಲ್ಲಿರುವದ್ದರಿಂದ ಪ್ರತಿಕೂಲಸ್ವಭಾವನೆಂದು ತಾತ್ಪರ್ಯ) ಇರುವ ನಿನಗೆ ಅನಂತ ನಮಸ್ಕಾರಗಳು. ಸರ್ವಕಾಲದಲ್ಲೂ ನರ್ತನಪ್ರಿಯನಾಗಿರುವ ಲಯ ಮತ್ತು ಮೃದಂಗಾದಿವಾದ್ಯದಿಂದ ಕೂಡಿರುವ ನಾಟ್ಯವೆಂಬ ಕಾಣಿಕೆಯಲ್ಲಿ ಪ್ರಿಯನಾದ ಅಟ್ಟಹಾಸವೆಂಬ ವಾದ್ಯದಿಂದ ಕೂಡಿರುವ ನಿನಗೆ ನಮಸ್ಕಾರಗಳು. ಸರ್ವಜ್ಯೇಷ್ಠನಾಗಿಯೂ, ಶ್ರೇಷ್ಠನಾಗಿಯೂ, ಬಲಿಷ್ಠರಿಗೂ, ನಾಶಕನಾಗಿಯೂ, ಯಮನಿಗೂ ಪ್ರತಿಯಮನಾಗಿಯೂ, ಸಂಹಾರಕಾರಿಯಾಗಿಯೂ, ಸಂಸಾರತಾರಕಸ್ವರೂಪನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು.

೮೩-೮೫. ಹಿಮವತ್ಪುತ್ರಿಯಾದ ಪಾರ್ವತಿಗೆ ಪತಿಯಾಗಿಯೂ, ಭೈರವಸ್ವರೂಪನಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು. ಉಗ್ರಸ್ವರೂಪನಾಗಿಯೂ, ಹತ್ತುಬಾಹುಗಳುಳ್ಳವನಾಗಿಯೂ, ಸ್ಮಶಾನಭಸ್ಮಪ್ರಿಯನಾಗಿಯೂ, ಕಪಾಲಪಾಣಿಯಾಗಿಯೂ, ಭಯಕಾರಣನಾಗಿಯೂ, ಭಯಂಕರಸ್ವರೂಪಿಯಾ

ಚಿತಿಭಸ್ಮಪ್ರಿಯಾಯೈವ ಕಪಾಲಾಸಕ್ತಪಾಣಯೇ ।
ವಿಭೀಷಣಾಯ ಭೀಷ್ಮಾಯ ಹಿಮವ್ರತಧರಾಯ ಚ ॥ ೮೪ ॥

ನಮೋ ವಿಕೃತವಕ್ತ್ರಾಯ ವಕ್ತ್ರಪ್ರಾಂತೋಗ್ರದೃಷ್ಟಯೇ ।
ಪಕ್ವಾಮಮಾಂಸಲುಬ್ಧಾಯ ತುಂಬೀವೀಣಾಪ್ರಿಯಾಯ ಚ ॥ ೮೫ ॥

ನಮೋ ವೃಷಾಙ್ಕವೃಷ್ಟಾಯ ಗೋಮಿನೇ ತೇ ನಮೋನಮಃ ।
ಕಟಂಕಟಾಯ ಭೀಮಾಯ ನಮಃ ಪಚಪಚಾಯ ಚ ॥ ೮೬ ॥

ನಮಃ ಸರ್ವವರಿಷ್ಠಾಯ ವರಾಯ ವರದಾಯಿನೇ ।
ನಮೋ ವಿರಕ್ತವಕ್ತ್ರಾಯ ಭಾವನಾಯಾಕ್ಷಮಾಲಿನೇ ॥ ೮೭ ॥

ವಿಭೇದಭೇದಭಿನ್ನಾಯ ಛಾಯಾಯೈ ತಪನಾಯ ಚ ।
ಅಘೋರಘೋರರೂಪಾಯ ಘೋರಘೋರತರಾಯ ಚ ॥ ೮೮ ॥

ಗಿಯೂ, ಹಿಮವತ್ಪರ್ವತದಲ್ಲಿ ವ್ರತಧಾರಿಯಾಗಿಯೂ, ಘೋರರೂಪದಿಂದ ವಿಕೃತ ವದನನಾಗಿಯೂ, ಮುಖದ ಪಕ್ಕದಲ್ಲಿ ಜ್ವಲಿಸುತ್ತಿರುವ ದೃಷ್ಟಿಜ್ವಾಲೆಯುಳ್ಳವನೂ, ಪಕ್ವಾಪಕ್ವಮಾಂಸಗಳಲ್ಲಿ ಆಶೆಯುಳ್ಳವನೂ, (ಜಗದ್ಭಕ್ಷಕನಾದುದರಿಂದ) ಸೋರೆ ಬುರುಡೆಯ ವೀಣೆಯಲ್ಲಿ ಪ್ರೀತಿಯುಳ್ಳವನಾಗಿಯೂ, ಎತ್ತಿನಿಂದ ಸೇವಿಸಲ್ಪಡುವವನಾಗಿಯೂ, ಗೋವುಗಳಂತೆ ವಶರಾಗಿರುವ ಅನೇಕ ಚೇತನರುಳ್ಳವನಾಗಿಯೂ (ಇದರಿಂದ ಪಶುಪತಿಶಬ್ದಾರ್ಥವನ್ನೇ ಹೇಳಿದಂತಾಗುತ್ತದೆ) ಇರುವ ನಿನಗೆ ಅನಂತ ನಮಸ್ಕಾರಗಳು.

೮೬-೮೯. ಕೋಪಸೂಚಕವಾದ ಕಟಂಕಟಧ್ವನಿಯುಳ್ಳವನಾಗಿಯೂ ಭಯಂಕರನಾಗಿಯೂ ಅಗ್ನಿಜ್ವಾಲೆಯಿಂದ ಜಗತ್ತನ್ನು ಪಚಪಚ ಎಂದು ದಹಿಸುವವನಾಗಿಯೂ ಸರ್ವೋತ್ಕೃಷ್ಟನಾಗಿಯೂ ಶ್ರೇಷ್ಠನಾಗಿಯೂ ವರಪ್ರದನಾಗಿಯೂ ಇರುವ ನಿನಗೆ ನಮಸ್ಕಾರಗಳು. ತಪೋನುಷ್ಠಾನಕಾಲದಲ್ಲಿ ವೈರಾಗ್ಯಸೂಚಕವಾದ ಶಾಂತವಾದ ಮುಖವುಳ್ಳವನಾಗಿಯೂ ಧ್ಯಾನಸ್ವರೂಪಿಯೇ ಆಗಿಯೂ ಅಕ್ಷಮಾಲಾಧಾರಿಯಾಗಿಯೂ ಇರುವ ನಿನಗೆ ನಮಸ್ಕಾರಗಳು. ಜ್ಞಾನಸ್ವರೂಪನಾಗಿರುವದರಿಂದ ಸಜಾತೀಯ ವಿಜಾತೀಯ ಭೇದ ದೂರನಾಗಿಯೂ ಶೀತಲವಾದ ಛಾಯೆಯಂತೆ ಆಶ್ರಯಾರ್ಹನಾಗಿಯೂ ಸೂರ್ಯನಂತೆ ಸಂತಾಪಕಾರಿಯಾಗಿಯೂ ಶಾಂತವಾಗಿಯೂ ಘೋರವಾಗಿಯೂ ಘೋರತರವಾಗಿಯೂ ಇರುವ ನಾನಾರೂಪಧಾರಿಯೇ. (ಇಲ್ಲಿ

ನಮಃ ಶಿವಾಯ ಶಾಂತಾಯ ನಮಃ ಶಾಂತತಮಾಯ ಚ ।
ಬಹುನೇತ್ರಕಪಾಲಾಯ ಏಕಮೂರ್ತೇ ನಮೋಽಸ್ತು ತೇ ॥ ೭೯ ॥

ನಮಃ ಕ್ಷುದ್ರಾಯ ಲುಬ್ಧಾಯ ಯಜ್ಞಭಾಗಪ್ರಿಯಾಯ ಚ ।
ಪಂಚಾಲಾಯ ಸಿತಾಂಗಾಯ ನಮೋ ಯಮನಿಯಾಮಿನೇ ॥ ೮೦ ॥

ನಮಶ್ಚಿತ್ರೋರುಘಂಟಾಯ ಘಂಟಾಘಂಟನಿಘಂಟಿನೇ ।
ಸಹಸ್ರಶತಘಂಟಾಯ ಘಂಟಾಮಾಲಾವಿಭೂಷಿಣೇ ॥ ೮೧ ॥

ಪ್ರಾಣಿಸಂಘಟ್ಟಘಂಟಾಯ ನಮಃ ಕಿಲಕಿಲಪ್ರಿಯ ।
ಹುಂ ಹುಂ ಕಾರಾಯ ಪಾರಾಯ ಹುಂಕಾರಾಯ ಪ್ರಿಯಾಯ ಚ ॥ ೮೨ ॥

ಆಶ್ರಯಾರ್ಥಿಗಳಾದ ಅಧಿಕಾರಿ ತಾರತಮ್ಯದಿಂದಲೂ ಸೃಷ್ಟಿಸ್ಥಿತ್ಯಾದಿಕಾರ್ಯತಾರತಮ್ಯ ದಿಂದಲೂ ನಾನಾರೂಪವುಳ್ಳವನೆಂದು ತಿಳಿಯಬೇಕು.) ಮಂಗಲಪ್ರದನಾಗಿಯೂ ಶಾಂತಮೂರ್ತಿಯಾಗಿಯೂ ಅನೇಕ ನೇತ್ರಗಳುಳ್ಳ ಕಪಾಲಮಾಲಾಧಾರಿಯಾಗಿಯೂ ಏಕಮಾತ್ರಸ್ವರೂಪನಾಗಿಯೂ (ಜಗತ್ತೆಂಬ ಶರೀರಕ್ಕೆ ಆತ್ಮನಂತೆ ಒಬ್ಬನೇ ಆಗಿರುವೆ ಎಂದು ತಾತ್ಪರ್ಯ) ಇರುವ ನಿನಗೆ ಅನೇಕ ನಮಸ್ಕಾರಗಳು.

೮೦-೮೨. ಹಿಂಸಕ ಸ್ವಭಾವದಿಂದ ಕ್ಷುದ್ರನಾಗಿಯೂ (ದಯಾರಹಿತನೆಂದು ತಾತ್ಪರ್ಯ) ವ್ಯಾಧನಂತೆ ಪರಪೀಡಕನಾಗಿಯೂ ಯಜ್ಞದ ಹವಿರ್ಭಾಗದಲ್ಲಿ ಪ್ರೀತಿ ಯುಳ್ಳವನಾಗಿಯೂ ಪಂಚಾಲದೇಶಕ್ಕೆ ಹಿತಕರನಾಗಿಯೂ ವಿಭೂತಿಯಿಂದ ಶುಭ್ರ ವಾದ ಅಂಗವುಳ್ಳವನಾಗಿಯೂ ಯಮನಿಗೂ ನಿಯಾಮಕನಾಗಯೂ ಇರುವ ನಿನಗೆ ನಮಸ್ಕಾರಗಳು. ವಿಚಿತ್ರವಾದ ನಾನಾ ಘಂಟೆಯುಳ್ಳವನಾಗಿಯೂ ಘಂಟಾಸಮೂ ಹದ ಸಮುಚ್ಚಯವುಳ್ಳವನಾಗಿಯೂ ಘಂಟೆಗಳ ಮಾಲಿಕೆಯಿಂದ ಭೂಷಿತನಾಗಿಯೂ ಪ್ರಾಣಿಗಳಿಗೆ ನಾಶಕವಾದ ಘಂಟಾಧ್ವನಿಯುಳ್ಳವನಾಗಿಯೂ ಪ್ರಾಣಿಗಳ ಸಂಹಾರ ಕಾಲದಲ್ಲಿ ಅವುಗಳ ಕಿಲಕಿಲಧ್ವನಿಯಲ್ಲಿ ಪ್ರೀತಿಯುಳ್ಳವನಾಗಿಯೂ ಇರುವ ನಿನಗೆ ನಮಸ್ಕಾರಗಳು. (ಘಂಟೆಗಳನ್ನು ಭೂಷಣಾಕಾರವಾಗಿ ಧರಿಸಿ ಅವುಗಳ ಸ್ವನ ಯಿಂದ ನರ್ತನಮಾಡುವಿಕೆಯು ಕಾಪಾಲಿಕತಂತ್ರದಲ್ಲಿ ಪ್ರಸಿದ್ಧವಾಗಿವೆ. ಎರಡನೆಯ ವಿಶೇಷಣದಿಂದ ಸಂಹಾರ ಪ್ರಿಯತ್ವವು ಸೂಚಿತವಾಗುತ್ತದೆ.) ಸಂಹಾರಕಾಲದಲ್ಲಿ ಕೋಪದಿಂದುಂಟಾದ ಹುಂಹುಂಕಾರವುಳ್ಳವನಾಗಿಯೂ ಪ್ರಾಪ್ಯವಸ್ತುಗಳಲ್ಲಿ ಕೊನೆಯ ವನಾಗಿಯೂ ಹುಂಕಾರಪ್ರಿಯನಾಗಿಯೂ ಅಥವಾ ಹುಂ ಎಂಬ ಬೀಜಾಕ್ಷರರೂಪ ನಾಗಿಯೂ ಇರುವ ನಿನಗೆ ನಮಸ್ಕಾರಗಳು.

ನಮಃ ನಮುಸನೊ ನಿತ್ಯಂ ಗೃಹವೃಕ್ಷನಿಕೇತಿನೆ ।
ಗರ್ಭಮಾಂಸಶೃಗಾಲಾಯ ತಾರಕಾಯ ತರಾಯ ಚ ॥ ೯೩ ॥

ನಮೋ ಯಜ್ಞಾಯ ಯಜಿನೆ ಹುತಾಯ ಪ್ರಹುತಾಯ ಚ ।
ಯಜ್ಞವಾಹಾಯ ಹವ್ಯಾಯ ತಪ್ಯಾಯ ತಪನಾಯ ಚ ॥ ೯೪ ॥

ನಮುಸ್ತುಂಡಾಯ ತುಂಡ್ಯಾಯ ತುಂಡಾನಾಂ ಪತಯೇ ನಮಃ ।
ಅನ್ನದಾಯಾನ್ನ ಪತಯೇ ನಮೋ ನಾನಾನ್ನಭೋಜಿನೇ ॥ ೯೫ ॥

ನಮಃ ಸಹಸ್ರಶೀರ್ಷಾಯ ಸಹಸ್ರಚರಣಾಯ ಚ ।
ಸಹಸ್ರೋದ್ಯತಶೂಲಾಯ ಸಹಸ್ರಾಭರಣಾಯ ಚ ॥ ೯೬ ॥

೯೩-೯೫. ಮನೆಗಳಲ್ಲೂ ಮರಗಳಲ್ಲೂ ಸಾಮ್ಯಬುದ್ಧಿಯಿಂದ ವಾಸಮಾಡುತ್ತಿರುವವನೇ (ತಾರತಮ್ಯದೃಷ್ಟಿಯಿಲ್ಲದೆ ಎಲ್ಲಾಕಡೆಯಲ್ಲಿಯೂ ವಾಸಮಾಡುವವನೆಂದು ತಾತ್ಪರ್ಯ.) ನರಿಯಂತೆ ಗರ್ಭಮಾಂಸದಲ್ಲೂ ಪ್ರೀತಿಯುಳ್ಳವನೇ (ಸರ್ವಭಕ್ಷಕನಾದುದರಿಂದ) (ಸಂಸಾರವನ್ನು) ದಾಟಿಸುವವನೇ ದಾಟಿಯೂ ಇರುವವನೇ ನಿನಗೆ ಅನಂತ ನಮಸ್ಕಾರಗಳು. ಯಜ್ಞಸ್ವರೂಪನಾಗಿಯೂ ಯಜ್ಞಕರ್ತೃಸ್ವರೂಪನಾಗಿಯೂ ಹೋಮ್ಯವಸ್ತುಸ್ವರೂಪನಾಗಿಯೂ ಯಜ್ಞಪ್ರವರ್ತಕನಾಗಿಯೂ ಸಂತಾಪಕಸ್ವರೂಪನೂ ಸಂತಾಪ್ಯವಸ್ತು ಸ್ವರೂಪನೂ ಆಗಿರುವ ನಿನಗೆ ನಮಸ್ಕಾರಗಳು. (ಇಲ್ಲಿ ಯಜ್ಞಾದಿ ಎಲ್ಲಾ ವಸ್ತುಗಳೂ ಅವನಿಗೆ ಶರೀರವಾಗಿರುವದ್ದರಿಂದ ಶರೀರಿಯಾಗಿ ಅವನೊಬ್ಬನೇ ಇರುವದ್ದರಿಂದ ಎಲ್ಲಾ ಸ್ವರೂಪವೂ ಅವನದೇ ಎಂದು ತಾತ್ಪರ್ಯ.) ಎಲ್ಲಾ ಛೇದಕವಸ್ತು ಸ್ವರೂಪನಾಗಿಯೂ ಛೇದ್ಯವಸ್ತು ಸ್ವರೂಪನಾಗಿಯೂ ಛೇದಕವಸ್ತುಗಳಿಗೆ ಶಕ್ತಿಪ್ರದಾನದಿಂದ ಅಧಿಪತಿಯಾಗಿಯೂ ಇರುವ ನಿನಗೆ ನಮಸ್ಕಾರಗಳು. ಎಲ್ಲರಿಗೂ ಅನ್ನದಾತನೂ ಅನ್ನೋತ್ಪತ್ತಿಗೆ ನಿಯಾಮಕನೂ ನಾನಾವಿಧವಾದ ಅನ್ನವನ್ನು ಭೋಜಿಸುವವನೂ (ನಾನಾವಿಧವಾದ ಜಗತ್ತೇ ಅವನಿಗೆ ಭಕ್ಷಣೀಯವಾಗಿರುವದ್ದರಿಂದ) ಆಗಿರುವ ನಿನಗೆ ಅನಂತ ನಮಸ್ಕಾರಗಳು.

೯೬-೯೯. ಸಹಸ್ರ ಶಿರವುಳ್ಳವನಾಗಿಯೂ ಸಹಸ್ರ ಪಾದಗಳುಳ್ಳವನಾಗಿಯೂ ಉನ್ನತವಾದ ಸಹಸ್ರಶೂಲಧಾರಿಯಾಗಿಯೂ ಸಹಸ್ರಾಭರಣಧಾರಿಯಾಗಿಯೂ ಇರುವ ನಿನಗೆ ನಮಸ್ಕಾರಗಳು. ಬಾಲಕರನ್ನೂ ಭೃತ್ಯರನ್ನೂ ರಕ್ಷಿಸತಕ್ಕವನಾಗಿಯೂ ಬಾಲ

ಬಾಲಾನುಚರಗೋಪ್ತ್ರೇ ಚ ಬಾಲಲೀಲಾವಿಲಾಸಿನೇ ।
ನಮೋ ಬಾಲಾಯ ವೃದ್ಧಾಯ ಕ್ಷುಬ್ಧಾಯ ಕ್ಷೋಭಣಾಯ ಚ ॥೯೭॥

ಗಂಗಾಲುಲಿತಕೇಶಾಯ ಮುಂಜಿಕೇಶಾಯ ವೈ ನಮಃ ।
ನಮಃ ಷಟ್ಕರ್ಮತುಷ್ಟಾಯ ತ್ರಿಕರ್ಮನಿರತಾಯ ಚ ॥೯೮॥

ನಗ್ನಪ್ರಾಣಾಯ ಚಂಡಾಯ ಕೃಶಾಯಾಸ್ಫೋಟನಾಯ ಚ ।
ಧರ್ಮಾರ್ಥಕಾಮಮೋಕ್ಷಾಣಾಂ ಕಥ್ಯಾಯ ಕಥನಾಯ ಚ ॥೯೯॥

ಸಾಂಖ್ಯಾಯ ಸಾಂಖ್ಯಮುಖ್ಯಾಯ ಸಾಂಖ್ಯಯೋಗಮುಖಾಯ ಚ ।
ನಮೋ ವಿರತರಥ್ಯಾಯ ಚತುಷ್ಪಥರಥಾಯ ಚ ॥೧೦೦॥

ಲೀಲೆಯಿಂದ ವಿಹರಿಸುವವನೂ ಬಾಲನೂ ವೃದ್ಧನೂ ವ್ಯಾಕುಲಹೊಂದಿದವನೂ ಹೊಂದಿಸುವವನೂ ಆಗಿರುವ ನಿನಗೆ ನಮಸ್ಕಾರಗಳು. ತಲೆಯಮೇಲಿರುವ ಗಂಗೆಯಿಂದ ಕೆದರಲ್ಪಟ್ಟ ಕೇಶಪಾಶವುಳ್ಳವನೂ ಸೂಕ್ಷ್ಮದೀರ್ಘಕೇಶನೂ ಷಟ್ಕರ್ಮರೂಪನೂ ತುಷ್ಟನೂ (ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ, ಪ್ರತಿಗ್ರಹ ಇವೇ ಬ್ರಾಹ್ಮಣನಿಗೆ ಹೇಳಿರುವ ಷಟ್ಕರ್ಮಗಳು. ಇವುಗಳಲ್ಲಿ ಮೂರು ಆತ್ಮಾರ್ಥವಾಗಿಯೂ ಮೂರು ಜೀವಿತಾರ್ಥವಾಗಿಯೂ ಇವೆ.) ತ್ರಿಕರ್ಮದಲ್ಲಿ ಆಸಕ್ತನೂ (ಸೃಷ್ಟಿ ಸ್ಥಿತಿ ಸಂಹಾರಗಳು ತ್ರಿಕರ್ಮಗಳು) ದಿಗಂಬರತ್ವಜೀವಿತನೂ ಭಯಂಕರನೂ ಸೂಕ್ಷ್ಮರೂಪನೂ ನಾಶಕಸ್ವಭಾವನೂ ಧರ್ಮಾರ್ಥಕಾಮಮೋಕ್ಷಗಳ ಸ್ವರೂಪನೂ ಸ್ವರೂಪಪ್ರಕಾಶಕನೂ ಆಗಿರುವ ನಿನಗೆ ಅನಂತ ನಮಸ್ಕಾರಗಳು.

೧೦೦-೧೦೩. ಸಂಖ್ಯಾ ಎಂದರೆ ಬುದ್ಧಿ. ಬುದ್ಧಿಗ್ರಾಹ್ಯವಾದ ಪ್ರಮೇಯ ಸ್ವರೂಪನೂ ಜ್ಞಾನಿಗಳಲ್ಲಿ ಅಗ್ರೇಸರನೂ ಸಾಂಖ್ಯಯೋಗತತ್ವಗಳ ಅನುಷ್ಠಾನಶೀಲನೂ ಕುದುರೆಗಳಿಲ್ಲದಿದ್ದರೂ ಅಥವಾ ವಿಶ್ರಾಂತಿ ಇಲ್ಲದ ವೇದಗಳೆಂಬ ಕುದುರೆಗಳುಳ್ಳವನಾಗಿದ್ದರೂ ಚತುಷ್ಪಥವೆಂಬ ರಥಸಂಚಾರಿಯೂ (ನಿರಾಶ್ರಯನಿವಾಸಿ ಎಂದರ್ಥ) ಕೃಷ್ಣಾಜಿನಧಾರಿಯಾಗಿಯೂ ಸಿಹ್ಮದಂತೆ ಊರ್ಧ್ವಕೇಶವುಳ್ಳವನಾಗಿಯೂ

ಕೃಷ್ಣಾಜಿನೋತ್ತರೀಯಾಯ ಹರಿಕೇಶ ನಮೋಽಸ್ತು ತೇ ।
ತ್ರ್ಯಂಬಕಾಂಬಿಕನಾಥಾಯ ವ್ಯಕ್ತಾವ್ಯಕ್ತಾಯ ವೇಧಸೇ ॥ ೧೦೧ ॥

ಕಾಮಕಾಮದ ಕಾಮಘ್ನ ತೃಪ್ತಾತೃಪ್ತ ವಿಚಾರಿಣೇ ।
ನಮಃ ಸರ್ವದಯಾಪಘ್ನ ಕಲ್ಪಸಂಧ್ಯಾವಿಚಾರಿಣೇ ॥ ೧೦೨ ॥

ಮಹಾಸತ್ವ ಮಹಾಬಾಹೋ ಮಹಾಬಲ ನಮೋಽಸ್ತು ತೇ ।
ಮಹಾಮೇಘ ಧರಪ್ರಖ್ಯ ಮಹಾಕಾಲ ಮಹಾದ್ಯುತೇ ॥ ೧೦೩ ॥

ಮೇಘಾವರ್ತ ಯುಗಾವರ್ತ ಚಂದ್ರಾರ್ಕಪತಯೇ ನಮಃ ।
ತ್ವಮನ್ನ ಮನ್ನಭೋಕ್ತಾ ಚ ಪಕ್ವಭುಕ್ಪಾವನೋಽನಲಃ ॥ ೧೦೪ ॥

ಇರುವ ನಿನಗೆ ಅನಂತ ವಂದನೆಗಳು. ಮುಖತ್ರಯವುಳ್ಳ ಅಂಬಿಕೆಗೆ ನಾಥನಾಗಿಯೂ ವ್ಯಕ್ತಾವ್ಯಕ್ತಸಮಸ್ತವಸ್ತುಸ್ವರೂಪನಾಗಿಯೂ ಸೃಷ್ಟಿಕರ್ತನಾಗಿಯೂ ಕಾಮ್ಯವಸ್ತು ಸ್ವರೂಪನಾಗಿಯೂ ಇಷ್ಟಾರ್ಥಪ್ರದನಾಗಿಯೂ (ಅಥವಾ ಕಾಮಕಾಮದ ಕಾಮಕಾಮ ರೆಂದರೆ ಸ್ವಚ್ಛಂದಚಾರಿಗಳು ಅವರುಗಳನ್ನು ನಾಶಮಾಡುವವನೆಂದೂ ಅರ್ಥ ಹೇಳ ಬಹುದು) ಮನ್ಮಥನಾಶಕನೂ ತೃಪ್ತರ ಮತ್ತು ಅತೃಪ್ತರ ಸ್ವರೂಪಜ್ಞಾನವುಳ್ಳವ ನಾಗಿಯೂ ಸರ್ವರ ವಿಷಯದಲ್ಲೂ ದಯಾರಹಿತನಾಗಿಯೂ ಮಹಾಪ್ರಲಯವೆಂಬ ಸಂಧ್ಯಾಕಾಲದಲ್ಲಿ ವಿಹರಿಸುವ ಮತ್ತು ಸಾಮರ್ಥ್ಯವುಳ್ಳವನಾಗಿಯೂ ಬಲಿಷ್ಠಬಾಹು ಗಳುಳ್ಳವನಾಗಿಯೂ ಬಲಶಾಲಿಯಾಗಿಯೂ ಇರುವ ನಿನಗೆ ಅನೇಕ ನಮಸ್ಕಾರಗಳು. ಮಹಾಮೇಘದಂತೆ ಸಮದೃಷ್ಟಿಯುಳ್ಳವನೇ ಅಥವಾ ಪ್ರಲಯಕಾಲದ ಮೇಘದಂತೆ ಸರ್ವನಾಶಕನೇ ಪರ್ವತದಂತೆ ಗಂಭೀರೋನ್ನತಮೂರ್ತಿಯೇ ಪ್ರಲಯಕಾಲಸ್ವರೂ ಪನೇ ಮಹಾತೇಜಸ್ವಿಯೇ (ಪ್ರಲಯಕಾಲದಲ್ಲಿ) ಮಹಾಮೇಘಪ್ರವರ್ತಕನೇ, ಯುಗೋಪಸಂಹಾರಮೂರ್ತಿಯೇ ಚಂದ್ರಸೂರ್ಯಾದಿಗಳಿಗೂ ನಿಯಾಮಕನೇ ನಿನಗೆ ಅನಂತ ವಂದನೆಗಳು (ಈ ಪ್ರಕರಣದಲ್ಲಿ ನಿರೂಪಿಸಿರುವ ಅರ್ಥವು ಬಹಳ ಸಂಗ್ರಹ ರೂಪವಾಗಿದೆ.)

೧೦೪-೧೦೭. ಎಲ್ಲಾ ಭೋಜ್ಯವಸ್ತುವೂ ನೀನೇ ಆಗಿದ್ದೀಯೆ. ಭೋಜನ ಮಾಡುವವನೂ ನೀನೇ ಆಗಿದ್ದೀಯೆ. ಪಕ್ವಾನ್ನವನ್ನು ಭುಂಜಿಸುವ ಅಗ್ನಿಯೂ ನೀನೇ ಆಗಿದ್ದೀಯೆ. ಮನುಷ್ಯನೇ ಮೊದಲಾದ ಪ್ರಾಣಿಗಳು ಪಕ್ಷಿಗಳೇ ಮೊದಲಾದ

ಜರಾಯುಜಾಶ್ಚಾಂಡಜಾಶ್ಚ ಸ್ವೇದೋದ್ಭಿಜ್ಜಾಶ್ಚ ತೇ ನಮಃ ॥
ತ್ವಮೇವ ದೇವದೇವೇಶ ಭೂತಗ್ರಾಮಶ್ಚತುರ್ವಿಧಃ ॥ ೧೦೫ ॥

ಸ್ರಷ್ಟಾ ಚರಾಚರಸ್ಯಾಸ್ಯ ಪಾತಾ ಹಂತಾ ತಥೈವ ಚ ।
ತ್ವಾಮಾಹುಃ ಬ್ರಹ್ಮ ವಿದ್ವಾಂಸಃ ಪರಂ ಬ್ರಹ್ಮ ವಿದಾಂಗತಿಃ ॥ ೧೦೬ ॥

ಮನಸಃ ಪರಮಂ ಜ್ಯೋತಿಃ ಜ್ಯೋತಿಸ್ತ್ವಂ ಜ್ಯೋತಿಷಾ ಮಪಿ ।
ಹಂಸೋ ವೃಕ್ಷೋ ಮಧುಕರಃ ಪ್ರಾಹುಸ್ತ್ವಾಂ ಬ್ರಹ್ಮವಾದಿನಃ ॥ ೧೦೭ ॥

ಯಜ್ಞೇಷ್ಟಕಾಃ ಶ್ರೇಷ್ಠಕಶ್ಚ ತ್ವಾಮಾಹುರ್ಮುನಯಸ್ತಥಾ ।
ಪಠ್ಯಸೆ ಸ್ತುತಿಭಿರ್ನಿತ್ಯಂ ವೇದೋಪನಿಷದಾಂ ಗಣೈಃ ॥ ೧೦೮ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾವರ್ಣಾವರಾಶ್ಚ ಯೆ ।
ತ್ವಮೇವ ಮೇಘಸಂಘಾಶ್ಚ ವಿದ್ಯುತೋಽಶನಿಗರ್ಜಿತಂ ॥ ೧೦೯ ॥

ಮೊಟ್ಟೆಯಿಂದ ಹುಟ್ಟುವ ಪ್ರಾಣಿಗಳು ಕ್ರಿಮಿಕೀಟಗಳೇ ಮೊದಲಾದ ಬೆವರಿನಿಂದ ಹುಟ್ಟುವ ಪ್ರಾಣಿಗಳು ಲತೆ ಗಿಡ ಮೊದಲಾದ ಮೊಳಕೆಯಿಂದ ಉಂಟಾಗುವ ಸಸ್ಯಗಳು ಎಲ್ಲವೂ ನಿನ್ನ ಸ್ವರೂಪವೇ ಆಗಿರುತ್ತವೆ. (ಎಲ್ಲವೂ ಅವನ ಶರೀರವಾದುದರಿಂದ) ಎಲೈ ದೇವತಾಸಾರ್ವಭೌಮನೇ, ನಾಲ್ಕುವಿಧವಾದ ಭೂತಸಮುದಾಯವೂ ಈ ಎಲ್ಲಾ ಪದಾರ್ಥಗಳ ಸೃಷ್ಟಿಕರ್ತನೂ ಪಾಲಕನೂ ನಾಶಕನೂ ನೀನೇ ಆಗಿರುವೆ. ಬ್ರಹ್ಮಜ್ಞಾನಿಗಳಿಗೆ ನೀನೆ ಗತಿಪ್ರದನೆಂದೂ ಬ್ರಹ್ಮರೂಪಿಯೆಂದೂ ವಿದ್ವಾಂಸರು ಹೇಳುತ್ತಾರೆ. ಮನಸ್ಸಿಗೆ ಪ್ರಕಾಶವನ್ನುಂಟುಮಾಡುವ ಜ್ಯೋತಿಯೂ ನೀನೆ. ಪ್ರಕಾಶಕರಾದ ಸೂರ್ಯಾದಿಗಳಿಗೂ ಪ್ರಕಾಶಶಕ್ತಿಯನ್ನು ಕೊಡುವವನೂ ನೀನೇ. ಉತ್ಕೃಷ್ಟವಾದ ಹಂಸವೂ ಅಚೇತನವಾದ ಮರವೂ ಕ್ಷುದ್ರಪ್ರಾಣಿಯಾದ ದುಂಬಿಯೂ ಸಹ ನಿನ್ನ ಸ್ವರೂಪವೇ ಆಗಿದೆಯೆಂದು ಬ್ರಹ್ಮವಾದಿಗಳು ಹೇಳುತ್ತಾರೆ.

೧೦೮-೧೧೧. ಯಜ್ಞದಲ್ಲಿ ಉಪಯೋಗಿಸುವ ಇಟ್ಟಿಗೆಗಳೂ ಪ್ರಧಾನ ಯಜ್ಞಕರ್ತನೂ ನೀನೇ ಆಗಿರುವೆ ಎಂದು ಜ್ಞಾನಿಗಳಾದ ಋಷಿಗಳು ಹೇಳುತ್ತಾರೆ. ವೇದಗಳಿಂದಲೂ ಉಪನಿಷತ್ತಿನ ಗುಂಪಿನಿಂದಲೂ ನೀನೇ ಸ್ತುತಿಸಲ್ಪಡುತ್ತಿದ್ದೀಯೆ. ಬ್ರಾಹ್ಮಣಾದಿ ವರ್ಣಗಳೂ ನಿಹೀನವಾದ ವರ್ಣಗಳೂ ಮಳೆಗರೆಯುವ ಮಹಾ ಮೇಘಗಳೂ ಮಿಂಚುಗಳೂ ಸಿಡಿಲುಗಳೂ ಎಲ್ಲವೂ ನೀನೆ ಆಗಿರುವೆ. ನೀನೇ ಕಾಲರೂಪಿಯಾಗಿ

ಸಂವತ್ಸರಸ್ತ್ವಂ ಋತವೋ ಮಾಸಾ ಮಾಸಾರ್ಧಮೇವ ಚ ।
ಯುಗಾ ನಿಮೇಷಾಃ ಕಾಷ್ಠಾಶ್ಚ ನಕ್ಷತ್ರಾಣಿ ಗ್ರಹಾ ಬಲಾಃ ॥ ೧೧೦ ॥

ವೃಕ್ಷಾಣಾಂ ಕಕುಭೋಸಿತ್ವಂ ಗಿರೀಣಾಂ ಹಿಮವಾನ್ ಗಿರಿಃ ।
ವ್ಯಾಘ್ರೋ ಮೃಗಾಣಾಂ ಪತತಾಂ ತಾರ್ಕ್ಷ್ಯೋ ನಂತಶ್ಚ ಭೋಗಿನಾಂ ॥ ೧೧೧ ॥

ಕ್ಷೀರೋದೋಸ್ಯುದಧೀನಾಂ ಚ ಯಂತ್ರಾಣಾಂ ಧನುರೇವ ಚ ।
ವಜ್ರಂ ಪ್ರಹರಣಾನಾಂ ಚ ವ್ರತಾನಾಂ ಸತ್ಯಮೇವ ಚ ॥ ೧೧೨ ॥

ತ್ವಮೇವ ದ್ವೇಷ ಇಚ್ಛಾ ಚ ರಾಗೋ ಮೋಕ್ಷಃ ಕ್ಷಮಾಕ್ಷಮೆ ।
ವ್ಯವಸಾಯೋ ಧೃತಿರ್ಲೋಭಃ ಕಾಮಕ್ರೋಧೌ ಜಯಾಜಯೌ ॥ ೧೧೩ ॥

ತ್ವಂ ಶರೀ ತ್ವಂ ಗದೀ ಚಾಪಿ ಖಟ್ವಾಂಗೀ ಚ ಶರಾಸನೀ ।
ಛೇತ್ತಾ ಭೇತ್ತಾ ಪ್ರಹರ್ತಾಸಿ ಮಂತಾ ನೇತಾ ಸನಾತನಃ ॥ ೧೧೪ ॥

ಸಂವತ್ಸರ, ಋತು, ಮಾಸ, ಅರ್ಧಮಾಸ, ಯುಗ, ನಿಮಿಷ, ಕಾಷ್ಠಗಳ ರೂಪದಿಂದ ಇರುವೆ. ನಕ್ಷತ್ರ, ಗ್ರಹ, ದುರ್ಬಲಗ್ರಹ ಇವುಗಳೂ ನೀನೇ ಆಗಿರುವೆ. ಆಯಾಯ ಜಾತಿಯ ವಸ್ತುವಿನಲ್ಲಿ ಉತ್ಕೃಷ್ಟವಸ್ತುವೆಲ್ಲವೂ ನಿನ್ನ ಸ್ವರೂಪಕ್ಕೇ ಸೇರಿದುದು. ಮರಗಳಲ್ಲಿ ಕಕುಭ, (ಅರ್ಜುನವೃಕ್ಷ, ಮಡ್ಡಿಮರ) ವೃಕ್ಷವೂ ಪರ್ವತಗಳಲ್ಲಿ ಹಿಮವಂತನೂ ಮೃಗಗಳಲ್ಲಿ ಹುಲಿಯೂ ಪಕ್ಷಿಗಳಲ್ಲಿ ಗರುಡನೂ ಸರ್ಪಗಳಲ್ಲಿ ಅನಂತನೂ ನಿನ್ನ ಸ್ವರೂಪವೇ ಆಗಿವೆ.

೧೧೨-೧೧೪. ಸಮುದ್ರಗಳಲ್ಲಿ ಕ್ಷೀರಸಮುದ್ರವೂ ಯಂತ್ರಗಳಲ್ಲಿ ಧನುಸ್ಸೂ, ಆಯುಧಗಳಲ್ಲಿ ವಜ್ರವೂ ವ್ರತಗಳಲ್ಲಿ ಸತ್ಯವ್ರತವೂ ನೀನೇ ಆಗಿದ್ದೀಯೆ. ಇಚ್ಛಾ, ದ್ವೇಷ, ರಾಗ, ಮೋಕ್ಷ, ಕ್ಷಮೆ, ಅಕ್ಷಮೆ, ಪ್ರಯತ್ನ, ಧೈರ್ಯ, ಲೋಭ, ಕಾಮಕ್ರೋಧಗಳು, ಜಯಾಪಜಯಗಳು, ಎಲ್ಲವೂ ನೀನೇ ಆಗಿದ್ದೀಯೆ. ಶರ, ಗದೆ, ಖಟ್ವಾಂಗ (ಯೋಗದಂಡ) ಧನಸ್ಸು ಎಲ್ಲವೂ ನಿನ್ನದೇ ಆಗಿದೆ. ಶಾಶ್ವತನಾದ ನೀನೇ ಛೇದಿಸುವವನೂ ಭೇದಿಸುವವನೂ ಪ್ರಹರಿಸುವವನೂ ತಿಳುವಳಿಕೆಯುಳ್ಳವನೂ ನಾಯಕನೂ ಆಗಿರುವೆ.

*ದಶಲಕ್ಷಣಸಂಯುಕ್ತೋ ಧರ್ಮೋऽರ್ಥಃ ಕಾಮ ಏವ ಚ ।
ಸಮುದ್ರಾಃ ಸರಿತೋ ಗಂಗಾ ಪರ್ವತಾಶ್ಚ ಸರಾಂಸಿ ಚ ॥ ೧೧೫ ॥

ಲತಾ ವಲ್ಲ್ಯಃ ತೃಣೌಷಧ್ಯಃ ಪಶವೋ ಮೃಗಪಕ್ಷಿಣಃ ।
ಪೃಥುಕರ್ಮ ಗುಣಾರಂಭಃ ಕಾಲಃ ಪುಷ್ಪಫಲಪ್ರದಃ ॥ ೧೧೬ ॥

ಆದಿಶ್ಚಾನ್ತಶ್ಚ ದೇವಾನಾಂ ಗಾಯತ್ರೀ ಪ್ರಣವಸ್ತಥಾ ।
ಲೋಹಿತೋ ಹರಿತೋ ನೀಲಃ ಕೃಷ್ಣಃ ಪೀತಃ ಸ್ಸಿತಸ್ತಥಾ ॥ ೧೧೭ ॥

ಕದ್ರುಶ್ಚ ಕಪಿಲಶ್ಚೈವ ಕಪೋತೋ ಮೇಚಕಸ್ತಥಾ ।
ಸವರ್ಣಶ್ಚಾಪ್ಯವರ್ಣಶ್ಚ ಕರ್ತಾ ಹರ್ತಾ ತ್ವಮೇವ ಹಿ ॥ ೧೧೮ ॥

ತ್ವಮಿಂದ್ರಶ್ಚ ಯಮಶ್ಚೈವ ವರುಣೋ ಧನದೋऽನಿಲಃ ।
ಉಪಪ್ಲವಸ್ತತ್ರ ಭಾನುಃ ಸ್ವರ್ಭಾನುರ್ಭಾನುರೇವ ಚ ॥ ೧೧೯ ॥

೧೧೫-೧೧೮. ಆಚರಿಸಲು ಅರ್ಹವಾದ *ದಶವಿಧ ಧರ್ಮವೂ ಅರ್ಥಕಾಮಗಳೂ, ಸಮುದ್ರ, ನದಿ, ಗಂಗಾದಿಮಹಾನದಿಗಳು, ಪರ್ವತ, ಸರೋವರ, ಲತೆಗಳು, ತೃಣಾದಿಗಳು, ಮೃಗಪಕ್ಷಿಗಳೇ ಮೊದಲಾದ ಪ್ರಾಣಿಗಳು, ಎಲ್ಲವೂ ನೀನೇ ಆಗಿರುತ್ತೀಯೆ. ಕರ್ಮಗಳಿಗೂ, ಗುಣಗಳಿಗೂ, ಪುಷ್ಪಫಲಾದಿಗಳಿಗೂ ಆರಂಭಕವಾದ ಪೃಥುಕಾಲವೂ, ಖಂಡಕಾಲವೂ ನೀನೇ ಆಗಿದ್ದೀಯೆ. ದೇವತೆಗಳಿಗೆ ಮೊದಲನೆಯವನೂ, ಕೊನೆಯವನೂ ನೀನೇ ಆಗಿದ್ದೀಯೆ. ಗಾಯತ್ರೀ, ಓಂಕಾರ, ಕೆಂಪು, ಹಸುರು, ನೀಲ, ಕಪ್ಪು, ಹಳದಿ, ಬಿಳುಪು ಮೊದಲಾದ ವರ್ಣಗಳೂ, ಕದ್ರುವೆಂಬ ಸರ್ಪವೂ, ಕಪಿಲನೂ, ಕಪೋತವೂ, ಸವರ್ಣಾವರ್ಣಪದಾರ್ಥಗಳೂ, ಕರ್ತೃವೂ, ಸಂಹರ್ತೃವೂ ನೀನೇ ಆಗಿದ್ದೀಯೆ. (ಈ ಪ್ರಕರಣದಲ್ಲೆಲ್ಲಾ ಈಶ್ವರನು ಸರ್ವಶರೀರಿಯಾದುದರಿಂದ ಮೂರ್ತಾಮೂರ್ತಸರ್ವಪ್ರಮೇಯವಸ್ತುಗಳೂ ಅವನ ದೇಹದಲ್ಲಿ ಸೇರಿರುವದ್ದರಿಂದ ವಿಶಿಷ್ಟವಸ್ತುವಾಗಿ ಅವನೇ ಇರುವನೆಂದು ತಾತ್ಪರ್ಯ.)

೧೧೯-೧೨೧. ಇಂದ್ರನೂ, ಯಮನೂ, ವರುಣನೂ, ಕುಬೇರನೂ, ವಾಯುವೂ ಸಹ ನೀನೇ ಆಗಿದ್ದೀಯೆ. ಆ ದೇವತೆಗಳಲ್ಲಿ ಪ್ರಲಯದಲ್ಲಿ ನಾಶಕ್ಕೆ ಕಾರಣವಾದ ಭಾನುವೂ, ರಾಹುವೂ, ಸೂರ್ಯನೂ ಸಹ ನಿನಗೆ ಸಹಕಾರಿಗಳಾದ

---

*ಧೃತಿಃ ಕ್ಷಮಾ ದಮೋऽಸ್ತೇಯಂ ಶೌಚಮಿಂದ್ರಿಯನಿಗ್ರಹಃ। ಧೀರ್ವಿದ್ಯಾ ಸತ್ಯಮಕ್ರೋಧೋದಶಕಂ ಧರ್ಮಲಕ್ಷಣಂ॥ ಎಂಬ ಮನುಧರ್ಮಶಾಸ್ತ್ರವು ಇಲ್ಲಿ ಸೂಚಿತವಾಗಿದೆ.

ಶಿಷ್ಯಾ ಹೌತ್ರಂ ತ್ರಿಸೌವರ್ಣಂ ಯಜುಷಾಂ ಶತರುದ್ರಿಯಂ ।
ಪವಿತ್ರಂ ಚ ಪವಿತ್ರಾಣಾಂ ಮಂಗಲಾನಾಂ ಚ ಮಂಗಲಂ ॥ ೧೨೦ ॥

ತಿಂದುಕೋ* ಗಿರಿಜೋ ವೃಕ್ಷೋ ಮುದ್ಗಂ ಚಾಖಿಲಜೀವಿನಾಂ ।
ಪ್ರಾಣಾಃ ಸತ್ವಂ ರಜಶ್ಚೈವ ತಮಶ್ಚ ಪ್ರತಿಪತ್ಪತಿಃ ॥ ೧೨೧ ॥

ಪ್ರಾಣೋಽಪಾನಃ ಸಮಾನಶ್ಚ ಉದಾನೋ ವ್ಯಾನ ಏವ ಚ ।
ಉನ್ಮೇಷಶ್ಚ ನಿಮೇಷಶ್ಚ ಕ್ಷುತಂ ಜೃಂಭಿತಮೇವ ಚ ॥ ೧೨೨ ॥

ಲೋಹಿತಾಂತರ್ಗತೋ ದೃಷ್ಟಿಃ ಮಹಾವಕ್ತ್ರೋ ಮಹೋದರಃ ।
ಶುಚಿರೋಮಾ ಹರಿಶ್ಮಶ್ರುಃ ಊರ್ಧ್ವಕೇಶಶ್ಚಲಾಚಲಃ ॥ ೧೨೩ ॥

ಗೀತವಾದಿತ್ರನೃತ್ಯಜ್ಞೋ ಗೀತವಾದಿತ್ರಕಪ್ರಿಯಃ ।
ಮತ್ಸ್ಯೋ ಜಾಲೋ ಜಲೌಕಾಶ್ಚ ಕಾಲಕೇಲಿಃ ಕಲಾಕಲಿಃ ॥ ೧೨೪ ॥

ಶಿಷ್ಯರುಗಳು. ನಿನ್ನನ್ನೇ ಅಧಿಕರಿಸಿರುವ ಹೌತ್ರಭಾಗದ ಸುವರ್ಣಮಂತ್ರವೂ, ಯಜುರ್ಭಾಗದಲ್ಲಿ ಸೇರಿರುವ ಶತರುದ್ರಿಯವೂ ಬಹಳ ಪವಿತ್ರವಾಗಿಯೂ, ಮಂಗಲಪ್ರದವಾಗಿಯೂ ಇವೆ. ಅಡವಿಯಲ್ಲಿ ಹುಟ್ಟಿರುವ ತೊಬರದ ಗಿಡವೂ ಎಲ್ಲರಿಗೂ ಜೀವನಪ್ರದವಾದ ಮುದ್ಗ (ಹೆಸರು) ವೂ, ಪ್ರಾಣಗಳೂ, ಸತ್ವರಜಸ್ತಮೋಗುಣಗಳೂ, ಅಗ್ನಿಯೂ ಸಹ ನೀನೇ ಆಗಿರುವೆ.

೧೨೨-೧೨೪ ಪ್ರಾಣ, ಅಪಾನ, ಸಮಾನ, ಉದಾನ, ವ್ಯಾನವೆಂಬ ವಾಯುವಿಶೇಷಗಳೂ, ಕಣ್ಣಿನ ಉನ್ಮೇಷನಿಮೇಷಗಳೂ, ಶೀನು, ಆಕಳಿಕೆ ಮೊದಲಾದ ಕಾರ್ಯಗಳೂ, ಕೆಂಪಾದ ಕಣ್ಣಿನ ದೃಷ್ಟಿವಿಶೇಷವೂ, ಮಹಾವಕ್ತ್ರನೂ, ಮಹೋದರನೂ ನೀನೇ ಆಗಿದ್ದೀಯೆ. ಶುಭ್ರವಾದ ರೋಮವುಳ್ಳವನೂ, ಸಿಂಹದಂತಿರುವ ಮುಖರೋಮವುಳ್ಳವನೂ, ಮೇಲ್ಮುಖವಾದ ಕೇಶಗಳುಳ್ಳವನೂ, ಚಂಚಲಸ್ವಭಾವನೂ, ಗೀತವಾದ್ಯನೃತ್ಯಗಳನ್ನು ತಿಳಿದವನೂ, ಅವುಗಳಲ್ಲಿ ಪ್ರೀತಿಯುಳ್ಳವನೂ, ಮೀನೂ, ಅದಕ್ಕೆ ಬಂಧಕವಾದ ಬಲೆಯೂ, ಜಲಚರಪ್ರಾಣಿಯೂ, ಕಾಲವಶದಿಂದ ಉಂಟಾಗುವ ನಾಶದಲ್ಲಿ ಪ್ರೀತಿಯುಳ್ಳವನೂ, ವಿದಗ್ಧತೆಗೆ ಶತ್ರುವೂ ನೀನೇ ಆಗಿದ್ದೀಯೆ.

* ಇಲ್ಲಿ ತಿಂದುಕವೆಂದರೆ ತಿಂದುಕಃ ಸ್ಫೂರ್ಜಕಃ ಎಂಬ ಕೋಶದಿಂದ ಕಾರಸ್ಕಂದ (ತೂಬರ) ವೆಂದರ್ಥ ಹೇಳಲು ಅವಕಾಶವಿದೆ. ಆದರೆ ಪ್ರಕರಣಕ್ಕೆ ಬಿಲ್ವನೈಕ್ಷವಿಶೇಷವೆಂದು ಹೇಳುವದು ಉಚಿತ. "ಏತಸ್ಕಂದ ವಿಪಕ್ವತಿಂದುಫಲ" ಎಂಬ ಕವಿಪ್ರಯೋಗವು ಇದಕ್ಕೆ ಅನುಗುಣವಾಗಿದೆ.

ಅಕಾಲಶ್ಚ ವಕಾಲಶ್ಚ ದುಷ್ಕಾಲಃ ಕಾಲಏವ ಚ ।
ಮೃತ್ಯುಶ್ಚ ಮೃತ್ಯುಕರ್ತಾ ಚ ಯಜ್ಞೋ ಯಜ್ಞಭಯಂಕರಃ ॥ ೧೨೫ ॥

ಸಂವರ್ತಕೋಽಂತಕಶ್ಚೈವ ಸಂವರ್ತಕಬಲಾಹಕಃ ।
ಘಂಟೋ ಘಂಟೀ ಮಹಾಘಂಟೀ ಚರೀ ಮಾಲೀ ಚ ಮಾತಲಿಃ ॥ ೧೨೬ ॥

ಬ್ರಹ್ಮಕಾಲಯಮಾಗ್ನೀನಾಂ ದಂಡೀ ಮುಂಡೀ ತ್ರಿಮುಂಡಧೃಕ್ ।
ಚತುರ್ಯುಗಶ್ಚತುರ್ವೇದಶ್ಚಾತುರ್ಹೋತ್ರಪ್ರವರ್ತಕಃ ॥ ೧೨೭ ॥

ಚಾತುರಾಶ್ರಮ್ಯನೇತಾ ಚ ಚಾತುರ್ವರ್ಣ್ಯಕರಸ್ತಥಾ ।
ನಿತ್ಯಲಕ್ಷಪ್ರಿಯೋ ಮೂರ್ತೋ ಗಣಾಧ್ಯಕ್ಷೋ ಗಣಾಧಿಪಃ ॥ ೧೨೮ ॥

೧೨೫-೧೨೭. ಅನರ್ಹವಾದ ಕಾಲ, ವಿರುದ್ಧಕಾಲ, ದುಷ್ಫಲವುಂಟುಮಾಡುವ ಕಾಲವೆಂಬ ಖಂಡಕಾಲವೂ, ಮಹಾಕಾಲವೂ, ಮೃತ್ಯುವೂ, ಮೃತ್ಯುಪ್ರದನೂ. ಯಜ್ಞವೂ, ಯಜ್ಞಶತ್ರುವೂ ನೀನೇ ಆಗಿದ್ದೀಯೆ. ಪ್ರಲಯವನ್ನುಂಟುಮಾಡುವವನೂ, ನಾಶಕನೂ, ಪ್ರಲಯಕಾಲದಮೇಘವೂ ನೀನೇ ಆಗಿದ್ದೀಯೆ. ಘಂಟಾಸ್ವರೂಪನೂ, ಘಂಟಾಧಾರಿಯೂ, ಮಹಾಘಂಟಾಧಾರಿಯೂ ನೀನೆ ಆಗಿರುತ್ತೀಯೆ. (ಇಲ್ಲಿ ಪ್ರಾಣಿಗಳ ಜಾಗರೂಕತೆಗೆ ಸೂಚಕವಾದ ಅಟ್ಟಹಾಸಧ್ವನಿಯೆಂದು ಮೊದಲನೇ ಮತ್ತು ಎರಡನೇ ಘಂಟಾಶಬ್ದಗಳಿಗೆ ಅರ್ಥಹೇಳಬೇಕೆಂದು ತೋರುತ್ತದೆ.) ಸರ್ವದಾ ಸಂಚಾರಶೀಲನೂ, ಮಾಲಾಧಾರಿಯೂ, ಪ್ರೇರಕನೂ ಆಗಿರುತ್ತೀಯೆ. ಬ್ರಹ್ಮ, ಕಾಲ, ಯಮ, ಅಗ್ನಿ ಇವರುಗಳಿಗೂ ಶಿಕ್ಷಕನಾಗಿಯೂ, ಮುಂಡಮಾಲಾಧಾರಿಯಾಗಿಯೂ, ಮೂರು ಮುಂಡಗಳನ್ನು ಪ್ರಧಾನವಾಗಿ ಧರಿಸಿರುವವನಾಗಿಯೂ, ಚತುರ್ಯುಗರೂಪನಾಗಿಯೂ, ಚತುರ್ವೇದರೂಪನಾಗಿಯೂ, ನಾಲ್ಕು ವಿಧವಾದ ಹೋತೃಶಾಸ್ತ್ರಕ್ಕೆ ಪ್ರವರ್ತಕನಾಗಿಯೂ (ಯಜ್ಞವಿದ್ಯಾಪ್ರವರ್ತಕನೆಂದೂ ತಾತ್ಪರ್ಯ) ಇದ್ದೀಯೆ.

೧೨೮-೧೩೦. ಬ್ರಹ್ಮಚರ್ಯವೇ ಮೊದಲಾದ ನಾಲ್ಕು ಆಶ್ರಮಗಳಿಗೂ ನಿಯಾಮಕನಾಗಿಯೂ, ಬ್ರಾಹ್ಮಣಾದಿ ನಾಲ್ಕು ವರ್ಣವನ್ನು ಏರ್ಪಡಿಸಿದನಾಗಿಯೂ, ಯಾವಾಗಲೂ ಗುರಿನೋಡುವುದರಲ್ಲಿಯೇ ಪ್ರೀತಿಯುಳ್ಳವನಾಗಿಯೂ, ಗಣಾಧ್ಯಕ್ಷನೂ

ರಕ್ತಮಾಲ್ಯಾಂಬರಧರೋ ಗಿರಿಕೋ ಗೈರಿಕಪ್ರಿಯಃ ।
ಶಿಲ್ಪೀ ಚ ಶಿಲ್ಪಿನಾಂ ಶ್ರೇಷ್ಠಃ ಸರ್ವಶಿಲ್ಪಪ್ರವರ್ತಕಃ ॥ ೧೨೯ ॥

ಭಗನೇತ್ರಾಂಕುಶಃ ಶಂಭುಃ ಪೂಷ್ಣೋದಂತವಿನಾಶನಃ ।
ಸ್ವಾಹಾಸ್ವಧಾವಷಟ್ಕಾರೋ ನಮಸ್ಕಾರೋ ನಮೋನಮಃ ॥ ೧೩೦ ॥

ಗೂಢವ್ರತೋ ಗುಹ್ಯತಪಾ ಸ್ತಾರಕಸ್ತಾರಕಾಮಯಃ ।
ಧಾತಾ ವಿಧಾತಾ ಸಂಧಾತಾ ಪೃಥಿವ್ಯಾಧರಣೆ ಪರಃ ॥ ೧೩೧ ॥

ಬ್ರಹ್ಮಾ ತಪಶ್ಚ ಸತ್ಯಂ ಚ ವ್ರತಚರ್ಯಮಥಾರ್ಜವಂ ।
ಭೂತಾತ್ಮಾ ಭೂತಕೃದ್ಭೂತಿರ್ಭೂತಭವ್ಯಭವೋದ್ಭವಃ ॥ ೧೩೨ ॥

ಭೂರ್ಭುವಃ ಸ್ವಋರ್ತಂ ಚೈವ ಧ್ರುವೋ ದಂತೋ ಮಹೇಶ್ವರಃ ।
ದೀಕ್ಷಿತೋಽದೀಕ್ಷಿತಃ ಕಾಂತೋ ದುರ್ದಾಂತೋ ದಾಂತಸಂಭವಃ ॥ ೧೩೩ ॥

ಗಣಪತಿಸ್ವರೂಪನೂ ನೀನೆ ಆಗಿದ್ದೀಯೆ. ಕೆಂಪಾದ ಹೂವು, ಮತ್ತು ವಸ್ತ್ರಗಳನ್ನು ಧರಿಸಿಯೂ, ಪರ್ವತವಾಸಿಯಾಗಿ ಗೈರಿಕಾದಿಧಾತುಗಳಲ್ಲಿ ಪ್ರೀತಿಯುಳ್ಳವನೂ, ಶಿಲ್ಪಿಯೂ, ಶಿಲ್ಪಿಗಳಲ್ಲಿ ಮುಖ್ಯನೂ, ಸರ್ವಶಿಲ್ಪಗಳಿಗೆ ಪ್ರವರ್ತಕನೂ, ನೀನೇ ಆಗಿದ್ದೀಯೆ. ಭಗನೆಂಬ ದೇವತೆಗೆ ನಾಶಕನಾಗಿಯೂ, ಸುಖಪ್ರದನೂ, ಸೂರ್ಯನ ಹಲ್ಲುಗಳನ್ನು ನಾಶಪಡಿಸಿದವನೂ, : ಸ್ವಾಹಾ, ಸ್ವಧಾ, ವಷಟ್ಕಾರ, ನಮಸ್ಕಾರರೂಪ ನಾಗಿಯೂ ಇರುವ ನಿನಗೆ ನಮಸ್ಕಾರಗಳು.

೧೩೧-೧೩೩. ಗುಪ್ತವಾದ ವ್ರತವುಳ್ಳವನೂ, ಗುಪ್ತವಾದ ತಪಸ್ಸುಳ್ಳವನೂ, ಉತ್ತಾರಕನೂ, ತಾರಕಾಸುರನಾಶಕನೂ, ಭೂಮಿಗೆ ಸ್ರಷ್ಟೃವಾಗಿಯೂ, ಪೋಷಕ ನಾಗಿಯೂ ಇರುವೆ. ಬ್ರಾಹ್ಮಣ್ಯವೂ, ತಪಸ್ಸೂ, ಸತ್ಯ, ವ್ರತಾಚರಣ, ಋಜುತ್ವ ಎಲ್ಲವೂ ನೀನೇ ಆಗಿದ್ದೀಯೆ. ಪ್ರಾಣಿಗಳಿಗೆಲ್ಲಾ ಆತ್ಮರೂಪನಾಗಿಯೂ, ಮಹಾ ಭೂತಗಳಿಗೆ ಸ್ರಷ್ಟೃವಾಗಿಯೂ, ಐಶ್ವರ್ಯರೂಪನಾಗಿಯೂ, ಪ್ರಾಣಿಗಳ ಮಂಗಲೋ ತ್ಪತ್ತಿಗೆ ಕಾರಣನಾಗಿಯೂ, ವ್ಯಾಹೃತಿಸ್ವರೂಪನಾಗಿಯೂ, ಸತ್ಯಸ್ವರೂಪನಾಗಿಯೂ, ಶಾಶ್ವತವಾದ ಪ್ರಸಿದ್ಧಿಯುಳ್ಳವನಾಗಿಯೂ, ಮಹೇಶ್ವರನಾಗಿಯೂ ಇರುವೆ. ಹಾಗೆಯೇ ದೀಕ್ಷಿತನೂ, ಅದೀಕ್ಷಿತನೂ, ರಮಣೀಯನೂ, ವಿಕಾರಿಯೂ, ದಾಂತರಿಗೆ ಉತ್ಪಾದಕನೂ ಆಗಿರುವೆ.

ಚಂದ್ರಾಪವರ್ತೋ ಯುಗಾವರ್ತಃ ಸಂವರ್ತಃ ಸಂಪ್ರವರ್ತಕಃ ।
ಬಿಂದುಃ ಕಾಮೋಽಹ್ಯಣುಃ ಸ್ಥೂಲಃ ಕರ್ಣಿಕಾರಸ್ರಜಪ್ರಿಯಃ ॥ ೧೩೪ ॥

ನಂದಿಮುಖೋ ಭೀಮಮುಖಃ ಸುಮುಖೋ ದುರ್ಮುಖಸ್ತಥಾ ।
ಹಿರಣ್ಯಗರ್ಭಃ ಶಕುನಿಃ ಮಹೋರಗಪತಿರ್ವಿರಾಟ್ ॥ ೧೩೫ ॥

ಅಧರ್ಮಹಾ ಮಹಾದೇವೋ ದಂಡಧಾರೋ ಗಣೋತ್ಕಟಃ ।
ಗೋನರ್ದೋ ಗೋಪ್ರತಾರಶ್ಚ ಗೋವೃಷೇಶ್ವರವಾಹನಃ ॥ ೧೩೬ ॥

ತ್ರೈಲೋಕ್ಯಗೋಪ್ತಾ ಗೋವಿಂದೋ ಗೋಮಾರ್ಗೋ ಮಾರ್ಗ ಏವ ।
ಸ್ಥಿರಃ ಶ್ರೇಷ್ಠಶ್ಚ ಸ್ಥಾಣುಶ್ಚ ವಿಕೋಪಃ ಕೋಪ ಏವ ಚ ॥ ೧೩೭ ॥

೧೩೪-೧೩೭. ಅನೇಕ ಚಂದ್ರರಿಗೂ, ಅನೇಕ ಯುಗಗಳಿಗೂ, ಪ್ರವರ್ತಕನಾಗಿಯೂ, ಪ್ರಲಯರೂಪನಾಗಿಯೂ, ಪ್ರೇರಕನಾಗಿಯೂ, ಸೂಕ್ಷ್ಮರೂಪನಾಗಿಯೂ, ಕಾಮಸ್ವರೂಪನಾಗಿಯೂ, ಅಣುವಾಗಿಯೂ, ಮಹತ್ತಾಗಿಯೂ, ಕಣಿಗಿಲೆ ಹೂವಿನ ಮಾಲಿಕೆಯಲ್ಲಿ ಪ್ರಿಯನಾಗಿಯೂ ಇರುವೆ. ಹಸನ್ಮುಖನೂ, ರೌದ್ರಮುಖನೂ, ಪ್ರಸನ್ನಮುಖನೂ, ದುರ್ಮುಖನೂ ನೀನೇ ಆಗಿರುವೆ. (ಇದು ಸೃಷ್ಟಿ, ಸ್ಥಿತಿ, ಸಂಹಾರಭೇದದಿಂದ) ಉತ್ಕೃಷ್ಟವಾದ ಹಿರಣ್ಯಗರ್ಭನೂ, ನಿಕೃಷ್ಟವಾದ ಪಕ್ಷಿಯೂ, ಸರ್ಪರಾಜನೂ, ವಿರಾಟ್ಪುರುಷನೂ ನೀನೇ ಆಗಿರುವೆ. ಅಧರ್ಮನಾಶಕನಾಗಿಯೂ, ದೇವೋತ್ತಮನಾಗಿಯೂ, ದಂಡಧಾರಿಯಾಗಿಯೂ, ಪ್ರಮಥಗಣದಲ್ಲಿ ಪ್ರಣಯವುಳ್ಳವನಾಗಿಯೂ, ಗೋವುಗಳಂತಿರುವ ಪ್ರಜೆಗಳಿಗೆ ಹಿಂಸಕನಾಗಿಯೂ, ವಂಚನೆಯಿಂದ ನಾಶಪಡಿಸುವವನಾಗಿಯೂ, ಗೋವುಗಳಿಗೂ, ಎತ್ತುಗಳಿಗೂ ಒಡೆಯನಾದ ವೃಷಭವನ್ನೇ ವಾಹನವನ್ನಾಗಿ ಹೊಂದಿಯೂ ಇರುವೆ. ಮೂರು ಲೋಕಕ್ಕೂ ರಕ್ಷಕನಾಗಿಯೂ, ಪ್ರಜೆಗಳನ್ನಾಳುವನಾಗಿಯೂ, ಸ್ವಚ್ಛಂದಚಾರಿಯಾಗಿಯೂ, ಸನ್ಮಾರ್ಗರೂಪನಾಗಿಯೂ ಇರುವೆ. ಶಾಶ್ವತನಾಗಿಯೂ, ಶ್ರೇಷ್ಠನಾಗಿಯೂ, ಸ್ಥಾಣುಲಿಂಗರೂಪನಾಗಿಯೂ, ಕೋಪರಹಿತನಾಗಿಯೂ ಕೋಪಿಯಾಗಿಯೂ ಇರುವೆ.

ದುರ್ವಾರಣೋ ದುರ್ವಿಷಹೋ ದುಸ್ಸಹೋ ದುರತಿಕ್ರಮಃ ।
ದುರ್ಧರ್ಷೋ ದುಷ್ಪ್ರಕಾಶಶ್ಚ ದುರ್ದರ್ಶೋ ದುರ್ಜಯೋ ಜಯಃ ॥

ಶಶಾಂಕಾನಲಶೀತೋಷ್ಣಕ್ಷುತ್ತೃಷಾಶ್ಚ ಜರಾಮಯಾಃ ।
ಆಧಯೋ ವ್ಯಾಧಯಶ್ಚೈವ ಆಧಿಹಾ ವ್ಯಾಧಿನಾಶನಃ ॥ ೧೩೯ ॥

ಸಮೂಹಶ್ಚ ಸಮೂಹಶ್ಚ ಹಂತಾ ದೇವಃ ಸನಾತನಃ ।
ಶಿಖಂಡೀ ಪುಂಡರೀಕಾಕ್ಷಃ ಪುಂಡರೀಕವನಾಲಯಃ ॥ ೧೪೦ ॥

ತ್ರ್ಯಂಬಕೋ ದಂಡಧಾರಶ್ಚ ಉಗ್ರದಂಷ್ಟ್ರಃ ಕುಲಾಂತಕಃ ।
ವಿಷಾಗ್ರ್ಯಂಯಃ ಸುರಶ್ರೇಷ್ಠಃ ಸೋಮಪಾಃ ತ್ವಂ ಮರುತ್ಪತೇ ॥ ೧೪೧ ॥

೧೩೮-೧೪೦. ತಡೆಯಲಶಕ್ಯನಾಗಿಯೂ, ಸಹಿಸಲಶಕ್ಯನಾಗಿಯೂ, ಅತಿಕ್ರಮಿಸಲಶಕ್ಯನಾಗಿಯೂ, ಪರಾಜಯಗೊಳಿಸಲಶಕ್ಯನಾಗಿಯೂ, ಪ್ರಕಾಶಗೊಳಿಸಲಶಕ್ಯನಾಗಿಯೂ, ನೋಡಲಶಕ್ಯನಾಗಿಯೂ, ಜಯಿಸಲಶಕ್ಯನಾಗಿಯೂ, ಜಯಿಸತಕ್ಕವನಾಗಿಯೂ ಇರುವೆ. ಚಂದ್ರನೆಂಬ ಶೀತಲವಸ್ತುವೂ, ಅಗ್ನಿಯೆಂಬ ಉಷ್ಣವಸ್ತುವೂ, ಪರಸ್ಪರವಿರುದ್ಧಗಳಾದ ಅವರ ಶೀತೋಷ್ಣಧರ್ಮಗಳೂ, ಹಸಿವು, ಬಾಯಾರಿಕೆ, ವಾರ್ಧಕ್ಯ, ಮನೋವ್ಯಥೆ, ವ್ಯಾಧಿಗಳು ಮೊದಲಾದ ಚೇತನಧರ್ಮಗಳೂ, ಆ ಆಧಿವ್ಯಾಧಿಗಳಿಗೆ ನಾಶಕನೂ ಸಹ ನೀನೇ ಆಗಿದ್ದೀಯೆ. ಸಾಮೂಹಿಕಶಕ್ತಿಯೂ, ವೈಯಕ್ತಿಕವಾದ ಆಯಾಯ ಶಕ್ತಿಯೂ, ಆ ಶಕ್ತಿಗೆ ನಾಶಕನೂ ಸಹ ಶಾಶ್ವತನಾದ ನೀನೇ ಆಗಿದ್ದೀಯೆ. ಶಿರೋಭೂಷಣವುಳ್ಳವನಾಗಿಯೂ, ಕಮಲನಯನನಾಗಿಯೂ, ಕಮಲವನದಲ್ಲಿ ಸಂಚರಿಸುವವನೂ, ನೀನೇ ಆಗಿದ್ದೀಯ. (ಇಲ್ಲಿ ಪುಂಡರೀಕವನಾಲಯಃ ಎಂಬ ಪದಕ್ಕೆ ಕಮಲಗಳುಳ್ಳ ಜಲದಲ್ಲಿ ವಾಸಮಾಡುವವನೆಂದೂ, ವ್ಯಾಘ್ರಗಳಿಂದ ಕೂಡಿದ ಕಾಡಿನಲ್ಲಿ ವಾಸಮಾಡುವವನೆಂದೂ ಅರ್ಥ ಹೇಳಬಹುದು. ಎರಡರ್ಥಗಳೂ ಪ್ರಕೃತಕ್ಕೆ ಅನುಗುಣವಾಗಿವೆ.)

೧೪೧-೧೪೪. ತ್ರಿನೇತ್ರನೂ, ದಂಡಧಾರಿಯೂ, ಭಯಂಕರವಾದ ಕೋರದಾಡೆಯುಳ್ಳವನಾಗಿ ಕುಲನಾಶಕನೂ ನೀನೇ ಆಗಿದ್ದೀಯೆ. ವಿಷಶ್ರೇಷ್ಠವನ್ನು ಹೊಂದಿ ಸುರಶ್ರೇಷ್ಠನಾಗಿ ಸೋಮಪಾಯಿಯಾಗಿ ದೇವತೆಗಳ ಪ್ರಭುವಾಗಿಯೂ ಇರುವೆ. ಅಮೃತಪಾಯಿಯಾಗಿ ಜಗತ್ಪತಿಯಾಗಿ ವೇದಗಳಿಗೂ, ದೇವತೆಗಳಿಗೂ

ಅಮೃತಾಶೀ ಜಗನ್ನಾಥೋ ವೇದದೇವಗಣೇಶ್ವರಃ ।
ವಿಷಾಗ್ನಿಪಾಃ ಸೋಮಪಾಶ್ಚ ಕ್ಷೀರಪಾಃ ಆಜ್ಯಪಾಸ್ತಥಾಃ ॥ ೧೪೨ ॥

ಮಧುಶ್ಚ್ಯುತಾನಾಂ ಮಧುಪಾ ಬ್ರಹ್ಮವಾಂಸ್ತ್ವಂ ಘೃತಚ್ಯುತಃ ।
ಸರ್ವಲೋಕಸ್ಯ ಭೋಕ್ತಾ ತ್ವಂ ಸರ್ವಲೋಕಪಿತಾಮಹಃ ॥ ೧೪೩ ॥

ಹಿರಣ್ಯರೇತಾಃ ಪುರುಷಃ ತ್ವಮೇಕಃ
ತ್ವಂ ಸ್ತ್ರೀಪುಮಾಂ ಸ್ತ್ವಂಹಿ ನಪುಂಸಕಂ ಚ ।
ಬಾಲೋ ಯುವಾ ಸ್ಥವಿರೋ
ಜೀರ್ಣದಂಷ್ಟ್ರಸ್ತ್ವಂ ತೆ ಗಿರಿರ್ವಿಶ್ವಕೃದ್ವಿಶ್ವಕರ್ತಾ ॥ ೧೪೪ ॥

ತ್ವಂ ವೈ ಧಾತಾ ವಿಶ್ವಕೃತೋ ವರೇಣ್ಯಃ
ತ್ವಾಂ ಪೂಜಯಂತಿ ಪ್ರಣತಾಃ ಸದೈವ ।
ಚಂದ್ರಾದಿತ್ಯೌ ಚಕ್ಷುಷೀ ತೆ ಭವಾನೀ
ತ್ವಮೇವ ಚಾಗ್ನಿಃ ಪ್ರಪಿತಾಮಹಶ್ಚ ॥ ೧೪೫ ॥

ಪ್ರಭುವಾಗಿರುವೆ. ವಿಷಾಗ್ನಿಯನ್ನು ಪಾನಮಾಡಿದಂತೆ ಸೋಮವನ್ನೂ, ಕ್ಷೀರವನ್ನೂ ಆಜ್ಯವನ್ನೂ ಸಹ ಪಾನಮಾಡುತ್ತಿರುವೆ. ಮಕರಂದವನ್ನು ಸುರಿಸುತ್ತಿರುವ ಪುಷ್ಪಗಳಲ್ಲಿ ದುಂಬಿಗಳಂತೆ ರಸಜ್ಞನಾಗಿರುವೆ. ಬ್ರಹ್ಮಜ್ಞಾನವುಳ್ಳವನಾಗಿಯೂ, ಆಜ್ಯದಂತೆ ಹಿತಕರವೂ, ಸ್ವಾದುವೂ ಆದ ಜ್ಞಾನವನ್ನು ಹೊರಗೆಡಹುತ್ತಿರುವೆ. ಸರ್ವಲೋಕಗಳಿಗೆ ಭಕ್ಷಕನಾಗಿಯೂ, ಹಿತೈಷಿಯಾದ ಪಿತಾಮಹನಾಗಿಯೂ ಇರುವೆ. ತೇಜಃಪ್ರಧಾನನಾಗಿಯೂ, ಸ್ತ್ರೀಪುಂನಪುಂಸಕಭೇದದಿಂದಿರುವ ಸಕಲಪ್ರಾಣಿರೂಪನಾಗಿಯೂ ಇರುವೆ. ಸ್ಥಿತಿಕಾಲದಲ್ಲಿ ಬಾಲನಾಗಿಯೂ, ಯುವಕನಾಗಿಯೂ, ಹಲ್ಲುದುರಿದ ಮುದುಕನಾಗಿಯೂ ಇದ್ದು ಕೊನೆಯಲ್ಲಿ ಎಲ್ಲವನ್ನೂ ಗ್ರಹಿಸುವೆ. ಪುನಃ ಸೃಷ್ಟಿಕಾರ್ಯದಲ್ಲಿ ನಿಂತು ವಿಶ್ವಕರ್ತನಾಗಿ ಆಗುವೆ.

೧೪೫-೧೪೭. ನೀನೇ ಜಗತ್ತಿಗೆ ಧಾರಕನಾಗಿಯೂ ವಿಶ್ವಕರ್ತನಾಗಿಯೂ ಇರುವೆ. ಆದುದರಿಂದ ನೀನೇ ಎಲ್ಲರಿಗೂ ಆಶ್ರಯದಾತನು (ಸೇವಿಸಲ್ಪಡತಕ್ಕವನು) ಆದುದರಿಂದಲೇ ನಿನ್ನನ್ನು ಪ್ರಣಾಮಪೂರ್ವಕವಾಗಿ ಪೂಜಿಸುತ್ತಾರೆ. ಚಂದ್ರಸೂರ್ಯರು ನಿನಗೆ ನೇತ್ರಗಳಾಗಿರುವರು. ಭವಾನಿಯು ಪತ್ನಿಯಾಗಿರುವಳು. (ಇದು ಅಧ್ಯಾಹಾರಲಭ್ಯ) ನೀನೇ ಅಗ್ನಿರೂಪದಿಂದ ದಾಹಕನಾಗಿಯೂ ಸೃಷ್ಟಿಕರ್ತನ ರೂಪದಿಂದ

ಸರಸ್ವತೀ ವಾಗ್ಬಲಮೂಲಭೂತಾ ಅಹೋರಾತ್ರಿ ನಿಮಿಷೋನ್ಮೇಷಕರ್ತಾ ।
ನ ಬ್ರಹ್ಮಾ ನ ಚ ಗೋವಿಂದಃ ಪೌರಾಣಾಃ ಋಷಯೋ ನ ತೇ ।
ಮಾಹಾತ್ಮ್ಯಂ ವೇದಿತುಂ ಶಕ್ತಾಃ ಯಾಥಾತಥ್ಯೇನ ಶಂಕರ ॥ ೧೪೬ ॥

ಪುಂಸಾಂ ಶತಸಹಸ್ರಾಣಿ ಯತ್ತಮಾವೃತ್ಯ ತಿಷ್ಠತಿ ।
ಮಹತಃ ತಮಸಃ ಪಾರೆ ಗೋಪ್ತಾ ಮಂತಾ ಭವಾನ್ ಸದಾ ॥ ೧೪೭ ॥

ಯಂ ವಿನಿದ್ರಾ ಜಿತಶ್ವಾಸಾಃ ಸತ್ವಸ್ಥಾ ಸಂಜಿತೇಂದ್ರಿಯಾಃ ।
ಜ್ಯೋತಿಃ ಪಶ್ಯಂತಿ ಯುಂಜಾನಾಃ ತಸ್ಮೈ ಯೋಗಾತ್ಮನೇ ನಮಃ ॥ ೧೪೮ ॥

ಯಾ ಮೂರ್ತಯಶ್ಚ ಸೂಕ್ಷ್ಮಾಸ್ತೇ ನಶಕ್ಯಾ ಯಾ ನಿದರ್ಶಿತುಂ ।
ತಾಭಿರ್ಮಾಂ ಸತತಂ ರಕ್ಷ ಪಿತಾ ಪುತ್ರಮಿವೌರಸಂ ॥ ೧೪೯ ॥

ಪ್ರಪಿತಾಮಹನಾಗಿಯೂ ಇರುವೆ. ನಿನ್ನ ವಾಕ್ಛಕ್ತಿಗೆ ಸರಸ್ವತಿಯೇ ಮೂಲಭೂತಳಾಗಿರುವಳು. ಅಹೋರಾತ್ರಿಗಳೇ ನಿನ್ನ ನಿಮೇಷೋನ್ಮೇಷಗಳಿಗೆ ವ್ಯಂಜಕವಾಗಿವೆ. ಎಲೈ ಶಂಕರನೇ, ನಿನ್ನ ಅಪರಿಮಿತವಾದ ಮಾಹಾತ್ಮ್ಯವನ್ನು ಸರಿಯಾಗಿ ತಿಳಿಯಲು ಬ್ರಹ್ಮನೂ ಸಮರ್ಥನಾಗಿಲ್ಲ. ಗೋವಿಂದನೂ ಸಮರ್ಥನಾಗಿಲ್ಲ. ಪ್ರಾಚೀನಮಹರ್ಷಿಗಳು ಸಮರ್ಥರಾಗಿಲ್ಲ. ನೂರಾರು ಸಾವಿರಾರು ಪ್ರಾಣಿವರ್ಗಗಳೆಲ್ಲವೂ ಯಾವ ಅಜ್ಞಾನಾಂಧಕಾರದಲ್ಲಿ ಮುಳುಗಿ ಮುಳುಗಿ ತೇಲುತ್ತಿವೆಯೋ ಅಂತಹ ಮಹಾಂಧಕಾರವನ್ನತಿಕ್ರಮಿಸಿ ಅದರ ಕೊನೆಯಲ್ಲಿ ಜ್ಞಾನಿಯಾಗಿ ಯಾವಾಗಲೂ ನೀನು ಬೆಳಗುತ್ತಿದ್ದೀಯೆ.

೧೪೮-೧೫೦. ಜ್ಯೋತಿರ್ಮಯನಾದ ಯಾವ ನಿನ್ನನ್ನು ಯೋಗಾವಸ್ಥೆಯಲ್ಲಿ ನಿದ್ರೆ ಇಲ್ಲದೆಯೂ ಶ್ವಾಸೋಚ್ಛ್ವಾಸವಿಲ್ಲದೆಯೂ ಜಿತೇಂದ್ರಿಯರಾಗಿಯೂ ಇದ್ದು ಸತ್ವಗುಣೋನ್ಮೇಷದಿಂದ ಸಾಕ್ಷಾತ್ಕರಿಸುವರೋ ಅಂತಹ ಯೋಗಕ್ಕೂ ಆತ್ಮಭೂತನಾಗಿರುವ ನಿನಗೆ ನಮಸ್ಕಾರಗಳು. ಎದುರಿಗೆ ನಿಲ್ಲಿಸಿ ತೋರಿಸಲು ಅಶಕ್ಯಗಳಾದ ಯಾವ ನಿನ್ನ ಸೂಕ್ಷ್ಮವಾದ ಮೂರ್ತಿಗಳಿವೆಯೋ ಅಂತಹ ಎಲ್ಲಾ ಮೂರ್ತಿಗಳಿಂದಲೂ ತಂದೆಯು ಔರಸಪುತ್ರನನ್ನು ರಕ್ಷಿಸುವಂತೆ ನೀನು ನನ್ನನ್ನು ರಕ್ಷಿಸು. ಈ

ರಕ್ಷಮಾಂ ರಕ್ಷಣೀಯೋಽಯಂ ತವಾನಘ ನಮೋಽಸ್ತು ತೇ ।
ಭಕ್ತಾನುಕಂಪೀ ಭಗವಾನ್ ಭಕ್ತಶ್ಚಾಹಂ ಸದಾ ತ್ವಯಿ ॥ ೧೫೦ ॥

ಜಟಿನೇ ದಂಡಿನೇ ನಿತ್ಯಂ ಲಂಬೋದರ ತಥಾ ಕ್ರತೋ ।
ದೀರ್ಘಜಿಹ್ವ ಮಹಾದಂಷ್ಟ್ರ ತಸ್ಮೈ ರುದ್ರಾಯ ತೇ ನಮಃ ॥ ೧೫೧ ॥

ಯಸ್ಯ ಕೇಶೇಷು ಜೀಮೂತಾ ನದ್ಯಃ ಸರ್ವಾಂಗಸಂಧಿಷು ।
ಕುಕ್ಷೌ ಸಮುದ್ರಾಶ್ಚತ್ವಾರಃ ತಸ್ಮೈ ತೋಯಾತ್ಮನೇ ನಮಃ ॥ ೧೫೨ ॥

ಸಂಭಕ್ಷ್ಯ ಸರ್ವಭೂತಾನಿ ಯುಗಾಂತೆ ಪರ್ಯುಪಸ್ಥಿತೆ ।
ಯಃ ಶೇತೆ ಜಲಮಧ್ಯಸ್ಥಸ್ತಂ ಪ್ರಪದ್ಯೇ ಮ್ಬುಶಾಯಿನಂ ॥ ೧೫೩ ॥

ಪ್ರವಿಶ್ಯ ವದನಂ ರಾಹೋಃ ಯಃ ಸೋಮಂ ಪಿಬತೆ ನಿಶಿ ।
ಗ್ರಸನ್ನರ್ಕಂ ಚ ಸ್ವರ್ಭಾನೂರಕ್ಷಿತಸ್ತೇಚ ತೇಜಸಾ ॥ ೧೫೪ ॥

ನಾನು ನಿನ್ನಿಂದಲೇ ರಕ್ಷಿಸಲ್ಪಡತಕ್ಕವನು, ನಿನಗೆ ಅನಂತ ನಮಸ್ಕಾರಗಳು. ಯಾವಾಗಲೂ ನಿನ್ನಲ್ಲಿ ಭಕ್ತನಾಗಿರುವ ನನಗೂ ಭಕ್ತರಲ್ಲಿ ದಯೆಯುಳ್ಳ ಷಡ್ಗುಣೈಶ್ವರ್ಯಪರಿಪೂರ್ಣನಾದ ನಿನಗೂ ರಕ್ಷ್ಯರಕ್ಷಕಭಾವವು ಎಂದಿಗೂ ಬಿಟ್ಟಿದ್ದಲ್ಲ.

೧೫೧-೧೫೩. ಈ ಪ್ರಕಾರ ಭಕ್ತಿಯಿಂದ ಪ್ರಾರ್ಥಿಸಿ ನಾನಾರೂಪದಿಂದ ಧ್ಯಾನಿಸುತ್ತಾ ಪುನಃಪುನಃ ನಮಸ್ಕರಿಸುತ್ತಾನೆ. ಜಟಾಧಾರಿಯಾಗಿಯೂ ದಂಡಧಾರಿಯಾಗಿಯೂ ಲಂಬೋದರನಾಗಿಯೂ ಯಜ್ಞರೂಪನಾಗಿಯೂ ದೀರ್ಘವಾದ ನಾಲಗೆಯಿಂದಲೂ ದೊಡ್ಡದಾದ ಕೋರೆದಾಡೆಗಳಿಂದಲೂ ಕೂಡಿರುವ ರುದ್ರರೂಪಿಯಾದ ನಿನಗೆ ನಮಸ್ಕಾರಗಳು. ಮೇಘಗಳೆಲ್ಲವೂ ಯಾವ ನಿನ್ನ ತಲೆಯ ಕೂದಲಿನಲ್ಲಿ ಜೋಲಾಡುತ್ತಿವೆಯೋ ದೇಹದ ಅವಯವ ಸಂಧಿಗಳಲ್ಲಿ ನದಿಗಳೆಲ್ಲವೂ ಸೇರಿಕೊಂಡಿರುವುವೋ ಉದರಭಾಗವೆಲ್ಲಾ ನಾಲ್ಕು ಸಮುದ್ರರೂಪವಾಗಿಹುದೋ ಅಂತಹ ಜಲಾತ್ಮಕನಾದ ನಿನಗೆ ನಮಸ್ಕಾರಗಳು. ಯುಗಪರಿವೃತ್ತಿಕಾಲವು ಸನ್ನಿಹಿತವಾದಾಗ ಎಲ್ಲಾ ಪ್ರಾಣಿಗಳನ್ನೂ ಭಕ್ಷಣಮಾಡಿ ಜಲಮಧ್ಯದಲ್ಲಿ ಯಾವ ನೀನು ಮಲಗುವೆಯೋ ಅಂತಹ ನಿನ್ನ ಜಲಶಾಯಿಯಾದ ಮೂರ್ತಿಯಲ್ಲಿ ಶರಣಾಗತನಾಗಿರುತ್ತೇನೆ.

೧೫೪-೧೫೭. ಯಾವ ನೀನು ರಾತ್ರಿಯಲ್ಲಿ ರಾಹುವಿನ ಮುಖವನ್ನು ಪ್ರವೇಶಿಸಿ ಚಂದ್ರನನ್ನು ನುಂಗಲು ಬರುವೆಯೋ ಹಾಗೆಯೇ ಹಗಲಿನಲ್ಲಿ ಸೂರ್ಯನನ್ನು ನುಂಗಲು ಬಂದ ಕೇತುವಿನಲ್ಲೂ ಪ್ರವೇಶಿಸುವೆಯೋ ತೇಜಸ್ಸಿನಿಂದ ಆ ಸೂರ್ಯಚಂದ್ರ

ಯೇ ಚಾನುಪತಿತಾ ಗರ್ಭಾ ರುದ್ರ ಲೋಕಸ್ಯ ರಕ್ಷಿಣಃ ।
ನಮಸ್ತೇಽಸ್ತು ಸ್ವಧಾಸ್ವಾಹಾ ಪ್ರಾಪ್ನುವಂತಿ ಮುದಂ ತು ತೇ ॥ ೧೫೫ ॥

ಯೇ ಙ್ಗುಷ್ಠಮಾತ್ರಾಃ ಪುರುಷಾಃ ದೇಹಸ್ಥಾ ವರದೇಹಿನಾಂ ।
*ರಕ್ಷಂತು ದೇಹಿನಾಂ ನಿತ್ಯಂ ತೇಽಮಮಾಪ್ಯಾಯಯಂತು ವೈ ॥ ೧೫೬ ॥

ಯೇ ನದೀಷು ಸಮುದ್ರೇಷು ಪರ್ವತೇಷು ಗುಹಾಸು ಚ ।
ವೃಕ್ಷಮೂಲೇಷು ಗೋಷ್ಠೇಷು ಕಾಂತಾರಗಹನೇಷು ಚ ॥ ೧೫೭ ॥

ಚತುಷ್ಪಥೇಷು ರಥ್ಯಾಸು ಚತ್ವರೇಷು ಸಭಾಸು ಚ ।
ಹಸ್ತ್ಯಶ್ವರಥಶಾಲಾಸು ಜೀರ್ಣೋದ್ಯಾನಾಲಯೇಷು ಚ ॥ ೧೫೮ ॥

ಯೇಚ ಪಂಚಸು ಭೂತೇಷು ದಿಶಾಸುವಿದಿಶಾಸು ಚ ।
ಚಂದ್ರಾರ್ಕಯೋರ್ಮಧ್ಯಗತಾ ಯೇಚ ಚಂದ್ರಾರ್ಕರಶ್ಮಿಷು ॥ ೧೫೯ ॥

ರನ್ನೂ ರಕ್ಷಿಸುವೆಯೋ ಅಂತಹ ನಿನಗೆ ನಮಸ್ಕಾರಗಳು. ಎಲೈ ರುದ್ರಮೂರ್ತಿಯೇ, ಸೇನಾಧಿಪತಿಯಾಗಿ ದೇವತೆಗಳ ರಕ್ಷಣೆಗಾಗಿ ಜನಿಸಿದ ನಿನ್ನ ಪುತ್ರನಾದ ಷಣ್ಮುಖ ನನ್ನನುಸರಿಸಿ ಯಾವಯಾವ ಗರ್ಭಗಳು ಜನಿಸಿದವೋ ಅಂತಹ ಸ್ವಧಾಸ್ವಾಹಾಕಾರ ವುಳ್ಳ ಗರ್ಭಗಳಿಂದ ಸಂತೋಷಹೊಂದುತ್ತಿರುವ ನಿನಗೆ ಅನಂತ ನಮಸ್ಕಾರಗಳು. ಅಂಗುಷ್ಠಪರಿಮಾಣವುಳ್ಳ ರುದ್ರಗಣಗಳು ಇತರ ಯಾವ ಚೇತನರುಗಳನ್ನು ರಕ್ಷಿಸಲು ದೇಹಿಗಳ ದೇಹದಲ್ಲಿ ನೆಲಸಿವೆಯೋ ಆ ಜೀವಗಳು ನನಗೆ ಶಾಂತಿಯನ್ನೀ ಯಲಿ. ನದಿಗಳಲ್ಲಿಯೂ ಸಮುದ್ರಗಳಲ್ಲಿಯೂ ಪರ್ವತಗಳಲ್ಲಿಯೂ ಗುಹೆಗಳಲ್ಲಿಯೂ ಮರಗಳ ಬುಡದಲ್ಲಿಯೂ ಹಸುವಿನ ಕೊಟ್ಟಿಗೆಯಲ್ಲಿಯೂ ಕಾಡಿನ ಪೊದರುಗಳಲ್ಲಿಯೂ ಮತ್ತು

೧೫೮-೧೬೨. ಚತುಷ್ಪಥಗಳಲ್ಲಿಯೂ ಬೀದಿಗಳಲ್ಲಿಯೂ ಅಂಗಳಗಳಲ್ಲಿಯೂ ಸಭೆಗಳಲ್ಲಿಯೂ ಆನೆ, ಕುದುರೆ, ರಥ, ಇವುಗಳ ಶಾಲೆಗಳಲ್ಲಿಯೂ ಜೀರ್ಣವಾದ ಉದ್ಯಾನ ಮತ್ತು ಮನೆಗಳಲ್ಲಿಯೂ ಪಂಚಭೂತಗಳಲ್ಲಿಯೂ ದಿಕ್ಕುದಿಕ್ಕುಗಳಲ್ಲಿಯೂ ಸೂರ್ಯಚಂದ್ರರ ಮಧ್ಯದಲ್ಲಿಯೂ ಅವರ ರಶ್ಮಿಗಳಲ್ಲಿಯೂ ಪಾತಾಳದಲ್ಲಿಯೂ ಅದ

* ಇಲ್ಲಿ ರಕ್ಷಿತುಂ ಎಂದು ಪಾಠವಿರಬೇಕೆಂದು ತೋರುತ್ತದೆ.

ರಸಾತಲಗತಾಯೇ ಚ ಯೇಚತಸ್ಮಾತ್ಪರಂ ಗತಾಃ ।
ನಮಸ್ತೇಭ್ಯೋ ನಮಸ್ತೇಭ್ಯೋ ನಮಸ್ತೇಭ್ಯಶ್ಚ ನಿತ್ಯಶಃ ॥ ೧೬೦ ॥

ಯೇಷಾಂ ನ ವಿದ್ಯತೆ ಸಂಖ್ಯಾ ಪ್ರಮಾಣಂ ರೂಪಮೇವ ಚ ।
ಅಸಂಖ್ಯಾ ಯೇ ಗಣಾರುದ್ರಾಃ ನಮಸ್ತೇಭ್ಯೋಽಸ್ತು ನಿತ್ಯಶಃ ॥ ೧೬೧ ॥

ಪ್ರಸೀದ ಮಮ ಭದ್ರಂತೆ ತವ ಭಾಗವತಸ್ಯ ಚ ।
ತ್ವಯಿ ಮೆ ಹೃದಯಂ ದೇವ ತ್ವಯಿ ಬುದ್ಧಿಃ ಮತಿ ಸ್ತ್ವಯಿ ॥ ೧೬೨ ॥

ಸ್ತುತ್ವೈವಂ ಸ ಮಹಾದೇವಂ ವಿರರಾಮ ದ್ವಿಜೋತ್ತಮಃ ॥ ೧೬೩ ॥

ಇತಿ ಶ್ರೀ ವಾಮನಪುರಾಣೇ ಸರೋಮಾಹಾತ್ಮ್ಯೇ
ಸಪ್ತಚತ್ವಾರಿಂಶೋಽಧ್ಯಾಯಃ

ಕ್ಕಿಂತಲೂ ದೂರದಲ್ಲಿಯೂ ಇರುವರೋ ಅಂತಹ ರುದ್ರಗಣಗಳಿಗೆ ನಮಸ್ಕಾರಗಳು ಪುನಃ ನಮಸ್ಕಾರಗಳು ಮತ್ತೂ ನಮಸ್ಕಾರಗಳು.

೧೬೧-೧೬೩. ಅಸಂಖ್ಯಾತವಾಗಿರುವ ಯಾವ ರುದ್ರಗಣಗಳ ಪ್ರಮಾಣ ಸ್ವರೂಪಗಳು ತಿಳಿಯಲು ಸಾಧ್ಯವಿಲ್ಲವೋ ಅಂತಹ ಗಣಗಳಿಗೂ ಈ ನನ್ನ ನಮಸ್ಕಾರ ಗಳು. ಎಲೈ ಮಹಾದೇವನೇ, ನಿನಗೆ ಮಂಗಲವಾಗಲಿ. ಭಕ್ತನಾಗಿರುವ ನನ್ನಲ್ಲಿ ಪ್ರಸನ್ನನಾಗು. ನನ್ನ ಮನಸ್ಸೂ ಬುದ್ಧಿ ಮತಿ ಎಲ್ಲವೂ ನಿನ್ನಲ್ಲೇ ಅಡಗಿವೆ. (ಅಂತಃ ಕರಣಕ್ಕೆ ವ್ಯಾಪಾರಭೇದದಿಂದ ಮನಸ್ಸು ಬುದ್ಧಿ ಇತ್ಯಾದಿ ವ್ಯವಹಾರವಿದೆ.) ಈರೀತಿ ಆ ವೇನನು ಈಶ್ವರನನ್ನು ಸ್ತೋತ್ರಮಾಡಿ ಸುಮ್ಮನಾದನು.

ಇಲ್ಲಿಗೆ ಶ್ರೀ ವಾಮನಪುರಾಣದಲ್ಲಿ ಸರೋಮಾಹಾತ್ಮ್ಯವೆಂಬ
ನಲವತ್ತೇಳನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಸ್ಥಾಣುತೀರ್ಥದ ಮಹಿಮೆಯನ್ನು ಹೇಳಬೇಕೆಂದು ಮಾರ್ಕಂಡೇಯರು ಮಾಡಿದ ಪ್ರಶ್ನೆಗೆ ಉತ್ತರವಾಗಿ ಸನತ್ಕುಮಾರರು ಜಗತ್ಸೃಷ್ಟಿಯನ್ನುಪಕ್ರಮಿಸಿ ಕ್ರಮಕ್ರಮವಾಗಿ ಮನುವಿಗೆ ಕ್ಷುತನೆಂಬ ಮಗನು ಉಂಟಾದನೆಂದೂ ಅವನ ಪತ್ನಿಯಾದ ಭಯಾ ಎಂಬುವಳಲ್ಲಿ ದುರಾತ್ಮನೂ ವೇದನಿಂದಕನೂ ಆದ ವೇನನು ಹುಟ್ಟಿದನೆಂದೂ ಹಿಸರಿಸಿ ಆ ವೇನನ ಅಧರ್ಮದಿಂದ ದುಃಖಪಟ್ಟ ಋಷಿಗಳು ಅವನಿಗೆ ಎಷ್ಟು ಹಿತವನ್ನು ಹೇಳಿದರೂ ಸಫಲವಾಗಲಿಲ್ಲವಾಗಿ ಆ ಋಷಿಗಳಿಂದಲೇ ಅವನಿಗೆ ನಾಶವುಂಟಾಯಿತೆಂದೂ ಹೇಳಲಾಯಿತು. ಅನಂತರ ದೇಶದ ಅರಾಜಕತೆಯನ್ನು ನೀಗಲು ಋಷಿಗಳು ಆಲೋಚಿಸಿ ವೇನನ ಬಲಗೈಯ್ಯನ್ನು ಮಥನಮಾಡಿ ಒಬ್ಬ ಧಾರ್ಮಿಕನಾದ ರಾಜನನ್ನುಂಟುಮಾಡಿದರು. ಆ ರಾಜನು ಧರ್ಮದಿಂದ ರಾಜ್ಯವಾಳುತ್ತಿದ್ದು ತಂದೆಯ ದುರ್ದೆಶೆಯಿಂದ ದುಃಖಪಟ್ಟು ಏನಾದರೂ ಪ್ರಯತ್ನ ಮಾಡಿ ಅವನಿಗೆ ಉತ್ತಮಗತಿಯುಂಟಾಗುವಂತೆ ಮಾಡಲು ಆಲೋಚಿಸಿ ಹಠಾತ್ತಾಗಿ ಅಲ್ಲಿಗೆ ಬಂದ ನಾರದರಿಂದ ತಂದೆಯ ವೃತ್ತಾಂತವನ್ನು ತಿಳಿದು ಪಾಪದಿಂದ ಮ್ಲೇಚ್ಛನಾಗಿ ಹುಟ್ಟಿ ಕುಷ್ಠರೋಗದಿಂದ ನರಳುತ್ತಿದ್ದ ಅವನನ್ನು ಹುಡುಕಿ ಸ್ಥಾಣುತೀರ್ಥಕ್ಕೆ ಕರೆತಂದನೆಂದೂ ಹೇಳಲಾಯಿತು. ಅಲ್ಲಿಯೂ ಮಹಾಪಾತಕಿಯಾದ ಇವನ ಸ್ಪರ್ಶದಿಂದ ತೀರ್ಥವೇ ನಾಶವಾದೀತೆಂದೂ ನೀನೇ ಸ್ನಾನಮಾಡಿ ಇವನನ್ನು ತೀರ್ಥಜಲದಿಂದ ಪ್ರೋಕ್ಷಿಸಿ ಇವನ ಪಾಪವನ್ನು ಹೋಗಲಾಡಿಸಬೇಕೆಂದೂ ವಾಯುವು ಸಲಹೆ ಮಾಡಲಾಗಿ ಅದರಂತೆ ದೊರೆಯು (ಮ್ಲೇಚ್ಛನಾಗಿದ್ದ) ವೇನನನ್ನು ಅಲ್ಲಿಯೇ ಇಟ್ಟು ತಾನು ನಿತ್ಯವೂ ತೀರ್ಥಗಳಲ್ಲಿ ಸ್ನಾನಮಾಡಿ ಬಂದು ಪ್ರೋಕ್ಷಿಸುತ್ತಿದ್ದನೆಂದೂ ಈ ಸಮಯದಲ್ಲಿ ದೇವದ್ರವ್ಯಕ್ಕೆ ದ್ರೋಹಮಾಡಿ ನಾಯಿನ ಜನ್ಮ ಹೊಂದಿದ್ದ ಸಾರಮೇಯನು ಅಲ್ಲಿ ಬಂದು ಸ್ಥಾಣುವಿನ ಅನುಗ್ರಹದಿಂದ ಸರಸ್ವತಿಯಲ್ಲಿ ಸ್ನಾನಮಾಡಿ ಆಹಾರಕ್ಕಾಗಿ ಮಠಕ್ಕೆ ಹೋಗುವಾಗ ಅದರ ಸ್ಪರ್ಶದಿಂದಲೂ ಅದರ ಮೇಲಿನ ಜಲಬಿಂದು ಸಂಬಂಧದಿಂದಲೂ ವೇನನಿಗೆ ಪಾಪನಾಶವುಂಟಾಗಿ ಸ್ಥಾಣುತೀರ್ಥದಲ್ಲಿ ಸ್ನಾನಕ್ಕೆ ಅವಕಾಶವಾಯಿತೆಂದೂ ಹೇಳಲಾಯಿತು. ಈರೀತಿ ಪಾಪನಾಶವನ್ನು ಹೊಂದಿ ದಿವ್ಯ ದೇಹದಿಂದ ಕೂಡಿದ ವೇನನು ಭಕ್ತಿಯಿಂದ ಈಶ್ವರನನ್ನು ಬಹುಮುಖವಾಗಿ ಸ್ತೋತ್ರ ಮಾಡಿ ಅವನಲ್ಲಿ ಶರಣಾಗತನಾದನೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಅಷ್ಟಚತ್ವಾರಿಂಶೋಽಧ್ಯಾಯಃ

ಸನತ್ಕುಮಾರ ಉವಾಚ

ಅಥೈನಮಬ್ರವೀದ್ದೇವಃ ತ್ರೈಲೋಕ್ಯಾಧಿಪತಿರ್ಭವಃ ।
ಆಶ್ವಾಸನಕರಂ ಚಾಸ್ಯ ವಾಕ್ಯವಿದ್ವಾಕ್ಯಮುತ್ತಮಂ ॥ ೧ ॥

ಶಿವ ಉವಾಚ

ಅಹೋ ತುಷ್ಟೋಽಸ್ಮಿ ತೇ ರಾಜನ್ ಸ್ತವೇನಾನೇನ ಸುವ್ರತ ।
ಬಹುನಾತ್ರ ಕಿಮುಕ್ತೇನ ಮತ್ಸಮೀಪೇ ವಸಿಷ್ಯಸಿ ॥ ೨ ॥

ಉಷಿತ್ವಾ ಸುಚಿರಂ ಕಾಲಂ ಮಮ ಗಾತ್ರೋದ್ಭವಃ ಪುನಃ ।
ಅಸುರೋಹ್ಯಂಧಕೋನಾಮ ಭವಿಷ್ಯಸಿ ಸುರಾಂತಕೃತ್ ॥ ೩ ॥

ನಲವತ್ತೆಂಟನೆಯ ಅಧ್ಯಾಯವು

೧-೩. ಅನಂತರ ಲೋಕಾಧಿಪನಾದ ಶಂಕರನು ಪ್ರಸನ್ನನಾಗಿ ವೇನನಿಗೆ ಸಮಾಧಾನಕರವಾಗಿ ಈರೀತಿ ಹೇಳುತ್ತಾನೆ. ಎಲೈ ದೊರೆಯೇ, ನಿನ್ನ ಈ ಸ್ತುತಿಯಿಂದ ನಾನು ಬಹಳ ಸಂತುಷ್ಟನಾಗಿರುತ್ತೇನೆ. ನೀನು ಭಕ್ತನಾಗಿದ್ದೀಯೆ. ಹೆಚ್ಚಾಗಿ ಮಾತನಾಡಿ ಪ್ರಯೋಜನವಿಲ್ಲ. ಮುಖ್ಯವಾಗಿ ನೀನು ನನ್ನ ಸಮೀಪದಲ್ಲೇ ವಾಸ ಮಾಡುತ್ತೀಯೆ. ಬಹಳಕಾಲ ಇಲ್ಲಿಯೇ ವಾಸಮಾಡಿ ಅಂಧಕನೆಂಬ ಹೆಸರಿನಿಂದ ದೇವಶತ್ರುವಾಗಿ ನನ್ನ ದೇಹದಿಂದಲೇ ಪುನಃ ಹುಟ್ಟುತ್ತೀಯೆ.

ಹಿರಣ್ಯಾಕ್ಷಗೃಹೇ ಜನ್ಮ ಪ್ರಾಪ್ಯ ವೃದ್ಧಿಂ ಗಮಿಷ್ಯಸಿ ।
ಪೂರ್ವಾಧರ್ಮೇಣ ಘೋರೇಣ ವೇದನಿಂದಾಕೃತೇನ ಚ ॥ ೪ ॥

ಸಾಭಿಲಾಷೋ ಜಗನ್ಮಾತುರ್ಭವಿಷ್ಯಸಿ ಯದಾ ತದಾ ।
ದೇಹಂ ಶೂಲೇನ ಹತ್ವಾಹಂ ಪಾತಯಿಷ್ಯೇ ಸಮಾರ್ಬುದಂ ॥ ೫ ॥

ತತ್ರಾಪಿ ಕಲ್ಮಷಂ ತ್ಯಕ್ತ್ವಾ ದೃಷ್ಟ್ವಾ ಮಾಂ ಭಕ್ತಿತಃ ಪುನಃ ।
ಖ್ಯಾತೋ ಗಣಾಧಿಪೋ ಭೂತ್ವಾ ನಾಮ್ನಾ ಭೃಂಗಿರಿಟಿಃ ಸ್ಮೃತಃ ॥ ೬ ॥

ಮತ್ಸಂನಿಧಾನೇ ಸ್ಥಿತ್ವಾ ತ್ವಂ ತತಃ ಸಿದ್ಧಿಂ ಗಮಿಷ್ಯಸಿ ।
ವೇನಪ್ರೋಕ್ತಂ ಸ್ತವಮಿಮಂ ಕೀರ್ತಯೇದ್ಯಃ ಶೃಣೋತಿ ಚ ॥ ೭ ॥

ನಾಶುಭಂ ಪ್ರಾಪ್ನುಯಾತ್ಕಿಂಚಿದ್ದೀರ್ಘಮಾಯುರವಾಪ್ನುಯಾತ್ ।
ಯಥಾ ಸರ್ವೇಷು ದೇವೇಷು ವಿಶಿಷ್ಟೋ ಭಗವಾನ್ ಶಿವಃ ॥ ೮ ॥

ತಥಾ ಸ್ತವೋ ವರಿಷ್ಠೋಽಯಂ ಸ್ತವಾನಾಂ ವೇನನಿರ್ಮಿತಃ ।
ಯಶೋರಾಜ್ಯಸುಖೈಶ್ವರ್ಯಧನಮಾನಾರ್ಥಕಾಙ್ಕ್ಷಿಭಿಃ ॥ ೯ ॥

೪-೬. ಹಿರಣ್ಯಾಕ್ಷನ ಮನೆಯಲ್ಲಿ ಹುಟ್ಟಿ ಅಲ್ಲಿಯೇ ವೃದ್ಧಿಹೊಂದುತ್ತೀಯೆ. ಮೊದಲುಮಾಡಿರುವ ವೇದನಿಂದಾರೂಪವಾದ ಪ್ರಬಲವಾದ ಪಾಪದಿಂದ ಜಗನ್ಮಾತೆಯಲ್ಲಿಯೇ ಆಸಕ್ತಿಹೊಂದಿ ಅದರ ಫಲವಾಗಿ ನನ್ನಿಂದಲೇ ಶೂಲಘಾತದಿಂದ ಕೊಲ್ಲಲ್ಪಡುತ್ತೀಯೆ. ಅದರಿಂದಲೂ ಪಾಪನಾಶವುಂಟಾದಮೇಲೆ ಪುನಃ ನನ್ನನ್ನೇ ಭಕ್ತಿಯಿಂದ ಸೇವಿಸಿ ಭೃಂಗಿರಿಟಿ ಎಂಬ ಹೆಸರಿನ ಗಣಾಧಿಪತಿಯಾಗಿ ನನ್ನಲ್ಲೇ ವಾಸಿಸುತ್ತೀಯೆ. ಹೀಗೆ ನನ್ನ ಸಾನ್ನಿಧ್ಯದಲ್ಲಿದ್ದುಕೊಂಡೇ ಸಿದ್ಧಿಯನ್ನು ಹೊಂದುವೆ.

೭-೯. ವೇನನಿಂದ ಮಾಡಲ್ಪಟ್ಟ ಈ ಸ್ತುತಿಯನ್ನು ಯಾರು ಪಠಿಸುತ್ತಾರೆಯೋ ಕೇಳುತ್ತಾರೆಯೋ ಅವರಿಗೆ ಯಾವ ಅಶುಭವೂ ಉಂಟಾಗುವುದಿಲ್ಲ. ದೀರ್ಘವಾದ ಆಯುಸ್ಸೂ ಸಹ ಉಂಟಾಗುತ್ತದೆ. ಎಲ್ಲಾ ದೇವತೆಗಳಲ್ಲೂ ಶಿವನು ಹೇಗೋ ಎಲ್ಲಾ ಸ್ತುತಿಯಲ್ಲಿಯೂ ವೇನನ ಈ ಸ್ತುತಿಯು ಹಾಗೆಯೇ ಉತ್ಕೃಷ್ಟವಾದದ್ದು. ಯಶಸ್ಸು, ರಾಜ್ಯ, ಸುಖ, ಐಶ್ವರ್ಯ, ಧನ, ಗೌರವ ಮೊದಲಾದ ಫಲಗಳಲ್ಲಿ ಆಸಕ್ತಿ ಇರುವವರೂ ವಿದ್ಯೆಯಲ್ಲಿ ಆಶೆ ಇರುವವರೂ ಸಹ ಈ ಸ್ತುತಿಯನ್ನು ಭಕ್ತಿಯಿಂದ ಕೇಳಬೇಕು.

ಶ್ರೋತವ್ಯೋ ಭಕ್ತಿಮಾಸ್ಥಾಯ ವಿದ್ಯಾಕಾಮ್ಯೈಶ್ಚ ಯತ್ನತಃ ।
ವ್ಯಾಧಿತೋ ದುಃಖಿತೋ ದೀನಃ ಚೋರರಾಜಭಯಾನ್ವಿತಃ ॥೧೦॥

ರಾಜಕಾರ್ಯವಿಮುಕ್ತೋವಾ ಮುಚ್ಯತೆ ಮಹತೋ ಭಯಾತ್ ।
ಅನ್ಯೈನೈವ ತು ದೇಹೇನ ವರ್ಣಾನಾಂ ಶ್ರೇಷ್ಠತಾಂ ವ್ರಜೇತ್ ॥೧೧॥

ತೇಜಸಾ ಯಶಸಾ ಚೈವ ಯುಕ್ತೋ ಭವತಿ ನಿರ್ಮಲಃ ।
ನ ರಾಕ್ಷಸಾ ಪಿಶಾಚಾ ವಾ ನ ಭೂತಾ ನ ವಿನಾಯಕಾಃ ॥೧೨॥

ವಿಘ್ನಂ ಕುರ್ಯುಃ ಗೃಹೇ ತತ್ರ ಯತ್ರಾಯಂ ಪಠ್ಯತೆ ಸ್ತವಃ ।
ಶೃಣುಯಾದ್ಯಾ ಸ್ತವಂ ನಾರೀ ಅನುಜ್ಞಾಂ ಪ್ರಾಪ್ಯ ಭರ್ತೃತಃ ॥೧೩॥

ಮಾತೃಪಕ್ಷೇ ಪಿತುಃಪಕ್ಷೇ ಪೂಜ್ಯಾ ಭವತಿ ದೇವಿವತ್ ।
ಶೃಣುಯಾದ್ಯಸ್ತವಂ ದಿವ್ಯಂ ಕೀರ್ತಯೇದ್ವಾ ಸಮಾಹಿತಃ ॥೧೪॥

ತಸ್ಯ ಸರ್ವಾಣಿ ಕಾರ್ಯಾಣಿ ಸಿದ್ಧಿಂ ಗಚ್ಛಂತಿ ನಿತ್ಯಶಃ ।
ಮನಸಾ ಚಿಂತಿತಂ ಯಚ್ಚ ಯಚ್ಚ ವಾಚಾನುಕೀರ್ತಿತಂ ॥೧೫॥

೧೦-೧೨. ವ್ಯಾಧಿಗ್ರಸ್ತನೂ ದುಃಖದಿಂದ ಕೂಡಿರುವವನೂ ದಾರಿದ್ರ್ಯಾದಿಗಳಿಂದ ದೀನನೂ ಕಳ್ಳರು ರಾಜರು ಇವರಿಂದ ಭಯಪಟ್ಟಿರುವವನೂ ರಾಜಕಾರ್ಯದಿಂದ ಅಪರಾಧಮಾಡಿ ನಿವೃತ್ತಿಹೊಂದಿರುವವನೂ ಕೂಡ ಇದರಿಂದ ನಿರ್ಭಯನಾಗುತ್ತಾನೆ. ಇದೇ ದೇಹದಿಂದ ಉತ್ತಮವರ್ಣದವನಾಗುತ್ತಾನೆ ಅವನು ನಿಷ್ಪಾಪನಾಗಿ ತೇಜಸ್ವಿಯೂ ಯಶಸ್ವಿಯೂ ಆಗುತ್ತಾನೆ. ಯಾವ ಮನೆಯಲ್ಲಿ ಈ ಸ್ತುತಿಯು ಪಠಿಸಲ್ಪಡುವುದೋ ಅಲ್ಲಿ ರಾಕ್ಷಸರ ಪಿಶಾಚಗಳ ಭೂತಗಳ ದುಷ್ಟಗೃಹದೇವತೆಗಳ ವಿಘ್ನವಾವದೂ ಇರುವುದಿಲ್ಲ.

೧೩-೧೫. ಸ್ತ್ರೀಯಾದವಳು ಪತಿಯ ಅಪ್ಪಣೆಯಿಂದ ಈ ಸ್ತುತಿಯನ್ನು ಕೇಳಿದ್ದೇ ಆದರೆ ಮಾತೃವರ್ಗದಲ್ಲೂ ದೇವಿಯಂತೆ ಅವಳು ಪೂಜ್ಯಳಾಗುತ್ತಾಳೆ. ಯಾವನು ಮನಶ್ಶುದ್ಧಿಯಿಂದ ಈ ಸ್ತುತಿಯನ್ನು ಕೇಳುತ್ತಾನೆಯೋ ಅಥವಾ ಪಠಿಸುತ್ತಾನೆಯೋ ಅವನಿಗೆ ಸರ್ವಕಾರ್ಯಸಿದ್ಧಿಯೂ ನಿಯತವಾಗಿ ಉಂಟಾಗುತ್ತದೆ. ಮನಸ್ಸಿನಲ್ಲಿ ಅಪೇಕ್ಷಿಸಿದ ಮತ್ತು ಬಾಯಿನಿಂದ ಉಚ್ಚರಿಸಲಾದ ಸರ್ವಕಾರ್ಯವೂ ಸಿದ್ಧಿಸುತ್ತದೆ.

ಸರ್ವಂ ಸಂಪದ್ಯತೇ ತಸ್ಯ ಸ್ತವನಸ್ಯಾನುಕೀರ್ತನಾತ್ ।
ಮನಸಾ ಕರ್ಮಣಾ ವಾಚಾ ಕೃತಮೇನೋ ವಿನಶ್ಯತಿ
ವರಂ ವರಯ ಭದ್ರಂ ತೇ ಯತ್ತ್ವಯಾ ಮನಸೇಪ್ಸಿತಂ । ॥ ೧೬ ॥

ವೇನ ಉವಾಚ

ಅಸ್ಯ ಲಿಂಗಸ್ಯ ಮಾಹಾತ್ಮ್ಯಾತ್ತಥಾ ಲಿಂಗಸ್ಯ ದರ್ಶನಾತ್ ।
ಮುಕ್ತೋಽಹಂ ಪಾತಕೈಃ ಸರ್ವೈಃ ತವ ದರ್ಶನತಃ ಕಿಲ ॥ ೧೭ ॥

ಯದಿ ತುಷ್ಟೋಽಸಿ ದೇವೇಶ ಯದಿದೇಯೋ ವರೋ ಮಮ ।
ದೇವಸ್ವಭಕ್ಷಣಾಜ್ಜಾತಂ ಶ್ವಯೋನೌ ತವ ಸೇವಕಂ ॥ ೧೮ ॥

ಏತಸ್ಯಾಪಿ ಪ್ರಸಾದಂ ತ್ವಂ ಕರ್ತುಮರ್ಹಸಿ ಶಂಕರ ।
ಏತಸ್ಯಾಪಿ ಭವಾನ್ಮಧ್ಯೇ ಸರಸೋಽಹಂ ನಿಪಾತಿತಃ ॥ ೧೯ ॥

ಮನಸ್ಸಿನಿಂದಲೂ ಕರ್ಮದಿಂದಲೂ ವಾಕ್ಕಿನಿಂದಲೂ ಉಂಟಾಗಬಹುದಾದ ಎಲ್ಲಾ ಪಾಪವೂ ನಾಶಹೊಂದುತ್ತದೆ.

೧೭-೧೯. ನಿನಗೆ ಮಂಗಲವಾಗಲಿ. ಮನೋರಥಕ್ಕೆ ತಕ್ಕಂತೆ ಬೇಕಾದ ವರವನ್ನು ಕೇಳಿಕೋ ಎಂದು ಶಂಕರನು ಹೇಳಲಾಗಿ ವೇನನು ಈರೀತಿ ಪ್ರಾರ್ಥಿಸುತ್ತಾನೆ. ಪ್ರಭುವೇ, ಈ ಲಿಂಗದ ಮಾಹಾತ್ಮ್ಯದಿಂದಲೂ ದರ್ಶನದಿಂದಲೂ ನಿನ್ನ ದರ್ಶನದಿಂದಲೂ ಸಹ ನಾನು ಸರ್ವಪಾಪಗಳಿಂದಲೂ ಬಿಡುಗಡೆಯನ್ನು ಹೊಂದಿರುವೆನಷ್ಟೆ. ಎಲೈ ದೇವೇಶನೇ, ನೀನು ನನ್ನ ವಿಷಯದಲ್ಲಿ ಸಂತುಷ್ಟನಾಗಿದ್ದಲ್ಲಿ ನನಗೆ ವರವನ್ನು ಕೊಡುವ ಇಚ್ಛೆಇದ್ದಲ್ಲಿ ದೇವದ್ರವ್ಯ ಸೇವನೆಯಿಂದ ನಾಯಿಯಾಗಿ ಹುಟ್ಟಿರುವ ನಿನ್ನ ಸೇವಕನಾದ ಈ ಸಾರಮೇಯನ ವಿಷಯದಲ್ಲಿಯೂ ನೀನು ಅನುಗ್ರಹವನ್ನು ತೋರಿಸಬೇಕೆಂದು ಬೇಡುತ್ತೇನೆ. ಇವನ ಈ ಜನ್ಮವೂ ಕೂಡ ನಾನು ಈ ಸರೋವರದ ಮಧ್ಯದಲ್ಲಿ ಮುಳುಗಲು ಸಹಾಯಕಾರಿಯಾಯಿತು. ಮೊದಲು ನಾನು ಈ ತೀರ್ಥದಲ್ಲಿ ಸ್ನಾನಮಾಡಲು ದೇವತೆಗಳು ನನ್ನನ್ನು ನಿಷೇಧಿಸಿದ್ದರು.

ದೇವೈರ್ನಿವಾರಿತಃ ಪೂರ್ವಂ ತೀರ್ಥೆಸ್ಮಿನ್ ಸ್ನಾನಕಾರಣಾತ್ ।
ಅಯಂ ಕೃತೋಪಕಾರಶ್ಚ ಏತದರ್ಥೆ ವೃಣೋಮ್ಯಹಂ ॥ ೨೦ ॥

ತಸ್ಯೈತದ್ವಚನಂ ಶ್ರುತ್ವಾ ತುಷ್ಟಃ ಪ್ರೋವಾಚ ಶಂಕರಃ ।
ಏಷೋಽಪಿ ಪಾಪನಿರ್ಮುಕ್ತೋ ಭವಿಷ್ಯತಿ ನ ಸಂಶಯಃ ॥ ೨೧ ॥

ಪ್ರಸಾದಾನ್ಮೆ ಮಹಾಬಾಹೋ ಶಿವಲೋಕಂ ಗಮಿಷ್ಯತಿ ।
ತಥಾಸ್ತವಮಿಮಂ ಶ್ರುತ್ವಾ ಮುಚ್ಯತೆ ಸರ್ವಪಾತಕೈಃ ॥ ೨೨ ॥

ಕುರುಕ್ಷೇತ್ರಸ್ಯ ಮಾಹಾತ್ಮ್ಯಂ ಸರಸೋಽಸ್ಯ ಮಹೀಪತೆ ।
ಮಮ ಲಿಂಗಸ್ಯ ಚೋತ್ಪತ್ತಿಂ ಶ್ರುತ್ವಾ ಪಾಪೈಃ ಪ್ರಮುಚ್ಯತೆ ॥ ೨೩ ॥

ಸನತ್ಕುಮಾರ ಉವಾಚ

ಇತ್ಯೇವಮುಕ್ತ್ವಾ ಭಗವಾನ್ಸರ್ವಲೋಕನಮಸ್ಕೃತಃ ।
ಪಶ್ಯತಾಂ ಸರ್ವಲೋಕಾನಾಂ ತತ್ರೈವಾಂತರಧೀಯತ ॥ ೨೪ ॥

ಸ ಚ ಶ್ವಾತತ್ಕ್ಷಣಾದೇವ ಸ್ಮೃತ್ವಾ ಜನ್ಮಪುರಾತನಂ ।
ದಿವ್ಯಮೂರ್ತಿಧರೋ ಭೂತ್ವಾ ತಂ ರಾಜಾನಮುಪಸ್ಥಿತಃ ॥ ೨೫ ॥

೨೦-೨೩. ಇವನು ನನಗೆ ಉಪಕಾರಿಯಾದದ್ದರಿಂದಲೇ ಇವನಿಗಾಗಿ ಈ ವರವನ್ನು ನಾನು ಬೇಡುತ್ತಿದ್ದೇನೆ. ಈ ಮಾತನ್ನು ಕೇಳಿ ಸಂತುಷ್ಟನಾದ ಶಂಕರನು ಇವನೂ ಸಹ ನನ್ನ ಅನುಗ್ರಹದಿಂದ ಪಾಪಮುಕ್ತನಾಗುತ್ತಾನೆ. ಶಿವಲೋಕವನ್ನು ಹೊಂದುತ್ತಾನೆ. ಹಾಗೂ ನನ್ನ ಈ ಸ್ತುತಿಯನ್ನು ಕೇಳಿ ಕುರುಕ್ಷೇತ್ರದಲ್ಲಿರುವ ಈ ಸರೋವರದ ಮಾಹಾತ್ಮ್ಯವನ್ನೂ ಕೇಳಿ ಸರ್ವಪಾಪಮೋಕ್ಷವನ್ನು ಹೊಂದುತ್ತಾನೆ. ನನ್ನ ಲಿಂಗದ ಉತ್ಪತ್ತಿಯೂ ಕೂಡ ಶ್ರವಣಮಾತ್ರದಿಂದ ಪಾಪನಾಶಕವಾಗುತ್ತದೆ.

೨೪-೨೫. ಸನತ್ಕುಮಾರರು ಮುಂದಿನ ವೃತ್ತಾಂತವನ್ನು ಹೇಳುತ್ತಾರೆ:- ಪೂಜ್ಯನಾದ ಶಂಕರನು ಹೀಗೆ ಹೇಳಿ ಎಲ್ಲರೂ ನೋಡುತ್ತಿರುವಾಗಲೇ ಅಂತರ್ಧಾನ ಹೊಂದಿದನು. ಆ ಸಾರಮೇಯನೂ ಸಹ ಆಕ್ಷಣದಲ್ಲೇ ತನ್ನ ಪೂರ್ವಜನ್ಮವನ್ನು ನೆನಸಿಕೊಂಡು ದಿವ್ಯದೇಹವನ್ನು ಹೊಂದಿ ರಾಜನ ಸಮೀಪಕ್ಕೆ ಬಂದು ನಿಂತನು.

ಕೃತ್ವಾ ಸ್ನಾನಂ ತತೋವೈನ್ಯಃ ಪಿತೃದರ್ಶನಲಾಲಸಃ ।
ಸ್ಥಾಣುತೀರ್ಥೆ ಕುಟೀಂ ಶೂನ್ಯಾಂ ದೃಷ್ಟ್ವಾ ಶೋಕಸಮನ್ವಿತಃ ॥ ೨೬ ॥

ದೃಷ್ಟ್ವಾಬ್ರವೀತ್ತತೋ ವಾಕ್ಯಂ ಹರ್ಷೇಣ ಮಹತಾನ್ವಿತಃ।
ಸತ್ಪುತ್ರೇಣ ತ್ವಯಾ ವತ್ಸ ತ್ರಾತೋಽಹಂ ನರಕಾರ್ಣವಾತ್ ॥ ೨೭ ॥

ತ್ವಯಾಭಿಷಿಂಚಿತೋ ನಿತ್ಯಂ ತೀರ್ಥಸ್ಥಪುಲಿನೆ ಸ್ಥಿತಃ ।
ಅಸ್ಯ ಸಾಧೋಃ ಪ್ರಸಾದೇನ ಸ್ಥಾಣೋರ್ದೇವಸ್ಯ ದರ್ಶನಾತ್ ॥ ೨೮ ॥

ಮುಕ್ತಪಾಪಶ್ಚ ಸ್ವರ್ಲೋಕಂ ಯಾಸ್ಯೆ ಯತ್ರ ಶಿವಃಸ್ಥಿತಃ ।
ಇತ್ಯೇವಮುಕ್ತ್ವಾ ರಾಜಾನಂ ಪ್ರತಿಷ್ಠಾಪ್ಯ ಮಹೇಶ್ವರಂ ॥ ೨೯ ॥

ಸ್ಥಾಣುತೀರ್ಥೆ ಯಯೌ ಸಿದ್ಧಿಂ ತೇನ ಪುತ್ರೇಣ ತಾರಿತಃ ।
ಸಚ ಶ್ವಾ ಪರಮಾಂ ಸಿದ್ಧಿಂ ಸ್ಥಾಣುತೀರ್ಥಪ್ರಭಾವತಃ ॥ ೩೦ ॥

ದೊರೆಯಾದ ವೈನ್ಯನು ತನ್ನ ಪದ್ಧತಿಯ ಪ್ರಕಾರ ಸ್ನಾನಮಾಡಿ ತಂದೆಯನ್ನು ನೋಡಲು ಕುತೂಹಲಿಯಾಗಿ ಸ್ಥಾಣುತೀರ್ಥದ ಪರ್ಣಶಾಲೆಗೆ ಬಂದು ನೋಡಿ ಅಲ್ಲಿ ತಂದೆಯು ಇಲ್ಲದೆ ಇದ್ದದ್ದರಿಂದ ದುಃಖಿತನಾಗಿ ನಿಂತನು. ಅಲ್ಲಿಯೇ ದಿವ್ಯದೇಹ ವನ್ನು ಹೊಂದಿದ್ದ ತಂದೆಯಾದ ವೇನನು ಮಗನನ್ನು ನೋಡಿ ಸಂತೋಷದಿಂದ ಎಲೈ ಮಗನೇ, ಸತ್ಪುತ್ರನಾದ ನಿನ್ನಿಂದ ನಾನು ಘೋರವಾದ ನರಕದಿಂದ ಪಾರಾದೆನು.

೨೮-೩೦. ನಿನ್ನಿಂದ ನಿತ್ಯವೂ ತೀರ್ಥೋದಕಗಳಿಂದ ಸ್ನಾನಮಾಡಿಸಲ್ಪಡುತ್ತಿದ್ದ ನಾನು ಈ ತೀರ್ಥದ ನೆನೆಮರಳಿನಲ್ಲಿ ಕುಳಿತಿರುವಾಗ ಈ ಸಾಧುವಿನ (ಸಾರಮೇಯನ) ಅನುಗ್ರಹದಿಂದಲೂ ಸ್ಥಾಣುದೇವನ ದರ್ಶನದಿಂದಲೂ ಪಾಪನಾಶವನ್ನು ಹೊಂದಿ ಶಂಕರನಿರುವ ಸ್ಥಾನಕ್ಕೆ ಹೋಗುತ್ತೇನೆ. ಈರೀತಿ ದೊರೆಗೆ ಉತ್ತರವಿತ್ತು ಅಲ್ಲಿ ಈಶ್ವರನನ್ನೂ ಪ್ರತಿಷ್ಠೆಮಾಡಿ ದೊರೆಯಾಗಿದ್ದ ಆ ಪುತ್ರನಿಂದಲೇ ಉತ್ತಾರಿತನಾಗಿ ಸ್ಥಾಣುತೀರ್ಥದಲ್ಲಿಯೇ ಸಿದ್ಧಿಹೊಂದಿದನು. ಆ ಸಾರಮೇಯನೆಂಬ ನಾಯಿಯೂ ಕೂಡ ಆ ಸ್ಥಾಣುತೀರ್ಥದ ಪ್ರಭಾವದಿಂದ ಸರ್ವಪಾಪಮೋಕ್ಷವನ್ನು ಹೊಂದಿ ಅಲ್ಲಿಯೇ ಸಿದ್ಧನಾಗಿ ಶಿವಲೋಕವನ್ನು ಹೊಂದಿತು.

ವಿಮುಕ್ತೈಃ ಕಲುಷೈಃ ಸರ್ವೈಃ ಜಗಾಮ ಭವಮಂದಿರಂ।
ರಾಜಾ ಪಿತೃಋಣೈಃ ಮುಕ್ತಃ ಪರಿಪಾಲ್ಯ ವಸುಂಧರಾಂ ॥ ೩೧ ॥

ಪುತ್ರಾನುತ್ಪಾದ್ಯ ಧರ್ಮೇಣ ಕೃತ್ವಾ ಯಜ್ಞಂ ನಿರರ್ಗಲಂ।
ದತ್ವಾ ಕಾಮಾಂಶ್ಚ ವಿಪ್ರೇಭ್ಯಃ ಭುಕ್ತ್ವಾ ಭೋಗಾನ್ ಪೃಥಗ್ವಿಧಾನ್ ॥ ೩೨ ॥

ಸುಹೃದೋ ದ್ರವಿಣೈರ್ಯುಕ್ತ್ವಾನ್ಕಾಮೈಃ ಸಂತರ್ಪ್ಯ ಚ ಸ್ತ್ರಿಯಃ।
ಅಭಿಷಿಚ್ಯ ಸುತಂ ರಾಜ್ಯೆ ಕುರುಕ್ಷೇತ್ರಂ ಯಯೌ ನೃಪಃ ॥ ೩೩ ॥

ತತ್ರ ತಪ್ತ್ವಾ ತಪೋ ಘೋರಂ ಪೂಜಯಿತ್ವಾ ಚ ಶಂಕರಂ।
ಆತ್ಮೇಚ್ಛಯಾ ತನುಂ ತ್ಯಕ್ತ್ವಾ ಪ್ರಯಾತಃ ಪರಮಂ ಪದಂ ॥ ೩೪ ॥

ಏತತ್ಪ್ರಭಾವಂ ತೀರ್ಥಸ್ಯ ಸ್ಥಾಣೋರ್ಯಃ ಶೃಣುಯಾನ್ನರಃ।
ಸರ್ವಪಾಪವಿನಿರ್ಮುಕ್ತಃ ಪ್ರಯಾತಿ ಪರಮಂ ಪದಂ ॥ ೩೫ ॥

ಇತಿ ಶ್ರೀ ವಾಮನಪುರಾಣೇ ಸರೋಮಾಹಾತ್ಮ್ಯೆ
ಅಷ್ಟಚತ್ವಾರಿಂಶೋಽಧ್ಯಾಯಃ

೩೧-೩೫. ರಾಜನಾದ ವೈನ್ಯನೂ ಕೂಡ ಪಿತೃಋಣದಿಂದ ವಿಮುಕ್ತನಾಗಿ ಧರ್ಮದಿಂದ ಭೂಮಿಯನ್ನೂ ರಕ್ಷಿಸಿ ಸತ್ಪುತ್ರರನ್ನೂ ಹೊಂದಿ ಯಜ್ಞಯಾಗಾದಿಗಳನ್ನೂ ವಿಜೃಂಭಣೆಯಿಂದ ನಡೆಸಿ ಬ್ರಾಹ್ಮಣರಿಗೂ ಬೇಕಾದ ದಾನಗಳನ್ನು ಕೊಟ್ಟು ತಾನೂ ನಾನಾವಿಧವಾದ ರಾಜಭೋಗಗಳಿಂದ ತೃಪ್ತನಾಗಿ ಸ್ನೇಹಿತರಿಗೂ ಬೇಕಾದಷ್ಟು ದ್ರವ್ಯವನ್ನು ಕೊಟ್ಟು ಸ್ತ್ರೀಯರನ್ನೂ ಇಷ್ಟಾರ್ಥಗಳಿಂದ ಸಂತೋಷಪಡಿಸಿ ಮಗನನ್ನು ರಾಜ್ಯದಲ್ಲಿ ಪಟ್ಟಾಭಿಷೇಕಮಾಡಿ ಶಾಂತನಾಗಿ ತಾನೂ ಕುರುಕ್ಷೇತ್ರಕ್ಕೆ ಹೊರಟುಹೋದನು. ಅಲ್ಲಿಯೂ ಘೋರವಾದ ತಪಸ್ಸಿನಿಂದ ಶಂಕರನನ್ನು ಆರಾಧಿಸಿ ಸ್ವೇಚ್ಛೆಯಿಂದಲೇ ದೇಹವನ್ನು ಬಿಟ್ಟು ಪರಮಪದವನ್ನೇ ಹೊಂದಿದನು. ಈ ಸ್ಥಾಣು ತೀರ್ಥದ ಮಹಿಮೆಯನ್ನು ಯಾರು ಕೇಳುತ್ತಾರೆಯೋ ಅವರು ಸರ್ವಪಾಪಮೋಕ್ಷವನ್ನು ಹೊಂದಿ ಮುಕ್ತರಾಗುತ್ತಾರೆ.

ಇಲ್ಲಿಗೆ ಶ್ರೀ ವಾಮನಪುರಾಣದಲ್ಲಿ ಸರೋಮಾಹಾತ್ಮ್ಯವೆಂಬ ನಲವತ್ತೆಂಟನೆಯ
ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿಯೂ ಸರೋಮಹಾತ್ಮ್ಯವನ್ನೇ ಮುಂದುವರಿಸಿ ವೇನನಿಗೆ ಪ್ರಸನ್ನನಾದ ಈಶ್ವರನಿಂದುಂಟಾದ ಅನುಗ್ರಹವನ್ನೂ ಸಾರಮೇಯನಿಗೂ ವೇನನ ಕೋರಿಕೆಯಂತೆ ಉಂಟಾದ ದಿವ್ಯಲೋಕಪ್ರಾಪ್ತಿಯನ್ನೂ ಉದಾಹರಿಸಿ ವೇನನು ಮಾಡಿದ ಶಿವಸ್ತೋತ್ರವನ್ನು ಪ್ರಶಂಸಿಸಿ ಧೊರೆಯಾಗಿದ್ದ ವೈನ್ಯನಿಗೂ ಕೂಡ ತೀರ್ಥ ಯಾತ್ರಾಮಹಾತ್ಮ್ಯದಿಂದ ಇಹಲೋಕದ ಸಮಸ್ತ ಪುರುಷಾರ್ಥಗಳೂ ಉಂಟಾಯಿತೆಂದು ಹೇಳಿ ಕೊನೆಗೆ ಅವನೂ ಕುರುಕ್ಷೇತ್ರವನ್ನು ಸೇರಿ ಇಚ್ಛಾಧೀನಮರಣನಾಗಿ ಸಿದ್ಧಿಹೊಂದಿದನೆಂದು ತೀರ್ಥಮಹಾತ್ಮ್ಯವನ್ನೇ ಪುಷ್ಟೀಕರಿಸಲಾಗಿದೆ.

॥ ಶ್ರೀಃ ॥

ಶ್ರೀ ವಾ ಮ ನ ಪು ರಾ ಣಂ

ಏಕೋನಪಂಚಾಶತ್ತಮೋಽಧ್ಯಾಯಃ

ಮಾರ್ಕಂಡೇಯ ಉವಾಚ

ಚತುರ್ಮುಖಾನಾಮುತ್ಪತ್ತಿಂ ವಿಸ್ತರೇಣ ಮಮಾನಘ ।
ಪೃಥ್ವೀಶ್ವರಾಣಾಂ ಚ ತಥಾ ಶ್ರೋತುಮಿಚ್ಛಾ ಪ್ರವರ್ತತೇ ॥ ೧ ॥

ಸನತ್ಕುಮಾರ ಉವಾಚ

ಶೃಣುಸರ್ವಮಶೇಷೇಣ ಕಥಯಿಷ್ಯಾಮಿ ತೇಽನಘ ।
ಬ್ರಹ್ಮಣಃ ಸ್ರಷ್ಟುಕಾಮಸ್ಯ ಯದ್ವೃತ್ತಂ ಪದ್ಮಜನ್ಮನಃ ॥ ೨ ॥

ಉತ್ಪನ್ನ ಏವ ಭಗವಾನ್ ಬ್ರಹ್ಮಾ ಲೋಕಪಿತಾಮಹಃ ।
ಸಸರ್ಜ ಸರ್ವಭೂತಾನಿ ಸ್ಥಾವರಾಣಿ ಚರಾಣಿ ಚ ॥ ೩ ॥

ನಲವತ್ತೊಂಭತ್ತನೆಯ ಅಧ್ಯಾಯವು

೧-೩. ಪುನಃ ಮಾರ್ಕಂಡೇಯರು ಸರೋಮಾಹಾತ್ಮ್ಯಕ್ಕೇ ಅನುಬಂಧಿಸುವ ಮತ್ತೊಂದು ಪ್ರಶ್ನೆಯನ್ನು ಉಪಕ್ಷೇಪಿಸುತ್ತಾರೆ. ಚತುರ್ಮುಖನು ಮತ್ತು ಇತರ ಪ್ರಸಿದ್ಧರಾಜರುಗಳ ಉತ್ಪತ್ತಿಯನ್ನು ಕೇಳಲು ಕುತೂಹಲವಾಗುತ್ತಿದೆ ದಯಮಿಟ್ಟು ಅಪ್ಪಣೆಕೊಡಿಸಬೇಕು ಎಂದು ಮಾರ್ಕಂಡೇಯರು ಕೇಳಲಾಗಿ ಸನತ್ಕುಮಾರರು ಹೇಳುತ್ತಾರೆ:—ಎಲೈ ಪುಣ್ಯಶಾಲಿಯೇ, ಎಲ್ಲವನ್ನೂ ಹೇಳುತ್ತೇನೆ ಕೇಳು. ನಾರಾಯಣನ ನಾಭಿಕಮಲದಲ್ಲಿ ಉತ್ಪನ್ನವಾಗಿ ಜಗತ್ತನ್ನೆಲ್ಲಾ ಸೃಷ್ಟಿಸಲು ಇಚ್ಛೆಪಟ್ಟ ಚತುರ್ಮುಖನು ತಾನು ಹುಟ್ಟಿದವಡನೆಯೇ ಎಲ್ಲಾ ಪ್ರಾಣಿಗಳನ್ನೂ, ಚರಾಚರ ವನ್ನೂ ಸೃಷ್ಟಿಸಿದನು.

ಪುನಶ್ಚಿಂತಯತಃ ಸೃಷ್ಟಿಂ ಜಜ್ಞೇ ಕನ್ಯಾ ಮನೋರಮಾ ।
ನೀಲೋತ್ಪಲದಲಶ್ಯಾಮಾ ತನುಮಧ್ಯಾ ಸುಲೋಚನಾ ॥ ೪ ॥

ತಾಂ ದೃಷ್ಟ್ವಾಭಿಮತಾಂ ಬ್ರಹ್ಮಾ ಮೈಥುನಾಯಾಜುಹಾವ ತಾಂ ।
ತೇನ ಪಾಪೇನ ಮಹತಾ ಶಿರೋಶೀರ್ಯತ ವೇಧಸಃ ॥ ೫ ॥

ತೇನ ಶೀರ್ಣೇನ ಸ ಯಯೌ ತೀರ್ಥಂ ತ್ರೈಲೋಕ್ಯವಿಶ್ರುತಂ ।
ಸಾನ್ನಿಹತ್ಯಂ ಸರಃ ಪುಣ್ಯಂ ಸರ್ವಪಾಪಕ್ಷಯಾವಹಂ ॥ ೬ ॥

ತತ್ರ ಪುಣ್ಯೇ ಸ್ಥಾಣುತೀರ್ಥೇ ಋಷಿಸಿದ್ಧನಿಷೇವಿತೇ ।
ಸರಸ್ವತ್ಯುತ್ತರೇ ತೀರೇ ಪ್ರತಿಷ್ಠಾಪ್ಯ ಚತುರ್ಮುಖಃ ॥ ೭ ॥

ಆರಾಧಯಾಮಾಸ ತದಾ ಧೂಪೈರ್ಗಂಧೈರ್ಮನೋರಮೈಃ ।
ಉಪಹಾರೈಸ್ತಥಾ ಹೃದ್ಯೈರುದ್ರಸೂಕ್ತೈರ್ದಿನೇ ದಿನೇ ॥ ೮ ॥

ತಸ್ಯೈವಂ ಭಕ್ತಿಯುಕ್ತಸ್ಯ ಶಿವಪೂಜಾರತಸ್ಯ ಚ ।
ಸ್ವಯಮೇವಾಜಗಾಮಾಥ ಭಗವಾನ್ನೀಲಲೋಹಿತಃ ॥ ೯ ॥

೪-೮. ಪುನಃ ಸೃಷ್ಟಿಮಾಡಲು ಆಲೋಚನಾಪರನಾದ ಆ ಚತುರ್ಮುಖನಿಗೆ ನೈದಿಲೆಯ ದಳದಂತೆ ಶ್ಯಾಮಳಾಗಿಯೂ, ಸೂಕ್ಷ್ಮಮಧ್ಯೆಯಾಗಿಯೂ, ರಮಣೀಯ ನೇತ್ರಗಳುಳ್ಳವಳಾಗಿಯೂ ಇರುವ ಮನೋಹರಳಾದ ಕನ್ಯೆಯೊಬ್ಬಳು ಉಂಟಾದಳು. ಸುರೂಪಿಣಿಯಾದ ಆವಳನ್ನು ಮೆಚ್ಚಿ ಸಂಗಮಕ್ಕಾಗಿ ಅವಳನ್ನೇ ಚತುರ್ಮುಖನು ಕರೆದನು. ಆ ಮಹಾಪಾಪದಿಂದ ಅವನ ತಲೆಯೇ ಸೀಳಿಹೋಯಿತು. ಆಗ ಚತುರ್ಮುಖನು ಪಾಪನಿವೃತ್ತಿಗಾಗಿ ಆ ದುರವಸ್ಥೆಯಿಂದಲೇ ಕೂಡಿ ಲೋಕಪ್ರಸಿದ್ಧವಾಗಿಯೂ, ಪಾಪನಾಶಕವಾಗಿಯೂ ಇರುವ ಆ ಸನ್ನಿಹತ್ಯಾಕ್ಷೇತ್ರದ ಸರೋವರಕ್ಕೇ ಬಂದನು. ಅಲ್ಲಿ ಋಷಿಗಳಿಂದ ಸೇವಿಸಲ್ಪಡುತ್ತಿರುವ ಪುಣ್ಯಾಕರವಾದ ಸ್ಥಾಣುತೀರ್ಥದಲ್ಲಿ ಸರಸ್ವತಿಯ ಉತ್ತರತೀರದಲ್ಲಿ ನೆಲಸಿ ಗಂಧಪುಷ್ಪಧೂಪಾದಿಗಳಿಂದಲೂ, ನೈವೇದ್ಯಾದಿಗಳಿಂದಲೂ, ರುದ್ರಸೂಕ್ತದಿಂದಲೂ ಸಹ ಈಶ್ವರನನ್ನು ಪ್ರತಿದಿನವೂ ಆರಾಧಿಸಿದನು.

೯-೧೦. ಈ ಪ್ರಕಾರ ಭಕ್ತಿಯಿಂದ ಶಿವಪೂಜೆಯಲ್ಲಿ ಆಸಕ್ತನಾಗಿರುವ ಚತುರ್ಮುಖನನ್ನು ವಿಚಾರಿಸಲು ಈಶ್ವರನು ತಾನೇ ಅಲ್ಲಿ ಬಂದನು. ಹಾಗೆ ಬಂದ

ತಮಾಗತಂ ಶಿವಂ ದೃಷ್ಟ್ವಾ ಬ್ರಹ್ಮಾ ಲೋಕಪಿತಾಮಹಃ ।
ಪ್ರಣಮ್ಯ ಶಿರಸಾ ಭೂಮೌ ಸ್ತುತಿಂ ತಸ್ಯ ಚಕಾರ ಹ ॥ ೧೦ ॥

ಬ್ರಹ್ಮೋವಾಚ

ನಮಸ್ತೇಽಸ್ತು ಮಹಾದೇವ ಭೂತಭವ್ಯಭವಾಶ್ರಯ ।
ನಮಸ್ತೆ ಸ್ತುತಿನಿತ್ಯಾಯ ನಮಸ್ತ್ರೈಲೋಕ್ಯಪಾಲಿನೆ ॥ ೧೧ ॥

ನಮಃ ಪವಿತ್ರದೇಹಾಯ ಸರ್ವಕಲ್ಮಷನಾಶಿನೆ ।
ಚರಾಚರಗುರೊ ಗುಹ್ಯ ಗುಹ್ಯಾನಾಂ ಚ ಪ್ರಕಾಶಕೃತ್ ॥ ೧೨ ॥

ರೋಗಾ ನಯಾಂತಿ ಭಿಷಜ್ಯೈಃ ಸರ್ವರೋಗವಿನಾಶನ ।
ರೌರವಾಜಿನಸಂವೀತ ವೀತಶೋಕ ನಮೋಽಸ್ತುತೆ ॥ ೧೩ ॥

ವಾರಿಕಲ್ಲೋಲಸಂಕ್ಷುಬ್ಧಮಹಾಬುದ್ಧಿವಿಘಟ್ಟನ ।
ತ್ವನ್ನಾಮಜಾಪಿನೋ ದೇವ ನ ಭವಂತಿ ಭವಾಶ್ರಯಾಃ ॥ ೧೪ ॥

ಈಶ್ವರನನ್ನು ನೋಡಿ ಲೋಕಪಿತಾಮಹನಾದ ಆ ಚತುರ್ಮುಖನು ಭಕ್ತಿಯಿಂದ ಸಾಷ್ಟಾಂಗಪ್ರಣಾಮಮಾಡಿ ಈರೀತಿ ಆ ಶಂಕರನನ್ನು ಸ್ತೋತ್ರಮಾಡಿದನು.

೧೧-೧೪. ಎಲೈ ಮಹಾದೇವನೇ, ಪ್ರಾಣಿಗಳ ಅನಿವಾರ್ಯ ಸಂಸಾರಕ್ಕೆ ಕಾರಣಭೂತನೇ, (ಅಥವಾ ರಮಣೀಯವಾದ ಸಂಸಾರಕ್ಕೆ ಕಾರಣನೇ) ನಿನಗೆ ನಮಸ್ಕಾರಗಳು ನಿತ್ಯವೂ ಸ್ತೋತ್ರಾರ್ಹನೇ ನಿನಗೆ ನಮಸ್ಕಾರಗಳು. ಪವಿತ್ರದೇವನೇ, ಸರ್ವಪಾಪನಾಶಕನೇ, ಚರಾಚರಹಿತೈಷಿಯೇ, ರಹಸ್ಯತಮವಾದ ತತ್ವಗಳಿಗೂ ಪ್ರಕಾಶಕನೇ ನಿನಗೆ ನಮಸ್ಕಾರಗಳು. ವೈದ್ಯರಿಂದ ನಾಶವಾಗದಿರುವ ರೋಗಗಳಿಗೆಲ್ಲಾ ನಾಶಕನೇ, ಜಿಂಕೆಯ ಚರ್ಮದ ಹೊದಿಕೆಯುಳ್ಳವನೇ, ಶೋಕರಹಿತನೇ, ನಿನಗೆ ನಮಸ್ಕಾರಗಳು. ಅಲೆಗಳ ಆಘಾತದಿಂದ ಅಭಿವೃದ್ಧಿಹೊಂದುವ ನೀರಿನಂತೆ ಉಕ್ಕುತ್ತಿರುವ ಬುದ್ಧಿವೈಭವವುಳ್ಳವನೇ, ನಿನ್ನ ನಾಮಸ್ಮರಣೆಮಾಡುವವರೂ ಸಹ ಸಂಸಾರದಿಂದ ಬಿಡುಗಡೆ ಹೊಂದುತ್ತಾರೆ.

ನಮಸ್ತೆ ನಿತ್ಯನಿತ್ಯಾಯ ನಮಸ್ತ್ರೈಲೋಕ್ಯನಾಶಿನೆ ।
ಶಂಕರಾಯಾಪ್ರಮೇಯಾಯ ವ್ಯಾಧೀನಾಂ ಶಮನಾಯ ಚ ॥ ೧೫ ॥

ಪರಾಯಪರಿಮೇಯಾಯ ಸರ್ವಭೂತಪ್ರಿಯಾಯ ಚ ।
ಯೋಗೇಶ್ವರಾಯ ದೇವಾಯ ಸರ್ವಪಾಪಕ್ಷಯಾಯ ಚ ॥ ೧೬ ॥

ನಮಃ ಸ್ಥಾಣ್ವೆ ಪ್ರಸಿದ್ಧಾಯ ಸಿದ್ಧಬಂದಿಸ್ತುತಾಯ ಚ ।
ಭೂತಸಂಸಾರದುರ್ಗಾಯ ವಿಶ್ವರೂಪಾಯ ತೆ ನಮಃ ॥ ೧೭ ॥

ಫಣೀಂದ್ರೋಕ್ತಮಹಿಮ್ನೆ ತೆ ಫಣೀಂದ್ರಾಂಗದಧಾರಿಣೆ ।
ಫಣೀಂದ್ರವರಹಾರಾಯ ಭಾಸ್ಕರಾಯ ನಮೋ ನಮಃ ॥ ೧೮ ॥

ಏವಂ ಸ್ತುತೋ ಮಹಾದೇವಃ ಬ್ರಹ್ಮಾಣಂ ಪ್ರಾಹ ಶಂಕರಃ ।
ನಚ ಮನ್ಯುಸ್ತ್ವಯಾ ಕಾರ್ಯೋ ಭಾವಿನ್ಯರ್ಥೆ ಕದಾಚನ ॥ ೧೯ ॥

೧೫-೧೮. ನಿತ್ಯರಲ್ಲೂ ನಿತ್ಯನಾಗಿಯೂ, ತ್ರೈಲೋಕ್ಯನಾಶಕನಾಗಿಯೂ, ಮಂಗಲಪ್ರದನಾಗಿಯೂ, ಅಪರಿಚ್ಛಿನ್ನಸ್ವರೂಪನಾಗಿಯೂ, ವ್ಯಾಧಿನಾಶಕನಾಗಿಯೂ, ಇರುವ ನಿನಗೆ ನಮಸ್ಕಾರಗಳು. ಪರಸ್ವರೂಪನಾಗಿಯೂ, ಊಹಿಸಲಶಕ್ಯನಾಗಿಯೂ, ಸರ್ವಪ್ರಾಣಿಪ್ರಿಯನಾಗಿಯೂ, ಯೋಗಸಿದ್ಧಿಗಳಿಗೆ ಪ್ರಭುವಾಗಿಯೂ, ಲೀಲಾಮೂರ್ತಿಯಾಗಿಯೂ, (ಅಥವಾ ದೇದೀಪ್ಯಮಾನನಾಗಿಯೂ) ಸರ್ವಪಾಪನಾಶಕನಾಗಿಯೂ ಇರುವ ನಿನಗೆ ನಮಸ್ಕಾರಗಳು. ಪ್ರಸಿದ್ಧ ಸ್ಥಾಣುಮೂರ್ತಿಯಾಗಿಯೂ, ಸಿದ್ಧರೆಂಬ ಸ್ತುತಿಪಾಠಕರುಗಳಿಂದ ಹೊಗಳಲ್ಪಡುವನಾಗಿಯೂ, ಭೂತಪ್ರೇತಗಳಿಗೆ ಸ್ಥಿರವಾದ ಆಶ್ರಯನಾಗಿಯೂ, (ಅಥವಾ ಪ್ರಾಣಿಗಳ ದುರ್ಗರೂಪವಾದ ಸಂಸಾರಕ್ಕೆ ಪ್ರವರ್ತಕನಾಗಿಯೂ) ವಿಶ್ವರೂಪಿಯಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು. ಆದಿಶೇಷನಿಂದ ಪ್ರಶಂಸಿಸಲ್ಪಟ್ಟ ಮಹಿಮೆಯುಳ್ಳವನಾಗಿಯೂ, ಸರ್ಪರಾಜನೆಂಬ ತೋಳು ಬಳೆಯುಳ್ಳವನಾಗಿಯೂ, ಸರ್ಪಗಳ ಹಾರವುಳ್ಳವನಾಗಿಯೂ, ಪ್ರಕಾಶರೂಪಿಯಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು.

೧೯-೨೧. ಹೀಗೆ ಸ್ತೋತ್ರಮಾಡಲ್ಪಟ್ಟ ಶಂಕರನು ಬ್ರಹ್ಮನನ್ನು ಕುರಿತು ಅನಿವಾರ್ಯವಾದ ಸುಖದುಃಖ ವಿಷಯದಲ್ಲಿ ನೀನು ಶೋಕಪಡಲು ಕಾರಣವಿಲ್ಲ. ಮೊದಲು ವಾರಾಹಕಲ್ಪದಲ್ಲಿ ನಿನ್ನ ಒಂದು ತಲೆಯ ವಿಷಯದಲ್ಲಿ ನಾನು ಅಪಕಾರ

ಪುರಾ ವಾರಾಹಕಲ್ಪೇ ತೇ ಯನ್ಮಯಾಪಕೃತಂ ಶಿರಃ ।
ಚತುರ್ಮುಖಂ ಚ ತದಭೂನ್ನ ಕದಾಚಿನ್ನಶಿಷ್ಯತಿ ॥ ೨೦ ॥

ಅಸ್ಮಿನ್ ಸನ್ನಿಹಿತೇ ತೀರ್ಥೇ ಲಿಂಗಾನಿ ಮಮ ಭಕ್ತಿತಃ ।
ಪ್ರತಿಷ್ಠಾಪ್ಯ ವಿಮುಕ್ತಸ್ತ್ವಂ ಸರ್ವಪಾಪೈಃ ಭವಿಷ್ಯಸಿ ॥ ೨೧ ॥

ಸೃಷ್ಟಿಕಾಮೇನ ಚ ಯತಃ ತ್ವಯಾಹಂ ಪ್ರೇರಿತಃ ಕಿಲ ।
ತೇನಾಹಂ ತ್ವಾಂ ತಥೇತ್ಯುಕ್ತ್ವಾ ಭೂತೇಭ್ಯೋ ದರ್ಶನಂ ಗತಃ ॥ ೨೨ ॥

ದೀರ್ಘಕಾಲಂ ತಪಸ್ತಪ್ತ್ವಾ ಮಗ್ನಃ ಸನ್ನಿಹಿತೇ ಸ್ಥಿತಃ ।
ಸುಮಹಾಂತಂ ತತಃ ಕಾಲಂ ತ್ವಂ ಪ್ರತೀಕ್ಷಾಂ ಮಮಾಕರೋಃ ॥ ೨೩ ॥

ಸ್ರಷ್ಟಾಹಂ ಸರ್ವಭೂತಾನಾಂ ಮನಸಾ ಕಲ್ಪಿತಸ್ತ್ವಯಾ ।
ಸೋಽಬ್ರವೀತ್ತ್ವಾಂ ತದಾ ದೃಷ್ಟ್ವಾ ಮಾಂ ಮಗ್ನಂ ಚ ತತೋಽಂಭಸಿ ॥ ೨೪ ॥

ಯದಿನ್ಯೋ ನಾಗ್ರಜಸ್ತ್ವೇಭ್ಯಃ ತತಃ ಸ್ರಕ್ಷ್ಯಾಮಹೇ ಪ್ರಜಾಃ ।
ತ್ವಯ್ಯೇವೋಕ್ತಶ್ಚ ನೈವಾಸ್ತಿ ತ್ವದನ್ಯಃ ಪುರುಷೋಽಗ್ರಜಃ ॥ ೨೫ ॥

ಮಾಡಿ ನಿನ್ನನ್ನು ನಾನು ನಾಲ್ಕು ತಲೆಯವನನ್ನಾಗಿ ಮಾಡಿರುವೆನು. ಈಗ ನಿನಗಿರುವ ನಾಲ್ಕು ತಲೆಗಳಿಗೆ ಯಾವಾಗಲೂ ಅಪಾಯವಿಲ್ಲ. ಈ ತೀರ್ಥದಲ್ಲಿ ಸನ್ನಿಹಿತವಾಗಿರುವಂತೆ ನನ್ನ ಲಿಂಗಗಳನ್ನು ಭಕ್ತಿಯಿಂದ ಪ್ರತಿಷ್ಠೆಮಾಡಿ ಎಲ್ಲಾ ಪಾಪಗಳಿಂದಲೂ ನೀನು ಬಿಡುಗಡೆ ಹೊಂದುತ್ತೀಯೆ.

೨೨-೨೫. ಸೃಷ್ಟಿಮಾಡುವ ಇಚ್ಛೆಯಿಂದ ನೀನು ನನ್ನನ್ನು ಆಗ ಪ್ರೇರಿಸಿದೆಯಷ್ಟೆ. ನಾನೂ ಹಾಗೇ ಆಗಲೆಂದು ಒಪ್ಪಿ ನಿಜಸ್ವರೂಪದಿಂದ ಎಲ್ಲರಿಗೂ ದರ್ಶನವನ್ನು ಕೊಟ್ಟೆನು. ಹಾಗೆಯೇ ಬಹಳಕಾಲ ತಪಸ್ಸನ್ನು ಮಾಡಿ ಈ ಸನ್ನಿಹಿತ ಸರೋವರದಲ್ಲಿ ಮುಳುಗಿದ್ದೆನು. ನೀನೂ ನನಗೋಸ್ಕರ ಬಹಳಕಾಲ ನಿರೀಕ್ಷಿಸಿಕೊಂಡಿದ್ದೆಯಷ್ಟೆ. ಆಗ ಜಗತ್ಸೃಷ್ಟಿಗಾಗಿ ನನ್ನ ಸ್ವರೂಪವನ್ನು ನೀನೇ ಮನಸ್ಸಿನಿಂದ ಕಲ್ಪಿಸಿಕೊಂಡೆಯಷ್ಟೆ. ಹಾಗೆ ಕಲ್ಪಿಸಿಕೊಂಡ ಪುರುಷನು ನೀರಿನಲ್ಲಿ ಮುಳುಗಿರುವ ನನ್ನನ್ನು ನಿನಗೆ ಹೇಳಿದನು. ಮತ್ತು ನಿನ್ನ ಸೃಷ್ಟಿಕಾರ್ಯಕ್ಕೆ ಸಹಕಾರಿಯಾಗಲು ಇರುವವರಿಗಿಂತಲೂ ದೊಡ್ಡವರಾರೂ ಇಲ್ಲದಿರುವ ಪಕ್ಷದಲ್ಲಿ ನಾನೇ ಸೃಷ್ಟಿಮಾಡುತ್ತೇನೆ ಎಂದೂ ನಿನಗೆ ಹೇಳಿದನು. ಅಂತಹವರು ಯಾರೂ ಇಲ್ಲವೆಂದು ನೀನೇ ಹೇಳಲು ಅವನೇ ಸೃಷ್ಟಿಕಾರ್ಯದಲ್ಲಿ ನಿಂತನು.

ಸ್ಥಾಣುರೇಷ ಜಲೇ ಮಗ್ನಃ ವಿವಶಃ ಕುರು ಮದ್ಧಿತಂ ।
ಸಸರ್ವಭೂತಾನಸೃಜದ್ದಕ್ಷಾದೀಂಶ್ಚ ಪ್ರಜಾಪತೀನ್ ॥ ೨೬ ॥

ಯೈರಿಮಂ ಪ್ರಾಕರೋತ್ಸರ್ವಂ ಭೂತಗ್ರಾಮಂ ಚತುರ್ವಿಧಂ ।
ತಾಃ ಸೃಷ್ಟಮಾತ್ರಾಃ ಕ್ಷುಧಿತಾಃ ಪ್ರಜಾಃ ಸರ್ವಾಃ ಪ್ರಜಾಪ್ರತಿಂ ॥ ೨೭ ॥

ಜಿಘಾತ್ಸವಃ ತದಾ ಬ್ರಹ್ಮನ್ ಸಹಸಾ ಪ್ರಾದ್ರವಂಸ್ತದಾ ।
ಸಂಭಕ್ಷ್ಯಮಾಣಸ್ತ್ರಾಣಾರ್ಥೀ ಪಿತಾಮಹಮುಪಾದ್ರವತ್ ॥ ೨೮ ॥

ಅಥಾಸಾಂಚ ಮಹಾವೃತ್ತಿಃ ಪ್ರಜಾನಾಂ ಸಂವಿಧೀಯತಾಂ ।
ದತ್ತಂ ತಾಭ್ಯಸ್ತ್ವಯಾಪ್ಯನ್ನಂ ಸ್ಥಾವರಾಣಾಂ ಮಹೌಷಧೀಃ ॥ ೨೯ ॥

ಜಂಗಮಾನಿ ಚ ಭೂತಾನಿ ದುರ್ಬಲಾನಿ ಬಲೀಯಸಾಂ ।
ವಿಹಿತಾನ್ನಾಃ ಪ್ರಜಾಃ ಸರ್ವಾಃ ಪುನರ್ಜಗ್ಮುರ್ಯಥಾಗತಂ ॥ ೩೦ ॥

ತತೋ ವವೃಧಿರೆ ಸರ್ವಾಃ ಪ್ರೀತಿಯುಕ್ತಾಃ ಪರಸ್ಪರಂ ।
ಭೂತಗ್ರಾಮೆ ವಿವೃದ್ಧೇ ತು ತುಷ್ಟೆ ಲೋಕಗುರೌ ತ್ವಯಿ ॥ ೩೧ ॥

೨೬-೨೮. ಮತ್ತೂ ನೀನು ಈ ಸ್ಥಾಣುವೂ ನೀರಿನಲ್ಲಿ ಮುಳುಗಿ ನಿಂತು ಸೃಷ್ಟಿಕಾರ್ಯದಲ್ಲಿ ಅಸಮರ್ಥನಾಗಿದ್ದಾನೆ. ನನ್ನ ಹಿತಕ್ಕಾಗಿ ನೀನೇ ಸೃಷ್ಟಿಕಾರ್ಯವನ್ನು ಮಾಡು ಎಂದು ಹೇಳಿದನಂತರ ನಾಲ್ಕು ವಿಧವಾದ ಈ ಭೂತಸಮೂಹಗಳು ವೃದ್ಧಿಹೊಂದಲನುಕೂಲವಾಗುವಂತೆ ಎಲ್ಲಾ ಭೂತಗಳನ್ನೂ ದಕ್ಷಪ್ರಜಾಪತಿಯೇ ಮೊದಲಾದವರುಗಳನ್ನೂ ಸೃಷ್ಟಿಸಿದನು. ಸೃಷ್ಟಿಯಾದ ಒಡನೆಯೇ ಈ ಪ್ರಾಣಿಗಳು ಬಹಳ ಹಸಿವಿನಿಂದ ಕೂಡಿ ಆ ಸೃಷ್ಟಿಮಾಡಿದವನನ್ನೇ ತಿನ್ನಲು ಎಲ್ಲವೂ ಅವನ ಸಮೀಪಕ್ಕೆ ಓಡಿದವು. ಅವುಗಳಿಂದ ಪೀಡಿಸಲ್ಪಟ್ಟ ಆ ಸೃಷ್ಟಿಕರ್ತನು ಪಿತಾಮಹನಾದ ನಿನ್ನಲ್ಲಿ ರಕ್ಷಣಾರ್ಥಿಯಾಗಿ ಓಡಿಬಂದನು.

೨೯-೩೧. ಓಡಿಬಂದು ಈ ಪ್ರಜೆಗಳಿಗೆಲ್ಲಾ ಸರಿಯಾದ ಜೀವನವನ್ನು ಕಲ್ಪಿಸಬೇಕೆಂದು ಪ್ರಾರ್ಥಿಸಿದನು. ನೀನೂ ಸಹ ಅವನ ಪ್ರಾರ್ಥನೆಯಂತೆ ಸ್ಥಾವರಗಳಿಗೆಲ್ಲಾ ಓಷಧಿವಿಶೇಷಗಳನ್ನೂ, ಜಂಗಮಗಳಲ್ಲಿ ದೊಡ್ಡಪ್ರಾಣಿಗಳಿಗೆಲ್ಲಾ ದುರ್ಬಲವಾದ ಸಣ್ಣಪ್ರಾಣಿಗಳನ್ನೂ ಆಹಾರವನ್ನಾಗಿ ಕಲ್ಪಿಸಿದೆ. ಹೀಗೆ ಅವುಗಳಿಗೆಲ್ಲಾ ಅನ್ನವು ಏರ್ಪಟ್ಟಮೇಲೆ ಅವೆಲ್ಲವೂ ಸಂತೋಷದಿಂದ ತಾನು ಬಂದ ದಾರಿಯಲ್ಲಿ

ಸಮುತ್ತಿಷ್ಠನ್ ಜಲಾತ್ತಸ್ಮಾತ್ಪ್ರಜಾಃ ಸಂದೃಷ್ಟವಾನಹಂ ।
ತತೋಽಹಂ ತಾಃ ಪ್ರಜಾಃ ದೃಷ್ಟ್ವಾ ವಿಹಿತಾಃ ಸ್ವೇನ ತೇಜಸಾ ॥ ೩೨ ॥

ಕ್ರೋಧೇನ ಮಹತಾ ಯುಕ್ತೋಽ ಲಿಂಗಮುತ್ಪಾಟ್ಯ ಚಾಕ್ಷಿಪಂ ।
ತತ್ ಕ್ಷಿಪ್ತಂ ಸರಸೋಽ ಮಧ್ಯೇ ಊರ್ಧ್ವಮೇವ ಯದಾ ಸ್ಥಿತಂ ॥ ೩೩ ॥

ತದಾ ಪ್ರಭೃತಿ ಲೋಕೇಽಸ್ಮಿನ್ ಸ್ಥಾಣುರಿತ್ಯೇಷ ವಿಶ್ರುತಃ ।
ಸಕೃದ್ದರ್ಶನಮಾತ್ರೇಣ ವಿಮುಕ್ತಃ ಸರ್ವಕಿಲ್ಬಿಷೈಃ ॥ ೩೪ ॥

ಪ್ರಯಾತಿ ಪರಮಂ ಮೋಕ್ಷಂ ಯಸ್ಮಾನ್ನಾವರ್ತತೇ ಪುನಃ ।
ಯಶ್ಚೇಹ ತೀರ್ಥೇ ನಿವಸೇತ್ಕೃಷ್ಣಾಷ್ಟಮ್ಯಾಂ ಸಮಾಹಿತಃ ॥ ೩೫ ॥

ಸಮುಕ್ತಃ ಪಾತಕೈಸ್ಸರ್ವೈಃ ಅಗಮ್ಯಾಗಮನೋದ್ಭವೈಃ ।
ಇತ್ಯುಕ್ತ್ವಾ ಭಗವಾನ್ ದೇವಸ್ತತ್ರೈವಾಂತರಧೀಯತ ॥ ೩೬ ॥

ಹೊರಟವು. ಆಹಾರಲಾಭದಿಂದ ಕೂಡಿದ ಆ ಪ್ರಜೆಗಳು ಪರಸ್ಪರ ಸಂತೋಷದಿಂದ ವೃದ್ಧಿಹೊಂದಿದವು. ಹೀಗೆ ಸೃಷ್ಟವಾದ ಪ್ರಾಣಿಗಳು ವೃದ್ಧಿಹೊಂದಲಾಗಿ ಇವನ್ನು ನೋಡಿ ನೀನೂ ಸಂತುಷ್ಟನಾದೆ. ಆಗ ನಾನು ಜಲದಿಂದ ಮೇಲಕ್ಕೆದ್ದು ಈ ಪ್ರಜೆಗಳೆಲ್ಲವನ್ನೂ ನೋಡಿದೆನು.

೩೨-೩೬. ತಮ್ಮ ತಮ್ಮ ತೇಜಸ್ಸಿನಿಂದ ವೃದ್ಧಿಹೊಂದಿರುವ ಆ ಪ್ರಜೆಗಳನ್ನು ನೋಡಿ ಮಹಾಕೋಪದಿಂದ ಲಿಂಗವನ್ನು ಕಿತ್ತು ಅವುಗಳಮೇಲೆ ಎಸೆದೆನು. ಹಾಗೆ ಎಸೆಯಲ್ಪಟ್ಟ ಆ ಲಿಂಗವು ಸರೋವರದ ಮಧ್ಯದಲ್ಲಿ ಮೇಲ್ಮುಖವಾಗಿ ನಿಂತಿದ್ದರಿಂದ ಅದು ಸ್ಥಾಣುವೆಂಬದಾಗಿ ಲೋಕದಲ್ಲಿ ಪ್ರಸಿದ್ಧಿ ಹೊಂದಿತು. ಅದನ್ನು ಒಂದು ಬಾರಿ ದರ್ಶನಮಾಡಿದವನೂ ಸಹ ಸರ್ವಪಾಪಗಳಿಂದಲೂ ಮುಕ್ತನಾಗಿ ಪುನರಾವೃತ್ತಿ ಇಲ್ಲದ ಮೋಕ್ಷವನ್ನೂ ಹೊಂದುತ್ತಾನೆ. ಯಾವನು ಈ ತೀರ್ಥದಲ್ಲಿ ಕೃಷ್ಣಾಷ್ಟಮಿಯ ದಿವಸ ವ್ರತನಿಯಮದೊಡನೆ ವಾಸಮಾಡುತ್ತಾನೆಯೋ ಅವನು ಅಗಮ್ಯಾಗಮನವೇ ಮೊದಲಾದ ಸರ್ವಪಾಪಗಳಿಂದಲೂ ನಿವೃತ್ತಿಹೊಂದುತ್ತಾನೆ. ಹೀಗೆ ಹೇಳಿ ಶಂಕರನು ಅಲ್ಲಿಯೇ ಅಂತರ್ಧಾನ ಹೊಂದಿದನು.

ಬ್ರಹ್ಮಾ ವಿಶುದ್ಧಪಾಪಸ್ತು ಪೂಜ್ಯ ದೇವಂ ಚತುರ್ಮುಖಂ ।
ಲಿಂಗಾನಿ ದೇವದೇವಸ್ಯ ಸಸೃಜೆ ಶರಮಧ್ಯತಃ ॥ ೩೭ ॥

ಆದ್ಯಂ ಬ್ರಹ್ಮಸರಃ ಪುಣ್ಯಂ ಹರೇಃ ಪಾರ್ಶ್ವೇ ಪ್ರತಿಷ್ಠಿತಂ ।
ಚತುರ್ಥಂ ಬ್ರಹ್ಮಣೋ ಲಿಂಗಂ ಸರಸ್ವತ್ಯಾಃ ತಟೆ ಸ್ಥಿತಂ ॥ ೩೮ ॥

ತಸ್ಯೈವ ಪೂರ್ವದಿಗ್ಭಾಗೆ ತೃತೀಯಂ ಚ ಪ್ರತಿಷ್ಠಿತಂ ।
ಚತುರ್ಥಂ ಬ್ರಹ್ಮಣೋ ಲಿಂಗಂ ಸರಸ್ವತ್ಯಾಃ ತಟೆ ಸ್ಥಿತಂ ॥ ೩೯ ॥

ಕೃತಾನ್ಯೇತಾನಿ ತೀರ್ಥಾನಿ ಪುಣ್ಯಾನಿ ಪಾವನಾನಿ ಚ ।
ಯೇ ಪಶ್ಯಂತಿ ನಿರಾಹಾರಾಸ್ತೇ ಯಾಂತಿ ಪರಮಾಂ ಗತಿಂ ॥ ೪೦ ॥

ಕೃತೇ ಯುಗೇ ಹರೇ ಪಾರ್ಶ್ವೆ ತ್ರೇತಾಯಾಂ ಬ್ರಹ್ಮಣಾಶ್ರಮೆ ।
ದ್ವಾಪರೇ ತಸ್ಯ ಪೂರ್ವೇಣ ಸರಸ್ವತ್ಯಾಸ್ತಟೆ ಕಲೌ ॥ ೪೧ ॥

ಏತಾನಿ ಪೂಜಯಿತ್ವಾ ತು ದೃಷ್ಟ್ವಾ ಭಕ್ತಿಸಮನ್ವಿತಾಃ ।
ವಿಮುಕ್ತಾಃ ಕಲುಷೈಸ್ಸರ್ವೈಃ ಪ್ರಯಾಂತಿ ಪರಮಾಂ ಗತಿಂ ॥ ೪೨ ॥

೩೭-೪೦. ಪಾಪವಿಮೋಚನೆಯಿಂದ ಶುದ್ಧನಾದ ಬ್ರಹ್ಮನು ಚತುರ್ಮುಖನಾಗಿ ನೆಲಸಿದ್ದ ಆ ಶಂಕರನನ್ನು ಪೂಜಿಸಿ ಆ ಸರೋವರದ ನೀರಿನ ಮಧ್ಯದಲ್ಲಿ ಲಿಂಗಗಳನ್ನು ಪ್ರತಿಷ್ಠಿಸಿದನು. ಬ್ರಹ್ಮಸರಸ್ಸೆಂಬ ಮೊದಲನೆಯ ಲಿಂಗವನ್ನು ಹರಿಯ ಪಕ್ಕದಲ್ಲೇ ಪ್ರತಿಷ್ಠಿಸಲಾಯಿತು. ಬ್ರಹ್ಮಸದನವೆಂಬ ಎರಡನೆಯ ಲಿಂಗವು ತನ್ನ ಆಶ್ರಮದಲ್ಲಿಯೇ ಪ್ರತಿಷ್ಠಿತವಾಯಿತು. ಅದಕ್ಕೆ ಪೂರ್ವದಿಕ್ಕಿನಲ್ಲೇ ಮೂರನೆಯ ಲಿಂಗವೂ ಸರಸ್ವತಿಯ ದಡದಲ್ಲಿ ನಾಲ್ಕನೆಯ ಲಿಂಗವೂ ಪ್ರತಿಷ್ಠಿತವಾದುವು. ಪವಿತ್ರಗಳಾಗಿಯೂ, ಪುಣ್ಯಕರಗಳಾಗಿಯೂ ಮಾಡಲ್ಪಟ್ಟಿರುವ ಈ ತೀರ್ಥಗಳನ್ನು ನಿರಾಹಾರರಾಗಿದ್ದು ಯಾರು ದರ್ಶನಮಾಡುತ್ತಾರೆಯೋ ಅವರೂ ಪರಮಪದವನ್ನು ಹೊಂದುತ್ತಾರೆ.

೪೧-೪೨. ಕೃತಯುಗದಲ್ಲಿ ಹರಿಯ ಪಾರ್ಶ್ವದಲ್ಲಿರುವ ಮೊದಲನೇ ಲಿಂಗವನ್ನೂ, ತ್ರೇತಾಯುಗದಲ್ಲಿ ಬ್ರಹ್ಮನ ಆಶ್ರಮದಲ್ಲಿರುವ ಎರಡನೇ ಲಿಂಗವನ್ನೂ, ದ್ವಾಪರದಲ್ಲಿ ಅದರ ಪೂರ್ವಭಾಗದಲ್ಲಿರುವ ಮೂರನೇ ಲಿಂಗವನ್ನೂ, ಕಲಿಯುಗದಲ್ಲಿ ಸರಸ್ವತೀದಡದಲ್ಲಿರುವ ನಾಲ್ಕನೇ ಲಿಂಗವನ್ನೂ ದರ್ಶನಮಾಡಿ ಭಕ್ತಿಯಿಂದ ಪೂಜಿಸಿ

ಸೃಷ್ಟಿಕಾಲೆ ಭಗವತಾ ಪೂಜಿತಸ್ತು ಮಹೇಶ್ವರಃ ।
ಸರಸ್ವತ್ಯುತ್ತರೆ ತೀರೆ ನಾಮ್ನಾ ಖ್ಯಾತಶ್ಚತುರ್ಮುಖಃ ॥ ೪೩ ॥

ತಂ ಪೂಜಯಿತ್ವಾ ಯತ್ನೇನ ಸೋಽಪವಾಸೋ ಜಿತೇಂದ್ರಿಯಃ ।
ಅಗಮ್ಯಾಗಮನೈರ್ದೋಷೈರ್ಮುಚ್ಯತೇ ನಾತ್ರ ಸಂಶಯಃ ॥ ೪೪ ॥

ತತಸ್ತ್ರೇತಾಯುಗೆ ಪ್ರಾಪ್ತೆ ಸ್ಥಾಣೋರ್ದೇವಸಮೀಪತಃ ।
ಪೂಜಿತಂ ಸುಮಹಲ್ಲಿಂಗಂ ತತ್ರಾಪಿಚ ಚತುರ್ಮುಖಂ ॥ ೪೫ ॥

ತಂ ಪ್ರಣಮ್ಯ ಶ್ರದ್ಧಧಾನೋ ಮುಚ್ಯತೆ ಸರ್ವಕಿಲ್ಬಿಷೈಃ ।
ಲೀಲಾಶಂಕರಸಂಭೂತಂ ತಥಾ ವೈ ಭಾನುಶಂಕರಂ ॥ ೪೬ ॥

ತಥೈವದ್ವಾಪರೆ ಪ್ರಾಪ್ತೆ ಸ್ವಾಶ್ರಮೆ ಪ್ರಾಚ್ಯಶಂಕರಂ ।
ವಿಮುಕ್ತೋ ರಾಜಸೈರ್ಭಾವೈಃ ವರ್ಣಸಂಕರಸಂಭವೈಃ ॥ ೪೭ ॥

ದಲ್ಲಿ ಅವನು ಸರ್ವಪಾಪಗಳಿಂದಲೂ ಮುಕ್ತನಾಗಿ ಪರಮಪದವನ್ನು ಹೊಂದುತ್ತಾನೆ. ಸೃಷ್ಟಿಕಾಲದಲ್ಲಿ ಪೂಜ್ಯನಾದ ಬ್ರಹ್ಮನಿಂದ ಪೂಜಿಸಲ್ಪಟ್ಟ ಮಹೇಶ್ವರನು ಸರಸ್ವತಿಯ ಉತ್ತರತೀರದಲ್ಲಿ ಚತುರ್ಮುಖನೆಂದು ಪ್ರಸಿದ್ಧಿ ಹೊಂದಿದ್ದಾನೆ.

೪೪-೪೭. ಅವನನ್ನು ಜಿತೇಂದ್ರಿಯನಾಗಿ ಉಪವಾಸವ್ರತದಿಂದಿದ್ದು ಪೂಜಿಸಿದವನು ಅಗಮ್ಯಾಗಮನವೇ ಮೊದಲಾದ ದೋಷಗಳಿಂದ ಮುಕ್ತನಾಗುವುದರಲ್ಲಿ ಸಂದೇಹವೇ ಇಲ್ಲ. ತ್ರೇತಾಯುಗದಲ್ಲಿ ಸ್ಥಾಣುದೇವನ ಸಮೀಪದಲ್ಲಿ ಪೂಜಿತವಾಗಿರುವ ಚತುರ್ಮುಖವಾದ ಲಿಂಗವನ್ನು ಶ್ರದ್ಧೆಯಿಂದ ಪ್ರಣಾಮಮಾಡಿ ಪೂಜಿಸಿದಲ್ಲಿ ಸರ್ವಪಾಪಮೋಕ್ಷವುಂಟಾಗುತ್ತದೆ. ಹಾಗೆಯೇ ಲೀಲಾಶಂಕರಸಂಭೂತವೆಂಬ ಮತ್ತು ಭಾನುಶಂಕರನೆಂಬ ಲಿಂಗವನ್ನೂ ಪೂಜಿಸಬೇಕು. ಹಾಗೆಯೇ ದ್ವಾಪರದಲ್ಲಿ ಸ್ವಾಶ್ರಮದಲ್ಲಿ ಪೂಜಿತವಾಗಿರುವ ಪ್ರಾಚ್ಯಶಂಕರನನ್ನೂ ಪೂಜಿಸಿದವನು ವರ್ಣಸಂಕರಗಳಿಗೆ ಕಾರಣವಾದ ರಾಜಸದೋಷಗಳಿಂದ ಮುಕ್ತನಾಗುತ್ತಾನೆ. (ಇಲ್ಲಿ ಕೆಲವು ಪೂರ್ವೋತ್ತರ ವಿರೋಧಕಾಣುತ್ತದೆ.)

ತತಃ ಕೃಷ್ಣಚತುರ್ದಶ್ಯಾಂ ಪೂಜಯಿತ್ವಾ ತು ಮಾನವಃ ।
ವಿಮುಕ್ತಃ ಪಾತಕೈಸ್ಸರ್ವೈಃ ಅಭೋಜ್ಯಸ್ಯಾನ್ನಸಂಭವೈಃ ॥ ೪೮ ॥

ಕಲಿಕಾಲೇ ತು ಸಂಪ್ರಾಪ್ತೇ ವಸಿಷ್ಠಾಶ್ರಮಮಾಶ್ರಿತಃ ।
ಚತುರ್ಮುಖಂ ಸ್ಥಾಪಯಿತ್ವಾ ಯಾತಿ ಸಿದ್ಧಿಮನುತ್ತಮಾಂ ॥ ೪೯ ॥

ತತ್ರಾಪಿ ಯೇ ನಿರಾಹಾರಾ ಶ್ರದ್ಧಧಾನಾ ಜಿತೇಂದ್ರಿಯಾಃ ।
ಪೂಜಯಂತಿ ಮಹಾದೇವಂ ತೇ ಯಾಂತಿ ಪರಮಂ ಪದಂ ॥ ೫೦ ॥

ಇತ್ಯೇತತ್ ಸ್ಥಾಣುತೀರ್ಥಸ್ಯ ಮಾಹಾತ್ಮ್ಯಂ ಕೀರ್ತಿತಂ ತವ ।
ತಚ್ಛ್ರುತ್ವಾ ಸರ್ವಪಾಪೇಭ್ಯೋ ಮುಕ್ತೋ ಭವತಿ ಮಾನವಃ ॥ ೫೧ ॥

ಇತಿ ಶ್ರಿ ವಾಮನಪುರಾಣೇ ಸರೋಮಹಾತ್ಮ್ಯೇ
ಏಕೋನಪಂಚಾಶತ್ತಮೋಽಧ್ಯಾಯಃ

೪೮-೫೧. ಕೃಷ್ಣಚತುರ್ದಶಿಯಲ್ಲಿ ಪೂಜೆಮಾಡಿದಲ್ಲಿ ಅಭೋಜ್ಯಾನ್ನ ಭೋಜನದಿಂದುಂಟಾದ ಪಾಪದಿಂದಲೂ ಮೋಕ್ಷಹೊಂದುತ್ತಾನೆ. ಕಲಿಯುಗದಲ್ಲಿ ವಸಿಷ್ಠಾಶ್ರಮಕ್ಕೆ ಬಂದು ಅಲ್ಲಿ ಚತುರ್ಮುಖನನ್ನು ಸ್ಥಾಪಿಸಿದವನು ಉತ್ತಮವಾದ ಸಿದ್ಧಿಯನ್ನು ಹೊಂದುತ್ತಾನೆ. ಅಲ್ಲಿಯೂ ನಿರಾಹಾರರಾಗಿಯೂ, ಜಿತೇಂದ್ರಿಯರಾಗಿಯೂ ಯಾರು ಮಹಾದೇವನನ್ನು ಪೂಜಿಸುತ್ತಾರೆಯೋ ಅವರು ಪರಮಪದಗಾಮಿಗಳಾಗುತ್ತಾರೆ. ಸ್ಥಾಣುತೀರ್ಥದ ಮಹಾತ್ಮ್ಯವನ್ನು ನಾನು ಈರೀತಿ ಹೇಳಿರುತ್ತೇನೆ. ಇದರ ಶ್ರವಣವೂ ಸಹ ಮಾನವನಿಗೆ ಸರ್ವಪಾಪನಾಶಕವಾದದ್ದು.

ಇಲ್ಲಿಗೆ ಶ್ರೀ ವಾಮನಪುರಾಣದ ಸರೋಮಾಹಾತ್ಮ್ಯದಲ್ಲಿ
ನಲವತ್ತೊಂಭತ್ತನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯ ೪೯

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ತೀರ್ಥಮಹಾತ್ಮ್ಯಕ್ಕೆ ಅನುಗುಣವಾದ ಚತುರ್ಮುಖಾದಿಗಳ ಉತ್ಪತ್ತಿಯನ್ನು ಮಾರ್ಕಂಡೇಯರು ಕೇಳಲಾಗಿ ಅದಕ್ಕೆ ಉತ್ತರವಾಗಿ ಸನತ್ಕುಮಾರರು ಪರಮಾತ್ಮನ ನಾಭಿಕಮಲದಿಂದ ಬ್ರಹ್ಮನು ಉತ್ಪನ್ನವಾದಮೇಲೆ ಅವನು ಸೃಷ್ಟಿ ಕಾರ್ಯದಲ್ಲಿ ತೊಡಗಿ ಭೂತಗಳನ್ನು ಸೃಷ್ಟಿಸಿ ಪುನಃ ಆಲೋಚಿಸಲಾಗಿ ಸುರೂಪಳಾದ ಒಬ್ಬ ಕನ್ಯೆಯು ಹುಟ್ಟಿದಳೆಂದೂ ಅವಳ ರೂಪದಿಂದ ಬ್ರಹ್ಮನೇ ಅವಳನ್ನು ಮೋಹಿಸಿದುದರಿಂದ ಬ್ರಹ್ಮನ ತಲೆಯು ಆ ಪಾಪದಿಂದ ಸೀಳಿಹೋಯಿತೆಂದೂ ಹೇಳಿ ಆ ಪಾಪ ನಾಶಕ್ಕಾಗಿ ಅವನು ಸ್ಥಾಣುತೀರ್ಥದಲ್ಲಿ ಬಂದು ರುದ್ರನನ್ನು ಆರಾಧಿಸಿ ಅವನು ಪ್ರತ್ಯಕ್ಷನಾದಮೇಲೆ ಅವನನ್ನು ಸ್ತೋತ್ರಮಾಡಲು ಪ್ರಸನ್ನನಾದ ರುದ್ರನು ಅವನ ಪಾಪನಾಶಕ್ಕೆ ತಕ್ಕಂತೆ ಆ ಕ್ಷೇತ್ರದಲ್ಲಿ ಲಿಂಗದ ಪ್ರತಿಷ್ಠೆಯನ್ನೂ ಹೇಳಿ ಆ ಪಾಪವು ನಾಶವಾಗುವಂತೆ ಅನುಗ್ರಹಿಸಿ ಬ್ರಹ್ಮನನ್ನು ಸಮಾಧಾನಪಡಿಸಿದನೆಂದೂ ಹೇಳಲಾಯಿತು. ಅಲ್ಲಿ ಪ್ರತಿಷ್ಠಿತವಾದ ಲಿಂಗಗಳಿಗೆ ಯುಗಭೇದದಿಂದ ಪ್ರಾಶಸ್ತ್ಯವನ್ನೂ ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಪಂಚಾಶತ್ತಮೋಽಧ್ಯಾಯಃ

ಸನತ್ಕುಮಾರ ಉವಾಚ

ತತೋಽಬ್ರವೀದ್ದೇವವರಸ್ತು ತೀರ್ಥಂ
  ಯಸ್ಮಾದ್ಭವಾನೇಕತಯಾ ಪ್ರಯಾತಿ ।
ಪೃಥೂದಕೇತ್ಯೇವಚ ನಾಮ ತುಭ್ಯಂ
  ಭವಿಷ್ಯತೆ ತೀರ್ಥವರಃ ಪೃಥಿವ್ಯಾಃ ॥ ೧ ॥

ಏವಂ ಪೃಥೂದಕಂ ದೇವಾಃ ಪುಣ್ಯಂ ಪಾಪಭಯಾಪಹಂ ।
ತಂ ಗಚ್ಛಧ್ವಂ ಮಹಾತೀರ್ಥಂ ಯಾಚಿಷ್ಯಂತೋ ನಿಬೋಧತ ॥ ೨ ॥

ಯದಾ ಮೃಗಶಿರೋಽಋಕ್ಷೆ ಶಶಿಸೂರ್ಯೌ ಬೃಹಸ್ಪತಿಃ ।
ತಿಷ್ಠಂತಿ ಸಾ ತಿಥಿಃ ಪೂರ್ವಾ ತ್ವಕ್ಷಯಾ ಪರಿಗೀಯತೆ ॥ ೩ ॥

ಐವತ್ತನೆಯ ಅಧ್ಯಾಯವು

೧-೪. ಅನಂತರ ದೇವಶ್ರೇಷ್ಠನು ನೀನೊಬ್ಬನೇ ಇಂತಹ ತೀರ್ಥಕ್ಕೆ ಹೊರಟಿರುವದ್ದರಿಂದ ಆ ತೀರ್ಥವು ಭೂಮಿಯಲ್ಲಿ ಪೃಥೂದಕವೆಂಬ ಅಸಾಧಾರಣವಾದ ನಾಮವನ್ನು ಹೊಂದುವದು ಎಂದು ಅಪ್ಪಣೆಮಾಡಿದನು. ಈ ಪ್ರಕಾರ ಪುಣ್ಯಕರವಾಗಿಯೂ ಪಾಪನಾಶಕವಾಗಿಯೂ ಇರುವ ಆ ತೀರ್ಥಕ್ಕೆ ಹೊರಡಿರಿ. ಎಲೈ ದೇವತೆಗಳೇ, ಆ ಮಹಾತೀರ್ಥವನ್ನು ಅಲ್ಲಲ್ಲಿ ಕೇಳಿ ತಿಳಿಯಿರಿ ಎಂದು ಸನತ್ಕುಮಾರರು ಋಷಿಗಳಿಗೆ ಹೇಳಿ ಅದಕ್ಕೆ ತಕ್ಕ ಕಾಲವನ್ನೂ ಉಪದೇಶಿಸುತ್ತಾರೆ. ಯಾವ ಕಾಲದಲ್ಲಿ ಮೃಗಶಿರಾ ನಕ್ಷತ್ರದಲ್ಲಿ ಚಂದ್ರ ಸೂರ್ಯ ಬೃಹಸ್ಪತಿಗಳಿರುವರೋ ಆ ತಿಥಿಯ ಪೂರ್ವಭಾಗವು

ತದ್ಗಚ್ಛಧ್ವಂ ಸುರಶ್ರೇಷ್ಠಾಃ ಯತ್ರ ಪ್ರಾಚೀಸರಸ್ವತೀ ।
ಪಿತೄನಾರಾಧಯಧ್ವಂ ಚ ತತ್ರ ಶ್ರಾದ್ಧೇನ ಭಕ್ತಿತಃ ॥ ೪ ॥

ತತೋ ಮುರಾರಿವಚನಂ ದೃಷ್ಟ್ವಾ ದೇವಾಸ್ಸವಾಸವಾಃ ।
ಸಮಾಜಗ್ಮುಃ ಕುರುಕ್ಷೇತ್ರೇ ಪುಣ್ಯಂ ತೀರ್ಥಂ ಪೃಥೂದಕಂ ॥ ೫ ॥

ತತ್ರ ಸ್ನಾತ್ವಾ ಸುರಾಸ್ಸರ್ವೇ ಬೃಹಸ್ಪತಿಮುಚೋದಯನ್ ।
ವಿವಸ್ವನ್ ಭಗವನ್ ಋಕ್ಷಮಿದಂ ಮೃಗಶಿರಃ ಕುರು ॥ ೬ ॥

ಪುಣ್ಯಾಂ ತಿಥಿಂ ಪಾಪಹರಾಂ ತವ ಕಾಲೋಯಮಾಗತಃ ।
ಪ್ರವರ್ತತೇ ರವಿಸ್ತತ್ರ ಚಂದ್ರಮಾಪಿ ವಿಶತ್ಯಸೌ ॥ ೭ ॥

ತವಾಯತ್ತಂ ಗುರೋ ಕಾರ್ಯಂ ಸುರಾಣಾಂ ತತ್ಕುರುಷ್ವ ವಃ ।
ಇತ್ಯೇವಮುಕ್ತೋ ದೇವೈಸ್ತು ದೇವಾಚಾರ್ಯೋಽಬ್ರವೀದಿದಂ ॥ ೮ ॥

ಅಕ್ಷಯವಾದುದೆಂದು ಹೇಳಲ್ಪಟ್ಟಿದೆ. ಆದುದರಿಂದ ಎಲೈ ದೇವತೆಗಳಿರಾ, ಎಲ್ಲಿ ಪೂರ್ವದಿಕ್ಕಿನ ಸರಸ್ವತಿಯು ಇರುವಳೋ ಅಲ್ಲಿಗೆ ಹೊರಡಿರಿ. ಅಲ್ಲಿ ಭಕ್ತಿಯಿಂದ ಶ್ರಾದ್ಧಾದಿಗಳನ್ನು ಮಾಡಿ ಪಿತೃದೇವತೆಗಳನ್ನು ಆರಾಧಿಸಿರಿ.

೫-೮. ಈರೀತಿಯಾದ ಮುರಾರಿಯ ವಚನದಿಂದ ದೇವತೆಗಳೆಲ್ಲರೂ ಇಂದ್ರನೊಡನೆ ಕುರುಕ್ಷೇತ್ರದಲ್ಲಿರುವ ಪೃಥೂದಕ ತೀರ್ಥಕ್ಕೆ ಬಂದರು. ಅಲ್ಲಿ ಸ್ನಾನಮಾಡಿ ದೇವತೆಗಳೆಲ್ಲರೂ ಬೃಹಸ್ಪತಿಯನ್ನು ಕುರಿತು ಎಲೈ ಗುರುವೇ, ನಿನ್ನ ಅಧೀನದಲ್ಲಿರುವ ಈ ಕಾರ್ಯವನ್ನು ಸುರರ ಹಿತಕ್ಕಾಗಿ ನೀನು ಮಾಡಬೇಕು. ಎಲೈ ಸೂರ್ಯನೇ, ಈ ನಕ್ಷತ್ರವನ್ನು ಮೃಗಶಿರಾನಕ್ಷತ್ರವನ್ನಾಗಿ ಮಾಡು. ಪಾಪಹರವಾಗಿಯೂ ಪುಣ್ಯಕರವಾಗಿಯೂ ಇರುವ ತಿಥಿಯನ್ನು ಮಾಡಲು ನಿನಗೆ ಅನುಕೂಲಕಾಲವು ಬಂದಿದೆ. ಎಲೈ ಗುರುವೇ, ಸೂರ್ಯನೂ ಅಲ್ಲಿಯೇ ಇರುವನು. ಚಂದ್ರನು ಪ್ರವೇಶಿಸುತ್ತಿರುವನು. ಆದುದರಿಂದ ಮೃಗಶಿರಾನಕ್ಷತ್ರದಲ್ಲಿ ಸೂರ್ಯ ಚಂದ್ರ ಬೃಹಸ್ಪತಿಗಳಿರುವ ಪುಣ್ಯಕಾಲವನ್ನು ಉಂಟುಮಾಡಿ ದೇವತೆಗಳಿಗೆ ಹಿತವನ್ನು ಬಯಸು. ಹೀಗೆ ಹೇಳಲ್ಪಟ್ಟ ಬೃಹಸ್ಪತಿಯು ಹೇಳುತ್ತಾನೆ.

ಯದಿ ವರ್ಷಾಧಿಪೋಽಹಂ ಸ್ಯಾಂ ತತೋ ಯಾಸ್ಯಾಮಿ ದೇವತಾಃ ।
ಬಾಢಮೂಚುಃ ಸುರಾಸ್ಸರ್ವೇ ತತೋಽಸೌ ಪ್ರಾಕ್ರಮನ್ಮೃಗಂ ॥ ೯ ॥

ಆಷಾಢೇ ಮಾಸಿ ಮಾರ್ಗರ್ಕ್ಷೇ ಚಂದ್ರಕ್ಷಯತಿಥಿರ್ಹಿ ಯಾ ।
ತಸ್ಯಾಂ ಪುರಂದರಃ ಪ್ರೀತಃ ಪಿಂಡಂ ಪಿತೃಷು ಭಕ್ತಿತಃ ॥ ೧೦ ॥

ಪ್ರಾದಾತ್ತಿಲಮಧೂನ್ಮಿಶ್ರಂ ಹವಿಷ್ಯಾನ್ನಂ ಕುರುಷ್ವ ಚ ।
ತತಃ ಪ್ರೀತಾಸ್ತು ಪಿತರಃ ತಾಂ ಪ್ರಾಹುಸ್ತನಯಾಂ ನಿಜಾಂ ॥ ೧೧ ॥

ಮೇನಾಂ ದೇವಾಶ್ಚ ಶೈಲಾಯ ಹಿಮಯುಕ್ತಾಯ ವೈ ದದುಃ ।
ತಾಂ ಮೇನಾಂ ಹಿಮವಾನ್‌ಲಬ್ಧ್ವಾ ಪ್ರಮುದಾದ್ದೈವತೇಷ್ವಥ
ಪ್ರೀತಿಮಾನಭವಚ್ಛಾಸೌ ರೇಮೆ ಸತು ಯಥೇಚ್ಛಯಾ । ॥ ೧೨ ॥

ತತೋ ಹಿಮಾದ್ರಿಃ ಪಿತೃಕನ್ಯಯಾ ಸಮಂ
ಸಂತರ್ಪಯನ್ ವೈ ವಿಷಯಾನ್ ಯಥೇಷ್ಟಂ ।

೯-೧೧. ನಾನೇ ವರ್ಷಾಧಿಪತಿಯಾಗುವ ಪಕ್ಷದಲ್ಲಿ ಅಂತಹ ತಿಥಿಯನ್ನು ನಾನು ಹೊಂದುತ್ತೇನೆ ಎಂದು ಹೇಳಲಾಗಿ ದೇವತೆಗಳೆಲ್ಲರೂ ಅದಕ್ಕೆ ಒಪ್ಪಿದರು. ಆಗ ಬೃಹಸ್ಪತಿಯು ಮೃಗಶಿರಾನಕ್ಷತ್ರವನ್ನು ಆಕ್ರಮಿಸಿದನು. ಆಗ ಆಷಾಢಮಾಸದ ಮೃಗಶಿರಾನಕ್ಷತ್ರಯುಕ್ತವಾದ ಚಂದ್ರನ ಕ್ಷಯತಿಥಿಯಲ್ಲಿ ಇಂದ್ರನು ಸಂತೋಷದಿಂದ ಪಿತೃಗಳಿಗೆ ಭಕ್ತಿಪೂರ್ವಕವಾಗಿ ಎಳ್ಳು ಮಧು ಇವುಗಳಿಂದ ಕೂಡಿದ ಪಿಂಡವನ್ನು ಪ್ರದಾನಮಾಡಿದನು. ಹವಿರ್ಯೋಗ್ಯವಾದ ಅನ್ನವನ್ನೂ ಪ್ರದಾನಮಾಡಿದನು. ಆಗ ಪಿತೃಗಳು ಸಂತುಷ್ಟರಾಗಿ (ಬ್ರಹ್ಮನಿಂದ ಉತ್ಪನ್ನಳಾಗಿದ್ದ) ಆ ಕನ್ಯೆಕೆಯನ್ನು ತಮ್ಮ ಕನ್ಯೆಕೆ ಎಂದು ಹೇಳಿದರು.

೧೨-೧೩. ಆಗ ಮೇನಾ ಎಂಬ ಆ ಕನ್ಯೆಕೆಯನ್ನು ದೇವತೆಗಳೆಲ್ಲರೂ ಹಿಮವಂತನಿಗೆ ಕೊಟ್ಟರು. ಹಿಮವಂತನು ಆ ಕನ್ಯೆಕೆಯನ್ನು ಹೊಂದಿ ದೇವತೆಗಳಲ್ಲಿ ಪ್ರೀತಿಯಿಂದಿದ್ದು ಆ ಕನ್ಯೆಯೊಡನೆಯೂ ಸುಖದಿಂದ ವಿಹರಿಸಿದನು. ಹೀಗೆ ಆ ಹಿಮವಂತನು ಪಿತೃಕನ್ಯೆಯೊಡನೆ ವಿಷಯಸುಖವನ್ನು ಅನುಭವಿಸಲಾಗಿ ಆ ಕನ್ಯೆಯೂ

ಅಜೀಜನತ್ಸಾ ತನಯಾಶ್ಚ ತಿಸ್ರೋ
ರೂಪಾತಿಯುಕ್ತಾಃ ಸುರಯೋಷಿತಸ್ತು ॥ ೧೩ ॥

ಇತಿ ಶ್ರೀ ವಾಮನಪುರಾಣೇ ಸರೋಮಾಹಾತ್ಮ್ಯೇ
ಪಂಚಾಶತ್ತಮೋಽಧ್ಯಾಯಃ

ಕೂಡ ಸುಂದರಿಯರಾಗಿಯೂ ದೇವತಾರೂಪಿಣಿಗಳಾಗಿಯೂ ಇರುವ ಮೂರುಜನ ಪುತ್ರಿಯರನ್ನು ಪಡೆದಳು.

ಇಲ್ಲಿಗೆ ಶ್ರೀ ವಾಮನಪುರಾಣದ ಉಮಾಸಂಭವದಲ್ಲಿ ಕುರುಕ್ಷೇತ್ರ ಮಾಹಾತ್ಮ್ಯವೆಂಬ ಐವತ್ತನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಪೃಥೂದಕಕ್ಕೆ ಹೋಗಬೇಕೆಂಬ ಅಪ್ಪಣೆಯ ಪ್ರಕಾರ ಇಂದ್ರಾದಿಗಳು ಅಲ್ಲಿ ಬಂದು ಪುಣ್ಯತಿಥಿಯಲ್ಲಿ ಪಿತೃತರ್ಪಣಮಾಡಿದುದರಿಂದ ಸಂತುಷ್ಟರಾದ ಪಿತೃದೇವತೆಗಳು ಆ ಬ್ರಹ್ಮಪುತ್ರಿಯನ್ನು ತಮ್ಮ ಮಗಳನ್ನಾಗಿ ಹೇಳಿದರೆಂದೂ ಆಗ ದೇವತೆಗಳು ಮೇನಾ ಎಂಬ ಆ ಕನ್ಯೆಯನ್ನು ಹಿಮವಂತನಿಗೆ ಕೊಟ್ಟರೆಂದೂ ಹೇಳಿ ಆ ಮೇನಾದೇವಿಯಲ್ಲಿ ರೂಪವತಿಯರಾದ ಮೂರು ಹೆಣ್ಣುಮಕ್ಕಳು ಜನಿಸಿದರೆಂದೂ ನಿರೂಪಿಸಲಾಯಿತು. (ಇವರಲ್ಲೊಬ್ಬಳೇ ಉಮಾ ಎಂದು ಪ್ರಸಿದ್ಧಿ ಹೊಂದುತ್ತಾಳೆ.)

॥ ಶ್ರೀ ॥

ಶ್ರೀವಾಮನಪುರಾಣಂ

ಏಕಪಂಚಾಶತ್ತಮೋಽಧ್ಯಾಯಃ

ಪುಲಸ್ತ್ಯ ಉವಾಚ

ಮೇನಾಯಾಂ ಕನ್ಯಕಾಸ್ತಿಸ್ರೋ ಜಾತಾ ರೂಪಗುಣಾನ್ವಿತಾಃ ।
ಸುನಾಭ ಇತಿ ಚ ಖ್ಯಾತಶ್ಚತುರ್ಥಸ್ತನಯೋಽಭವತ್ ॥ ೧ ॥

ರಕ್ತಾಙ್ಗೀ ರಕ್ತನೇತ್ರಾ ಚ ರಕ್ತಾಂಬರವಿಭೂಷಿತಾ ।
ರಾಗಿಣೀ ನಾಮ ಸಂಜಾತಾ ಜ್ಯೇಷ್ಠಾ ಮೇನಾಸುತಾ ಮುನೇ ॥ ೨ ॥

ಶುಭಾಂಙ್ಗೀ ಪದ್ಮಪತ್ರಾಕ್ಷೀ ನೀಲಕುಂಚಿತಮೂರ್ಧಜಾ ।
ಶ್ವೇತಮಾಲ್ಯಾಂಬರಧರಾ ಕುಟಿಲಾ ನಾಮ ಚಾಪರಾ ॥ ೩ ॥

ಐವತ್ತೊಂದನೆಯ ಅಧ್ಯಾಯವು

೧-೪. ಮೇನಾದೇವಿಯಲ್ಲಿ ರೂಪಗುಣಶಾಲಿನಿಗಳಾದ ಮೂರು ಹೆಣ್ಣುಮಕ್ಕಳಾದಮೇಲೆ ಸುನಾಭನೆಂದು ಪ್ರಸಿದ್ಧಿಗೆ ಬಂದ ನಾಲ್ಕನೇ ಮಗನೊಬ್ಬನು ಹುಟ್ಟಿದನು. ಆ ಹೆಣ್ಣುಮಕ್ಕಳಲ್ಲಿ ಜ್ಯೇಷ್ಠಪುತ್ರಿಯು ಕೆಂಪಾದ ಅವಯವಗಳುಳ್ಳವಳಾಗಿಯೂ ಕೆಂಪಾದ ಕಣ್ಣುಳ್ಳವಳಾಗಿಯೂ ಕೆಂಪುವಸ್ತ್ರವನ್ನು ಧರಿಸಿಯೂ ರಾಗಿಣೀ ಎಂಬ ಹೆಸರಿನಿಂದ ಪ್ರಸಿದ್ಧಿಗೆ ಬಂದಳು. ಎರಡನೆಯವಳು ಶುಭಲಕ್ಷಣವುಳ್ಳ ಅವಯವಗಳಿಂದಲೂ ಪದ್ಮಪತ್ರಗಳಂತೆ ಸುಂದರವಾಗಿರುವ ನೇತ್ರಗಳಿಂದಲೂ ಕಪ್ಪಾಗಿಯೂ ಗುಂಗುರುವಾಗಿಯೂ ಇರುವ ಕೇಶಪಾಶಗಳಿಂದಲೂ ಕೂಡಿ ಶುಭ್ರವಾದ ವಸ್ತ್ರ ಮತ್ತು ಹೂವುಗಳಿಂದ ರಮಣೀಯಳಾಗಿ ಕುಟಿಲಾ ಎಂಬ ಹೆಸರಿನಿಂದ ಪ್ರಸಿದ್ಧಿಗೆ ಬಂದಳು.

ನೀಲಾಂಜನಚಯಪ್ರಖ್ಯಾ ನೀಲೇಂದೀವರಲೋಚನಾ ।
ರೂಪೇಣಾನುಪಮಾ ಕಾಲೀ ಜಘನ್ಯಾ ಮೇನಕಾಸುತಾ ॥ ೪ ॥

ಜಾತಾಸ್ತಾಃ ಕನ್ಯಕಾಸ್ತಿಸ್ರೋ ಷಡಬ್ದಾತ್ಪರತೋ ಮುನೇ ।
ಕರ್ತುಂ ತಪಃ ಪ್ರಯಾತಾಶ್ಚ ದೇವಾಸ್ತಾ ದದೃಶುಃ ಶುಭಾಃ ॥ ೫ ॥

ತತೋ ದಿವಾಕರೈಸ್ಸರ್ವೈರ್ವಸುಭಿಶ್ಚ ತಪಸ್ವಿನೀ ।
ಕುಟಿಲಾ ಬ್ರಹ್ಮಲೋಕಂ ತು ನೀತಾ ಶಶಿಕರಪ್ರಭಾ ॥ ೬ ॥

ಅಥೋಚುರ್ದೇವತಾಸ್ಸರ್ವಾಃ ಕ್ವಿಂತ್ವಿಯಂ ಜನಯಿಷ್ಯತೇ ।
ಪುತ್ರಂ ಮಹಿಷಹಂತಾರಂ ಬ್ರಹ್ಮನ್ ವ್ಯಾಖ್ಯಾತುಮರ್ಹಸಿ ॥ ೭ ॥

ತತೋ ಬ್ರವೀತ್ಸುರಪತಿರ್ನೇಯಂ ಶಕ್ತಾ ತಪಸ್ವಿನೀ ।
ಶಾರ್ವಂ ಧಾರಯಿತುಂ ತೇಜೋ ವರಾಕೀ ಮುಚ್ಯತಾಂ ತ್ವಿಯಂ ॥ ೮ ॥

ತತಸ್ತು ಕುಟಿಲಾ ಕ್ರುದ್ಧಾ ಬ್ರಹ್ಮಾಣಂ ಪ್ರಾಹ ನಾರದ ।
ತಥಾ ಯತಿಷ್ಯೇ ಭಗವನ್ ಯಥಾ ಶಾರ್ವಂ ಸುದುರ್ಧರಂ ॥ ೯ ॥

ಮೂರನೇಯವಳು ಕಾಡಿಗೆಯಂತೆ ಕಪ್ಪಾದ ಅವಯವಗಳಿಂದಲೂ ಕಪ್ಪುನೈದಿಲೆಯಂತಿರುವ ಕಣ್ಣುಗಳಿಂದಲೂ ಕೂಡಿ ಅಪ್ರತಿಮರೂಪವುಳ್ಳವಳಾಗಿ ಕಾಳೀ ಎಂಬ ಹೆಸರಿನಿಂದ ಪ್ರಸಿದ್ಧಿಗೆ ಬಂದಳು.

೫-೮. ಹೀಗೆ ಮೂರು ಹೆಣ್ಣುಮಕ್ಕಳೂ ತಮ್ಮ ಆರನೇವರ್ಷಕ್ಕೆ ಮೊದಲೇ ತಪಸ್ಸನ್ನು ಮಾಡಲು ಹೊರಟರು. ಆಗ ದೇವತೆಗಳೆಲ್ಲರೂ ಇವರಮೇಲೆ ಕಣ್ಣಿಟ್ಟರು. ಆಗ ದ್ವಾದಶಾದಿತ್ಯರೂ ವಸುಗಳೂ ಸೇರಿ ಸುಂದರಿಯಾಗಿದ್ದ ಕುಟಿಲೆಯನ್ನು ಬ್ರಹ್ಮಲೋಕಕ್ಕೆ ಒಯ್ದು ಚತುರ್ಮುಖನಮುಂದೆ ನಿಲ್ಲಿಸಿ ಎಲೈ ಮಹಾತ್ಮನೇ, ಇವಳು ಮಹಿಷನಾಶಕನಾದ ಪುತ್ರನನ್ನು ಹೊಂದುವಳೇ ಎಂಬುದನ್ನು ದಯವಿಟ್ಟು ಹೇಳಬೇಕು ಎಂದರು. ಆಗ ಬ್ರಹ್ಮನು ದುರ್ಬಲಳಾದ ಇವಳು ರುದ್ರನ ಆ ತೇಜಸ್ಸನ್ನು ಧರಿಸಲು ಸಮರ್ಥಳಾಗಿಲ್ಲ. ಈ ಅಶಕ್ತೆಯನ್ನು ಬಿಟ್ಟುಬಿಡಿ ಎಂದನು.

೯-೧೧. ಆಗ ಕೋಪದಿಂದ ಕುಟಿಲೆಯು ಬ್ರಹ್ಮನನ್ನು ಕುರಿತು ಪೂಜ್ಯನೇ ಧರಿಸಲಶಕ್ಯವಾದ ಆ ರುದ್ರತೇಜಸ್ಸನ್ನು ನಾನು ಹೇಗೆ ಧರಿಸಬೇಕೆಂದಿರುವೆನೋ

ಧಾರಯಿಷ್ಯಾಮ್ಯಹಂ ತೇಜಃ ತಥೈವ ಶೃಣು ಸತ್ತಮ ।
ತಪಸಾಹಂ ಸುತಪ್ತೇನ ಸಮಾರಾಧ್ಯ ಜನಾರ್ದನಂ ॥ ೧೦ ॥

ಯಥಾ ಹರಸ್ಯ ಮೂರ್ಧಾನಂ ಸಮಯಿಷ್ಯೆ ಪಿತಾಮಹ ।
ತಥಾ ದೇವ ಕರಿಷ್ಯಾಮಿ ಸತ್ಯಂ ಸತ್ಯಂ ಮಯೋದಿತಂ ॥ ೧೧ ॥

ಪುಲಸ್ತ್ಯ ಉವಾಚ

ತತಃ ಪಿತಾಮಹಃ ಕ್ರುದ್ಧಃ ಕುಟಿಲಾಂ ಪ್ರಾಹದಾರುಣಾಂ ।
ಭಗವಾನಾದಿಕೃದ್ಬ್ರಹ್ಮಾ ಸರ್ವೇಶೋಽಪಿ ಮಹಾಮುನೆ ॥ ೧೨ ॥

ಬ್ರಹ್ಮೋವಾಚ

ಯಸ್ಮಾನ್ಮದ್ವಚನಂ ಪಾಪೇ ನ ಕ್ಷಾಂತಂ ಕುಟಿಲೇ ತ್ವಯಾ ।
ತಸ್ಮಾನ್ಮಚ್ಛಾಪನಿರ್ದಗ್ಧಾ ಸರ್ವಾಸ್ವಾಪೋ ಭವಿಷ್ಯಸಿ ॥ ೧೩ ॥

ಇತ್ಯೇವಂ ಬ್ರಹ್ಮಣಾ ಶಪ್ತಾ ಹಿಮವದ್ದುಹಿತಾ ಮುನೆ ।
ಆಪೋಮಯೀ ಬ್ರಹ್ಮಲೋಕಂ ಪ್ಲಾವಯಾಮಾಸ ವೇಗಿನೀ ॥ ೧೪ ॥

ತಾಮುದ್ಧತಜಲಾಂ ದೃಷ್ಟ್ವಾ ಪ್ರಬಬಂಧ ಪಿತಾಮಹಃ ।
ಋಕ್ಸಾಮಾಥರ್ವಯಜುರ್ಭಿರ್ಬಂಧನೈಸ್ಸರ್ವತೋ ದೃಢಂ ॥ ೧೫ ॥

ಅದನ್ನು ಹೇಳುತ್ತೇನೆ ಕೇಳಬೇಕು. ಘೋರವಾದ ತಪಸ್ಸಿನಿಂದ ನಾರಾಯಣನನ್ನು ಸಂತೋಷಪಡಿಸಿ ಹರನ ತಲೆಯನ್ನೂ ಏರಿ ಹೇಗೆ ಅವನನ್ನೂ ಬಗ್ಗಿಸುವೆನೋ ಅಂತಹ ಪ್ರಯತ್ನವನ್ನೇ ನಾನು ಮಾಡುವೆನು. ನಾನು ಹೇಳುವ ಮಾತು ನಿಜ ನಿಜ.

೧೨-೧೫. ಪುಲಸ್ತ್ಯರು ಹೇಳುತ್ತಾರೆ:—ಅನಂತರ ಚತುರ್ಮುಖನು ಕೋಪದಿಂದ ಕ್ರೂರಸ್ವಭಾವಳಾದ ಕುಟಿಲೆಯನ್ನು ಕುರಿತು ಸರ್ವಪ್ರಭುವಾದುದರಿಂದ ಹೀಗೆ ಹೇಳುತ್ತಾನೆ. ಎಲೈ ಕುಟಿಲೇ, ಪಾಪದಿಂದ ಕೋಪಪರವಶೆಯಾದ ನೀನು ನನ್ನ ಮಾತನ್ನೂ ಸಹಿಸದೆ ಪ್ರತ್ಯುತ್ತರವಿತ್ತೆಯೋ ಆದುದರಿಂದ ನನ್ನ ಶಾಪದಿಂದ ದಗ್ಧಳಾಗಿ ಜಲಮಯವಾಗಿ ಹೋಗು ಎಂದು ಬ್ರಹ್ಮನಿಂದ ಶಪಿಸಲ್ಪಟ್ಟ ಆ ಹಿಮವತ್ಪುತ್ರಿಯು ಆಕ್ಷಣದಲ್ಲೇ ಜಲಮಯಳಾಗಿ ವೇಗದಿಂದ ಬ್ರಹ್ಮಲೋಕವನ್ನೆಲ್ಲಾ ನೀರಿನಲ್ಲಿ ತೇಲಿಸಿದಳು. ಆಗ ಆರೀತಿಯಾದ ಮಹಾವೇಗದಿಂದ ಉದ್ಧತಳಾದ ಆ ಕುಟಿಲೆಯನ್ನು ನೋಡಿ ಚತುರ್ಮುಖನು ಋಕ್ಸಾಮಾಥರ್ವಯಜೂರೂಪಗಳಾದ ಬಂಧನಗಳಿಂದ ಅವಳನ್ನು ಎಲ್ಲಾಕಡೆಯಲ್ಲಿಯೂ ದೃಢವಾಗಿ ಬಿಗಿದನು.

ಸಾ ಬದ್ಧಾ ಸಂಸ್ಥಿತಾ ಬ್ರಹ್ಮನ್ ತತ್ರೈವ ಗಿರಿಕನ್ಯಕಾ ।
ಆಪೋಮಯೀ ಪ್ಲಾವಯಂತೀ ಬ್ರಹ್ಮಣೋ ವಿಮಲಾಲಯಂ ॥ ೧೬ ॥

ಯಾಸಾ ರಾಗವತೀ ನಾಮ ಸಾಪಿ ನೀತಾ ಸುರೈರ್ದಿವಂ ।
ಬ್ರಹ್ಮಣೆ ತಾಂ ನಿವೇದ್ಯೈವ ತಾಮುವಾಚ ಪ್ರಜಾಪತಿಃ ॥ ೧೭ ॥

ಸಾಪಿ ಕ್ರುದ್ಧಾ ಬ್ರವೀಚ್ಚೈನಂ ತಥಾ ತಪ್ಯೇ ಮಹತ್ತಪಃ ।
ಯಥಾ ಮನ್ನಾಮಸಂಯುಕ್ತೋ ಮಹಿಷಘ್ನೋ ಭವಿಷ್ಯತಿ ॥ ೧೮ ॥

ತಾಂ ಶಶಾಪಾಥ ಸಬ್ರಹ್ಮಾ ಸಂಧ್ಯಾರಾಗೋ ಭವಿಷ್ಯಸಿ ।
ಯಾ ಮದ್ವಾಕ್ಯಮಲಂಘ್ಯಂ ವೈ ಸುರೈರ್ಲಂಘಯಸೆ ಬಲಾತ್ ॥ ೧೯ ॥

ಸಾಪಿ ಜಾತಾ ಮುನಿಶ್ರೇಷ್ಠ ಸಂಧ್ಯಾ ರಾಗವತೀ ತತಃ ।
ಪ್ರತೀಚ್ಛನ್ ಕೃತ್ತಿಕಾಭಾಗೆ ಶೈಲೇಯ್ಯಾ ವಿಗ್ರಹಂ ದೃಢಂ ॥ ೨೦ ॥

ತತೋ ಗತೆ ಕನ್ಯಕೆ ದ್ವೆ ಜ್ಞಾತ್ವಾ ಮೇನಾ ತಪಸ್ವಿನೀ ।
ತಪಸೋ ವಾರಯಾಮಾಸ ಉಮೇತ್ಯೇವಾಬ್ರವೀಚ್ಚ ಸಾ ॥ ೨೧ ॥

೧೬-೧೯. ಹಾಗೆ ಬದ್ಧಳಾದ ಕುಟಿಲೆಯು ಬ್ರಹ್ಮನ ಪರಿಶುದ್ಧವಾದ ಆಶ್ರಮವನ್ನು ಜಲದಲ್ಲಿ ಮುಳುಗಿಸುತ್ತಾ ಪ್ರವಾಹರೂಪದಿಂದ ಅಲ್ಲಿಯೇ ನಿಂತಳು. ಅನಂತರ ರಾಗವತಿಯನ್ನೂ ದೇವತೆಗಳು ಸತ್ಯಲೋಕಕ್ಕೆ ಒಯ್ದು ಬ್ರಹ್ಮನ ಮುಂದೆ ನಿಲ್ಲಿಸಲಾಗಿ ಅವಳನ್ನೂ ಬ್ರಹ್ಮನು ಅನರ್ಹಳೆಂದೇ ಹೇಳಿದನು. ಆಗ ಅವಳೂ ಕೋಪದಿಂದ ನಾನೂ ಅಂತಹ ತಪಸ್ಸಿನಿಂದ ಮಹಿಷನಾಶಕನಾದ ನನ್ನ ಹೆಸರಿನ ಪುತ್ರನನ್ನು ಹೊಂದಲು ಪ್ರಯತ್ನಿಸುತ್ತೇನೆ ಎಂದಳು. ಆಗ ಚತುರ್ಮುಖನು ದೇವತೆಗಳಿಂದಲೂ ಅತಿಕ್ರಮಿಸಲಶಕ್ಯವಾದ ನನ್ನ ಮಾತನ್ನು ನೀನು ಅತಿಕ್ರಮಿಸುತ್ತಿರುವೆಯಾದುದರಿಂದ ಸಂಧ್ಯಾರಾಗವಾಗಿ ಆಗು ಎಂದು ಶಪಿಸಿದನು.

೨೦-೨೨. ಆಗ ಆ ರಾಗವತಿಯೂ ಸಹ ಸಂಧ್ಯೆಯಾಗಿ ಕೃತ್ತಿಕಾರೂಪದಿಂದ ನಿಂತಳು. ಆಗ ತಪಸ್ಸಿಗೆ ಹೋದ ಇಬ್ಬರು ಕನ್ಯಕೆಯರೂ ಹೀಗಾದುದನ್ನು ನೋಡಿ ದುಃಖಿತೆಯಾದ ಮೇನಾದೇವಿಯು ತಪಸ್ಸಿನಿಂದ ತಡೆಯುತ್ತಾ ಮೂರನೇಯವಳನ್ನು

ತದೇವ ನಾಮ ನಾಮಾಸ್ಯಾಶ್ಚಕ್ರೇ ಪಿತೃಶ್ರುತಾ ಶುಭಾ ।
ಉಮೇತ್ಯೇವಹಿ ಕನ್ಯಾಯಾಃ ಸಾ ಜಗಾಮ ತಪೋವನಂ ॥ ೨೨ ॥

ತತಃ ಸಾ ಮನಸಾ ದೇವಂ ಶೂಲಪಾಣಿಂ ವೃಷಧ್ವಜಂ ।
ರುದ್ರಂ ಚೇತಸಿ ಸಂಧಾರ್ಯ ತಪಸ್ತೇಪೆ ಸುದುಷ್ಕರಂ ॥ ೨೩ ॥

ತತೋ ಬ್ರಹ್ಮಾ ಬ್ರವೀದ್ದೇವಾನ್ ಗಚ್ಛಧ್ವಂ ಹಿಮವತ್ಸುತಾಂ ।
ಇಹಾನಯಧ್ವಂ ತತ್ಕಾಲಂ ತಪಸ್ಯಂತೀಂ ಹಿಮಾಲಯೆ ॥ ೨೪ ॥

ತತೋ ದೇವಾಸ್ಸಮಾಜಗ್ಮುರ್ದದೃಶುಃ ಶೈಲನಂದಿನೀಂ ।
ತೇಜಸಾ ವಿಜಿತಾಸ್ತಸ್ಯಾ ನಶೇಕುರುಪಸರ್ಪಿತುಂ ॥ ೨೫ ॥

ಇಂದ್ರೋ ಮರುದ್ಗಣೈಸ್ಸಾರ್ಧಂ ನಿರ್ಧೂತಸ್ತೇಜಸಾ ತಯಾ ।
ಬ್ರಹ್ಮಣೋಧಿಕತೇಜೋಸ್ಯಾ ವಿನಿವೇದ್ಯ ಪ್ರತಿಷ್ಠಿತಃ ॥ ೨೬ ॥

ತತೋ ಬ್ರಹ್ಮಾ ಬ್ರವೀದ್ದೇವಾನ್ ಧ್ರುವಂ ಶಂಕರವಲ್ಲಭಾ ।
ಯೂಯಂ ಸತೇಜಸೋ ನೂನಂ ವಿಕ್ಷಿಪ್ತಾಸ್ತು ಹತಪ್ರಭಾಃ ॥ ೨೭ ॥

ಉಮಾ ಎಂದು ಹೇಳಿದುದರಿಂದ ಅದೇ ಹೆಸರನ್ನೇ ತಂದೆಯ ಅನುಮತಿಯಿಂದ ತಾಯಿಯು ಇವಳಿಗೆ ಇಟ್ಟಳು. ಅವಳೂ ತಪೋವನಕ್ಕೆ ತೆರಳಿದಳು.

೨೩-೨೬. ಆಗ ಆ ಉಮೆಯು ಶೂಲಪಾಣಿಯೂ ವೃಷಧ್ವಜನೂ ಆದ ರುದ್ರನನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ ಕಠೋರವಾದ ತಪಸ್ಸಿಗೆ ಪ್ರಾರಂಭಿಸಿದಳು. ಅನಂತರ ಬ್ರಹ್ಮನು ದೇವತೆಗಳನ್ನು ಕುರಿತು ಹೊರಡಿರಿ. ಇದುವರಿಗೂ ಹಿಮವತ್ಪರ್ವತದಲ್ಲಿ ತಪಸ್ಸುಮಾಡುತ್ತಿರುವ ಹಿಮವಂತನ ಪುತ್ರಿಯನ್ನು ಇಲ್ಲಿಗೆ ಕರೆದುಕೊಂಡು ಬನ್ನಿ ಎಂದು ಅಪ್ಪಣೆಮಾಡಲು ದೇವತೆಗಳೆಲ್ಲರೂ ಅಲ್ಲಿ ಹೋಗಿ ಅವಳನ್ನು ನೋಡಿ ಅವಳ ತಪಸ್ಸಿನಿಂದ ನಿರ್ಜಿತರಾಗಿ ಅವಳ ಹತ್ತಿರಕ್ಕೆ ಹೋಗುವುದಕ್ಕೂ ಸಮರ್ಥರಾಗಲಿಲ್ಲ. ಇಂದ್ರನೂ ದೇವತೆಗಳೊಡನೆ ಅಲ್ಲಿಗೆ ಹೋಗಿ ಅವಳ ತೇಜಸ್ಸಿನಿಂದ ಪರಾಜಿತನಾಗಿ ಇವಳ ಅಧಿಕವಾದ ತೇಜಸ್ಸನ್ನು ಚತುರ್ಮುಖನಲ್ಲಿಯೂ ಅರಿಕೆಮಾಡಿ ಹಿಂತಿರುಗಿ ಬಂದನು.

೨೭-೩೦. ಆಗ ಬ್ರಹ್ಮನು ದೇವತೆಗಳನ್ನು ಕುರಿತು ಇವಳೇ ಶಂಕರನ ಪತ್ನಿ ಎಂಬುದು ನಿಜ. ಆದುದರಿಂದಲೇ ತೇಜಸ್ವಿಗಳಾದ ನೀವೂ ಸಹ ಇವಳ ತೇಜಸ್ಸಿ

ತಸ್ಮಾದ್ವ್ರಜಧ್ವಂ ಸ್ವಂ ಸ್ವಂ ಹಿ ಸ್ಥಾನಂ ಭೋ ವಿಗತಜ್ವರಾಃ ।
ಸತಾರಕಂ ಹಿ ಮಹಿಷಂ ವಿದಧ್ವಂ ನಿಹತಂ ರಣೆ ॥ ೨೮ ॥

ಇತ್ಯೇವಮುಕ್ತಾ ದೇವೇನ ಬ್ರಹ್ಮಣಾ ಸೇಂದ್ರಕಾಃ ಸುರಾಃ ।
ಜಗ್ಮುಃ ಸ್ವಾನ್ಯೇವ ಧಿಷ್ಣ್ಯಾನಿ ಸದ್ಯೋ ವೈ ವಿಗತಜ್ವರಾಃ ॥ ೨೯ ॥

ಉಮಾಽಪಿ ತಪಸ್ಯಂತೀಂ ಹಿಮವಾನ್ ಪರ್ವತೇಶ್ವರಃ ।
ನಿವರ್ತ್ಯ ತಪಸಸ್ತಸ್ಮಾತ್ಸದಾರೋಽಹ್ಯನಯದ್ಗೃಹಾನ್ ॥ ೩೦ ॥

ದೇವೋ ಪ್ಯಾಶ್ರಿತ್ಯ ತದ್ರೌದ್ರಂ ವ್ರತಂ ನಾಮ ನಿರಾಶ್ರಯಂ ।
ವಿಚಚಾರ ಮಹಾಶೈಲಾನ್ ಮೇರುಪ್ರಾಗ್ರಾನ್ಮಹಾಮತಿಃ ॥ ೩೧ ॥

ಸ ಕದಾಚಿನ್ಮಹಾಶೈಲಂ ಹಿಮವಂತಂ ಸಮಾಗತಃ ।
ತೇನಾರ್ಚಿತಃ ಶ್ರದ್ಧಯಾಸೌ ತಾಂ ರಾತ್ರಿಮುವಸದ್ಧರಃ ॥ ೩೨ ॥

ದ್ವಿತೀಯೇಽಹ್ನಿ ಗಿರೀಶೇನ ಮಹಾದೇವೋ ನಿಮಂತ್ರಿತಃ ।
ಇಹೈವತಿಷ್ಠ ಸ್ವವಿಭೋ ತಪಸ್ಸಾಧನಕಾರಣಾತ್ ॥ ೩೩ ॥

ನಿಂದ ಪರಾಜಿತರಾಗಿದ್ದೀರಿ. ಇನ್ನು ನೀವು ನಿಶ್ಚಿಂತೆಯಿಂದ ನಿಮ್ಮನಿಮ್ಮ ಸ್ಥಾನಕ್ಕೆ ತೆರಳಿರಿ. ತಾರಕಾಸುರಸಹಿತನಾದ ಮಹಿಷನು ಯುದ್ಧದಲ್ಲಿ ಕೊಲ್ಲಲ್ಪಟ್ಟನೆಂದೇ ತಿಳಿಯಿರಿ ಎಂದು ಹೇಳಲಾಗಿ ದೇವತೆಗಳೆಲ್ಲರೂ ನಿಶ್ಚಿಂತರಾಗಿ ತಮ್ಮತಮ್ಮ ಸ್ಥಾನಕ್ಕೆ ಹೊರಟರು. ಹಿಮವಂತನೂ ಸಹ ಪತ್ನಿಯೊಡನೆ ತಪಸ್ಸಿನಲ್ಲಿರುವ ಉಮಾದೇವಿಯ ಸಮೀಪಕ್ಕೆ ಹೋಗಿ ತಪಸ್ಸಿನಿಂದ ತಡೆದು ಅವಳನ್ನು ಮನೆಗೆ ಕರೆತಂದನು.

೩೧-೩೩. ದೇವನಾದ ಶಂಕರನೂ ಕೂಡ ಸತೀದೇವಿಯ ನಾಶಪೊದಲು ಕಠಿನವಾದ ನಿರಾಶ್ರಮುವ್ರತವನ್ನು ಹೊಂದಿ ಮೇರುವೇ ಮೊದಲಾದ ಮಹಾಪರ್ವತಗಳಲ್ಲಿ ಸಂಚರಿಸುತ್ತಿದ್ದನು. ಅವನೂ ಆ ಸಮಯದಲ್ಲಿ ಸಂಚಾರವಶದಿಂದ ಹಿಮವತ್ಪರ್ವತಕ್ಕೆ ಬಂದು ಹಿಮವಂತನಿಂದ ಸತ್ಕರಿಸಲ್ಪಟ್ಟು ಅಲ್ಲಿಯೇ ಒಂದು ರಾತ್ರಿ ವಾಸಮಾಡಿದನು. ಮಾರನೇದಿನ ಹಿಮವಂತನಿಂದ ಆಹ್ವಾನಿಸಲ್ಪಟ್ಟು ಪ್ರಭುವೇ, ತಪಸ್ಸಾಧನಕ್ಕಾಗಿ ಇಲ್ಲಿಯೇ ಇರಬಹುದಲ್ಲವೇ ಎಂದು ಪ್ರಾರ್ಥಿಸಲ್ಪಟ್ಟನು.

ಇತ್ಯೇವಮುಕ್ತೋ ಗಿರಿಣಾ ಹರಶ್ಚಕ್ರೇ ಮತಿಂ ಚ ತಾಂ ।
ತಥಾಚಾಶ್ರಮಮಾಶ್ರಿತ್ಯ ತ್ಯಕ್ತ್ವಾ ಸ ಸ್ವಂ ನಿರಾಶ್ರಮಂ ॥ ೩೪ ॥

ವಸತೋಽಪ್ಯಾಶ್ರಮೇ ತಸ್ಯ ದೇವದೇವಸ್ಯ ಶೂಲಿನಃ ।
ತಂ ದೇಶಮಾಗಮತ್ಕಾಲೀ ಗಿರಿರಾಜಸುತಾ ಶುಭಾ ॥ ೩೫ ॥

ತಾಮಾಗತಾಂ ಹರೋ ದೃಷ್ಟ್ವಾ ಭೂಯೋಜಾತಾಂ ಪ್ರಿಯಾಂ ಸತೀಂ ।
ಸ್ವಾಗತೇನಾಭಿಸಂಪೂಜ್ಯ ತಸ್ಥೌ ಯೋಗರತೋ ಹರಃ ॥ ೩೬ ॥

ಸಾ ಚಾಭ್ಯೇತ್ಯ ವರಾರೋಹಾ ಕೃತಾಂಜಲಿಪರಿಗ್ರಹಾ ।
ವವಂದೆ ಚರಣೌ ಶೈಲಸಖೀಭಿಃ ಸಹಭಾಗಿನೀ ॥ ೩೭ ॥

ತತಸ್ತು ಸುಚಿರಾಚ್ಛರ್ವಃ ಸಮೀಕ್ಷ್ಯ ಗಿರಿಕನ್ಯಕಾಂ ।
ನಯುಕ್ತಂ ಚೈವಮುಕ್ತ್ವಾಥ ಸಗಣೋಂತರ್ಧಧೆ ತತಃ ॥ ೩೮ ॥

ಸಾಪಿ ಶರ್ವವಚೋರೌದ್ರಂ ಶ್ರುತ್ವಾ ಜ್ಞಾನಸಮನ್ವಿತಾ ।
ಅಂತರ್ದುಃಖೇನ ದಹ್ಯಂತೀ ಪಿತರಂ ಪ್ರಾಹ ಪಾರ್ವತೀ ॥ ೩೯ ॥

೩೪-೩೭. ಹೀಗೆ ಹಿಮವಂತನಿಂದ ಪ್ರಾರ್ಥಿಸಲ್ಪಟ್ಟ ಹರನು ಅದಕ್ಕೆ ಒಪ್ಪಿ ತನ್ನ ನಿರಾಶ್ರಮದಶೆಯನ್ನು ಬಿಟ್ಟು ಅವನ ಆಶ್ರಮದಲ್ಲಿ ವಾಸಿಸುತ್ತಿದ್ದನು. ಹಾಗೆ ವಾಸಿಸುತ್ತಿದ್ದ ಆ ಶೂಲಪಾಣಿಯ ಸಮೀಪಕ್ಕೆ ಒಂದುದಿನ ಕಾಲಿಯು ತಾನೇ ಬಂದಳು. ಹಾಗೆ ಬಂದ ಅವಳನ್ನು ನೋಡಿ ಪುನಃ ಹುಟ್ಟಿದ ಸತೀದೇವಿಯೇ ಇವಳೆಂದು ಭಾವಿಸಿ ಸ್ವಾಗತಭಾಷಣದಿಂದ ಸತ್ಕರಿಸಿ ತಾನು ಯೋಗಾಸಕ್ತನಾದನು. ಆ ಕಾಲಿಯೂ ಕೂಡ ಅಂಜಲಿಬಂಧಪೂರ್ವಕವಾಗಿ ಅಲ್ಲಿ ಬಂದಿದ್ದ ತನ್ನ ಸಖಿಗಳೊಡನೆ ಹರನ ಪಾದಗಳಿಗೆ ನಮಸ್ಕರಿಸಿದಳು.

೩೮-೪೧. ಅನಂತರ ಬಹಳಕಾಲದಮೇಲೆ ಯೋಗದಿಂದ ಬಹಿರ್ಮುಖನಾಗಿ ಶಂಕರನು ಅಲ್ಲಿಯೇ ಇದ್ದ ಕಾಲಿಯನ್ನು ನೋಡಿ ಇದು ಸರಿಯಲ್ಲ ಎಂದು ಇಷ್ಟು ಮಾತ್ರ ಹೇಳಿ ತನ್ನ ಗಣಗಳೊಡನೆ ಅಂತರ್ಧಾನಹೊಂದಿದನು. ಆಗ ಕಾಲಿಯು ಶಂಕರನ ಕಠಿನವಾದ ಮಾತನ್ನು ಕೇಳಿ ತಾನು ಜ್ಞಾನಿಯಾದುದರಿಂದ ಅಂತಃದುಃಖ ದಿಂದ ಪೀಡಿತಳಾಗಿದ್ದರೂ ತಂದೆಯನ್ನು ಕುರಿತು ಎಲೈ ತಂದೆಯೇ, ಪಿನಾಕಿಯಾ

ತಾತ ಯಾಸ್ಯೆ ಮಹಾರಣ್ಯೆ ತಪ್ತುಂ ಘೋರಂ ಮಹತ್ತಪಃ ।
ಆರಾಧನಾಯ ದೇವಸ್ಯ ಶಂಕರಸ್ಯ ಪಿನಾಕಿನಃ ॥ ೪೦ ॥

ತಥೇತ್ಯುಕ್ತಂ ವಚಃ ಪಿತ್ರಾ ಪಾದೇ ತಸ್ಯೈವ ವಿಸ್ತೃತೆ ।
ಲಲಿತಾಖ್ಯಾ ತಪಸ್ತೇಪೆ ಹರಾರಾಧನಕಾಮ್ಯಯಾ ॥ ೪೧ ॥

ತಸ್ಯಾಃ ಸಖ್ಯಃ ತತ್ರ ದೇವ್ಯಾಃ ಪರಿಚರ್ಯಾಂ ತು ಕುರ್ವತೆ ।
ಸಮಿತ್ಕುಶಫಲಂ ಚಾಪಿ ಮೂಲಾಹರಣಮಾದಿತಃ ॥ ೪೨ ॥

ವಿನೋದನಾರ್ಥಂ ಪಾರ್ವತ್ಯಾ ಮೃನ್ಮಯಃ ಶೂಲಧೃಗ್ಘರಃ ।
ಕೃತಶ್ಚ ತೇಜೋಯುಕ್ತಶ್ಚ ರುದ್ರೋಽಮೆಸ್ತ್ವಿತಿ ಸಾ ಬ್ರವೀತ್ ॥ ೪೩ ।

ಪೂಜಾಂ ಕರೋತಿ ತಸ್ಯೈವ ತಂ ಪಶ್ಯಂತೀ ಮುಹುರ್ಮುಹುಃ ।
ತತೋಽಸ್ಯಾಸ್ತುಷ್ಟಿಮಗಮಚ್ಛ್ರದ್ಧಯಾ ತ್ರಿಪುರಾಂತಕೃತ್ ॥ ೪೪ ॥

ವಟುರೂಪಂ ಸಮಾಧಾಯ ಆಷಾಢೀ ಮುಂಜಮೇಖಲೀ ।
ಯಜ್ಞೋಪವೀತೀ ಛತ್ರೀಚ ಮೃಗಾಜಿನಧರಸ್ತಥಾ ॥ ೪೫ ॥

ಗಿರುವ ಶಂಕರನ ಪ್ರೀತಿಗೋಸ್ಕರ ಘೋರವಾದ ತಪಸ್ಸನ್ನು ಮಾಡಲು ಮಹಾರಣ್ಯಕ್ಕೆ ಹೋಗುವೆನೆಂದು ಹೇಳಲಾಗಿ ತಂದೆಯೂ ಅನುಮತಿ ಇತ್ತನು. ಆಗ ಕಾಲಿಯು ಆ ಹಿಮವತ್ಪರ್ವತದ ವಿಸ್ತಾರವಾದ ಪಾದಪ್ರದೇಶದಲ್ಲಿ ಲಲಿತಾ ಎಂಬ ಹೆಸರುಳ್ಳವಳಾಗಿ ಶಂಕರನ ಪ್ರೀತಿಗಾಗಿ ತಪಸ್ಸನ್ನು ಆರಂಭಿಸಿದಳು.

೪೨-೪೫. ಅವಳ ಸಖಿಗಳೆಲ್ಲರೂ ಅಲ್ಲಿಯೇ ಪರಿಚಾರಿಣಿಯರಾಗಿ ಸಮಿತ್ತು ದರ್ಭೆ, ಫಲ, ಗೆಡ್ಡೆಗೆಣಸು ಮುಂತಾದುವನ್ನು ತಂದೊಪ್ಪಿಸುತ್ತಿದ್ದರು ಮತ್ತು ಪಾರ್ವತಿಯ ವಿನೋದಕ್ಕಾಗಿ (ಆಟಕ್ಕಾಗಿ) ಮಣ್ಣಿನಿಂದ ಶೂಲಧಾರಿಯಾಗಿಯೂ ತೇಜಸ್ವಿಯಾಗಿಯೂ ಇರುವ ಹರನ ಮೂರ್ತಿಯನ್ನೂ ಮಾಡಿದರು ಪಾರ್ವತಿಯು ಆ ಮೂರ್ತಿಯನ್ನು ನೋಡಿ ಈ ರುದ್ರನೇ ನನಗೆ ಲಭಿಸಲಿ ಎಂದು ಆಶಿಸಿದಳು. ಆ ಮೂರ್ತಿಯನ್ನೇ ಪೂಜಿಸುತ್ತಲೂ, ಅದನ್ನೇ ಪ್ರೀತಿಯಿಂದ ಬಾರಿಬಾರಿಗೂ ನೋಡುತ್ತಲೂ ವಿನೋದಹೊಂದುತ್ತಿದ್ದಳು. ಈ ರೀತಿಯಾದ ಅವಳ ಭಕ್ತಿವಿಶೇಷದಿಂದ ತ್ರಿಪುರಾರಿಯಾದ ಹರನು ಸಂತುಷ್ಟನಾಗಿ ಬ್ರಹ್ಮಚಾರಿರೂಪವನ್ನು ಹೊಂದಿ ದಂಡಧಾರಿಯಾಗಿಯೂ, ಮೌಂಜಿ, ಯಜ್ಞೋಪವೀತ, ಛತ್ರ, ಕೃಷ್ಣಾಜಿನ ಇವುಗಳನ್ನು ಧರಿಸಿಯೂ ಮತ್ತು

ಕಮಂಡಲುವ್ಯಗ್ರಕರೋ ಭಸ್ಮಾರುಣಿತವಿಗ್ರಹಃ ।
ಪ್ರತ್ಯಾಶ್ರಮಂ ಪರ್ಯಟನ್ ಸ ತಂ ಕಾಲ್ಯಾಶ್ರಮಮಾಗತಃ ॥ ೪೬ ॥

ತಮುತ್ಥಾಯ ತದಾ ಕಾಲೀ ಸಖೀಭಿಸ್ಸಹ ನಾರದ ।
ಪೂಜಯಿತ್ವಾ ಯಥಾನ್ಯಾಯಂ ಪರ್ಯಪೃಚ್ಛದಿದಂ ತತಃ ॥ ೪೭ ॥

ಉಮೋವಾಚ

ಕಸ್ಮಾದಾಗಮ್ಯತೇ ಭಿಕ್ಷೋ ಕುತ್ರಸ್ಥಾನೇ ತವಾಶ್ರಮಃ ।
ಕುತಸ್ತ್ವಂ ಪರಿಗಂತಾಸಿ ಮಮ ಶೀಘ್ರಂ ನಿವೇದಯ ॥ ೪೮ ॥

ಭಿಕ್ಷುರುವಾಚ

ಮಮಾಶ್ರಮಪದಂ ಬಾಲೇ ವಾರಾಣಸ್ಯಾಂ ಶುಚಿವ್ರತೇ ।
ಅಥೈತತ್ತೀರ್ಥಯಾತ್ರಾಯಾಂ ಗಮಿಷ್ಯಾಮಿ ಪೃಥೂದಕಂ ॥ ೪೯ ॥

ದೇವ್ಯುವಾಚ

ಕಿಂಪುಣ್ಯಂ ತತ್ರ ವಿಪ್ರೇಂದ್ರ ಯದ್ಯಾಸಿ ತ್ವಂ ಪೃಥೂದಕೆ ।
ಪಥಿ ಸ್ನಾನೇನ ಚ ಫಲಂ ಕೇಷು ಕಿಂ ಲಬ್ಧವಾನಸಿ ॥ ೫೦ ॥

೪೬-೪೮. ಕಮಂಡಲುಧಾರಿಯಾಗಿಯೂ, ಭಸ್ಮದಿಂದ ರಂಜಿತದೇಹನಾಗಿಯೂ ಅಲ್ಲಿರುವ ಆಶ್ರಮಗಳಲ್ಲೆಲ್ಲಾ ಸುತ್ತುತ್ತಾ ಕಾಲಿಯ ಆಶ್ರಮಕ್ಕೂ ಬಂದನು. ಆಗ ಕಾಲಿಯು ಪ್ರತ್ಯುತ್ಥಾನಾದಿಗಳಿಂದ ಸತ್ಕರಿಸಿ ಸಖಿಗಳೊಡಗೂಡಿ ಅವನನ್ನು ಯಥಾಶಾಸ್ತ್ರವಾಗಿ ಪೂಜಿಸಿ ಅವನನ್ನು ಕುರಿತು ಎಲೈ ಭಿಕ್ಷುವೇ, ಎಲ್ಲಿಂದ ಬರುತ್ತಿದ್ದೀಯೆ, ನಿನ್ನ ಆಶ್ರಮವೆಲ್ಲಿದೆ, ಏತಕ್ಕೆ ನೀನು ಹೀಗೆ ಸಂಚರಿಸುತ್ತಿದ್ದೀಯೆ ಇದನ್ನು ದಯವಿಟ್ಟು ಜಾಗ್ರತೆ ಹೇಳಬೇಕು ಎಂದು ಪ್ರಶ್ನೆಮಾಡಿದಳು.

೪೯-೫೧. ಅನಂತರ ಭಿಕ್ಷುವೇಷಧಾರಿಯಾದ ಶಂಕರನು ಎಲೈ ಶುಚಿವ್ರತೆಯೇ ನನ್ನ ಆಶ್ರಮವು ವಾರಾಣಸಿಯಲ್ಲಿದೆ. ತೀರ್ಥಯಾತ್ರೆಗಾಗಿ ಸುತ್ತುತ್ತಿರುವ ನಾನು ಪೃಥೂದಕತೀರ್ಥಕ್ಕೆ ಹೋಗುತ್ತೇನೆ ಎಂದನು. ಅದಕ್ಕೆ ದೇವಿಯು ಪುನಃ ಎಲೈ ಬ್ರಾಹ್ಮಣೋತ್ತಮನೇ, ನೀನು ಈಗ ಪೃಥೂದಕಕ್ಕೆ ಹೊರಟಿರುವೆಯಷ್ಟೆ, ಅಲ್ಲಿ ಉಂಟಾಗುವ ಪುಣ್ಯವೆಂಥಾದ್ದು, ಮಾರ್ಗದಲ್ಲಿ ಇದುವರಿಗೆ ಯಾವ ಯಾವ ತೀರ್ಥದಲ್ಲಿ

ಭಿಕ್ಷುರುವಾಚ

ಮಯಾ ಸ್ನಾನಂ ಪ್ರಯಾಗೇ ತು ಕೃತಂ ಪ್ರಥಮಮೇವ ಹಿ ।
ತತೋಽಥ ತೀರ್ಥೆ ಕುಬ್ಜಾಮ್ರೇ ಜಯಂತೇ ಚಂಡಿಕೇಶ್ವರೇ ॥ ೫೧ ॥

ಬಂಧುವೃಂದೇ ಚ ಕರ್ಕಂಧೇ ತೀರ್ಥೆ ಕನಖಲೇ ತಥಾ ।
ಸರಸ್ವತ್ಯಾಮಗ್ನಿಕುಂಡೇ ಭದ್ರಾಯಾಂ ತು ತ್ರಿವಿಷ್ಟಪೇ ॥ ೫೨ ॥

ಕೌನಟೇ ಕೋಟಿತೀರ್ಥೆ ಚ ತಕ್ಷಕೇ ಚ ಕೃಶೋದರಿ ।
ನಿಷ್ಕಾಮೇನ ಕೃತಂ ಸ್ನಾನಂ ತತೋಽಭ್ಯಾಗಾಂ ತವಾಶ್ರಮಂ ॥ ೫೩ ॥

ಇಹಸ್ಥಾಂ ತ್ವಾಂ ಸಮಾಭಾಷ್ಯ ಗಮಿಷ್ಯಾಮಿ ಪೃಥೂದಕಂ ।
ಪೃಚ್ಛಾಮಿ ಯದಹಂ ತ್ವಾಂ ವೈ ತತ್ರ ನ ಕ್ರೋದ್ಧುಮರ್ಹಸಿ ॥ ೫೪ ॥

ಅಹಂ ಯಸ್ತಪಸಾತ್ಮಾನಂ ಶೋಷಯಾಮಿ ಕೃಶೋದರಿ ।
ಬಾಲ್ಯೇಽಪಿ ಸಂಯತತನುಃ ತತಃ ಶ್ಲಾಘ್ಯಂ ದ್ವಿಜನ್ಮನಾಂ ॥ ೫೫ ॥

ಯಾವ ಯಾವ ಫಲವನ್ನು ಹೊಂದಿರುವೆ ಎಂದು ಪ್ರಶ್ನೆಮಾಡಿದಳು. ಅದಕ್ಕೆ ಭಿಕ್ಷುವು ನಾನು ಪ್ರಯಾಗದಲ್ಲಿ ಮೊದಲೇ ಸ್ನಾನಮಾಡಿ ಆಯಿತು. ಅನಂತರ ಕುಬ್ಜಾಮ್ರವೆಂಬ ತೀರ್ಥದಲ್ಲಿಯೂ ಜಯಂತ, ಚಂಡಿಕೇಶ್ವರ ಎಂಬ ತೀರ್ಥಗಳಲ್ಲಿಯೂ ಸ್ನಾನಮಾಡಿ

೫೨-೫೪. ಬಂಧುವೃಂದದಲ್ಲಿಯೂ, ಕರ್ಕಂಧೆ ಎಂಬ ತೀರ್ಥದಲ್ಲಿಯೂ, ಕನಖಲ ದಲ್ಲಿಯೂ, ಸರಸ್ವತಿಯ ಅಗ್ನಿಕುಂಡದಲ್ಲಿಯೂ, ಭದ್ರಾನದಿಯ ತ್ರಿವಿಷ್ಟಪತೀರ್ಥ ದಲ್ಲಿಯೂ, ಕೌನಟ, ಕೋಟಿತೀರ್ಥ, ತಕ್ಷಕ ಮುಂತಾದ ತೀರ್ಥದಲ್ಲಿಯೂ ಸಹ ನಿಷ್ಕಾಮನಾಗಿ (ಫಲಾಭಿಸಂಧಿ ಇಲ್ಲದೆ) ಸ್ನಾನಮಾಡಿ ಈಗ ನಿನ್ನ ಈ ಆಶ್ರಮಕ್ಕೆ ಬಂದಿದ್ದೇನೆ. ಇಲ್ಲಿರುವ ನಿನ್ನ ಯೋಗಕ್ಷೇಮವನ್ನು ವಿಚಾರಿಸಿ ಮಾತನಾಡಿ ಪೃಥೂದಕತೀರ್ಥಕ್ಕೆ ಹೊರಡುವವನಾಗಿದ್ದೇನೆ. ನಾನೂ ಕೆಲವು ವಿಷಯಗಳನ್ನು ನಿನ್ನಲ್ಲಿ ಕೇಳಬೇಕೆಂದಿದ್ದೇನೆ. ಇದಕ್ಕಾಗಿ ನೀನು ಕೋಪಮಾಡಕೂಡದು.

೫೫-೫೬. ಎಲೈ ಸುಂದರಿಯೇ, ಬಾಲ್ಯದಿಂದಲೂ ಜಿತೇಂದ್ರಿಯನಾಗಿದ್ದು ತಪಸ್ಸಿನಿಂದ ಕಾಯಶೋಷಣೆಯು ಬ್ರಾಹ್ಮಣನಾದ ನನಗೆ ಶ್ಲಾಘ್ಯವಾದುದು. (ಉಚಿತ ವಾದುದೆಂದು ತಾತ್ಪರ್ಯ) ನೀನು ಈ ಪ್ರಥಮವಯಸ್ಸಿನಲ್ಲಿಯೇ ಈ ರೌದ್ರವಾದ

ಕಿಮರ್ಥಂ ಭವತೀ ರೌದ್ರಂ ಪ್ರಥಮೇ ವಯಸಿ ಸ್ಥಿತಾ ।
ತಪಃ ಸಮಾಶ್ರಿತಾ ಭೀರು ಸಂಶಯಃ ಪ್ರತಿಭಾತಿ ಮೆ ॥ ೫೬ ॥

ಪ್ರಥಮೇ ವಯಸಿ ಸ್ತ್ರೀಣಾಂ ಸಪಭರ್ತ್ರಾ ವಿಲಾಸಿನಿ ।
ಸುಭೋಗಾ ಭೋಗಿತಾಃ ಕಾಲಾ ವ್ರಜಂತಿ ಸ್ಥಿರಯೌವನೆ ॥ ೫೭ ॥

ತಪಸಾ ವಾಂಛಯಂತೀಹ ಗಿರಿಜೇ ಸಚರಾಚರಾಃ ।
ರೂಪಾಭಿಜನಮೈಶ್ವರ್ಯಂ ತಚ್ಚ ತೆ ವರ್ತತೆ ಬಹು ॥ ೫೮ ॥

ತತ್ಕಿಮರ್ಥಮಪಾಸ್ಯೈತಾನಲಂಕಾರಾನ್ ಜಟಾ ಧೃತಾಃ ।
ಚೀನಾಂಶುಕಂ ಪರಿತ್ಯಜ್ಯ ಕಿಂ ತ್ವಂ ವಲ್ಕಲಧಾರಿಣೀ ॥ ೫೯ ॥

ಪುಲಸ್ತ್ಯ ಉವಾಚ

ತತಸ್ತು ತಪಸಾ ವೃದ್ಧಾ ದೇವ್ಯಾಃ ಸೋಮಪ್ರಭಾ ಸಖೀ ।
ಭಿಕ್ಷವೇ ಕಥಯಾಮಾಸ ಯಥಾವತ್ತ್ವಾ ಹಿ ನಾರದ ॥ ೬೦ ॥

ತಪಸ್ಸನ್ನು ಏತಕ್ಕೆ ಹೊಂದಿರುವೆ. ನನಗೆ ಈ ವಿಷಯದಲ್ಲಿ ಸಂದೇಹವುಂಟಾಗಿದೆ. ಎಲೈ ವಿಲಾಸಿನಿಯೇ, ಸ್ತ್ರೀಯರು ಪ್ರಥಮ ವಯಸ್ಸಿನಲ್ಲಿ ಪತಿಯೊಡನೆ ಸುಖಿಸಿದಲ್ಲಿ ಸ್ಥಿರವಾದ ಅವರ ಯೌವನದಲ್ಲಿ ಎಲ್ಲಾ ಕಾಲವೂ ಸುಭೋಗದಿಂದ ಪರಿಪೂರ್ಣವಾಗಿ ಕಳೆಯುತ್ತವೆ. ಎಲೈ ಗಿರಿಪುತ್ರಿ, ಎಲ್ಲಾ ಪ್ರಾಣಿಗಳೂ ತಪಸ್ಸಿನಿಂದ ಹೊಂದಲಪೇಕ್ಷಿಸುವ ಸುರೂಪ, (ಸೌಂದರ್ಯ) ಸದ್ವಂಶ, ಐಶ್ವರ್ಯ ಇವೆಲ್ಲವೂ ನಿನಗೆ ಸಿದ್ಧವಾಗಿಯೇ ಇದೆ. (ತಪಸ್ಸಿನಿಂದ ನೀನು ಇವನ್ನು ಹೊಂದಬೇಕಾದ ಅವಶ್ಯಕತೆ ಇಲ್ಲವೆಂದು ಭಾವ)

೫೯-೬೧. ಹೀಗಿದ್ದರೂ ಅಲಂಕಾರಗಳೆಲ್ಲವನ್ನೂ ಬಿಟ್ಟು ಜಟೆಗಳನ್ನು ಏತಕ್ಕೆ ಧರಿಸಿರುವೆ. ಪಟ್ಟವಸ್ತ್ರವನ್ನು ಬಿಟ್ಟು ನಾರುಮಡಿಯನ್ನು ಏಕೆ ಧರಿಸಿದ್ದೀಯೆ. ಪುಲಸ್ತ್ಯರು ಹೇಳುತ್ತಾರೆ:–ಹೀಗೆ ಕೇಳುತ್ತಿರುವ ಶಂಕರನನ್ನು ಕುರಿತು ತಪಸ್ಸಿನಿಂದ ವೃದ್ಧೆಯಾಗಿದ್ದ ಸೋಮಪ್ರಭಾ ಎಂಬ ದೇವಿಯ ಸಖಿಯು ವೃತ್ತಾಂತವೆಲ್ಲವನ್ನೂ ತತ್ವತಃ ಹೇಳಲುಪಕ್ರಮಿಸಿ ಎಲೈ ಬ್ರಾಹ್ಮಣೋತ್ತಮನೇ, ಈ ಪಾರ್ವತಿಗೆ ತಪಶ್ಚರ್ಯೆಗೆ ಕಾರಣವೇನೆಂಬುದನ್ನು ಹೇಳುತ್ತೇನೆ ಕೇಳಬೇಕು. ನಮ್ಮ ಈ ಮಹಾಕಾಳಿಯು

ಸೋಮಪ್ರಭೋವಾಚ

ತಪಶ್ಚರ್ಯಾ ದ್ವಿಜಶ್ರೇಷ್ಠ ಪಾರ್ವತ್ಯಾ ಯೇನ ಹೇತುನಾ ।
ತಂ ಶೃಣುಷ್ವ ಮಹಾಕಾಲೀ ಹರಂ ಭರ್ತಾರಮಿಚ್ಛತಿ ॥ ೬೧ ॥

ಪುಲಸ್ತ್ಯ ಉವಾಚ

ಸೋಮಪ್ರಭಾಯಾ ವಚನಂ ಶ್ರುತ್ವಾ ಸಂಕಂಪ್ಯ ವೈ ಶಿರಃ ।
ವಿಹಸ್ಯ ಚ ಮಹಾಹಾಸಂ ಭಿಕ್ಷುರಾಹ ವಚಸ್ತ್ವಿದಂ ॥ ೬೨ ॥

ಭಿಕ್ಷುರುವಾಚ

ವದಾಮಿ ತೇ ಪಾರ್ವತಿ ವಾಕ್ಯಮೇವಂ
ಕೇನ ಪ್ರದತ್ತಾ ತವ ಬುದ್ಧಿರೇಷಾ ।
ಕಥಂ ಕರಃ ಪಲ್ಲವಕೋಮಲಸ್ತೇ
ಸಮೇಷ್ಯತೆ ಶಾರ್ವಕರಂ ಸಸರ್ಪಂ ॥ ೬೩ ॥

ತಥಾ ದುಕೂಲಾಂಬರಶಾಲಿನೀ ತ್ವಂ
ಮೃಗಾರಿಚರ್ಮಾಭಿವೃತಸ್ತು ರುದ್ರಃ ।
ತ್ವಂ ಚಂದನಾಕ್ತಾ ಸಚಭಸ್ಮಭೂಷಿತೋ
ನಯುಕ್ತರೂಪಂ ಪ್ರತಿಭಾತಿ ಮೇ ತ್ವಿದಂ ॥ ೬೪ ॥

ಹರನನ್ನು ಪತಿಯನ್ನಾಗಿ ಅಪೇಕ್ಷಿಸಿ ಈರೀತಿ ತಪಸ್ಸಿನಲ್ಲಿ ತೊಡಗಿದ್ದಾಳೆ ಎಂದು ಉತ್ತರವಿತ್ತಳು.

೬೨-೬೪. ಸೋಮಪ್ರಭೆಯ ಆ ಮಾತನ್ನು ಕೇಳಿ ಭಿಕ್ಷುರೂಪಧಾರಿಯಾದ ಹರನು ತಲೆಯನ್ನು ಅಲ್ಲಾಡಿಸುತ್ತಾ ಹೆಚ್ಚಾಗಿ ನಗುತ್ತಾ ಎಲೈ ಪಾರ್ವತಿಯೇ, ನಾನೊಂದು ಮಾತನ್ನು ಹೇಳುತ್ತೇನೆ. ನಿನಗೆ ಇಂತಹ ಬುದ್ಧಿಯು ಯಾರಿಂದ ಉಂಟಾಯಿತು. ಚಿಗುರಿನಂತೆ ಕೋಮಲವಾದ ಈ ನಿನ್ನ ಹಸ್ತವು ಸರ್ಪಗಳಿಂದ ಭಯಂಕರವಾಗಿರುವ ಶಂಕರನ ಕೈಯ್ಯನ್ನು ಹೇಗೆ ಸೇರಬಹುದು. ಹಾಗೆಯೇ ಪಟ್ಟೆ ವಸ್ತ್ರದಿಂದ ರಮಣೀಯಳಾದ ನೀನು ವ್ಯಾಘ್ರಚರ್ಮದಿಂದ ಭಯಂಕರನಾಗಿರುವ ರುದ್ರನನ್ನು ಹೇಗೆ ಸೇರುವೆ, ಸುಗಂಧಿಯಾದ ಗಂಧದಿಂದ ಅಲಂಕೃತಳಾದ ನೀನು ವಿಭೂತಿಭೂಷಣನಾದ ರುದ್ರನಿಗೆ ಹೇಗೆ ಸರಿಹೋಗುವೆ, ನನಗೇನೋ ಈ ಸಂಬಂಧವು ಬಹಳ ಅಯುಕ್ತವೆಂದೇ ತೋರುತ್ತದೆ ಎಂದು ಪಾರ್ವತಿಯನ್ನು ಕುರಿತು ಹೇಳಿದನು.

ಪುಲಸ್ತ್ಯ ಉವಾಚ

ಏವಂ ವಾದಿನಿ ವಿಪ್ರೇಂದ್ರ ಪಾರ್ವತೀ ಭಿಕ್ಷುಮಬ್ರವೀತ್ ।
ಮಾ ವ್ಯೈವಂ ವದ ಭಿಕ್ಷೋತ್ವಂ ಹರಃ ಸರ್ವಗುಣಾಧಿಕಃ ॥ ೬೫ ॥

ಶಿವೋ ವಾಪ್ಯಥವಾ ಭೀಮಃ ಸಧನೋ ನಿರ್ಧನೋಽಥ ವಾ ।
ಅಲಂಕೃತೋ ವಾ ದೇವೇಶ ಸ್ತಥಾವಾಪ್ಯನಲಂಕೃತಃ ॥ ೬೬ ॥

ಯಾದೃಶಸ್ತಾದೃಶೋ ವಾಪಿ ಸ ಮೇ ನಾಥೋ ಭವಿಷ್ಯತಿ ।
ನಿವಾರ್ಯತಾಮಯಂ ಭಿಕ್ಷುಃ ವಿವಕ್ಷುಃ ಸ್ಫುರಿತಾಧರಃ ।
ನ ತಥಾ ನಿಂದಕಃ ಪಾಪೀ ಯಥಾ ಶ್ರೋತಾ ಶಶಿಪ್ರಭೆ ॥ ೬೭ ॥

ಇತ್ಯೇವಮುಕ್ತ್ವಾ ವರದಾ ಸಮುತ್ಥಾತುಮಥೈಚ್ಛತ ।
ತತೋಽತ್ಯಜದ್ಭಿಕ್ಷುರೂಪಂ ಸ್ವರೂಪಸ್ಥೋಽಭವದ್ಭವಃ ॥ ೬೮ ॥

೬೫-೬೭. ಪುಲಸ್ತ್ಯರು ಮುಂದಿನ ವೃತ್ತಾಂತವನ್ನು ಹೇಳುತ್ತಾರೆ:—ಹೀಗೆ ಆ ಭಿಕ್ಷುವು ಹೇಳಲಾಗಿ ಪಾರ್ವತಿಯು ಅವನನ್ನು ಕುರಿತು ಎಲೈ ಭಿಕ್ಷುವೇ, ಹೀಗೆ ಹೇಳಬೇಡ ಹರನು ಎಲ್ಲರಿಗಿಂತಲೂ ಗುಣಾಧಿಕನೆಂದು ನಾನು ನಂಬಿದ್ದೇನೆ. ಅವನು ಮಂಗಲಕರನೇ ಆಗಲಿ, ಭಯಂಕರನೇ ಆಗಲಿ, ಅವನು ಐಶ್ವರ್ಯವಂತನೇ ಆಗಲಿ, ದರಿದ್ರನೇ ಆಗಲಿ, ದೇವಪ್ರಭುವಾದ ಅವನು ಅಲಂಕಾರವನ್ನು ಹೊಂದಿರಲಿ ಅಥವಾ ಇಲ್ಲದಿರಲಿ, ಅವನು ಎಂಥವನೋ ಅಂಥವನೇ ಆಗಿರಲಿ ಅವನೇ ನನಗೆ ನಾಥನಾಗುತ್ತಾನೆ ಎಂದು ಹೇಳಿ ಸೋಮಪ್ರಭೆಯನ್ನು ಕುರಿತು ಎಲೈ ಶಶಿಪ್ರಭೆ, ಈ ಭಿಕ್ಷುವನ್ನು ತಡೆದು ಹೊರಗೆ ಕಳುಹಿಸು. ಇವನು ಪುನಃ ಈ ವಿಷಯದಲ್ಲಿ ಮಾತನಾಡಲು ತುಟಿಯನ್ನು ಅಲ್ಲಾಡಿಸುತ್ತಿದ್ದಾನೆ. ಮಹಾಪುರುಷರನ್ನು ನಿಂದಿಸುವವನಿಗಿಂತಲೂ, ಆ ನಿಂದೆಯನ್ನು ಕೇಳುವವನು ಬಹಳ ಪಾಪಿಯಾಗುತ್ತಾನೆ.

೬೮-೭೦. ಹೀಗೆ ಹೇಳಿ ಪಾರ್ವತಿಯು ಆ ಸ್ಥಳದಿಂದ ಎದ್ದುಹೋಗಲು ಇಚ್ಛೆಪಟ್ಟಳು. ಆಗ ಶಂಕರನು ಭಿಕ್ಷುವಿನ ರೂಪವನ್ನು ಬಿಟ್ಟು ಸ್ವಸ್ವರೂಪವನ್ನು ತೋರಿಸಿಕೊಂಡನು. ಹೀಗೆ ಸ್ವಸ್ವರೂಪದಿಂದ ಕೂಡಿ ಪಾರ್ವತಿಯನ್ನು ಕುರಿತು ಎಲೈ ಪ್ರಿಯೇ,

ಭೂತೋವಾಚ ಪ್ರಿಯೆ ಗಚ್ಛ ಸ್ವಮೇವ ಭವನಂ ಪಿತುಃ ।
ತವಾರ್ಥಾಯ ಪ್ರಹೇಷ್ಯಾಮಿ ಮಹರ್ಷೀನ್ ಹಿಮವದ್ಗೃಹೆ ॥ ೬೯ ॥

ಯಚ್ಚೇಹ ರುದ್ರಮಿಾಹಂತ್ಯಾ ಮೃನ್ಮಯಶ್ಚೇಶ್ವರಃ ಕೃತಃ ।
ಅಸೌ ಭದ್ರೇಶ್ವರೇತ್ಯೇವಂ ಖ್ಯಾತೋ ಲೋಕೇ ಭವಿಷ್ಯತಿ ॥ ೭೦ ॥

ದೇವದಾನವಗಂಧರ್ವಾ ಯಕ್ಷಾಃ ಕಿಂಪುರುಷೋರಗಾಃ ।
ಪೂಜಯಿಷ್ಯಂತಿ ಸತತಂ ಮಾನವಾಶ್ಚ ಶುಭೇಪ್ಸವಃ ॥ ೭೧ ॥

ಇತ್ಯೇವಮುಕ್ತಾ ದೇವೇನ ಗಿರಿರಾಜಸುತಾ ಮುನೆ ।
ಜಗಾಮಾಂಬರಮಾವಿಶ್ಯ ಸ್ವಮೇವ ಭವನಂ ಪಿತುಃ ॥ ೭೨ ॥

ಶಂಕರೋಽಪಿ ಮಹಾತೇಜಾ ವಿಸೃಜ್ಯ ಗಿರಿಕನ್ಯಕಾಂ ।
ಪೃಥೂದಕಂ ಜಗಾಮಾಥ ಸ್ನಾನಂ ಚಕ್ರೆ ವಿಧಾನತಃ ॥ ೭೩ ॥

ತತಸ್ತು ದೇವಪ್ರವರೋ ಮಹೇಶ್ವರಃ
ಪೃಥೂದಕೆ ಸ್ನಾನಮುಪಾಸ್ತಕಲ್ಮಷಃ ।

ಇನ್ನು ನಿನ್ನ ತಂದೆಯ ಮನೆಗೆ ಹೋಗು. ನಿನ್ನನ್ನು ವರಿಸುವ ಪ್ರಯತ್ನಕ್ಕಾಗಿ ನಿನ್ನ ತಂದೆಯಾದ ಹಿಮವಂತನ ಮನೆಗೆ ಕನ್ಯೆಯನ್ನು ಪ್ರಾರ್ಥಿಸಲು ಮಹರ್ಷಿಗಳನ್ನು ಕಳುಹಿಸುತ್ತೇನೆ. ಮತ್ತು ನೀನು ರುದ್ರನನ್ನು ಅಪೇಕ್ಷಿಸಿ ಯಾವ ಮೃನ್ಮಯೇಶ್ವರನನ್ನು ಮಾಡಿ ಪೂಜಿಸುತ್ತಿದ್ದೆಯೋ ಈ ಈಶ್ವರನು ಭದ್ರೇಶ್ವರನೆಂದು ಲೋಕದಲ್ಲಿ ಪ್ರಸಿದ್ಧಿಹೊಂದುತ್ತಾನೆ.

೭೧-೭೩. ದೇವತೆಗಳು, ದಾನವರು, ಗಂಧರ್ವರು, ಯಕ್ಷರು, ಕಿಂಪುರುಷರು, ಸರ್ಪವಿಶೇಷಗಳು, ಮನುಷ್ಯರೂ ಕೂಡ ತಮ್ಮ ತಮ್ಮ ಶುಭವನ್ನು ಅಪೇಕ್ಷಿಸಿ ಯಾವಾಗಲೂ ಈ ಮೂರ್ತಿಯನ್ನು ಪೂಜಿಸುತ್ತಾರೆ. ಈ ರೀತಿ ಈಶ್ವರನಿಂದ ಸಮಾಧಾನಗೊಳಿಸಲ್ಪಟ್ಟ ಪಾರ್ವತಿಯು ತಪಸ್ಸನ್ನು ನಿಲ್ಲಿಸಿ ಆಕಾಶಮಾರ್ಗದಿಂದ ತನ್ನ ತಂದೆಯ ಮನೆಯನ್ನು ಹೋಗಿ ಸೇರಿದಳು. ಶಂಕರನೂ ಸಹ ಪಾರ್ವತಿಯನ್ನು ಮನೆಗೆ ಕಳುಹಿಸಿ ಪೃಥೂದಕತೀರ್ಥಕ್ಕೆ ಹೋಗಿ ಯಥಾವಿಧಿಯಾಗಿ ಸ್ನಾನಾದಿಗಳನ್ನು ನೆರವೇರಿಸಿದನು.

ಕೃತ್ವಾ ಸನಂದೀ ಸಗಣಃ ಸವಾಹನೋ
ಮಹಾಗಿರಿಂ ಮಂದರಮಾಜಗಾಮ ॥ ॥ ೭೪ ॥

ಆಯಾತಿ ತ್ರಿಪುರಾಂತಕೆ ಸಹಗಣೈಃ ಪರ್ಯಾಯತಃ ।
ಸಪ್ತಭೀರಾರೋಹತ್ಪುಲಕೋ ಬಭೌ ಗಿರಿವರಃ ಸಂಹೃಷ್ಟಚಿತ್ತಃ ಕ್ಷಣಾತ್ ॥
ಚಕ್ರೆ ದಿವ್ಯಫಲೈರ್ಜಲೇನ ಶುಚಿನಾ ಮೂಲೈಶ್ಚ ಕಂದಾದಿಭಿಃ ।
ಪೂಜಾಂ ಸರ್ವಗಣೇಶ್ವರೈಸ್ಸಹ ವಿಭೋರದ್ರಿಸ್ತ್ರಿನೇತ್ರಸ್ಯ ತು ॥ ೭೫ ॥

ಇತಿ ಶ್ರೀ ವಾಮನಪುರಾಣೇ ಉಮಾಸಂಭವೇ ಮಂದರಗಿರಿ
ಪ್ರವೇಶೋನಾಮ ಏಕಪಂಚಾಶತ್ತಮೋಽಧ್ಯಾಯಃ

---

೭೫. ಅನಂತರ ದೇವತಾಶ್ರೇಷ್ಠನಾದ ಮಹೇಶ್ವರನು ಪೃಥೂದಕದಲ್ಲಿ ಸ್ನಾನ ಮಾಡಿ ನಿಷ್ಪಾಪನಾಗಿ ನಂದಿಯೊಡನೆಯೂ, ಪ್ರಮಥಗಣಗಳೊಡನೆಯೂ ವಾಹನಾರೂಢನಾಗಿ ಮಂದರಪರ್ವತಕ್ಕೆ ಹೋದನು. ತ್ರಿಪುರನಾಶಕನಾದ ಶಂಕರನು ಸಪರಿವಾರನಾಗಿ ಬಂದವೊಡನೆಯೇ ಆ ಮಂದರಪರ್ವತವು ಸಂತೋಷದಿಂದ ತನ್ನ ಏಳು ಶಿಖರಗಳಿಂದಲೂ, ಪುಲಕಿತವಾಗಿ ದಿವ್ಯಫಲಗಳಿಂದಲೂ, ಶುದ್ಧವಾದ ತೀರ್ಥದಿಂದಲೂ, ಕಂದಮೂಲಾದಿಗಳಿಂದಲೂ ಸಪರಿವಾರನಾದ ಆ ಶಂಕರನಿಗೆ ಪೂಜೆಯನ್ನರ್ಪಿಸಿ ಸಂತೋಷಪಡಿಸಿತು.

ಇಲ್ಲಿಗೆ ಶ್ರೀ ವಾಮನಪುರಾಣದ ಉಮಾಸಂಭವದಲ್ಲಿ ಮಂದರಗಿರಿ ಪ್ರವೇಶವೆಂಬ
ಐವತ್ತೊಂದನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಹಿಂದೆ ಇಪ್ಪತ್ತೊಂದನೆಯ ಅಧ್ಯಾಯದಲ್ಲಿ ಸತೀದೇವಿಯು ಮೃತಳಾದಮೇಲೆ ಅವಳು ಪುನಃ ಹಿಮವತ್ಪುತ್ರಿಯಾಗಿ ಹೇಗೆ ಹುಟ್ಟಿದಳೆಂಬ ಪ್ರಶ್ನೆಗೆ ಸಮಾಧಾನವನ್ನು ಹೇಳಲು ಪಾರ್ವತಿಯ ರೂಪದಿಂದ ಸತೀದೇವಿಯ ಉತ್ಪತ್ತಿಯನ್ನು ಹೇಳಿ ಪಾರ್ವತೀಪರಮೇಶ್ವರರ ವಿವಾಹಕ್ಕೆ ಕಾರಣವಾದ ಪಾರ್ವತಿಯ ತಪಸ್ಸನ್ನೂ, ವಟುವೇಷಧಾರಿಯಾಗಿ ಬಂದ ಶಿವನ ಉಕ್ತಿ ಪ್ರತ್ಯುಕ್ತಿಗಳನ್ನೂ ವಿವರಿಸಿ ಅವರ ವಿವಾಹಕ್ಕೆ ತಕ್ಕ ಪ್ರಯತ್ನವನ್ನು ನಿರೂಪಿಸಲಾಗಿದೆ. ಇದುವರೆಗೆ ಪೃಥೂದಕತೀರ್ಥದಲ್ಲಿ ನೀವು ಸ್ನಾನಾದಿಗಳನ್ನು ನಡೆಸಿರಿ ತೃಪ್ತರಾದ ಪಿತೃದೇವತೆಗಳಿಂದ ಮೇನಾ ಎಂಬ ಕನ್ಯೆಯನ್ನು ಹೊಂದಿ ಅವಳನ್ನು ಹಿಮವಂತನಿಗೆ ಕೊಟ್ಟು ವಿವಾಹಮಾಡಿರಿ. ಆ ಮೇನಾದೇವಿಯ ಗರ್ಭದಲ್ಲುದಯಿಸುವ ಪಾರ್ವತಿಯೇ ಶುಂಭನನ್ನು ಜಯಿಸುವ ಪುತ್ರನನ್ನು ಹೊಂದುತ್ತಾಳೆ. ಆದುದರಿಂದ ನೀವು ಮೊದಲು ಕುರುಕ್ಷೇತ್ರದಲ್ಲಿರುವ ಪೃಥೂದಕಕ್ಕೆ ಹೊರಡಿರಿ ಎಂಬ ನಾರಾಯಣನ ಅಪ್ಪಣೆಯ ಪ್ರಕಾರ ಇಂದ್ರಾದಿಗಳು ಅಲ್ಲಿಗೆ ಬಂದುದೂ ಮತ್ತು ಅಲ್ಲಿನ ಕುರುಕ್ಷೇತ್ರ ಪೃಥೂದಕ ತೀರ್ಥಗಳ ಮಾಹಾತ್ಮ್ಯವನ್ನು ಲೋಮಹರ್ಷಣರೊಡನೆ ನಡೆದ ಸಂವಾದದಿಂದಲೂ, ಮಾರ್ಕಂಡೇಯ ಸನತ್ಕುಮಾರರ ಸಂವಾದದಿಂದಲೂ ದೃಢಪಡಿಸಲು ತೀರ್ಥಮಾಹಾತ್ಮ್ಯವೇ ಮೊದಲಾದವು ಉಪಪ್ರಶ್ನೆಗಳಿಗೆ ಉತ್ತರವಾಗಿ ಬೆಳೆದವು. ಮತ್ತು ಈ ಅಧ್ಯಾಯದಲ್ಲಿ ಮೇನಾದೇವಿಗೆ ರಾಗಿಣೀ, ಕುಟಿಲಾ, ಕಾಳೀ ಎಂಬ ಮೂವರು ಹೆಣ್ಣು ಮಕ್ಕಳೂ ಸುನಾಭನೆಂಬ ಮಗನೂ ಉಂಟಾದರೆಂದೂ ತಪಸ್ಸಿನಲ್ಲಿ ನಿರತರಾಗಿದ್ದವರಲ್ಲಿ ರಾಗಿಣಿ, ಕುಟಿಲಾ ಇವರು ಮಹೇಶ್ವರನಿಗೆ ಪತ್ನಿಯಾಗುವ ಸಾಮರ್ಥ್ಯಹೊಂದಿಲ್ಲವೆಂದು ಬ್ರಹ್ಮನಿಂದ ತಿರಸ್ಕೃತರಾಗಿ ಧಾರ್ಷ್ಟ್ಯದಿಂದ ಶಾಪಹೊಂದಿ ರಾಗಿಣಿಯು ಸಂಧ್ಯಾರೂಪಳಾಗಿಯೂ, ಕುಟಿಲೆಯು ಜಲಮಯಳಾಗಿಯೂ ಆದಳೆಂದೂ, ಮೂರನೆ ಕಾಲಿಯು ಲಲಿತಾ ಎಂಬ ಹೆಸರಿನಿಂದ ತಪಸ್ಸಿನಲ್ಲಿ ನಿರತಳಾಗಿ ಭಕ್ತಿಯಿಂದ ಈಶ್ವರನನ್ನು ಮೆಚ್ಚಿಸಿ ಅವನ ಪತ್ನಿಯಾಗುವ ಯೋಗವನ್ನು ಹೊಂದಿದಳೆಂದೂ ವಿವರಿಸಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ದ್ವಿಪಂಚಾಶತ್ತಮೋಽಧ್ಯಾಯಃ

ಪುಲಸ್ತ್ಯ ಉವಾಚ

ತತಃ ಸಂಪೂಜಿತೋ ರುದ್ರಃ ಶೈಲೇನ ಪ್ರೀತಿಮಾನಭೂತ್ ।
ಸಸ್ಮಾರಚ ಮಹರ್ಷೀಂಸ್ತು ಅರುಂಧತ್ಯಾ ಸಮಂತತಃ ॥ ೧ ॥

ಸಂಸ್ಮೃತಾಸ್ತೇತು ಋಷಯಃ ಶಂಕರೇಣ ಮಹಾತ್ಮನಾ ।
ಸಮಾಜಗ್ಮುರ್ಮಹಾಶೈಲಂ ಮಂದರಂ ಚಾರುಕಂದರಂ ॥ ೨ ॥

ತಾನಾಗತಾನ್ ಸಮೀಕ್ಷ್ಯೈವ ದೇವಸ್ತ್ರಿಪುರನಾಶನಃ ।
ಅಭ್ಯುತ್ಥಾಯಾಭಿಪೂಜ್ಯೈತಾನಿದಂ ವಚನಮಬ್ರವೀತ್ ॥ ೩ ॥

ಧನ್ಯೋಽಯಂ ಪರ್ವತಶ್ರೇಷ್ಠಃ ಶ್ಲಾಘ್ಯಃ ಪೂಜ್ಯಶ್ಚ ದೈವತೈಃ ।
ಧೂತಪಾಪಸ್ತಥಾಜಾತೋ ಭವತಾಂ ಪಾದಪಂಕಜೈಃ ॥ ೪ ॥

ಐವತ್ತೆರಡನೆಯ ಅಧ್ಯಾಯವು

೧-೪. ಅನಂತರ ಮಂದರಪರ್ವತದ ಪೂಜೆಯಿಂದ ಸಂತುಷ್ಟನಾದ ರುದ್ರನು ಮಹರ್ಷಿಗಳನ್ನೂ, ಅರುಂಧತಿಯನ್ನೂ ಸ್ಮರಿಸಿದನು. ಶಂಕರನಿಂದ ಸ್ಮರಿಸಲ್ಪಟ್ಟ ಕೂಡಲೆ ಎಲ್ಲರೂ ಆ ಮಂದರಗಿರಿಗೆ ಬಂದು ಸೇರಿದರು. ಹಾಗೆ ಬಂದ ಅವರನ್ನು ನೋಡಿ ಶಂಕರನು ಪ್ರತ್ಯುತ್ಥಾನಾದಿಗಳಿಂದ ಅವರನ್ನು ಸತ್ಕರಿಸಿ ಅವರನ್ನು ಕುರಿತು ತಮ್ಮ ಪಾದಕಮಲಗಳ ಸಂಬಂಧದಿಂದ ಈ ಪರ್ವತಶ್ರೇಷ್ಠವು ಶ್ಲಾಘ್ಯವಾಗಿಯೂ, ದೇವತಾಸೇವ್ಯವಾಗಿಯೂ ಆಯಿತು. ಸಮಸ್ತ ಪಾಪಗಳಿಂದಲೂ ಪಾರಾಯಿತು.

ಸ್ಥೀಯತಾಂ ವಿಸ್ತೃತೆ ರಮ್ಯೆ ಗಿರಿಪ್ರಸ್ಥೆ ಸಮೆ ಶುಭೆ ।
ಶಿಲಾಸು ಪದ್ಮವರ್ಣಾಸು ಶ್ಲಕ್ಷ್ಣಾಸು ಚ ಮೃದುಷ್ವಥ ॥ ೫ ॥

ಪುಲಸ್ತ್ಯ ಉವಾಚ

ಇತ್ಯೇವಮುಕ್ತಾ ದೇವೇನ ಶಂಕರೇಣ ಮಹರ್ಷಯಃ ।
ಸಮವೇತ್ಯತ್ವರುಂಧತ್ಯಾ ವಿವಿಶುಃ ಶೈಲಸಾನುನಿ ॥ ೬ ॥

ಉಪವಿಷ್ಟೇಷು ಋಷಿಷು ನಂದೀ ದೇವಗಣಾಗ್ರಣೀಃ ।
ಅರ್ಘ್ಯಾದಿಭಿಸ್ಸಮಭ್ಯರ್ಚ್ಯ ಸ್ಥಿತಃ ಪ್ರಯತಮಾನಸಃ ॥ ೭ ॥

ತತೋಽಬ್ರವೀತ್ಸುರಪತಿರ್ಧರ್ಮ್ಯಂ ವಾಕ್ಯಂ ಹಿತಂ ಸುರಾನ್ ।
ಆತ್ಮನೋ ಯಶಸೋ ವೃದ್ಧ್ಯೈ ಸಪ್ತರ್ಷೀನ್ಸ್ವಿನಯಾನ್ವಿತಾನ್ ॥ ೮ ॥

೫-೭. ಸಮವಾಗಿಯೂ, ವಿಸ್ತಾರವಾಗಿಯೂ, ರಮ್ಯವಾಗಿಯೂ ಇರುವ ತಪ್ಪಲುಪ್ರದೇಶದಲ್ಲಿ ಕೂಡಿರಿ. ಪದ್ಮದಂತೆ ಕೆಂಪಾಗಿಯೂ, ನುಣುಪಾಗಿಯೂ, ಇರುವ ಶಿಲಾತಲಗಳಲ್ಲಿ ಕೂಡಿರಿ ಎಂದು ಶಂಕರನಿಂದ ಹೇಳಲ್ಪಟ್ಟ ಆ ಋಷಿಗಳು ಅರುಂಧತಿಯೊಡನೆ ಎಲ್ಲರೂ ಬಂದು ಪರ್ವತದ ತಪ್ಪಲಿನಲ್ಲಿ ಕುಳಿತಮೇಲೆ ಗಣಾಗ್ರಗಣ್ಯನಾದ ನಂದಿಯು ಅರ್ಘ್ಯಪಾದ್ಯಾದಿಗಳಿಂದ ಅವರನ್ನು ಪೂಜಿಸಿ ಭಕ್ತಿಯಿಂದ ಶುದ್ಧಮನಸ್ಕನಾಗಿ ನಿಂತನು.

೮-೧೧. ಅನಂತರ ಸುರಪತಿಯಾದ ಶಂಕರನು ಧರ್ಮಾನುಗುಣವಾಗಿಯೂ, ದೇವತೆಗಳಿಗೆ ಹಿತವಾಗಿಯೂ, ತನ್ನ ಯಶಸ್ಸಿಗೆ ವೃದ್ಧಿಕರವಾಗಿಯೂ ಇರುವ ಈ ಮಾತನ್ನು ಸಪ್ತರ್ಷಿಗಳನ್ನು ಕುರಿತು ಹೇಳಿದನು. ಎಲೈ ಕಶ್ಯಪನೇ, ಅತ್ರಿಯೇ, ವಸಿಷ್ಠನೇ, ವಿಶ್ವಾಮಿತ್ರನೇ, ಗೌತಮನೇ, ಭರದ್ವಾಜನೇ, ಅಂಗೀರಸನೇ ನೀವು ಕೇಳಿರಿ. ದಕ್ಷಪುತ್ರಿಯಾದ ಸತೀದೇವಿಯು ನನಗೆ ಪ್ರಿಯೆಯಾಗಿದ್ದಳು. ಅವಳು ದಕ್ಷನ ಮೇಲೆ ಉಂಟಾದ ಕೋಪದಿಂದ ಯೋಗಬಲದಿಂದ ತಾನೇ ದೇಹವನ್ನು ಪೂರ್ವದಲ್ಲಿ ಬಿಟ್ಟಳಷ್ಟೆ. ಆ ಸತೀದೇವಿಯೇ ಹಿಮವಂತನ ಪುತ್ರಿಯಾಗಿ ಉಮಾ ಎಂಬ ಹೆಸರಿನಿಂದ ಉದ್ಭವಿಸಿರುತ್ತಾಳೆ. ಬ್ರಾಹ್ಮಣೋತ್ತಮರಾದ ನೀವು ವೈವಾಹಿಕ ವ್ಯಾಪಾರದಲ್ಲಿ ನಿಂತು ಆ ಉಮೆಯನ್ನು ನನಗಾಗಿ ಹಿಮವಂತನಲ್ಲಿ ಯಾಚಿಸಬೇಕು

ಹರ ಉವಾಚ

ಕಶ್ಯಪಾತ್ರೇ ವಾರುಣೇಯ ಗಾಧೇಯ ಶೃಣು ಗೌತಮ ।
ಭರದ್ವಾಜ ಶೃಣುಷ್ವ ತ್ವಂ ಆಂಗಿರಸ್ತ್ವಂ ಶೃಣುಷ್ವ ಚ ॥ ೯ ॥

ಮಮಾಸೀದ್ದಕ್ಷತನುಜಾ ಪ್ರಿಯಾ ಸಾ ದಕ್ಷಕೋಪತಃ ।
ಉತ್ಸಸರ್ಜ ಸತೀ ಪ್ರಾಣಾನ್ ಯೋಗಂ ದೃಷ್ಟ್ವಾ ಪುರಾ ಕಿಲ ॥ ೧೦ ॥

ಸಾದ್ಯ ಭೂಯಃ ಸಮುದ್ಭೂತಾ ಶೈಲರಾಜಸುತಾ ಉಮಾ ।
ತಾಂ ಮದರ್ಥಾಯ ಶೈಲೇಂದ್ರೋ ಯಾಚ್ಯತಾಂ ದ್ವಿಜಸತ್ತಮಾಃ ॥ ೧೧ ॥

ಪುಲಸ್ತ್ಯ ಉವಾಚ

ಸಪ್ತರ್ಷಯಶ್ಚೈವಮುಕ್ತಾ ಬಾಢಮಿತ್ಯಬ್ರುವನ್ ವಚಃ ।
ಓಂ ನಮಃ ಶಂಕರಾಯೇತಿ ಪ್ರೋಕ್ತ್ವಾ ಜಗ್ಮುರ್ಹಿಮಾಲಯಂ ॥ ೧೨ ॥

ತತೋಽಪ್ಯರುಂಧತೀಂ ಶರ್ವಃ ಪ್ರಾಹ ಗಚ್ಛಸ್ವ ಸುಂದರಿ ।
ಪುರಂಧ್ರ್ಯೋಹಿ ಪುರಂಧ್ರೀಣಾಂ ಗತಿಂ ಧರ್ಮಸ್ಯ ವೈ ವಿದುಃ ॥ ೧೩ ॥

ಇತ್ಯೇವಮುಕ್ತಾ ದುರ್ಲಂಘ್ಯಲೋಕಾಚಾರಾತ್ವರುಂಧತೀ ।
ನಮಸ್ತೇ ರುದ್ರ ಇತ್ಯುಕ್ತ್ವಾ ಜಗಾಮ ಪತಿನಾ ಸಹ ॥ ೧೪ ॥

೧೨-೧೫. ಪುಲಸ್ತ್ಯರು ಹೇಳುತ್ತಾರೆ:—ಹೀಗೆ ಹೇಳಲ್ಪಟ್ಟ ಸಪ್ತರ್ಷಿಗಳು ಆಗಲೆಂದು ಒಪ್ಪಿಕೊಂಡು ಓಂ ನಮಃ ಶಂಕರಾಯ ಎಂದು ಹೇಳಿ ಹಿಮಾಲಯಕ್ಕೆ ಹೊರಟರು. ಅನಂತರ ಅರುಂಧತಿಯನ್ನೂ ಕುರಿತು ಎಲೈ ಸುಂದರಿಯೇ, ನೀನೂ ಹೊರಡು ಪತಿವ್ರತೆಯ ಧರ್ಮಮಾರ್ಗವನ್ನು ಪತಿವ್ರತೆಯರೇ ತಿಳಿಯಲು ಸಮರ್ಥರು ಎಂದನು. ಹೀಗೆ ಹೇಳಲ್ಪಟ್ಟ ಅರುಂಧತಿಯೂ ಅಲಂಘನೀಯವಾದ ಲೋಕಾಚಾರ ವುಳ್ಳವಳಾದುದರಿಂದ ನಮಸ್ತೆ ರುದ್ರ ಎಂದು ಹೇಳಿ ಪತಿಯೊಡನೆ ಹೊರಟಳು. ಅವರೆಲ್ಲರೂ ಹಿಮವತ್ಪರ್ವತದ ಶಿಖರಕ್ಕೆ ಹೋಗಿ ಅಲ್ಲಿ ಇಂದ್ರನ ಅಮರಾವತಿಯಂತಿರುವ ಓಷಧಿಪ್ರಸ್ಥವೆಂಬ ಪರ್ವತರಾಜನಾದ ಹಿಮವಂತನ ನಗರವನ್ನು ನೋಡಿದರು.

ಗತ್ವಾ ಹಿಮಾದ್ರಿಶಿಖರಮೋಷಧಿಪ್ರಸ್ಥಮೇವ ಚ ।
ದದೃಶುಃ ಶೈಲರಾಜಸ್ಯ ಪುರಂದರಪುರೀಮಿವ ॥ ೧೫ ॥

ತತಃ ಸಂಪೂಜ್ಯಮಾನಾಸ್ತೇ ಶೈಲಯೋಷಿದ್ಭಿರಾದರಾತ್ ।
ಸುನಾಭಾದಿಭಿರವ್ಯಗ್ರೈಃ ಪೂಜ್ಯಮಾನಾ ತು ಪಾರ್ವತೀ ॥ ೧೬ ॥

ಗಂಧರ್ವೈಃ ಕಿನ್ನರೈರ್ಯಕ್ಷೈಃ ತಥಾನ್ಯೈಸ್ತತ್ಪುರಸ್ಸರೈಃ ।
ವಿವಿಶುಃ ಭವನಂ ರಮ್ಯಂ ಹಿಮಾದ್ರೇಃ ಹಾಟಕೋಜ್ವಲಂ ॥ ೧೭ ॥

ತತಃ ಸರ್ವೇ ಮಹಾತ್ಮಾನಃ ತಪಸಾ ಧೌತಕಲ್ಮಷಾಃ ।
ಸಮಾಸಾದ್ಯ ಮಹಾದ್ವಾರಂ ಸಂತಸ್ಥುಃ ದ್ವಾಃಸ್ಥಕಾರಣಾತ್ ॥ ೧೮ ॥

ತತಸ್ತು ತ್ವರಿತೋಽಭ್ಯಾಗಾದ್ವಾಃಸ್ಥೋಽದ್ರಿರ್ಗಂಧಮಾದನಃ ।
ಧಾರಯನ್ವೈ ಕರೇ ದಂಡಂ ಪದ್ಮರಾಗಮಯಂ ಮಹತ್ ॥ ೧೯ ॥

ತತಸ್ತಮೂಚುರ್ಮುನಯೋ ಗತ್ವಾ ಶೈಲಪತಿಂ ಶುಭಂ ।
ನಿವೇದಯಾಸ್ಮಾನ್ ಸಂಪ್ರಾಪ್ತಾನ್ ಮಹತ್ಕಾರ್ಯಾರ್ಥಿನೋ ವಯಂ ॥ ೨೦ ॥

೧೬-೧೯. ಆಗ ಹಿಮವಂತನ ಸ್ತ್ರೀಯರುಗಳಿಂದ ಆದರದಿಂದಲೂ ಸುನಾಭಾದಿಗಳಿಂದ ಏಕಾಗ್ರತೆಯಿಂದಲೂ ಸೇವಿಸಲ್ಪಡುತ್ತಿರುವ ಪಾರ್ವತಿಯನ್ನು ಗಂಧರ್ವ, ಕಿನ್ನರ, ಯಕ್ಷಾದಿಗಳೂ, ತದನುಯಾಯಿಗಳೂ ವಿಶೇಷವಾಗಿ ಪೂಜಿಸುತ್ತಿದ್ದರು. ಅಂತಹ ಸುವರ್ಣಮಯವಾದ ಹಿಮವಂತನ ರಮ್ಯರಾಜಭವನವನ್ನು ಋಷಿಗಳೆಲ್ಲರೂ ಪ್ರವೇಶಿಸಿದರು. ತಪಸ್ಸಿನಿಂದ ನಿಷ್ಪಾಪರಾಗಿಯೂ, ಮಹಾತ್ಮರಾಗಿಯೂ ಇರುವ ಆ ಋಷಿಗಳು ಮಹಾದ್ವಾರಕ್ಕೆ ಹೋಗಿ ದ್ವಾರಪಾಲಕನನ್ನು ನೋಡಲು ಅಲ್ಲಿ ನಿಂತರು. ಅನಂತರ ದ್ವಾರಪಾಲಕನಾದ ಗಂಧಮಾದನನೆಂಬ ಪರ್ವತವು ಕೈಯ್ಯಿನಲ್ಲಿ ಪದ್ಮರಾಗಮಣಿಮಯವಾದ ದಂಡವನ್ನು ಹಿಡಿದು ಜಾಗ್ರತೆಯಾಗಿ ಓಡಿಬಂದನು.

೨೦-೨೨. ಅನಂತರ ಆ ಋಷಿಗಳು ಆ ಗಂಧಮಾದನನನ್ನು ಕುರಿತು ಶೈಲಪತಿಯಾದ ಹಿಮವಂತನಿಗೆ ನಾವು ಬಂದಿರುವೆವು ಎಂಬ ಶುಭವಾರ್ತೆಯನ್ನು ತಿಳಿಸು. ನಾವು ಒಂದು ಮಹಾಕಾರ್ಯಾರ್ಥಿಗಳಾಗಿ ಬಂದಿರುವೆವು ಎಂದರು. ಹೀಗೆ ಋಷಿಗಳಿಂದ ಹೇಳಲ್ಪಟ್ಟ ಗಂಧಮಾದನನು ಪರ್ವತಗಳೊಡನೆ ಕೂಡಿರುವ ಹಿಮವಂತನ ಆಸ್ಥಾನಕ್ಕೆ ಹೋದನು. ಮಂಡಿಗಳನ್ನು ನೆಲದಲ್ಲಿ ಊರಿ ತಲೆಯಲ್ಲಿ ಅಂಜಲಿಬಂಧದಿಂದ ಕೂಡಿ ದಂಡವನ್ನು ಕಂಕುಳಿನಲ್ಲಿರಿಸಿಕೊಂಡು ಹಿಮವಂತನಲ್ಲಿ ಹೀಗೆ ಅರಿಕೆಮಾಡಿದನು.

ಇತ್ಯೇವಮುಕ್ತಶ್ಶೈಲೇಂದ್ರಮೃಷಿಭಿರ್ಗಂಧಮಾದನಃ ।
ಜಗಾಮ ತತ್ರ ಯತ್ರಾಸ್ತೇ ಶೈಲರಾಜೋದ್ರಿಭಿರ್ವೃತಃ ॥ ೨೦ ॥

ನಿಷಣ್ಣೋ ಭುವಿ ಜಾನುಭ್ಯಾಂ ದತ್ವಾ ಹಸ್ತೌ ಮುಖೇ ಗಿರಿಃ ।
ದಂಡಂ ನಿಃಕ್ಷಿಪ್ಯ ಕಕ್ಷಾಯಾಮಿದಂ ವಚನಮಬ್ರವೀತ್ ॥ ೨೧ ॥

ಗಂಧಮಾದನ ಉವಾಚ

ಇಮೇ ಹಿ ಋಷಯಃ ಪ್ರಾಪ್ತಾ ಶೈಲರಾಜ ತವಾಜಿರೆ ।
ದ್ವಾರೆ ಸ್ಥಿತಾಃ ಕಾರ್ಯಿಣಸ್ತೆ ತವ ದರ್ಶನಲಾಲಸಾಃ ॥ ೨೩ ॥

ಪುಲಸ್ತ್ಯ ಉವಾಚ

ದ್ವಾಃಸ್ಥವಾಕ್ಯಂ ಸಮಾಕರ್ಣ್ಯ ಸಮುತ್ಥಾಯಾಚಲೇಶ್ವರಃ ।
ಸ್ವಯಮಭ್ಯಾಗಮದ್ದ್ವಾರಿ ಸಮಾದಾಯಾರ್ಘ್ಯಮುತ್ತಮಂ ॥ ೨೪ ॥

ತಾನರ್ಚ್ಯಾರ್ಘ್ಯಾದಿನಾ ಶೈಲಃ ಸಮಾನೀಯ ಸಭಾತಲಂ ।
ಉವಾಚ ವಾಕ್ಯಂ ವಾಕ್ಯಜ್ಞಃ ಕೃತಾಸನಪರಿಗ್ರಹಾನ್ ॥ ೨೫ ॥

ಹಿಮವಾನುವಾಚ

ಅನಭ್ರವೃಷ್ಟಿಃ ಕಿಮಿಯಮುತಾಹೋಽಕುಸುಮಂ ಫಲಂ ।
ಅಪ್ರತರ್ಕ್ಯಮಚಿಂತ್ಯಂ ಚ ಭವದಾಗಮನಂ ತ್ವಿದಂ ॥ ೨೬ ॥

೨೩-೨೫. ಪ್ರಭುವಾದ ಶೈಲರಾಜನೇ, ಈ ಋಷಿಗಳೆಲ್ಲರೂ ನಿನ್ನ ಈ ಮನೆಯ ಮುಂದಿನ ಅಂಗಳದಲ್ಲಿ ಬಂದು ಕಾದು ನಿಂತಿದ್ದಾರೆ. ಅವರು ಕಾರ್ಯಾರ್ಥಿಗಳಾಗಿ ನಿನ್ನನ್ನು ನೋಡಲು ಕುತೂಹಲಿಗಳಾಗಿರುತ್ತಾರೆ ಎಂದು ಹೇಳಿದೊಡನೆಯೇ ಆ ದ್ವಾರಪಾಲನ ಮಾತನ್ನು ಕೇಳಿ ಹಿಮವಂತನು ತಾನೇ ಮೇಲೆ ಎದ್ದು ಅರ್ಘ್ಯಾದಿ ಪೂಜಾಸಾಮಗ್ರಿಗಳೊಡನೆ ಬಾಗಿಲಿಗೆ ಬಂದನು. ಅವರನ್ನೆಲ್ಲರನ್ನೂ ಅರ್ಘ್ಯಾದಿಗಳಿಂದ ತಾನೇ ಸತ್ಕರಿಸಿ ಸಭಾಂಗಣಕ್ಕೆ ಕರೆದುಕೊಂಡುಹೋಗಿ ಆಸನಗಳನ್ನು ಹೊಂದಿದ ನಂತರ ಅವರನ್ನು ಕುರಿತು ಹೀಗೆ ಹೇಳುತ್ತಾನೆ.

೨೬-೨೮. ಎಲೈ ಪೂಜ್ಯರೇ, ಯುಕ್ತಿಯಿಂದ ತರ್ಕಿಸುವುದಕ್ಕೂ, ಆಲೋಚಿಸುವುದಕ್ಕೂ ಅಶಕ್ಯವಾದ ತಮ್ಮಗಳ ಆಕಸ್ಮಿಕವಾದ ಈ ಆಗಮನವು ಮೇಘವಿಲ್ಲದೆ ಉಂಟಾದ ಮಳೆಯಂತೆಯೂ, ಕುಸುಮವನ್ನು ನೋಡದೆ ಉಂಟಾದ ಫಲದಂತೆಯೂ

ಅದ್ಯಪ್ರಭೃತಿ ಧನ್ಯೋಽಸ್ಮಿ ಶೈಲರಾಜೋಽಸ್ಮಿ ಸತ್ತಮಾಃ ।
ಸಂಶುದ್ಧದೇಹೋಽಸ್ಮ್ಯದ್ಯೈವ ಯದ್ಭವಂತೋ ಮಮಾಜಿರಂ ॥ ೨೭ ॥

ಅಸತ್ಸಂಸರ್ಗಸಂಶುದ್ಧಂ ಕೃತವಂತೋ ದ್ವಿಜೋತ್ತಮಾಃ ।
ದೃಷ್ಟಿಪೂತಂ ಪದಾಕ್ರಾಂತಂ ತೀರ್ಥಂ ಸಾರಸ್ವತಂ ಯಥಾ ॥ ೨೮ ॥

ದಾಸೋಽಹಂ ಭವತಾಂ ವಿಪ್ರಾಃ ಕೃತಪುಣ್ಯಶ್ಚ ಸಾಂಪ್ರತಂ ।
ಯೇನಾರ್ಥಿನೋಽಹಿ ತೇ ಯೂಯಂ ತನ್ಮಾನುಜ್ಞಾತುಮರ್ಹಥ ॥ ೨೯ ॥

ಸದಾರೋಽಹಂ ಸಮಂ ಪುತ್ರೈಃ ಭೃತ್ಯೇನ ಪ್ರಭುರವ್ಯಯಃ ।
ಕಿಂಕರೋಽಸ್ಮಿ ಸ್ಥಿತೋ ಯುಷ್ಮದಾಜ್ಞಾಕಾರೀ ತದುಚ್ಯತಾಂ ॥ ೩೦ ॥

ಪುಲಸ್ತ್ಯ ಉವಾಚ

ಶೈಲರಾಜವಚಃ ಶ್ರುತ್ವಾ ಋಷಯಃ ಸಂಶಿತವ್ರತಾಃ ।
ಊಚುರಂಗಿರಸಂ ವೃದ್ಧಂ ಕಾರ್ಯಮದ್ರೌ ನಿವೇದಯ ॥ ೩೧ ॥

ಆಗಿದೆ. (ಆಕಸ್ಮಿಕವೆಂದು ಭಾವ) ಈಗ ನಾನು ಧನ್ಯನಾದೆನು, ಶೈಲರಾಜನಾದೆನು. ನನ್ನ ಈ ವಾಸಸ್ಥಾನವನ್ನು ಅಸತ್ಸಂಸರ್ಗದಿಂದ ಶುದ್ಧವನ್ನಾಗಿ ಮಾಡಿದುದರಿಂದ ನಾನೂ ಈಗ ಶುದ್ಧದೇಹನಾದೆನು. ಪಾದದಿಂದ ಆವರಿಸಲ್ಪಡುವ ಪ್ರದೇಶವು ದೃಷ್ಟಿಯಿಂದ ಪರಿಶುದ್ಧವಾಗುವಂತೆಯೂ, ಸರಸ್ವತೀಜಲವು ತೀರ್ಥಸಂಸರ್ಗದಿಂದ ಉತ್ಕರ್ಷ ಹೊಂದುವಂತೆಯೂ ತಮ್ಮ ಸಂಬಂಧದಿಂದ ನಾನು ಪವಿತ್ರನಾದೆನು. (ದಾರಿಯಲ್ಲಿ ನಡೆಯುವಾಗ "ದೃಷ್ಟಿಪೂತಂ ನ್ಯಸೇತ್ಪಾದಂ" ಎಂಬ ಶಾಸ್ತ್ರದಂತೆ ಕಣ್ಣಿನಿಂದ ಮೊದಲು ಶುದ್ಧವಾದ ಸ್ಥಳವನ್ನು ನೋಡಿ ಕಾಲಿಡಬೇಕೆಂದು ಶಾಸ್ತ್ರವಿದೆ. ಋಷಿಗಳಿಂದ ಸೇವಿಸಲ್ಪಟ್ಟ ಜಲಪ್ರದೇಶಕ್ಕೆ ತೀರ್ಥವೆಂದು ಹೆಸರು.)

೨೯-೩೦. ಎಲೈ ಬ್ರಾಹ್ಮಣೋತ್ತಮರೇ, ತಮ್ಮ ಆಗಮನದಿಂದ ಪುಣ್ಯಶಾಲಿಯಾದ ನಾನು ತಮಗೆ ದಾಸನಾಗಿರುತ್ತೇನೆ. ತಾವು ಅರ್ಥಿಗಳಾಗಿ ಇಲ್ಲಿಗೆ ಬಂದುದು ಏತಕ್ಕೆ ಎಂಬುದನ್ನು ಅಪ್ಪಣೆಮಾಡಿರಿ. ಧೊರೆಯಾಗಿರುವ ನಾನು ಪತ್ನಿಯೊಡನೆಯೂ, ಪುತ್ರನೊಡನೆಯೂ ಭೃತ್ಯಭಾವದಿಂದ ತಮ್ಮ ಆಜ್ಞಾಕಾರಿಯಾದ ಕಿಂಕರನಾಗಿರುವೆನು. ತಮ್ಮ ಅರ್ಥಿತ್ವವನ್ನು ಅಪ್ಪಣೆಕೊಡಿಸಿರಿ ಎಂದು ಹಿಮವಂತನು ತನ್ನ ಮಾತನ್ನು ಮುಗಿಸಿದನು.

೩೧-೩೩. ಪುಲಸ್ತ್ಯರು ಹೇಳುತ್ತಾರೆ:—ಹಿಮವಂತನ ಮಾತನ್ನು ಕೇಳಿ ಋಷಿಗಳು ವೃದ್ಧರಾದ ಅಂಗೀರಸರನ್ನು ತಮ್ಮ ಕಾರ್ಯವನ್ನು ಹಿಮವಂತನಲ್ಲಿ ಹೇಳಲು

ಇತ್ಯೇವಂ ಚೋದಿತಸ್ಸರ್ವೈಃ ಋಷಿಭಿಃ ಕಾಶ್ಯಪಾದಿಭಿಃ ।
ಪತ್ಯುವಾಚ ಪರಂ ವಾಕ್ಯಂ ಗಿರಿರಾಜಂ ತಮಂಗಿರಾಃ ॥ ೩೨ ॥

ಅಂಗಿರಾ ಉವಾಚ

ಶ್ರೂಯತಾಂ ಪರ್ವತಶ್ರೇಷ್ಠ ಯೇನ ಕಾರ್ಯೇಣ ವೈ ವಯಂ ।
ಸಮಾಗತಾಸ್ತ್ವತ್ಸದನಮರುಂಧತ್ಯಾ ಸಮಂ ಗಿರೆ ॥ ೩೩ ॥

ಯೋಽಸೌ ಮಹಾತ್ಮಾ ಸರ್ವಾತ್ಮಾ ದಕ್ಷಯಜ್ಞಕ್ಷಯಂಕರಃ ।
ಶಂಕರಶ್ಶೂಲಧೃಕ್ಶರ್ವಃ ತ್ರಿನೇತ್ರೋ ವೃಷವಾಹನಃ ॥ ೩೪ ॥

ಜೀಮೂತಕೇತುಶ್ಶತ್ರುಘ್ನೋ ಯಜ್ಞಭೋಕ್ತಾ ಸ್ವಯಂ ಪ್ರಭುಃ ।
ಯಮೀಶ್ವರಂ ವದಂತ್ಯೇಕೆ ಶಿವಂ ಸ್ಥಾಣುವರಂ ಹರಂ ॥ ೩೫ ॥

ಭೀಮಮುಗ್ರಂ ಮಹೇಶಾನಂ ಮಹಾದೇವಂ ಪಶೋಃ ಪತಿಂ ।
ವಯಂ ತೇನ ಪ್ರೇಷಿತಾಸ್ಮಃ ತ್ವತ್ಸಕಾಶಂ ಗಿರೀಶ್ವರ ॥ ೩೬ ॥

ಇಯಂ ಯಾ ತ್ವತ್ಸುತಾ ಕಾಲೀ ಸರ್ವಲೋಕೇಷು ಸುಂದರೀ ।
ತಾಂ ಪ್ರಾರ್ಥಯತಿ ದೇವೇಶಃ ತಾಂ ಭವಾನ್ ದಾತುಮರ್ಹಸಿ ॥ ೩೭ ॥

ಪ್ರೇರಿಸಿದರು. ಹಾಗೆ ಕಾಶ್ಯಪಾದಿ ಮಹರ್ಷಿಗಳಿಂದ ಪ್ರೇರಿತರಾದ ಅಂಗೀರಸರು ಗಿರಿರಾಜನನ್ನು ಕುರಿತು ಎಲೈ ಪರ್ವತಶ್ರೇಷ್ಠನೇ, ನಾವುಗಳು ಯಾವ ಕಾರ್ಯಕ್ಕಾಗಿ ಅರುಂಧತಿಯೊಡನೆ ಇಲ್ಲಿ ಬಂದಿರುವೆವೋ ಅದನ್ನು ಹೇಳುತ್ತೇನೆ ಕೇಳಬೇಕು ಎಂದು ಮಾತನ್ನು ಪಕ್ರಮಿಸಿದರು.

೩೪-೩೭. ಮಹಾತ್ಮನಾಗಿಯೂ, ಸರ್ವಾತ್ಮನಾಗಿಯೂ, ದಕ್ಷಯಜ್ಞನಾಶಕನಾಗಿಯೂ, ಶಂಕರ, ಶೂಲಧಾರಿ, ತ್ರಿನೇತ್ರ ಮೊದಲಾದ ಅಸಾಧಾರಣ ನಾಮಧೇಯನಾಗಿಯೂ ಇರುವ ಯಾವ ಪ್ರಭುವನ್ನು ಯಜ್ಞಭೋಕ್ತೃವೆಂದೂ, ಈಶ್ವರನೆಂದೂ, ಶಿವನೆಂದೂ, ಸ್ಥಾಣುವೆಂದೂ, ಮಹಾದೇವನೆಂದೂ, ಪಶುಪತಿಯೆಂದೂ ನಾನಾ ನಾಮಗಳಿಂದ ವ್ಯವಹರಿಸುತ್ತಾರೆಯೋ ಅಂತಹ ಮಹಾತ್ಮನಿಂದ ನಾವು ನಿನ್ನಲ್ಲಿಗೆ ಕಳುಹಿಸಲ್ಪಟ್ಟಿದ್ದೇವೆ. ಎಲೈ ಗಿರೀಶ್ವರನೇ, ನಿನ್ನ ಮಗಳಾದ ಈ ಕಾಲಿಯು ಸರ್ವಲೋಕಸುಂದರಿಯಾಗಿರುವದ್ದರಿಂದ ಇವಳನ್ನು ದೇವೇಶನು ಪ್ರಾರ್ಥಿಸುತ್ತಾನೆ. ಇವಳನ್ನು ನೀನು ಮಹೇಶ್ವರನಿಗೆ ಕೊಡಬೇಕು.

ಸ ಏವ ಧನ್ಯೋಹಿ ಪಿತಾ ಯಸ್ಯ ಪುತ್ರೀ ಪತಿಂ ಶುಭಂ ।
ರೂಪಾಭಿಜನಸಂಪತ್ತ್ಯಾ ಪ್ರಾಪ್ನೋತಿ ಗಿರಿಸತ್ತಮ ॥ ೩೮ ॥

ಯಾವಂತೋ ಜಂಗಮಾ ಗಮ್ಯಾ ಭೂತಾಃ ಶೈಲಚತುರ್ವಿಧಾಃ ।
ತೇಷಾಂ ಮಾತಾತ್ವಿಯಂ ದೇವೀ ಯತಃ ಪ್ರೋಕ್ತಃ ಪಿತಾ ಹರಃ ॥ ೩೯ ॥

ಪ್ರಣಮ್ಯ ಶಂಕರಂ ದೇವಾಃ ಪ್ರಣಮಂತು ಸುತಾಂ ತವ ।
ಕುರುಷ್ವ ಪಾದಂ ಶತ್ರೂಣಾಂ ಮೂರ್ಧ್ನಿ ಭಸ್ಮಪರಿಪ್ಲುತಂ ॥ ೪೦ ॥

ಯಾಚಿತಾರೋ ವಯಂ ಶರ್ವೋ ವರೋ ದಾತಾ ತ್ವಮಪ್ಯಮಾ ।
ವಧೂಸ್ಸರ್ವಜಗನ್ಮಾತಾ ಕುರು ಯಚ್ಛ್ರೇಯಸೇ ತವ ॥ ೪೧ ॥

ಪುಲಸ್ತ್ಯ ಉವಾಚ

ತದ್ವಚೋಽಙ್ಗರಸಃ ಶ್ರುತ್ವಾ ಕಾಲೀ ತಸ್ಥಾವಧೋಮುಖೀ ।
ಹರ್ಷಮಾಗಮ್ಯ ಸಹಸಾ ಪುನರ್ದೈನ್ಯಮುಪಾಗತಾ ॥ ೪೨ ॥

೩೮-೪೧. ಎಲೈ ಗಿರಿರಾಜನೇ, ಯಾವ ಪುತ್ರಿಯು ರೂಪ, ವಂಶ ಮೊದಲಾದವುಗಳಿಂದೊಪ್ಪುವ ಶುಭಕರನಾದ ಪತಿಯ ಕೈಸೇರುವಳೋ ಅಂತಹ ಕನ್ಯಾಪಿತೃವೇ ಲೋಕದಲ್ಲಿ ಧನ್ಯನು ಪ್ರಪಂಚದಲ್ಲಿ ನಾವು ತಿಳಿಯಲು ಶಕ್ಯವಾಗಿರುವ ದೇವ, ತಿರ್ಯಕ್, ಮನುಷ್ಯ, ಸ್ಥಾವರ ರೂಪಗಳಾದ ನಾಲ್ಕು ವಿಧವಾದ ಪ್ರಾಣಿಗಳಿವೆಯೋ ಅವುಗಳಿಗೆಲ್ಲಕ್ಕೂ ಈ ನಿನ್ನ ಮಗಳು ತಾಯಿಯಾಗುವಳು. ಹರನು ಎಲ್ಲಕ್ಕೂ ಪಿತೃವಾದುದರಿಂದ ಅವನ ಪತ್ನಿಯಾದ ಇವಳು ತಾಯಿ ಎಂಬುದರಲ್ಲಿಡ್ಡಿಯೇನು ದೇವತೆಗಳೆಲ್ಲರೂ ಶಂಕರನನ್ನು ನಮಸ್ಕರಿಸಿ ಅನಂತರ ನಿನ್ನ ಮಗಳನ್ನು ನಮಸ್ಕರಿಸಲಿ. ಈ ಮಹಾರ್ಘವಾದ ಸಂಬಂಧದಿಂದ ಶತ್ರುಗಳ ತಲೆಯಮೇಲೆ ಭಸ್ಮಪೂರಿತವಾದ ಪಾದವನ್ನಿಡು, (ಶಂಕರನು ಎಲ್ಲರಿಗೂ ವಂದ್ಯನಾಗಿದ್ದರೂ ಅಂತಹ ಶಂಕರನಿಂದಲೂ ನಮಸ್ಕರಿಸಲ್ಪಡುವ ನೀನು, ನಮಸ್ಕಾರಕಾಲದಲ್ಲಿ ಅವನ ತಲೆಯ ಭಸ್ಮದಿಂದ ಕೂಡಿದ ಪಾದಗಳುಳ್ಳವನಾಗಿ ಮತ್ತೂ ಉತ್ಕರ್ಷವನ್ನು ಹೊಂದಿ ವಿಜಯಶಾಲಿಯಾಗುತ್ತೀಯೆ ಎಂದು ತಾತ್ಪರ್ಯ). ಹೆಚ್ಚಿಗೆ ಏನು ಹೇಳಲಿ. ನಾವು ಯಾಚಿಸುವವರು, ಶಂಕರನೇ ವರನು. ನೀನೇ ಕನ್ಯೆಯನ್ನು ಕೊಡತಕ್ಕವನು. ಜಗನ್ಮಾತೆಯಾದ ಉಮಾದೇವಿಯೇ ವಧುವು. ಇಂತಹ ಈ ಸಂದರ್ಭದಲ್ಲಿ ನಿನಗೆ ಯಾವದು ಶ್ರೇಯಸ್ಕರವೆಂದು ತೋರಿಬರುತ್ತದೆಯೋ ಆ ಕೆಲಸವನ್ನು ಮಾಡು.

೪೨-೪೫. ಪುಲಸ್ತ್ಯರು ಹೇಳುತ್ತಾರೆ. ಆಂಗೀರಸರ ಈ ಮಾತನ್ನು ಕೇಳಿ ತಂದೆಯ ಸಮೀಪದಲ್ಲಿದ್ದ ಕಾಲಿಯು ಲಜ್ಜೆಯಿಂದ ತಲೆಬಾಗಿ ನಿಂತಳು. ಸ್ವಲ್ಪಹೊತ್ತು

ತತಃ ಶೈಲಪತಿಃ ಪ್ರಾಹ ಪರ್ವತಂ ಗಂಧಮಾದನಂ ।
ಗಚ್ಛ ಶೈಲಾನುಪಾಮಂತ್ರ್ಯ ಸರ್ವಾನಾಹರ್ತುಮರ್ಹಸಿ ॥ ೪೩ ॥

ತತಃ ಶೀಘ್ರತರಃ ಶೈಲೋ ಗೃಹಾದ್ಗೃಹಮಗಾಜ್ಜವೀ ।
ಮೇರ್ವಾದ್ಯಾನ್ ಪರ್ವತಶ್ರೇಷ್ಠಾನ್ ಆಜುಹಾವ ಸಮಂತತಃ ॥ ೪೪ ॥

ತೇಽಪ್ಯಾಜಗ್ಮುಃ ತ್ವರಾವಂತಃ ಕಾರ್ಯಂ ಮತ್ವಾ ಮಹತ್ತದಾ ।
ವಿವಿಶುರ್ವಿಸ್ಮಯಾವಿಷ್ಟಾಃ ಸೌವರ್ಣೇಷ್ವಾಸನೇಷು ಚ ॥ ೪೫ ॥

ಉದಯೋ ಹೇಮಕೂಟಶ್ಚ ರಮ್ಯಕೋ ಮಂದರಸ್ತಥಾ ।
ಉದ್ದಾಲಕೋ ವಾರುಣಶ್ಚ ವರಾಹೋ ಗರುಡಾಸನಃ ॥ ೪೬ ॥

ಶುಕ್ತಿಮಾನ್ವೇಗಸಾನುಶ್ಚ ದೃಢಶೃಙ್ಗೋಽಪಿ ಶೃಙ್ಗವಾನ್ ।
ಚಿತ್ರಕೂಟಸ್ತ್ರಿಕೂಟಶ್ಚ ತಥಾನ್ಯೇ ಕ್ಷುದ್ರಪರ್ವತಾಃ ॥ ೪೭ ॥

ಉಪವಿಷ್ಟಾಃ ಸಭಾಯಾಂ ವೈ ಪ್ರಣಿಪತ್ಯ ಋಷೀಂಶ್ಚ ತಾನ್ ।
ತತೋ ಗಿರೀಶಃ ಸ್ವಾಂ ಭಾರ್ಯಾಂ ಮೇನಾಮಾಹೂತವಾನ್ ಸ್ವಯಂ ।
ಸಮಾಗಚ್ಛತು ಕಲ್ಯಾಣೀ ಸಮಂ ಪುತ್ರೇಣ ಭಾಮಿನೀ ॥ ೪೮ ॥

ಹರ್ಷಗೊಂಡಿದ್ದು ನಂತರ (ತಂದೆಯ ನಿಶ್ಚಯವನ್ನರಿಯದೆ) ದೈನ್ಯ ಹೊಂದಿದಳು. ಆಗ ಹಿಮವಂತನು ಗಂಧಮಾದನನನ್ನು ಕುರಿತು ನೀನು ಹೊರಡು ಪರ್ವತಗಳೆಲ್ಲವನ್ನೂ ಆಹ್ವಾನಿಸಿ ಇಲ್ಲಿಗೆ ಒಟ್ಟಾಗಿ ಬರುವಂತೆ ಮಾಡು ಎಂದು ಆಜ್ಞಾಪಿಸಿದನು. ಆಗ ಗಂಧಮಾದನನು ಬಹಳ ವೇಗದಿಂದ ಮನೆಯಿಂದ ಮನೆಗೆ ತಿರುಗಿ ಮೇರುವೇ ಮೊದಲಾದ ಪರ್ವತೋತ್ತಮಗಳನ್ನೆಲ್ಲಾ ಎಲ್ಲಾ ಕಡೆಯಿಂದಲೂ ಕರೆದುಬಂದನು. ಅವರೂ ಸಹ ಮಹಾಕಾರ್ಯವೇನೋ ಇದೆ ಎಂದು ತಿಳಿದು ಜಾಗ್ರತೆಯಾಗಿ ಬಂದು ಆಶ್ಚರ್ಯದಿಂದ ಕೂಡಿದವರಾಗಿ ರಾಜಗೃಹವನ್ನೂ ಪ್ರವೇಶಿಸಿ ಅಲ್ಲಿರುವ ರಾಜಯೋಗ್ಯವಾದ ಸುವರ್ಣಾಸನಗಳಲ್ಲಿ ಕುಳಿತರು.

೪೬-೪೮. ಉದಯ, ಹೇಮಕೂಟ, ರಮ್ಯಕ, ಮಂದರ, ಉದ್ದಾಲಕ, ವಾರುಣ, ವರಾಹ, ಗರುಡಾಸನ, ಶುಕ್ತಿಮಾನ್, ವೇಗಸಾನು, ದೃಢಶೃಂಗ, ಶೃಂಗವಾನ್, ಚಿತ್ರಕೂಟ, ತ್ರಿಕೂಟ ಮತ್ತು ಇತರ ಕ್ಷುದ್ರಪರ್ವತಗಳು ಎಲ್ಲರೂ ಬಂದು

ಸಾಭಿವಂದ್ಯ ಋಷೀಣಾಂ ಚ ಚರಣಾಂಶ್ಚ ತಪಸ್ವಿನೀ ।
ಸರ್ವಾನ್ ಜ್ಞಾತೀನ್ ಸಮಾಭಾಷ್ಯ ನಿವೇಶ ಸಸುತಾ ತದಾ ॥ ೪೯ ॥

ತತೋಽದ್ರಿಷು ಮಹಾಶೈಲ ಉಪವಿಷ್ಟೇಷು ನಾರದ ।
ಉವಾಚ ವಾಕ್ಯಂ ವಾಕ್ಯಜ್ಞಃ ಸರ್ವಾನಾಭಾಷ್ಯ ಸುಸ್ವರಂ ॥ ೫೦ ॥

ಹಿಮವಾನುವಾಚ

ಇಮೇ ಸಪ್ತರ್ಷಯಃ ಪುಣ್ಯಾಃ ಯಾಚಿತಾರಃ ಸುತಾಂ ಮಮ ।
ಮಹೇಶ್ವರಾರ್ಥಂ ಕನ್ಯಾಂ ತು ತಚ್ಚಾವೇದ್ಯಂ ಭವತ್ಸು ವೈ ॥ ೫೧ ॥

ತದ್ವದಧ್ವಂ ಯಥಾನ್ಯಾಯಂ ಜ್ಞಾತಯೋ ಯೂಯಮೇವ ಮೇ ।
ನೋಲ್ಲಂಘ್ಯ ಯುಷ್ಮಾನ್ ದಾಸ್ಯಾಮಿ ತತ್ಕ್ಷಮಂ ವಕ್ತುಮರ್ಹಥ ॥ ೫೨ ॥

ಪುಲಸ್ತ್ಯ ಉವಾಚ

ಹಿಮದ್ವಚನಂ ಶ್ರುತ್ವಾ ಮೇರ್ವಾದ್ಯಾಃ ಸ್ಥಾವರೋತ್ತಮಾಃ ।
ಸರ್ವ ಏವಾಬ್ರುವನ್ ವಾಕ್ಯಂ ಸ್ಥಿತಾಸ್ತೇಷ್ವಾಸನೇಷು ತೇ ॥ ೫೩ ॥

ಸಭೆಯಲ್ಲಿ ಋಷಿಗಳಿಗೆ ವಂದಿಸಿ ಆಸನದಲ್ಲಿ ಕುಳಿತರು. ಆಗ ಹಿಮವಂತನು, ತನ್ನ ಪತ್ನಿಯಾದ ಮೇನಾದೇವಿಯನ್ನು ಎಲೈ, ಮಂಗಳಾಂಗಿಯೇ, ನೀನೂ ನಿನ್ನ ಮಗನೊಡನೆ ಸಭೆಗೆ ಬರಬೇಕೆಂದು ತಾನೇ ಆಹ್ವಾನಮಾಡಿದನು.

೪೯-೫೨. ಹಾಗೆ ಆಹ್ವಾನಿಸಲ್ಪಟ್ಟ ಮೇನಾದೇವಿಯು ಋಷಿಗಳ ಪಾದಗಳಿಗೆ ನಮಸ್ಕರಿಸಿ, ಎಲ್ಲಾ ಬಂಧುಗಳನ್ನೂ ಮಾತನಾಡಿಸಿ ತನ್ನ ಮಗನೊಡನೆ ಸಭೆಗೆ ಬಂದಳು. ಆಗ ಪರ್ವತಗಳೆಲ್ಲವೂ ಕುಳಿತುಕೊಂಡಮೇಲೆ ವಾಕ್ಯವೇದಿಯಾದ ಹಿಮವಂತನು ಎಲ್ಲರನ್ನೂ ಸಂಬೋಧಿಸಿ ಸುಸ್ವರದಿಂದ ಹೀಗೆ ಹೇಳುತ್ತಾನೆ. ಪುಣ್ಯ ಶಾಲಿಗಳಾದ ಈ ಸಪ್ತರ್ಷಿಗಳು ನನ್ನ ಮಗಳನ್ನು ಮಹೇಶ್ವರನಿಗೆ ವಿವಾಹಮಾಡಿ ಕೊಡಲು ಯಾಚಿಸುತ್ತಿದ್ದಾರೆ. ಈ ವಿಷಯವನ್ನು ನಿಮ್ಮಗಳಲ್ಲಿ ತಿಳಿಸಬೇಕಾದುದು ನ್ಯಾಯಸಮ್ಮತವಾದದ್ದು. ಆದುದರಿಂದ ಬಂಧುವರ್ಗಕ್ಕೆ ಸೇರಿರುವ ನೀವುಗಳು ನ್ಯಾಯ ವಿರೋಧವಿಲ್ಲದಂತೆ ನಿಮ್ಮ ಏಕಾಭಿಪ್ರಾಯವನ್ನು ತಿಳಿಸಿರಿ. ನಿಮ್ಮ ಅಭಿಪ್ರಾಯವನ್ನು ಉಲ್ಲಂಘಿಸಿ ನಾನು ಕನ್ಯಾದಾನಮಾಡುವ ಸಂಭವವಿಲ್ಲ. ಯಾವದು ಉಚಿತ ವೆಂಬುದನ್ನು ದಯವಿಟ್ಟು ಹೇಳಿರಿ ಎಂದನು.

೫೩-೫೬. ಪುಲಸ್ತ್ಯರು ಹೇಳುತ್ತಾರೆ:—ಈ ಪ್ರಕಾರವಾದ ಹಿಮವಂತನ ಮಾತನ್ನು ಕೇಳಿ ಮೇರುವೇ ಮೊದಲಾದ ಪರ್ವತೋತ್ತಮರೆಲ್ಲರೂ ಆಸನದಲ್ಲಿ

ಯಾಚಿತಾರಶ್ಚ ಮುನಯೋ ವರಸ್ತ್ರಿಪುರಹಾ ಹರಃ ।
ದೀಯತಾಂ ಶೈಲ ಕಾಲೀಯಂ ಜಾಮಾತಾಭಿಮತೋ ಹಿ ನಃ ॥ ೫೪ ॥

ಮೇನಾಥ ಪ್ರಾಹ ಭರ್ತಾರಂ ಶೃಣು ಶೈಲೇಂದ್ರ ಮೇ ವಚಃ ।
ಪಿತೃಭಿಸ್ತನಯಾ ಮಹ್ಯಂ ದತ್ತಾ ತೇನೈವ ಹೇತುನಾ ॥ ೫೫ ॥

ಯಸ್ತಸ್ಯಾಂ ಭೂತಪತಿನಾ ಪುತ್ರೋ ದತ್ತೋ ಭವಿಷ್ಯತಿ ।
ಸ ಹನಿಷ್ಯತಿ ದೈತ್ಯೇಂದ್ರಂ ಮಹಿಷಂ ತಾರಕಂ ತಥಾ ॥ ೫೬ ॥

ಇತ್ಯೇವಂ ಮೇನಯಾ ಪ್ರೋಕ್ತಃ ಶೈಲೇ ಶೈಲೇಶ್ವರಃ ಸುತಾಂ ।
ಪ್ರೋವಾಚ ಪುತ್ರಿ ದತ್ತಾಸಿ ಶರ್ವಾಯ ತ್ವಂ ಮಯಾಧುನಾ ॥ ೫೭ ॥

ಋಷೀನುವಾಚ ಕಾಲೀಯಂ ಮಮ ಪುತ್ರೀ ತಪೋಧನಾಃ ।
ಪ್ರಣಾಮಂ ಶಂಕರವಧೂಃ ಭಕ್ತಿನಮ್ರಾ ಕರೋತಿ ವಃ ॥ ೫೮ ॥

ತತೋಽಪ್ಯರುಂಧತೀ ಕಾಲೀಮಂಕಮಾರೋಪ್ಯ ಚಾಟುಕೈಃ ।
ವಿಲಜ್ಜಮಾನಾಮಾಶ್ವಾಸ್ಯ ಹರನಾಮೋಚಿತೈಃ ಶುಭೈಃ ॥ ೫೯ ॥

ತತಃ ಸಪ್ತರ್ಷಯಃ ಪ್ರೋಚುಃ ಶೈಲರಾಜ ನಿಶಾಮಯ ।
ಜಾಮಿತ್ರಗುಣಸಂಯುಕ್ತಾಂ ತಿಥಿಂ ಪುಣ್ಯಾಂ ಸುಮಂಗಲಾಂ ॥ ೬೦ ॥

ಕುಳಿತಿರುವಾಗಲೇ, ಈ ಮಹಾಮುನಿಗಳು ಯಾಚಕರಾಗಿಯೂ ತ್ರಿಪುರನಾಶಕನಾದ ಹರನೇ ವರನಾಗಿಯೂ ಬಂದಿರುವಾಗ ಕಾಲಿಯನ್ನು ಈ ವರನಿಗೆ ಕೊಡಬಹುದು. ಈ ಅಳಿಯನು ನಮಗೆಲ್ಲರಿಗೂ ಇಷ್ಟನಾಗಿರುವನು. ಎಂದು ಏಕವಾಕ್ಯತೆಯಿಂದ ನುಡಿದರು. ಆಗ ಮೇನಾದೇವಿಯು ಪತಿಯನ್ನು ಸಂಬೋಧಿಸಿ ಎಲೈ ಶೈಲೇಂದ್ರನೇ, ಪಿತೃದೇವತೆಗಳು ನನಗೆ ಈ ಮಗಳನ್ನು ಈ ಉದ್ದೇಶದಿಂದಲೇ ಕೊಟ್ಟಿರುವರು. ಇವಳಲ್ಲಿ ಭೂತನಾಯಕನಾದ ಈಶ್ವರನಿಂದ ಹುಟ್ಟುವ ಮಗನು ದೈತ್ಯಶ್ರೇಷ್ಠನಾದ ಮಹಿಷನನ್ನೂ ತಾರಕನನ್ನೂ ಕೊಲ್ಲುವನು.

೫೭-೬೦. ಹೀಗೆ ಮೇನಾದೇವಿಯಿಂದ ಹೇಳಲ್ಪಟ್ಟ ಹಿಮವಂತನು ಮಗಳನ್ನು ಕುರಿತು ಪುತ್ರೀ, ನೀನು ಈಗ ನನ್ನಿಂದ ಶರ್ವನಿಗೆ ಕೊಡಲ್ಪಟ್ಟಿದ್ದೀಯೆ ಎಂದು ಹೇಳಿ ಋಷಿಗಳನ್ನು ಕುರಿತು ಎಲೈ ತಪೋಧನರೇ, ಶಂಕರನ ಪತ್ನಿಯಾದ ಈ ನನ್ನ ಮಗಳು ಕಾಲಿಯು ಭಕ್ತಿಯಿಂದ ನಿಮ್ಮೆಲ್ಲರನ್ನೂ ನಮಸ್ಕರಿಸುತ್ತಾಳೆ ಎಂದನು. ಆಗ

ಉತ್ತರಾಫಾಲ್ಗುನೀಯೋಗಂ ತೃತೀಯೇಹ್ನಿ ಹಿಮಾಂಶುಮಾನ್ ।
ಗಮಿಷ್ಯತಿ ಚ ತತ್ರೋಕ್ತೋ ಮುಹೂರ್ತೋ ಮೈತ್ರನಾಮಕಃ ॥ ೬೧ ॥

ತಸ್ಯಾಂ ತಿಥೌ ಹರಃ ಪಾಣಿಂ ಗ್ರಹೀಷ್ಯತಿ ಸಮಂತ್ರಕಂ ।
ತವ ಪುತ್ರ್ಯಾ ವಯಂ ಯಾಮಃ ತದನುಜ್ಞಾತುಮರ್ಹಸಿ ॥ ೬೨ ॥

ತತಃ ಸಂಪೂಜ್ಯ ವಿಧಿನಾ ಫಲಮೂಲಾದಿಭಿಃ ಶುಭೈಃ ।
ವಿಸರ್ಜಯಾಮಾಸ ಶನೈಃ ಶೈಲರಾಡ್ ಋಷಿಪುಂಗವಾನ್ ॥ ೬೩ ॥

ತೇಪ್ಯಾಜಗ್ಮುರ್ಮಹಾವೇಗಾದಾಕ್ರಮ್ಯ ಮಹದಾಲಯಂ ।
ಆಸಾದ್ಯ ಮಂದರಗಿರಿಂ ಭೂಯೋಪಶ್ಯಂತ ಶಂಕರಂ ॥ ೬೪ ॥

ಪ್ರಣಮ್ಯೋಚುರ್ಮಹೇಶಾನಂ ಭವಾನ್ ಭರ್ತಾದ್ರಿಜಾವಧೂಃ ।
ಸಬ್ರಹ್ಮಕಾಸ್ತ್ರಯೋಲೋಕಾ ದ್ರಕ್ಷ್ಯಂತಿ ಘನವಾಹನಂ ॥ ೬೫ ॥

ತತೋ ಮಹೇಶ್ವರಃ ಪ್ರೀತಃ ಋಷೀನ್ ಸರ್ವಾನನುಕ್ರಮಾತ್ ।
ಪೂಜಯಾಮಾಸ ವಿಧಿನಾ ಅರುಂಧತ್ಯಾ ಸಮಂ ಹರಃ ॥ ೬೬ ॥

ಅರುಂಧತಿಯು ಕಾಲಿಯನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಮುದ್ದಾಡಿ ಹರನ ಹೆಸರಿಗೆ ತಕ್ಕ ಆಯಾಯ ಪ್ರಿಯೋಕ್ತಿಗಳಿಂದ ನಾಚಿಕೆಗೊಂಡಿದ್ದ ಅವಳನ್ನು ಸಮಾಧಾನ ಪಡಿಸಿದಳು. ಅನಂತರ ಸಪ್ತರ್ಷಿಗಳು, ಹಿಮವಂತನನ್ನು ಕುರಿತು, ಎಲೈ, ಪರ್ವತ ರಾಜನೇ ಕೇಳು, ಶುಭಕರವಾದ ಗುಣಗಳಿಂದ ಕೂಡಿ ಮಂಗಲಮಯವಾಗಿಯೂ ಪುಣ್ಯಕರವಾಗಿಯೂ ಇರುವ ತಿಥಿಯನ್ನು ಹೇಳುತ್ತೇವೆ.

೬೧-೬೩. ಮುಂದಿನ ತೃತೀಯೆ ದಿವಸ ಚಂದ್ರನು ಉತ್ತರಾ ಮತ್ತು ಫಲ್ಗುನೀ ನಕ್ಷತ್ರಗಳ ಯೋಗವನ್ನು ಹೊಂದುತ್ತಾನೆ. ಆ ಮುಹೂರ್ತವು ಮೈತ್ರವೆಂಬ ಹೆಸರಿನಿಂದ ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಆ ತಿಥಿಯಲ್ಲಿ ಶಂಕರನು ಮಂತ್ರಪೂರ್ವಕವಾಗಿ ನಿನ್ನ ಮಗಳ ಪಾಣಿಗ್ರಹಣವನ್ನು ನೆರವೇರಿಸುತ್ತಾನೆ. ಇನ್ನು ನಾವು ಹೊರಡುವೆವು ನಮಗೆ ಅಪ್ಪಣೆ ಕೊಡಬೇಕೆಂದರು. ಆಗ ಹಿಮವಂತನು ಶುದ್ಧವಾದ ಫಲಮೂಲಾದಿ ಗಳಿಂದ ಆ ಋಷಿಗಳನ್ನು ಯಥಾವಿಧಿಯಾಗಿ ಪೂಜಿಸಿ ಮೃದುವಚನಗಳಿಂದ ಸಂತೋಷ ಪಡಿಸಿ ಕಳುಹಿಸಿಕೊಟ್ಟನು.

೬೪-೬೬. ಅನಂತರ ಋಷಿಗಳು ಮಹಾವೇಗದಿಂದ ರಾಜಗೃಹಗಳೆಲ್ಲವನ್ನೂ ದಾಟಿ ಮಂದರಪರ್ವತಕ್ಕೆ ಬಂದು ಪುನಃ ಮಹೇಶ್ವರನನ್ನು ಕಂಡರು. ಅಲ್ಲಿ ಶಂಕರನನ್ನು ನಮಸ್ಕರಿಸಿ ನೀನೇ ಪತಿಯು ಪಾರ್ವತಿಯೇ ಪತ್ನಿಯು ಇನ್ನು ಬ್ರಹ್ಮಾದಿಗಳೂ

ತತಃ ಸಂಪೂಜಿತಾ ಜಗ್ಮುಃ ಸುರಾಣಾಂ ಮಂತ್ರಣಾಯ ತೆ ।
ತೇಥಾಜಗ್ಮುಃ ಹರಂ ದ್ರಷ್ಟುಂ ಬ್ರಹ್ಮವಿಷ್ಣ್ವಿಂದ್ರಭಾಸ್ಕರಾಃ ॥೬೭॥

ತತಃ ಸಮಭ್ಯೇತ್ಯ ಮಹೇಶ್ವರಸ್ಯ
ಕೃತಪ್ರಣಾಮಾ ವಿವಿಶುರ್ಮಹರ್ಷೆ ।
ಸಸ್ಮಾರ ನಂದಿಪ್ರಮುಖಾಂಶ್ಚ
ಸರ್ವಾನಭ್ಯೇತ್ಯ ತೇ ವಂದ್ಯಹರಂ ನಿಷಣ್ಣಾಃ ॥೬೭॥

ದೇವೈರ್ಗಣೈಶ್ಚಾಪಿ ವೃತೋಗಣೇಶಃ
ಸಂಶೋಭತೆ ಮುಕ್ತಜಟಾಗ್ರಭಾರಃ ।
ಯಥಾವನೆ ಸರ್ಜಕದಂಬಮಧ್ಯೇ
ಪ್ರರೋಹಮೂಲೋ ಥವನಸ್ಪತಿರ್ವಾ ॥೬೮॥

ಇತಿ ಶ್ರಿ ವಾಮನಪುರಾಣೇ ಉಮಾಸಂಭವೇ ಗೌರೀವಿವಾಹೇ
ದ್ವಿಪಂಚಾಶತ್ತಮೋಽಧ್ಯಾಯಃ

ಮೂರು ಲೋಕವೂ ಸಹ ವಿಹಾರದಿಂದ ಮೇಘವಾಹನನಾದ ನಿನ್ನನ್ನು ನೋಡುವುವು ಎಂದರು. ಆಮೇಲೆ ಮಹೇಶ್ವರನು ಪ್ರೀತನಾಗಿ ಋಷಿಗಳೆಲ್ಲರನ್ನೂ ಅರುಂಧತಿಯನ್ನೂ ಸಹ ಯಥಾವಿಧಿಯಾಗಿ ಸತ್ಕರಿಸಿದನು.

೬೭-೬೮. ಹೀಗೆ ಈಶ್ವರನಿಂದ ಸತ್ಕರಿಸಲ್ಪಟ್ಟ ಆ ಋಷಿಗಳು ದೇವತೆಗಳನ್ನು ಆಹ್ವಾನಿಸಲು ಹೊರಟರು. ಅನಂತರ ಆಹೂತರಾದ ಬ್ರಹ್ಮ ವಿಷ್ಣು ಇಂದ್ರ ಸೂರ್ಯ ಇವರೆಲ್ಲರೂ ಹರನನ್ನು ನೋಡಲು ಬಂದರು. ಅವರೆಲ್ಲರೂ ಮಹೇಶ್ವರನಲ್ಲಿ ಬಂದು ಪ್ರಣಾಮಮಾಡಿ ಕುಳಿತರು. ಆಗ ಹರನು ನಂದಿಯೇ ಮೊದಲಾದ ಗಣಗಳನ್ನು ಸ್ಮರಿಸಲಾಗಿ ಅವರೂ ಬಂದು ಹರನನ್ನು ನಮಸ್ಕರಿಸಿ ಕುಳಿತರು. ಆಗ ದೇವತೆಗಳಿಂದಲೂ ತನ್ನ ಗಣಗಳಿಂದಲೂ ಸುತ್ತುವರಿಯಲ್ಪಟ್ಟು ಜಟಾಭಾರವನ್ನು ವಹಿಸಿರುವ ಆ ಹರನು ವನದಲ್ಲಿ ಸರ್ಜಕದಂಬಾದಿ ವೃಕ್ಷಗಳಿಂದ ಕೂಡಿರುವ ಬಿಳಲುಬಿಟ್ಟ ಆಲದ ಮರದಂತೆ ಶೋಭಿಸಿದನು.

ಇಲ್ಲಿಗೆ ಶ್ರೀ ವಾಮನಪುರಾಣದ ಉಮಾಸಂಭವದಲ್ಲಿ ಗೌರೀವಿವಾಹವೆಂಬ
ಐವತ್ತೆರಡನೇ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಹಿಮವಂತನಿಂದ ಪೂಜಿತನಾದ ಹರನು ತನ್ನ ವಾಗ್ದಾನದ ಪ್ರಕಾರ ಪಾರ್ವತಿಯನ್ನು ವರಿಸಲು ಮಹರ್ಷಿಗಳನ್ನು ಸ್ಮರಿಸಿ ಅವರ ಸಾನ್ನಿಧ್ಯವನ್ನು ಹೊಂದಿ ಅರುಂಧತಿಯೊಡನೆ ಆ ಸಪ್ತರ್ಷಿಗಳನ್ನು ಪಾರ್ವತಿಯನ್ನು ಕೊಡಲು ಹಿಮವಂತನಲ್ಲಿ ನೀವು ಹೋಗಿ ಯಾಚಿಸಬೇಕೆಂದು ಪ್ರಾರ್ಥಿಸಲಾಗಿ ಅವರು ಮಂದರ ಪರ್ವತದಿಂದ ಹಿಮವತ್ಪರ್ವತಕ್ಕೆ ಹೋದರೆಂದೂ, ಅಲ್ಲಿ ಹಿಮವಂತನಿಂದ ಸತ್ಕೃತ ರಾಗಿ ಅವನನ್ನು ಪ್ರಾರ್ಥಿಸಿ ಬಂಧುಜನಗಳ ಮತ್ತು ಮೇನಾದೇವಿಯ ಅನುಮತಿ ಯೊಡನೆ ಅವನಿಂದ ವಾಗ್ದಾನವನ್ನು ಹೊಂದಿ ಆ ಋಷಿಗಳೆಲ್ಲರೂ ಪುನಃ ಮಂದರ ಪರ್ವತಕ್ಕೆ ಬಂದು ಹರನಲ್ಲಿ ವಿವಾಹದ ನಿರ್ಣಯವನ್ನು ಹೇಳಿ ಸತ್ಕೃತರಾಗಿ ದೇವಾದಿ ದೇವತೆಗಳನ್ನೂ ಆಹ್ವಾನಮಾಡಿ ಬಂದರೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀ ವಾ ಮ ನ ಪು ರಾ ಣಂ

ತ್ರಿಪಂಚಾಶತ್ತಮೋಽಧ್ಯಾಯಃ

ಪುಲಸ್ತ್ಯ ಉವಾಚ

ಸಮಾಗತಾನ್ ಸುರಾನ್ ದೃಷ್ಟ್ವಾ ನಂದಿರಾಖ್ಯಾತವಾನ್ ವಿಭೋಃ ।
ಅಥೋತ್ಥಾಯ ಹರಿಂ ಭಕ್ತ್ಯಾ ಪರಿಷ್ವಜ್ಯ ನ್ಯಪೀಡಯತ್ ॥ ೧ ॥

ಬ್ರಹ್ಮಾಣಂ ಶಿರಸಾ ನತ್ವಾ ಸಮಾಭಾಷ್ಯ ಶತಕ್ರತುಂ ।
ಆಲೋಕ್ಯಾನ್ಯಾನ್ ಸುರಗಣಾನ್ ಸಂಭಾವಯತ್ಸ ಶಂಕರಃ ॥ ೨ ॥

ಗಣಾಶ್ಚ ಜಯದೇವೇತಿ ವೀರಭದ್ರಪುರೋಗಮಾಃ ।
ಶೈವಾಃ ಪಾಶುಪತಾದ್ಯಾಶ್ಚ ವಿವಿಶುರ್ಮಂದರಾಚಲಂ ॥ ೩ ॥

ಐವತ್ತಮೂರನೆಯ ಅಧ್ಯಾಯವು

೧-೩. ಪುಲಸ್ತ್ಯರು ಮುಂದಿನ ವೃತ್ತಾಂತವನ್ನು ಹೇಳುತ್ತಾರೆ:—ಬ್ರಹ್ಮಾದಿ ದೇವತೆಗಳೆಲ್ಲರೂ ಬಂದುದನ್ನು ನೋಡಿ ನಂದಿಯು ಪ್ರಭುವಾದ ಶಂಕರನಿಗೆ ಅರಿಕೆ ಮಾಡಿದನು. ಆಗ ಶಂಕರನು ಪ್ರತ್ಯುತ್ಥಾನಮಾಡಿ ಭಕ್ತಿಯಿಂದ ಹರಿಯನ್ನು ಸತ್ಕರಿಸಿ ಆಲಿಂಗನಾದಿಗಳಿಂದ ಸಂತೋಷಪಡಿಸಿದನು. ಬ್ರಹ್ಮನನ್ನು ತಲೆಬಗ್ಗಿ ನಮಸ್ಕಾರಮಾಡಿಯೂ ಇಂದ್ರನನ್ನು ಮಾತನಾಡಿಸಿಯೂ ಉಳಿದ ದೇವತೆಗಳನ್ನು ಪ್ರೀತಿಯಿಂದ ಕಟಾಕ್ಷಿಸಿಯೂ ಅವರವರ ದರ್ಜೆಗೆ ತಕ್ಕಂತೆ ಸತ್ಕರಿಸಿದನು. ವೀರಭದ್ರನೇ ಮೊದಲಾದ ಗಣಗಳೂ ಶೈವರೂ ಪಾಶುಪತರೂ ಸಹ ಜಯಕಾರಮಾಡುತ್ತಾ ಮಂದರ ಪರ್ವತಕ್ಕೆ ಬಂದು ಸೇರಿದರು.

ತತಸ್ತಸ್ಮಾನ್ಮಹಾಶೈಲಂ ಕೈಲಾಸಂ ಸಹ ದೈವತೈಃ ।
ಜಗಾಮ ಭಗವಾನ್ ಶರ್ವಃ ಕರ್ತುಂ ವೈವಾಹಿಕಂ ವಿಧಿಂ ॥ ೪ ॥

ತತಸ್ತಸ್ಮಿನ್ಮಹಾಶೈಲೇ ದೇವಮಾತಾದಿತಿಃ ಶುಭಾ ।
ಸುರಭಿಃ ಸುರಮಾಚಾನ್ಯಾಃ ಚಕ್ರುರ್ಮಂಡನಮಾಕುಲಾಃ ॥ ೫ ॥

ಮಹಾಸ್ಥಿಶೇಖರೀ ಚಾರುರೋಚನಾತಿಲಕೋ ಹರಃ ।
ಸಿಹ್ಮಾಜಿನೀ ಚಾತಿನೀಲಭುಜಂಗಕೃತಕುಂಡಲಃ ॥ ೬ ॥

ಮಹಾಹಿರತ್ನವಲಯಹಾರಕೇಯೂರನೂಪುರಃ ।
ಸಮುನ್ನತಜಟಾಭಾರೋ ವೃಷಭಸ್ಥೋ ವಿರಾಜತೆ ॥ ೭ ॥

ತಸ್ಯಾಗ್ರತೋ ಗಣಾಃ ಸ್ವೈಃ ಸ್ವೈರಾರೂಢಾ ಯಾಂತಿ ವಾಹನೈಃ ।
ದೇವಾಶ್ಚ ಪೃಷ್ಠತೋ ಜಗ್ಮುಃ ಹುತಾಶನಪುರೋಗಮಾಃ ॥ ೮ ॥

ವೈನತೇಯಂ ಸಮಾರೂಢಃ ಸಹಲಕ್ಷ್ಮ್ಯಾ ಜನಾರ್ದನಃ ।
ಪ್ರಯಾತಿ ದೇವಪಾರ್ಶ್ವಸ್ಥೋ ಹಂಸೇನ ಚ ಪಿತಾಮಹಃ ॥ ೯ ॥

೪-೭. ಅನಂತರ ಆ ದೇವತೆಗಳೊಡನೆ ಶಂಕರನು ವಿವಾಹವಿಧಿಯನ್ನು ನೆರವೇರಿಸಲು ಆ ಮಂದರಗಿರಿಯಿಂದ ಕೈಲಾಸಪರ್ವತಕ್ಕೆ ಹೊರಟನು. ಆ ಮಂದರ ಗಿರಿಯಲ್ಲಿ ದೇವತೆಗಳ ತಾಯಿಯಾದ ದಿತಿಯೂ ಸುರಭಿ ಸರಮಾ ಎಂಬ ಇತರ ದೇವಸ್ತ್ರೀಗಳೂ ಸಹ ವಿವಾಹಕ್ಕೆ ತಕ್ಕ ಅಲಂಕಾರಗಳನ್ನೆಲ್ಲಾ ಮಾಡಿದರು. ಆಗ ವಿವಾಹಕ್ಕೆ ಹೋಗುವ ಕಾಲದಲ್ಲಿ ಹರನು ಮಹಾಸ್ಥಿಯ ಶಿರೋಭೂಷಣದಿಂದಲೂ, ಮನೋಹರವಾದ ಗೋರೋಚನಾ ತಿಲಕದಿಂದಲೂ, ಸಿಂಹದ ಚರ್ಮದಿಂದಲೂ ಕೂಡಿ ಕೃಷ್ಣಸರ್ಪಗಳ ಕುಂಡಲವುಳ್ಳವನಾಗಿಯೂ, ಮಹಾಸರ್ಪಗಳಿಂದ ಮಾಡಲ್ಪಟ್ಟ ರತ್ನದ ಕಡಗ, ಹಾರ, ತೋಳುಬಳೆ ಇವುಗಳುಳ್ಳವನಾಗಿ ಉನ್ನತ ಜಟೆಯಿಂದ ಕೂಡಿ ವೃಷಭಾರೂಢನಾಗಿ ಪ್ರಕಾಶಿಸಿದನು.

೮-೧೧. ಆ ಹರನ ಮುಂಭಾಗದಲ್ಲಿ ಗಣಗಳೆಲ್ಲವೂ ತಮ್ಮ ತಮ್ಮ ವಾಹನಾರೂಢವಾಗಿ ಹೊರಟವು. ಅಗ್ನಿಯೇ ಮೊದಲಾದ ದೇವತೆಗಳು ಹಿಂದುಗಡೆಯಲ್ಲಿ ಹೊರಟರು. ಹರಿಯು ಲಕ್ಷ್ಮಿಯೊಡನೆ ಗರುಡಾರೂಢನಾಗಿ ಹರನ ಪಾರ್ಶ್ವದಲ್ಲಿ ಹೊರಟನು. ಬ್ರಹ್ಮನು ಹಂಸಾರೂಢನಾಗಿ ಮತ್ತೊಂದು ಪಾರ್ಶ್ವದಲ್ಲಿ ಹೊರಟನು.

ಗಜಾಧಿರೂಢೋ ದೇವೇಂದ್ರಶ್ಛತ್ರಂ ಶುಕ್ಲಪಟಂ ವಿಭೋಃ ।
ಧಾರಯಾಮಾಸ ವಿತತಂ ಸಹೇಂದ್ರಾಣ್ಯಾ ಸಹಸ್ರದೃಕ್ ॥ ೧೦ ॥

ಯಮುನಾ ಸರಿತಾಂ ಶ್ರೇಷ್ಠಾ ವಾಲವ್ಯಜನಮುತ್ತಮಂ ।
ಶ್ವೇತಂ ಪ್ರಗೃಹ್ಯ ಹಸ್ತೇನ ಕಚ್ಛಪೇ ಸಂಸ್ಥಿತಾ ಯಯೌ ॥ ೧೧ ॥

ಹಂಸಕುಂದೇಂದುಸಂಕಾಶಂ ವಾಲವ್ಯಜನಮುತ್ತಮಂ ।
ಸರಸ್ವತೀ ಸರಿಚ್ಛ್ರೇಷ್ಠಾ ಗಜಾರೂಢಾ ಸಮಾದಧೆ ॥ ೧೨ ॥

ಋತವಃ ಷಟ್ ಸಮಾದಾಯ ಕುಸುಮಂ ಗಂಧಸಂಯುತಂ ।
ಪಂಚವರ್ಣಂ ಮಹೇಶಾರ್ಥೆ ಜಗ್ಮುಸ್ತೇ ಕಾಮಚಾರಿಣಃ ॥ ೧೩ ॥

ಮತ್ತಮೈರಾವತನಿಭಂ ಗಜಮಾರುಹ್ಯ ವೇಗವಾನ್ ।
ಅನುಲೇಪನಮಾದಾಯ ಯಯೌ ತತ್ರ ಪೃಥೂದಕಃ ॥ ೧೪ ॥

ಗಂಧರ್ವಾಸ್ತುಂಬುರುಮುಖಾ ಗಾಯಂತೋ ಮಧುರಸ್ವರಂ ।
ಅನುಜಗ್ಮುರ್ಮಹಾದೇವಂ ವಾದಯಂತಶ್ಚ ಕಿನ್ನರಾಃ ॥ ೧೫ ॥

ಶಚೀದೇವಿಯೊಡನೆ ಗಜಾರೂಢನಾದ ಇಂದ್ರನು ವಿಸ್ತಾರವಾದ ಶ್ವೇತಚ್ಛತ್ರವನ್ನು ಹರನಿಗೆ ಹಿಡಿಯುತ್ತಾ ಹೊರಟನು. ಸರಿಚ್ಛ್ರೇಷ್ಠಳಾದ ಯಮುನೆಯು ಆಮೆಯ ಮೇಲೆ ಕುಳಿತು ಶುಭ್ರವಾದ ಚಾಮರವನ್ನು ಕಯ್ಯಿನಿಂದ ಹಿಡಿದು ಹೊರಟಳು.

೧೨-೧೪. ಹಂಸ ಕುಂದಾದಿಗಳಂತೆ ಶುಭ್ರವಾಗಿರುವ ಚಾಮರವನ್ನು ಹಿಡಿದು ಸರಿದ್ವರೆಯಾದ ಸರಸ್ವತಿಯು ಗಜಾರೂಢಳಾಗಿ ಹೊರಟಳು. ಷಡೃತುಗಳು ಒಂದಾಗಿ ಸುಗಂಧಿಯಾಗಿಯೂ ಪಂಚವರ್ಣವಾಗಿಯೂ ಇರುವ ಹೂವುಗಳನ್ನು ಈಶ್ವರನಿಗಾಗಿ ಸಂಗ್ರಹಿಸಿ ಮನಸ್ಸು ಬಂದಂತೆ ಹೊರಟವು. ಪೃಥೂದಕವು ಐರಾವತದಂತಿರುವ ಮತ್ತಗಜವನ್ನೇರಿ ವೇಗದಿಂದ ಚಂದನವನ್ನು ತೆಗೆದುಕೊಂಡು ಹೊರಟಿತು.

೧೫-೧೭. ಗಂಧರ್ವರೂ ತುಂಬುರುವೇ ಮೊದಲಾಗಿ ಎಲ್ಲರೂ ಮಧುರ ನಾದದಿಂದ ಗಾನಮಾಡುತ್ತಾ ಹರನನ್ನು ಅನುಸರಿಸಿದರು. ಕಿನ್ನರರೂ ವಾದ್ಯಗಳನ್ನು ವಾದಿಸುತ್ತಾ ಅನುಸರಿಸಿದರು. ಅಪ್ಸರೆಯರು ನೃತ್ಯಮಾಡುತ್ತಲೂ, ಮುನಿಗಳೂ

ನೃತ್ಯಂತ್ಯಪ್ಸರಸಶ್ಚೈವ ಸ್ತುವಂತೋ ಮುನಯಶ್ಚತಂ।
ಗಂಧರ್ವಾ ಯಾಂತಿ ದೇವೇಶಂ ತ್ರಿನೇತ್ರಂ ಶೂಲಪಾಣಿನಂ ॥ ೧೬ ॥

ಏಕಾದಶ ತಥಾ ಕೋಟ್ಯೋ ರುದ್ರಾಣಾಂ ತತ್ರ ವೈ ಯಯುಃ।
ದ್ವಾದಶೈವಾದಿತೇಯಾನಾಂ ಅಷ್ಟೌ ಕೋಟ್ಯೋ ವಸೂನಪಿ ॥ ೧೭ ॥

ಸಪ್ತಷಷ್ಟಿಸ್ತಥಾ ಕೋಟ್ಯೋ ಗಣಾನಾಮೃಷಿಸತ್ತಮಾಃ।
ಚತುರ್ವಿಂಶತ್ತದಾ ಜಗ್ಮುಃ ಗಣಾನಾಮೂರ್ಧ್ವರೇತಸಾಂ ॥ ೧೮ ॥

ಅಸಂಖ್ಯಾತಾನಿ ಯೂಥಾನಿ ಯಕ್ಷಕಿನ್ನರರಕ್ಷಸಾಂ।
ಅನುಜಗ್ಮುರ್ಮಹೇಶಾನಂ ವಿವಾಹಾಯ ಸಮಾಕುಲಾಃ ॥ ೧೯ ॥

ತತಃ ಕ್ಷಣೇನ ದೇವೇಶಃ ಕ್ಷ್ಮಾಧರಾಧಿಪತೇಃ ಸ್ಥಲಂ।
ಸಂಪ್ರಾಪ್ತಶ್ಚಾಗಮನ್ ಶೈಲಾ ಕುಂಜರಸ್ಥಾಃ ಸಮಂತತಃ ॥ ೨೦ ॥

ತತೋ ನನಾಮ ಭಗವಾಂ ಸ್ತ್ರಿನೇತ್ರಃ ಸ್ಥಾವರಾಧಿಪಂ।
ಶೈಲಾಃ ಪ್ರಣೇಮುರೀಶಾನಂ ತತೋಽಸೌ ಮುದಿತೋಽಭವತ್ ॥ ೨೧ ॥

ಗಂಧರ್ವರೂ ತ್ರಿನೇತ್ರನಾದ ಹರನನ್ನು ಸ್ತೋತ್ರಮಾಡುತ್ತಲೂ ಹೊರಟರು. ಹಾಗೆಯೇ ಏಕಾದಶಕೋಟಿ ಸಂಖ್ಯಾತರಾದ ರುದ್ರಗಣಗಳೂ ಹನ್ನೆರಡುಕೋಟಿ ದೇವಗಣಗಳೂ ಎಂಟುಕೋಟಿ ವಸುಗಳೂ ಅರವತ್ತೇಳು ಕೋಟಿ ಸಂಖ್ಯಾತರಾದ ಗಣಗಳೂ ಹೊರಟರು. (ಇಲ್ಲಿ ಕೋಟಿ ಶಬ್ದಕ್ಕೆ ಒಂದು ಪಕ್ಷ ಅಥವಾ ಸಮೂಹ ಎಂದು ಅರ್ಥಮಾಡಿ ದ್ವಾದಶಾದಿತ್ಯರ ಮತ್ತು ಏಕಾದಶರುದ್ರರ, ಮತ್ತು ಅಷ್ಟುವಸುಗಳ ಮತ್ತು ಅರವತ್ತೇಳು ಗಣಗಳ ಗುಂಪು ಎಂದು ಅರ್ಥಮಾಡುವದುಚಿತವೆಂದು ತೋರುತ್ತದೆ).

೧೮-೨೧. ಆ ಗಣದಲ್ಲಿ ಬ್ರಹ್ಮಜ್ಞರಾಗಿಯೂ ತೇಜಸ್ವಿಗಳಾಗಿಯೂ ಇದ್ದು ಹೊರಟವರು ಇಪ್ಪತ್ತನಾಲ್ಕು ಮಂದಿ, ಯಕ್ಷರು, ಕಿನ್ನರರು, ರಾಕ್ಷಸರು ಇವರುಗಳಿಂದೊಡಗೂಡಿದ ಗುಂಪುಗಳು ಅಸಂಖ್ಯಾತವಾಗಿ ಆ ವಿವಾಹ ಮಹೋತ್ಸವಕ್ಕೆ ಹೊರಟವು. ಅನಂತರ ಕ್ಷಣಮಾತ್ರದಲ್ಲಿಯೇ ಶಂಕರನು ಹಿಮವಂತನ ಸ್ಥಾನವನ್ನು ಹೊಂದಿದನು. ಹಿಮವಂತನ ಕಡೆಯ ಪರ್ವತಗಳೂ ಆನೆಯ ಮೇಲೆ ಕುಳಿತು ಹರನನ್ನು ಎದುರುಗೊಳ್ಳಲು ನಾನಾ ಕಡೆಯಿಂದಲೂ ಬಂದರು. ಆಗ ಶಂಕರನು ಪರ್ವತರಾಜನಾದ ಹಿಮವಂತನಿಗೆ ನಮಸ್ಕರಿಸಿದನು. ಪರ್ವತಗಳೂ ಸಹ ಶಂಕರನನ್ನು ನಮಸ್ಕರಿಸಿದವು. ಇದರಿಂದ ಹರನೂ ಸಂತುಷ್ಟನಾಗಿದ್ದನು.

ಸಮಂ ಸುರೈಃ ಪಾರ್ಷದೈಶ್ಚ ವಿವೇಶ ವೃಷಕೇತನಃ ।
ನಂದಿನಾ ದರ್ಶಿತೇ ಮಾರ್ಗೇ ಶೈಲರಾಜಪುರಂ ಮಹತ್ ॥ ೨೨ ॥

ಜೀಮೂತಕೇತುರಾಯಾತ ಇತ್ಯೇವಂ ನಗರಸ್ತ್ರಿಯಃ ।
ನಿಜಕರ್ಮ ಪರಿತ್ಯಜ್ಯ ದರ್ಶನಾಯೋದ್ಯತಾಭವನ್ ॥ ೨೩ ॥

ಮಾಲ್ಯದಾಮ ಸಮಾದಾಯ ಕರೇಣೈಕೇನ ಭಾಮಿನೀ ।
ಕೇಶಪಾಶಂ ದ್ವಿತೀಯೇನ ಶಂಕರಾಭಿಮುಖೀ ಗತಾ ॥ ೨೪ ॥

ಅನ್ಯಾಲಕ್ತಕರಾಗಾಢ್ಯಂ ಪಾದಂ ಕೃತ್ವಾಕುಲೇಕ್ಷಣಾ ।
ಅನಲಕ್ತಕಮೇಕಂ ಹಿ ಹರಂ ದ್ರಷ್ಟುಮುಪಾಗತಾ ॥ ೨೫ ॥

ಏಕೇನಾಕ್ಷ್ಣಾಂಜಿತೇನೈವ ಶ್ರುತ್ವಾ ಭೀಮಮುಪಾಗತಂ ।
ಸಾಂಜನಾಂಚ ಪ್ರಗೃಹ್ಯಾನ್ಯಾ ಶಲಾಕಾಂ ಸುಷ್ಠು ಧಾವತಿ ॥ ೨೬ ॥

ಅನ್ಯಾ ಸರಶನಂ ವಾಸಃ ಪಾಣಿನಾದಾಯ ಸುಂದರೀ ।
ಉನ್ಮತ್ತೇವಾಗಮನ್ನಗ್ನಾ ಹರದರ್ಶನಲಾಲಸಾ ॥ ೨೭ ॥

೨೨-೨೫. ಅನಂತರ ಹರನು ಸುರರೊಡನೆಯೂ ಇತರ ಸಭ್ಯರೊಡನೆಯೂ ನಂದಿಯಿಂದ ತೋರಿಸಲ್ಪಟ್ಟ ಮಾರ್ಗದಿಂದ ಹಿಮವಂತನ ನಗರವನ್ನು ಪ್ರವೇಶಿಸಿದನು. ಆಗ ನಗರದ ಸ್ತ್ರೀಜನರೆಲ್ಲರೂ ಜೀಮೂತಕೇತುವು ಬಂದನೆಂದು ಹೇಳುತ್ತಾ ತಮ್ಮ ತಮ್ಮ ಕೆಲಸಗಳೆಲ್ಲವನ್ನೂ ಬಿಟ್ಟು ಶಂಕರನನ್ನು ನೋಡಲು ಆದರಗೊಂಡರು. ಆಗ ಒಬ್ಬ ವನಿತೆಯು ಒಂದು ಕೈಯ್ಯಿನಿಂದ ಹೂವಿನ ಮಾಲಿಕೆಯನ್ನೂ ಮತ್ತೊಂದು ಕೈಯ್ಯಿನಿಂದ ಕೇಶಪಾಶವನ್ನೂ ಹಿಡಿದುಕೊಂಡು ಹರನಿಗೆ ಅಭಿಮುಖಳಾಗಿ ತ್ವರೆಯಿಂದ ಓಡಿಬಂದಳು. ಮತ್ತೊಬ್ಬ ಲಲನೆಯು ಒಂದು ಪಾದಕ್ಕೆ ಅಲಕ್ತಕರಸವನ್ನು ಹಾಕಿಕೊಂಡು, ಮತ್ತೊಂದು ಪಾದವನ್ನು ಹಾಗೆಯೇ ಇಟ್ಟುಕೊಂಡು ತ್ವರೆಯಿಂದ ಕಾತರನೇತ್ರಳಾಗಿ ಹರನನ್ನು ನೋಡಲು ಓಡಿಬಂದಳು.

೨೬-೨೯. ಮತ್ತೊಬ್ಬ ಯುವತಿಯು ಒಂದು ಕಣ್ಣಿಗೆ ಕಪ್ಪನ್ನು ಹಚ್ಚಿಕೊಂಡು ಮತ್ತೊಂದು ಕಣ್ಣಿಗೆ ಹಚ್ಚಿಕೊಳ್ಳುವದರೊಳಗೆ ಹರನು ಬಂದನೆಂದು ಕೇಳಿ ಕಣ್ಣು ಕಪ್ಪಿನೊಡನೆ ಕೂಡಿರುವ ಶಲಾಕೆಯನ್ನು ಕೈಯಲ್ಲಿಯೇ ಹಿಡಿದುಕೊಂಡು ವೇಗದಿಂದ ಓಡಿಬಂದಳು. ಮತ್ತೊಬ್ಬ ಸುಂದರಿಯು ವಡ್ಯಾಣದಿಂದ ಕೂಡಿದ ನಡುವಿನ

ಅನ್ಯಾತಿಕ್ರಾಂತಮೀಶಾನಂ ಶ್ರುತ್ವಾ ಸ್ತನಭರಾಲಸಾ ।
ಅನಿಂದತ ಕುಚೌ ಬಾಲಾ ಯೌವನಂ ಸ್ವಂ ಕೃಶೋದರೀ ॥ ೨೮ ॥

ಇತ್ಥಂ ಸ ನಾಗರಸ್ತ್ರೀಣಾಂ ಕ್ಷೋಭಂ ಸಂಜನಯನ್ ಹರಃ ।
ಜಗಾಮ ವೃಷಭಾರೂಢೋ ದಿವ್ಯಂ ಶ್ವಶುರಮಂದಿರಂ ॥ ೨೯ ॥

ತತಃ ಪ್ರವಿಷ್ಟಂ ಪ್ರಸಮೀಕ್ಷ್ಯ ಶಂಭುಂ
ಶೈಲೇಂದ್ರವೇಶ್ಮನ್ಯಬಲಾ ಬ್ರುವಂತಿ ।
ಸ್ಥಾನೇ ತಪೋದುಶ್ಚರಮಂಬಿಕಾಯಾಶ್ಚೀರ್ಣಂ
ಮಹಾನೇಷಸುರಸ್ತು ಶಂಭುಃ ॥ ೩೦ ॥

ಸ ಏಷ ಯೇನಾಂಗಮನಂಗತಾಂ ಕೃತಂ
ಕಂದರ್ಪನಾಮ್ನಃ ಕುಸುಮಾಯುಧಸ್ಯ ।
ಕ್ರತೋಃ ಕ್ಷಯೀ ದಕ್ಷವಿನಾಶಕರ್ತಾ
ಭಗಾಕ್ಷಿಹಾ ಶೂಲಧರಃ ಪಿನಾಕೀ ॥ ೩೧ ॥

ಸೀರೆಯನ್ನು ಕೈಯಲ್ಲಿ ಹಾಗೆಯೇ ಹಿಡಿದು ಹುಚ್ಚುಹಿಡಿದವಳಂತೆ ಹರನನ್ನು ನೋಡುವ ಕುತೂಹಲದಿಂದ ಚಿತ್ತಲೆಯೇ ಓಡಿಬಂದಳು. ಮತ್ತೊಬ್ಬ ವನಿತೆಯು ಕೃಶೋದರಿಯಾಗಿದ್ದರೂ ಸ್ತನಭಾರದಿಂದ ಮಂದಗಾಮಿನಿಯಾಗಿ ಹರನು ಹೊರಟುಹೋದನೆಂದು ಕೇಳಿ ತನ್ನ ಕುಚಗಳನ್ನೂ ಅದರ ಉಜ್ಜೃಂಭಣಕ್ಕೆ ಕಾರಣವಾದ ಯೌವನವನ್ನೂ ನಿಂದಿಸಿದಳು. ಈ ರೀತಿಯಾಗಿ ಆ ಹರನು ನಗರಸ್ತ್ರೀಯರಿಗೆ ಬುದ್ಧಿಕ್ಷೋಭವನ್ನುಂಟು ಮಾಡುತ್ತಾ ವೃಷಭಾರೂಢನಾಗಿ ತನ್ನ ಮಾವನ ಭವ್ಯಮಂದಿರಕ್ಕೆ ಹೋಗಿ ಸೇರಿದನು.

೩೦-೩೧. ಅನಂತರ ಅಲ್ಲಿಗೆ ಪ್ರವೇಶಿಸಿದ ಶಂಭುವನ್ನು ನೋಡಿ ಹಿಮವಂತನ ಮನೆಯಲ್ಲಿದ್ದ ಸ್ತ್ರೀಜನರು ಹೀಗೆ ಹೇಳಿಕೊಳ್ಳುತ್ತಿದ್ದರು. ನಮ್ಮ ಪಾರ್ವತಿಯು ಇವನಿಗಾಗಿ ದುಶ್ಚರವಾದ ತಪಸ್ಸನ್ನು ಮಾಡಿದುದು ನ್ಯಾಯವೇ ಸರಿ. ಈ ಶಂಭುವು ಉತ್ಕೃಷ್ಟನಾದ ದೇವನೇ ಸರಿ. ಯಾವ ಮಹಾಪುರುಷನು ಕಂದರ್ಪನೆಂಬ ಕುಸುಮಾಯುಧನನ್ನು ಅನಂಗನನ್ನಾಗಿ ಮಾಡಿದನೆಂದೂ ಕ್ರತುನಾಶಕನೆಂದೂ, ದಕ್ಷನಾಶಕನೆಂದೂ, ಭಗನೆಂಬ ದೇವತೆಯ ಕಣ್ಣನ್ನು ನಾಶಪಡಿಸಿದವನೆಂದೂ ಶೂಲಧರ

ನಮೋನಮಶ್ಶಂಕರ ಶೂಲಪಾಣೇ
ಮೃಗಾರಿಚರ್ಮಾಂಬರ ಕಾಲಶತ್ರೋ ।
ಮಹಾಹಿಹಾರಾಙ್ಕಿತಕುಂಡಲಾಯ
ನಮೋನಮಃ ಪಾರ್ವತಿವಲ್ಲಭಾಯ ॥ ೩೨ ॥

ಇತ್ಥಂ ಸಂಸ್ತೂಯಮಾನಃ
ಸುರಪತಿವಿಧೃತೇನಾತಪತ್ರೇಣ ಶಂಭುಃ ।
ಸಿದ್ಧೈರ್ವಂದ್ಯಸ್ಸಪಕ್ಷೈರಹಿಕೃತವಲಯೀ
ಚಾರುಭಸ್ಮೋಪಲಿಪ್ತಃ ॥
ಅಗ್ರಸ್ಥೇನಾಗ್ರಜೇನ ಪ್ರಮುದಿತಮನಸಾ
ವಿಷ್ಣುನಾ ಚಾನುಗೇನ ।
ವೈವಾಹೀಂ ಮಙ್ಗಲಾಢ್ಯಾಂ
ಹುತವಹಸಹಿತಾಮಾರುರೋಹಾಥವೇದೀಂ ॥ ೩೩ ॥

ಆಯಾತಿ ತ್ರಿಪುರಾಂತಕೆ ಸಹಚರೈಃ
ಸಾರ್ಧಂ ಚ ಸಪ್ತರ್ಷಿಭಿಃ ॥

ನಾಗಿರುವನೆಂದೂ ನಾವು ಕೇಳಿದ್ದೇವೋ ಆ ಪಿನಾಕಿಯೇ ಇವನು, ಎಲೈ ಶಂಕರನೇ ಶೂಲಪಾಣಿಯೇ, ವ್ಯಾಘ್ರಚರ್ಮಧಾರಿಯೇ, ಕಾಲನಿಗೂ ಶತ್ರುವಾದವನೇ, ಸರ್ಪಗಳ ಹಾರಕುಂಡಲಗಳುಳ್ಳವನೇ, ನಮ್ಮ ಪಾರ್ವತಿಯ ವಲ್ಲಭನೇ, ನಿನಗೆ ಅನಂತ ನಮಸ್ಕಾರಗಳು.

೩೩-೩೪. ಈ ಪ್ರಕಾರ ಆ ಸ್ತ್ರೀಯರಿಂದ ಸ್ತೋತ್ರಮಾಡಲ್ಪಡುತ್ತಾ ಇಂದ್ರನಿಂದ ಹಿಡಿಯಲ್ಪಟ್ಟ ಶ್ವೇತಛತ್ರವುಳ್ಳವನಾಗಿ ಸಿದ್ಧರಿಂದ ವಂದಿಸಲ್ಪಡುತ್ತಾ ಸರ್ಪವಲಯ ದಿಂದಲೂ ಭಸ್ಮಲೇಪದಿಂದಲೂ ಶೋಭಿಸುತ್ತಿರುವ ಆ ಹರನು ಮುಂದಾಗಿ ಬರುತ್ತಿರುವ ಬ್ರಹ್ಮನಿಂದಲೂ ಹಿಂದೆ ಬರುತ್ತಿರುವ ಸಂತುಷ್ಟನಾದ ವಿಷ್ಣುವಿನಿಂದಲೂ ಕೂಡಿ ಮಂಗಲ ದ್ರವ್ಯಗಳಿಂದಲೂ ಅಗ್ನಿಯಿಂದಲೂ ಕೂಡಿರುವ ವಿವಾಹವೇದಿಕೆಯನ್ನು ಆರೋಹಣಮಾಡಿದನು. ತ್ರಿಪುರಾರಿಯಾದ ಶಂಕರನು ತನ್ನ ಸಹಚರರಿಂದಲೂ ಸಪ್ತರ್ಷಿಗಳಿಂದಲೂ ಕೂಡಿ ವಿವಾಹಾರ್ಥಿಯಾಗಿ ಬರಲಾಗಿ ಹಿಮವಂತನ ಮನೆಯಲ್ಲಿದ್ದ ಸ್ತ್ರೀಜನರು ಕನ್ಯೆಗೆ ಅಲಂಕಾರಮಾಡಲು ವೈಭವಾನುಸಾರ ತ್ವರೆಯಿಂದ ಆಸಕ್ತರಾದರು.

ವ್ಯಗ್ರೋಽಭೂದ್ಗಿರಿರಾಜವೇಶ್ಮನಿ
ಜನಃ ಕನ್ಯಾಸಮಾಲಂಕೃತೌ ॥
ವ್ಯಾಕುಲ್ಯಂ ಸಮುಪಾಗತಾಶ್ಚ ಗಿರಯಃ
ಪೂಜಾದಿನಾ ದೇವತಾಃ ಪ್ರಾಯೋಽ ।
ವ್ಯಾಕುಲಿತಾ ಭವಂತಿ ಸುಹೃದಃ
ಕನ್ಯಾವಿವಾಹೋತ್ಸುಕಾಃ ॥ ೩೪ ॥

ಪ್ರಸಾಧ್ಯ ದೇವೀಂ ಗಿರಿಜಾಂ ತತಸ್ತ್ರಿಯೋ
ದುಕೂಲಶುಕ್ಲಾಭಿವೃತಾಂಗಯಷ್ಟಿಕಾಂ ।
ಭ್ರಾತ್ರಾ ಸುನಾಭೇನ ತದೋತ್ಸವೇ ಕೃತೇ
ಸಾ ಶಂಕರಾಭ್ಯಾಶಮುಪೋಽಪಸಾದಿತಾ ॥ ೩೫ ॥

ತತಃ ಶುಭೆ ಹರ್ಮ್ಯತಲೆ ಹಿರಣ್ಮಯೆ
ಸ್ಥಿತಾಃ ಸುರಾಃ ಶಂಕರಕಾಲಿಚೇಷ್ಟಿತಂ ।
ಪಶ್ಯಂತಿ ದೇವೋಽಪಿ ಸಮಂಕೃಶಾಂಗ್ಯಾ
ಲೋಕಾನುಜುಷ್ಟಂ ಪದಮಾಸಸಾದ ॥ ೩೬ ॥

ಗಿರಿಗಳೆಲ್ಲವೂ ತಮ್ಮ ತಮ್ಮ ಕಾರ್ಯದಲ್ಲಿ ಗಡಿಬಿಡಿಯಿಂದ ಆಸಕ್ತವಾದವು. ದೇವತೆಗಳೆಲ್ಲರೂ ಫಲೋನ್ಮುಖವಾಗುತ್ತಿರುವ ಸ್ವಕಾರ್ಯಸಿದ್ಧಿಗಾಗಿ ಪೂಜಾದಿಗಳಲ್ಲಿ ವಿಶೇಷವಾಗಿ ಆಸಕ್ತರಾದರು. ಕನ್ಯಾವಿವಾಹಕಾಲದಲ್ಲಿ ಸ್ನೇಹಿತರೆಲ್ಲರೂ ಕಾರ್ಯದಲ್ಲಿ ವ್ಯಾಸಕ್ತರಾಗುವದು ಲೋಕಸ್ವಭಾವವಷ್ಟೆ.

೩೫-೩೬. ಆನಂತರ ಮುತ್ತೈದೆಯರು ಪಾರ್ವತಿಯನ್ನು ಅಲಂಕರಿಸಿ ಬಿಳಿಯ ಪಟ್ಟೆವಸ್ತ್ರವನ್ನುಡಿಸಿ ಭ್ರಾತೃವಾದ ಸುನಾಭನಿಂದ ಮಂಗಲೋತ್ಸವವು ನಡೆದನಂತರ ಶಂಕರನ ಸಮೀಪಕ್ಕೆ ತಂದು ಕುಳ್ಳಿರಿಸಿದರು. ಆಗ ಸುವರ್ಣಮಯವಾದ ಉಪ್ಪರಿಗೆಯ ಮೇಲೆ ಕುಳಿತಿದ್ದ ದೇವತೆಗಳು ಶಂಕರಪಾರ್ವತಿಗಳ ಶೃಂಗಾರಚೇಷ್ಟೆಯನ್ನು ನೋಡುತ್ತಿದ್ದರು. ಹರನೂ ಕೂಡ ಸುಂದರಿಯಾದ ಪಾರ್ವತಿಯ ಕಟಾಕ್ಷಮಾರ್ಗವನ್ನು ತಾನೂ ಅನುಸರಿಸುತ್ತಿದ್ದನು. ಆಗ ಆ ವಿವಾಹಮಂಟಪದಲ್ಲಿ ಹರಪಾರ್ವತಿಯರ

ಯತ್ರ ಕ್ರೀಡಾವಿಚಿತ್ರಾಃ ಸಕುಸುಮತರವೋ ವಾರಿಣೋ ಬಿಂದುಪಾತ್ರೈಃ ।
ಗಂಧಾಢ್ಯೈರ್ಗಂಧಚೂರ್ಣೈಃ ಪ್ರವಿರಲಮವನೌ ಗುಂಠಿತೈರ್ಗುಂಡಿಕಾಯಾಂ
ಮುಕ್ತಾದಾಮ್ನೈಃ ಪ್ರಕಾಮಂ ಹರಗಿರಿತನಯಾ ಕ್ರೀಡನಾರ್ಥಂ ತದಾಘ್ನೈ ।
ಪಶ್ಚಾತ್ಸಿಂದೂರಪುಂಜೈರವಿರತವಿತತೈಶ್ಚಕ್ರತುಃ ಕ್ಷ್ಮಾಂ ಸುರಕ್ತಾಂ ॥ ೩೭ ॥

ಏವಂ ಕ್ರೀಡಾಂ ಹರಃ ಕೃತ್ವಾ ಸಮಂ ಚ ಗಿರಿಕನ್ಯಯಾ ।
ಆಗಚ್ಛದ್ದಕ್ಷಿಣಾಂ ವೇದಿಮೃಷಿಭಿಸ್ಸೇವಿತಾಂ ದೃಢಾಂ ॥ ೩೮ ॥

ಅಥಾಜಗಾಮ ಹಿಮವಾನ್ ಶುಕ್ಲಾಂಬರಧರಶ್ಶುಚಿಃ ।
ಪವಿತ್ರಪಾಣಿರಾದಾಯ ಮಧುಪರ್ಕಮಥಾಕುಲಂ ॥ ೩೯ ॥

ಉಪವಿಷ್ಟಸ್ತ್ರಿನೇತ್ರಸ್ತು ಶಾಕ್ರೀಂ ದಿಶಮುಪಶ್ಯತ ।
ಸಪ್ತರ್ಷಿಕಾಂಶ್ಚ ಶೈಲೇಂದ್ರಃ ಸೂಪವಿಷ್ಟೋ ವಿಲೋಕಯನ್ ॥ ೪೦ ॥

ಸುಖಾಸೀನಸ್ಯ ಶರ್ವಸ್ಯ ಕೃತಾಂಜಲಿಪುಟೋ ಗಿರಿಃ ।
ಪ್ರೋವಾಚ ವಚನಂ ಶ್ರೀಮಾನ್ಧರ್ಮಸಾಧನಮಾತ್ಮನಃ ॥ ೪೧ ॥

ವಿಹಾರಕ್ಕೆ ತಕ್ಕಂತೆ ವಿಚಿತ್ರವಾದ ಕ್ರೀಡಾಭವನಗಳೂ, ಕುಸುಮಿತವಾದ ವೃಕ್ಷಗಳೂ ಜಲಯಂತ್ರಗಳೂ ಸುಗಂಧಿಚೂರ್ಣಗಳಿಂದ ಕೂಡಿದ ಹಳ್ಳವಾದ ಭೂಪ್ರದೇಶಗಳೂ, ಮುತ್ತಿನ ಮಾಲಿಕೆಯಿಂದ ಕೂಡಿದ ಸ್ಥಲಗಳೂ ಏರ್ಪಡಿಸಲ್ಪಟ್ಟವು. ಕೆಲವುಕಡೆ ಸಿಂದೂರದಿಂದ ಹರಡಲ್ಪಟ್ಟ ಕೆಂಪಾದ ಭೂಮಿಯೂ ರಮಣೀಯವಾಗಿ ತೋರಿತು.

೩೮-೪೧. ಹೀಗೆ ಹರನು ಗಿರಿಕನ್ಯಕೆಯೊಡನೆ ಸಂತೋಷದಿಂದಿದ್ದು ಋಷಿಗಳು ಕುಳಿತಿರುವ ದಕ್ಷಿಣವೇದಿಗೆ ಬಂದನು. ಅನಂತರ ಶುಚಿಯಾಗಿಯೂ ಶುಕ್ಲವಸ್ತ್ರಧಾರಿಯಾಗಿಯೂ ಇರುವ ಹಿಮವಂತನು ಪವಿತ್ರಪಾಣಿಯಾಗಿ ಮಧುಪರ್ಕವನ್ನು ತೆಗೆದುಕೊಂಡು ತ್ವರೆಯಿಂದ ಬಂದನು. ಆಗ ಹರನು ಪೂರ್ವಾಭಿಮುಖನಾಗಿ ಕುಳಿತನು. ಹಿಮವಂತನು ಸಪ್ತರ್ಷಿಗಳಿಂದ ಕೂಡಿದ ಉತ್ತರದಿಕ್ಕಿಗೆ ಅಭಿಮುಖನಾಗಿ ನೋಡುತ್ತಾ ಕುಳಿತುಕೊಂಡು ಸುಖಾಸೀನನಾಗಿರುವ ಶಂಕರನನ್ನು ಕುರಿತು ಅಂಜಲಿಬಂಧಪೂರ್ವಕವಾಗಿ ತನ್ನ ಧರ್ಮಸಾಧನೆಗೆ ಅನುಗುಣವಾದ ಈ ಮಾತನ್ನು ಹೇಳಿದನು.

ಹಿಮವಾನುವಾಚ

ಮತ್ಪುತ್ರೀಂ ಭಗವನ್ ಕಾಲೀಂ ಪೌತ್ರೀಂ ಚ ಪುಲಹಾಗ್ರಜೇ ।
ಪಿತೄಣಾಮಪಿ ದೌಹಿತ್ರೀಂ ಪ್ರತೀಚ್ಛೇಮಾಂ ಮಯೋದಿತಾಂ ॥ ೪೨ ॥

ಪುಲಸ್ತ್ಯ ಉವಾಚ

ಇತ್ಯೇವಮುಕ್ತ್ವಾ ಶೈಲೇಂದ್ರೋ ಹಸ್ತಂ ಹಸ್ತೇನ ಯೋಜಯನ್ ।
ಪ್ರಾದಾತ್ಪ್ರತೀಚ್ಛ ಭಗವನ್ನಿದಮುಚ್ಚೈರುದೀರಯನ್ ॥ ೪೩ ॥

ಹರ ಉವಾಚ

ನಮೇಽಸ್ತಿ ಮಾತಾ ನ ಪಿತಾ ತಥೈವ
ನ ಜ್ಞಾತಯೋ ವಾಪಿ ಚ ಬಾಂಧವಾದ್ಯಾಃ ।
ನಿರಾಶ್ರಯೋಽಹಂ ಗಿರಿಶೃಂಗವಾಸೀ
ಸುತಾಂ ಪ್ರತೀಚ್ಛಾಮಿ ತವಾದ್ರಿರಾಜ ॥ ೪೪ ॥

ಇತ್ಯೇವಮುಕ್ತ್ವಾ ವರದೋಽವಪೀಡಯತ್ಕರಂ
ಕರೇಣಾದ್ರಿಕುಮಾರಿಕಾಯಾಃ ।
ಸಾ ಚಾಪಿ ಸಂಸ್ಪರ್ಶಮವಾಪ್ಯ ಶಂಭೋಃ
ಪರಾಂ ಮುದಂ ಲಬ್ಧವತೀ ಸುರರ್ಷೇ ॥ ೪೫ ॥

೪೨-೪೫. ಎಲೈ ಪೂಜ್ಯನೇ, ನನಗೆ ಮಗಳಾಗಿಯೂ ಪುಲಹಾಗ್ರಜನಿಗೆ ಪೌತ್ರಿಯಾಗಿಯೂ ಪಿತೃದೇವತೆಗಳಿಗೆ ದೌಹಿತ್ರಿಯಾಗಿಯೂ ಇರುವ ಈ ಕಾಲಿಯನ್ನು ಸ್ವೀಕರಿಸು, ಹೀಗೆ ಹೇಳಿ ಹಿಮವಂತನು ಪಾರ್ವತಿಯ ಹಸ್ತವನ್ನು ಶಂಕರನ ಹಸ್ತದೊಡನೆ ಸೇರಿಸಿ, ಪೂಜ್ಯನೇ ಪ್ರತಿಗ್ರಹಿಸು ಎಂದು ಉಚ್ಚಸ್ವರದಿಂದ ಹೇಳುತ್ತಾ ಕೊಟ್ಟನು. ಆಗ ಹರನು, ನನಗೆ ತಾಯಿ ಇಲ್ಲ ತಂದೆಯೂ ಇಲ್ಲ, ಬಂಧುವರ್ಗಕ್ಕೆ ಸೇರಿದ ಜ್ಞಾತಿಗಳೂ ಇಲ್ಲ. ಗಿರಿಶೃಂಗವಾಸಿಯಾದ ನಿರಾಶ್ರಯನು ನಾನು ಎಲೈ. ಪರ್ವತರಾಜನೇ ನಿನ್ನ ಮಾತಿನಂತೆ ಈ ನಿನ್ನ ಮಗಳನ್ನು ಸ್ವೀಕರಿಸಿದ್ದೇನೆ. ಎಂದು ಹೇಳುತ್ತಾ ಪಾರ್ವತಿಯ ಕೈಯನ್ನು ತನ್ನ ಕೈಯಿನಿಂದ ಗ್ರಹಿಸಿದನು. ಆಗ ಪಾರ್ವತಿಯೂ ಶಂಭುವಿನ ಹಸ್ತಸ್ಪರ್ಶಹೊಂದಿ ಸಂತುಷ್ಟಳಾದಳು.

ತಥಾಧಿರೂಢೋ ವರದೋಽಥ ವೇದಿಂ
ಸಹಾದ್ರಿಪುತ್ರ್ಯಾ ಮಧುಪರ್ಕಮಶ್ನನ್ ।
ದತ್ವಾಚ ಲಾಜಾನ್ ಕಲಮಸ್ಯ ಶುಕ್ಲಾನ್
ತತೋಽವಿರಂಚೋಽ ಗಿರಿಜಾಮುವಾಚಹ ॥ ೪೬ ॥

ಕಾಲಿ ಪಶ್ಯೇಶವದನಂ ರಮ್ಯಂ ಶಶಧರಪ್ರಭಂ ।
ಸಮದೃಷ್ಟಿಃ ಸ್ಥಿರಾ ಭೂತ್ವಾ ಕುರುಷ್ವಾಗ್ನೇಃ ಪ್ರದಕ್ಷಿಣಂ ॥ ೪೭ ॥

ತತೋಽಂಬಿಕಾ ಹರಮುಖೇ ದೃಷ್ಟೇ ಶೈತ್ಯಮುಪಾಗತಾ ।
ಯಥಾರ್ಕರಶ್ಮಿಸಂತಪ್ತಾ ಪ್ರಾಪ್ಯ ವೃಷ್ಟಿಮಿವಾವನಿಃ ॥ ೪೮ ॥

ಭೂಯಃಪ್ರಾಹ ವಿಭೋರ್ವಕ್ತ್ರಮೀಕ್ಷಸ್ವೇತಿ ಪಿತಾಮಹಃ ।
ಲಜ್ಜಯಾ ಸಾಪಿ ದೃಷ್ಟೇತಿ ಶನೈರ್ಬ್ರಹ್ಮಾಣ ಮಬ್ರವೀತ್ ॥ ೪೯ ॥

ಸಮಂ ಗಿರಿಜಯಾ ತೇನ ಹುತಾಶಃ ತ್ರಿಪ್ರದಕ್ಷಿಣಂ ।
ಕೃತೋ ಲಾಜಾಶ್ಚ ಹವಿಷಾ ಸಮಂ ಕ್ಷಿಪ್ತಾ ಹುತಾಶನೇ ॥ ೫೦ ॥

೪೬-೪೮. ಹಾಗೆ ವೇದಿಯನ್ನು ಹತ್ತಿದ ಶಂಕರನು ಪಾರ್ವತಿಯೊಡನೆ ಮಧುಪರ್ಕವನ್ನು ಸೇವಿಸಿ ಬಿಳುಪಾದ ಅರಳನ್ನೂ ಕೊಟ್ಟು ಸಂತೋಷದಿಂದಿರುವಾಗ ಚತುರ್ಮುಖನು ಪಾರ್ವತಿಯನ್ನು ಕುರಿತು, ಕಾಲಿ, ಚಂದ್ರನಂತೆ ರಮಣೀಯವಾಗಿರುವ ಹರನ ಮುಖವನ್ನು ಸಮದೃಷ್ಟಿಯಿಂದಲೂ ಶಾಂತತೆಯಿಂದಲೂ ನೋಡು, ಅಗ್ನಿಯನ್ನು ಪ್ರದಕ್ಷಿಣೆಮಾಡು ಎಂದನು. ಆಗ ಅಂಬಿಕೆಯು ಹರನ ಮುಖವನ್ನು ನೋಡಿ ಸೂರ್ಯನಿಂದ ಸಂತಾಪಹೊಂದಿದ ಭೂಮಿಯು ಮಳೆಯಿಂದ ಶೀತಲವಾಗುವಂತೆ ತಾನೂ ಶಾಂತಳಾದಳು.

೪೯-೫೦. ಪುನಃ ಚತುರ್ಮುಖನು ವಿಭುವಾದ ಹರನ ಮುಖವನ್ನು ನೋಡು. ಎಂದು ಹೇಳಲು ಪಾರ್ವತಿಯು ಲಜ್ಜೆಯಿಂದ ಮೆಲ್ಲಗೆ ನೋಡಿದೆನೆಂದು ಉತ್ತರ ಹೇಳಿದಳು. ಆಗ ಹರನು ಪಾರ್ವತಿಯೊಡನೆ ಅಗ್ನಿಯನ್ನು ಮೂರು ಸುತ್ತು ಪ್ರದಕ್ಷಿಣೆ ಮಾಡಿ ಹವಿಸ್ಸಿನೊಡನೆ ಲಾಜಗಳನ್ನೂ ಅಗ್ನಿಯಲ್ಲಿ ಹೋಮ ಮಾಡಿದನು. ಆಗ

ತತೋ ಹರಾಂಘ್ರಿರ್ಮಾಲಿನ್ಯಾ ಗೃಹೀತೋ ದಾಯಕಾರಣಾತ್ ।
ಕಿಂ ಯಾಚಸೆ ತೇ ದಾಸ್ಯಾಮಿ ಮುಂಚಸ್ವೇತಿ ಹರೋಽಬ್ರವೀತ್ ॥ ೫೧ ॥

ಮಾಲಿನೀ ಶಂಕರಂ ಪ್ರಾಹ ಮತ್ಸಖ್ಯಾ ದೇಹಿ ಶಂಕರ ।
ಸೌಭಾಗ್ಯಂ ನಿಜಗೋತ್ರೀಯಂ ತತೋ ಮೋಕ್ಷಮವಾಪ್ಸ್ಯಸಿ ॥ ೫೨ ॥

ಅಥೋವಾಚ ಮಹಾದೇವೋ ದತ್ತಂ ಮಾಲಿನಿ ಮುಂಚಮಾಂ ।
ಸೌಭಾಗ್ಯಂ ನಿಜಗೋತ್ರೀಯಂ ಯೋಽಸ್ಯಾಸ್ತಂ ಶೃಣುವಚ್ಮಿ ತೆ ॥ ೫೩ ॥

ಯೋಽಸೌ ಪೀತಾಂಬರಧರಃ ಶಂಖಧೃಙ್ ಮಧುಸೂದನಃ ।
ಏತದೀಯಂ ಹಿ ಸೌಭಾಗ್ಯಂ ದತ್ತಂ ಮದ್ಗೋತ್ರಮೇವ ಹಿ ॥ ೫೪ ॥

ಇತ್ಯೇವಮುಕ್ತೇ ವಚನೇ ಪ್ರಮುಮೋಚ ವೃಷಧ್ವಜಂ ।
ಮಾಲಿನೀ ನಿಜಗೋತ್ರಸ್ಯ ಶುಭಚಾರಿತ್ರಮಾಲಿನೀ ॥ ೫೫ ॥

ಯದಾ ಹರೋಹಿ ಮಾಲಿನ್ಯಾ ಗೃಹೀತಃ ಚರಣೇ ಶುಭೇ ।
ತದಾ ಕಾಲೀಮುಖಂ ಬ್ರಹ್ಮಾ ದದರ್ಶ ಶಶಿನೋಽಧಿಕಂ ॥ ೫೬ ॥

ಮಾಲಿನಿಯು ತನ್ನ ಯೋಚನೆಗಾಗಿ ಹರನ ಪಾದವನ್ನು ಹಿಡಿದುಕೊಂಡಳು. ಆ ಹರನು ನನ್ನಿಂದ ಏನನ್ನು ಯಾಚಿಸುತ್ತೀಯೆ, ಅಪೇಕ್ಷಿತವನ್ನು ಕೊಡುತ್ತೇನೆ ಕಾಲನ್ನು ಬಿಡು ಎಂದನು. ಆಗ ಮಾಲಿನಿಯು ಶಂಕರನನ್ನು ಕುರಿತು ಎಲೈ, ಶಂಕರನೇ ನನ್ನ ಸಖಿಗೆ ತನ್ನ ವಂಶಕ್ಕೆ ತಕ್ಕ ಸೌಭಾಗ್ಯವನ್ನು ಕೊಡು. ನಂತರ ಪಾದವನ್ನು ಬಿಡುತ್ತೇನೆ ಎಂದಳು.

೫೩-೫೬. ಅನಂತರ ಮಹಾದೇವನು ಅಂತಹ ಗೋತ್ರಸೌಭಾಗ್ಯವನ್ನು ನಾನು ಕೊಟ್ಟಾಯಿತು ನನ್ನನ್ನು ಬಿಡು ಎಂದನು. ಆ ಸೌಭಾಗ್ಯವು ಯಾರೆಂಬುದನ್ನು ಹೇಳುತ್ತೇನೆ ಕೇಳು. ಪೀತಾಂಬರಧಾರಿಯಾಗಿಯೂ ಶಂಖಚಕ್ರಪಾಣಿಯಾಗಿಯೂ ಇರುವ ಈ ಮಧುಸೂದನನೇ ನಾನು ಕೊಟ್ಟ ಇವಳ ಸೌಭಾಗ್ಯನಾಗಿರುತ್ತಾನೆ. ಅದೂ ನನ್ನ ವಂಶಕ್ಕೆ ಸೇರಿದುದು, ಎಂದು ಉತ್ತರವೀಯಲು ಮಾಲಿನಿಯು ಹರನ ಪಾದಗಳನ್ನು ಬಿಟ್ಟುಬಿಟ್ಟಳು. ಅವಳು ಹರನ ಪಾದವನ್ನು ಹಿಡಿದುಕೊಂಡಕಾಲದಲ್ಲಿ ಚತುರ್ಮುಖನು ಚಂದ್ರನಿಗಿಂತಲೂ ರಮಣೀಯವಾಗಿದ್ದ ಕಾಲಿಯ ಮುಖವನ್ನು ನೋಡಿದನು.

ತದ್ದೃಷ್ಟ್ವಾ ಮೋಹಮಗಮಚ್ಛುಕ್ರಚ್ಯುತಿಮವಾಪ ಚ ।
ತಚ್ಛುಕ್ರಂ ವಾಲುಕಾಯಾಂ ಚ ಖಿಲೀಚಕ್ರೇ ಸಸಾಧ್ವಸಃ ॥ ೫೭ ॥

ತತೋಽಬ್ರವೀದ್ಧರೋ ಬ್ರಹ್ಮನ್ ನ ದ್ವಿಜಾನ್ ಹಂತುಮರ್ಹಸಿ ।
ಅಮೀ ಮಹರ್ಷಯೋ ಧನ್ಯಾ ವಾಲಖಿಲ್ಯಾಃ ಪಿತಾಮಹ ॥ ೫೮ ॥

ತತೋ ಮಹೇಶವಾಕ್ಯಾಂತೇ ಸಮುತ್ತಸ್ಥುಃ ತಪಸ್ವಿನಃ ।
ಅಷ್ಟಾಶೀತಿಸಹಸ್ರಾಣಿ ವಾಲಖಿಲ್ಯಾ ಇತಿ ಸ್ಮೃತಾಃ ॥ ೫೯ ॥

ತತೋ ವಿವಾಹೇ ನಿರ್ವೃತ್ತೇ ಪ್ರವಿಷ್ಟಃ ಕೌತುಕಂ ಹರಃ ।
ರೇಮೇ ಸಹೋಮಯಾ ರಾತ್ರಿಂ ಪ್ರಭಾತೇ ಪುನರುತ್ಥಿತಃ ॥ ೬೦ ॥

ತತೋಽದ್ರಿಪುತ್ರೀಂ ಸಮವಾಪ್ಯ ಶಂಭುಃ
ಸರ್ವೈಸ್ಸಮಂ ಭೂತಗಣೈಶ್ಚ ಹೃಷ್ಟಃ ।
ಸಂಪೂಜಿತಃ ಪರ್ವತಪಾರ್ಥಿವೇನ
ಸ್ವಮಂದಿರಂ ಶೀಘ್ರಮುಪಾಜಗಾಮ ॥ ೬೧ ॥

೫೭-೫೯. ಆ ಮುಖವನ್ನು ನೋಡಿದೊಡನೆಯೇ ಚತುರ್ಮುಖನು ಮೋಹಗೊಂಡು ಶುಕ್ರಚ್ಯುತಿಯನ್ನು ಹೊಂದಿದನು. ಆಗ ಚತುರ್ಮುಖನು ಭಯದಿಂದ ಆ ಶುಕ್ರವನ್ನು ಮರಳಿನಲ್ಲಿ ಛಿದ್ರಛಿದ್ರವನ್ನಾಗಿ ಮಾಡಿದನು. ಆಗ ಹರನು ಇದನ್ನು ತಿಳಿದು ಎಲೈ, ಪಿತಾಮಹನೇ ಬ್ರಹ್ಮಹತ್ಯೆಮಾಡುವದು ಸರಿಯಲ್ಲ ಇವೆಲ್ಲವೂ ಧನ್ಯರಾದ ವಾಲಖಿಲ್ಯರೆಂಬ ಮಹರ್ಷಿಗಳಾಗುತ್ತಾರೆ ಎಂದನು. ಹೀಗೆ ಮಹೇಶ್ವರನು ಹೇಳಿದೊಡನೆಯೇ ವಾಲಖಿಲ್ಯರೆಂದು ಪ್ರಸಿದ್ಧರಾದ ಎಂಭತ್ತೆಂಟು ಸಾವಿರ ತಪಸ್ವಿಗಳು ಮೇಲಕ್ಕೆ ಎದ್ದು ಬಂದರು.

೬೦-೬೧. ವಿವಾಹ ಮಹೋತ್ಸವು ಬೆಳೆದ ಮೇಲೆ ಹರನು ಕೌತುಕಾಗಾರದಲ್ಲಿ ಪಾರ್ವತಿಯೊಡನೆ ಆ ರಾತ್ರಿ ರಮಿಸಿ ಬೆಳಗ್ಗೆ ಎದ್ದು, ಗಣಗಳೊಡನೆಯೂ ಪಾರ್ವತಿಯೊಡನೆಯೂ ಸಂತುಷ್ಟನಾಗಿದ್ದು ಹಿಮವಂತನಿಂದ ಸತ್ಕರಿಸಲ್ಪಟ್ಟು ತನ್ನ ಪರಿವಾರದೊಡನೆಯೂ ಪಾರ್ವತಿಯೊಡನೆಯೂ ತನ್ನ ಸ್ಥಾನಕ್ಕೆ ಜಾಗ್ರತೆಯಾಗಿ ಹೊರಟು ಬಂದನು. ಅಲ್ಲಿ ದೇವತೆಗಳನ್ನೂ ಬ್ರಹ್ಮ ಹರಿ ಇಂದ್ರ ಮುಂತಾದವರನ್ನೂ ಸಹ

ತತಃ ಸುರಾನ್ ಬ್ರಹ್ಮಹರೀಂದ್ರಮುಖ್ಯಾನ್ಪ್ರಣಮ್ಯ
ಸಂಪೂಜ್ಯ ಯಥಾವಿಭಾಗಂ ।
ವಿಸೃಜ್ಯ ಭೂತೈಃ ಸಹಿತೋ
ಮಹೀಧ್ರಮಧ್ಯಾವಸನ್ಮಂದರಮಷ್ಟಮೂರ್ತಿಃ ॥ ೬೨ ॥

ಇತಿ ಶ್ರೀ ವಾಮನಪುರಾಣೇ ಗೌರೀವಿವಾಹೋ ನಾಮ
ಪಂಚಾಶತ್ತಮೋಽಧ್ಯಾಯಃ

ಅವರವರ ಯೋಗ್ಯತೆಗೆ ತಕ್ಕಂತೆ ಪ್ರಣಾಮಾದಿಗಳಿಂದ ಸತ್ಕರಿಸಿ ಅವರನ್ನೆಲ್ಲಾ ಕಳುಹಿಸಿ ಕೊಟ್ಟು ತನ್ನ ಭೂತಸಂಘಗಳೊಡನೆ ಅಷ್ಟಮೂರ್ತಿಯಾಗಿ ಮಂದರಪರ್ವತದಲ್ಲಿ ನೆಲಸಿದ್ದನು.

ಇಲ್ಲಿಗೆ ಶ್ರೀ ವಾಮನಪುರಾಣದ ಉಮಾಸಂಭವದಲ್ಲಿ ಗೌರೀವಿವಾಹವೆಂಬ
ಐವತ್ತಮೂರನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ವಿವಾಹ ಮಹೋತ್ಸವಕ್ಕಾಗಿ ಆಹ್ವಾನಮಾಡಲ್ಪಟ್ಟು ಮಂದರಕ್ಕೆ ಬಂದ ಬ್ರಹ್ಮ, ವಿಷ್ಣು, ಇಂದ್ರಾದಿಗಳನ್ನು ಯಥಾರ್ಹವಾಗಿ ಸತ್ಕರಿಸಿ ಅವರೊಡನೆಯೂ ಇತರ ದೇವತೆಗಳೊಡನೆಯೂ ಹರನು ವೈವಾಹಿಕಾಲಂಕಾರಶೋಭಿತನಾಗಿ ಹಿಮವತ್ಪರ್ವತಕ್ಕೆ ಹೊರಟು ಬಂದನೆಂದೂ, ಹಾಗೆ ಬಂದ ಹರನನ್ನೂ ಅವನ ಪರಿವಾರವನ್ನೂ ಸತ್ಕರಿಸಿ ಹಿಮವಂತನು ಯಥಾವಿಧಿಯಾಗಿ ವಿವಾಹವನ್ನು ನಡೆಸಿ ಪಾರ್ವತಿಯನ್ನು ಹರನಿಗೆ ವಿವಾಹಮಾಡಿ ಕೊಟ್ಟನೆಂತಲೂ, ವಿವಾಹಿತನಾದ ಹರನು ಪಾರ್ವತಿಯೊಡನೆಯೂ ತನ್ನ ಪರಿವಾರದೊಡನೆಯೂ ಮಂದರಪರ್ವತಕ್ಕೆ ಬಂದನೆಂದೂ ಹೇಳಲಾಯಿತು

॥ ಶ್ರೀಃ ॥

ಶ್ರೀವಾಮನಪುರಾಣಂ

ಚತುಃಪಂಚಾಶತ್ತಮೋಽಧ್ಯಾಯಃ

ಪುಲಸ್ತ್ಯ ಉವಾಚ

ತತೋ ಗಿರೌ ವಸನ್ ರುದ್ರಃ ಸ್ವೇಚ್ಛಯಾ ವಿಚರನ್ಮುನೇ ।
ವಿಶ್ವಕರ್ಮಾಣಮಾಹೂಯ ಪ್ರೋವಾಚ ಕ್ರಿಯತಾಂ ಗೃಹಂ ॥ ೧ ॥

ತತಶ್ಚಕಾರ ಶರ್ವಸ್ಯ ಗೃಹಂ ಸ್ವಸ್ತಿಕಲಕ್ಷಣಂ ।
ಯೋಜನಾನಿ ಚತುಷ್ಷಷ್ಟಿಃ ಪ್ರಮಾಣೇನ ಹಿರಣ್ಮಯಂ ॥ ೨ ॥

ಪಂಚತೋರಣನಿರ್ವ್ಯೂಹಂ ಮುಕ್ತಾಜಾಲಾಂತರಂ ಶುಭಂ ।
ಶುದ್ಧಸ್ಫಟಿಕಸೋಪಾನಂ ವೈಡೂರ್ಯಕೃತರೂಪಕಂ ॥ ೩ ॥

ಐವತ್ತನಾಲ್ಕನೆಯ ಅಧ್ಯಾಯವು

೧-೪. ಪುಲಸ್ತ್ಯರು ಮುಂದಿನ ವೃತ್ತಾಂತವನ್ನು ಹೇಳುತ್ತಾರೆ:—ಅನಂತರ ಆ ಮಂದರಗಿರಿಯಲ್ಲಿ ವಾಸಿಸುತ್ತಾ ಸ್ವೇಚ್ಛೆಯಿಂದ ಸಂಚರಿಸುತ್ತಿದ್ದ ರುದ್ರನು ವಿಶ್ವಕರ್ಮನನ್ನು ಕರೆದು ನನಗೆ ಮನೆಯೊಂದನ್ನು ಮಾಡು ಎಂದು ಅಪ್ಪಣೆಮಾಡಿದನು. ಆ ಮಾತಿನಂತೆ ವಿಶ್ವಕರ್ಮನು ಅರವತ್ತುನಾಲ್ಕು ಯೋಜನ ಪ್ರಮಾಣವುಳ್ಳ ಸುವರ್ಣ ಮಯವಾದ ಸ್ವಸ್ತಿಕಾಕಾರದ ಮಹಾಭವನವನ್ನು ಮಾಡಿದನು. (ಸ್ವಸ್ತಿಕ, ಸರ್ವತೋ ಭದ್ರ ಇತ್ಯಾದಿಗಳು ಮನೆಯ ನಿರ್ಮಾಣದ ಆಯವಿಶೇಷಗಳು ದೇವಗೃಹವು ಸ್ವಸ್ತಿಕಾಕಾರವಾಗಿರಬೇಕೆಂದು ವಾಸ್ತುಶಾಸ್ತ್ರ) ಆ ಮಹಾಗೃಹವು ದಂತಗಳಿಂದ ಮಾಡಲ್ಪಟ್ಟ ಹೊರಬಾಗಿಲು ಮತ್ತು ಬಾಗಿಲಿನ ಮೇಲ್ಭಾಗದ ಗದ್ದುಗೆಯುಳ್ಳ ದ್ದಾಗಿಯೂ, ಮುಕ್ತಾಮಣಿಗಳಿಂದ ಶೋಭಿತವಾದ ಒಳಭಾಗವುಳ್ಳದ್ದಾಗಿಯೂ

ಸಪ್ತಕಕ್ಷಂ ಸುವಿಸ್ತೀರ್ಣಂ ಸರ್ವಂ ಸಮುದಿತಂ ಗುಣೈಃ ।
ತತೋ ದೇವಪತಿಶ್ಚಕ್ರೇ ಯಜ್ಞಂ ಗಾರ್ಹಸ್ಥ್ಯಲಕ್ಷಣಂ ॥ ೪ ॥

ತಂ ಪೂರ್ವಚರಿತಂ ಮಾರ್ಗಮನುಯಾತಿ ಸ್ಮ ಶಂಕರಃ ॥
ತಥಾ ಸತಃ ತ್ರಿನೇತ್ರಸ್ಯ ಮಹಾನ್ಕಾಲೋಽಭ್ಯಗಾನ್ಮನೆ ॥ ೫ ॥

ರಮತಃ ಸಹಪಾರ್ವತ್ಯಾ ಧರ್ಮಾವೇಕ್ಷೀ ಜಗತ್ಪತಿಃ ।
ತತಃ ಕದಾಚಿದ್ಬ್ರಹ್ಮಾರ್ಥಂ ಕಾಲೀತ್ಯುಕ್ತಾ ಭವೇನ ಹಿ ॥ ೬ ॥

ಪಾರ್ವತೀ ಮನ್ಯುನಾವಿಷ್ಟಾ ಶಂಕರಂ ವಾಕ್ಯಮಬ್ರವೀತ್ ।
ಸಂರೋಹತೀಷುಣಾ ವಿದ್ಧಂ ವನಂ ಪರಶುನಾಹತಂ ।
ವಾಚಾ ದುರುಕ್ತಂ ಭೀಭತ್ಸಂ ನ ಪ್ರರೋಹತಿ ವಾಕ್ಕ್ಷತಂ ॥ ೭ ॥

ವೈಡೂರ್ಯಮಣಿಗಳಿಂದ ಮಾಡಲ್ಪಟ್ಟ ಬೊಂಬೆಗಳುಳ್ಳದ್ದಾಗಿಯೂ ಏಳು ತೊಟ್ಟಿಗಳುಳ್ಳದ್ದಾಗಿಯೂ ಸರ್ವಗುಣಸಮೃದ್ಧಿಯಿಂದ ಕಂಗೊಳಿಸಿತು. ಅನಂತರ ನೂತನವಾಗಿ ನಿರ್ಮಿತವಾದ ಆ ಭವನದಲ್ಲಿ ಹರನು ಗಾರ್ಹಸ್ಥ್ಯಸೂಚಕವಾದ ಗೃಹಯಜ್ಞವನ್ನು ಮಾಡಿದನು.

೫-೭. ಅನಂತರ ನಿರಾಶ್ರಯನಾಗಿದ್ದ ಶಂಕರನು ಗೃಹಸ್ಥಾಶ್ರಮಕ್ಕೆ ತಕ್ಕಂತ ತಾನು ಮೊದಲು ಸತೀದೇವಿಯೊಡನೆ ಆಚರಿಸಿದ್ದ ಮಾರ್ಗವನ್ನೇ ಅನುಸರಿಸಿದನು. ಹಾಗೆ ಆಶ್ರಮಾನುಸಾರ ಪಾರ್ವತಿಯೊಡನೆ ವಿಹರಿಸುತ್ತಿದ್ದ ಆ ತ್ರಿನೇತ್ರನಿಗೆ ಹೀಗೆಯೇ ಬಹಳ ಕಾಲವೂ ಕಳೆಯಿತು. ಆಗ ಒಂದಾನೊಂದು ಕಾಲದಲ್ಲಿ ಗೃಹಸ್ಥಧರ್ಮಕ್ಕೆ ತಕ್ಕಂತೆ ವರ್ತಿಸುವ ಆ ಹರನು ತಾತ್ವಿಕದೃಷ್ಟಿಯಿಂದ ಪಾರ್ವತಿಯನ್ನು ಕಾಲಿ ಎಂದು ಕರೆದನು. ಆಗ ಪಾರ್ವತಿಯು ಬಹಳ ಕೋಪಗೊಂಡು ಶಂಕರನನ್ನು ಕುರಿತು ಹೀಗೆ ಹೇಳಿದಳು. ಬಾಣದಿಂದ ಕತ್ತರಿಸಲ್ಪಟ್ಟ ದೇಹಭಾಗವು ಪುನಃ ಪೂರ್ವಾವಸ್ಥೆಗೆ ಬರಬಹುದು. ಆದರೆ ಅಹಿತವಾದ ಮಾತಿನಿಂದ ಉಂಟಾದ ಮನಃಖೇದವು ದುಷ್ಟವಾದ ಮಾತಿನಿಂದ ಛೇದಿಸಲ್ಪಟ್ಟು ಪುನಃ ಚಿಗುರಿ ಪೂರ್ವಾವಸ್ಥೆಗೆ ಬರುವದಿಲ್ಲ.

ವಾಕ್ಸಾಯಕಾ ವದನಾನ್ನಿಷ್ಪತಂತಿ
ತೈರಾಹತಃ ಶೋಚತಿ ರಾತ್ರ್ಯಹಾನಿ ।
ನ ತಾನ್ವಿಮುಂಚೇತ ಹಿ ಪಂಡಿತೋ ಜನಃ
ತದದ್ಯ ಧರ್ಮಂ ವಿತಥಂ ತ್ವಯಾ ಕೃತಂ ॥ ೮ ॥

ತಸ್ಮಾದ್ವ್ರಜಾಮಿ ದೇವೇಶ ತಪಸ್ತಪ್ತುಮನುತ್ತಮಂ ।
ತಥಾ ಯತಿಷ್ಯೇ ನ ಯಥಾ ಭವಾನ್ ಕಾಲೀತಿ ವಕ್ಷ್ಯತಿ ॥ ೯ ॥

ಇತ್ಯೇವಮುಕ್ತ್ವಾ ಗಿರಿಜಾ ಪ್ರಣಮ್ಯ ಚ ಮಹೇಶ್ವರಂ ।
ಅನುಜ್ಞಾತಾ ತ್ರಿನೇತ್ರೇಣ ದಿವಮೇವೋತ್ಪಪಾತ ಹ ॥ ೧೦ ॥

ಸಮುತ್ಪತ್ಯ ಚ ವೇಗೇನ ಹಿಮಾದ್ರೇಃ ಶಿಖರಂ ಶಿವಂ ।
ಟಂಕಚ್ಛಿನ್ನಂ ಪ್ರಯತ್ನೇನ ವಿಧಾತ್ರಾ ನಿರ್ಮಿತಂ ಯಥಾ ॥ ೧೧ ॥

ತತೋಽವತೀರ್ಯ ಸಸ್ಮಾರ ಜಯಾಂ ಚ ವಿಜಯಾಂ ತಥಾ ।
ಜಯಂತೀಂ ಚ ಮಹಾಪುಣ್ಯಾಂ ಚತುರ್ಥೀಮಪರಾಜಿತಾಂ ॥ ೧೨ ॥

೮-೧೧. ಮಾತುಗಳೆಂಬ ಬಾಣಗಳು ಬಾಯಿನಿಂದ ಹೊರಡುತ್ತವೆ. ಒಡನೆಯೇ ಅವುಗಳಿಂದ ಹೊಡೆಯಲ್ಪಟ್ಟವನು ಹಗಲು ರಾತ್ರಿಯೂ ದುಃಖಪಡುತ್ತಾನೆ. ಪಂಡಿತ ನಾಗಿದ್ದರೂ ಕೂಡ ಅಂತಹ ವಾಗ್ಬಾಣಗಳನ್ನು ನೀನು ಬಿಡಲಾಗಲಿಲ್ಲ. ಆದುದರಿಂದ ನೀನು ಮಾಡಿದ ಧರ್ಮಕೃತ್ಯವೆಲ್ಲವೂ ವ್ಯರ್ಥವೇ ಸರಿ. ಎಲೈ, ದೇವಪತಿಯೇ ಈ ಕಾರಣದಿಂದಲೇ ನಾನು ಘೋರವಾದ ತಪಸ್ಸನ್ನು ಆಚರಿಸಲು ಹೊರಡುತ್ತೇನೆ. ನೀನು ಇನ್ನು ಮುಂದೆ ನನ್ನನ್ನು ಕಾಲಿ ಎಂದು ಹೇಳದಿರುವಂತೆ ಪ್ರಯತ್ನಿಸುತ್ತೇನೆ. ಹೀಗೆ ಹೇಳಿ ಪಾರ್ವತಿಯು ಈಶ್ವರನಿಗೆ ನಮಸ್ಕರಿಸಿ ಅವನ ಅಪ್ಪಣೆಯನ್ನು ಪಡೆದು ಆಕಾಶಕ್ಕೆ ಹಾರಿದಳು. ಆಕಾಶಮಾರ್ಗದಿಂದಲೇ ಹಿಮವತ್ಪರ್ವತಕ್ಕೆ ಹೋಗಿ ಅಲ್ಲಿ ಬ್ರಹ್ಮನಿಂದ ಉಳಿಗಳಿಂದ ಕೊಚ್ಚಿ ಪ್ರಯತ್ನಪೂರ್ವಕವಾಗಿ ಮಾಡಲ್ಪಟ್ಟಂತಿರುವ ರಮಣೀಯವಾದ ಒಂದು ಶಿಖರಕ್ಕೆ ಹೋದಳು.

೧೨-೧೪. ಅಲ್ಲಿ ಇಳಿದು ಜಯಾ ವಿಜಯಾ ಜಯಂತೀ ಅಪರಾಜಿತಾ ಎಂಬ ತನ್ನ ಪೂರ್ವಜನ್ಮದ ಗೆಳತಿಯರನ್ನು ಸ್ಮರಿಸಿಕೊಂಡಳು. ದೇವತಾ ರೂಪಿಣಿಗಳಾದ ಅವರೆಲ್ಲರೂ ಸ್ಮರಿಸಲ್ಪಟ್ಟೊಡನೆಯೇ ಕಾಲಿಯನ್ನು ನೋಡಲು ಬಂದರು ಅವರೆಲ್ಲರೂ

ತಾಃ ಸಂಸ್ಕೃತಾಃ ಸಮಾಜಗ್ಮುಃ ಕಾಲೀಂ ದ್ರಷ್ಟುಂ ಹಿ ದೇವತಾಃ ।
ಅನುಜ್ಞಾತಾಸ್ತಥಾ ದೇವ್ಯಾಃ ಶುಶ್ರೂಷಾಂ ಚಕ್ರಿರೇ ಶುಭಾಃ ॥ ೧೩ ॥

ತತಸ್ತಪಸಿ ಪಾರ್ವತ್ಯಾಂ ಸ್ಥಿತಾಯಾಂ ಹಿಮವದ್ವನಾತ್ ।
ಸಮಾಜಗಾಮ ತಂ ದೇಶಂ ವ್ಯಾಘ್ರೋ ದಂಷ್ಟ್ರಾನಖಾಯುಧಃ ॥ ೧೪ ॥

ಏಕಪಾದಸ್ಥಿತಾಯಾಂ ವೈ ದೇವ್ಯಾಂ ವ್ಯಾಘ್ರಸ್ತ್ವಚಿಂತಯತ್ ।
ಯದಾ ಪತಿಷ್ಯತೇ ಚೇಷ್ಟಂ ತದಾದಾಸ್ಯಾಮಿ ವೈ ಅಹಂ ॥ ೧೫ ॥

ಇತ್ಯೇವಂ ಚಿಂತಯನ್ನೇವ ದತ್ತದೃಷ್ಟಿಃ ಮೃಗಾಧಿಪಃ ।
ಪಶ್ಯಮಾನಸ್ತದ್ವದನಮೇಕದೃಷ್ಟಿರಜಾಯತ ॥ ೧೬ ॥

ತತೋ ವರ್ಷಶತಂ ದೇವೀ ಗೃಣಂತೀ ಬ್ರಹ್ಮಣಃ ಪದಂ ।
ತಪೋತಪ್ಯತ್ತತೋಭ್ಯಾಗಾದ್ಬ್ರಹ್ಮಾ ತ್ರಿಭುವನೇಶ್ವರಃ ॥ ೧೭ ॥

ಪಿತಾಮಹಸ್ತಥೋವಾಚ ದೇವೀಂ ಪ್ರೀತೋಸ್ಮಿ ಶಾಶ್ವತೇ ।
ತಪಸಾ ಧೂತಪಾಪಾಸಿ ವರಂ ವೃಣು ಯಥೇಪ್ಸಿತಂ ॥ ೧೮ ॥

ದೇವಿಯ ಅಪ್ಪಣೆಯಂ ಪಡೆದು ಅವಳ ಶುಶ್ರೂಷೆಗೆ ಸಿದ್ಧರಾದರು. ಆ ರೀತಿಯಾಗಿ ಪಾರ್ವತಿಯೂ ಘೋರವಾದ ತಪಸ್ಸಿನಲ್ಲಿ ನಿರತಳಾಗಿರುವಾಗ ಹಿಮವತ್ಪರ್ವತದ ವನದಿಂದ ಕೋರದಾಡೆ ಮತ್ತು ಉಗುರುಗಳೆಂಬ ಆಯುಧದಿಂದ ಕೂಡಿದ ಒಂದು ವ್ಯಾಘ್ರವು ಆ ಪ್ರದೇಶಕ್ಕೆ ಬಂದಿತು.

೧೫-೧೮. ಏಕಪಾದದಿಂದ ನಿಂತು ಘೋರವಾದ ತಪಸ್ಸನ್ನು ಮಾಡುತ್ತಿರುವ ದೇವಿಯನ್ನು ನೋಡಿ ಆ ವ್ಯಾಘ್ರವು ಒಂದೇ ಕಾಲಿನಿಂದ ನಿಂತಿರುವ ಇವಳು ದೇಹದ ಭಾರವನ್ನು ಹೊರಲಾರದೆ ಕೆಳಕ್ಕೆ ಬಿದ್ದದ್ದೇ ಆದರೆ ಆಗ ನಾನು ನನಗೆ ಇಷ್ಟವಾದ ಇವಳ ದೇಹವನ್ನು ತೆಗೆದುಕೊಂಡು ಹೋಗುತ್ತೇನೆಂದು ಆಲೋಚಿಸಿ ಆ ದೇವಿಯನ್ನೇ ನೋಡುತ್ತಾ ಅವಳ ಮುಖದಲ್ಲಿಯೇ ನೆಟ್ಟದೃಷ್ಟಿಯಿಂದ ನಿಂತಿತು. ಅನಂತರ ದೇವಿಯು ಅನೇಕ ವರ್ಷಪರ್ಯಂತವೂ ಬ್ರಹ್ಮನನ್ನು ಸ್ತೋತ್ರಮಾಡುತ್ತಾ ತಪಸ್ಸಿನಲ್ಲಿಯೇ ನಿರತಳಾದಳು. ಅನಂತರ ತ್ರಿಭುವನಪತಿಯಾದ ಚತುರ್ಮುಖನು ತಾನೇ ಸನ್ನಿಹಿತನಾಗಿ ದೇವಿಯನ್ನು ಕುರಿತು, ಎಲೈ, ಸ್ಥಿರಪ್ರಕೃತಿಯೇ ನಿನ್ನ ಈ ತಪಸ್ಸಿನಿಂದ ನಾನು ಸಂತುಷ್ಟನಾಗಿದ್ದೇನೆ. ಈ ತಪಸ್ಸಿನಿಂದ ನೀನು ನಿಷ್ಪಾಪಳಾಗಿದ್ದೀಯೆ, ನಿನಗೆ ಬೇಕಾದ ವರವನ್ನು ಕೇಳಿಕೋ ಎಂದನು.

ಅಥೋವಾಚ ವಚಃ ಕಾಲೀ ವ್ಯಾಘ್ರಸ್ಯ ಕಮಲೋದ್ಭವ ।
ವರದೋ ಭವ ತೇನಾಹಂ ಯಾಸ್ಯೇ ಪ್ರೀತಿಮನುತ್ತಮಾಂ ॥ ೧೯ ॥

ತತಃ ಪ್ರಾದಾದ್ವರಂ ಬ್ರಹ್ಮಾ ವ್ಯಾಘ್ರಸ್ಯಾದ್ಭುತಕರ್ಮಣಃ ।
ಗಾಣಪತ್ಯಂ ವಿಭೌ ಭಕ್ತಿಮಜೇಯತ್ವಂ ಚ ಧರ್ಮಿತಾಂ ॥ ೨೦ ॥

ವರಂ ವ್ಯಾಘ್ರಾಯ ದತ್ತ್ವೈವಂ ಶಿವಕಾಂತಾಮಥಾಬ್ರವೀತ್ ।
ವೃಣೀಷ್ವ ವರಮವ್ಯಗ್ರಾ ವರಂ ದಾಸ್ಯೇ ತವಾಂಬಿಕೆ ॥ ೨೧ ॥

ತತೋ ವರಂ ಗಿರಿಸುತಾ ಪ್ರಾಹ ದೇವೀ ಪಿತಾಮಹಂ ।
ವರಃ ಪ್ರದೀಯತಾಂ ಬ್ರಹ್ಮನ್ ವರ್ಣಂ ಕನಕಸನ್ನಿಭಂ ॥ ೨೨ ॥

ತಥೇತ್ಯುಕ್ತ್ವಾ ಗತೋ ಬ್ರಹ್ಮಾ ಪಾರ್ವತೀ ಚಾಭವತ್ತತಃ ।
ಕೋಶಂ ಕೃಷ್ಣಂ ಪರಿತ್ಯಜ್ಯ ಪದ್ಮಕಿಂಜಲ್ಕಸನ್ನಿಭಾ ॥ ೨೩ ॥

ತಸ್ಮಾತ್ಕೋಶಾಚ್ಚ ಸಾ ಜಾತಾ ಭೂಯಃ ಕಾತ್ಯಾಯನೀ ಮುನೇ ।
ತಾಮಭ್ಯೇತ್ಯ ಸಹಸ್ರಾಕ್ಷಃ ಪ್ರತಿಜಗ್ರಾಹ ದಕ್ಷಿಣಾಂ
ಪ್ರೋವಾಚ ಗಿರಿಜಾಂ ದೇವೋ ವಾಕ್ಯಂ ಸ್ವರ್ಗಾಯ ವಾಸವಃ ॥ ೨೪ ॥

೧೯-೨೧. ಅನಂತರ ಕಾಲಿಯು ಚತುರ್ಮುಖನನ್ನು ಕುರಿತು ಎಲೈ, ಕಮಲೋದ್ಭವನೇ, ಮೊದಲು ಈ ವ್ಯಾಘ್ರಕ್ಕೆ ಇಷ್ಟವಾದ ವರವನ್ನು ಕೊಟ್ಟು ಸಂತೈಸು ಇದರಿಂದ ನಾನೂ ಪ್ರೀತಿ ಹೊಂದುತ್ತೇನೆ, ಎಂದಳು. ಆಗ ಬ್ರಹ್ಮನು ಸಾಹಸಿಯಾಗಿ ನಿರೀಕ್ಷಿಸುತ್ತಿದ್ದ ಆ ವ್ಯಾಘ್ರದ ವಿಷಯದಲ್ಲಿ ಆಶ್ಚರ್ಯಪಟ್ಟು ಅದಕ್ಕೆ ಗಣಾಧಿಪತ್ಯವನ್ನೂ, ಪ್ರಭುವಿನಲ್ಲಿ ಭಕ್ತಿಯನ್ನೂ ಅಜೇಯತ್ವವನ್ನೂ ಧರ್ಮಿಷ್ಠತೆಯನ್ನೂ ವರವನ್ನಾಗಿ ಕೊಟ್ಟು ಪಾರ್ವತಿಯನ್ನು ಕುರಿತು ಎಲೈ, ಅಂಬಿಕೆಯೇ ಈಗ ನೀನು ನಿನಗೆ ಬೇಕಾದ ವರವನ್ನು ಸಾವಧಾನದಿಂದ ಕೇಳಿಕೋ ಕೊಡುವೆನು ಎಂದನು. ಆಗ ಪಾರ್ವತಿಯು ಈ ವರವನ್ನು ಕೇಳಿದಳು.

೨೨-೨೪. ಎಲೈ, ಬ್ರಹ್ಮನೇ ನನಗೆ ಚಿನ್ನದಂತಿರುವ ವರ್ಣವನ್ನು ವರವನ್ನಾಗಿ ಕೊಡು. ಆಗ ಬ್ರಹ್ಮನು ಹಾಗೆಯೇ ಆಗಲೆಂದು ಹೇಳಿ ಹೊರಟುಹೋದನು. ಅನಂತರ ಪಾರ್ವತಿಯು ಕಪ್ಪಾಗಿರುವ ಮೇಲಿನ ಕೋಶವನ್ನು ಬಿಟ್ಟು ಕಮಲದ ಕುಸುಮದಂತೆ ಕೋಮಲವಾದ ದೇಹವುಳ್ಳವಳಾಗಿ ಆ ಕೋಶದಿಂದ ಕಾತ್ಯಾಯನಿಯೇ ಪುನಃ ಹುಟ್ಟಿದಳು. ಆಗ ಇಂದ್ರನು ಅಲ್ಲಿಗೆ ಬಂದು ದಕ್ಷಿಣಾರೂಪದಿಂದ ಅವಳನ್ನು ಹೊಂದಲು ಗಿರಿಜೆಯನ್ನು ಕುರಿತು ಹೇಳುತ್ತಾನೆ.

ಇಂದ್ರ ಉವಾಚ

ಇಯಂ ಪ್ರದೀಯತಾಂ ಮಹ್ಯಂ ಭಗಿನೀ ಮೇಸ್ತು ಕೌಶಿಕೀ ।
ತ್ವತ್ಕೋಶಸಂಭವಾ ಚೇಯಂ ಕೌಶಿಕೀ ಕೌಶಿಕೋಽಪ್ಯಯಂ ॥ ೨೫ ॥

ತಾಂ ಪ್ರಾದಾದಿತಿ ಸಂಶ್ರುತ್ಯ ಕೌಶಿಕೀಂ ರೂಪಸಂಯುತಾಂ ।
ಸಹಸ್ರಾಕ್ಷೋಽಪಿ ತಾಂ ಗೃಹ್ಯ ವಿಂಧ್ಯಂ ವೇಗಾಜ್ಜಗಾಮ ಚ ॥ ೨೬ ॥

ತತ್ರ ಗತ್ವಾ ತ್ವಥೋವಾಚ ತಿಷ್ಠ ಚಾತ್ರ ಮಹಾಚಲೇ ।
ಪೂಜ್ಯಮಾನಾ ಸುರೈರ್ನಾಮ್ನಾ ಖ್ಯಾತಾ ತ್ವಂ ವಿಂಧ್ಯವಾಸಿನೀ ॥ ೨೭ ॥

ತತ್ರ ಸ್ಥಾಪ್ಯ ಹರಿರ್ದೇವೀಂ ದತ್ವಾ ಸಿಂಹಂ ಚ ವಾಹನಂ ।
ಭವಾಮರಾರಿಹಂತ್ರೀ ಚೇತ್ಯುಕ್ತ್ವಾ ಸ್ವರ್ಗಮುಪಾಗಮತ್ ॥ ೨೮ ॥

ಉಮಾಪಿ ತಂ ವರಂ ಲಬ್ಧ್ವಾ ಮಂದಿರಂ ಪುನರೇತ್ಯ ಚ ।
ಪ್ರಣಮ್ಯ ಚ ಮಹೇಶಾನಂ ಸ್ಥಿತಾ ಸವಿನಯಂ ಮುನೇ ॥ ೨೯ ॥

ತತೋಽಮರಗುರುಃ ಶ್ರೀಮಾನ್ಪಾರ್ವತ್ಯಾ ಸಹಿತೋಽವ್ಯಯಃ ।
ತಸ್ಥೌ ವರ್ಷಸಹಸ್ರಂ ಹಿ ಮಹಾಮೋಹನಕೇ ಮುನೇ ॥ ೩೦ ॥

೨೫-೨೭ ಇವಳನ್ನು ಸ್ವರ್ಗದ ಯೋಗಕ್ಷೇಮಕ್ಕಾಗಿ ನನಗೆ ಕೊಡಬೇಕು. ಇವಳು ನನಗೆ ಸಹೋದರಿಯಾಗಿರಲಿ ಇವಳು ನಿನ್ನ ಕೋಶದಿಂದ ಹುಟ್ಟಿದವಳಾದುದರಿಂದ ಕೌಶಿಕಿ ಎನಿಸುವಳು ನಾನೂ ಕೌಶಿಕನಾಗಿರುತ್ತೇನೆ. ಎಂದು ಪ್ರಾರ್ಥಿಸಿ, ಕೊಡಲ್ಪಟ್ಟಳೆಂದು ತಿಳಿದು ರೂಪಶಾಲಿನಿಯಾದ ಆ ಕೌಶಿಕಿಯನ್ನು ಕರೆದುಕೊಂಡು ಇಂದ್ರನು ವಿಂಧ್ಯಪರ್ವತಕ್ಕೆ ಹೋದನು. ಅಲ್ಲಿ ಹೋಗಿ ಅವಳನ್ನು ಕುರಿತು, ನೀನು ಈ ವಿಂಧ್ಯಪರ್ವತದಲ್ಲಿ ವಿಂಧ್ಯವಾಸಿನಿ ಎಂಬ ಹೆಸರಿನಿಂದ ದೇವತೆಗಳಿಂದ ಪೂಜಿಸಲ್ಪಡುತ್ತಾ ಪ್ರಸಿದ್ಧಿಹೊಂದಿ ಇಲ್ಲಿಯೇ ಇರು ಎಂದನು.

೨೮-೩೦. ಹೀಗೆ ಹೇಳಿ ಇಂದ್ರನು ದೇವಿಯನ್ನು ಆ ವಿಂಧ್ಯಪರ್ವತದಲ್ಲಿ ಪ್ರತಿಷ್ಠಿಸಿ ಸಿಂಹವಾಹನವನ್ನೂ ಕೊಟ್ಟು ಸುರಶತ್ರುಗಳಿಗೆಲ್ಲಾ ನೀನು ನಾಶಕಳಾಗಿರು ಎಂದು ಹರಸಿ ಸ್ವರ್ಗಕ್ಕೆ ಬಂದನು. ಬ್ರಹ್ಮನಿಂದ ವರವನ್ನು ಹೊಂದಿದ ಉಮೆಯೂ ಸಹ ತನ್ನ ಮನೆಗೆ ಬಂದು ಮಹೇಶ್ವರನನ್ನು ವಿನಯದಿಂದ ವಂದಿಸಿ ಅವನ ಸೇವೆಯಲ್ಲಿ ನಿರತಳಾದಳು. ಅನಂತರ ದೇವಗುರುವಾದ ರುದ್ರನು ಪಾರ್ವತಿಯೊಡನೆ ವರ್ಷಪರ್ಯಂತವೂ ಮಹಾಮೋಹನದಲ್ಲಿ (ಮಹಾಸುರತದಲ್ಲಿ) ಆಸಕ್ತನಾಗಿ ನಿಂತನು.

ಮಹಾವೋಽಪಸ್ಥಿತೇ ರುದ್ರೇ ಭುವನಾಶ್ಚೇಲುರುದ್ಧತಾಃ ।
ಚುಕ್ಷುಭುಃ ಸಾಗರಾಸ್ಸಪ್ತ ದೇವಾಶ್ಚ ಭಯಮಾಗಮನ್ ॥ ೩೧ ॥

ತತಃ ಸುರಾ ಮಹೇಂದ್ರೇಣ ಬ್ರಹ್ಮಣಃ ಸದನಂ ಗತಾಃ ।
ಪ್ರಣಮ್ಯೋಚುಃ ಮಹೇಶಾನಂ ಜಗತ್ ಕ್ಷುಬ್ಧಂ ತು ಕಿಂತ್ವಿದಂ ॥ ೩೨ ॥

ತಾನುವಾಚ ಭವೋ ನೂನಂ ಮಹಾವೋಽಹನಕೇ ಸ್ಥಿತಃ ।
ತೇನಾಕ್ರಾಂತಾಸ್ತ್ರಿಮೇಲೋಕಾ ಜಗ್ಮುಃ ಕ್ಷೋಭಂ ದುರತ್ಯಯಂ ॥ ೩೩ ॥

ಇತ್ಯುಕ್ತ್ವಾ ಸೋಽಭವತ್ತೂಷ್ಣೀಂ ತತೋಽಪ್ಯೂಚುಃ ಸುರಾ ಹರಿಂ ।
ಆಗಚ್ಛ ಶಕ್ರ ಗಚ್ಛಾಮೋ ಯಾವತ್ತನ್ನ ಸಮಾಪ್ಯತೇ ॥ ೩೪ ॥

ಸಮಾಪ್ತೇ ಮೋಹನೇ ಬಾಲೋ ಯಃ ಸಮುತ್ಪತ್ಸ್ಯತೇಽವ್ಯಯಃ ।
ಸ ನೂನಂ ದೇವರಾಜಸ್ಯ ಪದಮೈಂದ್ರಂ ಹರಿಷ್ಯತಿ ॥ ೩೫ ॥

ತತೋಽಮರಾಣಾಂ ವಚನಾದ್ದಿವೌಕೋಬಲಘಾತಿನಃ ।
ಭಯಾತ್ ಜ್ಞಾನಂ ತತೋ ನಷ್ಟಂ ಭಾವಿಕರ್ಮಪ್ರಚೋದನಾತ್ ॥ ೩೬ ॥

೩೧-೩೫. ರುದ್ರನು ಮಹಾಸುರತದಲ್ಲಿ ಆಸಕ್ತನಾಗಲು ಪ್ರಪಂಚವೆಲ್ಲವೂ ಬಹಳವಾಗಿ ಚಲಿಸಿದವು ಸಪ್ತಸಮುದ್ರಗಳೂ ಕ್ಷೋಭೆಗೊಂಡವು. ಇದನ್ನು ನೋಡಿ ದೇವತೆಗಳೂ ಭಯಗೊಂಡರು. ಆಗ ದೇವತೆಗಳೆಲ್ಲರೂ ಇಂದ್ರನೊಡನೆ ಬ್ರಹ್ಮನ ಸಮಿಾಪಕ್ಕೆ ಹೊರಟರು. ಅಲ್ಲಿ ಜಗತ್ಪತಿಯಾದ ಚತುರ್ಮುಖನನ್ನು ನಮಸ್ಕರಿಸಿ ಜಗತ್ತೆಲ್ಲವೂ ಹೀಗೆ ಕ್ಷೋಭೆಗೊಳ್ಳಲು ಕಾರಣವೇನೆಂದು ಪ್ರಶ್ನೆಮಾಡಿದರು. ಆಗ ಅವರನ್ನು ಕುರಿತು ರುದ್ರನು ಮಹಾಸುರತದಲ್ಲಿ ಆಸಕ್ತನಾಗಿರಬೇಕು. ಆದುದರಿಂದಲೇ ಅದರಿಂದ ಆಕ್ರಾಂತವಾದ ಜಗತ್ತೆಲ್ಲಾ ಕ್ಷೋಭಹೊಂದುತ್ತಿದೆ ಎಂದು ಹೇಳಿ ಸುಮ್ಮನಾದನು. ಆಗ ದೇವತೆಗಳು ಇಂದ್ರನನ್ನು ಕುರಿತು ಎಲೈ, ಶುಕ್ರನೇ ರುದ್ರನ ಆ ಮಹಾಸುರತವು ಮುಗಿಯುವದರೊಳಗೆ ನಾವು ಅದರ ಪ್ರತೀಕಾರಕ್ಕಾಗಿ ಅಲ್ಲಿ ಹೋಗೋಣ ಬಾ, ಅದು ಮುಗಿದಲ್ಲಿ ಆಗ ಹುಟ್ಟುವ ಬಾಲನು ಮಹಾಸತ್ವನಾಗಿ ಇಂದ್ರನಾಗಿರುವ ನಿನ್ನ ಮಹಾಸ್ಥಾನವನ್ನೇ ಅಪಹರಿಸಿಯಾನು, ಎಂದರು.

೩೬-೩೯. ಅನಂತರ ದೇವತೆಗಳ ಮಾತಿನಂತೆ ದೇವತೆಗಳ ದರ್ಪನಾಶಕನು ಹುಟ್ಟುವನೆಂಬ ಭಯದಿಂದಲೂ, ಭವಿತವ್ಯತೆಗೆ ತಕ್ಕಂತೆ ಉಂಟಾದ ಕರ್ಮಪ್ರೇರಣೆಯಿಂದಲೂ ಇಂದ್ರನು ತನ್ನ ವಿವೇಕವನ್ನೂ ಹೋಗಲಾಡಿಸಿಕೊಂಡು ಅಜ್ಞಾನಿಯಂತೆ

ತತಃ ಶಕ್ರಃ ಸುರೈಸ್ಸಾರ್ಧಂ ವಹ್ನಿನಾ ಚ ಸಹಸ್ರದೃಕ್ ।
ಜಗಾಮ ಮಂದರಗಿರಿಂ ತಚ್ಛೃಂಗೇಷ್ವಪಿ ಸತ್ತಮ ॥ ೩೭ ॥

ಅಶಕ್ತಾಃ ಸರ್ವಏವೈತೆ ಪ್ರವೇಷ್ಟುಂ ತದ್ಭವಾಜಿರಂ ।
ಚಿಂತಯಿತ್ವಾ ತು ಸುಚಿರಂ ಪಾವಕಂ ತೆ ವ್ಯಸರ್ಜಯನ್ ॥ ೩೮ ॥

ಸಚಾಭ್ಯೇತ್ಯ ಸುರಶ್ರೇಷ್ಠೋ ದೃಷ್ಟ್ವಾ ದ್ವಾರೆ ಚ ನಂದಿನಂ ।
ದುಷ್ಪ್ರವೇಶಂ ಚ ತಂ ದೃಷ್ಟ್ವಾ ಚಿಂತಾಂ ವಹ್ನಿಃ ಪರಾಂ ಗತಃ ॥ ೩೯ ॥

ಸ ತು ಚಿಂತಾರ್ಣವೇ ಮಗ್ನಃ ಪ್ರಾಪಶ್ಯಚ್ಛಂಭುಸದ್ಮನಃ ।
ನಿಷ್ಕ್ರಾಮಂತೀಂ ಮಹಾಪಙ್ಕ್ತಿಂ ಹಂಸಾನಾಂ ವಿಮಲಾಂ ತಥಾ ॥ ೪೦ ॥

ಅಸಾವುಪಾಯ ಇತ್ಯುಕ್ತ್ವಾ ಹಂಸರೂಪೀ ಹುತಾಶನಃ ।
ವಂಚಯಿತ್ವಾ ಪ್ರತೀಹಾರಂ ಪ್ರವಿವೇಶ ಹರಾಜಿರಂ ॥ ೪೧ ॥

ಪ್ರವಿಶ್ಯ ಸೂಕ್ಷ್ಮಮೂರ್ತಿಶ್ಚ ಶಿರೋದೇಶೇ ಕಪರ್ದಿನಃ ।
ಪ್ರಾಹ ಪ್ರಹಸ್ಯ ಗಂಭೀರಂ ದೇವಾ ದ್ವಾರಿಸ್ಥಿತಾ ಇತಿ ॥ ೪೨ ॥

ಈ ಕಾರ್ಯಕ್ಕೆ ಒಪ್ಪಿ ಸಹಾಯಕನಾಗಿಯೂ ನಿಂತನು. ಅನಂತರ ಇತರ ದೇವತೆಗಳೊಡನೆಯೂ ಅಗ್ನಿಯೊಡನೆಯೂ ಸೇರಿ ಸಹಸ್ರಾಕ್ಷನಾದ ಆ ಇಂದ್ರನು ಮಂದರ ಪರ್ವತಕ್ಕೆ ಹೊರಟನು. ಅಲ್ಲಿ ಹರನ ತೇಜೋಮಹಿಮೆಯಿಂದ ಶಿಖರದಲ್ಲಿಯೂ ಈ ದೇವತೆಗಳು ರುದ್ರನ ಆಸ್ಥಾನಕ್ಕೆ ಪ್ರವೇಶಿಸಲು ಅಶಕ್ತರಾದರು. ಆಗ ದೇವತೆಗಳೆಲ್ಲರೂ ಆಲೋಚಿಸಿ ಬಹಳ ಕಾಲದ ಮೇಲೆ ಅಗ್ನಿಯನ್ನೇ ಪ್ರೇರಿಸಿ ಕಳುಹಿಸಿದರು. ಆ ಅಗ್ನಿಯೂ ಹೋಗಿ ಬಾಗಿಲಿನಲ್ಲಿದ್ದ ನಂದಿಯನ್ನು ನೋಡಿ ಈ ಸ್ಥಾನವು ಪ್ರವೇಶಿಸಲಸಾಧ್ಯವೆಂದು ತಿಳಿದು ಬಹಳ ಮಟ್ಟಿಗೂ ಚಿಂತಾಕ್ರಾಂತನಾದನು.

೪೦-೪೩. ಹಾಗೆ ಚಿಂತಾಕ್ರಾಂತನಾಗಿ ಕುಳಿತಿದ್ದ ಅಗ್ನಿಯು ಶಂಭುವಿನ ವಾಸಗೃಹದಿಂದ ಪಂಕ್ತಿಪಂಕ್ತಿಯಾಗಿ ಹೊರಹೊರಡುತ್ತಿರುವ ಶುಭ್ರವಾದ ಹಂಸಪಂಕ್ತಿಯನ್ನು ನೋಡಿದನು. ಇದೇ ಸರಿಯಾದ ಉಪಾಯವೆಂದು ತಿಳಿದು ಅಗ್ನಿಯು ಆಗ ಹಂಸರೂಪಿಯಾಗಿ ದ್ವಾರಪಾಲನಾಗಿದ್ದ ನಂದಿಯನ್ನು ವಂಚಿಸಿ ಹರನಿರುವ ತೊಟ್ಟಿಗೆ ಪ್ರವೇಶಿಸಿದನು. ಹೀಗೆ ಪ್ರವೇಶಿಸಿ ಸೂಕ್ಷ್ಮದೇಹದಿಂದ ಕೂಡಿ ಹರನ ತಲೆಯ ಹತ್ತಿರ ನಿಂತು ಗಂಭೀರತೆಯಿಂದ ನಗುತ್ತಾ ದೇವತೆಗಳು ಬಾಗಿಲಲ್ಲಿ ನಿಂತಿದ್ದಾರೆ ಎಂದನು.

ತಚ್ಛ್ರುತ್ವಾ ಸಹಸೋತ್ಥಾಯ ಪರಿತ್ಯಜ್ಯ ಗಿರೇಸ್ಸುತಾಂ ।
ವಿನಿಷ್ಕ್ರಾಂತೋಽಜಿರಾಚ್ಛರ್ವೋ ವಹ್ನಿನಾ ಸಹ ನಾರದ ॥ ೪೩ ॥

ವಿನಿಷ್ಕ್ರಾಂತೇ ಸುರಪತೌ ದೇವಾ ಮುದಿತಮಾನಸಾಃ ।
ಶಿರೋಭಿರವನೀಂ ಜಗ್ಮುಃ ಸೇಂದ್ರಾರ್ಕಶಶಿಪಾವಕಾಃ ॥ ೪೪ ॥

ತತಃ ಪ್ರೀತ್ಯಾ ಸುರಾನಾಹ ವದಧ್ವಂ ಕಾರ್ಯಮಾಶು ಮೇ ।
ಪ್ರಣಾಮಾವನತಾ ಯೋಹಿ ದಾಸ್ಯೇಽಹಂ ವರಮುತ್ತಮಂ ॥ ೪೫ ॥

ದೇವಾ ಊಚುಃ

ಯದಿ ತುಷ್ಟೋಽಸಿ ದೇವಾನಾಂ ವರಂ ದಾತುಮಿಹೇಚ್ಛಸಿ ।
ತದಿಹ ತ್ಯಜ್ಯತಾಂ ತಾವನ್ಮಹಾನ್ಮೈಥುನಮೀಶ್ವರ ॥ ೪೬ ॥

ಈಶ್ವರ ಉವಾಚ

ಏವಂ ಭವತು ಸಂತ್ಯಕ್ತೋ ಮಯಾ ಭಾವೋಽಮರೋತ್ತಮಾಃ ।
ಮಮೇದಂ ತೇಜ ಉದ್ರಿಕ್ತಂ ಕಶ್ಚಿದೇವ ಪ್ರತೀಚ್ಛತು ॥ ೪೭ ॥

ಆ ಮಾತನ್ನು ಕೇಳಿದೊಡನೆಯೇ ಹರನು ಜಾಗ್ರತೆಯಿಂದ ಎದ್ದು ಪಾರ್ವತಿಯನ್ನು ಬಿಟ್ಟು ಅಗ್ನಿಯೊಡನೆ ಆ ತೊಟ್ಟಿಯಿಂದ ಹೊರಕ್ಕೆ ಬಂದನು.

೪೪-೪೬. ಈಶ್ವರನು ಹೊರಗೆ ಹೊರಟು ಬರಲಾಗಿ ದೇವತೆಗಳೆಲ್ಲರೂ ಸಂತುಷ್ಟರಾಗಿ ಇಂದ್ರ, ಸೂರ್ಯ, ಚಂದ್ರ, ಅಗ್ನಿ ಇವರೊಡನೆ ಎಲ್ಲರೂ ಭೂಮಿಗೆ ತಲೆಬಾಗಿ ಅವನಿಗೆ ವಂದಿಸಿದರು. ಆಗ ಸಂತುಷ್ಟನಾದ ಶಂಕರನು ನೀವು ಪ್ರಣಾಮಮಾಡಿ ಭಕ್ತಿಯಿಂದ ಶಿರಬಾಗಿಸಿ ನಿಂತಿರುವದರಿಂದ ನಿಮಗೆ ಇಷ್ಟವಾದ ವರವನ್ನು ನಾನು ಕೊಡಲು ನಿಂತಿರುವೆನು ನಿಮ್ಮ ಕಾರ್ಯವೇನು ಜಾಗ್ರತೆ ಹೇಳಿರಿ ಎಂದನು. ಆಗ ದೇವತೆಗಳು ದೇವತೆಗಳ ವಿಷಯದಲ್ಲಿ ನೀನು ಸಂತುಷ್ಟನಾಗಿದ್ದು ವರವನ್ನು ಕೊಡಲು ಇಚ್ಛೆಪಟ್ಟಲ್ಲಿ ನಾವು ಈ ವರವನ್ನು ಪ್ರಾರ್ಥಿಸುತ್ತೇವೆ. ನೀನು ಪ್ರಾರಂಭಿಸಿರುವ ಈ ಮಹಾಮೈಥುನವನ್ನು ಬಿಟ್ಟು ಬಿಡಬೇಕು.

೪೭-೪೯. ಈ ಮಾತನ್ನು ಕೇಳಿ ಈಶ್ವರನು, ಹಾಗೆಯೇ ಆಗಲಿ ನಾನು ಆ ಮೈಥುನವಿಷಯವಾದ ಮನೋವೃತ್ತಿಯನ್ನು ಬಿಟ್ಟಿದ್ದೇನೆ. ಆದರೆ ಸ್ವಸ್ಥಲದಿಂದ ಚಲಿಸಿ ಉದ್ರಿಕ್ತವಾಗಿರುವ ನನ್ನ ಈ ತೇಜಸ್ಸನ್ನು ಯಾರಾದರೊಬ್ಬರು ಗ್ರಹಿಸಬೇಕು

ಪುಲಸ್ತ್ಯ ಉವಾಚ

ಇತ್ಯುಕ್ತಾಃ ಶಂಭುನಾ ದೇವಾಃ ಸೇಂದ್ರಚಂದ್ರದಿವಾಕರಾಃ ।
ಅಸೀದಂತ ಯಥಾ ಮಗ್ನಾಃ ಪಂಕೇ ಗಾವಸ್ತಥಾ ಸುರಾಃ ॥ ೪೮ ॥

ಸೀದತ್ಸು ದೈವತೇಷ್ವೇವಂ ಹುತಾಶೋಽಭ್ಯೇತ್ಯ ಶಂಕರಂ ।
ಪ್ರೋವಾಚ ಮುಂಚ ತೇಜಸ್ತ್ವಂ ಪ್ರತೀಚ್ಛಾಮ್ಯೇವ ಶಂಕರ ॥ ೪೯ ॥

ತತೋ ಮುಮೋಚ ಭಗವಾನ್ ತದ್ರೇತಃ ಸ್ಕನ್ನಮೇವ ತು ।
ಜಲಂ ತೃಷಾರ್ತೋ ರ್ವೈ ಯದ್ವತ್ತೈಲಪಾನಂ ಪಿಪಾಸಿತಃ ॥ ೫೦ ॥

ತತಃ ಪೀತೇ ರೇತಸಿ ವೈ ಶಾರ್ವೇ ದೇವೇನ ವಹ್ನಿನಾ ।
ಸ್ವಸ್ಥಾಃ ಸುರಾಃ ಸಮಾಮಂತ್ರ್ಯ ಹರಂ ಜಗ್ಮುಃ ತ್ರಿವಿಷ್ಟಪಂ ॥ ೫೧ ॥

ಸಂಪ್ರಯಾತೇಷು ದೇವೇಷು ಹರೋಽಪಿ ನಿಜಮಂದಿರಂ ।
ಸಮಭ್ಯೇತ್ಯ ಮಹಾದೇವೀಮಿದಂ ವಚನಮಬ್ರವೀತ್ ॥ ೫೨ ॥

(ಸ್ವೀಕರಿಸಬೇಕು) ಎಂದನು. ಹೀಗೆ ಹೇಳಲ್ಪಟ್ಟ ಇಂದ್ರ ಚಂದ್ರ ಸೂರ್ಯನೇ ಮೊದಲಾದ ದೇವತೆಗಳು ಉಪಾಯಾಂತರವನ್ನರಿಯದೆ ಕೆಸರಿನಲ್ಲಿ ಮುಳುಗಿದ ಗೋವುಗಳಂತೆ ಸ್ತಬ್ಧರಾಗಿ ಕುಸಿದು ನಿಂತರು. ದೇವತೆಗಳೆಲ್ಲರೂ ಹೀಗೆ ದೀನರಾಗಲಾಗಿ ಅಗ್ನಿಯು ತಾನು ಮುಂದೆ ಬಂದು ಶಂಕರನೇ ನಿನ್ನ ತೇಜಸ್ಸನ್ನು ಬಿಡು ನಾನು ಪರಿಗ್ರಹಿಸುತ್ತೇನೆ ಎಂದನು. ಆಗ ರುದ್ರನು ಸ್ವಸ್ಥಾನದಿಂದ ಚ್ಯುತಿಹೊಂದಿದ್ದ ಆ ರೇತಸ್ಸನ್ನು ಹೊರಗೆಬಿಟ್ಟನು.

೫೦-೫೪. ಬಾಯಾರಿಕೆಯಿಂದ ಕೂಡಿದವನು ನೀರನ್ನು ಹೀರುವಂತೆಯೂ ಹಸಿವಿನಿಂದ ಕೂಡಿರುವವನು ಆಹಾರರೂಪವಾದ ತೈಲವನ್ನು ಹೀರುವಂತೆಯೂ ಅಗ್ನಿಯು ಅದನ್ನು ತನ್ನ ತೇಜಸ್ಸಿನಿಂದ ಹೀರಿದನು. ಅಗ್ನಿಯು ಈರೀತಿ ವರ್ತಿಸ ಆ ತೇಜಸ್ಸನ್ನು ಹೀರಿದಮೇಲೆ ದೇವತೆಗಳೆಲ್ಲರೂ ನಿಶ್ಚಿಂತರಾಗಿ ಹರನನ್ನು ಮಾತನಾಡಿಸಿ ಸ್ವರ್ಗಕ್ಕೆ ಹೊರಟುಹೋದರು. ದೇವತೆಗಳೆಲ್ಲರೂ ಹೊರಟುಹೋದನಂತರ ಹರನೂ ತನ್ನ ಮನೆಗೆ ಹೋಗಿ ಮಹಾದೇವಿಯನ್ನು ಕುರಿತು ದೇವಿ, ದೇವತೆಗಳು ಇಲ್ಲಿ ಬಂದು ಪ್ರಯತ್ನಪೂರ್ವಕವಾಗಿ ಅಗ್ನಿಯನ್ನು ಕಳುಹಿಸಿ ನನ್ನನ್ನು ಬಲಮಾಡಿ

ದೇವಿ ದೇವೈರಿಹಾಭ್ಯೇತ್ಯ ಯತ್ನಾತ್ಪ್ರೇಷ್ಯ ಹುತಾಶನಂ ।
ತತಃ ಪ್ರೋಕ್ತೋ ನಿಷಿದ್ಧಸ್ತು ಪುತ್ರೋತ್ಪತ್ತಿಂ ತವೋದರಾತ್ ॥ ೫೩ ॥

ಸಾಪಿ ಭರ್ತುರ್ವಚಃ ಶ್ರುತ್ವಾ ಕ್ರುದ್ಧಾ ರಕ್ತಾಂತಲೋಚನಾ ।
ಶಶಾಪ ದೇವತಾಃ ಸರ್ವಾಃ ನಷ್ಟಪುತ್ರೋದ್ಭವಾ ಶಿವಾ ॥ ೫೪ ॥

ಯಸ್ಮಾನ್ನೇಚ್ಛಂತಿ ತೇ ದುಷ್ಟಾ ಮಮ ಪುತ್ರಂ ಮಮೌರಸಂ ।
ತಸ್ಮಾತ್ತೇ ನ ಜನಿಷ್ಯಂತಿ ಸ್ವಾಸು ಯೋಷಿತ್ಸು ಪುತ್ರಕಾನ್ ॥ ೫೫ ॥

ಏವಂ ಶಪ್ತ್ವಾ ಸುರಾನ್ ಗೌರೀ ಶೌಚಶಾಲಾಮುಪಾಗಮತ್ ।
ಆಹೂಯ ಮಾಲಿನೀಂ ಸ್ನಾತುಂ ಮತಿಂ ಚಕ್ರೇ ತಪೋಧನ ॥ ೫೬ ॥

ಮಾಲಿನೀ ಸುರಭಿಂ ಗೃಹ್ಯ ಶ್ಲಕ್ಷ್ಣಮುದ್ವರ್ತನಂ ಶುಭಾ ।
ದೇವ್ಯಂಗಮುದ್ವರ್ತಯತೇ ಕರಾಭ್ಯಾಂ ಕನಕಪ್ರಭಾ ॥ ೫೭ ॥

ತಚ್ಛೌಚಂ ಪಾರ್ವತೀ ನೈವ ಮೇನೇ ಕೀಟಗುಣೇನ ಹಿ ।
ಉದ್ವರ್ತ್ಯ ಪಾರ್ವತೀಂ ತಾಂ ತು ಶುಭೇನೋದ್ವರ್ತನೇನ ಚ ॥ ೫೮ ॥

ಕ್ಕೊಂಡು ನಿನ್ನ ಉದರದಲ್ಲಿ ಪುತ್ರನನ್ನು ಉತ್ಪಾದನೆಮಾಡಕೂಡದೆಂದು ನಿಷೇಧಿಸಿರುತ್ತಾರೆ ಎಂದು ಈ ವೃತ್ತಾಂತವನ್ನು ಹೇಳಿದನು. ಆಗ ಪಾರ್ವತಿಯು ಪತಿಯ ಆ ಮಾತನ್ನು ಕೇಳಿ ಕೋಪದಿಂದ ಕೆಂಪಾದ ಕಣ್ಣುಗಳನ್ನು ಅರಳಿಸುತ್ತಾ ತನಗೆ ಪುತ್ರೋತ್ಪತ್ತಿಯು ತಡೆಯಲ್ಪಟ್ಟುದದರಿಂದ ಎಲ್ಲಾ ದೇವತೆಗಳನ್ನೂ ಹೀಗೆ ಶಪಿಸಿದಳು.

೫೫-೫೭. ಯಾವ ಕಾರಣದಿಂದ ಈ ದುಷ್ಟರಾದ ದೇವತೆಗಳು ನನಗೆ ಔರಸ ಪುತ್ರನಾಗದಿರುವಂತೆ ನಿಷೇಧಿಸಿರುವರೋ ಈ ಕಾರಣದಿಂದಲೇ ಅವರೂ ತಮ್ಮತಮ್ಮ ಪತ್ನಿಗಳಲ್ಲಿ ಪುತ್ರರನ್ನು ಹೊಂದದಿರಲಿ ಎಂದು ಶಪಿಸಿ ಗೌರಿಯು ಶೌಚಶಾಲೆಗೆ ಹೊರಟಳು. ಪರಿಚಾರಿಣಿಯಾದ ಮಾಲಿನಿಯನ್ನು ಕರೆದು ತಾನು ಸ್ನಾನಮಾಡಲು ಆಶಿಸಿದಳು. ಆಗ ಮಾಲಿನಿಯು ಸುಗಂಧಿಯಾಗಿಯೂ ನುಣುಪಾಗಿಯೂ ಇರುವ ಮೈಗೆ ಉಜ್ಜುವ ಚೂರ್ಣವನ್ನು ತೆಗೆದುಕೊಂಡು ಸ್ನಾನಕ್ಕೆ ಕುಳಿತ ದೇವಿಯ ಅಂಗವನ್ನು ಕೈಗಳಿಂದ ಉಜ್ಜಿದಳು.

೫೮-೬೦. ಆ ಅಂಗಗಳಿಂದ ಹೊರಬಿದ್ದ ಆ ಕೊಳೆಯನ್ನು ಹುಳುವಿನಂತೆ ಚಲಿಸುತ್ತಿದ್ದರೂ ಆಗ ಪಾರ್ವತಿಯು ಗಮನಿಸಲಿಲ್ಲ. ಅನಂತರ ಶುಭವಾದ ಸ್ನಾನ

ಮಾಲಿನೀ ತೂರ್ಣಮಗಮದ್ಗೃಹಂ ಸ್ನಾನಸ್ಯ ಕಾರಣಾತ್ ।
ತಸ್ಯಾಂ ಗತಾಯಾಂ ಶೈಲೇಯೀ ಮಲಾಚ್ಚಕ್ರೆ ಗಜಾನನಂ ॥ ೫೯ ॥

ಚತುರ್ಭುಜಂ ಪೀನವಕ್ಷಃ ಪುರುಷಂ ಲಕ್ಷಣಾನ್ವಿತಂ ।
ಕೃತ್ವೋತ್ಸಸರ್ಜ ತಂ ಭೂಮ್ಯಾಂ ಸ್ಥಿತಾ ಭದ್ರಾಸನೇ ಪುನಃ ॥ ೬೦ ॥

ಮಾಲಿನೀ ತಚ್ಛಿರಸ್ನಾನಂ ದದೌ ವಿಹಸತೀ ತದಾ ।
ಈಷದ್ಧಾಸಮುಖೀಂ ದೃಷ್ಟ್ವಾ ಮಾಲಿನೀಂ ಪ್ರಾಹ ನಾರದ ॥ ೬೧ ॥

ಕಿಮರ್ಥಂ ಭೀರು ಶನಕೈರ್ಹಸಸಿ ತ್ವಮತೀವ ಚ ।
ಸಾಥೋವಾಚ ಹಸಾಮ್ಯೇವಂ ಭವತ್ಯಾಸ್ತನಯಃ ಕಿಲ ॥ ೬೨ ॥

ಭವಿಷ್ಯತೀತಿ ದೇವೇನ ಪ್ರೋಕ್ತೋ ನಂದಿಗಣಾಧಿಪಃ ।
ತಚ್ಛ್ರುತ್ವಾ ಮಮಹಾಸೋಽಯಂ ಸಂಜಾತೋದ್ಯ ಕೃಶೋದರಿ ॥ ೬೩ ॥

ಚೂರ್ಣದಿಂದ ಆ ಪಾರ್ವತಿಯನ್ನು ಚೊಕ್ಕಟವಾಗಿ ಸ್ನಾನಮಾಡಿಸಿ ಮಾಲಿನಿಯು ಸ್ನಾನಕ್ಕಾಗಿ ಜಾಗ್ರತೆಯಾಗಿ ಮನೆಗೆ ಬಂದಳು. ಮಾಲಿನಿಯು ಇತ್ತ ಬಂದಮೇಲೆ ಪಾರ್ವತಿಯು ಆ ಮಲದಿಂದ ಚತುರ್ಭುಜನಾಗಿಯೂ ವಿಶಾಲಹೃದಯನಾಗಿಯೂ ಗಜಾನನನಾಗಿಯೂ ಇರುವ ಮಹಾಪುರುಷಲಕ್ಷಣವುಳ್ಳ ಒಂದು ಪುರುಷಾಕೃತಿಯನ್ನು ಮಾಡಿದಳು. ಹಾಗೆ ನಿರ್ಮಿಸಿ ಅವನನ್ನು ಭೂಮಿಯಮೇಲೆ ಬಿಟ್ಟು ಪುನಃ ತಾನು ಭದ್ರಾಸನದಲ್ಲಿ ಕುಳಿತಳು.

೬೧-೬೪. ಆಗ ಮಾಲಿನಿಯು ಸ್ವಲ್ಪ ನಗುತ್ತಾ ಪಾರ್ವತಿಗೆ ಶಿರಸ್ನಾನ ಮಾಡಿಸಲನುವಾದಳು. ಆಗ ಮಂದಹಾಸದಿಂದಿರುವ ಮಾಲಿನಿಯನ್ನು ನೋಡಿ ದೇವಿಯು ಎಲೈ ಭೀರುವೇ, ಏತಕ್ಕೆ ನೀನು ಮೆಲ್ಲಗೆ ಬಹಳವಾಗಿ ನಗುತ್ತಿದ್ದೀಯೆ ಎಂದು ಪ್ರಶ್ನೆಮಾಡಿದಳು. ಆಗ ಮಾಲಿನಿಯು ನಿನಗೆ ಪುತ್ರನುಂಟಾಗುವನೆಂದು ಮಹೇಶನು ಗಣಾಧಿಪನಾದ ನಂದಿಯೊಡನೆ ಹೇಳಿರುವನು. ಆ ಮಾತನ್ನು ಕೇಳಿದ್ದ ನನಗೆ ನಿನ್ನ ಈ ಪುತ್ರನನ್ನು ನೋಡಿ ನಗುವು ಬಂದಿತು ಎಂದು ಉತ್ತರಿಸಿದಳು. ಏಕೆಂದರೆ ದೇವಿಯಾದ ನೀನು ಪುತ್ರಕಾಮೆಯಾಗಿರುವೆ. ಮಹೇಶನಾದರೋ ದೇವತೆಗಳಿಂದ ತಡೆಯಲ್ಪಟ್ಟಿದ್ದಾನೆ (ಆದುದರಿಂದ ಇಂತಹ ಪುತ್ರನನ್ನೇ ನಿನ್ನ ಪತಿಯು ನಿನಗೆ ಸಂಕಲ್ಪಿಸಿರುವನೆಂದು ತಿಳಿದು ನನಗೆ ನಗುಬಂದಿತೆಂದು ತಾತ್ಪರ್ಯ.) ಈ

ಯಸ್ಮಾದ್ದೇವೀ ಪುತ್ರಕಾಮಾ ಶಂಕರೋ ವಿನಿವಾರಿತಃ ।
ಏತಚ್ಛ್ರುತ್ವಾ ವಚೋ ದೇವೀ ಸಸ್ನೌ ತತ್ರ ವಿಧಾನತಃ ॥ ೬೪ ॥

ಸ್ನಾತ್ವಾರ್ಚ್ಯ ಶಂಕರಂ ಭಕ್ತ್ಯಾ ಸಮಭ್ಯಾಗಾದ್ಗೃಹಂ ಪ್ರತಿ ।
ತತಃ ಶಂಭುಃ ಸಮಾಗತ್ಯ ತಸ್ಮಿನ್ ಭದ್ರಾಸನೇಽಪಿ ಚ ॥ ೬೫ ॥

ಸ್ನಾತಸ್ತಸ್ಯ ತತಸ್ತಸ್ಮಾತ್ಸ್ಥಿತಃ ಸ ಮಲಪೂರುಷಃ ।
ಉಮಾಸ್ವೇದಭವಸ್ವೇದಂ ಜಲಭೂಮಿಸಮನ್ವಿತಂ ॥ ೬೬ ॥

ತತ್ಸಂಪರ್ಕಾತ್ಸಮುತ್ತಸ್ಥೌ ಫೂತ್ಕೃತ್ಯ ಕರಮುತ್ತಮಂ ।
ಅಪತ್ಯಂ ಹಿ ವಿದಿತ್ವಾ ಚ ಪ್ರೀತಿಮಾನ್ ಭುವನೇಶ್ವರಃ ॥ ೬೭ ॥

ತಂ ಚಾದಾಯ ಹರೋ ನಂದಿಮುವಾಚ ಭಗನೇತ್ರಹಾ ।
ರುದ್ರಃ ಸ್ನಾತ್ವಾರ್ಚ್ಯದೇವಾದೀನ್ನಾದ್ಭಿರಗ್ನಿಂ ಪಿತ್ರ್ಯಾನ್ನಪಿನಪಿ ॥ ೬೮ ॥

ಜಪ್ತ್ವಾ ಸಹಸ್ರನಾಮಾನ ಮುಮಾಪಾರ್ಶ್ವಮುಪಾಗತಃ ।
ಸಮೇತ್ಯ ದೇವೀಂ ವಿಹಸನ್ ಶಂಕರಃ ಶೂಲಧೃಗ್ವಚಃ ॥ ೬೯ ॥

ಮಾತನ್ನು ಕೇಳಿದೊಡನೆಯೇ ದೇವಿಯು ಪುತ್ರಪ್ರಸವನಿಮಿತ್ತಕವಾದ ಶಿರಸ್ನಾನವನ್ನೇ ಯಥಾವಿಧಿಯಾಗಿ ನೆರವೇರಿಸಿದಳು.

೬೫ ೬೭. ಸ್ನಾನಮಾಡಿ ಬಂದು ಶಂಕರನನ್ನು ಭಕ್ತಿಯಿಂದ ಪೂಜಿಸಿ ಮನೆಗೆ ಬಂದಳು. ಅನಂತರ ಶಂಭುವೂ ಬಂದು ಸ್ನಾನಮಾಡಿ ಆ ಭದ್ರಾಸನದಲ್ಲಿ ಕುಳಿತನು. ಆ ಮಲಪೂರುಷನೂ ಅಲ್ಲಿಯೇ ಕುಳಿತಿದ್ದನು. ಆಗ ಹರನು ಉಮಾದೇವಿಯ ಬೆವರಿನ ಸಂಪರ್ಕದಿಂದ ಜಲ ಮತ್ತು ಭೂಮಿಯ ಭಾಗಗಳು ವ್ಯಾಮಿಶ್ರಣ ಹೊಂದಿ ತರುವಾಯ ಅವುಗಳ ಸಂಪರ್ಕದಿಂದ ಸೊಂಡಿಲನ್ನು ಫೂತ್ಕರಿಸುತ್ತಾ ಎದ್ದುಬಂದ ಈ ಪುರುಷನನ್ನು ತನ್ನ ಪುತ್ರನೆಂದು ಭಾವಿಸಿ ಅವನಲ್ಲಿ ಪ್ರೀತಿಹೊಂದಿದನು. ಆ ಪುರುಷನನ್ನು ಎತ್ತಿಕೊಂಡು ಹರನು ನಂದಿಯನ್ನು ಕುರಿತು ಇವನೇ ನಾನು ಹೇಳಿದ್ದ ಪುತ್ರನು ಎಂದನು.

೬೮-೭೧. ರುದ್ರನೂ ಸ್ನಾನಮಾಡಿ ದೇವಾದಿಗಳನ್ನೂ ಪೂಜಿಸಿ ಪಿತೃಗಳನ್ನೂ ತೀರ್ಥದಿಂದಲೂ ಅಗ್ನಿಯನ್ನು ಹವಿರ್ದ್ರವ್ಯದಿಂದಲೂ ಸಂತೋಷಪಡಿಸಿ ಸಹಸ್ರನಾಮವನ್ನು ಜಪಿಸಿ ಪಾರ್ವತಿಯ ಸಮೀಪಕ್ಕೆ ಬಂದನು. ದೇವಿಯು ಸಮೀಪವನ್ನು ಸೇರಿದ

ಪ್ರಾಹ ತ್ವಂ ಪಶ್ಯ ಶೈಲೇಯಿ ತ್ವತ್ಸುತಂ ಗುಣಸಂಯುತಂ ।
ಇತ್ಯುಕ್ತ್ವಾ ಪರ್ವತಸುತಾ ಹ್ಯುಪೇತ್ಯಾಪಶ್ಯದದ್ಭುತಂ ॥ ೨೦ ॥

ಯಃ ತ್ವದಂಗಮಲಾದ್ದಿವ್ಯಃ ಕೃತೋ ಗಜಮುಖೋನರಃ ।
ತತಃ ಪ್ರೀತಾ ಗಿರಿಸುತಾ ತಂ ಪುತ್ರಂ ಪರಿಷಸ್ವಜೆ ॥ ೨೧ ॥

ಮೂರ್ಧ್ನಿ ಚೈನಮುಪಾಘ್ರಾಯ ತತಶ್ಶರ್ವೋಽಬ್ರವೀದುಮಾಂ ।
ನಾಯಕೇನ ವಿನಾ ದೇವಿ ಮಯಾ ಭೂತೋಽಪಿ ಪುತ್ರಕಃ ॥ ೨೨ ॥

ಯಸ್ಮಾಜ್ಜಾತಸ್ತತೋ ನಾಮ್ನಾ ಭವಿಷ್ಯತಿ ವಿನಾಯಕಃ ।
ಏಷ ವಿಘ್ನಸಹಸ್ರಾಣಿ ದೇವಾದೀನಾಂ ಹನಿಷ್ಯತಿ ॥ ೨೩ ॥

ಪೂಜಯಿಷ್ಯಂತಿ ದೇವಾಶ್ಚ ದೇವಿಲೋಕಾಶ್ಚರಾಚರಾಃ ।
ಇತ್ಯೇವಮುಕ್ತ್ವಾ ದೇವ್ಯಾಸ್ತು ದತ್ತವಾಂಸ್ತನಯಂ ಸಹಿ ॥ ೨೪ ॥

ಸಹಾಯಂ ತು ಗಣಶ್ರೇಷ್ಠಂ ನಾಮ್ನಾ ಖ್ಯಾತಂ ಘಟೋದರಂ ।
ತಥಾ ಮಾತೃಗಣಾಘೋರಾ ಭೂತಾ ವಿಘ್ನಕರಾಶ್ಚ ಯೇ ॥ ೨೫ ॥

ಶಂಕರನು ನಗುತ್ತಾ ಎಲೈ ಶೈಲಪುತ್ರಿಯೇ, ಗುಣಶಾಲಿಯಾದ ಇವನು ನಿನ್ನ ಪುತ್ರನು. ನಿನ್ನ ಅಂಗದ ಮಲದಿಂದ ಮಾಡಲ್ಪಟ್ಟ ಗಜಮುಖನಾದ ದಿವ್ಯಪುರುಷನು ಇವನನ್ನು ನೋಡು ಎಂದು ಹೇಳಲಾಗಿ ಪಾರ್ವತಿಯು ಪತಿಯ ಪ್ರೇಮದಿಂದ ಆಶ್ಚರ್ಯಕರನಾಗಿದ್ದ ಆ ಮಗನನ್ನು ಹತ್ತಿರಕ್ಕೆ ಬಂದು ನೋಡಿದಳು. ನೋಡಿ ಸಂತೋಷಗೊಂಡ ಆ ಪಾರ್ವತಿಯು ಆ ಪುತ್ರನನ್ನು ತಬ್ಬಿಕೊಂಡು ಮುದ್ದಾಡಿದಳು.

೨೨-೨೬. ಶಂಕರನೂ ಸಹ ಆ ಗಜಾನನನ್ನು ಪುತ್ರಪ್ರೇಮದಿಂದ ತಲೆಯನ್ನು ಆಘ್ರಾಣಿಸಿ ಪಾರ್ವತಿಯನ್ನು ಕುರಿತು ಇವನು ನಾಯಕನಾದ ನನ್ನ ಸಂಬಂಧವಿಲ್ಲದೆ ಹುಟ್ಟಿದುದರಿಂದ ಈ ಪುತ್ರನು ವಿನಾಯಕನೆಂಬ ಹೆಸರಿನಿಂದ ಪ್ರಖ್ಯಾತನಾಗುತ್ತಾನೆ. ಇವನು ದೇವತೆಗಳಿಗೆ ಸಂಭವಿಸಬಹುದಾದ ಅನೇಕ ವಿಘ್ನಗಳನ್ನೂ ನಾಶಪಡಿಸು ತ್ತಾನೆಯಾದುದರಿಂತ ದೇವತೆಗಳೂ ಉಳಿದ ಚರಾಚರ ಪ್ರಾಣಿಗಳೂ ಸಹ ಇವನನ್ನು ಪೂಜಿಸುತ್ತಾರೆ ಎಂದು ಹೇಳಿ ಆ ಮಗನನ್ನು ಪಾರ್ವತಿಗೆ ಕೊಟ್ಟನು. ಅವನ ಸಹಾಯಾರ್ಥವಾಗಿ ಘಟೋದರನೆಂಬ ಪ್ರಸಿದ್ಧನಾದ ಗಣಶ್ರೇಷ್ಠನನ್ನೂ ಅವನ ರಕ್ಷಣೆಗಾಗಿ ಶಾಂತರಾದ ಮಾತೃಗಳನ್ನೂ ಅವಿಘ್ನಕರರಾದ ಭೂತಗಳನ್ನೂ ಕೊಟ್ಟನು. ಅವರೆಲ್ಲರೂ

ತೆ ಸರ್ವೇ ಪರಮೇಶೇನ ದೇವ್ಯಾಃ ಪ್ರೀತ್ಯೋಪಪಾದಿತಾಃ ।
ದೇವೀ ಚ ತಂ ಸುತಂ ದೃಷ್ಟ್ವಾ ಪರಾಂ ಮುದಮವಾಪ ಚ ॥ ೭೬ ॥

ರೇಮೇಥ ಶಂಭುನಾ ಸಾರ್ಧಂ ಮಂದಿರೆ ಚಾರುಕಂದರೆ ।
ಏವಂ ಭೂಯೋಽಭವದ್ದೇವೀ ಇಯಂ ಕಾತ್ಯಾಯನೀ ವಿಭೋಃ ।
ಯಾ ಜಘಾನ ಮಹಾದೈತ್ಯೌ ಪುರಾ ಶುಂಭನಿಶುಂಭಕೌ ॥ ೭೭ ॥

ಏತತ್ತವೋಕ್ತಂ ವಚನಂ ಸುಭಾಷ್ಯಂ
ಯಥೋದ್ಭವಃ ಪರ್ವತತೋ ಮೃಡಾನ್ಯಾಃ
ಸ್ವರ್ಗ್ಯಂ ಯಶಸ್ಯಂ ಚ ತಥಾಽಘಹಾರಿ ।
ಆಖ್ಯಾನಮೂರ್ಜಸ್ಕರಮದ್ರಿಪುತ್ರ್ಯಾಃ ॥ ೭೮ ॥

ಇತಿ ಶ್ರೀ ವಾಮನಪುರಾಣೇ ಉಮಾಸಂಭವೇ ವಿನಾಯಕೋತ್ಪತ್ತಿರ್ನಾಮ
ಚತುಃಪಂಚಾಶತ್ತಮೋಽಧ್ಯಾಯಃ

ದೇವಿಯ ಪ್ರೀತಿಯನ್ನು ಪುರಸ್ಕರಿಸಿ ಪರಮೇಶ್ವರನಿಂದಲೇ ಏರ್ಪಡಿಸಲ್ಪಟ್ಟರು. ದೇವಿಯೂ ಕೂಡ ಸಸಹಾಯನಾದ ಆ ಮಗನನ್ನು ನೋಡಿ ಬಹಳ ಸಂತೋಷಪಟ್ಟಳು.

೭೭-೭೮. ಅನಂತರ ಸಂತುಷ್ಟಳಾದ ಪಾರ್ವತಿಯು ಶಂಕರನೊಡನೆ ರಮಣೀಯವಾದ ತನ್ನ ಮಂದಿರದಲ್ಲಿ ವಿಹರಿಸುತ್ತಿದ್ದಳು. ಈ ಪ್ರಕಾರ ಮೊದಲು ಶುಂಭ ನಿಶುಂಭರೆಂಬ ದೈತ್ಯರನ್ನು ನಾಶಪಡಿಸಿದ ಕಾತ್ಯಾಯಿನಿಯೇ ಪುನಃ ಪಾರ್ವತಿಯ ರೂಪದಿಂದ ಭವನ ಪತ್ನಿಯಾಗಿ ಉದಯಿಸಿದಳು. ಹಿಮವಂತನಿಂದ ಪಾರ್ವತಿಯು ಉದ್ಭವಿಸಿದಳೆಂದು ಇದುವರಿಗೆ ನಿನಗೆ ಹೇಳಿದ ಈ ಕಥೆಯೂ ಅನಂತರ ಪಾರ್ವತಿಯನ್ನು ಅಧಿಕರಿಸಿದ ಕಥೆಯೂ ಸಹ ಬಹಳಮಟ್ಟಿಗೂ ಸ್ವರ್ಗಪ್ರದವಾಗಿಯೂ ಯಶಸ್ಕರವಾಗಿಯೂ ಸರ್ವಪಾಪವಿನಾಶಕವಾಗಿಯೂ ತೇಜಃಪ್ರದವಾಗಿಯೂ ಇರುವದ್ದರಿಂದ ಸರ್ವರಿಂದಲೂ ಈ ಕಥೆಯು ಓದಲ್ಪಡತಕ್ಕದ್ದು ಅಥವಾ ಕೇಳಲ್ಪಡತಕ್ಕದ್ದು.

ಇಲ್ಲಿಗೆ ಶ್ರೀ ವಾಮನಪುರಾಣದ ಉಮಾಸಂಭವದಲ್ಲಿ ವಿನಾಯಕೋತ್ಪತ್ತಿ ಎಂಬ
ಐವತ್ತನಾಲ್ಕನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯ ೫೪

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟ ಮಹಾಭವನದಲ್ಲಿ ಶಂಕರನು ಗೃಹಸ್ಥಾಶ್ರಮದಲ್ಲಿ ಪಾರ್ವತಿಯೊಡನೆ ಸುಖದಿಂದಿದ್ದನೆಂದೂ ಒಂದಾನೊಂದು ಕಾಲದಲ್ಲಿ ಅವಳನ್ನು ಕುರಿತು ಶಂಕರನು ಕಾಲಿ ಎಂದು ಸಂಬೋಧಿಸಿದುದಕ್ಕಾಗಿ ಕೋಪಗೊಂಡ ಪಾರ್ವತಿಯು ತನ್ನ ರೂಪಪರಿವರ್ತಿಗಾಗಿ ಹರನ ಅನುಜ್ಞೆಯಿಂದ ತಪಸ್ಸಿನಲ್ಲಿ ನಿರತಳಾಗಿ ಚತುರ್ಮುಖನ ಪ್ರತ್ಯಕ್ಷವನ್ನು ಹೊಂದಿ ಅವನ ಅನುಗ್ರಹದಿಂದ ತನ್ನನ್ನು ಕಾಯುತ್ತಿದ್ದ ಹಿಂಸಾಭಿಲಾಷಿಯಾದ ವ್ಯಾಘ್ರಕ್ಕೂ ಇಷ್ಟಸಿದ್ಧಿಯನ್ನುಂಟುಮಾಡಿ ತಾನೂ ಸುವರ್ಣಮಯವಾದ ದೇಹವನ್ನು ಹೊಂದಿದಳೆಂದೂ ಹೇಳಲಾಯಿತು. ತನ್ನ ಉತ್ಪತ್ತಿಗೆ ಕಾರಣವಾಗಿ ಕೋಶರೂಪವಾಗಿದ್ದ ಮತ್ತೊಂದು ದೇವತೆಯನ್ನು ಇಂದ್ರನ ಕೋರಿಕೆಯಮೇರೆ ಅವನಿಗೆ ಕೊಟ್ಟಳೆಂದೂ ಇಂದ್ರನು ಅವಳನ್ನು ತೆಗೆದುಕೊಂಡುಹೋಗಿ ವಿಂಧ್ಯವಾಸಿನೀ ಎಂಬ ಹೆಸರಿನಿಂದ ದೇವತೆಗಳ ರಕ್ಷಣೆಗಾಗಿ ಪೂಜಿಸಲ್ಪಡುತ್ತಿರು ಎಂದು ಪ್ರಾರ್ಥಿಸಿ ಅವಳನ್ನು ವಿಂಧ್ಯಪರ್ವತದಲ್ಲಿಟ್ಟನೆಂದೂ ಹೇಳಲಾಯಿತು. ಅನಂತರ ತೇಜಸ್ವಿನಿಯಾಗಿಯೂ ರೂಪವತಿಯಾಗಿಯೂ ಆವಿರ್ಭವಿಸಿ ಬಂದ ಪಾರ್ವತಿಯೊಡನೆ ಹರನು ಮಹಾಮೈಥುನವನ್ನುಪಕ್ರಮಿಸಿದನೆಂದೂ ಹೇಳಿ ಅದರಿಂದ ಜಗತ್ತಿಗೆ ಉಂಟಾದ ಕ್ಷೋಭವನ್ನು ನೋಡಿ ಕಾತರರಾದ ದೇವತೆಗಳು ಚತುರ್ಮುಖನಲ್ಲಿ ಹೋಗಿ ಈ ವಿಷಯವನ್ನು ಯಥಾವತ್ತಾಗಿ ತಿಳಿಸಿದರೆಂದೂ ಹೇಳಲಾಯಿತು. ಈ ವೃತ್ತಾಂತವನ್ನು ತಿಳಿಸಿ ಚತುರ್ಮುಖನು ಮೌನವಹಿಸಲು ದೇವತೆಗಳೆಲ್ಲರೂ ಇಂದ್ರನನ್ನು ಕುರಿತು ಮುಂದೆ ಹುಟ್ಟುವ ಮಹಾವ್ಯಕ್ತಿಯು ನಿನ್ನ ಇಂದ್ರಪದವಿಗೇ ಧಕ್ಕೆ ತಂದೀತು. ಆದುದರಿಂದ ಯಾವುದಾದರೊಂದು ಉಪಾಯದಿಂದ ಇದನ್ನು ತಪ್ಪಿಸಬೇಕೆಂದು ಹೇಳಿ ಅಗ್ನಿಯೊಡಗೂಡಿ ಎಲ್ಲರೂ ಮಂದರ ಪರ್ವತಕ್ಕೆ ಹೋದರೆಂದೂ ಅಲ್ಲಿ ಸಮರ್ಥನಾದ ಅಗ್ನಿಯನ್ನು ಪುರಸ್ಕರಿಸಿ ಅವನ ಮೂಲಕ ಪಾರ್ವತಿಯ ಸಂಪರ್ಕದಿಂದ ಈಶ್ವರನನ್ನು ಬೇರೆಮಾಡಲು ಪ್ರಯತ್ನಿಸಿದರೆಂದೂ ಹೇಳಲಾಯಿತು. ಅಗ್ನಿಯೂ ಆಲೋಚಿಸಿ ಹಂಸವೇಷದಿಂದ ದ್ವಾರಪಾಲನಾದ ನಂದಿಯನ್ನೂ ಮೋಸಮಾಡಿ ಸೂಕ್ಷ್ಮರೂಪದಿಂದ ಒಳಹೊಕ್ಕನೆಂದೂ ಅಲ್ಲಿ ಹರನ ತಲೆಯಹತ್ತಿರ ಮೆಲ್ಲಗೆ ನಕ್ಕು ದೇವತೆಗಳು ಬಂದು ಬಾಗಿಲಿನಲ್ಲಿ ಕಾದಿರುವರೆಂದು ಹೇಳಿ ಆ ಮೂಲಕ ಹರನಿಗೆ ಪಾರ್ವತಿಯ ವಿಶ್ಲೇಷವಾಯಿತೆಂದೂ ಹೇಳಲಾಯಿತು. ಹೊರಗೆ ಬಂದ ಈಶ್ವರನನ್ನು ದೇವತೆಗಳು ಭಕ್ತಿಯಿಂದ ನಮಸ್ಕರಿಸಲು ಸಂತುಷ್ಟನಾದ ಅವನಿಂದ ವರವನ್ನು ಹೊಂದಿ ಮಹಾಮೈಥುನವನ್ನು ನೀನು ಬಿಡ

ಬೇಕೆಂಬುದನ್ನೇ ವರವನ್ನಾಗಿ ಪ್ರಾರ್ಥಿಸಿದರೆಂದೂ ಹೇಳಲಾಯಿತು. ಹರನೂ ಅದಕ್ಕೆ ಒಪ್ಪಿ ಪಾರ್ವತಿಯಲ್ಲಿಯೂ ಈ ವಿಷಯವನ್ನು ಹೇಳಲಾಗಿ ಕುಪಿತಳಾದ ಆ ಪಾರ್ವತಿಯಿಂದ ದೇವತೆಗಳಿಗೆಲ್ಲಾ ಸಂತಾನಹೀನತೆಯು ಶಾಪರೂಪದಿಂದ ಕೊಡಲ್ಪಟ್ಟಿತು. ಈಶ್ವರನ ಮಾತಿನಿಂದ ಅಗ್ನಿಯು ಸ್ಖಲಿತವಾಗಿದ್ದ ಅವನ ತೇಜಸ್ಸನ್ನು ಸ್ವೀಕರಿಸಲಾಗಿ ದೇವತೆಗಳೆಲ್ಲರೂ ನಿಶ್ಚಿಂತರಾಗಿ ತೆರಳಿದರೆಂದೂ ಅನಂತರ ಸ್ನಾನಗೃಹಕ್ಕೆ ಪಾರ್ವತಿಯು ಹೋದಾಗ ಅವಳ ಮೈಯನ್ನು ಉಜ್ಜುವಾಗ ಬಂದ ದೇಹದ ಮಲದಿಂದ ಗಣಾಧಿಪನು ಉಂಟಾದನೆಂದೂ ಈಶ್ವರನು ಅವನನ್ನು ಪುತ್ರನನ್ನಾಗಿ ಸ್ವೀಕರಿಸಿ ವಿನಾಯಕನೆಂದು ಹೆಸರಿಟ್ಟು ಪಾರ್ವತಿಗೆ ಕೊಟ್ಟನೆಂದೂ ಅದರಿಂದ ಪಾರ್ವತಿಯೂ ಸಂತುಷ್ಟಳಾದಳೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಪಂಚಪಂಚಾಶತ್ತಮೋಽಧ್ಯಾಯಃ

ಪುಲಸ್ತ್ಯ ಉವಾಚ

ಕಶ್ಯಪಸ್ಯ ದನುರ್ನಾಮ್ನಾ ಭಾರ್ಯಾಸೀದ್ದ್ವಿಜಸತ್ತಮ ।
ತಸ್ಯಾಃ ಪುತ್ರತ್ರಯಂ ಚಾಸೀತ್ಸಹಸ್ರಾಕ್ಷಾದ್ಬಲಾಧಿಕಂ ॥ ೧ ॥

ಜ್ಯೇಷ್ಠಃ ಶುಂಭ ಇತಿ ಖ್ಯಾತೋ ನಿಶುಂಭಶ್ಚಾಪರೋಽಸುರಃ ।
ತೃತೀಯೋ ನಮುಚಿರ್ನಾಮ ಮಹಾಬಲಸಮನ್ವಿತಃ ॥ ೨ ॥

ಯೋಽಸೌ ನಮುಚಿರಿತ್ಯೇವಂ ಖ್ಯಾತೋ ದನುಸುತೋಽಸುರಃ ।
ತಂ ಹಂತುಮಿಚ್ಛತಿ ಹರಿಃ ಪ್ರಸಹ್ಯ ಕುಲಿಶಂ ಕರೇ ॥ ೩ ॥

ತ್ರಿದಿವೇಶಂ ಸಮಾಯಾತಂ ನಮುಚಿಸ್ತ್ವಭಯಾದಥ ।
ಪ್ರವಿವೇಶ ರಥಂ ಭಾನೋಃ ತತೋ ನಾಶಕದಚ್ಯುತಃ ॥ ೪ ॥

ಐವತ್ತೈದನೆಯ ಅಧ್ಯಾಯವು

೧-೪. ಪುಲಸ್ತ್ಯರು ಮುಂದಿನ ವೃತ್ತಾಂತವನ್ನು ಹೇಳುತ್ತಾರೆ:— ಎಲೈ ಬ್ರಾಹ್ಮಣೋತ್ತಮನೇ, ಕಶ್ಯಪರಿಗೆ ದನುವೆಂಬ ಪತ್ನಿ ಇದ್ದಳು. ಅವಳಿಗೆ ಇಂದ್ರನಿಗಿಂತಲೂ ಬಲಶಾಲಿಗಳಾದ ಮೂವರು ಗಂಡುಮಕ್ಕಳಿದ್ದರು. ಅವರಲ್ಲಿ ಜ್ಯೇಷ್ಠನೇ ಪ್ರಖ್ಯಾತನಾದ ಶುಂಭನು. ನಿಶುಂಭನೆಂಬುವನು ಎರಡನೇಯವನು. ಬಲಶಾಲಿಯಾದ ನಮುಚಿ ಎಂಬುವನೇ ಮೂರನೇಯವನು. ಪ್ರಖ್ಯಾತನಾದ ಈ ನಮುಚಿಯನ್ನು ಕೊಲ್ಲಲು ಇಂದ್ರನು ಆಶೆಪಟ್ಟು ಬಲಾತ್ಕಾರದಿಂದ ಸಂಹರಿಸಲು ವಜ್ರಧಾರಿಯಾದನು. ಹಾಗೆ ಬಂದ ಇಂದ್ರನನ್ನು ನೋಡಿ ನಮುಚಿಯು ಭಯದಿಂದ ರಕ್ಷಣೆಗಾಗಿ ಸೂರ್ಯನ ರಥವನ್ನು ಹೊಕ್ಕನು. ಆಗ ಇಂದ್ರನು ಅವನನ್ನು ಕೊಲ್ಲಲಾಗಲಿಲ್ಲ.

ಶಕ್ರಸ್ತೇನಾಥ ಸಮಯಂ ಪ್ರಚಕ್ರೇ ಸಮುಹಾಮುನಾಃ ।
ಅವಧ್ಯತ್ವಂ ವರಂ ಪ್ರಾದಾಚ್ಛಸ್ತ್ರೈರಸ್ತ್ರೈಶ್ಚ ನಾರದ ॥ ೫ ॥

ತತೋಽವಧ್ಯತ್ವಮಾಜ್ಞಾಯ ಶಸ್ತ್ರೈರಸ್ತ್ರೈಶ್ಚ ನಾರದ ।
ಸಂತ್ಯಜ್ಯ ಭಾಸ್ಕರರಥಂ ಪಾತಾಲಮುದಯಾದಥ ॥ ೬ ॥

ಸ ನಿಮಜ್ಜನ್ನಪಿಜಲೆ ಸಾಮುದ್ರಂ ಫೇನಮುತ್ತಮಂ ।
ದದೃಶೆ ದಾನವಪತಿಸ್ತಂಪ್ರಗೃಹ್ಯೇದಮಬ್ರವೀತ್ ॥ ೭ ॥

ಯದುಕ್ತಂ ದೇವಪತಿನಾ ವಾಸವೇನ ವಚೋಽಸ್ತು ತತ್ ।
ಅಯಂ ಸ್ಪೃಶತು ಮಾಂ ಫೇನಃ ಕರಾಭ್ಯಾಂ ಗೃಹ್ಯದಾನವಃ ॥ ೮ ॥

ಮುಖನಾಸಾದಿಕರ್ಣಾದೀನ್ಸಮಾಪ್ರೂರ್ಯ ಯಥೇಚ್ಛಯಾ ।
ತಸ್ಮಿನ್ ಶಕ್ರೋಽಸೃಜದ್ವಜ್ರಮಂತರ್ಹಿತಮಪೀಶ್ವರಃ ॥ ೯ ॥

೫-೭. ಆಗ ಸೂರ್ಯನ ರಥಕ್ಕೆ ಉಂಟಾದ ತಡೆಯನ್ನು ನೋಡಿ ಬುದ್ಧಿಶಾಲಿಯಾದ ಆ ಇಂದ್ರನು ಅವನೊಡನೆ ಸಂಧಿಮಾಡಿಕೊಂಡು ಶಸ್ತ್ರಗಳಿಂದಲೂ ಅಸ್ತ್ರಗಳಿಂದಲೂ ಅವನಿಗೆ ಅವಧ್ಯತ್ವವನ್ನು ವರವನ್ನಾಗಿ ಕೊಟ್ಟು ಸೂರ್ಯರಥದ ತೊಂದರೆಯನ್ನು ತಪ್ಪಿಸಿದನು. ಆಗ ಆ ನಮುಚಿಯು ತನಗೆ ವರಲಬ್ಧವಾದ ಅವಧ್ಯತ್ವವನ್ನು ತಿಳಿದು ನಿರ್ಭಯನಾಗಿ ಸೂರ್ಯರಥವನ್ನು ಬಿಟ್ಟು ಪಾತಾಲಕ್ಕೆ ಪ್ರವೇಶಿಸಿದನು. ಅಲ್ಲಿ ನೀರಿನಲ್ಲಿ ಮುಳುಗುತ್ತಿದ್ದರೂ ಆ ದಾನವನು ಸಮುದ್ರದ ನೊರೆಯನ್ನು ಹಿಡಿದುಕೊಂಡು ಹೀಗೆ ಹೇಳಿದನು.

೮–೧೦. ದೇವನಾಯಕನಾದ ಇಂದ್ರನು ಹೇಳಿದಂತೆಯೇ ಆಗಲಿ ಎಂದು ಹೇಳುತ್ತಾ ಈ ನೊರೆಯು ನನ್ನನ್ನು ಮುಟ್ಟಲಿ ನೋಡೋಣ ಎನ್ನುತ್ತಾ ಆ ನೊರೆಯನ್ನು ಕೈಯ್ಯಿನಿಂದ ತೆಗೆದು ಮುಖ ಮೂಗು ಕಿವಿ ಮುಂತಾದ ಸ್ಥಲಗಳಲ್ಲಿ ಇಚ್ಛೆ ಬಂದಂತೆ ಅಪ್ಪಳಿಸುತ್ತ ಇಂದ್ರನನ್ನು ಉಪಹಾಸಮಾಡುತ್ತಾ ನಿಂತನು. ಆಗ ಇಂದ್ರನು ಆ ನೊರೆಯಲ್ಲಿಯೇ ನಿಗೂಢವಾದ ವಜ್ರವನ್ನು ನಿರ್ಮಿಸಲು ಸಮರ್ಥವಾದ ಆ ನೊರೆಯಿಂದಲೇ ಮೂಗು ಮುಖಗಳೆಲ್ಲವೂ ತಡೆಯಲ್ಪಟ್ಟು ಆ ದಾನವನು

ತೇನಾಸೌ ರುದ್ಧನಾಸಾಸ್ಯಃ ಪಪಾತ ಚ ಮಮಾರ ಚ ।
ಸಮಯೇನ ತಥಾ ನಷ್ಟೆ ಬ್ರಹ್ಮಹತ್ಯಾಸ್ಪೃಶದ್ಧರಿಂ ॥೧೦॥

ಸಚ್ಚೈತತ್ತೀರ್ಥಮಾಸಾದ್ಯ ಸ್ನಾತಃ ಪಾಪಾದಮುಚ್ಯತ ।
ತತೋಽಸ್ಯ ಭ್ರಾತರೌ ವೀರೌ ಕ್ರುದ್ಧೌ ಶುಂಭನಿಶುಂಭಕೌ ॥೧೧॥

ಉದ್ಯೋಗಂ ಸುಮಹತ್ಕೃತ್ವಾ ಸುರಾನ್ಬಾಧಿತುಮಾಗತೌ ।
ಸುರಾಸ್ತೇಽಪಿ ಸಹಸ್ರಾಕ್ಷಂ ಪುರಸ್ಕೃತ್ಯ ವಿನಿರ್ಯಯುಃ ॥೧೨॥

ಜಿತಾಸ್ತ್ವಾಕ್ರಮ್ಯ ದೈತ್ಯಾಭ್ಯಾಂ ಸಬಲಾಃ ಸಪದಾನುಗಾಃ ।
ಶಕ್ರಸ್ಯಾಹೃತ್ಯ ಚ ಗಜಂ ಯಾಮ್ಯಂ ಚ ಮಹಿಷಂ ಬಲಾತ್ ॥೧೩॥

ವರುಣಸ್ಯ ಮಣಿಂ ಛತ್ರಂ ಗದಾಂ ವೈ ಮಾಧವಸ್ಯ ಚ ।
ನಿಧಯಃ ಶಂಖಪದ್ಮಾದ್ಯಾ ಹೃತಾಸ್ತ್ವಾಕ್ರಮ್ಯ ದಾನವೈಃ ॥೧೪॥

ಬಿದ್ದನು ಮತ್ತು ಸತ್ತನು. ಈರೀತಿಯಾಗಿ ಸಮಯಬಂಧಕ್ಕೆ (ಕಟ್ಟುಪಾಡು) ಗುರಿಯಾಗಿ ಆ ದಾನವನು ನಾಶಹೊಂದಲಾಗಿ ಇಂದ್ರನಿಗೆ ಅವನ ಹನನದಿಂದುಂಟಾದ ಬ್ರಹ್ಮಹತ್ಯೆಯು ಸಂಘಟಿಸಿತು. ಆಗ ಇಂದ್ರನೂ ಈ ತೀರ್ಥದಲ್ಲಿ ಸ್ನಾನಮಾಡಿ ಆ ಪಾಪದಿಂದ ಬಿಡುಗಡೆ ಹೊಂದಿದನು.

೧೧-೧೪. ಅನಂತರ ಅವನ ಭ್ರಾತೃಗಳಾದ ಶುಂಭನಿಶುಂಭನೆಂಬ ವೀರರು ಕುಪಿತರಾಗಿ ಬಹುವಿಧವಾದ ಯುದ್ಧಪ್ರಯತ್ನದಿಂದ ದೇವತೆಗಳನ್ನು ಬಾಧಿಸಲು ಬಂದರು. ದೇವತೆಗಳೂ ಸಹ ಇಂದ್ರನನ್ನು ಪುರಸ್ಕರಿಸಿಕೊಂಡು ಯುದ್ಧಕ್ಕೆ ಹೊರಟರು. ಆ ಮಹಾಯುದ್ಧದಲ್ಲಿ ದೇವತೆಗಳೆಲ್ಲರೂ ಸೈನ್ಯಸಮೇತರಾಗಿಯೂ ಆಪ್ತಜನಸಮೇತರಾಗಿಯೂ ಪರಾಜಿತರಾಗಿ ದೈತ್ಯರಿಗೆ ಅಧೀನರಾದರು. ಆಗ ಆ ದೈತ್ಯರು ಇಂದ್ರನ ಗಜವನ್ನೂ ಯಮನ ವಾಹನವಾದ ಮಹಿಷವನ್ನೂ ವರುಣನ ಮಣಿ ಮತ್ತು ಛತ್ರಗಳನ್ನೂ ಮಾಧವನ ಗದೆಯನ್ನೂ ಶಂಖಪದ್ಮಾದಿ ಕುಬೇರನ ನಿಧಿಗಳನ್ನೂ ಆಕ್ರಮಿಸಿ ವಿಜಯದಿಂದ ಮೆರೆದರು.

ತ್ರಿಲೋಕೀ ವಶಗಾ ಚಾಸ್ತೇನಯೋರ್ನಾರದ ದೈತ್ಯಯೋಃ ।
ಆಜಗ್ಮತುರ್ಮಹೀಪೃಷ್ಠಂ ದದೃಶಾತೆ ಮಹಾಸುರಂ ॥ ೧೫ ॥

ರಕ್ತಬೀಜಮಥೋಚುಸ್ತೇ ಕೋಭವಾನಿತಿ ಸೋಽಬ್ರವೀತ್ ।
ಸ ಚಾಪ ದೈತ್ಯೋಽಸ್ಮಿ ವಿಭೋ ಸಚಿವೋ ಮಹಿಷಸ್ಯ ತು ॥ ೧೬ ॥

ರಕ್ತಬೀಜೇತಿ ವಿಖ್ಯಾತೋ ಮಹಾವೀರ್ಯೋ ಮಹಾಭುಜಃ ।
ಅಮಾತ್ಯೌ ರುಚಿರೌ ವೀರೌ ಚಂಡಮುಂಡಾವಿತಿ ಶ್ರುತೌ ॥ ೧೭ ॥

ತಾವಾಸ್ತಾಂ ಸಲಿಲೆಮಗ್ನೌ ಭಯಾದ್ದೇವ್ಯಾ ಮಹಾಭುಜೌ ।
ಯಸ್ತ್ವಾಸೀತ್ಪ್ರಭುರಸ್ಮಾಕಂ ಮಹಿಷೋ ನಾಮ ದಾನವಃ ॥ ೧೮ ॥

ನಿಹತಃ ಸ ಮಹಾದೇವ್ಯಾ ವಿಂಧ್ಯಶೈಲೆ ಸುವಿಸ್ತೃತೆ ।
ಭವನ್ತೌ ಕಸ್ಯ ತನಯೌ ಕಿಂ ವಾ ನಾಮ್ನಾ ಪರಿಶ್ರುತೌ ।
ಕಿಂವಿರ್ಯೌ ಕಿಂ ಪ್ರಭಾವೌ ಚ ಏತಚ್ಛಂಸಿತುಮರ್ಹಥಃ ॥ ೧೯ ॥

೧೫-೧೭. ಎಲೈ ನಾರದನೇ, ಆ ದೈತ್ಯರಿಗೆ ಮೂರು ಲೋಕಗಳೂ ಆಗ ಸ್ವಾಧೀನವಾಗಿ ಹೋದುವು. ಆ ದೈತ್ಯರು ಆಗ ಭೂಮಿಗೂ ಬಂದರು. ಅಲ್ಲಿ ರಕ್ತಬೀಜನೆಂಬ ಮಹಾಸುರನನ್ನು ನೋಡಿ ನೀನು ಯಾರು ಎಂದು ಕೇಳಲಾಗಿ ರಕ್ತಬೀಜನು ನಾನು ಮಹಿಷಾಸುರನ ಮಂತ್ರಿಯಾದ ರಕ್ತಬೀಜನೆಂದು ಪ್ರಖ್ಯಾತಿಪಡೆದಿರುವ ದೈತ್ಯನು ಮಹಾಬಲಶಾಲಿಯಾಗಿರುವೆನು. ನಮ್ಮ ಧೊರೆಯಾಗಿದ್ದ ಮಹಿಷಾಸುರನಿಗೆ ಚಂಡಮುಂಡರೆಂಬ ಅಭಿಧಾನದಿಂದ ಪ್ರಸಿದ್ಧರಾಗಿದ್ದ ಶೂರರಾದ ಅಮಾತ್ಯರಿಬ್ಬರೂ ದೇವಿಯ ಭಯದಿಂದ ನೀರಿನಲ್ಲಿ ಮುಳುಗಿದರು.

೧೮-೨೧. ನಮಗೆ ಪ್ರಭುವಾಗಿದ್ದ ಮಹಿಷನೆಂಬ ದಾನವರಾಜನು ವಿಸ್ತಾರವಾದ ವಿಂಧ್ಯಪರ್ವತದಲ್ಲಿ ನಡೆದ ಯುದ್ಧದಲ್ಲಿ ದೇವಿಯಿಂದ ಕೊಲ್ಲಲ್ಪಟ್ಟನು. ನೀವು ಯಾರು ? ಯಾರ ಮಕ್ಕಳು ನಿಮ್ಮ ನಾಮಧೇಯವೇನು ? ನಿಮ್ಮ ಪರಾಕ್ರಮವಾದರೂ ಎಂತಹುದು ಇದನ್ನು ಹೇಳಬೇಕು ಎಂದನು. ಅದಕ್ಕೆ ಪ್ರತ್ಯುತ್ತರವಾಗಿ ಶುಂಭ

ಶುಂಭನಿಶುಂಭಾವೂಚತುಃ

ಅಹಂ ಶುಂಭ ಇತಿ ಖ್ಯಾತೋ ದನೋಃ ಪುತ್ರಸ್ತಥೌರಸಃ ।
ನಿಶುಂಭೋಽಯಂ ಮಮ ಭ್ರಾತಾ ಕನೀಯಾನ್ ಶಕ್ರದರ್ಪಹಾ ॥ ೨೦ ॥

ಅನೇನ ಬಹುಶೋ ದೇವಾಃ ಸೇಂದ್ರರುದ್ರದಿವಾಕರಾಃ ।
ಸಮೇತ್ಯ ನಿರ್ಜಿತಾ ವೀರಾ ಯೇಽಚಾನ್ಯೆ ಬಲವತ್ತರಾಃ ॥ ೨೧ ॥

ತದುಚ್ಯತಾಂ ಕಥಂ ದೈತ್ಯೋ ನಿಹತೋ ಮಹಿಷಾಸುರಃ ।
ಯಾವತ್ತಾನ್ ಘಾತಯಿಷ್ಯಾವಃ ಸ್ವಸೈನ್ಯಪರಿವಾರಿತೌ ॥ ೨೨ ॥

ಇತ್ಥಂ ತಯೋಸ್ತು ವದತೋರ್ನರ್ಮದಾಯಾಸ್ತಟೆ ಮುನೆ ।
ಜಲವಾಸಾದ್ವಿನಿಷ್ಕ್ರಾಂತೌ ಚಂಡಮುಂಡೌ ಚ ದಾನವೌ ॥ ೨೩ ॥

ತತೋಽಭ್ಯೇತ್ಯಾಸುರಶ್ರೇಷ್ಠೌ ರಕ್ತಬೀಜಂ ಸಮಾಶ್ರಿತೌ ।
ಊಚತುರ್ವಚನಂ ಶ್ಲಕ್ಷ್ಣಂ ಕೋಽಯಂ ತವ ಪುರಸ್ಸರಃ ॥ ೨೪ ॥

ಸಚೋಭೌ ಪ್ರಾಹ ದೈತ್ಯೋಽಸೌ ಶುಂಭೋನಾಮ ಸುರಾರ್ದನಃ ।
ಕನೀಯಾನಸ್ಯ ಚ ಭ್ರಾತಾ ದ್ವಿತೀಯೋ ಹಿ ನಿಶುಂಭಕಃ ॥ ೨೫ ॥

ನಿಶುಂಭರು ಹೇಳುತ್ತಾರೆ. ಶುಂಭನೆಂದು ಪ್ರಸಿದ್ಧಿಹೊಂದಿರುವ ನಾನು ದನುವಿನ ಔರಸಪುತ್ರನು. ಇಂದ್ರನ ದರ್ಪವನ್ನು ನಾಶಮಾಡಿರುವ ಈ ನಿಶುಂಭನು ನನ್ನ ಕಿರಿಯ ತಮ್ಮನು. ಇವನು ಅನೇಕವೇಳೆ ಇಂದ್ರ ರುದ್ರ ಸೂರ್ಯ ಇವರುಗಳೊಡಗೂಡಿದ ದೇವತೆಗಳನ್ನೆಲ್ಲಾ ಯುದ್ಧದಲ್ಲಿ ಸೋಲಿಸಿರುವನು. ಬಲಿಷ್ಠರಾದ ಇತರ ದೇವತೆಗಳೂ ಇವನಿಂದ ಪರಾಜಿತರಾಗಿರುವರು.

೨೨-೨೫. ದೈತ್ಯರಾಜನಾದ ಮಹಿಷಾಸುರನು ಹೇಗೆ ಕೊಲ್ಲಲ್ಪಟ್ಟನೆಂಬುವನ್ನು ಹೇಳು. ಏತಕ್ಕೆಂದರೆ ಸೈನ್ಯಸಮೇತರಾದ ನಾವು ಆ ಮಹಿಷ ಶತ್ರುವನ್ನು ಕೊಲ್ಲಲು ನಿಂತಿರುವೆವು. ಹೀಗೆ ರಕ್ತಬೀಜನೂ ಶುಂಭನೂ ಮಾತನಾಡುತ್ತಿರುವಾಗಲೇ ಆ ನರ್ಮದಾನದಿಯ ದಡದಲ್ಲಿ ಜಲವಾಸದಲ್ಲಿದ್ದ ಚಂಡಮುಂಡರಿಬ್ಬರೂ ಎದ್ದು ಮೇಲೆ ಬಂದರು. ಆ ಇಬ್ಬರೂ ಎದ್ದು ಬಂದೊಡನೆಯೇ ರಕ್ತಬೀಜನೊಡನೆ ಸೇರಿ ನಿನ್ನೊಡನೆ ಮಾತನಾಡುತ್ತಿರುವ ಇವರು ಯಾರು ಎಂದು ಕೇಳಲಾಗಿ ಆ ಚಂಡಮುಂಡರನ್ನು ಕುರಿತು ರಕ್ತಬೀಜನು ಇವನು ಶುಂಭನೆಂದು ಪ್ರಸಿದ್ಧನಾಗಿರುವ ಸುರಶತ್ರುವಾದ ದೈತ್ಯನು, ಮತ್ತೊಬ್ಬನು ನಿಶುಂಭನೆಂಬ ಹೆಸರುಳ್ಳ ಇವನ ಕಿರಿಯ ತಮ್ಮನು.

ಏತಾವಾಶ್ರಿತ್ಯ ತಾಂ ದುಷ್ಟಾಂ ಮಹಿಷಘ್ನೀಂ ನ ಸಂಶಯಃ ।
ಅಹಂ ವಿವಾಹಯಿಷ್ಯಾಮಿ ರತ್ನಭೂತಾಂ ಜಗತ್ತ್ರಯೇ ॥ ೨೬ ॥

ಚಂಡ ಉವಾಚ

ನ ಸಮ್ಯಗುಕ್ತಂ ಭವತಾ ರತ್ನಾಹೋರ್ಽಸಿ ನ ಸಾಂಪ್ರತಂ ।
ಯಃ ಪ್ರಭುಃ ಸ್ಯಾತ್ಸರತ್ನಾರ್ಹಸ್ತಸ್ಮಾಚ್ಛುಂಭಾಯ ಯೋಜ್ಯತಾಂ ॥ ೨೭ ॥

ತದಾಚಚಕ್ಷೆ ಶುಂಭಾಯ ನಿಶುಂಭಾಯ ಚ ಕೌಶಿಕೀಂ ।
ಭೂಯೋಽಪಿ ತದ್ವಿಧಾಂ ಜಾತಾಂ ಕೌಶಿಕೀಂ ರೂಪಶಾಲಿನೀಂ ॥ ೨೮ ॥

ತತಃ ಶುಂಭೋ ನಿಜಂ ದೂತಂ ಸುಗ್ರೀವಂ ನಾಮ ದಾನವಂ ।
ದೈತ್ಯಂ ಚ ಪ್ರೇಷಯಾಮಾಸ ಸಕಾಶಂ ವಿಂಧ್ಯವಾಸಿನೀಂ ॥ ೨೯ ॥

ಸ ಗತ್ವಾ ತದ್ವಚಃ ಶ್ರುತ್ವಾ ದೇವ್ಯಾಗತ್ಯ ಮಹಾಸುರಃ ।
ನಿಶುಂಭಶುಂಭಾವಾಹೇದಂ ಮನ್ಯುನಾಭಿಪರಿಪ್ಲುತಃ ॥ ೩೦ ॥

೨೬-೨೯. ಈ ಶುಂಭ ನಿಶುಂಭರ ಸಹಾಯದಿಂದ ಆ ಮಹಿಷಾಸುರನಾಶನಿಯಾದ ದುಷ್ಟಳನ್ನು ಜಯಿಸಿ ತ್ರಿಲೋಕಕ್ಕೂ ರತ್ನಪ್ರಾಯಳಾಗಿರುವ ಆ ಸುಂದರಿಯನ್ನು ನಾನೇ ಮದುವೆಯಾಗುತ್ತೇನೆ ಎಂದನು. ಆಗ ಚಂಡನು ನೀನು ಆಡುತ್ತಿರುವ ಈ ಮಾತು ನ್ಯಾಯಬದ್ಧವಾಗಿಲ್ಲ. "ರತ್ನಹಾರೀತು ಪಾರ್ಥಿವಃ" ಎಂಬ ಶಾಸ್ತ್ರದಂತೆ ಉತ್ಕೃಷ್ಟವಾದ ವಸ್ತುವಿಗೆ ಧೊರೆಯೇ ಅರ್ಹನೇ ಹೊರತು ನೀನು ಅರ್ಹನಲ್ಲ. ಆದುದರಿಂದ ಈ ಸ್ತ್ರೀರತ್ನವನ್ನು ಶುಂಭನಿಗೆ ಕೊಡುವುದು ನ್ಯಾಯಸಮ್ಮತವಾದದ್ದು ಎಂದು ಹೇಳಿ ಪುನಃ ಕೌಶಿಕೀರೂಪದಿಂದ ಆವಿರ್ಭವಿಸಿರುವ ಆ ದೇವಿಯನ್ನು ಶುಂಭನಿಗೇ ಕೊಡುವುದಾಗಿ ನಿರ್ಣಯಮಾಡಿದನು. ಅನಂತರ ಶುಂಭನು ತನ್ನ ದೂತನಾದ ಸುಗ್ರೀವನೆಂಬ ದಾನವನನ್ನೂ ದೈತ್ಯನನ್ನೂ ಸಹ ವಿಂಧ್ಯವಾಸಿನಿಯಾಗಿರುವ ದೇವಿಯ ಸಮೀಪಕ್ಕೆ ಕಳುಹಿಸಿದನು.

೩೦-೩೪. ಆ ಸುಗ್ರೀವನು ದೇವಿಯ ಸಮೀಪಕ್ಕೆ ಹೋಗಿ ಅವಳ ಮಾತನ್ನೆಲ್ಲಾ ಕೇಳಿ ಬಹಳ ಕುಪಿತನಾಗಿ ಹಿಂತಿರುಗಿ ಬಂದು ಶುಂಭ ನಿಶುಂಭರನ್ನು ಕುರಿತು

ಸುಗ್ರೀವ ಉವಾಚ

ಯುವಯೋರ್ವಚನಾದ್ದೇವೀ ಪ್ರದಿಷ್ಟಾ ದೈತ್ಯನಾಯಕೌ।
ಗತವಾನಹಮದ್ಯೈವ ತಾಮಹಂ ವಾಕ್ಯಮಬ್ರವಂ ॥ ೩೦ ॥

ಯಥಾ ಶುಂಭೋತಿವಿಖ್ಯಾತಃ ಕಕುದಂ ದಾನವೇಷ್ವಪಿ।
ಸತ್ವಾಂ ಪ್ರಾಹ ಮಹಾಭಾಗೆ ಪ್ರಭುರಸ್ಮಿ ಜಗತ್ತ್ರಯೆ ॥ ೩೨ ॥

ಯಾನಿ ಸ್ವರ್ಗೆ ಮಹೀಪೃಷ್ಠೆ ಪಾತಾಲೇ ಚಾಪಿ ಸುಂದರಿ।
ರತ್ನಾನಿ ಸಂತಿ ತಾವಂತಿ ಮಮವೇಶ್ಮನಿ ನಿತ್ಯಶಃ ॥ ೩೩ ॥

ತ್ವಮುಕ್ತಾ ಚಂಡಮುಂಡಾಭ್ಯಾಂ ರತ್ನಭೂತಾ ಕೃಶೋದರೀ।
ತಸ್ಮಾದ್ಭಜಸ್ವ ಮಾಂ ವಾತ್ವಂ ನಿಶುಂಭಂ ವಾ ಮಮಾನುಜಂ ॥ ೩೪ ॥

ಸಾ ಚಾಹ ಮಾಂ ವಿಹಸತೀ ಶೃಣು ಸುಗ್ರೀವ ಮದ್ವಚಃ।
ಸತ್ಯಮುಕ್ತಂ ತ್ರಿಲೋಕೇಶಃ ಶುಂಭೋ ರತ್ನಾರ್ಹಏವ ಚ ॥ ೩೫ ॥

ಹೇಳುತ್ತಾನೆ· ಎಲೈ ದೈತ್ಯನಾಯಕರೇ, ದೇವಿಯು ನಿಮಗೆ ಕೊಡಲ್ಪಟ್ಟಿರುವುದು ಸರಿಯಷ್ಟೆ. ನಿಮ್ಮಗಳ ಮಾತಿನಂತೆ ನಾನು ಈಗತಾನೇ ದೇವಿಯ ಸಮೀಪಕ್ಕೆ ಹೋಗಿದ್ದೆ, ಆ ದೇವಿಯನ್ನು ಕುರಿತು ಹೀಗೆ ಹೇಳಿದೆನು. ಶುಂಭನು ದಾನವರಲ್ಲೆಲ್ಲಾ ಪ್ರಖ್ಯಾತಿಹೊಂದಿ ಶ್ರೇಷ್ಠನಾಗಿರುತ್ತಾನೆ. ಆ ಪ್ರಭುವು ನಿನ್ನನ್ನು ಕುರಿತು ಹೀಗೆ ಹೇಳುತ್ತಾನೆ. ಎಲೈ ಭಾಗ್ಯಶಾಲಿನಿಯೇ, ಮೂರು ಲೋಕಕ್ಕೂ ನಾನು ಪ್ರಭುವಾಗಿದ್ದೇನೆ. ಸ್ವರ್ಗದಲ್ಲೂ ಭೂಮಿಯಲ್ಲೂ ಪಾತಾಲದಲ್ಲೂ ಉತ್ಕೃಷ್ಟವಸ್ತುಗಳೆಷ್ಟಿರುವುವೋ ಅವೆಲ್ಲವೂ ನನ್ನ ಮನೆಯಲ್ಲಿ ತುಂಬಿವೆ. ಎಲೈ ಸುಂದರಿಯೇ, ಚಂಡಮುಂಡರು ನಿನ್ನನ್ನು ಕನ್ಯಾರತ್ನವೆಂದು ಒಪ್ಪಿ ನನಗೆ ಕೊಟ್ಟಿರುತ್ತಾರೆ. ಆದುದರಿಂದ ನೀನು ನನ್ನನ್ನೇ ಆಗಲಿ ನನ್ನ ತಮ್ಮನಾದ ನಿಶುಂಭನನ್ನೇ ಆಗಲಿ ವರಿಸು.

೩೫-೩೯. ಹೀಗೆ ನನ್ನಿಂದ ಹೇಳಲ್ಪಟ್ಟ ದೇವಿಯು ನಗುತ್ತಾ ನನ್ನನ್ನು ಕುರಿತು, ಸುಗ್ರೀವ, ನನ್ನ ಮಾತನ್ನು ಕೇಳು. ನೀನು ಹೇಳುವಂತೆ ಶುಂಭನು ತ್ರಿಲೋಕನಾಯಕನೆಂಬುದು ಸತ್ಯ. ಅವನು ರತ್ನಗಳಿಗೆ ಅರ್ಹನೆಂಬುದೂ ಸತ್ಯ.

ಕಿಂತ್ವಸ್ತಿ ದುರ್ವಿನೀತಾಯಾ ಹೃದಯೇ ಮೇ ಮನೋರಥಃ ।
ಯೋ ಮಾಂ ವಿಜಯತೇ ಯುದ್ಧೇ ಸ ಭರ್ತಾ ಸ್ಯಾನ್ಮಹಾಸುರಃ ॥ ೩೬ ॥

ಮಯಾಚೋಕ್ತಾಽವಲಿಪ್ತಾಸಿ ಯೋ ಜಯೇತ್ಸಸುರಾಸುರಾನ್ ।
ಸತ್ವಾಂ ಕಥಂ ನ ಜಯತೇ ಸಾತ್ವಮುತ್ತಿಷ್ಠ ಭಾಮಿನಿ ॥ ೩೭ ॥

ಸಾಥ ಮಾಂ ಪ್ರಾಹ ಕಿಂಕುರ್ಮೋ ಯದನಾಲೋಚಿತಃ ಕೃತಃ ।
ಮನೋರಥಸ್ತು ತದ್ಗಚ್ಛ ಶುಂಭಾಯ ತ್ವಂ ನಿವೇದಯ ॥ ೩೮ ॥

ತಯೈವಮುಕ್ತಸ್ತ್ವಭ್ಯಾಗಾಂ ತ್ವತ್ಸಕಾಶಂ ಮಹಾಸುರ ।
ತಾಂ ಚಾಗ್ನಿಕೋಟಿಸಂಕಾಶಾಂ ಮತ್ವೈವಂ ಕುರುಯತ್ಕ್ಷಮಂ ।
ಪ್ರಾಹ ದೂತಂ ತ್ವಿದಂ ಶುಂಭೋ ದಾನವಂ ಧೂಮ್ರಲೋಚನಂ ॥ ೩೯ ॥

ಶುಂಭ ಉವಾಚ

ಧೂಮ್ರಾಕ್ಷ ಗಚ್ಛ ತಾಂ ದುಷ್ಟಾಂ ಕೇಶಾಕರ್ಷಣವಿಹ್ವಲಾಂ ।
ಸಾಪರಾಧಾಂ ಯಥಾ ದಾಸೀಂ ಕೃತ್ವಾ ಶೀಘ್ರಮಿಹಾನಯ ॥ ೪೦ ॥

ಆದರೆ ಧೃಷ್ಟವಾದ ಈ ನನ್ನ ಹೃದಯದಲ್ಲಿ ಇದೊಂದು ಮನೋರಥವು ದೃಢವಾಗಿ ನಿಂತಿದೆ. ಯಾವ ಮಹಾಸುರನು ನನ್ನನ್ನು ಯುದ್ಧದಲ್ಲಿ ಜಯಿಸುವನೋ ಅವನೇ ನನಗೆ ಪತಿಯಾಗಬೇಕೆಂಬುದೇ ಆ ಮನೋರಥ ಎಂದಳು. ಅನಂತರ ನಾನು ಎಲೈ ನಾರೀಮಣಿಯೇ, ನೀನು ಉನ್ಮತ್ತಳಾಗಿರುವೆ. ಸುರಾಸುರರೆಲ್ಲರನ್ನೂ ಜಯಿಸಿದವನು ನಿನ್ನನ್ನು ಜಯಿಸದಿರುವನೇ. ಈ ವಿಷಯದಲ್ಲಿ ಸಂದೇಹವನ್ನು ಬಿಡು. ಶುಂಭ ನನ್ನು ವರಿಸಲು ಅಭಿಮುಖಳಾಗು ಎಂದೆನು. ಆಗ ಆ ದೇವಿಯು ಏನುಮಾಡೋಣ ನಾನು ಆಲೋಚನೆಮಾಡದೆ ನನ್ನ ಈ ಮನೋರಥವನ್ನು ನಾನು ಹೇಳಿದಂತೆಯೇ ಸ್ಥಿರಗೊಳಿಸಿ ಆಯಿತು. ನೀನು ಹೊರಡು ಈ ವಿಚಾರವನ್ನು ಶುಂಭನಲ್ಲಿ ಅರಿಕೆ ಮಾಡು ಎಂದಳು. ಹೀಗೆ ಅವಳಿಂದ ಹೇಳಲ್ಪಟ್ಟ ನಾನು ನಿನ್ನಲ್ಲಿ ಬಂದು ನಡೆದು ದನ್ನೆಲ್ಲಾ ಅರಿಕೆಮಾಡಿದ್ದೇನೆ. ಎಲೈ ಮಹಾಸುರನೇ, ಆ ದೇವಿಯನ್ನು ಕೋಟಿ ಅಗ್ನಿಗಳಿಗೆ ಸಮಾನಳನ್ನಾಗಿ ತಿಳಿದು ನಿನಗೆ ಯಾವದು ಸೂಕ್ತವೆಂದು ತೋರಿಬರು ವುದೋ ಆ ಕಾರ್ಯವನ್ನು ಕೈಗೊಳ್ಳಬಹುದು ಎಂದನು.

೪೦-೪೨. ಆಗ ಶುಂಭನು ತನ್ನ ದೂತನಾದ ಧೂಮ್ರಲೋಚನನೆಂಬ ದಾನ ವನನ್ನು ಕುರಿತು ಎಲೈ ಧೂಮ್ರಾಕ್ಷನೇ, ನೀನು ಹೊರಡು. ಆ ದುಷ್ಟಳಾದ ದೇವಿ

ಯಶ್ಚಾಸ್ಯಾಃ ಪಕ್ಷಕೃತ್ಕಶ್ಚಿದ್ಭವಿಷ್ಯತಿ ಮಹಾಬಲಃ ।
ಸ ಹಂತವ್ಯೋಽವಿಚಾರ್ಯೈವ ಯದಿಹಿ ಸ್ಯಾತ್ಪಿತಾಮಹಃ ॥ ೪೧ ॥

ಸ ಏವಮುಕ್ತಃ ಶುಂಭೇನ ಧೂಮ್ರಾಕ್ಷೋಽಕ್ಷೌಹಿಣೀಶತೈಃ ।
ವೃತಃ ಷಡ್ಭಿರ್ಮಹಾತೇಜಾ ವಿಂಧ್ಯಂ ಗಿರಿಮುಪಾದ್ರವತ್ ॥ ೪೨ ॥

ತತ್ರ ದೃಷ್ಟ್ವಾಚ ತಾಂ ದುರ್ಗಾಂ ಭ್ರಾಂತದೃಷ್ಟಿರುವಾಚ ಹ ।
ಏಹ್ಯೇಹಿ ಮೂಢೇ ಭರ್ತಾರಂ ಶುಂಭಮಿಚ್ಛಸ್ವ ಕೌಶಿಕಿ ।
ನಚೇದ್ಬಲಾನ್ನಯಿಷ್ಯಾಮಿ ಕೇಶಾಕರ್ಷಣವಿಹ್ವಲಾಂ ॥ ೪೩ ॥

ಶ್ರೀ ದೇವ್ಯುವಾಚ

ಪ್ರೇಷಿತೋಽಸೀಹ ಶುಂಭೇನ ಬಲಾನ್ನೇತುಂ ಹಿ ಮಾಂ ಕಿಲ ।
ತತ್ರ ಕಿಂ ಹ್ಯಬಲಾ ಕುರ್ಯಾದ್ಯಥೇಚ್ಛಸಿ ತಥಾ ಕುರು ॥ ೪೪ ॥

ಯನ್ನು ಅಪರಾಧಿನಿಯಾದ ದಾಸಿಯಂತೆ ಭಾವಿಸಿ ಕೇಶಗಳನ್ನು ಹಿಡಿದು ಸೆಳೆದು ಇಲ್ಲಿಗೆ ಜಾಗ್ರತೆಯಾಗಿ ಕರೆದುಕ್ಕೊಂಡು ಬಾ. ಅವಳ ಪಕ್ಷಕ್ಕೆ ಸೇರಿ ಪ್ರತಿಭಟಿಸಲು ಯಾರಾದರೂ ಬಂದಲ್ಲಿ ಅವನು ಚತುರ್ಮುಖನೇ ಆಗಲಿ ವಿಚಾರವಿಲ್ಲದೆ ಅವನನ್ನು ಕೊಲ್ಲತಕ್ಕದ್ದು ಎಂದು ಅಪ್ಪಣೆಮಾಡಿದನು. ಹೀಗೆ ಆಜ್ಞಾಪಿಸಲ್ಪಟ್ಟ ಧೂಮ್ರಾಕ್ಷನು ನೂರು ಅಕ್ಷೌಹಿಣೀ ಸೈನ್ಯದೊಡನೆಯೂ ಆರು ದಳಪತಿಗಳೊಡನೆಯೂ ಕೂಡಿ ಮಹಾ ಪರಾಕ್ರಮದಿಂದ ವಿಂಧ್ಯಪರ್ವತವನ್ನು ಆಕ್ರಮಿಸಿ ಮುತ್ತಿದನು.

೪೩-೪೪ ಅಲ್ಲಿದ್ದ ದುರ್ಗಾದೇವಿಯನ್ನು ನೋಡಿ ಭ್ರಾಂತನಾಗಿ ಅವಳನ್ನು ಕುರಿತು ಎಲೈ ಮೂಢಳೇ, ಕೌಶಿಕಿ, ನಮ್ಮ ಪ್ರಭುವಾದ ಶುಂಭನನ್ನೇ ಪತಿಯನ್ನಾಗಿ ಭಾವಿಸಿ ನನ್ನೊಡನೆ ಬಾ. ಹಾಗೆ ನೀನು ಬರದಿದ್ದಲ್ಲಿ ನಾನೇ ನಿನ್ನ ಮುಂದಲೆಯನ್ನು ಹಿಡಿದು ಬಲಾತ್ಕಾರದಿಂದ ಒಯ್ಯುತ್ತೇನೆ ಎಂದನು. ಆಗ ದೇವಿಯು ನೀನು ನನ್ನನ್ನು ಬಲಾತ್ಕಾರದಿಂದ ಒಯ್ಯಲು ಶುಂಭನಿಂದ ಕಳುಹಿಸಲ್ಪಟ್ಟಿರುವೆಯಷ್ಟೆ. ಈ ವಿಷಯ

ಪುಲಸ್ತ್ಯ ಉವಾಚ

ಏವಮುಕ್ತೋ ವಿಭಾವರ್ಯಾ ಬಲವಾನ್ ಧೂಮ್ರಲೋಚನಃ ।
ಹುಂಕಾರೇಣೈವ ತಂ ಭಸ್ಮ ಸಾ ಚಕಾರಾಂಬಿಕಾ ತಥಾ ॥ ೪೫ ॥

ತತೋ ಹಾಹಾಕೃತಮಭೂಜ್ಜಗತ್ಯಸ್ಮಿಂಶ್ಚರಾಚರೇ ।
ಸಬಲಂ ಭಸ್ಮಸಾನ್ನೀತಂ ಕೌಶಿಕ್ಯಾ ವೀಕ್ಷ್ಯ ದಾನವಂ ॥ ೪೬ ॥

ತಂ ಚ ಶುಂಭೋಪಿ ಶುಶ್ರಾವ ಮಹಚ್ಛಬ್ದಮುದೀರಿತಂ ।
ಅಥಾದಿದೇಶ ಬಲಿನೌ ಚಂಡಮುಂಡೌ ಮಹಾಸುರೌ ॥ ೪೭ ॥

ರುರುಂ ಚ ಬಲಿನಾಂ ಶ್ರೇಷ್ಠಂ ತಥಾ ಜಗ್ಮುರ್ಮುದಾನ್ವಿತಾಃ ।
ತೇಷಾಂ ಚ ಸೈನ್ಯಮತುಲಂ ಗಜಾಶ್ವರಥಸಂಕುಲಂ ॥ ೪೮ ॥

ಸಮಾಜಗಾಮ ಸಹಸಾ ಯತ್ರಾಸ್ತೇ ಕೋಶಸಂಭವಾ ।
ತದಾಯಾಂತಂ ರಿಪುಬಲಂ ದೃಷ್ಟ್ವಾ ಕೋಟಿಶತಾವರಂ ॥ ೪೯ ॥

ಅಥ ಸಿಹ್ಮೋ ಧುತಸಟಃ ಪಾಟಯನ್ ದಾನವಾನ್ರಣೇ ।
ಕಾಂಶ್ಚಿತ್ಕರಪ್ರಹಾರೇಣ ಕಾಂಶ್ಚಿದಾಸ್ಯೇನ ಲೀಲಯಾ ॥ ೫೦ ॥

ದಲ್ಲಿ ದುರ್ಬಲ ಸ್ತ್ರೀಯಾದ ನಾನು ಏನುತಾನೆ ಮಾಡಲಾದೀತು. ನಿನಗೆ ಇಚ್ಛೆ ಬಂದಂತೆ ಮಾಡು ಎಂದು ಉತ್ತರವಿತ್ತು ಆ ದೇವಿಯು ಒಡನೆಯೇ ತನ್ನ ಹುಂಕಾರ ಮಾತ್ರದಿಂದ ಬಲಿಷ್ಠನಾದ ಆ ಧೂಮ್ರಾಕ್ಷನನ್ನು ಭಸ್ಮವನ್ನಾಗಿ ಮಾಡಿದಳು.

೪೬-೫೧. ಆಗ ಬಲಿಷ್ಠನಾದ ಧೂಮ್ರಾಕ್ಷನೂ ಕೌಶಿಕಿಯಿಂದ ಭಸ್ಮವಾದು ದನ್ನು ನೋಡಿ ಜಗತ್ತೆಲ್ಲವೂ ಹಾಹಾಕಾರ ಮಾಡತೊಡಗಿತು. ಆ ಮಹಾಶಬ್ದವನ್ನು ಶುಂಭನೂ ಕೇಳಿದನು. ಆಗ ಆ ಶುಂಭನು ಬಲಿಷ್ಠರಾದ ಚಂಡಮುಂಡರನ್ನೂ ರುರು ವೆಂಬ ಮತ್ತೊಬ್ಬ ಬಲಶಾಲಿಯಾದ ದಾನವನನ್ನೂ ಯುದ್ಧಕ್ಕಾಗಿ ಕಳುಹಿಸಿದನು. ಅವರೂ ಸಹ ಸಂತೋಷದಿಂದ ಗಜಾಶ್ವಗಳಿಂದ ಕೂಡಿದ ಅಪಾರವಾದ ಸೈನ್ಯದೊಡನೆ ಕೌಶಿಕಿಯು ಇರುವ ಸ್ಥಳಕ್ಕೆ ಬಂದರು. ಆಗ ಬರುತ್ತಿರುವ ನೂರು ಕೋಟಿಗೆ ಸ್ವಲ್ಪ ಕಡಿಮೆಯಾಗಿರುವ ಆ ಸೈನ್ಯವನ್ನು ನೋಡಿ ಪರ್ವತದ ಗುಹೆಯಲ್ಲಿ ವಾಸಿಸುತ್ತಿದ್ದ ದೇವಿಯ ವಾಹನವಾದ ಸಿಹ್ಮವು ಜಟೆಯನ್ನು ಕೊಡಹುತ್ತಾ ಆ ದಾನವಸೈನ್ಯದ ಮೇಲೆ ಬಿದ್ದು ಕೆಲವರನ್ನು ಕೈಯ್ಯಿನ ಪ್ರಹಾರದಿಂದಲೂ ಮತ್ತೆ ಕೆಲವರನ್ನು ಬಾಯಿ

ನಖರ್ೈಃ ಕಾಂಶ್ಚಿದಾಕ್ರಮ್ಯ ಉರಸಾಸ್ತ್ರಮಿಯಾಯ ಚ ।
ತೇ ವಧ್ಯಮಾನಾಃ ಸಿಹ್ಮೇನ ಗಿರಿಕಂದರವಾಸಿನಾ ॥ ೫೧ ॥

ಭೂತೈಶ್ಚ ದೇವ್ಯನುಚರೈ ಶ್ಚಂಡಮುಂಡೌ ಸಮಾಶ್ರಯಂ ।
ತಾವಾರ್ತಂ ಸ್ವಬಲಂ ದೃಷ್ಟ್ವಾ ಕೋಪಪ್ರಸ್ಫುರಿತಾಧರಾ ॥ ೫೨ ॥

ಸಮಾದ್ರವೇತಾಂ ದುರ್ಗಾಂ ವೈ ಪತಂಗಾವಿವ ಪಾವಕಂ ।
ತಾವಾಯಾಂತೌ ತತೋ ರೌದ್ರೌ ದೃಷ್ಟ್ವಾ ಕ್ರೋಧಪರಿಪ್ಲುತಾ ॥ ೫೩ ॥

ತ್ರಿಶಿಖಾಂ ಭ್ರುಕುಟೀಂ ಚಕ್ರೇ ಚಕಾರ ಪರಮೇಶ್ವರೀ ।
ಭ್ರುಕುಟೀಕುಟಿಲಾದ್ದೇವ್ಯಾ ಲಲಾಟಫಲಕಾದ್ದ್ರುತಂ ।
ಕಾಲೀ ಕರಾಲವದನಾ ನಿಸ್ಸೃತಾ ಯೋಗಿನೀ ಶುಭಾ ॥ ೫೪ ॥

ಖಟ್ವಾಂಗಮಾದಾಯ ಕರೇಣ ರೌದ್ರ
ಮಸಿಂ ಚ ಕಾಲೋಗ್ರಮುಕೋಶಮುಗ್ರಂ ।
ಸಂಶುಷ್ಕಗಾತ್ರೀ ರುಧಿರಾಪ್ಲುತಾಂಗೀ
ನರೇಂದ್ರಮೂರ್ಧ್ನಾಂ ಸ್ರಜಮುದ್ವಹಂತೀ ॥ ೫೫ ॥

ನಿಂದಲೂ ಇನ್ನೂ ಕೆಲವರನ್ನು ಉಗುರುಗಳಿಂದಲೂ ಎದೆಯಿಂದಲೂ ಪ್ರಹರಿಸಿ ಲೀಲಾಮಾತ್ರದಿಂದಲೇ ಆ ದಾನವ ಸೈನ್ಯವನ್ನು ಬಹಳ ಉಪದ್ರವಪಡಿಸಿತು. ಈರೀತಿ ಸಿಹ್ಮದಿಂದ ಹಿಂಸಿಸಲ್ಪಟ್ಟ ಆ ದಾನವರು,

೫೨-೫೪. ದೇವಿಯ ಅನುಚರರಾದ ಭೂತಗಳಿಂದಲೂ ಪೀಡಿಸಲ್ಪಟ್ಟು ಆರ್ತಿ ಹೊಂದಿದರು. ಹೀಗೆ ಹಿಂಸೆಯಿಂದ ದುಃಖಪಡುತ್ತಿರುವ ತಮ್ಮ ಸೈನ್ಯವನ್ನು ನೋಡಿ ಚಂಡಮುಂಡರು ಕೋಪದಿಂದ ತುಟಿಯನ್ನು ನಡುಗಿಸುತ್ತಾ ಪತಂಗಗಳು ಅಗ್ನಿಯನ್ನು ಆವರಿಸುವಂತೆ ದೇವಿಯನ್ನೆ ಮುತ್ತಲು ಓಡಿಬಂದರು. ಹಾಗೆ ಬರುತ್ತಿರುವ ಅವರನ್ನು ನೋಡಿ ಕುಪಿತಳಾದ ದೇವಿಯು ಹುಬ್ಬುಗಳನ್ನು ಗಂಟುಹಾಕಿಕೊಂಡು ಚಕ್ರವನ್ನು ಅವಲೋಕಿಸಿದಳು. ಕುಟಿಲವಾದ ಆ ಹುಬ್ಬುಗಳಿಂದ ಭಯಂಕರವಾದ ದೇವಿಯ ಹಣೆಯಿಂದ ಯೋಗಶಕ್ತಿಯುಳ್ಳ ಭಯಂಕರವದನಳಾದ ಕಾಲಿಯು ಹೊರಗೆ ಹೊರಟಳು.

೫೫-೫೬ ಒಂದು ಕೈಯ್ಯಿನಲ್ಲಿ ಖಟ್ವಾಂಗವೆಂಬ ಯೋಗದಂಡವನ್ನೂ ಮತ್ತೊಂದು ಕೈಯ್ಯಿನಲ್ಲಿ ಒರೆಯಿಂದ ತೆಗೆಯಲ್ಪಟ್ಟ ಉಗ್ರವಾದ ಖಡ್ಗವನ್ನೂ ಧರಿಸಿ

ಕಾಂಶ್ಚಿತ್ಖಡ್ಗೇನ ಚಿಚ್ಛೇದ ಖಟ್ವಾಂಗೇನ ಪರಾನ್ರಣೇ ।
ನ್ಯಷೂದಯದ್ಭೃಶಂ ಕ್ರುದ್ಧಾ ಸರಥಾಂಶ್ಚ ಗಜಾನ್ರಿಪೂನ್ ॥ ೫೬ ॥

ಚರ್ಮಾಙ್ಕುಶಂ ಮುದ್ಗರಂ ಚ ಸಧನುಷ್ಕಂ ಸಘಂಟಿಕಂ ।
ಕುಂಜರಂ ಸಹಯಂತ್ರೇಣ ಪ್ರಚಿಕ್ಷೇಪ ಮುಖೇಂಬಿಕಾ ॥ ೫೭ ॥

ಸಚಕ್ರಕೂಬರರಥಂ ಸಸಾರಥಿ ತುರಂಗಮಂ ।
ಸಮಂ ಯೋಧೇನ ವದನೆ ಕ್ಷಿಪ್ಯ ಚರ್ವಯತೆಂಬಿಕಾ ॥ ೫೮ ॥

ಏಕಂ ಜಗ್ರಾಹ ಕೇಶೇಷು ಗ್ರೀವಾಯಾಮಪರಂ ತಥಾ ।
ಪಾದೇನಾಕ್ರಮ್ಯ ಚೈವಾನ್ಯಂ ಪ್ರೇಷಯಾಮಾಸ ಮೃತ್ಯವೇ ॥ ೫೯ ॥

ತತಸ್ತು ತತ್ಬಲಂ ದೇವ್ಯಾ ಭಕ್ಷಿತಂ ಸಗಣಾಧಿಪಂ ।
ರುರುರ್ದೃಷ್ಟ್ವಾ ಪ್ರದುದ್ರಾವ ತಂ ಚಂಡೋ ದದೃಶೆ ಸ್ವಯಂ ॥ ೬೦ ॥

ಕೃಶವಾಗಿಯೂ ರಕ್ತದಿಂದ ತೋಯಲ್ಪಟ್ಟು ಇರುವ ದೇಹವುಳ್ಳವಳಾಗಿ ರಾಜರಿಂದ ತಲೆಯಿಂದ ಅರ್ಪಿಸಲ್ಪಟ್ಟ ಮಾಲಿಕೆಯನ್ನು ಧರಿಸಿ ಕೆಲವರನ್ನು ಕತ್ತಿಯಿಂದ ಕತ್ತರಿಸುತ್ತಲೂ ಕೆಲವರನ್ನು ಯೋಗದಂಡದಿಂದ ಪ್ರಹರಿಸುತ್ತಲೂ ಬಹಳ ಕೋಪದಿಂದ ಗಜಾಶ್ವರಥಗಳೊಡನೆ ಎಲ್ಲಾ ಶತ್ರುಗಳನ್ನೂ ಆ ಕಾಲಿಯು ಕೊಲ್ಲುತ್ತ ಬಂದಳು. ಗುರಾಣಿ, ಅಂಕುಶ, ಮುದ್ಗರ, ಘಂಟಾಸಹಿತವಾದ ಧನಸ್ಸು ಇವೇ ಮೊದಲಾದ ಶತ್ರುಗಳ ಆಯುಧಗಳನ್ನೂ ಯಂತ್ರಸಹಿತವಾದ ಆನೆಗಳನ್ನೂ ಸಹ ಆ ಅಂಬಿಕೆಯು ತನ್ನ ಬಾಯಿನಲ್ಲೇ ಹಾಕಿಕೊಂಡಳು. ಚಕ್ರ, ಮೂಕಿ, ಸಾರಥಿ, ಕುದುರೆ ಇವುಗಳಿಂದ ಕೂಡಿದ ರಥಗಳನ್ನೇ ಯೋಧರೊಡನೆ ಬಾಯಿನಲ್ಲಿ ಹಾಕಿಕೊಂಡು ಆ ಅಂಬಿಕೆಯು ಅಗಿಯಲಾರಂಭಿಸಿದಳು.

೫೯-೬೨. ಒಬ್ಬನನ್ನು ಕೇಶಗಳಲ್ಲಿಯೂ ಮತ್ತೊಬ್ಬನನ್ನು ಕುತ್ತಿಗೆಯಲ್ಲಿಯೂ ಇನ್ನೊಬ್ಬನನ್ನು ಕಾಲಿನಿಂದಲೂ ಆಕ್ರಮಿಸಿ ಮೃತ್ಯುವಿಗೆ ಒಪ್ಪಿಸುತ್ತ ಬಂದಳು. ಅನಂತರ ಆ ಸೈನ್ಯವೆಲ್ಲವೂ ದೇವಿಯಿಂದ ಭಕ್ಷಿಸಲ್ಪಡುತ್ತಿರುವದನ್ನು ನೋಡಿ ರುರುವು ದೇವಿಗೆ ಎದುರಾಗಿ ಆಕ್ರಮಿಸಲು ಓಡಿಬಂದನು. ಅವನನ್ನು ಚಂಡನೂ ನೋಡಿ

ಅಜಘಾನಾಥ ಶಿರಸಿ ಖಟ್ವಾಂಗೇನ ಮಹಾಸುರಂ ।
ಸ ಪಪಾತ ಹತೋ ಭೂಮ್ಯಾಂ ಛಿನ್ನಮೂಲ ಇವ ದ್ರುಮಃ ॥ ೬೧ ॥

ತತಸ್ತಂ ಪತಿತಂ ದೃಷ್ಟ್ವಾ ಪಶೋರಿವ ವಿಭಾವರೀ ।
ಕೋಶಮುತ್ಕರ್ತಯಾಮಾಸ ಕರಾದಿಚರಣಾಂತಿಕಂ ॥ ೬೨ ॥

ಸಾ ಚ ಕೋಶಂ ಸಮಾದಾಯ ಬಬಂಧ ವಿಮಲಾ ಜಟಾಃ ।
ಏಕಾ ನ ಬಂಧಮಗಮತ್ತಾಮುತ್ಪಾಟ್ಯಾಕ್ಷಿಪದ್ಭುವಿ ॥ ೬೩ ॥

ಸಾ ಜಾತಾ ಸುತರಾಂ ರೌದ್ರೀ ತೈಲಾಭ್ಯಕ್ತಶಿರೋರುಹಾ ।
ಕೃಷ್ಣಾರ್ಧಮರ್ಧಶುಕ್ಲಂ ಚ ಧಾರಯಂತೀ ಸ್ವಕಂ ವಪುಃ ॥ ೬೪ ॥

ಸಾಬ್ರವೀದ್ವರಮೇಕಂ ತು ಮಾರಯಾಮಿ ಮಹಾಸುರಂ ।
ತಸ್ಯಾ ನಾಮ ತದಾ ಚಕ್ರೇ ಚಂಡಮಾರೀತಿ ವಿಶ್ರುತಂ ॥ ೬೫ ॥

ಪ್ರಾಹ ಗಚ್ಛಸ್ವ ಸುಭಗೇ ಚಂಡಮುಂಡಾವಿಹಾನಯ ।
ಸ್ವಯಂ ಹಿ ಮಾರಯಿಷ್ಯಾಮಿ ತಾವಾನೇತುಂ ತ್ವಮರ್ಹಸಿ ॥ ೬೬ ॥

ದನು. ಆಗ ದೇವಿಯು ಆ ಅಸುರನನ್ನು ಯೋಗದಂಡದಿಂದ ತಲೆಯಮೇಲೆ ಹೊಡೆಯಲಾಗಿ ಅವನು ಬುಡದಲ್ಲಿ ಕತ್ತರಿಸಲ್ಪಟ್ಟ ಮರದಂತೆ ನೆಲಕ್ಕೆ ಉರುಳಿದನು. ಹಾಗೆ ಕೆಳಗೆ ಬಿದ್ದ ಅವನ ದೇಹವನ್ನು ದೇವಿಯು ಪಶುವಿನ ದೇಹವನ್ನು ಸೀಳುವಂತೆ ಕೈಯ್ಯಿನಿಂದ ಕಾಲಿನವರಿಗೂ ಸೀಳಿದಳು.

೬೩-೬೬. ಆಗ ಆ ಕಾಲಿಯು ಸೀಳಲ್ಪಟ್ಟ ಅವನ ಆ ದೇಹದಿಂದ ತನ್ನ ಜಟೆಯನ್ನೆಲ್ಲಾ ಸುತ್ತಿ ಎತ್ತಿ ಕಟ್ಟಿದಳು. ಆಗ ಒಂದು ಜಟೆಯು ಕಟ್ಟಲ್ಪಡದೇ ಹೋದುದರಿಂದ ಅದನ್ನು ಕಿತ್ತು ಭೂಮಿಯಲ್ಲಿ ಎಸೆದಳು. ಆ ಜಟೆಯು ರೌದ್ರಾಕಾರವುಳ್ಳವಳಾಗಿಯೂ ಎಣ್ಣೆಯಿಂದ ನುಣುಪಾದ ಕೇಶಪಾಶವುಳ್ಳವಳಾಗಿಯೂ ಅರ್ಧಭಾಗ ಕಪ್ಪಾಗಿಯೂ ಅರ್ಧಭಾಗ ಬಿಳುಪಾಗಿಯೂ ಇರುವ ದೇಹವನ್ನು ಧರಿಸಿ ಸ್ತ್ರೀರೂಪದಿಂದ ಎದ್ದು ನಿಂತಿತು. ಬಲಿಷ್ಠನಾದ ಒಬ್ಬ ಅಸುರನನ್ನು ನಾನು ಕೊಲ್ಲುತ್ತೇನೆಂಬ ವಚನವನ್ನೂ ಇತ್ತಿತು. ಆಗ ಆ ವನಿತೆಗೆ ಚಂಡಮಾರೀ ಎಂದು ನಾಮವನ್ನಿತ್ತು ಎಲೈ ನಾರೀಮಣಿಯೇ ಹೊರಡು. ಆ ಚಂಡಮುಂಡರನ್ನು ಇಲ್ಲಿ ಕರೆದುಕೊಂಡು ಬಾ. ನಾನೇ ಅವರನ್ನು ಕೊಲ್ಲುತ್ತೇನೆ ಎಂದು ಪ್ರೇರಿಸಿದಳು.

ಶ್ರುತ್ವೈತದ್ವಚನಂ ದೇವ್ಯಾಃ ಸಾಭ್ಯದ್ರವತ ತಾವುಭೌ ।
ಪ್ರದುದ್ರುವತುರ್ಭಯಾತ್ತಾ ದಿಶಮಾಶ್ರಿತ್ಯ ದಕ್ಷಿಣಾಂ ॥ ೬೭ ॥

ತತಸ್ತಾವಪಿ ವೇಗೇನ ಪ್ರಧಾವತ್ಯಕ್ತವಾಸಸಾ ।
ಸಾಧಿರುಹ್ಯ ಮಹಾವೇಗಂ ರಾಸಭಂ ಗರುಡೋಪಮಂ ॥ ೬೮ ॥

ಯತೋ ಗತೌ ಹಿ ತೌ ದೈತ್ಯೌ ತತ್ರೈವಾನುಯಯೌ ಶಿವಾ ।
ಸಾ ದದರ್ಶ ತದಾ ಪೌಂಡ್ರಂ ಮಹಿಷಂ ವೈ ಯಮಸ್ಯ ಚ ॥ ೬೯ ॥

ಸಾ ತಸ್ಯೋತ್ಪಾಟಯಾಮಾಸ ವಿಷಾಣಂ ಭುಜಗಾಕೃತಿಂ ।
ಸಂಪ್ರಗೃಹ್ಯ ಕರೇಣೈವ ದಾನವಾನನ್ವಗಾಜ್ಜವಾತ್ ॥ ೭೦ ॥

ತೌ ಚಾಪಿ ಭೂಮಿಂ ಸಂತ್ಯಜ್ಯ ಜಗ್ಮತುರ್ಗಗನಂ ತದಾ ।
ವೇಗೇನಾಭಿಸೃತಾ ಸಾ ಚ ರಾಸಭೇನ ಮಹೇಶ್ವರೀ ॥ ೭೧ ॥

ತತೋದದರ್ಶ ಗರುಡಂ ಪನ್ನಗೇಂದ್ರಂ ವಿಷಾದಿಷು ।
ಕರ್ಕೋಟಕಂ ಸ ದೃಷ್ಟ್ವೈವ ಊರ್ಧ್ವರೋಮಾ ವ್ಯಜಾಯತ ॥ ೭೨ ॥

೬೭-೭೦. ದೇವಿಯ ಈ ಮಾತನ್ನು ಕೇಳಿದೊಡನೆಯೇ ಆ ಚಂಡಮಾರಿಯು ಚಂಡಮುಂಡರನ್ನುದ್ದೇಶಿಸಿ ಅವರನ್ನು ಹಿಡಿಯಲು ಓಡಿದಳು. ಅವರೂ ಸಹ ಭಯದಿಂದ ದಕ್ಷಿಣದಿಕ್ಕನ್ನು ಆಶ್ರಯಿಸಿ ಓಡಿದರು. ಬಟ್ಟೆಯೂ ಬಿಚ್ಚಿಹೋಗುವಷ್ಟು ವೇಗದಿಂದ ಅವರನ್ನು ಹಿಡಿಯುವ ಉದ್ದೇಶಕ್ಕಾಗಿ ಆ ಚಂಡಮಾರಿಯು ಗರುಡನಂತೆ ವೇಗಶಾಲಿಯಾದ ಕತ್ತೆಯೊಂದನ್ನು ಹತ್ತಿ ಅವರು ಹೋದ ಮಾರ್ಗದಿಂದಲೇ ಹಿಂಬಾಲಿಸಿ ನಡೆದಳು. ಹಾಗೆ ಹೋಗುತ್ತಿರುವಾಗ ಪೌಂಡ್ರವೆಂಬ ಯಮ ಮಹಿಷವನ್ನು ಅವಳು ನೋಡಿದಳು. ಆಗ ಅವಳು ಹಾವಿನಂತೆ ತೀಕ್ಷ್ಣವಾಗಿದ್ದ ಆ ಮಹಿಷದ ಕೊಂಬನ್ನು ಕಿತ್ತು ಕೈಯ್ಯಿನಲ್ಲಿ ಧರಿಸಿ ಅವರನ್ನೇ ಅನುಸರಿಸಿ ವೇಗದಿಂದ ಓಡಿದಳು.

೭೧-೭೪. ಅನಂತರ ಆ ಚಂಡಮುಂಡರು ಭೂಮಿಯನ್ನು ಬಿಟ್ಟು ಗಗನ ಮಾರ್ಗವನ್ನಾಶ್ರಯಿಸಿ ಓಡಲಾರಂಭಿಸಿದರು. ಆ ಚಂಡಮಾರಿಯೂ ಸಹ ರಾಸಭಾರೂಢಳಾಗಿಯೇ ವೇಗದಿಂದ ಅವರನ್ನು ಹಿಂಬಾಲಿಸಿದಳು. ಅನಂತರ ಆ ಗಗನ ಮಾರ್ಗದಲ್ಲಿ ವಿಷಾಪಹಾರಿಯಾದ ಗರುಡನನ್ನೂ ಕರ್ಕೋಟಕನೆಂಬ ಸರ್ಪರಾಜನನ್ನೂ

ಭಯಾರ್ತಶ್ಚೈವ ಗರುಡೋ ಮಾಂಸಪಿಂಡೋಪಮೋ ಬಭೌ ।
ನ್ಯಪತಂಸ್ತಸ್ಯ ಪತ್ರಾಣಿ ರೌದ್ರಾಣಿ ಹಿ ಪತತ್ರಿಣಃ ॥ ೭೩ ॥

ಖಗೇಂದ್ರಪತ್ರಾಣ್ಯಾದಾಯ ನಾಗಂ ಕರ್ಕೋಟಕಂ ತಥಾ ।
ವೇಗೇನಾಥಾಸರದ್ದೇವೀ ಚಂಡಮುಂಡೌ ಭಯಾತುರೌ ॥ ೭೪ ॥

ಸಂಪ್ರಾಪ್ತೌ ಚ ತದಾ ದೇವ್ಯಾ ಚಂಡಮುಂಡೌ ಮಹಾಸುರೌ ।
ಬದ್ಧೌ ಕರ್ಕೋಟಕೇನೈವ ಬದ್ಧ್ವಾ ವಿಂಧ್ಯಮುಪಾಗಮತ್ ॥ ೭೫ ॥

ನಿವೇದಯಿತ್ವಾ ಕಾಶಿಕ್ಯಾಃ ಕೋಶಮಾದಾಯ ಭೈರವಂ ।
ಶಿರೋಭಿರ್ದಾನವೇಂದ್ರಾಣಾಂ ತಾರ್ಕ್ಷ್ಯಪತ್ರೈಶ್ಚ ಶೋಭನೈಃ ॥ ೭೬ ॥

ಕೃತ್ವಾ ಸ್ರಜಮನೌಪಮ್ಯಾಂ ಚಂಡಿಕಾಯೈ ನ್ಯವೇದಯತ್ ।
ಘರ್ಘರಾಂ ಚ ಮೃಗೇಂದ್ರಸ್ಯ ಚರ್ಮಣಃ ಸಾ ಸಮರ್ಪಯತ್ ॥ ೭೭ ॥

ಸ್ರಜಮನ್ಯಾಂ ಖಗೇಂದ್ರಸ್ಯ ಪತ್ರೈಃ ಮೂರ್ಧ್ನಿ ನಿಬದ್ಧ್ಯ ಚ ।
ಆತ್ಮನಾ ಸಾ ಪಪೌ ಪಾನಂ ರುಧಿರಂ ದಾನವೇಷ್ವಪಿ ॥ ೭೮ ॥

ನೋಡಿದಳು. ಆ ಕರ್ಕೋಟಕನನ್ನು ನೋಡಿ ಗರುಡನು ಭಯಪಟ್ಟು ರೆಕ್ಕೆಗಳನ್ನು ಮೇಲ್ಮುಖಗಳನ್ನಾಗಿ ಮಾಡುತ್ತಾ ಮಾಂಸಪಿಂಡಾಕಾರನಾಗಿ ನಿಂತನು. ಆ ಗರುಡನ ಭಯಂಕರಗಳಾದ ರೆಕ್ಕೆಗಳೆಲ್ಲವೂ ಕೆಳಗೆ ಉದುರಿದುವು. ಆಗ ದೇವಿಯು ಆ ಗರುಡನ ರೆಕ್ಕೆಗಳನ್ನೂ ಕರ್ಕೋಟಕನನ್ನೂ ತೆಗೆದುಕೊಂಡು ಭೀತರಾಗಿದ್ದ ಚಂಡ ಮುಂಡರನ್ನೇ ಅನುಸರಿಸಿ ವೇಗದಿಂದ ಓಡಿದಳು.

೭೫-೭೮. ಅನಂತರ ಆ ಚಂಡಮುಂಡರು ಚಂಡಮಾರಿಯಿಂದ ಹಿಡಿಯಲ್ಪಟ್ಟರು. ಅವರನ್ನು ಆ ಕರ್ಕೋಟಕದಿಂದಲೇ ಬಂಧಿಸಿ ದೇವಿಯು ವಿಂಧ್ಯಗಿರಿಗೆ ತೆಗೆದುಕೊಂಡುಬಂದಳು. ಈ ವಿಚಾರವನ್ನು ಕೌಶಿಕಿಯಲ್ಲಿ ಅರಿಕೆಮಾಡಿ ದಾನವರ ದೇಹವನ್ನು ತೆಗೆದುಕೊಂಡು ಅವರ ತಲೆಗಳಿಂದಲೂ ಗರುಡನ ಗರಿಗಳಿಂದಲೂ ರಮಣೀಯವಾದ ಮಾಲಿಕೆಯನ್ನು ಮಾಡಿ ಚಂಡಿಕೆಗೆ ಅರ್ಪಿಸಿದಳು. ಸಿಂಹದ ಚರ್ಮದಿಂದ ಮಾಡಿದ ಘರ್ಘರವೆಂಬ ವಾದ್ಯವನ್ನೂ ಅರ್ಪಿಸಿದಳು. ಗರುಡನ ಗರಿಗಳಿಂದ ಮಾಡಿದ ಮತ್ತೊಂದು ಮಾಲಿಕೆಯನ್ನೂ ತಲೆಯಲ್ಲಿ ಧರಿಸಿ ತಾನೂ ಶಿವೆಯೊಡನೆ ರಕ್ತಪಾನಮಾಡಿದಳು.

ಚಂಡಂತ್ವಾದಾಯ ಮುಂಡಂ ಚ ಮುಂಡಂ ಚಾಸುರನಾಯಕೌ ।
ಚಕಾರ ಕುಪಿತಾ ದುರ್ಗಾ ವಿಶಿರಸ್ಕೌ ಮಹಾಸುರೌ ॥ ೭೯ ॥

ತಯೋರೇವ ತದಾ ದೇವ್ಯಾ ಶೇಖರಃ ಶಿರಸಾ ಕೃತಃ ।
ಕೃತ್ವಾ ಜಗಾಮ ಕೌಶಿಕ್ಯಾಃ ಸಕಾಶಂ ಶರ್ವಯಾ ಸಹ ॥ ೮೦ ॥

ಸಮೇತ್ಯ ಸಾಬ್ರವೀದ್ದೇವಿ ಗೃಹ್ಯತಾಂ ಶೇಖರೋತ್ತಮಃ ।
ಗ್ರಥಿತೋ ದೈತ್ಯಶೀರ್ಷಾಭ್ಯಾಂ ನಾಗರಾಜೇನ ವೇಷ್ಟಿತಃ ॥ ೮೧ ॥

ತಂ ಶೇಖರಂ ಶಿವಾ ಗೃಹ್ಯ ಚಾಮುಂಡಾ ಮೂರ್ಧ್ನಿ ವಿಸ್ತೃತಂ ।
ಬಬಂಧ ಪ್ರಾಹ ಚೈವೇನಾಂ ಕೃತಂ ಕರ್ಮ ಸುದಾರುಣಂ ॥ ೮೨ ॥

ಶೇಖರಂ ಚಂಡಮುಂಡಾಭ್ಯಾಂ ಯಸ್ಮಾದ್ಧಾರಯತೇ ಶುಭಂ ।
ತಸ್ಮಾಲ್ಲೋಕೇ ತವ ಖ್ಯಾತಿಶ್ಚಾಮುಂಡೇತಿ ಭವಿಷ್ಯತಿ ॥ ೮೩ ॥

ಇತ್ಯೇವಮುಕ್ತ್ವಾ ವಚನಂ ತ್ರಿನೇತ್ರಾಂ
ತಾಂ ಚಂಡಮುಂಡಸ್ರಜಧಾರಿಣೀಂ ವೈ ।

೭೯-೮೨. ಆ ದಾನವರ ಮಧ್ಯದಲ್ಲಿ ಅಸುರನಾಯಕರಾದ ಚಂಡಮುಂಡರನ್ನು ಶಿರಚ್ಛೇದನಮಾಡಿ ಆ ದುರ್ಗೆಯು ಅವರ ತಲೆಗಳಿಂದಲೇ ದೇವಿಗೆ ಶಿರೋಭೂಷಣ ವನ್ನು ಮಾಡಿದಳು. ಅದನ್ನು ತೆಗೆದುಕೊಂಡು ಶರ್ವೆಯೊಡನೆ ಆ ದುರ್ಗೆಯು ಕೌಶಿಕಿಯ ಸಮೀಪಕ್ಕೆ ಹೋದಳು. ಅಲ್ಲಿ ಹೋಗಿ ದೇವಿಯನ್ನು ಕುರಿತು ಎಲೈ ದೇವಿಯೇ, ಆ ದೈತ್ಯರ ತಲೆಗಳಿಂದಲೇ ನಾಗರಾಜನಿಂದ ಸುತ್ತಲ್ಪಟ್ಟು ಈ ಮಾಲಿಕೆಯು ಮಾಡಲ್ಪಟ್ಟಿದೆ. ಈ ಶಿರೋಭೂಷಣವನ್ನು ಸ್ವೀಕರಿಸಬೇಕು ಎಂದಳು. ಆಗ ಕೌಶಿಕಿಯು ಆ ಶಿರೋಭೂಷಣವನ್ನು ತೆಗೆದುಕೊಂಡು ಚಾಮುಂಡಿಯ ಶಿರಸ್ಸಿನಲ್ಲಿ ಕಟ್ಟಿ ನೀನು ಬಹಳ ಅಸಾಧಾರಣವಾದ ಕಾರ್ಯವನ್ನು ನಿರ್ವಹಿಸಿದ್ದೀಯೆ ಎಂದು ಶ್ಲಾಘಿ ಸಿದಳು.

೮೩-೮೬. ಚಂಡಮುಂಡರ ತಲೆಯಿಂದ ಮಾಡಲ್ಪಟ್ಟ ಶಿರೋಭೂಷಣವನ್ನು ನೀನು ಧರಿಸಿರುವದ್ದರಿಂದ ಲೋಕದಲ್ಲಿ ಚಾಮುಂಡೀ ಎಂದು ಪ್ರಸಿದ್ಧಿಪಡೆಯುವೆ ಎಂದು ಹೇಳಿ ತ್ರಿನೇತ್ರಳಾಗಿಯೂ ವಿವಸನಳಾಗಿಯೂ ಇರುವ ಆ ಚಾಮುಂಡಿಯನ್ನು

ದಿಗ್ವಾಸಸಂ ಚಾಭ್ಯವದತ್ಪ್ರತೀತಾ
ನಿಷೂದಯಸ್ವಾರಿಬಲಾನ್ಯಮೂನಿ ॥ ೮೪ ॥

ಸಾತ್ವೇವಮುಕ್ತ್ವಾಥ ವಿಷಾಣಕೋಟ್ಯಾ
ಸವೇಗಯುಕ್ತೇನ ಶರಾಸನೇನ ।
ನಿಷೂದಯಂತೀ ರಿಪುಸೈನ್ಯಮುಗ್ರಂ
ಚಚಾರ ಚಾನ್ಯಾನಸುರಾಂಶ್ಚ ಖಾದ ॥ ೮೫ ॥

ತತೋಂಬಿಕಾಯಾಸ್ತ್ವಥ ಚಂಡಮುಂಡಾ
ಮಾರ್ಯಾ ಚ ಸಿಂಹೇನ ಚ ಭೂತಸಂಘೈಃ ।
ನಿಪಾತ್ಯಮಾನಾ ದನುಪುಂಗವಾಸ್ತೇ
ಕಕುದ್ಮಿನಂ ಸಿಹ್ಮಮುಪಾಶ್ರಯಂತ ॥ ೮೬ ॥

ಇತಿ ಶ್ರೀ ವಾಮನಪುರಾಣೇ ದೇವೀಮಾಹಾತ್ಮ್ಯೆ ಚಂಡಮುಂಡವಧೋ
ನಾಮ ಪಂಚಪಂಚಾಶತ್ತಮೋಽಧ್ಯಾಯಃ

ಕುರಿತು ಈ ಶತ್ರುಸೈನ್ಯವನ್ನೆಲ್ಲಾ ನಾಶಪಡಿಸು ಎಂದಳು. ಹೀಗೆ ಪ್ರೇರಿಸಲ್ಪಟ್ಟ ಆ ಚಾಮುಂಡಿಯು ಕೈಯ್ಯಿನಲ್ಲಿದ್ದ ಯಮುಮಹಿಷದ ಕೊಂಬಿನಿಂದ ವೇಗಶಾಲಿಯಾದ ಧನುಸ್ಸನ್ನು ನಿರ್ಮಿಸಿ ಶತ್ರುಸೈನ್ಯವನ್ನು ನಾಶಪಡಿಸುತ್ತಾ ಸಂಚರಿಸಿದಳು. ಕೆಲವರನ್ನು ತಿಂದೂ ತಿಂದಳು. ಈರೀತಿ ದೇವಿಯ ಕಡೆಯವಳಾದ ಚಂಡಮಾರಿಯಿಂದಲೂ ಸಿಂಹದಿಂದಲೂ ಭೂತಗಳಿಂದಲೂ ಕೊಲ್ಲಲ್ಪಡುತ್ತಿದ್ದ ಆ ದಾನವರು ಕಕುದ್ಮಿ ಎಂಬ ಆ ಸಿಂಹಕ್ಕೆ ಶರಣಾಗತರಾಗಿ ನಿಂತರು.

ಇಲ್ಲಿಗೆ ಶ್ರೀ ವಾಮನಪುರಾಣದ ದೇವೀಮಾಹಾತ್ಮ್ಯದಲ್ಲಿ ಚಂಡಮುಂಡವಧವೆಂಬ
ಐವತ್ತೈದನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ವಿಂಧ್ಯವಾಸಿನಿಯಾದ ದೇವಿಯ ಮಾಹಾತ್ಮ್ಯಕ್ಕೆ ಅನುಗುಣವಾದ ದಾನವ ಸಂಹಾರವನ್ನು ವರ್ಣಿಸುವುದಕ್ಕಾಗಿ ಕಶ್ಯಪರ ಪತ್ನಿಯಾದ ದನುವಿಗೆ ಶುಂಭ, ನಿಶುಂಭ, ನಮುಚಿ ಎಂಬ ಮೂವರು ಪುತ್ರರು ಹುಟ್ಟಿದರೆಂದೂ ಅವರು ದೇವತೆಗಳಿಗೆ ದ್ವೇಷಿಗಳಾಗಿದ್ದುದರಿಂದ ಅವರಲ್ಲಿ ನಮುಚಿಯನ್ನು ಇಂದ್ರನು ಛಲದಿಂದ ಸಂಹರಿಸಿದನೆಂದೂ ಆ ದ್ವೇಷದಿಂದ ಶುಂಭನಿಶುಂಭರು ದೇವತೆಗಳಮೇಲೆ ಯುದ್ಧ ಹೂಡಿ ಜಯಶಾಲಿಗಳಾಗಿ ತ್ರಿಲೋಕಸಾಮ್ರಾಜ್ಯಕ್ಕೆ ಅಧಿಪತಿಗಳಾದರೆಂದೂ ಹೇಳಲಾಯಿತು. ಆ ಶುಂಭನಿಶುಂಭರು ದಿಗ್ವಿಜಯಯಾತ್ರೆಯಿಂದ ಭೂಲೋಕಕ್ಕೆ ಬರುವಾಗ ಅಲ್ಲಿ ರಕ್ತಬೀಜನೆಂಬ ದಾನವನೊಡನೆ ಸಂಭಾಷಣೆ ನಡೆಯಲು ರಕ್ತಬೀಜನು ಸ್ವಜನರಾದ ಇವರ ಸಹಾಯದಿಂದ ವಿಂಧ್ಯವಾಸಿನಿಯನ್ನು ಜಯಿಸಿ ತಾನೇ ಅವಳನ್ನು ಮದುವೆಯಾಗಲು ಆಲೋಚಿಸಿದನು. ಇವರು ಮಾತನಾಡುತ್ತಿದ್ದ ಕಾಲದಲ್ಲೇ ಯಮುನಾನದಿಯಲ್ಲಿ ಜಲದಲ್ಲಿ ಮುಳುಗಿದ್ದ ಮಹಿಷನ ಮಂತ್ರಿಗಳಾಗಿದ್ದ ಚಂಡ ಮುಂಡರು ನೀರಿನಿಂದ ಎದ್ದುಬಂದು ವಿಚಾರಿಸಿ ರಕ್ತಬೀಜನ ಸಿದ್ಧಾಂತವು ಸರಿಯಲ್ಲವೆಂದೂ ಪ್ರಕೃತದಲ್ಲಿ ದಾನವರಾಜರಾಗಿರುವ ಶುಂಭನಿಶುಂಭರೇ ದೇವಿಯ ಪಾಣಿಗ್ರಹಣಕ್ಕೆ ಅರ್ಹರೆಂದೂ ನಿಶ್ಚೈಸಿದರು. ಆಗ ಪ್ರಭುವಾದ ಶುಂಭನು ದೇವಿಯನ್ನು ಹೊಂದಲು ಸುಗ್ರೀವನೆಂಬ ದೂತನನ್ನು ಕಳುಹಿಸಲಾಗಿ ಅವನು ದೇವಿಯಲ್ಲಿ ಹೋಗಿ ಶುಂಭನ ಐಶ್ವರ್ಯವನ್ನೂ, ಆಶೆಯನ್ನೂ ಅರಿಕೆಮಾಡಿ ಯುದ್ಧದಲ್ಲಿ ತನ್ನನ್ನು ಗೆದ್ದವನೇ ತನ್ನ ಪಾಣಿಗ್ರಹಣಕ್ಕೆ ಅರ್ಹನೆಂಬ ದೇವಿಯ ಪಣಬಂಧವನ್ನು ಹಿಂತಿರುಗಿ ಬಂದು ಶುಂಭನಿಗೆ ತಿಳಿಸಿದನು. ಆಗ ಶುಂಭನು ಧೂಮ್ರಾಕ್ಷನೆಂಬ ದೈತ್ಯನನ್ನು ಸೈನ್ಯದೊಡನೆ ಕಳುಹಿಸಿದನು. ಆ ಧೂಮ್ರಾಕ್ಷನ ಅಹಿತವಚನದಿಂದ ಕ್ರುದ್ಧಳಾದ ದೇವಿಯು ಕಟಾಕ್ಷದಿಂದಲೇ ಅವನನ್ನು ಭಸ್ಮಮಾಡಿದಳು. ಅನಂತರ ಶುಂಭನು ಚಂಡ ಮುಂಡರನ್ನೂ ರುರುವೆಂಬ ದೈತ್ಯನನ್ನೂ ಯುದ್ಧಕ್ಕಾಗಿ ಕಳುಹಿಸಿದನು. ಆಗ ಕುಪಿತಳಾದ ದೇವಿಯ ಹಣೆಯಿಂದ ಉದ್ಭವಿಸಿದ ಯೋಗಿನಿಯು ದಾನವರನ್ನು ನಾಶಮಾಡಿ ರುರುವನ್ನು ಕೊಂದು ಅವನ ದೇಹದಿಂದ ಜಟಿಯನ್ನು ಕಟ್ಟುವಾಗ ಬಿಚ್ಚಿಹೋದ

ಒಂದು ಜಟೆಯನ್ನು ಕಿತ್ತು ಭೂಮಿಗೆ ಎಸೆಯಲಾಗಿ ಅದು ಸ್ತ್ರೀರೂಪದಿಂದ ಉದ್ಭವಿಸಿತು. ಆಗ ಆ ವ್ಯಕ್ತಿಯು ಯೋಗಿನಿಯಾದ ಶಿವೆಯು ಅಪ್ಪಣೆಯಿಂದ ಚಂಡಮುಂಡರನ್ನು ಓಡಿಸಿಕೊಂಡುಹೋಗಿ ಗಗನಮಾರ್ಗದಲ್ಲಿ ಚಾಮುಂಡಿಯಾಗಿ ಅವರನ್ನು ಹಿಡಿದು ತಂದು ಶಿವೆಗೆ ಒಪ್ಪಿಸಲಾಗಿ ಶಿವೆಯು ಅವರನ್ನು ವಧಿಸಿ ಅವರ ತಲೆಯಿಂದ ಶಿರೋಭೂಷಣವನ್ನು ಮಾಡಿ ಕೌಶಿಕಿಗೆ ಒಪ್ಪಿಸಿದಳೆಂದೂ ಕೌಶಿಕಿಯು ಅದನ್ನು ದುರ್ಗೆಗೇ ಧರಿಸಿ ಅವಳಿಗೆ ಚಾಮುಂಡಿ ಎಂಬ ಹೆಸರನ್ನು ಕೊಟ್ಟಳೆಂದೂ ಹೇಳಲಾಯಿತು. ಕೌಶಿಕಿಯು ಅಪ್ಪಣೆಯಂತೆ ಚಾಮುಂಡಿಯೂ ಎಲ್ಲಾ ದೈತ್ಯರನ್ನೂ ನಾಶಪಡಿಸಿದಳೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀ ವಾ ಮ ನ ಪು ರಾ ಣಂ

ಷಟ್ಪಂಚಾಶತ್ತಮೋಽಧ್ಯಾಯಃ

ಪುಲಸ್ತ್ಯ ಉವಾಚ

ಚಂಡಮುಂಡೌ ಚ ನಿಹತೌ ದೃಷ್ಟ್ವಾ ಸೈನ್ಯಂ ಚ ವಿದ್ರುತಂ ।
ಸಮಾದಿದೇಶಾತಿಬಲಂ ರಕ್ತಬೀಜಂ ಮಹಾಸುರಂ ॥ ೧ ॥

ಅಕ್ಷೌಹಿಣೀನಾಂ ತ್ರಿಂಶದ್ಭಿಃ ಕೋಟಿಭಿಃ ಪರಿವಾರಿತಂ ।
ತಮಾಪತಂತಂ ದೈತ್ಯಾನಾಂ ಬಲಂ ದೃಷ್ಟ್ವೈವ ಚಂಡಿಕಾ ॥ ೨ ॥

ಮುಮೋಚ ಸಿಂಹನಾದಂ ವೈ ಕಾಲ್ಯಾ ಸಹ ಮಹೇಶ್ವರೀ ।
ನಿನದಂತ್ಯಾಸ್ತತೋ ದೇವ್ಯಾಃ ಬ್ರಹ್ಮಾಣೀ ಮುಖತೋಽಭವತ್ ॥ ೩ ॥

ಐವತ್ತಾರನೆಯ ಅಧ್ಯಾಯವು

೧-೩. ಪುಲಸ್ತ್ಯರು ಮುಂದಿನ ವೃತ್ತಾಂತವನ್ನು ಹೇಳುತ್ತಾರೆ:—ಚಂಡ ಮುಂಡರು ನಾಶವಾದುದನ್ನೂ, ಸೈನ್ಯವೆಲ್ಲವೂ ಓಡಿಹೋದುದನ್ನೂ ನೋಡಿ ಶುಂಭನು ರಕ್ತಬೀಜನೆಂಬ ಮಹಾಸುರನನ್ನು ಮೂವತ್ತುಕೋಟಿ ಅಕ್ಷೌಹಿಣೀ ಸೈನ್ಯದೊಡನೆ ಕಳುಹಿಸಿದನು. ಹಾಗೆ ಬರುತ್ತಿರುವ ದೈತ್ಯರ ಮಹಾಸೈನ್ಯವನ್ನು ನೋಡಿ ಚಂಡಿಕೆಯು ಕಾಲಿಯೊಡನೆ ಸಿಂಹನಾದಮಾಡತೊಡಗಿದಳು. ಹಾಗೆ ಸಿಂಹನಾದ ಮಾಡುತ್ತಿರುವ ದೇವಿಯ ಮುಖದಿಂದ ಹಂಸಗಳಿಂದ ಕೂಡಿದ ವಾಹನದಲ್ಲಿ ಕುಳಿತು ಅಕ್ಷಸೂತ್ರ ಕಮಂಡಲುಗಳನ್ನು ಧರಿಸಿರುವ ಬ್ರಹ್ಮಾಣಿ ಎಂಬ ಶಕ್ತಿಯು ಹೊರಹೊರಟಿತು.

ಹಂಸಯುಕ್ತವಿಮಾನಸ್ಥಾ ಸಾಕ್ಷಸೂತ್ರಕಮಂಡಲುಃ ।
ಮಾಹೇಶ್ವರೀ ತ್ರಿನೇತ್ರಾ ಚ ವೃಷಾರೂಢಾ ತ್ರಿಶೂಲಿನೀ ॥ ೪ ॥

ಮಹಾಹಿವಲಯಾ ರೌದ್ರಾ ಜಾತಾ ಕುಂಡಲಿನೀ ಕ್ಷಣಾತ್ ।
ತತೋಽಥ ಜಾತಾ ಕೌಮಾರೀ ಬರ್ಹಿಪತ್ರಾ ಚ ಶಕ್ತಿನೀ ॥ ೫ ॥

ಸಮುದ್ಭೂತಾ ಚ ದೇವರ್ಷೆ ಮಯೂರವರವಾಹನಾ ।
ಬಾಹುಭ್ಯಾಂ ಗರುಡಾರೂಢಾ ಶಂಖಚಕ್ರಗದಾಸಿನೀ ॥ ೬ ॥

ಶಾರ್ಙ್ಗಬಾಣಧರಾ ಜಾತಾ ವೈಷ್ಣವೀ ರೂಪಶಾಲಿನೀ ।
ಮಹೋಗ್ರಮುಸಲಾ ರೌದ್ರಾ ದಂಷ್ಟ್ರೋಲ್ಲಿಖಿತಭೂತಲಾ ॥ ೭ ॥

ವಾರಾಹೀ ಪೃಷ್ಠತೋ ಜಾತಾ ಶೇಷನಾಗೋಪರೀ ಸ್ಥಿತಾ ।
ವಿಕ್ಷಿಪಂತೀ ಸಟಾಕ್ಷೇಪೈಃ ಗ್ರಹನಕ್ಷತ್ರತಾರಕಾಃ ॥ ೮ ॥

೪-೭. ಅನಂತರ ತ್ರಿನೇತ್ರಳಾಗಿಯೂ, ವೃಷಭವಾಹನಳಾಗಿಯೂ, ಶೂಲಾಯುಧಧಾರಿಣಿಯಾಗಿಯೂ, ಮಹಾಸರ್ಪಗಳಿಂದ ಮಾಡಲ್ಪಟ್ಟ ಕಟಕಕುಂಡಲವುಳ್ಳವಳಾಗಿಯೂ, ರೌದ್ರಾಕಾರಳಾಗಿಯೂ ಇರುವ ಮಾಹೇಶ್ವರಿಯು ಉದಯಿಸಿದಳು. ಅನಂತರ ನವಿಲಿನ ಗರಿಗಳನ್ನೇ ಭೂಷಣವಾಗಿ ಉಳ್ಳ, ಶಕ್ತ್ಯಾಯುಧಧಾರಿಣಿಯಾದ ನವಿಲನ್ನೇ ವಾಹನವನ್ನಾಗಿ ಹೊಂದಿರುವ ಕೌಮಾರೀ ಎಂಬ ದೇವಿಯು ಉದಯಿಸಿದಳು. ಹಾಗೆಯೇ ಗರುಡವಾಹನಳಾಗಿಯೂ ಶಂಖ ಚಕ್ರ ಗದಾ ಖಡ್ಗಗಳನ್ನು ಕೈಗಳಿಂದ ಧರಿಸಿ ಧನುರ್ಬಾಣಗಳನ್ನೂ ಹಿಡಿದಿರುವ ರೂಪವತಿಯಾದ ವೈಷ್ಣವಿಯೂ ಉದಯಿಸಿದಳು. ಹಾಗೆಯೇ ಪೃಷ್ಠಭಾಗದಿಂದ ಭಯಂಕರವಾದ ಮುಸಲಾಯುಧಧಾರಿಣಿಯಾಗಿಯೂ, ಶೇಷನೆಂಬ ಸರ್ಪವಾಹನಳಾಗಿಯೂ, ರೌದ್ರಾಕಾರಳಾಗಿಯೂ ಇರುವ ವಾರಾಹಿಯು ಕೋರದಾಡೆಗಳಿಂದ ಭೂಮಿಯನ್ನು ಸೀಳುತ್ತಾ ಉದ್ಭವಿಸಿದಳು.

೮-೧೦. ಹಾಗೆಯೇ ಆ ದೇವಿಯ ಹೃದಯದಿಂದ ಜಟೆಗಳಿಂದ ಗ್ರಹನಕ್ಷತ್ರಗಳನ್ನು ಅಪ್ಪಳಿಸುತ್ತಾ ಭಯಂಕರವಾದ ನರಸಿಂಹರೂಪದಿಂದ ನಸಿಂಹೀ ಎಂಬ ಶಕ್ತಿಯೂ ಉದಯಿಸಿತು. ಈ ಪ್ರಕಾರವಾದ ಅನೇಕ ದೇವತೆಗಳಿಂದ ನಾಶಪಡಿಸಲ್ಪ

ನಖಿನೀ ಹೃದಯಾಜ್ಞಾತಾ ನಾರಸಿಹ್ಮೀ ಸುದಾರುಣಾ ।
ತಾಭಿರ್ನಿಪತ್ಯಮಾನಂ ತು ನಿರೀಕ್ಷ್ಯ ಬಲಮಾಸುರಃ ॥ ೯ ॥

ನನಾದ ಭೂಯೋ ನಾದಾನ್ ವೈ ಚಂಡಿಕಾ ನಿರ್ಭಯಾ ರಿಪೂನ್ ।
ತನ್ನಿನಾದಂ ಮಹಚ್ಛ್ರುತ್ವಾ ತ್ರೈಲೋಕ್ಯಪ್ರತಿಪೂರಕಂ ॥ ೧೦ ॥

ಸಮಾಜಗಾಮ ದೇವೇಶಃ ಶೂಲಪಾಣಿಸ್ತ್ರಿಲೋಚನಃ ।
ಅಭ್ಯೇತ್ಯ ವಂದ್ಯ ಚೈವೇನಾಂ ಪ್ರಾಹ ವಾಕ್ಯಂ ತದಾಂಬಿಕಾಂ ॥ ೧೧ ॥

ಸಮಾಯಾತೋಽಸ್ಮಿ ವೈ ದುರ್ಗೇ ದೇಹ್ಯಾಜ್ಞಾಂ ಕಿಂಕರೋಽಸ್ಮಿ ತೇ ।
ತದ್ವಾಕ್ಯಸಮಕಾಲಂ ಚ ದೇವ್ಯಾ ದೇಹೋದ್ಭವಾ ಶಿವಾ ॥ ೧೨ ॥

ಜಾತಾ ಸಾ ಚಾಹ ದೇವೇಶಂ ಗಚ್ಛ ದೌತ್ಯೇನ ಶಂಕರ ।
ಬ್ರೂಹಿ ಶುಂಭಂ ನಿಶುಂಭಂ ಚ ಯದಿ ಜೀವಿತುಮಿಚ್ಛಥ ॥ ೧೩ ॥

ತದ್ಗಚ್ಛಧ್ವಂ ದುರಾಚಾರಾಃ ಸಪ್ತಮಂ ಹಿ ರಸಾತಲಂ ।
ವಾಸವೋ ಲಭತಾಂ ಸ್ವರ್ಗಂ ದೇವಾಸ್ಸಂತು ಗತವ್ಯಥಾಃ ॥ ೧೪ ॥

ಡುತ್ತಿರುವ ತನ್ನ ಬಲವನ್ನು ನೋಡಿ ಆ ರಕ್ತಬೀಜನು ಸಿಂಹನಾದದಿಂದ ಪುನಃ ಪುನಃ ಗರ್ಜಿಸತೊಡಗಿದನು. ಚಂಡಿಕೆಯು ಅದಕ್ಕೆ ಪ್ರತಿಯಾಗಿ ಶತ್ರುಗಳೆದುರಿಗೆ ಗರ್ಜಿಸತೊಡಗಿದಳು. ಮೂರುಲೋಕದಲ್ಲೂ ವ್ಯಾಪ್ತವಾದ ಆ ಮಹಾಧ್ವನಿಯನ್ನು ಕೇಳಿ ಶೂಲಪಾಣಿಯಾದ ಶಂಕರನೇ ಸಂಭ್ರಮದಿಂದ ಅಲ್ಲಿಗೆ ಓಡಿಬಂದನು.

೧೧-೧೪. ಅಂಬಿಕೆಯ ಸಮೀಪಕ್ಕೆ ಬಂದು ಅವಳನ್ನು ನಮಸ್ಕರಿಸಿ ಹೀಗೆ ಹೇಳುತ್ತಾನೆ. ಎಲೈ ದುರ್ಗಾದೇವಿಯೇ, ನಾನು ಕಿಂಕರನಾಗಿ ನಿನ್ನಲ್ಲಿ ಬಂದಿರುವೆನು. ನಾನು ಮಾಡಬೇಕಾಗಿರುವ ಕೆಲಸವನ್ನು ಆಜ್ಞಾಪಿಸು ಎಂದನು. ಹಾಗೆ ಅವನು ಹೇಳಿದೊಡನೆಯೇ ದೇವಿಯ ದೇಹದಿಂದುದ್ಭವಿಸಿದ್ದ ಶಿವೆಯು ಶಂಕರನನ್ನು ಕುರಿತು ಎಲೈ ಶಂಕರನೇ, ನೀನು ದೂತನಾಗಿ ಶುಂಭನಿಶುಂಭರಲ್ಲಿ ಹೋಗಿ ಅವರನ್ನು ಕುರಿತು ನೀವು ಜೀವಿಸುವ ಇಚ್ಛೆಯಿದ್ದಲ್ಲಿ ಇಷ್ಟು ದುರಾಚಾರರಾದ ನೀವುಗಳು ಏಳನೇ ಪಾತಾಲಲೋಕಕ್ಕೆ ಹೋಗಿ ಅಲ್ಲಿ ವಾಸಮಾಡಿರಿ. ಇಂದ್ರನು ನಿಮ್ಮ ತೊಂದರೆಯಿಲ್ಲದೆ ಸ್ವರ್ಗಕ್ಕೆ ಯಜಮಾನನಾಗಿರಲಿ, ದೇವತೆಗಳೆಲ್ಲರೂ ಸಂತುಷ್ಟರಾಗಿರಲಿ.

ಯಜಂತು ಬ್ರಾಹ್ಮಣಾದ್ಯಾಮೀ ವರ್ಣಾ ಯಜ್ಞಾಂಶ್ಚ ಸಾಂಪ್ರತಂ ।
ನೋಚೇದ್ಬಲಾವಲೇಪೇನ ಭವಂತೋ ಯೋದ್ಧುಮಿಚ್ಛಥ ॥ ೧೫ ॥

ತದಾ ಗಚ್ಛದ್ಧ್ವಮವ್ಯಗ್ರಾ ಏಷಾಹಂ ವಿನಿಷೂದಯೇ ।
ಯತಸ್ತು ಸಾ ಶಿವಂ ದೌತ್ಯೇ ನ್ಯಯೋಜಯತ ನಾರದ ॥ ೧೬ ॥

ತತೋ ನಾಮ ಮಹಾದೇವ್ಯಾಃ ಶಿವದೂತೀತ್ಯಜಾಯತ ।
ತೇ ಚಾಪಿ ಶಂಕರವಚಃ ಶ್ರುತ್ವಾ ಗರ್ವಸಮನ್ವಿತಂ ।
ಹುಂ ಕೃತ್ವಾಭ್ಯದ್ರವನ್ ಸರ್ವೇ ಯತ್ರಕಾತ್ಯಾಯನೀ ಸ್ಥಿತಾ ॥ ೧೭ ॥

ತತಶ್ಶರೈಶ್ಶಕ್ತಿಭಿರಂಕುಶೈರ್ವರೈಃ
ಪರಶ್ವಧೈಃ ಶೂಲಭುಶುಂಡಿಪಟ್ಟಿಶೈಃ ।
ಪ್ರಾಸೈಸ್ಸುತೀಕ್ಷ್ಣೈಃ ಪರಿಘೈಶ್ಚ ವಿಸ್ತೃತೈ
ರ್ವವರ್ಷತುರ್ದೈತ್ಯವರೌ ಸರಸ್ವತೀಂ ॥ ೧೮ ॥

ಸಾ ಚಾಪಿ ಬಾಣೈರ್ವರಕಾರ್ಮುಕಚ್ಯುತೈ
ಶ್ಚಿಚ್ಛೇದ ಶಸ್ತ್ರಾಣ್ಯಥ ಬಾಹುಭಿಸ್ಸಹ ।

೧೫-೧೭. ಬ್ರಾಹ್ಮಣಾದಿವರ್ಣಗಳೆಲ್ಲವೂ ಸ್ವಾಧಿಕಾರಾನುಗುಣವಾಗಿ ಯಜ್ಞ ಯಾಗಾದಿಗಳನ್ನು ನಿರಾಂತಕವಾಗಿ ನಡೆಸಲಿ. ಹಾಗಿಲ್ಲದೆ ನೀವು ಬಲದಿಂದ ಅಹಂಕೃತ ರಾಗಿ ಯುದ್ಧವನ್ನು ಮಾಡಲು ಅಪೇಕ್ಷಿಸಿದಲ್ಲಿ ಸಿದ್ಧರಾಗಿ ಬನ್ನಿರಿ. ಇಗೋ ನಾನೇ ನಿಮ್ಮನ್ನು ಕೊಲ್ಲುತ್ತೇನೆ ಎಂದು ದೇವಿಯು ಸಂದೇಶವನ್ನು ಹೇಳಿಕಳುಹಿಸಿದಳು. ಹೀಗೆ ಶಿವನನ್ನು ದೂತನನ್ನಾಗಿ ಅಂಗೀಕರಿಸಿದುದರಿಂದಲೇ ದೇವಿಗೆ ಶಿವದೂತಿ ಎಂಬ ಹೆಸರು ಉಂಟಾಯಿತು. ಆ ಶುಂಭನಿಶುಂಭರೂ ಸಹ ದೇವಿಯ ಗರ್ವಸೂಚಕವಾದ ಈ ಮಾತನ್ನು ಶಂಕರನಿಂದ ಕೇಳಿ ಕೋಪದಿಂದ ಹುಂಕಾರಮಾಡುತ್ತಾ .ಕಾತ್ಯಾಯನಿಯು ಇರುವ ಸ್ಥಳವನ್ನು ವೇಗದಿಂದ ಮುತ್ತಿದರು.

೧೮-೨೦. ಅನಂತರ ಆ ದೈತ್ಯರಿಬ್ಬರೂ ಬಾಣ, ಶಕ್ತಿ, ಅಂಕುಶ, ಕೊಡಲಿ, ಶೂಲ, ಭುಸಂಡಿ, ಖಡ್ಗ, ಪ್ರಾಸ, ದೊಡ್ಡಪರಿಘ ಇವೇ ಮೊದಲಾದ ಆಯುಧಗಳಿಂದ ದೇವಿಯಮೇಲೆ ಮಳೆಗರೆದರು. ದೇವಿಯೂ ಸಹ ಧನುರ್ಮುಕ್ತವಾದ ನಿಶಿತಬಾಣ ಗಳಿಂದ ಅವರ ಶಸ್ತ್ರಗಳೆಲ್ಲವನ್ನೂ ಅವರ ಬಾಹುಗಳೊಡನೆ ಕತ್ತರಿಸಿದಳು. ಮಹಾ

ಜಘಾನ ಚಾನ್ಯಾನ್ರಣಚಂಡವಿಕ್ರಮಾ
ಮಹಾಸುರಾನ್ಬಾಣಶತೈರ್ಮಹೇಶ್ವರೀ ॥ ೧೯ ॥

ಮಾರೀ ತ್ರಿಶೂಲೇನ ಜಘಾನ ಚಾನ್ಯಾ
ನ್ಖಟ್ವಾಂಗಪಾತೈರಪರಾಶ್ಚ ಕೌಶಿಕೀ ।
ಮಹಾಜಲಕ್ಷೇಪಹತಪ್ರಭಾವಾನ್
ಬ್ರಾಹ್ಮೀ ತಥಾನ್ಯಾನಸುರಾಶ್ಚಕಾರ ॥ ೨೦ ॥

ಮಾಹೇಶ್ವರೀ ಶೂಲವಿದಾರಿತೋರಸ
ಶ್ಚಕಾರ ದಗ್ಧಾಂಶ್ಚ ಪರಾಂಶ್ಚ ವೈಷ್ಣವೀ ।
ಶಕ್ತ್ಯಾ ಕುಮಾರೀ ಕುಲಿಶೇನ ಚಂಡೀ
ತುಂಡೇನ ಚಕ್ರೇಣ ವರಾಹರೂಪಿಣೀ ॥ ೨೧ ॥

ನಖೈರ್ವಿಭಿನ್ನಾನಪಿ ನಾರಸಿಹ್ಮೀ
ಅಟ್ಟಾಟ್ಟಹಾಸ್ಯೈರಪಿ ರುದ್ರದೂತೀ ।
ರುದ್ರಸ್ತ್ರಿಶೂಲೇನ ತಥೈವ ಚಾನ್ಯಾ
ನ್ವಿನಾಯಕಶ್ಚಾಪಿ ಪರಶ್ವಧೇನ ॥ ೨೨ ॥

ಪರಾಕ್ರಮದಿಂದ ಇತರ ದೈತ್ಯರನ್ನೂ ಸಹ ಬಾಣಗಳಿಂದ ವೇಗವಾಗಿ ಹೊಡೆದಳು. ಚಂಡಮಾರಿಯು ತ್ರಿಶೂಲದಿಂದಲೂ ಕೌಶಿಕಿಯು ಯೋಗದಂಡದಿಂದಲೂ ಇತರ ದೈತ್ಯರನ್ನೂ ಬಹಳವಾಗಿ ಪ್ರಹರಿಸಿದರು. ಬ್ರಾಹ್ಮಿಯೂ ಕೂಡ ಜಲಪ್ರವಾಹದಿಂದ ಆ ಅಸುರರ ಪ್ರಭಾವವನ್ನೆಲ್ಲಾ ನಾಶಮಾಡಿದಳು.

೨೧-೨೨. ಮಾಹೇಶ್ವರಿಯು ಶೂಲಾಯುಧದಿಂದ ಶತ್ರುಗಳ ಉದರಭೇದನ ಮಾಡುತ್ತಲೂ ವೈಷ್ಣವಿಯು ಕೆಲವು ಶತ್ರುಗಳನ್ನು ಸುಡುತ್ತಲೂ, ಕುಮಾರಿಯು ಶಕ್ತ್ಯಾಯುಧದಿಂದಲೂ, ಚಂಡಿಯು ಕುಲಿಶಾಯುಧದಿಂದಲೂ, ವಾರಾಹಿಯು ಚಕ್ರ ದಿಂದಲೂ, ಮುಖದಿಂದಲೂ, ನಾರಸಿಂಹಿಯೂ ಉಗುರುಗಳಿಂದಲೂ, ರುದ್ರದೂತಿಯು ಅಟ್ಟಹಾಸಗಳಿಂದಲೂ, ರುದ್ರನು ತ್ರಿಶೂಲದಿಂದಲೂ, ವಿನಾಯಕನು ಕೊಡಲಿ

ಏವಂ ಹಿ ದೇವ್ಯಾ ವಿವಿಧೈಸ್ತುರೂಪೈ
ರ್ನಿಪಾತ್ಯಮಾನಾ ದನುಪುಂಗವಾಸ್ತೇ ।
ಪೇತುಃ ಪೃಥಿವ್ಯಾಂ ಭುವಿಚಾಪಿ ಭೂತೈ
ಸ್ತೇ ಭಕ್ಷ್ಯಮಾಣಾಃ ಪ್ರಲಯಂ ಪ್ರಜಗ್ಮುಃ ॥ ೨೩ ॥

ತೇ ವಧ್ಯಮಾನಾಸ್ತ್ವಥ ದೇವತಾಭಿ
ರ್ಮಹಾಸುರಾ ಮಾತೃಭಿರಾಕುಲಾಶ್ಚ ।
ವಿಮುಕ್ತಕೇಶಾಸ್ತರಲೇಕ್ಷಣಾ ಭಯಾ
ತ್ತೇರಕ್ತಬೀಜಂ ಶರಣಂ ಹಿ ಜಗ್ಮುಃ ॥ ೨೪ ॥

ಸರಕ್ತಬೀಜಸ್ಸಹಸಾಭ್ಯುಪೇತ್ಯ
ವರಾಸ್ತ್ರಮಾದಾಯ ಚ ಮಾತೃಮಂಡಲಂ ।
ವಿದ್ರಾವಯನ್ ಭೂತಗಣಾನ್ಸಮಂತಾ
ದ್ವಿವೇಶ ಕೋಪಾತ್ಸ್ಫುರಿತಾಧರಶ್ಚ ॥ ೨೫ ॥

ತಮಾಪತಂತಂ ಪ್ರಸಮೀಕ್ಷ್ಯ ಮಾತರಃ
ಶಸ್ತ್ರೈಃ ಶಿತಾಗ್ರೈರ್ದಿತಿಜಂ ವವರ್ಷುಃ ।

ಯಿಂದಲೂ ಕೆಲಕೆಲವರನ್ನು ನಾಶಮಾಡಿದರು. ಈ ರೀತಿಯಾಗಿ ದೇವಿಯು ಅನೇಕ ರೂಪಗಳಿಂದ ನಾಶಪಡಿಸಲ್ಪಟ್ಟ ಆ ದಾನವರು ಭೂಮಿಯಲ್ಲಿ ಬಿದ್ದರು. ಅಲ್ಲಿಯೂ ದೇವಿಯ ಅನುಚರರಾದ ಭೂತಗಳಿಂದ ಭಕ್ಷಿಸಲ್ಪಟ್ಟು, ನಾಶವನ್ನೇ ಹೊಂದಿದರು.

೨೪-೨೬. ಆ ಮಹಾಸುರರೆಲ್ಲರೂ ದೇವತಾರೂಪಿಣಿಗಳಾದ ಮಾತೃಗಳಿಂದ ಹೊಡೆಯಲ್ಪಟ್ಟು ಬಹಳ ವ್ಯಾಕುಲರಾಗಿ ತಲೆಯನ್ನು ಕೆದರಿಕೊಂಡು ಕಣ್ಣುಗಳನ್ನು ಮರಳಿಸುತ್ತಾ ಭಯದಿಂದ ರಕ್ತಬೀಜನಲ್ಲಿ ಶರಣಾಗತರಾದರು. ಆಗ ರಕ್ತಬೀಜನೂ ಸಹ ತ್ವರೆಯಿಂದ ಬಂದು ಶಸ್ತ್ರಾಸ್ತ್ರಗಳಿಂದ ಆ ಮಾತೃಮಂಡಲವನ್ನೂ, ಭೂತಗಣಗಳನ್ನೂ ಓಡಿಸುತ್ತಾ ಕೋಪದಿಂದ ತುಟಿಯನ್ನು ಅಲುಗಿಸುತ್ತಾ ಯುದ್ಧಭೂಮಿಗೆ ಪ್ರವೇಶಿಸಿದನು. ಹಾಗೆ ಬರುತ್ತಿರುವ ಅವನನ್ನು ನೋಡಿ ಮಾತೃಮಂಡಲವೆಲ್ಲವೂ ಶಸ್ತ್ರಾಸ್ತ್ರಗಳಿಂದ ಅವನನ್ನು ಮುಚ್ಚಿದವು. ಆ ರಕ್ತಬೀಜನ ಒಂದೊಂದು ರಕ್ತ

ಯೋ ರಕ್ತಬಿಂದುರ್ನ್ಯಪತತ್ಪೃಥಿವ್ಯಾಂ
ಸತತ್ಪ್ರಮಾಣಸ್ತ್ವಪರೋಽಪಿ ಜಜ್ಞೇ ॥ ೨೬ ॥

ತತಶ್ಚ ಮಾರೀ ಸ್ವಯಮಂಬಿಕಾಥ
ಪ್ರಹಸ್ಯತಾಂ ಸಾಂಪ್ರತಮಿತ್ಯುವಾಚ ।
ಪಿಬಸ್ವ ಚಂಡೆ ರುಧಿರಂ ತ್ವರಾತೇ
ವಿರ್ತನ್ಯವಕ್ತ್ರಂ ವಡವಾನಲಾಭಂ ॥ ೨೭ ॥

ಸಾ ತ್ವೇವಮುಕ್ತ್ವಾ ವರದಾಂಬಿಕಾಹಿ
ವಿತತ್ಯ ವಕ್ತ್ರಂ ವಿಕರಾಲಮುಗ್ರಂ ।
ತುಷ್ಟಂ ನಭಸ್ಪೃಕ್ ಪೃಥಿವೀಸ್ಪೃಗಾಸ್ಯಂ
ಕೃತ್ವಾ ಚಿರಂ ತಿಷ್ಠತಿ ಚರ್ಮಮುಂಡಾ ॥ ೨೮ ॥

ತತೋಽಂಬಿಕಾ ಕೇಶವಿಕರ್ಷಣಾಕುಲಂ
ಕೃತ್ವಾ ರಿಪುಂ ಪ್ರಾಕ್ಷಿಪತ್ಸ್ವೇ ಚ ವಕ್ತ್ರೇ ।
ಬಿಭೇದ ಶೂಲೇನ ತಥಾಪ್ಯುರಸ್ತಃ
ಕ್ಷತೋದ್ಭವೋ ವಾ ನ್ಯಪತಂಶ್ಚ ವಕ್ತ್ರೇ ॥ ೨೯ ॥

ಬಿಂದುವು ಬಿದ್ದ ಕಡೆಯಲ್ಲೆಲ್ಲಾ ಆ ರಕ್ತಬೀಜನ ಪ್ರಮಾಣದ ಮತ್ತೊಬ್ಬ ದಾನವನು ಉದಯಿಸಲಾರಂಭವಾಯಿತು.

೨೭-೨೯. ಅನಂತರ ಚಂಡಮಾರಿಯು ಚರ್ಮಮುಂಡಾಂಬಿಕೆಯನ್ನು ಕುರಿತು ಎಲೈ ಚಂಡಿಯೇ ಬಡಬಾಗ್ನಿಯಂತೆ ಭಯಂಕರವಾದ ನಿನ್ನ ಬಾಯನ್ನು ತೆರೆದು ಈ ದಾನವನ ರಕ್ತವನ್ನೆಲ್ಲಾ ಪಾನಮಾಡಿ ಇವನನ್ನು ಈಗ ಕೊಲ್ಲಬೇಕು ಎಂದಳು. ಹೀಗೆ ಹೇಳಲ್ಪಟ್ಟ ಚರ್ಮಮುಂಡಾಂಬಿಕೆಯು ಭಯಂಕರವಾದ ತನ್ನ ಬಾಯನ್ನು ತೆರೆದು ಆಕಾಶವನ್ನೂ, ಭೂಮಿಯನ್ನೂ ವ್ಯಾಪಿಸಿರುವಂತೆಮಾಡಿ ಹಾಗೆಯೇ ನಿಂತಳು. ಆಗ ಅಂಬಿಕೆಯು ಆ ದಾನವನ ಕೇಶವನ್ನು ಸೆಳೆದು ಶೂಲಾಯುಧದಿಂದ ಹೃದಯವನ್ನು ಇರಿದು ತನ್ನ ಬಾಯಿನಲ್ಲಿ ಹಾಕಿಕೊಂಡಳು. ಆವನೂ ಅವನ ರಕ್ತಬಿಂದುವಿನಿಂದ ಹುಟ್ಟಿದವರೂ ಸಹ ಆ ಅವಳ ಬಾಯಿನಲ್ಲೇ ಬಿದ್ದರು.

ತತಸ್ತು ಶೇಷಂ ಪ್ರಜಗಾಮ ರಕ್ತಂ
ರಕ್ತಕ್ಷಯೇ ಹೀನಬಲೋ ಬಭೂವ ।
ತಂ ಹೀನವೀರ್ಯಂ ಶತಧಾ ಚಕಾರ
ಚಕ್ರೇಣ ಚಾಮೀಕರಭೂಷಿತೇನ ॥ ೩೦ ॥

ತಸ್ಮಿನ್ ಹತೇ ವೈ ದನುಸೈನ್ಯನಾಥೇ
ತೇ ದಾನವಾ ದೀನತರಂ ವಿನೇದುಃ ।
ಹಾ ತಾತ ಹಾ ಭ್ರಾತರಿತಿ ಬ್ರುವಂತಃ
ಕ್ವಯಾಸಿ ತಿಷ್ಠಸ್ವ ಮುಹೂರ್ತಮೇಹಿ ॥ ೩೧ ॥

ತಥಾಪರೇ ವಿಲುಲಿತಕೇಶಪಾಶಾ
ವಿಶೀರ್ಣಚರ್ಮಾಭರಣಾ ದಿಗಂಬರಾಃ ।
ನಿಪಾತಿತಾ ಧರಣಿತಲೇ ಮೃಡಾನ್ಯಾ
ಪ್ರದುದ್ರುವುರ್ಗಿರಿವರಮುಹ್ಯ ದೈತ್ಯಾಃ ॥ ೩೨ ॥

ವಿಶೀರ್ಣಚರ್ಮಾಯುಧಭೂಷಣಂ ತ-
ದ್ಬಲಂ ನಿರೀಕ್ಷ್ಯೈವ ಹಿ ದಾನವೇಂದ್ರಃ ।

೩೦-೩೨. ಉಳಿದ ರಕ್ತವೆಲ್ಲವೂ ಹೀಗೆಯೇ ನಾಶವಾಗಲಾಗಿ ಅವನೂ ಹೀನ ಬಲನಾದನು. ಆಗ ಅಸಮರ್ಥನಾಗಿ ಬಿದ್ದ ಅವನನ್ನು ದೇವಿಯು ಸುವರ್ಣಭೂಷಿತ ವಾದ ತನ್ನ ಚಕ್ರದಿಂದ ತುಂಡುತುಂಡಾಗಿ ಛೇದಿಸಿದಳು. ಆ ದಾನವನಾಥನಾದ ರಕ್ತ ಬೀಜನು ಹತನಾದುದನ್ನು ನೋಡಿ ಅಲ್ಲಿದ್ದ ದಾನವರೆಲ್ಲರೂ ದೀನರಾಗಿ ಆರ್ತಸ್ವರ ದಿಂದ ಕೂಗಿದರು. ಎಲೈ ತಂದೆಯೇ, ಎಲ್ಲಿ ಹೋದೆ, ಎಲೈ ಅಣ್ಣನೇ, ಎಲ್ಲಿ ಹೋದೆ, ಎಲ್ಲಿ ಹೋಗುತ್ತಿದ್ದೀಯೆ ಸ್ವಲ್ಪಕಾಲ ನಿಲ್ಲು ಎಂದು ಆರ್ತಧ್ವನಿಯು ಅಲ್ಲೆಲ್ಲಾ ಆವರಿಸಿತು. ಮತ್ತೆ ಕೆಲವು ದಾನವರು ಕೆದರಿದ ಕೂದಲುಳ್ಳವರಾಗಿಯೂ, ಮುರಿದು ಹೋಗಿರುವ ಚರ್ಮಾಯುಧವೇನು, ಆಭರಣಗಳೇನು ಇವುಗಳಿಂದ ಕೂಡಿ ದೇವಿ ಯಿಂದ ಉರುಳಿಸಲ್ಪಟ್ಟು ಬೆಟ್ಟಗುಡ್ಡಗಳ ಕಡೆಗೆ ಓಡಿದರು.

೩೩ ೩೪. ಆಗ ನಿಶುಂಭನು ಗುರಾಣಿ ಮತ್ತು ಭೂಷಣಗಳು ಎಲ್ಲವನ್ನು ಚೂರುಚೂರಾಗಿ ಮಾಡಿಕೊಂಡು ದೀನವಾಗಿ ನಿಂತಿರುವ ಆ ಬಲವನ್ನು ನೋಡಿ

ವಿಶೀರ್ಣಚಕ್ರಾಕ್ಷರಥೋ ನಿಶುಂಭಃ
ಕ್ರೋಧಾನ್ಮೃಡಾನೀಂ ಸಮುಪಾಜಗಾಮ ॥ ೩೩ ॥

ಖಡ್ಗಂ ಸಮಾದಾಯ ಚ ಚರ್ಮಭಾಸ್ವರಂ
ಧುನ್ವನ್ ಶಿರಃ ಪ್ರೇಕ್ಷ್ಯ ಚ ರೂಪಮಸ್ಯಾಃ ।
ಸಂಸ್ತ್ಯಭ್ಯ ಮೋಹಂ ಜ್ವರಪೀಡಿತೋಽಥ
ಚಿತ್ರೇ ಯಥಾ ಸೌ ಲಿಖಿತೋ ಬಭೂವ ॥ ೩೪ ॥

ತಂ ಸ್ತಂಭಿತಂ ವೀಕ್ಷ್ಯ ಸುರಾರಿಮುಗ್ರೆ
ಪ್ರೋವಾಚ ದೇವೀ ವಚನಂ ವಿಹಸ್ಯ ।
ಅನೇನ ವೀರ್ಯೇಣ ಸುರಾಸ್ತ್ವಯಾ ಜಿತಾಃ
ಅನೇನ ಮಾಂ ಪ್ರಾರ್ಥಯಸೇ ಬಲೇನ ॥ ೩೫ ॥

ಶ್ರುತ್ವಾ ತು ವಾಕ್ಯಂ ಕೌಶಿಕ್ಯಾ ದಾನವಃ ಸುಚಿರಾದಿವ ।
ಪ್ರೋವಾಚ ಚಿಂತಯಿತ್ವಾಥ ವಚನಂ ವದತಾಂ ವರಃ ॥ ೩೬ ॥

ರಥದ ಚಕ್ರ ಮತ್ತು ಅಚ್ಚುಗಳು ಮುರಿದುಹೋದರೂ ಕೋಪದಿಂದ ಮೃಡಾನಿಯನ್ನು ಎದುರಿಸಲು ಎದುರಾಗಿ ಬಂದನು. ಹಾಗೆ ಬಂದ ಆ ದಾನವನು ಕತ್ತಿಯನ್ನೂ ಗುರಾಣಿಯನ್ನೂ ತೆಗೆದುಕೊಂಡು ತಲೆಯನ್ನು ಕೋಪದಿಂದ ಅಲ್ಲಾಡಿಸುತ್ತಾ ದೇವಿಯ ಸಮೀಪಕ್ಕೆ ಬಂದು ಅವಳ ಆ ರೂಪವನ್ನು ನೋಡಿದೊಡನೆಯೇ ಮೋಹಿತನಾಗಿ ಆ ಮೋಹವನ್ನು ಸ್ವಲ್ಪ ತಡೆದುಕೊಂಡು ನಿಂತನು. ಆದರೂ ಅವಳ ಪ್ರಾಪ್ತಿಯ ವಿಷಯದಲ್ಲುಂಟಾದ ಸಂದೇಹದಿಂದ ವಿರಹಜ್ವರಪೀಡಿತನಾಗಿ ಚಿತ್ರದ ಪ್ರತಿಮೆಯಂತೆ ಸ್ತಬ್ಧನಾಗಿ ನಿಂತನು. ಆರೀತಿ ಸ್ತಂಭಿತನಾಗಿ ನಿಂತ ಅವನನ್ನು ನೋಡಿ ದೇವಿಯು ನಗುತ್ತಾ ಆ ದಾನವನ ಎದುರಿಗೇ ನಿಂತು ಈ ಪರಾಕ್ರಮದಿಂದಲೇ ಅಲ್ಲವೆ ನೀನು ದೇವತೆಗಳನ್ನು ಜಯಿಸಿದ್ದು ಎಂದು ಹಾಸ್ಯಮಾಡಿ ಈ ಬಲದಿಂದಲೇ ನನ್ನನ್ನು ಹೊಂದಲು ಪ್ರಾರ್ಥಿಸುತ್ತಿರುವೆಯಲ್ಲವೇ ಎಂದಳು.

೩೬-೩೯. ಕೌಶಿಕಿಯ ಈ ಮಾತನ್ನು ಕೇಳಿ ದಾನವನು ಸ್ವಲ್ಪಕಾಲ ವಿಚಾರ ಮಾಡಿ ಆಲೋಚಿಸಿ ದೇವಿಯನ್ನು ಕುರಿತು ತನ್ನ ವಾಕ್ಕಿನ ಪ್ರೌಢಿಮೆಯಿಂದ ಸುಕುಮಾರ ಶರೀರಳಾದ ನೀನು ನನ್ನ ಶಸ್ತ್ರಪತನದಿಂದ ಹಸಿಯಾದ ಮಣ್ಣಿನ

ಸುಕುಮಾರಶರೀರಾ ತ್ವಂ ಮಚ್ಛಸ್ತ್ರಪತನಾದಪಿ ।
ಶತಧಾ ಯಾಸ್ಯಸೇ ಭೀರು ಆಮಪಾತ್ರಮಿವಾಂಭಸಿ ॥ ೩೭ ॥

ಏವಂ ಸಂಚಿಂತಯನ್ನರ್ಥಂ ತ್ವಾಂ ಪ್ರಹರ್ತುಂ ನ ಸುಂದರಿ ।
ಕರೋಮಿ ಬುದ್ಧಿಂ ತಸ್ಮಾತ್ತ್ವಂ ಮಾಂ ಭಜಸ್ವಾಯತೇಕ್ಷಣೆ ॥ ೩೮ ॥

ಮಮಖಡ್ಗನಿಪಾತಂ ಹಿ ನೇಂದ್ರೋ ಧಾರಯಿತುಂ ಕ್ಷಮಃ ।
ನಿವರ್ತಯ ಮತಿಂ ಯುದ್ಧಾದ್ಭಾರ್ಯಾ ಮೇ ಭವ ಸಾಂಪ್ರತಂ ॥ ೩೯ ॥

ಇತ್ಥಂ ನಿಶುಂಭವಚನಂ ಶ್ರುತ್ವಾ ಯೋಗೇಶ್ವರೀ ಮುನೆ ।
ವಿಹಸ್ಯ ಭಾವಗಂಭೀರಂ ನಿಶುಂಭಂ ವಾಕ್ಯಮಬ್ರವೀತ್ ॥ ೪೦ ॥

ನಾಜಿತಾಹಂ ರಣೆ ವೀರ ಭವೆ ಭಾರ್ಯಾಹಿ ಕಸ್ಯ ಚಿತ್ ।
ಭವಾನ್ ಯದೀಹ ಭಾರ್ಯಾರ್ಥೀ ತತೋಮಾಂ ಜಯ ಸಂಯುಗೆ ॥ ೪೧ ॥

ಇತ್ಯೇವಮುಕ್ತೆ ವಚನೆ ಖಡ್ಗಮುದ್ಭ್ರಾಮ್ಯ ದಾನವಃ ।
ಪ್ರಚಿಕ್ಷೇಪ ತದಾವೇಗಾತ್ಕೌಶಿಕೀಂ ಪ್ರತಿ ನಾರದ ॥ ೪೨ ॥

ಪಾತ್ರೆಯು ನೀರಿನಲ್ಲಿ ಕರಗಿಹೋಗುವಂತೆ ಚೂರುಚೂರಾಗಿ ಹೋಗುವೆಯಲ್ಲಾ ಎಂದು ಆಲೋಚಿಸಿ ಸುಂದರಿಯಾದ ನಿನ್ನನ್ನು ನಾನು ಪ್ರಹರಿಸಲು ಮನಸ್ಸುಮಾಡ ಲಿಲ್ಲ. ಆದುದರಿಂದ ಎಲೈ ವಿಶಾಲನೇತ್ರೆಯೇ, ನಿನ್ನ ಸೌಂದರ್ಯಕ್ಕೂ, ನನ್ನ ಪ್ರಾರ್ಥನೆಗೂ ತಕ್ಕಂತೆ ನನ್ನನ್ನು ಹೊಂದು. ನನ್ನ ಈ ಕತ್ತಿಯ ಪ್ರಹಾರವನ್ನು ಸಹಿಸಲು ಇಂದ್ರನೂ ಸಮರ್ಥನಾಗಲಾರನು. ಆದುದರಿಂದ ನೀನು ಯುದ್ಧಮಾಡ ಬೇಕೆಂಬ ಬುದ್ಧಿಯನ್ನು ಬಿಡು. ಈಗ ನನಗೆ ಪತ್ನಿಯಾಗು ಎಂದನು.

೪೦-೪೨. ಈ ಪ್ರಕಾರವಾದ ನಿಶುಂಭನ ವಚನವನ್ನು ಮಾಹೇಶ್ವರಿಯು ಕೇಳಿ ನಗುತ್ತಾ ಅವನನ್ನು ಕುರಿತು ಭಾವಗರ್ಭವಾಗಿ ಎಲೈ ವೀರನೇ, ನಾನು ಯುದ್ಧ ದಲ್ಲಿ ಜಿತಳಾಗದೆ ಯಾರಿಗೂ ಭಾರ್ಯೆಯಾಗುವ ಸಂಭವವೇ ಇಲ್ಲ. ನೀನು ಭಾರ್ಯಾರ್ಥಿ ಯಾಗಿದ್ದ ಪಕ್ಷದಲ್ಲಿ ನನ್ನನ್ನು ಯುದ್ಧದಲ್ಲಿ ಜಯಿಸು ಎಂದು ಉತ್ತರ ಹೇಳಿದಳು. ದೇವಿಯು ಹೀಗೆ ಹೇಳಿದೊಡನೆಯೇ ಆ ದಾನವನು ಕತ್ತಿಯನ್ನು ತಿರುಗಿಸಿ ವೇಗದಿಂದ ಕೌಶಿಕಿಯಮೇಲೆ ಪ್ರಯೋಗಿಸಿದನು.

ತಮಾಪತಂತಂ ನಿಸ್ತ್ರಿಂಶಂ ಷಡ್ಭಿಃ ಬರ್ಹಣವಾಜಿಭಿಃ ।
ಚಿಚ್ಛೇದ ಚರ್ಮಣಾ ಸಾರ್ಧಂ ತದದ್ಭುತಮಿವಾಭವತ್ ॥ ೪೩ ॥

ಖಡ್ಗೇ ಸಚರ್ಮಣಿ ಚ್ಛಿನ್ನೇ ಗದಾಂ ಗೃಹ್ಯ ಮಹಾಸುರಃ ।
ಸಮಾದ್ರವತ್ಕೋಶಭವಾಂ ವಾಯುವೇಗಸಮೋ ಜವೇ ॥ ೪೪ ॥

ತಸ್ಯಾಪತತ ಏವಾಶು ಕರೌ ಶ್ಲಿಷ್ಟೌ ಸಮೌ ದೃಢೌ ।
ಗದಯಾ ಸಹ ಚಿಚ್ಛೇದ ಕ್ಷುರಪ್ರೇಣ ರಣೇಂಬಿಕಾ ॥ ೪೫ ॥

ತಸ್ಮಿನ್ನಿಪತಿತೇ ರೌದ್ರೇ ಸುರಶತ್ರೌ ಭಯಂಕರೇ ।
ಚಂಡ್ಯಾದ್ಯಾ ಮಾತರೋ ಹೃಷ್ಟಾಃ ಚಕ್ರುಃ ಕಿಲಕಿಲಧ್ವನಿಂ ॥ ೪೬ ॥

ಗಗನಸ್ಥಾಃ ತತೋ ದೇವಾಃ ಶತಕ್ರತುಪುರೋಗಮಾಃ ।
ಜಯಸ್ವ ವಿಜಯೇತ್ಯೂಚುಃ ಹೃಷ್ಟಾಃ ಶತ್ರೌ ನಿಪಾತಿತೇ ॥ ೪೭ ॥

ತತಸ್ತೂರ್ಯಾಣ್ಯವಾದ್ಯಂತ ಭೂತಸಂಘೈಸ್ಸಮಂತತಃ ।
ಪುಷ್ಪವೃಷ್ಟಿಂ ಚ ಮುಮುಚುಃ ಸುರಾಃ ಕಾತ್ಯಾಯನೀಂ ಪ್ರತಿ ॥ ೪೮ ॥

೪೩-೪೬. ಆಗ ಕೌಶಿಕಿಯು ತನ್ನಮೇಲೆ ಬರುತ್ತಿರುವ ಆ ಖಡ್ಗವನ್ನು ಗರಿಗಳಿಂದ ವೇಗಶಾಲಿಗಳಾದ ಆರು ಬಾಣಗಳಿಂದ ಕತ್ತರಿಸಿ ಅವನ ಗುರಾಣಿಯನ್ನೂ ಕತ್ತರಿಸಿದಳು. ದೇವಿಯ ಆ ಸಮರವ್ಯಾಪಾರವು ಎಲ್ಲರಿಗೂ ಆಶ್ಚರ್ಯಕರವಾಗಿ ತೋರಿತು. ಅನಂತರ ಆ ಅಸುರನು ಕತ್ತಿಗುರಾಣಿಗಳು ನಾಶವಾದಮೇಲೆ ಗದೆಯನ್ನು ಧರಿಸಿ ವಾಯುವೇಗದಿಂದ ಕೌಶಿಕಿಯನ್ನು ಆಕ್ರಮಿಸಲು ಬಂದನು. ಆಗ ಅಂಬಿಕೆಯು ಅವನು ಬರುತ್ತಿರುವಾಗಲೇ ದೃಢವಾದ ಅವನ ಕೈಯ್ಗಳನ್ನು ನಿಶಿತವಾದ ಬಾಣಗಳಿಂದ ಆಯುಧದೊಡನೆ ಕತ್ತರಿಸಿ ಕೆಳಕ್ಕೆ ಕೆಡಹಿದಳು. ಅದರಿಂದ ರೌದ್ರಾಕಾರನಾದ ಆ ಅಸುರನು ಭಯಂಕರಾಕಾರದಿಂದ ಕೆಳಕ್ಕೆ ಬಿದ್ದನು. ಆಗ ಚಂಡಿಯೇ ಮೊದಲಾದ ಮಾತೃಗಣಗಳು ಸಂತೋಷದಿಂದ ಕಿಲಕಿಲಧ್ವನಿ ಮಾಡಿದರು.

೪೭-೪೮. ಆಗ ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ಆಕಾಶದಲ್ಲಿ ನಿಂತು ಶತ್ರುನಾಶದಿಂದ ಸಂತುಷ್ಟರಾಗಿ ವಿಜಯೆಯೇ ನೀನು ಜಯಶಾಲಿಯಾಗು ಎಂದು ಉಚ್ಚಧ್ವನಿಯಿಂದ ಕೂಗಿದರು. ಆಗ ಭೂತಸಂಘಗಳೆಲ್ಲವೂ ಸಂತೋಷದಿಂದ ವಿಜಯಾರ್ಥವಾದ ತೂರ್ಯಧ್ವನಿಮಾಡಿದವು. ದೇವತೆಗಳೆಲ್ಲರೂ ಕಾತ್ಯಾಯನಿಯ

ನಿಶುಂಭಂ ಪತಿತಂ ದೃಷ್ಟ್ವಾ ಶುಂಭಃ ಕ್ರೋಧಾನ್ಮಹಾಮುನೆ ।
ವೃಂದಾರಕಂ ಸಮಾರುಹ್ಯ ಪ್ರಾಸಪಾಣಿಃ ಸಮಭ್ಯಗಾತ್ ॥ ೪೯ ॥

ತಮಾಪತಂತಂ ದೃಷ್ಟ್ವಾಥ ಸಗಜಂ ದಾನವೇಶ್ವರಂ ।
ಜಗ್ರಾಹ ಚತುರೋ ಬಾಣಾನ್ ಚಂದ್ರಾರ್ಧಾಕಾರವರ್ಚಸಃ ॥ ೫೦ ॥

ಕ್ಷುರಪ್ರಾಭ್ಯಾಂ ಸಮಂ ಪಾದೌ ದ್ವೌ ಚಿಚ್ಛೇದ ದ್ವಿಪಸ್ಯ ಸಾ ।
ದ್ವಾಭ್ಯಾಂ ಕುಂಭೇ ಜಘಾನಾಥ ಹಸಂತೀ ಲೀಲಯಾಂಬಿಕಾ ॥ ೫೧ ॥

ನಿಕೃತ್ತಾಭ್ಯಾಂ ಗಜಃ ಪದ್ಭ್ಯಾಂ ನಿಪಪಾತ ಯಥೇಚ್ಛಯಾ ।
ಶಕ್ರವಜ್ರಸಮಾಕ್ರಾಂತಂ ಶೈಲರಾಜಶಿರೋ ಯಥಾ ॥ ೫೨ ॥

ತಸ್ಯಾವರ್ಜಿತನಾಗಸ್ಯ ಶುಂಭಸ್ಯಾಪ್ಯುತ್ಪತಿಷ್ಯತಃ ।
ಶಿರಶ್ಚಿಚ್ಛೇದ ಬಾಣೇನ ಕುಂಡಲಾಲಂಕೃತಂ ಶಿವಾ ॥ ೫೩ ॥

ಮೇಲೆ ಹೂಮಳೆಯನ್ನು ಕರೆದರು. ನಿಶುಂಭನು ಕೆಳಗೆ ಬಿದ್ದ ಮೇಲೆ ಶುಂಭನು ಬಹಳ ಕ್ರೋಧಾವಿಷ್ಟನಾಗಿ ವೃಂದಾರಕವೆಂಬ ತನ್ನ ಆನೆಯನ್ನು ಹತ್ತಿಕೊಂಡು ಪ್ರಾಸಾಯುಧ ಧಾರಿಯಾಗಿ ದೇವಿಯ ಎದುರಾಗಿ ಯುದ್ಧೋನ್ಮುಖನಾಗಿ ಬಂದನು.

೫೦-೫೩. ಹಾಗೆ ಗಜಾರೂಢನಾಗಿ ಬರುತ್ತಿರುವ ದಾನವರಾಜನಾದ ಶುಂಭನನ್ನು ನೋಡಿ ದೇವಿಯು ಅರ್ಧಚಂದ್ರಾಕಾರದಿಂದ ಜ್ವಲಿಸುತ್ತಿರುವ ನಾಲ್ಕು ಬಾಣಗಳನ್ನು ತೊಟ್ಟಳು. ಹಸನ್ಮುಖಿಯಾಗಿ ಲೀಲಾಮಾತ್ರದಿಂದ ಆ ಆನೆಯ ಎರಡು ಕಾಲುಗಳನ್ನೂ ತೀಕ್ಷ್ಣವಾದ ಎರಡು ಬಾಣಗಳಿಂದ ಕತ್ತರಿಸಿ ಮತ್ತೆರಡು ಬಾಣಗಳಿಂದ ಕುಂಭಸ್ಥಲದಲ್ಲಿ ಪ್ರಹರಿಸಿದಳು. ಅನಂತರ ಆ ಆನೆಯ ಕಾಲುಗಳೆರಡೂ ಕತ್ತರಿಸಲ್ಪಡಲಾಗಿ ಇಂದ್ರನ ವಜ್ರಾಯುಧದಿಂದ ಹೊಡೆಯಲ್ಪಟ್ಟ ಪರ್ವತ ಶಿಖರದಂತೆ ಕೆಳಗೆ ಬಿದ್ದಿತು. ಆನೆಯು ಕೆಳಗೆ ಬೀಳುವಾಗ ಅದನ್ನೇ ಆಶ್ರಯಿಸಿಕೊಂಡಿದ್ದ ಶುಂಭನೂ ಮೇಲಕ್ಕೆ ಚಿಗಿದನು. ಆಗ ಕುಂಡಲಾಲಂಕೃತವಾದ ಅವನ ಶಿರಸ್ಸನ್ನು ದೇವಿಯು ಬಾಣದಿಂದ ಕತ್ತರಿಸಿದಳು.

ಛಿನ್ನೇ ಶಿರಸಿ ದೈತ್ಯೇಂದ್ರೋ ನಿಪಪಾತ ಸಕುಂಜರಃ ।
ಯಥಾ ಸಮಹಿಷಃ ಕ್ರೌಂಚೋ ಮಹಾಸೇನೇನ ಸಂಹತಃ ॥ ೫೪ ॥

ಶ್ರುತ್ವಾ ಸುರಾಸುರರಿಪೂ ನಿಹತೌ ಮೃಡಾನ್ಯಾ
ಸೇಂದ್ರಾಃ ಸಸೂರ್ಯಮರುದಶ್ವಿವಸುಪ್ರಧಾನಾಃ ।
ಆಗತ್ಯ ತಂ ಗಿರಿವರಂ ವಿನಯಾವನಮ್ರಾಃ
ದೇವ್ಯಾಸ್ತದಾ ಶ್ರುತಿಸುಖಂ ತ್ರಿದಶಾಃ ಪ್ರಚಕ್ರುಃ ॥ ೫೫ ॥

ದೇವಾ ಊಚುಃ

ನಮೋಽಸ್ತು ತೇ ಭಗವತಿ ಪಾಪನಾಶಿನಿ
ನಮೋಽಸ್ತು ತೇ ಸುರರಿಪುದರ್ಪಶಾತನಿ ।
ನಮೋಽಸ್ತು ತೇ ಹರಿಹರರಾಜ್ಯದಾಯಿನಿ
ನಮೋಽಸ್ತು ತೇ ಮಖಭುಜಕಾರ್ಯಕಾರಿಣಿ ॥ ೫೬ ॥

ನಮೋಽಸ್ತು ತೇ ತ್ರಿದಶರಿಪುಕ್ಷಯಂಕರಿ
ನಮೋಽಸ್ತು ತೇ ಶತಮಖಪಾದಪೂಜಿತೇ ।

---

೫೪. ದೇವಿಯಿಂದ ತಲೆಯು ಕತ್ತರಿಸಲ್ಪಟ್ಟ ಮೇಲೆ ಆ ಶುಂಭನು ತನ್ನ ಆನೆಯೊಡನೆ ಷಣ್ಮುಖನಿಂದ ಮಹಿಷನೊಡನೆ ನಾಶಪಡಿಸಲ್ಪಟ್ಟ ಕ್ರೌಂಚವು ನೆಲಕ್ಕೆ ಬಿದ್ದಂತೆ ಕೆಳಗೆ ಬಿದ್ದನು.

೫೫. ಈ ರೀತಿ ಸುರಶತ್ರುಗಳಾದ ಶುಂಭನಿಶುಂಭರು ದೇವಿಯಿಂದ ಹತರಾದುದನ್ನು ಕೇಳಿ ಇಂದ್ರ, ಸೂರ್ಯ, ವಾಯು, ಅಶ್ವಿನೀದೇವತೆಗಳು, ವಸುಗಳು ಇವರನ್ನೊಳಗೊಂಡ ದೇವತೆಗಳೆಲ್ಲರೂ ಆ ಪರ್ವತಕ್ಕೆ ಬಂದು ಭಕ್ತಿಯಿಂದ ತಲೆಬಾಗಿದವರಾಗಿ ದೇವಿಯನ್ನು ಕುರಿತು ಶ್ರುತಿಸುಖಕರವಾದ ಈ ಸ್ತೋತ್ರವನ್ನು ಮಾಡಿದರು.

೫೬-೫೮. ಷಡ್ಗುಣೈಶ್ವರ್ಯ ಪರಿಪೂರ್ಣಳಾಗಿಯೂ, ಪಾಪನಾಶಕಳಾಗಿಯೂ ಇರುವ ದೇವಿಯೇ ನಿನಗೆ ನಮಸ್ಕಾರಗಳು. ಸುರದ್ವೇಷಿಗಳಾದ ದಾನವರ ಅಹಂಕಾರವನ್ನು ನಾಶಮಾಡಿದ ದೇವಿಯೇ ನಿನಗೆ ನಮಸ್ಕಾರಗಳು. ದಾನವರನ್ನು ನಾಶಮಾಡಿ ಹರಿಹರರಿಗೆ ರಾಜ್ಯಪ್ರದಾನಮಾಡಿದ ದೇವಿಯೇ ನಿನಗೆ ನಮಸ್ಕಾರಗಳು. ಯಜ್ಞಜೀವಿಗಳಾದ ದೇವತೆಗಳ ಕಾರ್ಯವನ್ನು ನಿರ್ವಾಹಮಾಡಿದ ನಿನಗೆ ಅನಂತ ನಮಸ್ಕಾರಗಳು. ಸುರಶತ್ರುಗಳನ್ನು ನಾಶಮಾಡುತ್ತಾ ಇಂದ್ರನಿಂದ ಪಾದಪೂಜೆ ಹೊಂದು

ನಮೋऽಸ್ತು ತೇ ಮಹಿಷವಿನಾಶಕಾರಿಣಿ
ನಮೋऽಸ್ತು ತೇ ಹರಿಹಯಭಾಸ್ಕರಸ್ತುತೆ ॥ ೫೭ ॥

ನಮೋऽಸ್ತು ತೇऽಷ್ಟಾದಶಬಾಹುಶಾಲಿನಿ
ನಮೋऽಸ್ತು ತೇ ಶುಂಭನಿಶುಂಭಘಾತಿನಿ ।
ನಮೋऽಸ್ತು ತೇऽಚಾರ್ತಿಹರೆ ತ್ರಿಶೂಲಿನಿ
ನಮೋऽಸ್ತು ನಾರಾಯಣಿ ಚಕ್ರಧಾರಿಣಿ ॥ ೫೮ ॥

ನಮೋऽಸ್ತು ವಾರಾಹಿ ಸದಾಧರಾಧರೆ
ತ್ವಾಂ ನಾರಸಿಹ್ಮಿ ಪ್ರಣತಾ ನಮೋऽಸ್ತುತೆ ।
ನಮೋऽಸ್ತು ತೇ ವಜ್ರಧರೆ ಗಜಧ್ವಜಿ
ನಮೋऽಸ್ತು ಕೌಮಾರಿ ಮಯೂರವಾಹಿನಿ ॥ ೫೯ ॥

ನಮೋऽಸ್ತು ಪೈತಾಮಹಹಂಸವಾಹನೆ
ನಮೋऽಸ್ತು ಮಾಲಾವಿಕಟೆ ಸುಕೇಶಿನಿ ।
ನಮೋऽಸ್ತು ತೇ ರಾಸಭಪೃಷ್ಠವಾಹಿನಿ
ನಮೋऽಸ್ತು ಸರ್ವಾರ್ತಿಹರೆ ಜಗನ್ಮಯಿ ॥ ೬೦ ॥

ತ್ತಿರುವ ನಿನಗೆ ಅನಂತ ನಮಸ್ಕಾರಗಳು. ಮಹಿಷನಾಶಕಳಾಗಿಯೂ, ಇಂದ್ರಸೂರ್ಯ ರಿಂದ ಸ್ತುತಿಸಲ್ಪಡುತ್ತಲೂ ಇರುವ ನಿನಗೆ ನಮಸ್ಕಾರಗಳು. ಹದಿನೆಂಟು ಭುಜ ಗಳನ್ನು ಹೊಂದಿ ಶುಂಭನಿಶುಂಭನಾಶಕಳಾಗಿರುವ ನಿನಗೆ ಅನಂತ ನಮಸ್ಕಾರಗಳು. ಪೀಡಾಪರಿಹಾರಕಳಾಗಿಯೂ, ತ್ರಿಶೂಲಧಾರಿಯಾಗಿಯೂ, ಚಕ್ರಾಯುಧವನ್ನು ಹೊಂದಿ ನಾರಾಯಣನ ಅಂಶವಾಗಿಯೂ ಇರುವ ನಿನಗೆ ಅನಂತ ನಮಸ್ಕಾರಗಳು.

೫೯-೬೧. ಎಲೈ ಭೂಧಾರಿಣಿಯಾದ ವಾರಾಹಿಯೇ ನಿನಗೆ ನಮಸ್ಕಾರಗಳು. ಎಲೈ ನಾರಸಿಂಹಿಯೇ ನಿನ್ನನ್ನು ಪ್ರಣಾಮಪೂರ್ವಕವಾಗಿ ನಮಸ್ಕರಿಸುತ್ತಿದ್ದೇನೆ. ಎಲೈ ವಜ್ರಧಾರಿಣಿಯೇ, ಗಜವಾಹಿನಿಯೇ, ತೇಜಸ್ವಿನಿಯಾದ ಕೌಮಾರಿಯೇ ನಿನಗೆ ಅನಂತ ವಂದನೆಗಳು. ಎಲೈ ಚತುರ್ಮುಖಹಂಸವಾಹಿನಿಯೇ, ನಿಬಿಡವಾದ ಮಾಲಾಧಾರಿಣಿಯಾದ ಸುಕೇಶಿನಿಯೇ ನಿನಗೆ ನಮಸ್ಕಾರಗಳು. ಎಲೈ ರಾಸಭವಾಹಿನಿಯೇ, ಸರ್ವಪೀಡನಾಶಕವಾದ ಜಗನ್ಮಯಮೂರ್ತಿಯೇ ನಿನಗೆ ನಮಸ್ಕಾರಗಳು.

ನಮೋಽಸ್ತು ವಿಶ್ವೇಶ್ವರಿ ಪಾಹಿ ವಿಶ್ವಂ
ನಿಷೂದಯಾರಿಂ ದ್ವಿಜದೇವತಾನಾಂ ।
ನಮೋಽಸ್ತು ತೇ ಸರ್ವಮಯಿ ತ್ರಿನೇತ್ರೆ
ನಮೋನಮಸ್ತೆ ವರದೆ ಪ್ರಸೀದ ॥ ೬೧ ॥

ಬ್ರಹ್ಮಾಣೀ ತ್ವಂ ಮೃಡಾನೀ
ವರಶಿಖಿಗಮನಾ ಶಕ್ತಿಹಸ್ತಾ ಕುಮಾರೀ ।
ವಾರಾಹೀ ತ್ವಂ ಸುವಕ್ತ್ರಾ
ಖಗಪತಿಗಮನಾ ವೈಷ್ಣವೀ ತ್ವಂ ಸಶಾರ್ಙ್ಗೀ ।
ದುರ್ದರ್ಶಾ ನಾರಸಿಂಹೀ
ಘುರುಘುರಿತರವಾ ತ್ವಂ ತಥೈಂದ್ರೀ ಸವಜ್ರಾ
ತ್ವಂ ಮಾರೀ ಚರ್ಮಮುಂಡಾ
ಶವಗಮನರತಾ ಯೋಗಿನೀ ಯೋಗಸಿದ್ಧಾ ॥ ೬೨ ॥

ಓಂ, ನಮಸ್ತೇ ತ್ರಿನೇತ್ರೇ ಭಗವತಿ ತವ ಚರಣಾನುಚ್ಛ್ರಿತಾಯೇ
ಅಹರಹರ್ವಿನತ ಶಿರೋಽಧರಾಂಸನಮ್ರಾಃ ।

ಎಲೈ ವಿಶ್ವನಾಥೆಯೇ, ಜಗತ್ತನ್ನು ನೀನು ಹೀಗೆಯೇ ರಕ್ಷಿಸು. ದೇವಬ್ರಾಹ್ಮಣ ಶತ್ರುಗಳನ್ನು ನಾಶಪಡಿಸು ನಿನಗೆ ನಮಸ್ಕಾರಗಳು. ಎಲೈ ಸರ್ವಸ್ವರೂಪಿಣಿಯೇ, ತ್ರಿನೇತ್ರಳೇ, ವರಪ್ರದಳೇ ನಿನಗೆ ನಮಸ್ಕಾರಗಳು. ನಮ್ಮ ವಿಷಯದಲ್ಲಿ ಪ್ರಸನ್ನಳಾಗಿರು.

೬೨. ಎಲೈ ದೇವಿಯೇ, ನೀನೆ ಬ್ರಹ್ಮಾಣಿಯಾಗಿಯೂ, ಮೃಡಾನಿಯಾಗಿಯೂ ಮಯೂರವಾಹನೆಯಾಗಿ ಶಕ್ತ್ಯಾಯುಧಧಾರಿಣಿಯಾದ ಕುಮಾರಿಯಾಗಿಯೂ, ವಾರಾಹಿಯಾಗಿಯೂ, ಗರುಡವಾಹನೆಯಾದ ಶಾರ್ಙ್ಗಧಾರಿಣಿಯಾದ ವೈಷ್ಣವಿಯಾಗಿಯೂ, ಮುಖವಿಕಾರಹೊಂದಿ ಘುರುಘುರು ಎಂದು ಶಬ್ದಮಾಡುತ್ತಿರುವ ನಾರಸಿಂಹೀರೂಪಳಾಗಿಯೂ, ವಜ್ರಾಯುಧಧಾರಿಣಿಯಾದ ಐಂದ್ರಿಯಾಗಿಯೂ, ಚಂಡಮಾರಿಯಾಗಿಯೂ, ಶಿವಗಮನದಲ್ಲಿ ಪ್ರೀತಿಯುಳ್ಳ ಚರ್ಮಮುಂಡಾರೂಪಳಾಗಿಯೂ, ಯೋಗಸಿದ್ಧಿ ಹೊಂದಿರುವ ಯೋಗಿನಿಯಾಗಿಯೂ ನಾನಾರೂಪದಿಂದಿರುವೆ.

೬೩-೬೫. ಮಹಾಮಹಿಮಳಾದ ತ್ರಿನೇತ್ರೆಯೇ ನಿನಗೆ ನಮಸ್ಕಾರಗಳು. ಯಾರು ಪ್ರತಿದಿನವೂ ನಿನ್ನ ಚರಣಗಳಲ್ಲಿ ಭಕ್ತಿಯಿಂದ ತಲೆಬಾಗಿಸಿ ನಮಸ್ಕರಿಸಿ

ನ ಹಿ ನ ಹಿ ಪರಮುಸ್ತ್ಯಶುಭಂ ಸತತಂ ಸ್ತುತಿ
ಬಲಿಕುಸುಮಕರಾಃ ಸತತಂ ಯೇ ॥ ೬೩ ॥

ಓಂ, ಏವಂ ಸ್ತುತಾ ಸುರವರ್ಯೈಃ ಸುರಶತ್ರುನಾಶೀ
ಪ್ರಾಹ ಪ್ರಹಸ್ಯ ಸುರಸಿದ್ಧಮಹರ್ಷಿವರ್ಯಾನ್ ।
ಪ್ರಾಪ್ತೋ ಮಯಾದ್ಭುತತನೋ ಭವತಾಂ
ಪ್ರಸಾದಾತ್ಸಂಗ್ರಾಮಮೂರ್ಧ್ನಿ ಸುರಶತ್ರುಜಯಃ ಪ್ರಮರ್ದ್ದಾತ್ ॥ ೬೪ ॥

ಇಮಾಂ ಸ್ತುತಿಂ ಭಕ್ತಿಪರಾ ನರೋತ್ತಮಾ
ಭವದ್ಭಿರುಕ್ತಾಮನುಕೀರ್ತಯಂತಿ ।
ದುಃಸ್ವಪ್ನನಾಶೋ ಭವಿತಾ ನ ಸಂಶಯೋ
ವರಸ್ತಥಾನ್ಯೋ ಪ್ರಿಯತಾಮಭೀಪ್ಸಿತಃ ॥ ೬೫ ॥

ದೇವಾ ಊಚುಃ

ಯದಿ ವರದಾ ಭವತೀ ತ್ರಿದಶಾನಾಂ
ದ್ವಿಜಶಿಶುಗೋಷು ಯತಸ್ವ ಹಿತಾಯ ।
ಪುನರಪಿ ದೇವರಿಪೂನಪರಾಂಸ್ತ್ವಂ
ಪ್ರದಹ ಹುತಾಶನತುಲ್ಯಶರೀರೆ ॥ ೬೬ ॥

ನಮ್ರತೆಯಿಂದ ವರ್ತಿಸುತ್ತಾರೆಯೋ ಯಾರು ನಿನ್ನ ಸ್ತುತಿಪರರಾಗಿ ಪುಷ್ಪಹಸ್ತರಾಗಿ ನಿನ್ನನ್ನು ಪೂಜಿಸುತ್ತಾರೆಯೋ ಅವರಿಗೆ ಅಮಂಗಲವೆಂಬುದೇ ಇರುವುದಿಲ್ಲ. ಈ ಪ್ರಕಾರ ದೇವತೆಗಳಿಂದ ಸ್ತೋತ್ರಮಾಡಲ್ಪಟ್ಟ ಅಸುರನಾಶಿನಿಯಾದ ದೇವಿಯು ನಗುತ್ತಾ ದೇವತೆಗಳು, ಸಿದ್ಧರು, ಮಹರ್ಷಿಗಳು ಇವರನ್ನು ಕುರಿತು ನಿಮ್ಮ ಅನುಗ್ರಹ ದಿಂದ ಅಸುರಯುದ್ಧದಲ್ಲಿ ಪರಾಕ್ರಮದಿಂದ ಅದ್ಭುತವಾದ ವಿಜಯವನ್ನೇ ನಾನು ಹೊಂದಿದೆನು. ಭಕ್ತಿಶಾಲಿಗಳಾದ ಮನುಷ್ಯರು ನಿಮ್ಮ ಈ ಸ್ತುತಿಯನ್ನು ಸರ್ವ ಕಾಲದಲ್ಲೂ ಪಠನಮಾಡಿದಲ್ಲಿ ಅವರಿಗೆ ದುಃಸ್ವಪ್ನನಾಶವು ನಿಸ್ಸಂಶಯವಾಗಿಯೂ ಉಂಟಾಗುತ್ತದೆ. ನಿಮಗೆ ಇಷ್ಟವಾದ ಮತ್ತೊಂದು ವರವನ್ನು ಕೇಳಿಕೊಳ್ಳಿರಿ ಎಂದಳು. ಆಗ ದೇವತೆಗಳು ದೇವಿಯನ್ನು ಕುರಿತು ಹೇಳುತ್ತಾರೆ.

೬೬-೬೮. ಎಲೈ ದೇವಿಯೇ, ನೀನು ದೇವತೆಗಳ ವಿಷಯದಲ್ಲಿ ವರಪ್ರದ ಳಾಗಿದ್ದಲ್ಲಿ ಬ್ರಾಹ್ಮಣಶಿಶುಗಳ ಮತ್ತು ಗೋವುಗಳ ಹಿತಕ್ಕಾಗಿ ಪ್ರಯತ್ನಿಸು.

ದೇವ್ಯುವಾಚ

ಭೂಯೋ ವಧಿಷ್ಯಾಮಿ ಸುರಾರಿಮುತ್ತಮಂ
ಸಂಭೂಯ ನಂದಸ್ಯ ಗೃಹೆ ಯಶೋದಯಾ ।
ತತ್ರಾವತೀರ್ಣಾ ಲವಣಂ ತಥಾಪರೌ
ಶುಂಭಂ ನಿಶುಂಭಂ ದಶನಪ್ರಹಾರಿಣೀ ॥ ೬೭॥

ಭೂಯಸ್ಸುರಾಸ್ತಿಷ್ಯಯುಗೇ ನಿರಾಶನಾ
ನ್ನಿರೀಕ್ಷ್ಯ ಮಾರೀಚಗೃಹೆ ಶತಕ್ರತೋಃ ।
ಸಂಭೂಯ ದೇವ್ಯಾ ಇತಿ ಸಪ್ತಧಾ ಮಯಾ
ಸುರಾನ್ ಭರಿಷ್ಯಾಮಿ ಚ ಶಾಕಸಂಕರೈಃ ॥ ೬೮ ॥

ಭೂಯೋ ವಿಪಕ್ಷಕ್ಷಪಣಾಯ ದೇವಾ
ವಿಂಧ್ಯೆ ಭವಿಷ್ಯಾಮ್ಯೃಷಿರಕ್ಷಣಾರ್ಥಂ ।
ದುವೃರ್ತ್ತಚೇಷ್ಟಾನ್ವಿನಿಹತ್ಯ ದೈತ್ಯಾನ್
ಭೂಯಃ ಸಮೇಷ್ಯಾಮಿ ಸುರಾಜಯಂಹಿ ॥ ೬೯ ॥

ಉಳಿದಿರುವ ದೇವಶತ್ರುಗಳನ್ನೆಲ್ಲಾ ಅಗ್ನಿಯಂತೆ ಜ್ವಲಿಸುವ ಶರೀರವುಳ್ಳ ನೀನು ಭಸ್ಮಮಾಡು ಎಂದು ಪ್ರಾರ್ಥಿಸಿದರು. ಆಗ ದೇವಿಯು ಪುನಃ ನಾನು ನಂದಗೋಪನ ಮನೆಯಲ್ಲಿ ಜನಿಸಿ ಯಶೋದೆಯೊಡನೆ ಸೇರಿ ಪ್ರಮುಖರಾದ ಸುರಶತ್ರುಗಳನ್ನೆಲ್ಲಾ ನಾಶಮಾಡುತ್ತೇನೆ. ಲವಣಾಸುರನನ್ನೂ, ಶುಂಭನಿಶುಂಭರೆಂಬ ಇತರ ದಾನವರನ್ನೂ ದಶನಪ್ರಹಾರದಿಂದ ನಾಶಪಡಿಸುತ್ತೇನೆ. ಎಲೈ ದೇವತೆಗಳಿರಾ, ಪುನಃ ನಾನು ಮಾರೀಚಗೃಹದಲ್ಲಿ ಅವತರಿಸಿ ಸಪ್ತಮಾತೃಕಾರೂಪದಿಂದ ನಿಂತು ಕಲಿಯುಗದಲ್ಲಿ ನಿರಶನರಾಗಿರುವ ದೇವತೆಗಳನ್ನು ನೋಡಿ ಅವರೆಲ್ಲರನ್ನೂ ಶಾಕಾದಿಗಳಿಂದ ರಕ್ಷಿಸುತ್ತೇನೆ.

೬೯-೭೦. ಪುನಃ ನಾನು ಋಷಿಗಳ ರಕ್ಷಣಾರ್ಥವಾಗಿ ಶತ್ರುನಾಶನಮಾಡಲು ವಿಂಧ್ಯಪರ್ವತದಲ್ಲಿಯೇ ಸಾನ್ನಿಧ್ಯಹೊಂದಿರುವೆನು. ದುಷ್ಟಚೇಷ್ಟರಾದ ದೈತ್ಯರನ್ನು ನಾಶಪಡಿಸಿ ವಿಜಯವನ್ನು ಹೊಂದುತ್ತೇನೆ. ಕ್ರೋಧದಿಂದ ಕೆಂಗಣ್ಣುಳ್ಳ ಅಸುರನು

ಯದಾರುಣಾಕ್ಷೋ ಭವಿತಾ ಮಹಾಸುರಃ
ತದಾ ಭವಿಷ್ಯಾಮಿ ಹಿತಾಯ ದೇವತಾಃ ।
ಮಹಾಲಿರೂಪೇಣ ವಿನಷ್ಟಜೀವಿತಂ
ಕೃತ್ವಾ ಸಮೇಷ್ಯಾಮಿ ಪುನಸ್ತ್ರಿವಿಷ್ಟಪಂ ॥ ೭೦ ॥

ಪುಲಸ್ತ್ಯ ಉವಾಚ

ಇತ್ಯೇವಮುಕ್ತ್ವಾ ವರದಾ ಸುರಾಣಾಂ
ಕೃತ್ವಾ ಪ್ರಣಾಮಂ ದ್ವಿಜಪುಂಗವಾನಾಂ ।
ವಿಸೃಜ್ಯ ಭೂತಾನಿ ಜಗಾಮ ದೇವೀ
ಖಂ ಸಿದ್ಧಸಂಘೈರನುಗಮ್ಯಮಾನಾ ॥ ೭೧ ॥

ಇದಂ ಪುರಾಣಂ ಪರಮಂ ಪವಿತ್ರಂ
ದೇವ್ಯಾ ಜಯಂ ಮಂಗಲದಾಯಿ ಪುಂಸಾಂ ।
ಶ್ರೋತವ್ಯಮೇತನ್ನಿಯತೈಸ್ಸದೈವ
ರಕ್ಷೋಘ್ನಮೇತದ್ಭಗವಾನುವಾಚ ॥ ೭೨ ॥

ಇತಿ ಶ್ರೀ ವಾಮನಪುರಾಣೇ ದೇವೀಮಾಹಾತ್ಮ್ಯೇ ಶುಂಭನಿಶುಂಭವಧೋ
ನಾಮ ಷಟ್‌ಪಂಚಾಶತ್ತಮೋಽಧ್ಯಾಯಃ

ಆವಿರ್ಭವಿಸುವಾಗಲೆಲ್ಲಾ ದೇವತೆಗಳ ಹಿತಕ್ಕಾಗಿ ನಾನು ಆವಿರ್ಭವಿಸುತ್ತೇನೆ. ಮಹಾಲಿರೂಪದಿಂದ ಅವರನ್ನು ನಾಶಪಡಿಸಿ ಪುನಃ ಸ್ವರ್ಗವನ್ನು ಸೇರುತ್ತೇನೆ.

೭೧-೭೨. ಪುಲಸ್ತ್ಯರು ಹೇಳುತ್ತಾರೆ:—ವರಪ್ರದಳಾದ ದೇವಿಯು ದೇವತೆಗಳಿಗೆ ಹೀಗೆ ಅಭಯಪ್ರದಾನಮಾಡಿ ಬ್ರಾಹ್ಮಣೋತ್ತಮರಿಗೆ ನಮಸ್ಕರಿಸಿ ಭೂತಗಣಗಳನ್ನು ಅಲ್ಲಿಯೇ ಬಿಟ್ಟು ಸಿದ್ಧರಿಂದ ಸೇವಿಸಲ್ಪಡುತ್ತಾ ಆಕಾಶಮಾರ್ಗದಲ್ಲಿ ಹೊರಟು ಹೋದಳು. ಪವಿತ್ರಕರವಾಗಿಯೂ, ಉತ್ತಮವಾಗಿಯೂ ಇರುವ ದೇವಿಯ ವಿಜಯ ಪ್ರಕಾಶವಾದ ಈ ಪುರಾಣವು ಪಠನಾದಿಗಳಿಂದ ಸೇವಿಸುವವರಿಗೆ ಬಹಳ ಮಂಗಲ ಪ್ರದವಾದದ್ದು. ರಕ್ಷಃಪಿಶಾಚಾದಿ ನಿಖಿಲ ಪೀಡಾಪರಿಹಾರಕವಾದ ಈ ಪುರಾಣವನ್ನು ಎಲ್ಲರೂ ಸರ್ವಕಾಲದಲ್ಲೂ ನಿಯಮದಿಂದಿದ್ದು ಕೇಳಬೇಕೆಂದು ಭಗವಂತನ ಅಪ್ಪಣೆಯೂ ಇದೆ.

ಇಲ್ಲಿಗೆ ಶ್ರೀ ವಾಮನಪುರಾಣದ ದೇವೀಮಾಹಾತ್ಮ್ಯದಲ್ಲಿ ಶುಂಭನಿಶುಂಭ
ವಧವೆಂಬ ಐವತ್ತಾರನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಚಂಡಮುಂಡರ ವಿನಾಶಾನಂತರ ರಕ್ತಬೀಜನೆಂಬ ಮಹಾಸುರನು ಯುದ್ಧಕ್ಕೆ ಬಂದನೆಂದೂ ಅವನು ಬಂದೊಡನೆಯೇ ಚಂಡಿಕೆಯು ಕಾಲಿಯೊಡನೆ ಸಿಂಹನಾದ ಮಾಡಿದಳೆಂದೂ ಅವಳ ಸಿಂಹನಾದದಿಂದ ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ, ವೈಷ್ಣವೀ, ವಾರಾಹೀ, ನಾರಸಿಂಹೀ ಎಂಬ ದೇವಿಯ ರೂಪಗಳು ಅಭಿವ್ಯಕ್ತವಾದುದೆಂದೂ ಹೇಳಲಾಯಿತು. ಅಂಬಿಕೆಯ ಅಟ್ಟಹಾಸಧ್ವನಿಯಿಂದ ಓಡಿಬಂದ ಶೂಲಪಾಣಿಯು ಶಿವೆಯ ಅಪ್ಪಣೆಯ ಪ್ರಕಾರ ದೂತನಾಗಿ ಬಂದು ಶುಂಭ ನಿಶುಂಭರನ್ನು ಕುರಿತು ದೇವಿಯ ನಿಯೋಗವನ್ನು ತಿಳಿಸಲಾಗಿ ಅವರು ಕೋಪಾತಿಶಯದಿಂದ ದೇವಿಯನ್ನೇ ಯುದ್ಧದಲ್ಲಿ ಎದುರಿಸಲು ಸಿದ್ಧರಾದರೆಂದೂ ಆಗ ದೇವಿಯ ವಿವಿಧರೂಪಗಳೊಡನೆ ಘೋರವಾದ ಯುದ್ಧ ನಡೆದು ದಾನವರೆಲ್ಲರೂ ಆಹತರಾಗಿ ರಕ್ತಬೀಜನನ್ನು ಶರಣುಹೊಂದಿದರೆಂದೂ ಹೇಳಲಾಯಿತು. ಆಗ ರಕ್ತಬೀಜನೂ ಸಹ ಶಸ್ತ್ರಾಸ್ತ್ರಗಳಿಂದ ಪ್ರಬಲಯುದ್ಧ ನಡಿಸಲಾಗಿ ದೇವಿಯ ಬಾಣದಿಂದ ಆ ರಕ್ತಬೀಜನ ರಕ್ತಕಣವು ಬಿದ್ದೆಡೆಯಲ್ಲೆಲ್ಲಾ ಅದೇ ಪ್ರಮಾಣದ ಮತ್ತೊಬ್ಬ ರಕ್ತಬೀಜನು ಉದಯಿಸಲಾರಂಭವಾಯಿತು. ಆಗ ಮಾರಿಯ ಸಂದೇಶದಿಂದ ಚಂಡಿಯು ಚರ್ಮಮುಂಡಾ ರೂಪವನ್ನು ಧರಿಸಿ ವಿಶಾಲವಾದ ತನ್ನ ಬಾಯಿನಲ್ಲಿ ಅವನ ರಕ್ತವೆಲ್ಲವೂ ಬೀಳುವಂತೆ ಮಾಡಿ ಅವನನ್ನು ತನ್ನ ಬಾಯಿನಲ್ಲಿ ಹಾಕಿಕೊಂಡು ದುರ್ಬಲನನ್ನಾಗಿ ಮಾಡಿ ನಂತರ ಅವನನ್ನು ಛಿನ್ನಾಭಿನ್ನವಾಗಿ ಕತ್ತರಿಸಿದಳು. ಅವನು ಹತನಾದ ನಂತರ ದಾನವ ಬಲವೆಲ್ಲಾ ನಿಶುಂಭನಲ್ಲಿ ಮೊರೆಯಿಡಲಾಗಿ ನಿಶುಂಭನು ತಾನಾಗಿ ದೇವಿಯಮೇಲೆ ಯುದ್ಧಕ್ಕೆ ಬಂದು ದೇವಿಯರೂಪದಿಂದ ಸ್ತಬ್ಧನಾಗಿ ಜ್ವರಪೀಡಿತನಾಗಿ ನಿಂತನು. ಆಗ ಅವನನ್ನು ನೋಡಿ ದೇವಿಯು ದೇವತೆಗಳನ್ನು ಜಯಿಸುವ ನಿನ್ನ ಪರಾಕ್ರಮವು ಇಂತಹುದೇ ಎಂದು ಹಾಸ್ಯಮಾಡಲು ಆ ನಿಶುಂಭನೂ ದೇವಿಯನ್ನು ಕುರಿತು ಸುಕುಮಾರಶರೀರಳಾದ ನೀನು ನನ್ನ ಬಾಣದಿಂದ ತುಂಡುತುಂಡಾಗಿ ಆಗ

ಬೇಡ ನನ್ನನ್ನು ಪತಿಯನ್ನಾಗಿ ವರಿಸಿ ಸುಖವಾಗಿರು ಎಂದು ಉತ್ತರವಿತ್ತನು. ದೇವಿಯು ನಾನು ಯಾರಿಂದ ಜಯಿಸಲ್ಪಡುವೆನೋ ಅವನಿಗೆ ಹೊರತು ಮತ್ತಾರಿಗೂ ನಾನು ಪತ್ನಿಯಾಗುವುದಿಲ್ಲವೆಂದು ಹೇಳಲಾಗಿ ಖಡ್ಗಪಾಣಿಯಾಗಿ ಆ ನಿಶುಂಭನು ದೇವಿಯ ಮೇಲೆಯೇ ಆಯುಧವನ್ನು ಪ್ರಯೋಗಿಸಲು ಸಿದ್ಧನಾದನು. ಆಗ ದೇವಿಯು ಅವನ ಕೈಗಳನ್ನೆಲ್ಲಾ ಕತ್ತರಿಸಿ ನಾಶಪಡಿಸಿದಳು. ಅನಂತರ ಶುಂಭನು ಗಜಾರೂಢನಾಗಿ ಯುದ್ಧಕ್ಕೆ ಬರಲು ದೇವಿಯು ಅವನನ್ನೂ ಅವನ ಆನೆಯೊಡನೆ ಕತ್ತರಿಸಿ ನೆಲಕ್ಕೆ ಕೆಡಹಿದಳು. ದೇವಿಯ ಪರಾಕ್ರಮವನ್ನು ನೋಡಿ ದೇವತೆಗಳೆಲ್ಲರೂ ಅವಳನ್ನು ಸ್ತೋತ್ರಮಾಡಲಾಗಿ ದೇವಿಯೂ ಇನ್ನೂ ಅನೇಕ ದಾನವರನ್ನು ನಾಶಮಾಡಲು ತಾನು ನಂದಗೋಪನ ಮನೆಯಲ್ಲಿ ಹುಟ್ಟುವನೆಂದೂ ವಿಂಧ್ಯವಾಸಿನಿಯಾಗಿದ್ದು ದೇವತೆಗಳನ್ನು ರಕ್ಷಿಸುವೆನೆಂದೂ ಹೇಳಿ ಅವರನ್ನು ಸಮಾಧಾನಪಡಿಸಿ ಸಿದ್ಧರಿಂದ ಸೇವಿಸಲ್ಪಡುತ್ತಾ ಆಕಾಶಮಾರ್ಗದಲ್ಲಿ ಹೊರಟುಹೋದಳೆಂದೂ ಹೇಳಿ ಉಪಾಖ್ಯಾನದ ಫಲಶ್ರುತಿಯೊಡನೆ ಉಪಸಂಹರಿಸಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಸಪ್ತಪಂಚಾಶತ್ತಮೋಽಧ್ಯಾಯಃ

ನಾರದ ಉವಾಚ

ಕಥಂ ಸ ಮಹಿಷಃ ಕ್ರೌಂಚೋ ಭಿನ್ನಃ ಸ್ಕಂದೇನ ಸುವ್ರತ ।
ಏತನ್ಮೆ ವಿಸ್ತರಾದ್ಬ್ರಹ್ಮನ್ ಕಥಯಸ್ವಾಮಿತದ್ಯುತೆ ॥ ೧ ॥

ಪುಲಸ್ತ್ಯ ಉವಾಚ

ಶೃಣುಷ್ವ ಕಥಯಿಷ್ಯಾಮಿ ಕಥಾಂ ಪುಣ್ಯಾಂ ಪುರಾತನೀಂ ।
ಯಶೋವೃದ್ಧಿಂ ಕುಮಾರಸ್ಯ ಕಾರ್ತಿಕೇಯಸ್ಯ ನಾರದ ॥ ೨ ॥

ಯತ್ತತ್ಪೀತಂ ಹುತಾಶೇನ ಸ್ಕನ್ನಂ ಶುಕ್ರಂ ಪಿನಾಕಿನಃ ।
ತೇನಾಕ್ರಾಂತೋಽಭವದ್ಬ್ರಹ್ಮನ್ ಮಂದತೇಜಾ ಹುತಾಶನಃ ॥ ೩ ॥

ಐವತ್ತೇಳನೆಯ ಅಧ್ಯಾಯವು

೧-೪. ಅನಂತರ ನಾರದರು ಪುಲಸ್ತ್ಯರನ್ನು ಕುರಿತು ಎಲೈ ತೇಜೋಮೂರ್ತಿಯೇ, ಕ್ರೌಂಚದಿಂದೊಡಗೂಡಿದ ಆ ಮಹಿಷನು ಸ್ಕಂದನಿಂದ ಹೇಗೆ ನಾಶ ಮಾಡಲ್ಪಟ್ಟನೆಂಬುದನ್ನು ವಿಸ್ತಾರವಾಗಿ ಅಪ್ಪಣೆ ಕೊಡಿಸಬೇಕೆಂದು ಪ್ರಶ್ನಿಸಲಾಗಿ ಪುಲಸ್ತ್ಯರು ಪುರಾತನವಾಗಿಯೂ, ಪುಣ್ಯಕರವಾಗಿಯೂ ಇರುವ ಈ ಕಥೆಯನ್ನು ಹೇಳುತ್ತೇನೆ ಕೇಳು ಎಂದುಪಕ್ರಮಿಸಿ ಈ ಕಥೆಯು ಕುಮಾರಸ್ವಾಮಿಯ ಯಶೋರೂಪವಾದುದರಿಂದ ಕೇಳತಕ್ಕವರಿಗೂ ಯಶೋವೃದ್ಧಿಯನ್ನುಂಟುಮಾಡತಕ್ಕದ್ದು ಎಂದು ಪ್ರಶಂಸಿಸಿ ಹೇಳುತ್ತಾರೆ. ಪಾರ್ವತಿಯೊಡನೆ ಶಿವನು ಸೇರಿದ್ದ ಕಾಲದಲ್ಲಿ ದೇವತೆಗಳ ಸನ್ನಾಹದಿಂದ ಸುರತಮಧ್ಯದಲ್ಲೇ ಬಿಡುಗಡೆಹೊಂದಿದ ಅವನ ಶುಕ್ರವನ್ನು ಅಗ್ನಿಯು ಹೀರಿದ್ದನು. ಆ ಶಿವನ ವೀರ್ಯವ್ಯಾಪ್ತಿಯಿಂದ ಅಗ್ನಿಯೂ ತೇಜೋ

ತತೋ ಜಗಾಮ ದೇವಾನಾಂ ಸಕಾಶಮಮಿತದ್ಯುತಿಃ ।
ತೈಶ್ಚಾಪಿ ಪ್ರಹಿತ ಸ್ತೂರ್ಣಂ ಬ್ರಹ್ಮಲೋಕಂ ಜಗಾಮ ಹ ॥ ೪ ॥

ಸಗಚ್ಛನ್ ಕುಟಿಲಾಂ ದೇವೀಂ ದದರ್ಶ ಪಥಿ ಪಾವಕಃ ।
ತಾಂ ದೃಷ್ಟ್ವಾ ಪ್ರಾಹ ಕುಟಿಲೆ ತೇಜಏತತ್ಸುದುರ್ಧರಂ ॥ ೫ ॥

ಮಹೇಶ್ವರೇಣ ಸಂತ್ಯಕ್ತಂ ನಿರ್ದಹೇದ್ಭುವನಾನ್ಯಪಿ ।
ತಸ್ಮಾತ್ಪ್ರತೀಚ್ಛ ಪುತ್ರೋಽಯಂ ತವ ಧನ್ಯೋ ಭವಿಷ್ಯತಿ ॥ ೬ ॥

ಇತ್ಯಗ್ನಿನಾ ಸಾ ಕುಟಿಲಾ ಸ್ಮೃತಾ ಸ್ವಮತಮುತ್ತಮಂ ।
ಪ್ರಕ್ಷಿಪ ಸ್ವಾಂಭಸಿ ಮಮ ಪ್ರಾಹ ವಹ್ನಿಂ ಮಹಾಪಗಾ ॥ ೭ ॥

ತತಸ್ತ್ವಧಾರಯದ್ದೇವೀ ಶಾರ್ವಂ ತೇಜಸ್ತ್ವಪೂಪುಷತ್ ।
ಹುತಾಶನೋಽಪಿ ಭಗವಾನ್ ಕಾಮಚಾರೀ ಪರಿಭ್ರಮನ್ ॥ ೮ ॥

ಹೀನನಾಗುತ್ತ ಬಂದನು. ಅನಂತರ ಆ ಅಗ್ನಿಯು ತನ್ನ ಈ ದುಸ್ಥಿತಿಯನ್ನು ತಿಳಿಸಲು ದೇವತೆಗಳ ಸಮೀಪಕ್ಕೆ ಹೋಗಿ ಅವರನ್ನು ಬೇಡಿದನು. ಆ ದೇವತೆಗಳ ಪ್ರೇರಣೆಯಿಂದ ಬ್ರಹ್ಮಲೋಕಕ್ಕೆ ಹೋದನು.

೫-೭. ದಾರಿಯಲ್ಲಿ ಹೋಗುತ್ತಾ ಆ ಅಗ್ನಿಯು *ಕುಟಿಲೆಯೆಂಬ ಗಂಗೆಯನ್ನು ನೋಡಿದನು. ಅವಳನ್ನು ನೋಡಿ ಎಲೈ ಕುಟಿಲೆ ಮಹೇಶ್ವರನಿಂದ ಬಿಡಲ್ಪಟ್ಟ ಈ ತೇಜಸ್ಸು ಧರಿಸಲಶಕ್ಯವಾಗಿದೆ. ಇದನ್ನು ಬಿಟ್ಟುಬಿಟ್ಟಲ್ಲಿ ಪ್ರಪಂಚವನ್ನೇ ಇದು ಸುಟ್ಟುಬಿಟ್ಟೀತು. ಆದುದರಿಂದ ನೀನು ಇದನ್ನು ಪರಿಗ್ರಹಿಸು ಈ ತೇಜಸ್ಸಿನಿಂದ ನಿನಗೆ ಧನ್ಯನಾದ ಮಗನು ಉಂಟಾಗುತ್ತಾನೆ ಎಂದನು. ಅಗ್ನಿಯಿಂದ ಹೀಗೆ ಹೇಳಲ್ಪಟ್ಟ ಆ ಕುಟಿಲೆಯು ಇದು ತನಗೆ ಅಭಿಮತವೆಂದು ತಿಳಿದು ಅಗ್ನಿಯನ್ನು ಕುರಿತು ನನ್ನ ನೀರಿನಲ್ಲಿ ಆ ತೇಜಸ್ಸನ್ನು ಹಾಕಿಬಿಡು ಎಂದಳು. ನಂತರ ಅಗ್ನಿಯಿಂದ ಬಿಡಲ್ಪಟ್ಟ ಆ ಶಾರ್ವತೇಜಸ್ಸನ್ನು ಕುಟಿಲೆಯು ಧರಿಸಿ ಪೋಷಿಸಿದಳು.

೮-೧೧. ಅಗ್ನಿಯೂ ಸಹ ಮೊದಲು ಐದುಸಾವಿರವರ್ಷ ಪರ್ಯಂತ ಆ ಗರ್ಭವನ್ನು ತಾನು ಧರಿಸಿ ಕಾಮಚಾರಿಯಾಗಿ ಅಲೆದನು. ಆಗ ಅಗ್ನಿಯ ಮಾಂಸ,

---

* ಈ ಕುಟಿಲೆಯೇ ಪಾರ್ವತಿಗೆ ಸಹೋದರಿಯಾಗಿ ಹುಟ್ಟಿ ಚತುರ್ಮುಖನ ಶಾಪದಿಂದ ನದಿಯಾಗಿ ಪರಿಣಮಿಸಿದವಳು.

ಪಂಚವರ್ಷಸಹಸ್ರಾಣಿ ಧೃತವಾನ್ ಹವ್ಯಭುಕ್ತತಃ ।
ಮಾಂಸಮಸ್ಥೀನಿ ರುಧಿರಂ ಮೇದೋಮಜ್ಜಾಥ ತಸ್ಯ ಹಿ ॥ ೯ ॥

ರೋಮಶ್ಮಶ್ರ್ವಕ್ಷಿಕೇಶಾದ್ಯಾಃ ಸರ್ವೇ ಜಾತಾ ಹಿರಣ್ಮಯಾಃ ।
ಹಿರಣ್ಯರೇತಾ ಲೋಕೇಷು ತೇನ ಗೀತಶ್ಚ ಪಾವಕಃ ॥ ೧೦ ॥

ಪಂಚವರ್ಷಸಹಸ್ರಾಣಿ ಕುಟಿಲಾ ಜ್ವಲನೋಪಮಂ ।
ಧಾರಯಂತೀ ತದಾ ಗರ್ಭಂ ಬ್ರಹ್ಮಣಃ ಸ್ಥಾನಮಾಗತಾ ॥ ೧೧ ॥

ತಾಂ ದೃಷ್ಟ್ವಾಪ್ಸದ್ಮಜನ್ಮಾ ಸಂತಪ್ಯಂತೀಂ ಮಹಾಪಗಾಂ ।
ದೃಷ್ಟ್ವಾ ಪಪ್ರಚ್ಛ ಕೇನಾಯಂ ತವಗರ್ಭಃ ಸಮಾಹಿತಃ ॥ ೧೨ ॥

ಸಾ ಚಾಹ ಶಾಂಕರಂ ಯತ್ತಚ್ಛುಕ್ರಂ ಪೀತಂ ಹಿ ವಹ್ನಿನಾ ।
ತದಶಕ್ತೇನ ತೇನಾದ್ಯ ನಿಃಕ್ಷಿಪ್ತಂ ಮಯಿ ಸತ್ತಮ ॥ ೧೩ ॥

ಪಂಚವರ್ಷಸಹಸ್ರಾಣಿ ಧಾರಯಂತ್ಯಾ ಪಿತಾಮಹ ।
ಗರ್ಭಸ್ಯ ವರ್ತತೇ ಕಾಲೋ ನಾಯಂ ಪತತಿ ಕರ್ಹಿಚಿತ್ ॥ ೧೪ ॥

ಮೂಳೆ, ರಕ್ತ, ಮೇದಸ್ಸು, ರೋಮಗಳು, ಗಡ್ಡಮೀಸೆಗಳು, ಕಣ್ಣುಗಳು ಎಲ್ಲವೂ ಆ ಈಶ್ವರನ ತೇಜಸ್ಸಂಬಂಧದಿಂದ ಚಿನ್ನದಂತೆ ಜ್ವಲಿಸಿದವು. ಆದುದರಿಂದಲೇ ಅಗ್ನಿಗೆ ಹಿರಣ್ಯರೇತಾ ಎಂಬ ಹೆಸರು ಅದು ಮೊದಲು ಲೋಕದಲ್ಲಿ ಪ್ರಚಾರಕ್ಕೆ ಬಂದಿತು. ಕುಟಿಲೆಯೂ ಆ ತೇಜಸ್ಸನ್ನು ಗರ್ಭರೂಪದಿಂದ ಐದುಸಾವಿರವರ್ಷ ಪರ್ಯಂತ ಧರಿಸಿದ್ದಳು. ಗರ್ಭದಲ್ಲೇ ಅದು ಅಗ್ನಿಯಂತೆ ಜ್ವಲಿಸುತ್ತಿದ್ದುದರಿಂದ ಅವಳೂ ಅದನ್ನು ಬಹಳ ಶ್ರಮದಿಂದ ಧರಿಸುತ್ತಾ ಚತುರ್ಮುಖಲೋಕಕ್ಕೆ ಬಂದು ಸೇರಿದಳು.

೧೨-೧೪. ಹಾಗೆ ಸಂತಾಪದಿಂದ ಬಂದ ಆ ಕುಟಿಲೆಯನ್ನು ಚತುರ್ಮುಖನು ನೋಡಿ ನಿನಗೆ ಈ ಗರ್ಭವು ಯಾರಿಂದ ಕೊಡಲ್ಪಟ್ಟಿತೆಂದು ಪ್ರಶ್ನೆಮಾಡಿದನು. ಕುಟಿಲೆಯೂ ಸಹ ಶಂಕರನ ಶುಕ್ರವನ್ನು ಹೀರಿದ ಅಗ್ನಿಯು ತಾನು ಧರಿಸಲಶಕ್ತನಾಗಿ ಆ ಗರ್ಭವನ್ನು ನನ್ನಲ್ಲಿಟ್ಟನು. ನಾನೂ ಕೂಡ ಐದುಸಾವಿರವರ್ಷದಿಂದಲೂ ಇದನ್ನು ಧರಿಸಿರುವೆನು. ಇದಕ್ಕೆ ಇನ್ನೂ ದಿವಸಗಳು ತುಂಬಿಲ್ಲವೆಂದು ತೋರುತ್ತಿದೆ. ಆದುದರಿಂದ ಎಲ್ಲಿಯೂ ಇದು ಬೀಳುವಂತಿಲ್ಲ ಎಂದಳು.

ತಚ್ಛ್ರುತ್ವಾ ಭಗವಾನಾಹ ಗಚ್ಛ ತ್ವಮುದಯಂ ಗಿರಿಂ ।
ತತ್ರಾಸ್ತಿ ಯೋಜನಶತಂ ರೌದ್ರಂ ಶರವಣಂ ಮಹತ್ ॥ ೧೫ ॥

ತತ್ರೈನಂ ಕ್ಷಿಪ ಸುಶ್ರೋಣಿ ವಿಸ್ತೀರ್ಣೆ ಗಿರಿಸಾನುನಿ ।
ದಶವರ್ಷಸಹಸ್ರಾಂತೇ ತತೋ ಬಾಲೋ ಭವಿಷ್ಯತಿ ॥ ೧೬ ॥

ಸಾ ಶ್ರುತ್ವಾ ಬ್ರಹ್ಮಣೋ ವಾಕ್ಯಂ ರೂಪಿಣೀ ಗಿರಿಮಾಗತಾ ।
ಆಗತ್ಯ ಗರ್ಭಂ ತತ್ಯಾಜ ಮುಖೇನೈವಾದ್ರಿನಂದಿನೀ ॥ ೧೭ ॥

ಸಾತು ಸಂತ್ಯಜ್ಯ ತಂ ಬಾಲಂ ಬ್ರಹ್ಮಾಣಂ ಸಹಸಾಗಮತ್ ।
ಆಪೋಮಯೀ ಮಂತ್ರವಶಾತ್ಸಂಜಾತಾ ಕುಟಿಲಾ ಸತೀ ॥ ೧೮ ॥

ತೇಜಸಾಚಾಪಿ ಶಾರ್ವೇಣ ರೌಕ್ಮಂ ಶರವಣಂ ಮಹತ್ ।
ತನ್ನಿವಾಸರತಾಶ್ಚಾನ್ಯೇ ಪಾದಪಾ ಮೃಗಪಕ್ಷಿಣಃ ॥ ೧೯ ॥

ತತೋ ದಶಸು ಪೂರ್ಣೇಷು ಶರದಾಂ ಹಿ ಶತೇಷ್ವಥ ।
ಬಾಲಾರ್ಕದೀಪ್ತಿಃ ಸಂಜಾತೋ ಬಾಲಃ ಕಮಲಲೋಚನಃ ॥ ೨೦ ॥

೧೫-೧೭. ಆ ಮಾತನ್ನು ಕೇಳಿ ಬ್ರಹ್ಮನು ನೀನು ಉದಯಗಿರಿಗೆ ಹೋಗು. ಅಲ್ಲಿ ನೂರುಯೋಜನ ವಿಸ್ತಾರವುಳ್ಳ ಶರವಣವೆಂಬ ರೌದ್ರವಾದಮಹಾಕ್ಷೇತ್ರವಿದೆ. ಅಲ್ಲಿರುವ ವಿಸ್ತಾರವಾದ ಪರ್ವತದ ತಪ್ಪಲಿನಲ್ಲಿ ಈ ಗರ್ಭವನ್ನು ಬಿಡು. ಇದು ಹತ್ತು ಸಾವಿರವರ್ಷದ ನಂತರ ಅಲ್ಲಿ ಬಾಲನಾಗಿ ಪರಿಣಮಿಸುತ್ತದೆ ಎಂದನು. ಬ್ರಹ್ಮನ ಈ ಮಾತನ್ನು ಕೇಳಿ ಅದ್ರಿಕನ್ಯಕೆಯಾದ ಆ ಕುಟಿಲೆಯು ಚತುರ್ಮುಖನ ಮಾತಿನಂತೆ ಆ ಗರ್ಭವನ್ನು ಬಾಯಿನಿಂದ ಅಲ್ಲಿ ಬಿಟ್ಟಳು.

೧೮-೨೦. ಅಲ್ಲಿ ಗರ್ಭವನ್ನು ಬಿಟ್ಟೊಡನೆಯೇ ಚತುರ್ಮುಖನನ್ನು ಬಂದು ಸೇರಿದಳು. ಅಲ್ಲಿ ಆಪೋಮಯಿ ಮಂತ್ರಪ್ರಭಾವದಿಂದ ಪುನಃ ಪೂರ್ವಾವಸ್ಥೆಗೆ ಬಂದಳು. ಆ ಶರ್ವತೇಜಸ್ಸಿನಿಂದ ಶರವಣಕ್ಷೇತ್ರವೆಲ್ಲವೂ ಅಲ್ಲಿ ವಾಸಮಾಡುತ್ತಿದ್ದ ಪಕ್ಷಿಗಳೂ ಅಲ್ಲಿದ್ದ ಮರಗಳೂ ಸಹ ಚಿನ್ನದಂತೆ ತೇಜಸ್ಸಿನಿಂದ ಹೊಳೆದವು. ಅನಂತರ ಹತ್ತುಸಾವಿರವರ್ಷಗಳು ಪೂರ್ಣವಾಗಲು ಬಾಲಸೂರ್ಯನಂತೆ ಜ್ವಲಿಸುವ ಕಮಲ ಲೋಚನನಾದ ಬಾಲನು ಅಲ್ಲಿ ಉದ್ಭವಿಸಿದನು. ಆ ಶರವಣಕ್ಷೇತ್ರದಲ್ಲಿ ಮೇಲ್ಮುಖ

ಉತ್ತಾನಶಾಯಿಾ ಭಗವಾನ್ ದಿವ್ಯೆ ಶರವಣೇ ಸ್ಥಿತಃ ।
ಮುಖೇಂಗುಷ್ಠಂ ಸಮಾಕ್ಷಿಪ್ಯ ರುರೋದ ಘನರಾಡಿವ ॥ ೨೦ ॥

ಏತಸ್ಮಿನ್ನಂತರೆ ದಿವ್ಯಾಃ ಕೃತ್ತಿಕಾಃ ಷಟ್ ಸುತೇಜಸಃ ।
ದದೃಶುಃ ಸ್ವೇಚ್ಛಯಾ ಯಾಂತ್ಯೋ ಬಾಲಂ ಶರವಣೇ ಸ್ಥಿತಂ ॥ ೨೨ ॥

ಕೃಪಾಯುಕ್ತಾಃ ಸಮಾಜಗ್ಮುಃ ಯತ್ರ ಸ್ಕಂದಃ ಸ್ಥಿತೋಭವತ್ ।
ಅಹಂಪೂರ್ವಮಹಂಪೂರ್ವಂ ತಸ್ಮೈ ಸ್ತನ್ಯಂ ವಿಚುಕ್ರುಶುಃ ॥ ೨೩ ॥

ವಿವದಂತೀಃ ಸ ತಾ ದೃಷ್ಟ್ವಾ ಷಣ್ಮುಖಃ ಸಮಜಾಯತ ।
ಅಬೀಭರಂಶ್ಚ ತಾಃ ಸರ್ವಾಃ ಶಿಶುಸ್ನೇಹಾಚ್ಚ ಕೃತ್ತಿಕಾಃ ॥ ೨೪ ॥

ಭ್ರಿಯಮಾಣಃ ಸತಾಭಿಸ್ತು ಬಾಲೋ ವೃದ್ಧಿಮುಗಾನ್ಮುನೆ ।
ಕಾರ್ತಿಕೇಯ ಇತಿ ಖ್ಯಾತೋ ಜಾತಃ ಸ ಬಲಿನಾಂ ವರಃ ॥ ೨೫ ॥

ಏತಸ್ಮಿನ್ನಂತರೆ ಬ್ರಹ್ಮನ್ ಪಾವಕಂ ಪ್ರಾಹ ಪದ್ಮಭೂಃ ।
ಕಿಯತ್ಪ್ರಮಾಣಃ ಪುತ್ರಸ್ತೇ ವರ್ತತೆ ಸಾಂಪ್ರತಂ ಗುಹಃ ॥ ೨೬ ॥

ನಾಗಿ ಮಲಗಿರುವ ಮಹಾಮಹಿಮಶಾಲಿಯಾದ ಆ ಬಾಲಕನು ಬಾಯಿನಲ್ಲಿ ಕಾಲಿನ ಅಂಗುಷ್ಠವನ್ನಿಟ್ಟುಕೊಂಡು ಮೇಘಧ್ವನಿಗೆ ಸಮಾನವಾದ ಧ್ವನಿಯಿಂದ ಅಳಲು ಆರಂಭಿಸಿದನು.

೨೨-೨೪. ಆ ಸಮಯದಲ್ಲಿ ಸ್ವೇಚ್ಛೆಯಿಂದ ಅಲ್ಲಿ ಸಂಚರಿಸುತ್ತಿದ್ದ ತೇಜಸ್ವಿನಿಗಳಾದ ಕೃತ್ತಿಕಾದೇವತೆಗಳು ಅಳುತ್ತಿದ್ದ ಆ ಸ್ಕಂದನನ್ನು ನೋಡಿದರು. ದಯೆಯಿಂದ ಅವನ ಸಮಿಾಪಕ್ಕೆ ಬಂದು ನಾನು ಮುಂದೆ ತಾನು ಮುಂದೆ ಎಂದು ಸ್ತನ್ಯಕೊಡಲು ಹೋರಾಡಿದರು. ಅವರ ಆ ವಿವಾದವನ್ನು ಕೇಳಿ ಸ್ಕಂದನೂ ಷಣ್ಮುಖನಾಗಿ ಕ್ಷೀರ ಪಾನಮಾಡಿದನು. ಆ ಕೃತ್ತಿಕಾದೇವತೆಗಳು ಶಿಶುಸ್ನೇಹದಿಂದ ಯಥೇಷ್ಟವಾಗಿ ಸ್ತನ್ಯವನ್ನು ಕೊಟ್ಟು ಸ್ಕಂದನನ್ನು ತೃಪ್ತಿಗೊಳಿಸಿದರು.

೨೫-೨೮. ಎಲೈ ಮುನಿಯೇ, ಆ ಕೃತ್ತಿಕಾದೇವತೆಗಳಿಂದ ತೃಪ್ತಿಪಡಿಸಲ್ಪಟ್ಟ ಆ ಬಾಲನು ವೃದ್ಧಿಹೊಂದಿ ಕಾರ್ತಿಕೇಯನೆಂದು ಪ್ರಸಿದ್ಧಿ ಹೊಂದಿ ಬಲಾಢ್ಯರಲ್ಲೆಲ್ಲಾ ಅಗ್ರೇಸರನಾದನು. ಈ ಮಧ್ಯದಲ್ಲಿ ಚತುರ್ಮುಖನು ಅಗ್ನಿಯನ್ನು ಕುರಿತು ನಿನ್ನ ಪುತ್ರನಾದ ಗುಹನು ಈಗ ಎಷ್ಟು ಪ್ರಮಾಣದಲ್ಲಿದ್ದಾನೆ ಎಂದು ಪ್ರಶ್ನಿಸಿದನು. ಆ

ಸ ತದ್ವಚನಮಾಕರ್ಣ್ಯ ಜಾನನ್ನಪಿ ಹಿ ಚಾತ್ಮಜಂ ।
ಪ್ರೋವಾಚ ವಹ್ನಿರ್ದೇವೇಶಂ ನವೇದ್ಮಿ ಕತಮೋ ಗುಹಃ ॥ ೨೭ ॥

ತಂ ಪ್ರಾಹ ಭಗವಾನ್ ಪ್ರೀತಃ ತೇಜಃ ಪೀತಂ ಪುರಾ ತ್ವಯಾ ।
ತ್ರೈಯಂಬಕಂ ತ್ರಿಲೋಕೇಶೋ ಜಾತಃ ಶರವಣೇ ಶಿಶುಃ ॥ ೨೮ ॥

ಶ್ರುತ್ವಾ ಪಿತಾಮಹವಚಃ ಪಾವಕಸ್ತ್ವರಿತೋಽಭ್ಯಗಾತ್ ।
ವೇಗಿನಂ ಮೇಷಮಾರುಹ್ಯ ಕುಟಿಲಾ ತಂ ದದರ್ಶ ಹ ॥ ೨೯ ॥

ತತಃ ಪಪ್ರಚ್ಛ ಕುಟಿಲಾ ಶೀಘ್ರಂ ಕ್ವ ವ್ರಜಸೆ ಕವೇ ।
ಸೋಽಬ್ರವೀತ್ಪುತ್ರದೃಷ್ಟ್ಯರ್ಥಂ ಜಾತಃ ಶರವಣೇ ಶಿಶುಃ ॥ ೩೦ ॥

ಸಾಬ್ರವೀತ್ತನಯೋ ಮಹ್ಯಂ ಮಮೇತ್ಯಾಹ ಚ ಪಾವಕಃ ।
ವಿವದಂತೌ ದದರ್ಶಾಥ ಸ್ವೇಚ್ಛಾಚಾರೀ ಜನಾರ್ದನಃ ॥ ೩೧ ॥

ಮಾತನ್ನು ಕೇಳಿ ಅಗ್ನಿಯು ತನ್ನ ಮಗನೆಂದು ತಿಳಿದಿದ್ದರೂ ತಿಳಿಯದವನಂತೆ ಗುಹನು ಯಾವನೋ ನನಗೆ ಗೊತ್ತಿಲ್ಲವೆಂದು ಬ್ರಹ್ಮನಿಗೆ ಉತ್ತರಹೇಳಲು ಬ್ರಹ್ಮನು ಅವನನ್ನು ಕುರಿತು ಸಂತೋಷದಿಂದ ಮೊದಲು ನೀನು ಪಾನಮಾಡಿದ ತ್ರ್ಯಂಬಕನ ತೇಜಸ್ಸೇ ಶರವಣಕ್ಷೇತ್ರದಲ್ಲಿ ಲೋಕನಾಥನಾದ ಶಿಶುವಾಗಿ ಉದಯಿಸಿದೆ ಎಂದನು.

೨೯-೩೧. ಚತುರ್ಮುಖನ ಮಾತನ್ನು ಕೇಳಿದೊಡನೆಯೇ ಅಗ್ನಿಯು ತ್ವರೆಯಿಂದ ಗುಹನ ಸಮೀಪಕ್ಕೆ ಓಡತೊಡಗಿದನು. ಅವನು ವೇಗಶಾಲಿಯಾದ ಮೇಷವನ್ನೇರಿ ಹೋಗುತ್ತಿರುವದನ್ನು ಕುಟಿಲೆಯು ನೋಡಿದಳು. ಆಗ ಅವಳು ಅಗ್ನಿಯನ್ನು ಕುರಿತು ಕವಿಯೇ ಇದೆಲ್ಲಿಗೆ ನೀನು ವೇಗದಿಂದ ಹೋಗುತ್ತಿದ್ದೀಯೆ ಎಂದು ಕೇಳಿದಳು. ಆಗ ಅಗ್ನಿಯು ಶರವಣದಲ್ಲಿ ಹುಟ್ಟಿರುವ ಪುತ್ರನನ್ನು ನೋಡಲು ಹೋಗುತ್ತಿದ್ದೇನೆ ಎಂದನು. ಆಗ ಕುಟಿಲೆಯು ಅವನು ನನ್ನ ಮಗನೆಂದಳು. ಅಗ್ನಿಯೂ ನನ್ನ ಮಗನೆಂದು ವಿವಾದಿಸಿದನು. ಹೀಗೆ ವಿವಾದಮಾಡುತ್ತಿರುವ ಇವರನ್ನು ಸ್ವೇಚ್ಛೆಯಿಂದ ಅಲ್ಲಿ ಸಂಚಾರಕ್ಕಾಗಿ ಬಂದಿದ್ದ ಜನಾರ್ದನನು ನೋಡಿದನು. ಆಗ ಅವನು ಇವರನ್ನು ನೋಡಿ ಏತಕ್ಕೆ ಹೀಗೆ ವಿವಾದಮಾಡುತ್ತಿದ್ದೀರಿ ಎಂದು ಕೇಳಿದನು.

ತೌ ಪಪ್ರಚ್ಛ ಕಿಮರ್ಥಂ ವಾ ವಿವಾದಮಿಹ ಚಕ್ರತುಃ ।
ತಾವೂಚತುಃ ಪುತ್ರಹೇತೋಃ ರುದ್ರಶುಕ್ರೋದ್ಭವೋ ಯದಿ ॥ ೩೨ ॥

ತಾವುವಾಚ ಹರಿರ್ದೇವೋ ಗಚ್ಛತಂ ತ್ರಿಪುರಾಂತಕಂ ।
ಸಯದ್ವಕ್ಷ್ಯತಿ ದೇವೇಶಃ ತತ್ಕುರುಧ್ವಮಸಂಶಯಂ ॥ ೩೩ ॥

ಇತ್ಯುಕ್ತೌ ವಾಸುದೇವೇನ ಕುಟಿಲಾಗ್ನೀ ಹರಾಂತಿಕೇ ।
ಸಮಭ್ಯೇತ್ಯೋಚತುಃ ತಥ್ಯಂ ಕಸ್ಯ ಪುತ್ರೇತಿ ನಾರದ ॥ ೩೪ ॥

ರುದ್ರಃ ತದ್ವಾಕ್ಯಮಾಕರ್ಣ್ಯ ಹರ್ಷನಿರ್ಭರಮಾನಸಃ ।
ದಿಷ್ಟ್ಯಾದಿಷ್ಟ್ಯೇತಿ ಗಿರಿಜಾಂ ಪ್ರೋದ್ಭೂತಪುಲಕೋಽಬ್ರವೀತ್ ॥ ೩೫ ॥

ತತೋಽಂಬಿಕಾ ಪ್ರಾಹ ಹರಂ ದೇವ ಗಚ್ಛಾವ ತಂ ಶಿಶುಂ ।
ಪ್ರಷ್ಟುಂ ಸಮಾಶ್ರಯೇದ್ಯಂ ಸ ತಸ್ಯ ಪುತ್ರೋ ಭವಿಷ್ಯತಿ ॥ ೩೬ ॥

ಬಾಢಮಿತ್ಯೇವ ಭಗವಾನ್ ಸಮುತ್ತಸ್ಥೌ ವೃಷಧ್ವಜಃ ।
ಸಹೋಮಯಾ ಕುಟಿಲಯಾ ಪಾವಕೇನ ಚ ಧೀಮತಾ ॥ ೩೭ ॥

೩೨-೩೫. ಆಗ ಅವರು ತಮ್ಮ ಪುತ್ರನಿಗಾಗಿ ವಿವಾದವೆಂದು ಉತ್ತರವಿತ್ತರು. ಆಗ ವಾಸುದೇವನು ಈ ಪುತ್ರನು ರುದ್ರನ ಶುಕ್ರದಿಂದ ಹುಟ್ಟಿದವನಾದುದರಿಂದ ಅವನಲ್ಲೇ ಹೋಗಿ ನೀವು ಈ ವಿವಾದವನ್ನು ಪರಿಹರಿಸಿಕೊಳ್ಳಬೇಕೆಂದೂ ಅವನು ಈ ವಿಷಯದಲ್ಲಿ ಏನು ಹೇಳುತ್ತಾನೆಯೋ ಅದರಂತೆ ನೀವು ನಡೆದುಕೊಳ್ಳಬೇಕೆಂದೂ ತೀರ್ಮಾನಿಸಿದನು. ಹೀಗೆ ಹೇಳಲ್ಪಟ್ಟ ಕುಟಿಲಾ ಮತ್ತು ಅಗ್ನಿ ಇಬ್ಬರೂ ಹರನ ಸಮೀಪಕ್ಕೆ ಹೋಗಿ ಅಲ್ಲಿ ತಮ್ಮ ತಮ್ಮ ಬಾಧ್ಯತೆಗೆ ತಕ್ಕಂತೆ ಸತ್ಯಾಂಶವನ್ನು ಹೇಳಿ ಯಾರ ಪುತ್ರನೆಂದು ವಾದಿಸಿದರು. ಹರನು ಈ ವೃತ್ತಾಂತವನ್ನು ಕೇಳಿ ಹರ್ಷದಿಂದ ಪೂರ್ಣನಾಗಿ ಶಹಬಾಸ್ ಶಹಬಾಸ್ ಎಂದು ಪಾರ್ವತಿಯನ್ನು ಪ್ರಶಂಸಿಸಿ ತಾನೂ ಸಂತೋಷದಿಂದ ರೋಮಾಂಚಿತನಾದನು. ಪಾರ್ವತಿಯನ್ನು ಕುರಿತು ಈ ವಿವಾದವನ್ನೂ ಹೇಳಿದನು.

೩೬-೩೯. ಆಗ ಪಾರ್ವತಿಯು ಹರನನ್ನು ಕುರಿತು ಪ್ರಭುವೇ, ನಾವೆಲ್ಲರೂ ಆ ಬಾಲಕನನ್ನೇ ಕೇಳಲು ಹೋಗೋಣ. ಆ ಶಿಶುವು ಯಾರ ಹತ್ತಿರಕ್ಕೆ ಪ್ರೀತಿಯಿಂದ ಬರುತ್ತದೆಯೋ ಅದು ಅವರ ಮಗು ಎಂದಳು. ಹಾಗೆಯೇ ಆಗಲೆಂದು

ಸಂಪ್ರಾಪ್ತಾ ಸ್ತೇ ಶರವಣಂ ಹರೋಽಮಾಕುಟಿಲಾಗ್ನಯಃ ।
ದದೃಶುಃ ಶಿಶುಕಂ ತಂ ಚ ಕೃತ್ತಿಕೋತ್ಸಂಗಶಾಯಿನಂ ॥ ೩೮ ॥

ತತಸ್ಸಬಾಲಕಸ್ತೇಷಾಂ ಮತ್ವಾಚಿಂತಿತಮಾದರಾತ್ ।
ಯೋಗಾಚ್ಚತುರ್ಮೂರ್ತಿರಭೂಚ್ಛಿಶುತ್ವೇಪಿ ಚ ಷಣ್ಮುಖಃ ॥ ೩೯ ॥

ಕುಮಾರಃ ಶಂಕರಮಗಾದ್ವಿಶಾಖೋ ಗಿರಿಜಾಮಗಾತ್ ।
ಕುಟಿಲಾಮಭ್ಯಗಾಚ್ಛಾಖೋ ನೈಗಮೇಯೋಽಗ್ನಿಮಭ್ಯಗಾತ್ ॥ ೪೦ ॥

ತತಃ ಪ್ರೀತಿಯುತೋ ರುದ್ರಃ ಉಮಾ ಚ ಕುಟಿಲಾ ತಥಾ ।
ಪಾವಕಶ್ಚಾಪಿ ದೇವೇಶಃ ಪರಾಂ ಮುದಮವಾಪ ಹ ॥ ೪೧ ॥

ತತೋಽಬ್ರುವನ್ ಕೃತ್ತಿಕಾಸ್ತಾಃ ಷಣ್ಮುಖಃ ಕಿಂ ಹರಾತ್ಮಜಃ ।
ತತೋಽಬ್ರವೀದ್ಧರಃ ಪ್ರೀತ್ಯಾ ವಿಶೇಷವಚನಂ ಮುನೇ ॥ ೪೨ ॥

ನಾಮ್ನಾತು ಕಾರ್ತಿಕೇಯೇತಿ ಯುಷ್ಮಾಕಂ ಚ ಭವತ್ವಸೌ ।
ಕುಟಿಲಾಯಾಃ ಕುಮಾರೇತಿ ಪುತ್ರೋಽಯಂ ಭವಿತಾವ್ಯಯಃ ॥ ೪೩ ॥

ಅಂಗೀಕರಿಸಿ ಶಂಕರನೂ, ಪಾರ್ವತಿ, ಕುಟಿಲಾ, ಅಗ್ನಿ ಇವರೂ ಸಹ ಅಲ್ಲಿಗೆ ಹೊರಟರು. ಅಲ್ಲಿ ಕೃತ್ತಿಕಾದೇವಿಗಳ ತೊಡೆಯಮೇಲೆ ಮಲಗಿದ್ದ ಶಿಶುವನ್ನು ನೋಡಿದರು. ಆಗ ಆ ಶಿಶುವು ಅಭೀಷ್ಟವನ್ನು ತಿಳಿದು ಇವರನ್ನು ಆದರಿಸಲು ಷಣ್ಮುಖನಾಗಿ ಶಿಶುವಾಗಿದ್ದರೂ ತನ್ನ ಯೋಗಮಹಿಮೆಯಿಂದ ನಾಲ್ಕು ಮೂರ್ತಿಯಾಗಿ ಪರಿಣಮಿಸಿತು.

೪೦-೪೪. ಆ ಮೂರ್ತಿಗಳಲ್ಲಿ ಕುಮಾರನೆಂಬ ಮೂರ್ತಿಯು ಶಂಕರನ ಸಮೀಪವನ್ನು ಸೇರಿತು. ವಿಶಾಖವೆಂಬ ಮೂರ್ತಿಯು ಗಿರಿಜೆಯನ್ನು ಆಶ್ರಯಿಸಿತು. ಶಾಖವೆಂಬ ಮೂರ್ತಿಯು ಕುಟಿಲೆಯ ಸಮೀಪವನ್ನು ಹೊಂದಿತು. ನೈಗಮೇಯ ಎಂಬ ಮೂರ್ತಿಯು ಅಗ್ನಿಯ ಸಮೀಪವನ್ನು ಆಶ್ರಯಿಸಿತು. ಅನಂತರ ರುದ್ರ, ಪಾರ್ವತಿ, ಕುಟಿಲಾ, ಅಗ್ನಿ ಇವರೆಲ್ಲರೂ ಅವನಲ್ಲಿ ಪುತ್ರವಾತ್ಸಲ್ಯದಿಂದ ಬಹಳ ಸಂತೋಷಪಟ್ಟರು ಅನಂತರ ಕೃತ್ತಿಕಾದೇವತೆಗಳು ಈ ಷಣ್ಮುಖನು ಹರನ ಮಗನೇ ಏನು ಎಂದು ಪ್ರಶ್ನಿಸಲಾಗಿ ಹರನು ಪ್ರೀತಿಯಿಂದ ಅವರವರ ಪುತ್ರನ ವಿಶೇಷನಾಮಗಳನ್ನು ಈರೀತಿ ನಿರ್ಧರಿಸಿ ಹೇಳಿದನು. ಕಾರ್ತಿಕೇಯನೆಂಬ ಹೆಸರಿನಿಂದ ಇವನು

ಸ್ಕಂದ ಇತ್ಯೇವ ವಿಖ್ಯಾತೋ ಗೌರೀಪುತ್ರೋ ಭವತ್ವಸೌ ।
ಗುಹ ಇತ್ಯೇವ ನಾಮ್ನಾ ಚ ಮಮಾಸೌ ತನಯಃ ಸ್ಮೃತಃ ॥ ೪೪ ॥

ಮಹಾಸೇನ ಇತಿ ಖ್ಯಾತೋ ಹುತಾಶಸ್ಯಾಸ್ತು ಪುತ್ರಕಃ ।
ಸಾರಸ್ವತಇತಿ ಖ್ಯಾತಃ ಪುತ್ರಃ ಶರವಣಸ್ಯ ಚ ॥ ೪೫ ॥

ಏವಮೇಷ ಮಹಾಯೋಗೀ ಪೃಥಿವ್ಯಾಂ ಖ್ಯಾತಿಮೇಷ್ಯತಿ ।
ಷಡಂಶತ್ವಾನ್ಮಹಾಬಾಹುಃ ಷಣ್ಮುಖೋ ನಾಮ ಗೀಯತೇ ॥ ೪೬ ॥

ಇತ್ಯೇವಮುಕ್ತ್ವಾ ಭಗವಾನ್ ಶೂಲಪಾಣಿಃ ಪಿತಾಮಹಂ ।
ಸಸ್ಮಾರ ದೈವತೈಸ್ಸಾರ್ಧಂ ತೇಪ್ಯಾಜಗ್ಮುಃ ತ್ವರಾನ್ವಿತಾಃ ॥ ೪೭ ॥

ಪ್ರಣಿಪತ್ಯ ಚ ಕಾಮಾರಿಮುಮಾಂ ಚ ಗಿರಿನಂದಿನೀಂ ।
ದೃಷ್ಟ್ವಾ ಹುತಾಶನಂ ಪ್ರೀತ್ಯಾ ಕುಟಿಲಾಂ ಕೃತ್ತಿಕಾಸ್ತಥಾ ॥ ೪೮ ॥

ದದೃಶುರ್ಬಾಲಮತ್ಯುಗ್ರಂ ಷಣ್ಮುಖಂ ಸೂರ್ಯಸನ್ನಿಭಂ ।
ಮುಷ್ಣಂತಮಿವ ಚಕ್ಷೂಂಷಿ ತೇಜಸಾ ಸ್ವೇನ ದೇವತಾಃ ॥ ೪೯ ॥

ನಿಮ್ಮ (ಕೃತ್ತಿಕಾದೇವತೆಗಳ) ಪುತ್ರನಾಗಿರುತ್ತಾನೆ. ಕುಮಾರನೆಂಬ ಹೆಸರಿನಿಂದ ಕುಟಿಲೆಯ ಪುತ್ರನಾಗಿರುವನು. ಸ್ಕಂದನೆಂಬ ಹೆಸರಿನಿಂದ ಗೌರಿಗೆ ಪುತ್ರನಾಗಿರುವನು. ಗುಹನೆಂಬ ಹೆಸರಿನಿಂದ ನನಗೆ ಪುತ್ರನಾಗಿರುವನು.

೪೫-೪೮. ಮಹಾಸೇನನೆಂಬ ಹೆಸರಿನಿಂದ ಅಗ್ನಿಗೆ ಪುತ್ರನಾಗಿರುವನು. ಈ ರೀತಿ ಮಹಾಯೋಗಿಯಾದ ಈ ಬಾಲಕನು ಆರು ನಾಮಗಳಿಂದ ಕೂಡಿದವನಾಗಿ ಷಡಂಶನಾದುದರಿಂದ ಷಣ್ಮುಖನೆಂದು ಪೃಥಿವಿಯಲ್ಲಿ ಪ್ರಖ್ಯಾತನಾಗುತ್ತಾನೆ. ಹೀಗೆಂದು ಹೇಳಿ ಶಂಕರನು ಚತುರ್ಮುಖನನ್ನೂ ದೇವತೆಗಳನ್ನೂ ಸ್ಮರಿಸಲಾಗಿ ಅವರೂ ತ್ವರಿತರಾಗಿ ಬಂದು ಶಂಕರನನ್ನೂ ಪಾರ್ವತಿಯನ್ನೂ ನಮಸ್ಕರಿಸಿ ಅಲ್ಲಿದ್ದ ಅಗ್ನಿಯನ್ನೂ ಕುಟಿಲೆಯನ್ನೂ ಕೃತ್ತಿಕಾದೇವತೆಗಳನ್ನೂ ಪ್ರೀತಿಯಿಂದ ಸತ್ಕರಿಸಿದರು.

೪೯-೫೨. ಸೂರ್ಯನಂತೆ ತೇಜಸ್ವಿಯಾಗಿ ಜ್ವಲಿಸುತ್ತಿರುವ ಆ ಬಾಲಕನನ್ನು ನೋಡಿದರು. ಆ ಬಾಲನು ತನ್ನ ತೇಜಸ್ಸಿನಿಂದ ನೋಡುವವರ ಕಣ್ಣುಗಳನ್ನು

ಕೌತುಕಾಭಿವೃತಾಸ್ಸರ್ವೇ ಏವಮೂಚುಸ್ಸುರೋತ್ತಮಾಃ ।
ದೇವಕಾರ್ಯಂ ತ್ವಯಾ ದೇವ ಕೃತಂ ದಿವ್ಯಾಗ್ನಿನಾ ತದಾ ॥ ೫೦ ॥

ತದುತ್ತಿಷ್ಠ ವ್ರಜಾಮೋದ್ಯ ತೀರ್ಥಮೋಜಸಮವ್ಯಯಂ ।
ಕುರುಕ್ಷೇತ್ರಂ ಸರಸ್ವತ್ಯಾ ಮಭಿಷಿಂಚಾಮಷಣ್ಮುಖಂ ॥ ೫೧ ॥

ಸೇನಾಯಾಃ ಪತಿರಸ್ತ್ವೇಷ ದೇವಗಂಧರ್ವಕಿನ್ನರಾಃ ।
ಮಹಿಷಂ ಘಾತಯತ್ವೇಷ ತಾರಕಂ ಚ ಸುದಾರುಣಂ ॥ ೫೨ ॥

ಬಾಢಮಿತ್ಯಬ್ರವೀಚ್ಛರ್ವಃ ಸಮುತ್ತಸ್ಥುಃ ಸುರಾಸ್ತತಃ ।
ಕುಮಾರಸಹಿತಾ ಜಗ್ಮುಃ ಕುರುಕ್ಷೇತ್ರಂ ಮಹಾಫಲಂ ॥ ೫೩ ॥

ತತ್ರೈವದೇವತಾಃ ಸ್ಸೇಂದ್ರಾಃ ರುದ್ರಬ್ರಹ್ಮಜನಾರ್ದನಾಃ ।
ಯತ್ನಮಸ್ಯಾಭಿಷೇಕಾರ್ಥಂ ಚಕ್ರುರ್ಮುನಿಗಣೈಸ್ಸಹ ॥ ೫೪ ॥

ತತೋಂಬುನಾ ಸಪ್ತಸಮುದ್ರವಾಹಿನಾ
ನದೀಜಲೇನಾಪಿ ಮಹಾಫಲೇನ ।
ವನೌಷಧಿಷ್ವೇವ ಸಹಸ್ರಮೂರ್ತಿಭಿಃ
ತಮಭ್ಯಷಿಂಚಂತ ಹರಾಚ್ಯುತಾದ್ಯಾಃ ॥ ೫೫ ॥

ಸೆಳೆಯುವಷ್ಟು ತೇಜಸ್ವಿಯಾಗಿದ್ದನು ಆಗ ಆಶ್ಚರ್ಯದಿಂದಲೂ ಕುತೂಹಲದಿಂದಲೂ ಆಕ್ರಾನ್ತರಾದ ದೇವತೆಗಳು, ದಿವ್ಯಾಗ್ನಿರೂಪನಾಗಿರುವ ನಿನ್ನಿಂದ ದೇವಕಾರ್ಯವು ಸಾಂಗವಾಗಿ ನಡೆಸಲ್ಪಟ್ಟಿತು. ಏಳು ಕುರುಕ್ಷೇತ್ರಕ್ಕೆ ಹೋಗಿ ಓಜಸ ತೀರ್ಥದಲ್ಲಿ ಈ ಷಣ್ಮುಖನನ್ನು ಸರಸ್ವತೀ ನದಿಯಲ್ಲಿ ಅಭಿಷೇಕಮಾಡೋಣ, ಇವನೇ ದೇವತಾ ಸೈನ್ಯಕ್ಕೆ ಸೇನಾಪತಿಯಾಗಿರಲಿ. ಇವನೇ ಮಹಿಷಾಸುರನನ್ನೂ ಕ್ರೂರನಾದ ತಾರಕಾ ಸುರನನ್ನೂ ನಾಶಮಾಡಲಿ.

೫೩-೫೫. ಹಾಗೇ ಆಗಬಹುದೆಂದು ಶಂಕರನು ಹೇಳಲು ದೇವತೆಗಳೆಲ್ಲರೂ ಕುಮಾರಸ್ವಾಮಿಯೊಡನೆ ಮಹಾಫಲಪ್ರದವಾದ ಆ ಕುರುಕ್ಷೇತ್ರಕ್ಕೆ ಬಂದು ಸೇರಿದರು. ಅಲ್ಲಿ ಇಂದ್ರ, ರುದ್ರ, ಬ್ರಹ್ಮ, ಜನಾರ್ದನ ಇವರನ್ನು ಪುರಸ್ಕರಿಸಿಕೊಂಡು ದೇವತೆಗಳೆಲ್ಲರೂ ಮಹರ್ಷಿಗಳೊಡನೆ ಅಭಿಷೇಕಕ್ಕೆ ತಕ್ಕ ಪ್ರಯತ್ನವನ್ನೆಲ್ಲಾ ಮಾಡಿದರು. ಅನಂತರ ಏಳು ಸಮುದ್ರಗಳಿಂದ ತರಲ್ಪಟ್ಟ ತೀರ್ಥದಿಂದಲೂ ಫಲಪ್ರದವಾದ ಮಹಾನದೀ ತೀರ್ಥಗಳಿಂದಲೂ ಸಾವಿರಾರು ವನೌಷಧಿಗಳಿಂದಲೂ ಹರ ವಿಷ್ಣು ಮುಂತಾದ ದೇವತೆಗಳು ಆ ಷಣ್ಮುಖನಿಗೆ ಅಭಿಷೇಕಮಾಡಿದರು.

ಅಭಿಷಿಕ್ತೇತು ಸೇನಾನ್ಯಾಂ ಕುಮಾರೇ ದಿವ್ಯರೂಪಿಣಿ ।
ಜಗುರ್ಗಂಧರ್ವಋಷಯೋ ನನೃತುಶ್ಚಾಪ್ಸರೋಗಣಾಃ ॥ ೫೬ ॥

ಅಭಿಷಿಕ್ತಂ ಕುಮಾರಂ ಹಿ ಗಿರಿಪುತ್ರೀ ನಿರೀಕ್ಷ್ಯ ಹಿ ।
ಸ್ನೇಹಾದುತ್ಸಂಗಗಂ ಸ್ಕಂದಂ ಮೂರ್ಧ್ನ್ಯಜಿಘ್ರನ್ಮುಹುರ್ಮುಹುಃ ॥ ೫೭ ॥

ಜಿಘ್ರತೀ ಕಾರ್ತಿಕೇಯಸ್ಯ ಅಭಿಷೇಕಾರ್ದ್ರಮಾನನಂ ।
ಭಾತ್ಯದ್ರಿಜಾ ಯಥೇಂದ್ರಸ್ಯ ದೇವಮಾತ್ಯಾದಿತಿಃ ಪುರಾ ॥ ೫೮ ॥

ತದಾಭಿಷಿಕ್ತಂ ತನಯಂ ದೃಷ್ಟ್ವಾ ಶರ್ವೋ ಮುದಂ ಯಯೌ ।
ಪಾವಕಃ ಕೃತ್ತಿಕಾಶ್ಚೈವ ಕುಟಿಲಾ ಚ ಯಶಸ್ವಿನೀ ॥ ೫೯ ॥

ತತೋಭಿಷಿಕ್ತಸ್ಯ ಹರಃ ಸೇನಾಪತ್ಯೇ ಗುಹಸ್ಯ ಚ ।
ಪ್ರಮಥಾಂಶ್ಚತುರಃ ಪ್ರಾದಾಚ್ಛಕ್ರತುಲ್ಯಪರಾಕ್ರಮಾನ್ ॥ ೬೦ ॥

ಘಂಟಾಕರ್ಣಂ ಲೋಹಿತಾಕ್ಷಂ ನಂದಿಷೇಣಂ ಚ ದಾರುಣಂ ।
ಚತುರ್ಥಂ ಬಲಿನಾಂ ಮುಖ್ಯಂ ಖ್ಯಾತಂ ಕುಮುದಮಾಲಿನಂ ॥ ೬೧ ॥

೫೬-೫೯. ಕುಮಾರಸ್ವಾಮಿಯನ್ನು ಸೇನಾಪತಿಯನ್ನಾಗಿ ಅಭಿಷೇಕಮಾಡಿದೊಡನೆಯೇ ಗಂಧರ್ವರೂ ಋಷಿಗಳೂ ಹರ್ಷದಿಂದ ಗಾನಮಾಡಿದರು. ಅಪ್ಸರೆಯರೆಲ್ಲರೂ ನರ್ತನಮಾಡಿದರು. ಅಭಿಷೇಕಹೊಂದಿದ ಕುಮಾರಸ್ವಾಮಿಯನ್ನು ಪಾರ್ವತಿಯು ಪ್ರೀತಿಯಿಂದ ನಿರೀಕ್ಷಿಸಿ ವಾತ್ಸಲ್ಯದಿಂದ ತೊಡೆಯ ಮೇಲೆ ಕೂರಿಸಿಕೊಂಡು ಬಾರಿಬಾರಿಗೂ ಅವನ ತಲೆಯನ್ನು ಆಘ್ರಾಣಮಾಡಿದಳು. ಅಭಿಷೇಕದಿಂದ ನೆನೆದಿರುವ ಕಾರ್ತಿಕೇಯನ ಮುಖವನ್ನು ಆಘ್ರಾಣಮಾಡುತ್ತಿರುವ ಪಾರ್ವತಿಯು ಪೂರ್ವದಲ್ಲಿ ತ್ರಿಲೋಕಾಧಿಪತಿಯಾದ ಇಂದ್ರನನ್ನು ಆಘ್ರಾಣಮಾಡಿದ ಅದಿತಿದೇವಿಯಂತೆ ತೋರಿದಳು. ಅಭಿಷಿಕ್ತನಾದ ಪುತ್ರನನ್ನು ನೋಡಿ ಶಂಕರನೂ ಸಂತೋಷಗೊಂಡನು. ಅಗ್ನಿ, ಕೃತ್ತಿಕಾ, ಕುಟಿಲಾ ಇವರೂ ಸಂತುಷ್ಟರಾದರು.

೬೦-೬೫. ಅನಂತರ ಸೇನಾಪತಿಯಾಗಿ ಅಭಿಷಿಕ್ತನಾದ ಗುಹನಿಗೆ ಶಂಕರನು ಸಮರ್ಥರಾಗಿಯೂ ಪರಾಕ್ರಮಶಾಲಿಗಳಾಗಿಯೂ ಇರುವ ಘಂಟಾಕರ್ಣ, ಲೋಹಿತಾಕ್ಷ, ನಂದಿಷೇಣ, ಕುಮುದಮಾಲಿ ಎಂಬ ನಾಲ್ಕು ಜನ ಪ್ರಮಥಗಣದ ವೀರರನ್ನು

ಹರದತ್ತಾನ್ ಗಣಾನ್ ದೃಷ್ಟ್ವಾ ದೇವಾಃ ಸ್ಕಂದಸ್ಯ ನಾರದ ।
ದದುಃ ಪ್ರಮಥಾನ್ ಸ್ವಾಂಶ್ಚ ಸರ್ವೇ ಬ್ರಹ್ಮಪುರೋಗಮಾಃ ॥ ೬೨ ॥

ಸ್ಥಾಣುಂ ಬ್ರಹ್ಮಾ ಗಣಂ ಪ್ರಾದಾದ್ವಿಷ್ಣುಃ ಪ್ರಾದಾದ್ಗಣತ್ರಯಂ ।
ಸಂಕ್ರಮಂ ವಿಕ್ರಮಂ ಚೈವ ತೃತೀಯಂ ಚ ಪರಾಕ್ರಮಂ ॥ ೬೩ ॥

ಉತ್ಕ್ರೋಶಪಂಕಜೌ ಶಕ್ರೋ ರವಿರ್ದಂಡಕಪಿಂಜಲೌ ।
ಚಂದ್ರೋ ಮಣಿಂ ವಸುಮಣಿಮಶ್ವಿನೌ ವತ್ಸನಂದಿನೌ ॥ ೬೪ ॥

ಜ್ಯೋತಿರ್ಹುತಾಶನಃ ಪ್ರಾದಾಜ್ಜ್ವಲಜ್ಜಿಹ್ವಂ ತಥಾ ಪುರಂ ।
ಕುಂದಂ ಮುಕುಂದಂ ಕುಸುಮಂ ತ್ರೀನ್ ಧಾತಾನುಚರಾನ್ ದದೌ ॥ ೬೫ ॥

ಚಕ್ರಾನುಚಕ್ರೌ ತ್ವಷ್ಟಾ ಚ ವೇಧಾ ನಿಸ್ಥಿರಸುಸ್ಥಿರೌ ।
ಪಾಣಿತ್ಯಜಂ ಕಾಲಿಕಂ ಚ ಪ್ರಾದಾತ್ಪೂಷಾ ಮಹಾಬಲೌ ॥ ೬೬ ॥

ಸ್ವರ್ಣಮಾಲಂ ಘನಾಹ್ವಂ ಚ ಹಿಮವಾನ್ ಪ್ರಮಥೋತ್ತಮೌ ।
ಪ್ರಾದಾದೇವೋಚ್ಛ್ರಿತೋ ವಿಂಧ್ಯಸ್ತ್ವತಿಕೃಷ್ಣಂ ಚ ಪಾರ್ಷದಂ ॥ ೬೭ ॥

ಸುವರ್ಚಸಂ ಚ ವರುಣಃ ಪ್ರದದೌ ಚಾತಿವರ್ಚಸಂ ।
ಸಂಗ್ರಹಂ ವಿಗ್ರಹಂ ಚಾಪಿ ನಾಗಾ ಜಯಪರಾಜಯೌ ॥ ೬೮ ॥

ಕೊಟ್ಟನು. ಹರನು ಈ ರೀತಿ ಗಣಗಳನ್ನು ಕೊಟ್ಟುದುದನ್ನು ನೋಡಿ ದೇವತೆಗಳೂ ಸಹ ಬ್ರಹ್ಮನೇ ಮೊದಲಾದವರು ತಮ್ಮ ತಮ್ಮ ಗಣಗಳನ್ನು ಕೊಟ್ಟರು. ಬ್ರಹ್ಮನು ಸ್ಥಾಣುಗಣವನ್ನೂ, ವಿಷ್ಣುವು ಸಂಕ್ರಮ, ವಿಕ್ರಮ, ಪರಾಕ್ರಮವೆಂಬ ಮೂರು ಗಣಗಳನ್ನೂ, ಇಂದ್ರನು ಉತ್ಕ್ರೋಶ ಪಂಕಜರನ್ನೂ, ಸೂರ್ಯನು ದಂಡಕಪಿಂಜಲರನ್ನೂ, ಚಂದ್ರನು ಮಣಿ ವಸುಮಣಿಗಳನ್ನೂ, ಅಶ್ವಿನೀದೇವತೆಗಳು ವತ್ಸ ನಂದಿಗಳನ್ನೂ ಅಗ್ನಿಯು ಜ್ಯೋತಿ ಮತ್ತು ಜ್ವಲಿಸುವ ನಾಲಗೆಯುಳ್ಳ ಪುರನನ್ನೂ, ಧಾತೃವು ಕುಂದ ಮುಕುಂದ ಕುಸುಮನೆಂಬ ಮೂರು ಅನುಚರರನ್ನೂ ಕೊಟ್ಟರು.

೬೬-೭೧. ತ್ವಷ್ಟ್ರನು ಚಕ್ರ ಅನುಚಕ್ರರನ್ನೂ, ವೇಧಾ ದೇವತೆಯು ನಿಸ್ಥಿರ ಸುಸ್ಥಿರರನ್ನೂ, ಪೂಷಾ ಎಂಬ ದೇವತೆಯು ಪ್ರಾಣಿತ್ಯಜ ಕಾಲಿಕರೆಂಬರವರನ್ನೂ ಕೊಟ್ಟರು. ಹಿಮವಂತನು ಸ್ವರ್ಣಮಾಲ, ಘನಾಹ್ವರೆಂಬ ಪ್ರಮಥರನ್ನೂ, ವಿಂಧ್ಯವು ಅತಿಕೃಷ್ಣ ಪಾರ್ಷದರನ್ನೂ, ವರುಣನು ಸುವರ್ಚಸ ಅತಿವರ್ಚಸರನ್ನೂ ಕೊಟ್ಟರು.

ಉನ್ಮಾದಂ ಶಂಕುಕರ್ಣಂ ಚ ಪುಷ್ಪದಂತಂ ತಥಾಂಬಿಕಾ ।
ಘಸಂ ಜಾತಿಘಸಂ ವಾಯುಃ ಪ್ರಾದಾದನುಚರಾವುಭೌ ॥ ೭೯ ॥

ಪರಿಘಂ ವಟಕಂ ಭೀಮಂ ದಾಹಾತಿದಹನೌ ತಥಾ ।
ಪ್ರದದಾವಂಶುಮಾನ್ಪಂಚ ಪ್ರಮಥಾನ್ ಷಣ್ಮುಖಾಯ ಹಿ ॥ ೭೦ ॥

ಯಮಃ ಪ್ರಮಥಮುನ್ಮಾಥಂ ಕಾಲಸೇನಂ ಮಹಾಮುಖಂ ।
ತಾಲಪತ್ರಂ ಕಾಲಜಂಘಂ ಷಡೇವಾನುಚರಾನದದೌ ॥ ೭೧ ॥

ಸುಪ್ರಭಂ ಶುಭಕರ್ಮಾಣಂ ದದೌ ಧಾತಾ ಗಣೇಶ್ವರೌ ।
ಸುವ್ರತಂ ಸತ್ಯಸಂಧಂ ಚ ಮಿತ್ರಃ ಪ್ರಾದಾದ್ದ್ವಿಜೋತ್ತಮ ॥ ೭೨ ॥

ಅನಂತಃ ಶಂಕುಪೀಠಶ್ಚ ನಿಕುಂಭಃ ಕುಮುದೋಽಂಬುಜಃ ।
ಏಕಾಕ್ಷಃ ಕುನಟೀ ಚಕ್ಷುಃ ಕಿರೀಟೀ ಕಲಶೋದರಃ ॥ ೭೩ ॥

ಸೂಚೀವಕ್ತ್ರಃ ಕೋಕನದಃ ಪ್ರಹಾಸಃ ಪ್ರಿಯಕೋಽಚ್ಯುತಃ ।
ಗಣಾಃ ಪಂಚದಶೈತೇ ಹಿ ಯಕ್ಷೈರ್ದತ್ತಾ ಗುಹಸ್ಯ ತು ॥ ೭೪ ॥

ಸರ್ಪಗಳು ಸಂಗ್ರಹ ವಿಗ್ರಹರನ್ನೂ, ಅಂಬಿಕೆಯು ಜಯ ಪರಾಜಯ ಉನ್ಮಾದ ಶಂಕುಕರ್ಣ ಪುಷ್ಪದಂತ ಎಂಬುವರನ್ನೂ, ವಾಯುವು ಘಸ ಅತಿಘಸರೆಂಬ ಭೃತ್ಯರನ್ನೂ ಕೊಟ್ಟರು. ಅಂಶುಮಂತನು ಪರಿಘ ವಟಕ ಭೀಮ ದಾಹ ಅತಿದಹನರೆಂಬ ಐದು ಪ್ರಮಥಗಳನ್ನು ಷಣ್ಮುಖನಿಗೆ ಕೊಟ್ಟನು. ಹಾಗೆಯೇ ಯಮನು ಪ್ರಮಥ ಉನ್ಮಾಥ ಕಾಲಸೇನ ಮಹಾಮುಖ ತಾಲಪತ್ರ, ಕಾಲಜಂಘರೆಂಬ ಆರು ಭೃತ್ಯರನ್ನು ಷಣ್ಮುಖನಿಗೆ ಕೊಟ್ಟನು.

೭೨-೭೪. ಧಾತೃವು ಸುಪ್ರಭ ಶುಭಕರ್ಮರೆಂಬ ಗಣೇಶ್ವರರನ್ನು ಕೊಟ್ಟನು. ಮಿತ್ರನು ಸುವ್ರತ ಸತ್ಯಸಂಧರೆಂಬ ಇಬ್ಬರನ್ನು ಕೊಟ್ಟನು. ಯಕ್ಷರೆಲ್ಲರೂ ಸೇರಿ ಅನಂತ, ಶಂಕುಪೀಠ, ನಿಕುಂಭ, ಕುಮುದ, ಅಂಬುಜ, ಏಕಾಕ್ಷ, ಕುನಟೀ, ಚಕ್ಷುಃ, ಕಿರೀಟೀ, ಕಲಶೋದರ, ಸೂಚೀವಕ್ತ್ರ, ಕೋಕನದ, ಪ್ರಹಾಸ, ಪ್ರಿಯಕ, ಅಚ್ಯುತ ಎಂಬ ಹದಿನೈದು ಗಣಗಳನ್ನು ಗುಹನಿಗೆ ಕೊಟ್ಟರು.

ಕಾಲಿಂದ್ಯಾಃ ಕಲಕಂದಶ್ಚ ನರ್ಮದಾಯಾ ರಣೋತ್ಕಟಃ ।
ಗೋದಾವರ್ಯಾ ಸಿದ್ಧಯಾತ್ರಂ ತಮಸಾ ಸಾದ್ರಿಕಂಪಕೌ ॥ ೭೫ ॥

ಸಹಸ್ರಬಾಹುಃ ಶೀತಾಯಾ ವಂಜುಲಾಯಾಃ ಸ್ಮಿತೋದರಃ ।
ಮಂದ್ಯಾಕಿನ್ಯಾಸ್ತದಾ ಗಂಧೋ ವಿಪಾಶಾಯಾಃ ಪ್ರಿಯಂಕರಃ ॥ ೭೬ ॥

ಐರಾವತ್ಯಾಃ ಚತುರ್ದಂಷ್ಟ್ರಃ ಷೋಡಶಾಖ್ಯೋ ವಿತಸ್ತಯಾ ।
ಮಾರ್ಜಾರಿಂ ಕೌಶಿಕೀ ಪ್ರಾದಾತ್ಕ್ರಥಕ್ರೌಂಚೌ ಚ ಗೌತಮೀ ॥ ೭೭ ॥

ಬಾಹುದಾ ಶತಶೀರ್ಷಂ ಚ ವಾಹಾ ಗೋನಂದನಂದಿಕೌ ।
ಭೀಮಂ ಭೀಮರಥೀ ಪ್ರಾದಾದ್ವೇಗಾರಿಂ ಸರಯೂರ್ದದೌ ॥ ೭೮ ॥

ಅಷ್ಟಬಾಹುಂ ದದೌ ಕಾಲೀ ಸುಬಾಹುಮಪಿ ಗಂಡಕೀ ।
ಮಹಾನದೀ ಚಿತ್ರದೇವಂ ಶಿಪ್ರಾ ಚಿತ್ರರಥಂ ದದೌ ॥ ೭೯ ॥

ಕುಹೂಃ ಕುವಲಯಂ ಪ್ರಾದಾನ್ಮಧುವರ್ಣಂ ಮಧೂದಕಾ ।
ಜಂಬೂಕಂ ಧೂತಪಾಪಾ ಚ ವೇತ್ರಾ ಶ್ವೇತಾನನಂ ದದೌ ॥ ೮೦ ॥

೭೫-೭೮. ಕಾಲಿಂದೀ ನದಿಯಿಂದ ಕಲಕಂದನೂ, ನರ್ಮದೆಯಿಂದ ರಣೋತ್ಕಟನೂ, ಗೋದಾವರಿಯಿಂದ ಸಿದ್ಧಯಾತ್ರನೂ, ತಮಸಾನದಿಯಿಂದ ಸಾದ್ರಿ, ಕಂಪಕರುಗಳೂ ಕೊಡಲ್ಪಟ್ಟರು. ಶೀತಾನದಿಯು ಸಹಸ್ರಬಾಹುವನ್ನೂ, ವಂಜುಲಾನದಿಯು ಸ್ಮಿತೋದರನನ್ನೂ, ಮಂದಾಕಿನಿಯು ಗಂಧನನ್ನೂ, ವಿಪಾಶಾನದಿಯು ಪ್ರಿಯಂಕರನನ್ನೂ, ಐರಾವತಿನದಿಯು ಚತುರ್ದಂಷ್ಟ್ರನನ್ನೂ, ವಿತಸ್ತಾನದಿಯು ಷೋಡಶನನ್ನೂ, ಕೌಶಿಕೀನದಿಯು ಮಾರ್ಜಾರಿಯನ್ನೂ ಕೊಟ್ಟರು. ಹಾಗೆಯೇ ಗೌತಮಿಯು ಕ್ರಥ ಕ್ರೌಂಚರುಗಳನ್ನೂ, ಬಾಹುದಾನದಿಯು ಶತಶೀರ್ಷನನ್ನೂ, ವಾಹಾನದಿಯು ಗೋನಂದ ನಂದಿಕರನ್ನೂ, ಭೀಮರಥಿಯು ಭೀಮನನ್ನೂ ಸರಯೂನದಿಯು ವೇಗಾರಿಯನ್ನೂ ಕೊಟ್ಟರು

೭೯-೮೦. ಕಾಲಿಯು ಅಷ್ಟಬಾಹುವನ್ನೂ, ಗಂಡಕಿಯು ಸುಬಾಹುವನ್ನೂ, ಮಹಾನದಿಯು ಚಿತ್ರದೇವನನ್ನೂ, ಶಿಪ್ರಾನದಿಯು ಚಿತ್ರರಥನನ್ನೂ, ಕುಹುವು ಕುವಲಯನನ್ನೂ, ಮಧೂದಕೆಯು ಮಧುವರ್ಣನನ್ನೂ, ಧೂತಪಾಪೆಯು ಜಂಬೂಕನನ್ನೂ, ವೇತ್ರಾನದಿಯು ಶ್ವೇತಾನನನನ್ನೂ ಕೊಟ್ಟರು.

ಸ್ತುತಂ ಚ ಪ್ರಥಮಂ ವರ್ಣಾ ರೇವಾ ಸಾಗರವೇಗಿನಂ ।
ಪ್ರಭಾವಾರ್ಥಸಹಂ ಪ್ರಾದಾತ್ಕಾಂಚನಾ ಕನಕೇಕ್ಷಣಂ ॥ ೮೧ ॥

ಗೃಧ್ರವಕ್ತ್ರಂ ಚ ವಿಮಲಾ ಚಾರುಪತ್ರಂ ಮನೋಹರಾ ।
ಧೂತಪಾಪಾ ಮಹಾರಾವಂ ಕರ್ಣಾ ವಿದ್ರುಮಸನ್ನಿಭಂ ॥ ೮೨ ॥

ಸುಪ್ರಸಾದಂ ಸುವೇಣುಂ ಚ ಜಿಷ್ಣುಮೋಘವತೀ ದದೌ ।
ಯಜ್ಞಬಾಹುಂ ವಿಶಾಲಾ ಚ ಸರಸ್ವತ್ಯೋದದುರ್ಗಣಾನ್ ॥ ೮೩ ॥

ಕುಟಿಲಾ ತನಯಾನ್ ಪ್ರಾದಾತ್ರಿಂಶಚ್ಛಕ್ರಬಲಾನ್ ಗಣಾನ್ ।
ಕರಾಲಂ ಸಿತಕೇಶಂ ಚ ಕೃಷ್ಣಕೇಶಂ ಜಟಾಧರಾ ॥ ೮೪ ॥

ಮೇಘನಾದಂ ಚತುರ್ದಂಷ್ಟ್ರಂ ವಿದ್ಯುಜ್ಜಿಹ್ವಂ ದಶಾನನಂ ।
ಸೋಮಾಪ್ಯಾಯನಮೇವೋಗ್ರಂ ದೇವಯಾಜಿನಮೇವಚ ॥ ೮೫ ॥

ಹಂಸಾಸ್ಯಂ ಕುಂಡಜಠರಂ ಮುದ್ಗಗ್ರೀವಂ ಹಯಾನನಂ ।
ಕೂರ್ಮಗ್ರೀವಂ ಚ ಪಂಚೈತಾಃ ದದುಃ ಪುತ್ರಾಯ ಕೃತ್ತಿಕಾಃ ॥ ೮೬ ॥

೮೧-೮೪. ವರ್ಣಾನದಿಯು ಸ್ತುತನೆಂಬ ಪ್ರಮಥನನ್ನೂ, ರೇವಾನದಿಯು ಸಾಗರವೇಗಿಯನ್ನೂ, ಕಾಂಚನೆಯು ಸಮರ್ಥನಾದ ಕನಕೇಕ್ಷಣನನ್ನೂ ಕೊಟ್ಟರು. ವಿಮಲಾನದಿಯು ಗೃಧ್ರವಕ್ತ್ರನನ್ನೂ, ಮನೋಹರೆಯು ಚಾರುಪತ್ರನನ್ನೂ, ಧೂತಪಾಪೆಯು ಮಹಾರಾವನನ್ನೂ, ಕರ್ಣಾನದಿಯು ವಿದ್ರುಮಸನ್ನಿಭನನ್ನೂ, ಓಘವತಿಯು ಸುಪ್ರಸಾದ, ಸುವೇಣು, ಜಿಷ್ಣು ಇವರನ್ನೂ ಕೊಟ್ಟರು. ವಿಶಾಲಾನದಿಯು ಯಜ್ಞಬಾಹುವನ್ನೂ, ಸರಸ್ವತಿಯ ಶಾಖೆಗಳು ಈರೀತಿ ಗಣಗಳನ್ನು ಕೊಟ್ಟವು. ಕುಟಿಲೆಯು ಇಂದ್ರನಂತೆ ಬಲಶಾಲಿಗಳಾದ ಮೂವತ್ತು ಮಕ್ಕಳನ್ನು ಕೊಟ್ಟಳು. ಜಟಾಧರೆಯು ಕರಾಲ, ಸಿತಕೇಶ, ಕೃಷ್ಣಕೇಶರನ್ನು ಕೊಟ್ಟಳು.

೮೫-೮೬. ಕೃತ್ತಿಕಾದೇವಿಗಳು, ಮೇಘನಾದ, ಚತುರ್ದಂಷ್ಟ್ರ, ವಿದ್ಯುಜ್ಜಿಹ್ವ, ದಶಾನನ, ಸೋಮಾಪ್ಯಾಯನ, ದೇವಯಾಜಿ, ಹಂಸಾಸ್ಯ, ಕುಂಡಜಠರ, ಮುದ್ಗಗ್ರೀವ, ಹಯಾನನ, ಕೂರ್ಮಗ್ರೀವರುಗಳನ್ನು ಐವರೂ ಪುತ್ರನಾದ ಷಣ್ಮುಖನಿಗೆ

ಸ್ಥಾಣುಜಂಘಂ ಕುಂಭವಕ್ತ್ರಂ ಲೋಹಜಂಘಂ ಮಹಾನನಂ ।
ಪಿಂಡಾಕರಂ ಚ ಪಂಚೈತಾರ್ನದದುಃ ಸ್ಕಂದಾಯ ಚರ್ಷಯಃ ॥ ೮೭ ॥

ನಾಗಜಿಹ್ವಂ ಚಂದ್ರಭಾಸಂ ಪಾಣಿಕೂರ್ಮಮಶಿಕ್ಷಕಂ ।
ಚಾಷವಕ್ತ್ರಂ ಚ ಜಂಬೂಕಂ ದದೌ ತೀರ್ಥಂ ಪೃಥೂದಕಂ ॥ ೮೮ ॥

ಚಕ್ರತೀರ್ಥಂ ಸುಚಕ್ರಾಖ್ಯಂ ಮಕರಾಖ್ಯಂ ಗಯಾಶಿರಃ ।
ಗಣಂ ಪಂಚಶಿವಂ ನಾಮ ದದೌ ಕನಖಲಂ ಸ್ವಕಂ ॥ ೮೯ ॥

ಬಂಧುದತ್ತಂ ಚಾಜಿಶಿರಾ ಬಾಹುಶಾಲಂ ಚ ಪುಷ್ಕರಂ ।
ಸರ್ವೌಜಸಂ ಮಾಹಿಷಕಂ ಮಾನಸಃ ಪಿಂಗಲಂ ತಥಾ ॥ ೯೦ ॥

ರುದ್ರಮೌಶನಸಃ ಪ್ರಾದಾತ್ತತೋಽನ್ಯಾನ್ಮಾತರೋ ದದುಃ ।
ವಸುದಾಮಂ ಸೋಮತೀರ್ಥಃ ಪ್ರಭಾಸೋ ನಂದಿನೀಮಪಿ ॥ ೯೧ ॥

ಇಂದ್ರತೀರ್ಥಂ ವಿಶೋಕಾಂ ಚ ಉದಪಾನೋ ಘನಸ್ವನಾಂ ।
ಸಪ್ತಸಾರಸ್ವತಃ ಪ್ರಾದಾನ್ಮಾತರಶ್ಚತುರೋದ್ಭುತಾಃ ॥ ೯೨ ॥

ಕೊಟ್ಟರು. ಋಷಿಗಳು, ಸ್ಥಾಣುಜಂಘ, ಕುಂಭವಕ್ತ್ರ, ಲೋಹಜಂಘ, ಮಹಾನನ, ಪಿಂಡಾಕರ ಈ ಐದು ಜನಗಳನ್ನೂ ಸ್ಕಂದನಿಗಾಗಿ ಕೊಟ್ಟರು.

೮೮-೯೧. ಪೃಥೂದಕ ತೀರ್ಥವು ನಾಗಜಿಹ್ವ. ಚಂದ್ರಭಾಸ, ಪಾಣಿಕೂರ್ಮ, ಅಶಿಕ್ಷಕ, ಚಾಷವಕ್ತ್ರ, ಜಂಬೂಕ ಇವರನ್ನು ಕೊಟ್ಟಿತು. ಚಕ್ರತೀರ್ಥವು ಸುಚಕ್ರನನ್ನೂ, ಗಯಾಶಿರತೀರ್ಥವು ಮಕರನನ್ನೂ, ಕನಖಲ ತೀರ್ಥವು ಪಂಚಶಿವನೆಂಬ ಗಣವನ್ನೂ ಕೊಟ್ಟವು. ಆಜಿಶಿರಾ ತೀರ್ಥವು ಬಂಧುದತ್ತನನ್ನೂ, ಪುಷ್ಕರತೀರ್ಥವು ಬಾಹುಶಾಲನನ್ನೂ ಮಾನಸತೀರ್ಥವು ಸರ್ವೌಜಸ, ಮಾಹಿಷಿಕ, ಪಿಂಗಲ ಇವರನ್ನೂ ಔಶನಸ ತೀರ್ಥವು ರುದ್ರನನ್ನೂ, ಇತರ ಮಾತೃಗಳು ಮತ್ತೆ ಕೆಲವರನ್ನೂ ಕೊಟ್ಟರು. ಸೋಮತೀರ್ಥವು ವಸುದಾಮನನ್ನೂ, ಪ್ರಭಾಸತೀರ್ಥವು ನಂದಿನಿಯನ್ನೂ ಕೊಟ್ಟವು.

೯೨-೯೪. ಇಂದ್ರತೀರ್ಥವು ವಿಶೋಕೆಯನ್ನೂ, ಉದಪಾನ ತೀರ್ಥವು ಘನಸ್ವನೆಯನ್ನೂ, ಸಪ್ತಸಾರಸ್ವತವು ನಾಲ್ಕುಜನ ಮಾತೃದೇವಿಗಳನ್ನೂ, ನಾಗತೀರ್ಥವು

ಗೀತಪ್ರಿಯಾಂ ಮಾಧವೀಂ ಚ ತೀರ್ಥನೇಮಿಂ ಸ್ಮಿತಾನನಂ ।
ಏಕಚೂಡಾಂ ನಾಗತೀರ್ಥಃ ಕುರುಕ್ಷೇತ್ರಂ ಫಲಾಸ್ಪದಂ ॥ ೯೩ ॥

ಬ್ರಹ್ಮಯೋನಿಶ್ಚಂಡಶಿತಾಂ ಭದ್ರಕಾಲೀ ತ್ರಿವಿಷ್ಟಪಂ ।
ರೋಂಡೀ ಸೇಂಡೀ ಪೋಷಭೇಡೀಂ ಪ್ರಾದಾದ್ದ್ವಿರದಪಾವನಃ ॥ ೯೪ ॥

ಮೋಪಲೀಯಾಂ ಮಹೀ ಪ್ರಾದಾಚ್ಛಾಲಿಕಾಂ ಮಾನಸೋಹ್ರದಃ ।
ಶತಘಂಟಾಂ ಶತಾನಂದಾ ತಥೋಲೂಖಲಮೇಖಲಾಂ ॥ ೯೫ ॥

ಪದ್ಮಾವತೀಂ ಮಾಧವೀಂ ಚ ದದೌ ಬದರೀಕಾಶ್ರಮಃ ।
ಸುಷಮಾಮೇಕಚೂಡಾಂ ಚ ದೇವೀ ಧಮಧಮಾಂ ತಥಾ ॥ ೯೬ ॥

ಉತ್ಕ್ರಾಥನೀ ವೇದಮಂತ್ರಾಂ ಕೇದಾರೋ ಮಾತರೋ ದದೌ ।
ಸುನಕ್ಷತ್ರಂ ಕಲೂಲಾಂ ಚ ಸುಪ್ರಭಾತಂ ಸುಮಂಗಲಿಂ ॥ ೯೭ ॥

ದೇವಮಿತ್ರಾಂ ಚಿತ್ರಸೇನಾಂ ದದೌ ರೌದ್ರಮಹಾಲಯಃ ।
ಕೋಟರಾಮೂರ್ಧ್ವವೇಣೀಂ ಚ ಶ್ರೀಮತೀಂ ಬಾಹುಪುತ್ರಿಕಾಂ ॥ ೯೮ ॥

ಗೀತಪ್ರಿಯಾ, ಮಾಧವೀ, ತೀರ್ಥನೇಮಿ, ಸ್ಮಿತಾನನ, ಏಕಚೂಡಾ ಎಂಬುವರನ್ನೂ, ಕುರುಕ್ಷೇತ್ರವು ಫಲಾಸ್ಪದನನ್ನೂ, ಬ್ರಹ್ಮಯೋನಿಯು ಚಂಡಶಿತೆಯನ್ನೂ, ಭದ್ರಕಾಲಿಯು ತ್ರಿವಿಷ್ಟಪನನ್ನೂ, ದ್ವಿರದಪಾವನ ತೀರ್ಥವು ರೋಂಡೀ, ಸೇಂಡೀ, ಪೋಷಭೇಡೀ ಎಂಬುವರನ್ನೂ ಕೊಟ್ಟರು.

೯೫-೯೮. ಮಹೀದೇವಿಯು ಮೋಪಲೀಯಾ ಎಂಬುವಳನ್ನೂ, ಮಾನಸಹ್ರದವು ಶಾಲಿಕೆಯನ್ನೂ, ಶತಾನಂದೆಯು ಶತಘಂಟೆಯನ್ನೂ, ಬದರಿಕಾಶ್ರಮವು ಉಲೂಖಲಮೇಖಲಾ ಪದ್ಮಾವತೀ ಮಾಧವಿಯರನ್ನೂ ಕೊಟ್ಟರು. ದೇವಿಯು ಸುಷಮಾ, ಏಕಚೂಡಾ, ಧಮಧಮಾ ಎಂಬುವವರನ್ನೂ, ಉತ್ಕ್ರಾಥನಿಯು ವೇದಮಂತ್ರೆಯನ್ನೂ, ಕೇದಾರೆಯು ಮಾತೃಗಳನ್ನೂ ಕೊಟ್ಟರು. ರೌದ್ರಮಹಾಲಯವು ಸುನಕ್ಷತ್ರ, ಕಲೂಲಾ, ಸುಪ್ರಭಾತ, ಸುಮಂಗಲಿ, ದೇವಮಿತ್ರ, ಚಿತ್ರಸೇನ ಇವರನ್ನು ಕೊಟ್ಟಿತು. ಪ್ರಯಾಗವು ಕೋಟರಾ, ಊರ್ಧ್ವವೇಣೀ, ಶ್ರೀಮತೀ, ಬಾಹುಪುತ್ರಿಕಾ, ಪಶಿತಾ, ಕಮಲಾಕ್ಷೀ ಎಂಬ ಮಾತೃವರ್ಗವನ್ನು ಕೊಟ್ಟಿತು.

ಪತಿತಾಂ ಕಮಲಾಕ್ಷೀಂ ಚ ಪ್ರಯಾಗೋ ಮಾತರೋ ದದೌ ।
ಸುಯಮಾಂ ಮಧುಪಿಂಗಾಂ ಚ ಕ್ಷಾಂತಿಂ ದಹದಹಾಂ ಪರಾಂ ॥ ೯೯ ॥

ಪ್ರಾದಾತ್ಶ್ವೇಟಕರಾಂ ಚಾನ್ಯಾಂ ಸರ್ವಪಾಪವಿಮೋಚನಃ ।
ಸಂತಾನಿಕಾಂ ಚ ವಿಕಲಾಂ ಕ್ರಮುಕಾಂಬರವಾಸನೀಂ ॥ ೧೦೦ ॥

ಜಲೇಶ್ವರೀಂ ಕುರ್ಕುಟಿಕಾಂ ಸುದಾಮಾ ಲೋಹಮೇಖಲಾಂ ।
ವಪುಷ್ಮತ್ಯುಲ್ಮುಕಾಕ್ಷೀಚ ಕೋಕನಾಮಾ ಮಹಾಸನೀ
ರೌದ್ರಾ ಕರ್ಕಟಿಕಾ ತುಂಡಾ ಶ್ವೇತತೀರ್ಥೋ ದದೌ ತ್ವಿಮಾಂ ॥ ೧೦೧ ॥

ಏತಾನಿ ಭೂತಾನಿ ಗಣಾಶ್ಚ ಮಾತರೋ
ದೃಷ್ಟ್ವಾ ಮಹಾತ್ಮಾ ವಿನತಾತನೂಜಃ
ದದೌ ಮಯೂರಂ ಸ್ವಸುತಂ ಮಹಾಜವಂ
ತಥಾರುಣಸ್ತಾಮ್ರಚೂಡಂ ಚ ಪುತ್ರಂ ॥ ೧೦೨ ॥

ಶಕ್ತಿಂ ಹುತಾಶೋದ್ರಿಸುತಾ ಚ ವಸ್ತ್ರಂ
ದಂಡಂ ಗುರುಃ ಸಾ ಕುಟಿಲಾ ಕಮಂಡಲುಂ
ಮಾಲಾಂ ಹರಿಃ ಶೂಲಧರಃ ಪತಾಕಂ
ಕಂಠೆ ಚ ಹಾರಂ ಮಘವಾನುರಸ್ತಃ ॥ ೧೦೩ ॥

೯೯-೧೦೪. ಸರ್ವಪಾಪವಿಮೋಚನಾ ತೀರ್ಥವು ಸುಯಮಾ, ಮಧುಪಿಂಗಾ, ಕ್ಷಾನ್ತಿ, ದಹದಹಾ, ಶ್ವೇಟಕರಾ ಇವರನ್ನು ಕೊಟ್ಟಿತು. ಸುದಾಮಾ ಎಂಬ ತೀರ್ಥವು ಸಂತಾನಿಕಾ, ವಿಕಲಾ, ಕ್ರಮುಕಾಮ್ಬರವಾಸಿನೀ, ಜಲೇಶ್ವರೀ, ಕುರ್ಕುಟಿಕಾ, ಲೋಹಮೇಖಲಾ ಇವರನ್ನೂ ಕೊಟ್ಟಿತು. ವಪುಷ್ಮತಿಯು ಉಲ್ಮುಕಾಕ್ಷಿಯನ್ನೂ ಕೋಕತೀರ್ಥವು ಮಹಾಸನಿಯನ್ನೂ, ರೌದ್ರತೀರ್ಥವು ಕರ್ಕಟಿಕೆಯನ್ನೂ, ಶ್ವೇತ ತೀರ್ಥವು ತುಂಡಾ ಎಂಬುವಳನ್ನೂ ಕೊಟ್ಟುವು. ಹೀಗೆ ಕೊಡಲ್ಪಟ್ಟ ಭೂತಗಳನ್ನೂ ಗಣಗಳನ್ನೂ, ಮಾತೃಗಳನ್ನೂ ನೋಡಿ ಮಹಾತ್ಮನಾದ ಗರುಡನು ತನ್ನ ಮಗನಾದ ಮಯೂರನನ್ನೂ ಕೊಟ್ಟನು. ಹಾಗೆಯೇ ಅರುಣನು ತನ್ನ ಮಗನಾದ ತಾಮ್ರ ಚೂಡನನ್ನೂ ಒಪ್ಪಿಸಿದನು. ಅಗ್ನಿಯು ಶಕ್ತಿಯನ್ನೂ. ಪಾರ್ವತಿಯು ವಸ್ತ್ರವನ್ನೂ, ಗುರುವು ದಂಡವನ್ನೂ, ಕುಟಿಲೆಯು ಕಮಂಡಲುವನ್ನೂ ಕೊಟ್ಟರು. ಹಾಗೆಯೇ ಹರಿಯು ಮಾಲಿಕೆಯನ್ನೂ, ಶಂಕರನು ಬಾವುಟವನ್ನೂ, ಇಂದ್ರನು ತಾನು ಧರಿಸಿದ್ದ

ಗಣೈರ್ವೃತೋ ಮಾತೃಭಿರಧ್ವಯಾತೋ
ಮಯೂರಸಂಸ್ಥೋ ವರಶಕ್ತಿಪಾಣಿಃ ।
ಸೇನಾಧಿಪತ್ಯೇ ಸ ಕೃತೋ ಭವೇನ
ರರಾಜ ಸೂರ್ಯೋsವ ಮಹಾವಪುಷ್ಮಾನ್ ॥ ೧೦೪ ॥

ಇತಿ ಶ್ರೀ ವಾಮನಪುರಾಣೇ ಕಾರ್ತಿಕೇಯೋತ್ಪತ್ತೌ
ಸಪ್ತಪಂಚಾಶತ್ತಮೋsಧ್ಯಾಯಃ

ಹಾರವನ್ನೂ ಕೊಟ್ಟರು. ಈ ರೀತಿ ಶಕ್ತ್ಯಾಯುಧ ಪಾಣಿಯಾಗಿಯೂ, ಮಯೂರ ವಾಹನನಾಗಿಯೂ ಇರುವ ಷಣ್ಮುಖನು ಗಣಗಳಿಂದಲೂ, ಮಾತೃಗಳಿಂದಲೂ ಸುತ್ತುವರಿಯಲ್ಪಟ್ಟು ರುದ್ರನಿಂದ ಸೇನಾಪತಿಯಾಗಿ ನಿಯೋಗಿಸಲ್ಪಟ್ಟು ದೇಹಧಾರಿಯಾಗಿ ಬಂದಿರುವ ಸೂರ್ಯನಂತೆ ಜ್ವಲಿಸಿದನು.

ಇಲ್ಲಿಗೆ ಶ್ರೀ ವಾಮನ ಪುರಾಣದ ಷಣ್ಮುಖೋತ್ಪತ್ತಿಯಲ್ಲಿ
ಐವತ್ತೇಳನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಸ್ಕಂದನು ಹೇಗೆ ಮಹಿಷನನ್ನು ಸಂಹರಿಸಿದನೆಂಬ ಪ್ರಶ್ನೆಗೆ ಉತ್ತರವಾಗಿ ಸ್ಕಂದನ ಉತ್ಪತ್ತಿಯನ್ನು ಹೇಳತೊಡಗಿ ಅಗ್ನಿಯು ತಾನು ಹಿಂದೆ ಧರಿಸಿದ್ದ ಶಂಕರನ ತೇಜಸ್ಸನ್ನು ಐದುಸಾವಿರ ವರ್ಷದವರಿಗೂ ಧರಿಸಿದ್ದು ಹೊಂಬಣ್ಣ ಹೊಂದಿ ಹಿರಣ್ಯರೇತಾ ಎಂದು ಕರೆಯಲ್ಪಟ್ಟನೆಂದೂ ಅನಂತರ ತಾನು ಅದನ್ನು ಧರಿಸಲಾಗದೆ ದೇವತೆಗಳ ನಿಯೋಗದಂತೆ ಚತುರ್ಮುಖನಲ್ಲಿ ಹೇಳಲು ಹೋಗುತ್ತಿರುವಾಗ ಅಲ್ಲಿ ಕುಟಿಲೆಯನ್ನು ಕಂಡು ಅವಳನ್ನು ಒಲಿಸಿ ಅವಳಿಗೆ ಕೊಟ್ಟನೆಂದೂ ಹೇಳಲಾಯಿತು. ಕುಟಿಲೆಯೂ ಸಹ ಪುತ್ರಲಾಭದ ಆಸೆಯಿಂದ ಆ ತೇಜಸ್ಸನ್ನು ಐದು ಸಾವಿರ ವರ್ಷ ಧರಿಸಿ ಅದರ ವೇಗವನ್ನು ತಡೆಯಲಾರದೆ ಚತುರ್ಮುಖನಲ್ಲಿ ಹೋಗಿ

ಅವನ ಅಪ್ಪಣೆಯಂತೆ ಶರವಣ ಕ್ಷೇತ್ರದಲ್ಲಿ ಆ ತೇಜಸ್ಸನ್ನು ಮುಖದಿಂದ ಬಿಟ್ಟು ಬಂದಳೆಂದೂ, ಅದು ಹತ್ತುಸಾವಿರ ವರ್ಷದನಂತರ ಅಲ್ಲಿ ಬಾಲಕನ ರೂಪದಿಂದ ಅಭಿವ್ಯಕ್ತಿಹೊಂದಿ ಅಳುತ್ತಿರುವಾಗ ಅಲ್ಲಿ ಸಂಚರಿಸುತ್ತಿದ್ದ ಕೃತ್ತಿಕಾ ದೇವತೆಗಳು ಆ ಬಾಲನಿಗೆ ಸ್ತನ್ಯಪಾನ ಮಾಡಿಸಿದರೆಂದೂ ಅವರ ಪ್ರೀತಿಗಾಗಿ ತಾನೂ ಆರುಮುಖದಿಂದ ಸ್ತನ್ಯಪಾನಮಾಡಿ ವೃದ್ಧಿ ಹೊಂದಿದನೆಂದೂ ಹೇಳಲಾಯಿತು. ಇದನ್ನು ತಿಳಿದ ಬ್ರಹ್ಮನು ಅಗ್ನಿಯನ್ನು ಕುರಿತು ಪ್ರಶ್ನೆಮಾಡಲು ಅಗ್ನಿಯು ಅಜ್ಞನಂತೆ ನಟಿಸಿ ಪುತ್ರನನ್ನು ನೋಡಲು ಶರವಣಕ್ಕೆ ಹೋಗುತ್ತಿರುವಾಗ ದಾರಿಯಲ್ಲಿ ಕುಟಿಲೆಯೂ ಬಂದು ನನ್ನ ಮಗನೆಂದು ವಿವಾದಮಾಡಲಾಗಿ ಇದು ಶಂಕರನ ತೇಜಸ್ಸಾದುದರಿಂದ ಈ ತೀರ್ಮಾನವು ಅವನಿಗೇ ಸೇರಿದ್ದೆಂದು ಜನಾರ್ದನನು ಮಾಡಿದ ನಿರ್ಣಯದಂತೆ ಅವರಿಬ್ಬರೂ ಶಂಕರನಲ್ಲಿ ಹೋಗಿ ತಮ್ಮ ತಮ್ಮ ಬಾಧ್ಯತೆಯನ್ನು ಅರಿಕೆಮಾಡಿಕೊಂಡರೆಂದೂ ಹೇಳಲಾಯಿತು. ಶಂಕರನು ಸಂತೋಷದಿಂದ ಅವನು ಆರು ಅಂಶವುಳ್ಳವನೆಂದೂ ಒಂದೊಂದು ಅಂಶದ ಹೆಸರಿನಿಂದ ಒಬ್ಬೊಬ್ಬರ ಮಗನಾಗಿರುವನೆಂದೂ ಹೇಳಿ ಪಾರ್ವತಿಯೊಡನೆ ಶರವಣಕ್ಕೆ ಬಂದು ಪುತ್ರನನ್ನು ನೋಡಿ ಸಂತೋಷಪಟ್ಟು ದೇವತೆಗಳನ್ನೆಲ್ಲಾ ಸ್ಮರಣೆಯಿಂದ ಬರಮಾಡಿಕೊಂಡು ಅವನನ್ನು ಕುರುಕ್ಷೇತ್ರದ ಓಜಸ ತೀರ್ಥದಲ್ಲಿ ಯಥಾವಿಧಿ ಅಭಿಷೇಕ ಮಾಡಿ ಸೇನಾಪತಿಯನ್ನಾಗಿ ಮಾಡಿದರೆಂದೂ, ಅವನ ಸಹಾಯಕ್ಕೆ ಸರ್ವದೇವತೆಗಳೂ ನದಿಗಳೂ ಕ್ಷೇತ್ರಗಳೂ ಭೃತ್ಯರನ್ನೂ ಗಣಗಳನ್ನೂ ಮಾತೃಗಳನ್ನೂ ಕೊಟ್ಟರೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಅಷ್ಟಪಂಚಾಶತ್ತಮೋಽಧ್ಯಾಯಃ

ಪುಲಸ್ತ್ಯ ಉವಾಚ

ಸೇನಾಪತ್ಯೇಽಭಿಷಿಕ್ತಸ್ತು ಕುಮಾರೋ ದೈವತೈರಥ ।
ಪ್ರಣಿಪತ್ಯ ಭವಂ ಭಕ್ತ್ಯಾ ಗಿರಿಜಾಂ ಪಾವಕಂ ಶುಚಿಂ ॥ ೧ ॥

ಷಟ್‌ಕೃತ್ತಿಕಾಶ್ಚ ಸರಸಾಂ ಪ್ರಣಮ್ಯ ಕುಟಿಲಾಮಪಿ ।
ಬ್ರಹ್ಮಾಣಂ ಚ ನಮಸ್ಕೃತ್ಯ ಇದಂ ವಚನಮಬ್ರವೀತ್ ॥ ೨ ॥

ಕುಮಾರ ಉವಾಚ

ನಮೋ ಭಗವತೀಂ ದೇವೀಮೋಂ ನಮೋಽಸ್ತು ತಪೋಧನಾಃ ।
ಯುಷ್ಮತ್ಪ್ರಸಾದಾಜ್ಜೇಷ್ಯಾಮಿ ಶತ್ರೂ ಮಹಿಷತಾರಕೌ ॥ ೩ ॥

ಐವತ್ತೆಂಟನೆಯ ಅಧ್ಯಾಯವು

೧-೪. ಪುಲಸ್ತ್ಯರು ಹೇಳುತ್ತಾರೆ:—ಕುಮಾರಸ್ವಾಮಿಯನ್ನು ದೇವತೆಗಳು ಅಭಿಷೇಕಮಾಡಿ ಸೇನಾಪತಿಯನ್ನಾಗಿ ನಿಲ್ಲಿಸಿದಮೇಲೆ ಆ ಕುಮಾರಸ್ವಾಮಿಯು ಶಂಕರನನ್ನೂ, ಪಾರ್ವತಿಯನ್ನೂ, ಅಗ್ನಿಯನ್ನೂ, ಕೃತ್ತಿಕಾದೇವತೆಗಳನ್ನೂ, ಪ್ರೀತಿ ಯುಕ್ತಳಾಗಿರುವ ಕುಟಿಲೆಯನ್ನೂ, ಬ್ರಹ್ಮನನ್ನೂ ಭಕ್ತಿಯಿಂದ ನಮಸ್ಕರಿಸಿ ಎಲ್ಲಾ ದೇವತೆಗಳನ್ನೂ ಕುರಿತು ಹೀಗೆ ಹೇಳುತ್ತಾನೆ. ಪೂಜ್ಯಳಾದ ದೇವಿಗೂ, ತಪಸ್ವಿ ಗಳಾಗಿರುವ ಮಹರ್ಷಿಗಳಿಗೂ ನಮಸ್ಕಾರಗಳು. ನಿಮ್ಮ ಈ ಅನುಗ್ರಹಬಲದಿಂದ ಸುರಶತ್ರುಗಳಾಗಿರುವ ಮಹಿಷ ಮತ್ತು ತಾರಕಾಸುರರನ್ನು ಜಯಿಸುತ್ತೇನೆ. ನಾನು

ಶಿಶುರಸ್ಮಿ ನಜಾನಾಮಿ ವಕ್ತುಂ ಕಿಂಚನ ದೇವತಾಃ ।
ದೀಯತಾಂ ಬ್ರಹ್ಮಣಾಸಾರ್ಧ ಮನುಜ್ಞಾ ಮಮ ಸಾಂಪ್ರತಂ ॥ ೪ ॥

ಇತ್ಯೇವಮುಕ್ತೇ ವಚನೇ ಕುಮಾರೇಣ ಮಹಾತ್ಮನಾ ।
ಮುಖಂ ನಿರೀಕ್ಷ್ಯ ತಂ ಸರ್ವಾಃ ಸರ್ವೇ ವಿಗತಸಾಧ್ವಸಾಃ ॥ ೫ ॥

ಶಂಕರೋಽಪಿ ಸುತಸ್ನೇಹಾತ್ಸಮುತ್ಥಾಯ ಪ್ರಜಾಪತಿಂ ।
ಆದಾಯ ದಕ್ಷಿಣೆ ಪಾಣೌ ಸ್ಕಂದಾಂತಿಕಮುಪಾಯಯೌ ॥ ೬ ॥

ಅಥೋಮಾ ಪ್ರಾಹ ತನಯಂ ಪುತ್ರ ಏಹ್ಯೇಹಿ ಶತ್ರುಹನ್ ।
ವಂದಸ್ವ ಚರಣೌ ದಿವ್ಯೌ ವಿಷ್ಣೋರ್ಲೋಕನಮಸ್ಕೃತೌ ॥ ೭ ॥

ತತೋ ವಿಹಸ್ಯಾಹ ಗುಹಃ ಕೋಽಯಂ ಮಾತರ್ವದಸ್ವಮಾಂ ।
ಯಸ್ಯಾದರಾತ್ಪ್ರಣಾಮೋಽಯಂ ಕ್ರಿಯತೆ ಮದ್ವಿಧೈರ್ಜನೈಃ ॥ ೮ ॥

ಇನ್ನೂ ಮಗುವಾಗಿರುವೆನು. ನಿಮ್ಮ ಪ್ರೀತಿಗೆ ತಕ್ಕಂತೆ ಹೆಚ್ಚಾಗಿ ಮಾತನಾಡಲು ನಾನರಿಯೆನು. ಈ ಚತುರ್ಮುಖನ ಅನುಗ್ರಹವು ನನಗೆ ಉಂಟುಮಾಡಲ್ಪಡಲಿ ಎಂದನು.

೫-೮. ಕುಮಾರಸ್ವಾಮಿಯು ಹೀಗೆ ಹೇಳಲಾಗಿ ದೇವತೆಗಳೆಲ್ಲರೂ ಆ ಮಹಾತ್ಮನ ಮುಖವನ್ನು ನೋಡಿಯೇ ನಾವು ದಾನವರ ಭಯದಿಂದ ಪಾರಾದವೆಂದು ತಿಳಿದು ನಿರ್ಭಯರಾದರು. ಶಂಕರನೂ ಸಹ ಷಣ್ಮುಖನ ಪ್ರೀತಿಗಾಗಿ ಮೇಲಕ್ಕೆದ್ದು ಬ್ರಹ್ಮನನ್ನು ಅವನ ಬಲಗೈ ಹಿಡಿದು ಕರೆದುಕೊಂಡು ಹೋಗಿ ಕುಮಾರನ ಸಮೀಪದಲ್ಲಿ ಕೂರಿಸಿದನು. ಆಗ ಪಾರ್ವತಿಯು ಪುತ್ರನನ್ನು ನೋಡಿ ಶತ್ರುನಾಶಕನಾದ ಎಲೈ ಮಗನೇ, ಇಲ್ಲಿ ಬಾ. ಲೋಕಪೂಜ್ಯನಾಗಿರುವ ಈ ವಿಷ್ಣುವಿನ ಪಾದಗಳಿಗೆ ನಮಸ್ಕರಿಸು ಎಂದಳು. ಆಗ ಗುಹನು ನಗುತ್ತಾ ಅಮ್ಮಾ ಇವನು ಯಾರು, ನಮ್ಮಂತಹವರೆಲ್ಲರೂ ಇವನಿಗೆ ಆದರದಿಂದ ಪ್ರಣಾಮಮಾಡುತ್ತಿರುವೆವು. ಇವನಾ ರೆಂಬುದನ್ನು ನನಗೆ ಹೇಳು ಎಂದನು.

ತಂ ಮಾತಾ ಪ್ರಾಹ ವಚನಂ ಕೃತೇ ಕರ್ಮಣಿ ಪದ್ಮಭೂಃ ।
ವಕ್ಷ್ಯತೇ ತವ ಯೋಽಯಂಹಿ ಮಹಾತ್ಮಾ ಗರುಡಧ್ವಜಃ ॥ ೯ ॥

ಕೇವಲಂ ತ್ವಿಹ ಮಾಂ ದೇವ ತ್ವತ್ಪಿತಾ ಪ್ರಾಹ ಶಂಕರಃ ।
ನಾನ್ಯಃ ಪರತರೋಽಸ್ಮಾದ್ಧಿ ವಯಮನ್ಯೇ ಚ ದೇಹಿನಃ ॥ ೧೦ ॥

ಪಾರ್ವತ್ಯಾ ಗದಿತೇ ಸ್ಕಂದಃ ಪ್ರಣಿಪತ್ಯ ಜನಾರ್ದನಂ ।
ತಸ್ಥೌ ಕೃತಾಂಜಲಿಪುಟಸ್ತ್ವಾಜ್ಞಾಂ ಪ್ರಾರ್ಥಯತ್ಯಚ್ಯುತಾತ್ ॥ ೧೧ ॥

ಕೃತಾಂಜಲಿಪುಟಂ ಸ್ಕಂದಂ ಭಗವಾನ್ ಭೂತಭಾವನಃ ।
ಕೃತ್ವಾ ಸ್ವಸ್ತ್ಯಯನಂ ದೇವೋಽಹ್ಯನುಜ್ಞಾಂ ಪ್ರದದೌ ತತಃ ॥ ೧೨ ॥

ನಾರದ ಉವಾಚ

ಯತ್ತತ್ಸ್ವಸ್ತ್ಯಯನಂ ಪುಣ್ಯಂ ಕೃತವಾನ್ ಗರುಡಧ್ವಜಃ ।
ಶಿಖಿಧ್ವಜಾಯ ವಿಪ್ರರ್ಷೆ ತನ್ಮೇ ವ್ಯಾಖ್ಯಾತುಮರ್ಹಸಿ ॥ ೧೩ ॥

೯-೧೨. ಆಗ ತಾಯಿಯಾದ ಪಾರ್ವತಿಯು ಮಗನೇ, ನಿನ್ನ ಅಸಾಧಾರಣವಾದ ಕಾರ್ಯವು ನೆರವೇರಿಸಲ್ಪಟ್ಟಮೇಲೆ ಈ ಮಹಾತ್ಮನಾದ ಗರುಡಧ್ವಜನು ಯಾರು, ಎಂತಹ ಮಹಿಮೆಯುಳ್ಳವನೆಂಬುದನ್ನು ಬ್ರಹ್ಮನೇ ನಿನಗೆ ವಿಸ್ತಾರವಾಗಿ ಹೇಳುತ್ತಾನೆ. ನಿನ್ನ ತಂದೆಯಾದ ಶಂಕರನು ಈ ಜನಾರ್ದನನಿಗಿಂತಲೂ ಮೇಲ್ಪಟ್ಟ ದೇವತೆಯು ಯಾರೂ ಇಲ್ಲ. ನಾನೂ ಇತರ ದೇವತೆಗಳೂ ಕೂಡ ಇವನಿಗಿಂತ ಕೆಳಮಟ್ಟದ ಚೇತನರು ಮಾತ್ರವೇ ಎಂದು ನನ್ನಲ್ಲಿ ಇಷ್ಟುಮಾತ್ರ ಹೇಳಿದ್ದಾನೆ ಎಂದಳು. ಪಾರ್ವತಿಯು ಹೀಗೆ ಹೇಳಿದೊಡನೆಯೇ ಸ್ಕಂದನು ಜನಾರ್ದನನನ್ನು ನಮಸ್ಕರಿಸಿ ಅಂಜಲಿಬಂಧಪೂರ್ವಕವಾಗಿ ಅವನ ಆಜ್ಞಾಪೇಕ್ಷಿಯಾಗಿ ನಿಂತನು. ಅಂತಹ ಭಕ್ತಿ ನಮ್ರನಾದ ಸ್ಕಂದನನ್ನು ನೋಡಿ ಸರ್ವಭೂತನಿಯಾಮಕನಾದ ವಿಷ್ಣುವು ಅವನಿಗೆ ಮಂಗಳವನ್ನು ಆಶಾಸನಮಾಡಿ ಅಪ್ಪಣೆಯಿತ್ತನು.

೧೩-೧೬. ಆಗ ನಾರದರು ಪುಲಸ್ತ್ಯರನ್ನು ಕುರಿತು ಗರುಡಧ್ವಜನಾದ ವಿಷ್ಣುವು ಕುಮಾರಸ್ವಾಮಿಗೆ ಮಾಡಿದ ಪುಣ್ಯಕರವಾದ ಆ ಮಂಗಲಾಶಂಸೆಯನ್ನು ದಯವಿಟ್ಟು ಹೇಳಬೇಕೆಂದು ಪ್ರಶ್ನಿಸಲಾಗಿ ಪುಲಸ್ತ್ಯರು ಕೇಳು ಪೂಜ್ಯನಾದ ಗರುಡ

ಪುಲಸ್ತ್ಯ ಉವಾಚ

ಶೃಣು ಸ್ವಸ್ತ್ಯಯನಂ ಪುಣ್ಯಂ ಯತ್ಪ್ರಾಹ ಭಗವಾನ್ ಹರಿಃ ।
ಸ್ಕಂದಸ್ಯ ವಿಜಯಾರ್ಥಾಯ ವಧಾಯ ಮಹಿಷಸ್ಯ ಚ ॥ ೧೪ ॥

ಓಂಸ್ವಸ್ತಿ ಕುರುತಾಂ ಬ್ರಹ್ಮಾ ಪದ್ಮಯೋನೀರಜೋಗುಣಃ ।
ಸ್ವಸ್ತಿಚಕ್ರಾಂಕಿತಕರೋ ವಿಷ್ಣುಸ್ತೇ ವಿದಧಾತ್ವಜಃ ॥ ೧೫ ॥

ಸ್ವಸ್ತಿ ತೇ ಶಂಕರೋ ಭಕ್ತ್ಯಾ ಸಪತ್ನಿಕೋ ವೃಷಧ್ವಜಃ ।
ಪಾವಕಃ ಸ್ವಸ್ತಿ ತುಭ್ಯಂ ಚ ಕರೋತು ಶಿಖಿವಾಹನಃ ॥ ೧೬ ॥

ದಿವಾಕರಃ ಸ್ವಸ್ತಿಕರೋಽಸ್ತುತೇ ಸದಾ
ಸೋಮಃ ಸಭೌಮಃ ಸಬುಧೋ ಗುರುಶ್ಚ ।
ಕಾವ್ಯಃ ಸದಾ ಸ್ವಸ್ತಿಕರೋಽಸ್ತು ತುಭ್ಯಂ
ಶನೈಶ್ಚರಃ ಸ್ವಸ್ತ್ಯಯನಂ ಕರೋತು ॥ ೧೭ ॥

ಮರೀಚಿರತ್ರಿಃ ಪುಲಹಃ ಪುಲಸ್ತ್ಯಃ
ಕ್ರತುರ್ವಸಿಷ್ಠೋ ಭೃಗುರಂಗಿರಾಶ್ಚ ।

ಧ್ವಜನು ಮಹಿಷನ ನಾಶಕ್ಕಾಗಿಯೂ, ಅದರಿಂದ ಆಗಬಹುದಾದ ಸ್ಕಂದನ ವಿಜಯಕ್ಕಾಗಿಯೂ, ಪುಣ್ಯಕರವಾದ ಈ ಮಂಗಲಗಳನ್ನು ಹರಸಿದನು. ಪದ್ಮೋದ್ಭವನಾಗಿಯೂ, ರಜೋಗುಣಪ್ರಧಾನನಾಗಿಯೂ ಇರುವ ಬ್ರಹ್ಮನು ನಿನಗೆ ಮಂಗಲವನ್ನುಂಟುಮಾಡಲಿ. ಚಕ್ರಪಾಣಿಯಾಗಿಯೂ, ಅವ್ಯಯನಾಗಿಯೂ ಇರುವ ವಿಷ್ಣುವು ನಿನಗೆ ಮಂಗಲವನ್ನುಂಟುಮಾಡಲಿ. ಭಕ್ತನಾದ ನಿನಗೆ ಸಪತ್ನೀಕನಾದ ಶಂಕರನು ಮಂಗಲವನ್ನುಂಟುಮಾಡಲಿ. ಅಗ್ನಿಯೂ ನಿನಗೆ ಮಂಗಲವನ್ನುಂಟು ಮಾಡಲಿ.

೧೭-೨೦. ಮತ್ತು ಸೂರ್ಯ, ಚಂದ್ರ, ಅಂಗಾರಕ, ಬುಧ, ಗುರು, ಶುಕ್ರ, ಶನಿ ಇವರುಗಳೂ ನಿನಗೆ ಸರ್ವಕಾಲದಲ್ಲೂ ಮಂಗಲವನ್ನೀಯಲಿ, ಹಾಗೂ ಮರೀಚ, ಅತ್ರಿ, ಪುಲಹ, ಪುಲಸ್ತ್ಯ, ಕ್ರತು, ವಸಿಷ್ಠ, ಭೃಗು, ಆಂಗಿರಸ, ಬುಧ ಇವರೂ ಗಗನದಲ್ಲಿ ಶಾಶ್ವತವಾಗಿ ಸ್ಥಿತಿಹೊಂದಿರುವ ಸಪ್ತರ್ಷಿಗಳೂ ಸಹ ನಿನಗೆ ಮಂಗಲ

ಮೃಗಾಂಕಜಸ್ತೇ ಕುರುತಾದ್ಧಿ ಮಂಗಲಂ
ಮಹರ್ಷಯಸ್ಸಪ್ತದಿವಿ ಸ್ಥಿತಾಶ್ಚಯೇ ॥ ೧೮ ॥

ವಿಶ್ವಶ್ವಿನೌ ಸಾಧ್ಯ ಮರುದ್ಗಣಾಗ್ನಯೋ
ದಿವಾಕರಾಃ ಶೂಲಧರಾ ಮಹೇಶ್ವರಾಃ ।
ಯಕ್ಷಾಃ ಪಿಶಾಚಾ ವಸವೋಥ ಕಿನ್ನರಾಸ್ತೇ
ಸ್ವಸ್ತಿ ಕುರ್ವಂತು ಸದೋದ್ಯತಾಸ್ತ್ವಮಿಾ ॥ ೧೯ ॥

ನಾಗಾಃ ಸುಪರ್ಣಾಃ ಸರಿತಃ ಸರಾಂಸಿ
ತೀರ್ಥಾನಿ ಪುಣ್ಯಾನಿ ಹ್ರದಾಃ ಸಮುದ್ರಾಃ ।
ಮಹಾಬಲಾ ಭೂತಗಣಾ ಗಣೇಂದ್ರಾ
ಸ್ತೇಸ್ವಸ್ತಿ ಕುರ್ವಂತು ಸದೋದ್ಯತಾಸ್ತ್ವಮಿಾ ॥ ೨೦ ॥

ಸ್ವಸ್ತಿದ್ವಿಪಾದಿಕೇಭ್ಯಶ್ಚ ಚತುಷ್ಪಾದೇಭ್ಯ ಏವ ಚ ।
ಸ್ವಸ್ತಿತೇ ಬಹುಪಾದೇಭ್ಯಃ ಅಪಾದೇಭ್ಯೋಽಸ್ತ್ವನಾಮಯಂ ॥ ೨೧ ॥

ಪ್ರಾಗ್ದಿಶಂ ರಕ್ಷತಾದ್ವಜ್ರೀ ದಕ್ಷಿಣಾಂ ದಂಡನಾಯಕಃ ।
ಪಾಶೀ ಪ್ರತೀಚೀಮವತು ಯಕ್ಷೇಶಃ ಪಾತು ಚೋತ್ತರಾಂ ॥ ೨೨ ॥

ವನ್ನುಂಟುಮಾಡಲಿ, ಮತ್ತು ವಿಶ್ವೆದೇವತೆಗಳೂ, ಅಶ್ವಿನೀ ದೇವತೆಗಳೂ, ಸಾಧ್ಯರು, ಮರುತ್ತುಗಳು, ಅಗ್ನಿಗಳು, ದ್ವಾದಶಾದಿತ್ಯರು, ಶೂಲಧಾರಿಗಳಾದ ಏಕಾದಶ ರುದ್ರರು, ಯಕ್ಷರು, ಪಿಶಾಚಿಗಳು, ಅಷ್ಟವಸುಗಳು, ಕಿನ್ನರರು, ಇವರೂ ಸಹ ಯಾವಾಗಲೂ ಸಿದ್ಧರಾಗಿದ್ದು ನಿನಗೆ ಮಂಗಲವನ್ನುಂಟುಮಾಡಲಿ. ಸರ್ಪಗಳು, ಸುಪರ್ಣಗಳು, ನದಿಗಳು, ಸರೋವರಗಳು, ಪುಣ್ಯತೀರ್ಥಗಳು, ಪುಣ್ಯಹ್ರದಗಳು, ಸಮುದ್ರಗಳು ಬಲಶಾಲಿಗಳಾದ ಭೂತಗಣಗಳು, ಆ ಗಣೇಶ್ವರರು ಇವರೆಲ್ಲರೂ ಯಾವಾಗಲೂ ಸಿದ್ಧ ರಾಗಿದ್ದು ನಿನಗೆ ಮಂಗಲವನ್ನುಂಟುಮಾಡಲಿ.

೨೧-೨೨. ಮತ್ತು ಎರಡು ಪಾದವುಳ್ಳ ಪ್ರಾಣಿಗಳಿಂದಲೂ, ನಾಲ್ಕು ಪಾದ ವುಳ್ಳ ಪ್ರಾಣಿಗಳಿಂದಲೂ, ಬಹುಪಾದವುಳ್ಳ ಮತ್ತು ಪಾದವಿಲ್ಲದ ಪ್ರಾಣಿಗಳಿಂದಲೂ ನಿನಗೆ ಮಂಗಲವಾಗಲಿ. ನಿನ್ನ ಪೂರ್ವ ದಿಕ್ಕನ್ನು ಇಂದ್ರನೂ, ದಕ್ಷಿಣ ದಿಕ್ಕನ್ನು ಯಮನೂ, ಪಶ್ಚಿಮ ದಿಕ್ಕನ್ನು ವರುಣನೂ, ಉತ್ತರ ದಿಕ್ಕನ್ನು ಕುಬೇರನೂ ರಕ್ಷಿಸಲಿ.

ವಹ್ನಿರ್ದಕ್ಷಿಣಪೂರ್ವಾಂ ತು ಕುಬೇರೋ ದಕ್ಷಿಣಾಪರಾಂ ।
ಪ್ರತೀಚೀಮುತ್ತರಾಂ ವಾಯುಃ ಶಿವಃ ಪೂರ್ವೋತ್ತರಾಮಪಿ ॥ ೨೩ ॥

ಉಪರಿಷ್ಟಾತ್ ಭುವಃ ಪಾತು ಹ್ಯಧಸ್ತಾಚ್ಚ ಧರಾಧರಃ ।
ಮುಸಲೀ ಲಾಂಗಲೀ ವಜ್ರೀ ಧನುಷ್ಮಾನಂತರೇಷು ತು ॥ ೨೪ ॥

ವಾರಾಹೋಂಬುನಿಧೌ ಪಾತು ದುರ್ಗೆ ಪಾತು ನೃಕೇಸರೀ ।
ಸಾಮವೇದಧ್ವನಿಃ ಶ್ರೀಮಾನ್ ಸರ್ವತಃ ಪಾತು ಮಾಧವಃ ॥ ೨೫ ॥

ಪುಲಸ್ತ್ಯ ಉವಾಚ

ಏವಂ ಕೃತಸ್ವಸ್ತ್ಯಯನೋ ಗುಹಃ ಶಕ್ತಿಧರೋಽಗ್ರಣೀಃ ।
ಪ್ರಣಿಪತ್ಯ ಸುರಾನ್ ಸರ್ವಾನ್ ಭೂತಲಾದುತ್ಪಪಾತ ಖಂ ॥ ೨೬ ॥

ತಮನ್ವೇ ಚ ಗಣಾಸ್ಸರ್ವೇ ದೇವಾಶ್ಚ ಮುನಿದೈವತೈಃ ।
ಅನುಜಗ್ಮುಃ ಕುಮಾರಂ ತೇ ಕಾಮರೂಪಾ ವಿಹಂಗಮಾಃ ॥ ೨೭ ॥

ಮಾತರಶ್ಚ ತಥಾ ಸರ್ವಾಃ ಸಮುತ್ಪೇತುರ್ನಭಸ್ತಲಂ ।
ಸಮಂ ಸ್ಕಂದೇನ ಬಲಿನಾ ಹಂತುಕಾಮಾ ಮಹಾಸುರಾನ್ ॥ ೨೮ ॥

೨೩-೨೪. ಮತ್ತು ಅಗ್ನಿಯು ಆಗ್ನೇಯ ದಿಕ್ಕನ್ನೂ, ಕುಬೇರನು ನೈಋತ್ಯ ದಿಕ್ಕನ್ನೂ, ವಾಯುವು ವಾಯವ್ಯ ದಿಕ್ಕನ್ನೂ, ಶಿವನು ಈಶಾನ್ಯ ದಿಕ್ಕನ್ನೂ ನಿನಗಾಗಿ ರಕ್ಷಿಸಲಿ. ಭೂಮಿಯ ಮೇಲ್ಭಾಗದಲ್ಲೂ ಕೆಳಭಾಗದಲ್ಲೂ ಮೇಘಗಳು ರಕ್ಷಿಸಲಿ. ಮಧ್ಯದ ಅಂತರಗಳಲ್ಲಿ ಮುಸಲ ಲಾಂಗಲ ಧಾರಿಯಾದ ರಾಮನೂ ಧನುರ್ಧಾರಿಯಾದ ಇಂದ್ರನೂ ರಕ್ಷಿಸಲಿ.

೨೫-೨೮. ವಾರಾಹಮೂರ್ತಿಯು ಜಲಮಧ್ಯದಲ್ಲೂ, ನೃಸಿಂಹನು ದುರ್ಗಸ್ಥಾನಗಳಲ್ಲೂ, ಸಾಮವೇದಧ್ವನಿಯುಳ್ಳ ಮಾಧವನು ಎಲ್ಲಾ ಕಡೆಯಲ್ಲೂ ನಿನ್ನನ್ನೂ ರಕ್ಷಿಸಲಿ. ಈ ಪ್ರಕಾರ ವಿಷ್ಣುವಿನಿಂದ ಹರಸಲ್ಪಟ್ಟ ಗುಹನು ಶಕ್ತ್ಯಾಯುಧಧಾರಿಯಾಗಿ ಸೇನೆಯ ಮುಂದಾಳಾಗಿ ದೇವತೆಗಳೆಲ್ಲರನ್ನೂ ನಮಸ್ಕರಿಸಿ ಭೂಮಿಯಿಂದ ಆಕಾಶಕ್ಕೆ ಹಾರಿದನು. ಅನಂತರ ಅಲ್ಲಿದ್ದ ಇತರ ಗಣಗಳೂ, ದೇವತೆಗಳೂ, ಮುನಿಶ್ರೇಷ್ಠರೂ ಕಾಮರೂಪಿಗಳಾಗಿ ಆಕಾಶಗಾಮಿಗಳಾಗಿ ಆ ಕುಮಾರಸ್ವಾಮಿಯನ್ನು ಅನುಸರಿಸಿ ಹಾರಿದರು. ಮಾತೃಗಣಗಳೂ ಸಹ ಮಹಾಸುರರನ್ನು ಕೊಲ್ಲಲು ಇಚ್ಛೆಯಿಂದ ಬಲಶಾಲಿಯಾದ ಕುಮಾರಸ್ವಾಮಿಯೊಡನೆ ಆಕಾಶಕ್ಕೆ ಹಾರಿಹೊರಟರು.

ತತಃ ಸುದೀರ್ಘಮಧ್ವಾನಂ ಗತ್ವಾ ಸ್ಕಂದೋಽಬ್ರವೀದ್ಗಣಾನ್ ।
ಭೂಮ್ಯಾಂ ತೂರ್ಣಂ ಮಹಾವೀರ್ಯಾಃ ಕುರುಧ್ವಮವತಾರಣಂ ॥ ೨೯ ॥

ಗಣಾ ಗುಹವಚಃ ಶ್ರುತ್ವಾ ಅವತೀರ್ಯ ಮಹೀತಲಂ ।
ಆರಾತ್ಪರ್ವತಮಭ್ಯೇತ್ಯ ನಾದಂ ಚಕ್ರುರ್ಭಯಂಕರಂ ॥ ೩೦ ॥

ತನ್ನಿನಾದೋ ಮಹೀಂ ಸರ್ವಾಮಾಪೂರ್ಯ ಚ ನಭಸ್ತಲಂ ।
ವಿವೇಶಾರ್ಣವರಂಧ್ರೇಣ ಪಾತಾಲಂ ದಾನವಾಲಯಂ ॥ ೩೧ ॥

ಶ್ರುತಃ ಸ ಮಹಿಷೇಣಾಥ ತಾರಕೇಣ ಚ ಧೀಮತಾ ।
ವಿರೋಚನೇನ ಕುಂಭೇನ ನಿಕುಂಭೇನಾಸುರೇಣ ಚ ॥ ೩೨ ॥

ಶ್ರುತ್ವಾ ಚ ಸಹಸಾ ನಾದಂ ವಜ್ರಪಾತೋಪಮಂ ದೃಢಂ ।
ಕಿಮೇತದಿತಿ ಸಂಚಿಂತ್ಯ ತೂರ್ಣಂ ಜಗ್ಮುಸ್ತದಾಂಧಕಂ ॥ ೩೩ ॥

ತೇ ಸಮೇತ್ಯಾಂಧಕೇನೈವ ಸಮಂ ದಾನವಪುಂಗವಾಃ ।
ಮಂತ್ರಯಾಮಾಸುರುದ್ವಿಗ್ನಾಸ್ತಚ್ಛಬ್ದಂ ಪ್ರತಿ ನಾರದ ॥ ೩೪ ॥

೨೯-೩೨. ಅನಂತರ ಆಕಾಶಮಾರ್ಗದಲ್ಲಿ ಬಹುದೂರ ಧಾವಿಸಿ ಸ್ಕಂದನು ಆ ಗಣಗಳನ್ನು ಕುರಿತು ಎಲೈ ವೀರರೇ, ತ್ವರೆಯಿಂದ ನೀವು ಭೂಮಿಯಲ್ಲಿಳಿಯಿರಿ ಎಂದು ಸಲಹೆಕೊಡಲು ಆ ಮಾತನ್ನು ಕೇಳಿದ ಗಣಗಳೆಲ್ಲವೂ ಭೂಮಿಗೆ ಇಳಿದು ಸಮೀಪದಲ್ಲಿರುವ ಪರ್ವತಕ್ಕೆ ಹೋಗಿ ಸೇರಿ ಭಯಂಕರವಾದ ತಮ್ಮ ವೀರನಾದವನ್ನು ಮಾಡಲುಪಕ್ರಮಿಸಿದರು. ಆ ಸಿಂಹನಾದವಾದರೋ ಭೂಮಿಯನ್ನೆಲ್ಲಾ ಆವರಿಸಿ ಆಕಾಶಮಾರ್ಗದಲ್ಲೂ ವಿಸ್ತಾರಹೊಂದಿ ಸಮುದ್ರದ ರಂಧ್ರದಿಂದ ದಾನವರ ವಾಸಸ್ಥಾನವಾದ ಪಾತಾಲಲೋಕವನ್ನೂ ವ್ಯಾಪಿಸಿತು. ಆಗ ಮಹಿಷನೂ, ಬುದ್ಧಿಶಾಲಿಯಾದ ತಾರಕನೂ, ವಿರೋಚನ, ಕುಂಭನಿಕುಂಭರೂ ಸಹ ಆ ಧ್ವನಿಯನ್ನು ಲಕ್ಷಿಸಿ ಕೇಳಿದರು.

೩೩-೩೬. ಒಡನೆಯೇ ಅವರು ವಜ್ರಧ್ವನಿಗೆ ಸಮಾನವಾದ ಈ ನಾದವು ಆಕಸ್ಮಿಕವಾಗಿ ಹೇಗೆ ಉಂಟಾಯಿತು. ಇದೇನು ಎಂದು ಕರ್ತವಿತರ್ಕಗಳಿಂದ ಆಲೋಚಿಸಿ ಧೊರೆಯಾದ ಅಂಧಕನ ಸಮೀಪಕ್ಕೆ ಹೋದರು. ಅಲ್ಲಿ ಆ ದಾನವರೆಲ್ಲರೂ ಸೇರಿ ಅಂಧಕನೊಡನೆ ಆ ಶಬ್ದವನ್ನು ಕುರಿತು ಬಹಳ ಚಿಂತಾಕ್ರಾಂತರಾಗಿ

ಮಂತ್ರಯತ್ಸು ಚ ದೈತ್ಯೇಷು ಪಾತಾಲಾತ್ಸೂಕರಾನನಃ ।
ಪಾತಾಲಕೇತುಃ ದೈತ್ಯೇಂದ್ರಃ ಸಂಪ್ರಾಪ್ತೋಽಥ ರಸಾತಲಂ ॥ ೩೫ ॥

ಸಬಾಣವಿದ್ಧೋ ವ್ಯಥಿತಃ ಕಂಪಮಾನೋ ಮುಹುರ್ಮುಹುಃ ।
ಅಬ್ರವೀದ್ವಚನಂ ದೀನಂ ಸಮಭ್ಯೇತ್ಯಾಂಧಕಾಸುರಂ ॥ ೩೬ ॥

ಪಾತಾಲಕೇತುರುವಾಚ

ಗತೋಽಹಮಾಸಂ ದೈತೇಂದ್ರ ಗಾಲವಸ್ಯಾಶ್ರಮಂ ಪ್ರತಿ ।
ತದ್ವಿಧ್ವಂಸಯಿತುಂ ಯತ್ನಃ ಸಮಾರಬ್ಧೋ ಬಲಾನ್ಮಯಾ ॥ ೩೭ ॥

ಯಾವತ್ಸೂಕರರೂಪೇಣ ಪ್ರವಿಶಾಮಿ ತದಾಶ್ರಮಂ ।
ನ ಜಾನೇಽಹಂ ನರಂ ರಾಜನ್ಯೇನ ಮೇ ಪ್ರಹಿತಃ ಶರಃ ॥ ೩೮ ॥

ಶರಸಂಭಿನ್ನಜತ್ರುಶ್ಚ ಭಯಾರ್ತಶ್ಚ ಮಹಾಜವಃ ।
ಪ್ರಪಲಾಯ್ಯಾಶ್ರಮಾತ್ತಸ್ಮಾತ್ಸಚ ಮಾಂ ಪೃಷ್ಠತೋಽನ್ವಗಾತ್ ॥ ೩೯ ॥

ಮಂತ್ರಾಲೋಚನೆಯನ್ನು ನಡೆಸಿದರು. ಆ ದೈತ್ಯರು ಹೀಗೆ ಮಂತ್ರಾಲೋಚನೆ ನಡೆಸುತ್ತಿರುವಾಗಲೇ ಅದರ ಫಲವಾಗಿ ಹಂದಿಯಂತೆ ಮುಖವುಳ್ಳ ಪಾತಾಲಕೇತು ವೆಂಬ ದೈತ್ಯಮುಖ್ಯನು ಆ ಪಾತಾಲಕ್ಕೆ ಬಂದು ಸೇರಿದನು. ಅವನು ಬಾಣಗಳಿಂದ ಹೊಡೆಯಲ್ಪಟ್ಟು ದುಃಖದಿಂದ ಬಾರಿಬಾರಿಗೂ ನಡುಗುತ್ತಾ ಅಂಧಕನ ಸಮೀಪಕ್ಕೆ ಬಂದು ಬಹಳ ದೈನ್ಯದಿಂದ ಹೀಗೆ ಹೇಳುತ್ತಾನೆ.

೩೭-೪೦. ಎಲೈ ದೈತ್ಯರಾಜನೇ, ನಾನು ಗಾಲವರ ಆಶ್ರಮಕ್ಕೆ ಹೋಗಿದ್ದೆನು. ಅವರ ಆ ಆಶ್ರಮವನ್ನು ಧ್ವಂಸಮಾಡಲು ಯತ್ನಿಸಿ ಹಂದಿಯ ರೂಪವನ್ನು ಧರಿಸಿ ಆಶ್ರಮವನ್ನು ಪ್ರವೇಶಿಸುವಷ್ಟರಲ್ಲಿಯೇ ಯಾವ ಮನುಷ್ಯನಿಂದ ನನಗೆ ಬಾಣವು ಹೊಡೆಯಲ್ಪಟ್ಟಿತೋ ಅವನನ್ನು ನಾನು ತಿಳಿಯಲಾಗಲಿಲ್ಲ. ಅವನ ಬಾಣದಿಂದ ದೇಹದ ಸಂಧಿಬಂಧವು ಭಿನ್ನವಾದುದರಿಂದ ಭಯಾರ್ತನಾಗಿ ವೇಗದಿಂದ ಓಡಿದೆನು. ಆಗ ಆಶ್ರಮದಿಂದ ನನ್ನನ್ನು ಒಬ್ಬನು ಓಡಿಸಿಕೊಂಡು ಬಂದನು. ಸೂಕರರೂಪಿ

ತುರಂಗಖುರನಿರ್ಘೋಷಃ ಶ್ರೂಯತೇ ಪರಮೋಽಸುರ ।
ತಿಷ್ಠ ತಿಷ್ಠೇತಿ ವದತಃ ಸೂಕರಸ್ಯ ಚ ಪೃಷ್ಠತಃ ।
ತದ್ಭಯಾದಸ್ಮಿ ಜಲಧಿಂ ಸಂಪ್ರಾಪ್ತೋ ದಕ್ಷಿಣಾರ್ಣವಂ ॥ ೪೦ ॥

ಯಾವತ್ಪಶ್ಯಾಮಿ ತತ್ರಸ್ಥಾನ್ನಾನಾವೇಷಾಕೃತೀನ್ನರಾನ್ ।
ಕೇಚಿದ್ಗರ್ಜಂತಿ ಘನವತ್ಪ್ರತ್ಯಗರ್ಜಂಸ್ತಥಾ ಪರೆ ॥ ೪೧ ॥

ಅನ್ಯೇ ಚೋಚುರ್ವಯಂ ನೂನಂ ನಿಹನ್ಮೋ ಮಹಿಷಾಸುರಂ ।
ತಾರಕಂ ಘಾತಯಾಮೋದ್ಯ ವದಂತ್ಯನ್ಯೇ ಸುತೇಜಸಃ ॥ ೪೨ ॥

ತಚ್ಛ್ರುತ್ವಾ ಸುತರಾಂ ತ್ರಾಸೋ ಮಮ ಜಾತೋಽಸುರೇಶ್ವರ ।
ಮಹಾರ್ಣವಂ ಪರಿತ್ಯಜ್ಯ ಪತಿತೋಽಸ್ಮಿ ಭಯಾತುರಃ ॥ ೪೩ ॥

ಧರಣ್ಯಾಂ ವಿವೃತಂಗರ್ತಂ ಸಮಾಮನ್ವವಪದ್ಬಲೀ ।
ತದ್ಭಯಾತ್ಸಂಪರಿತ್ಯಜ್ಯ ಹಿರಣ್ಯಪುರಮಾತ್ಮನಃ ॥ ೪೪ ॥

ಯಾಗಿದ್ದ ನನ್ನ ಹಿಂದೆ ನಿಲ್ಲು ನಿಲ್ಲು ಎಂದು ಹೇಳುತ್ತಾ ಓಡಿಬಂದನು. ಅವನು ಬರುವಾಗ ಕುದುರೆಗಳ ಕಾಲಿನ ಅದ್ಭುತವಾದ ಶಬ್ದವು ಕೇಳಿ ಬರುತ್ತಿತ್ತು. ಅವನಿಗೆ ಭಯಪಟ್ಟ ನಾನು ದಕ್ಷಿಣ ಸಮುದ್ರಕ್ಕೆ ಪ್ರವೇಶಿಸಿದೆನು.

೪೧-೪೪. ಆಗ ಸಮುದ್ರದಲ್ಲಿ ಪ್ರವೇಶಿಸಿದ ನಾನು ತಿರುಗಿ ನೋಡುವಾಗ ಅಲ್ಲಿ ನಾನಾವಿಧವಾದ ವೇಷ ಮತ್ತು ಆಕಾರವುಳ್ಳ ಜನರನ್ನು ನೋಡಿದೆನು. ಅವರಲ್ಲಿ ಕೆಲವರು ಗರ್ಜಿಸುತ್ತಲೂ. ಕೆಲವರು ಪ್ರತಿಗರ್ಜಿಸುತ್ತಲೂ ಇದ್ದರು. ಮತ್ತೆ ಕೆಲವರು ಮಹಿಷನನ್ನು ನಾವೇ ಕೊಲ್ಲುವೆವೆಂದೂ ಇನ್ನು ಕೆಲವರು ತಾರಕನನ್ನು ನಾವೇ ಕೊಲ್ಲುವೆವೆಂದೂ ತೇಜಸ್ವಿಗಳಾಗಿ ವಾದಿಸುತ್ತಿದ್ದರು. ಅದನ್ನು ಕೇಳಿ ಎಲೈ ಧೊರೆಯೇ, ಸತ್ಯವಾಗಿಯೂ ನನಗೆ ಭಯವೇ ಆಯಿತು. ಆಗ ಆ ಮಹಾಸಮುದ್ರವನ್ನು ಬಿಟ್ಟು ಭಯದಿಂದ ಇಲ್ಲಿಗೆ ಓಡಿಬಂದೆನು. ನಾನು ಭೂಮಿಯ ಗರ್ತವನ್ನು ಹೊಕ್ಕು ಬರುವಾಗ ಅಲ್ಲಿಗೂ ಆ ಬಲಿಷ್ಠನು ಅನುಸರಿಸಿ ಬಂದನು. ಆ ಭಯದಿಂದ ನನ್ನ ಹಿರಣ್ಯಪುರವನ್ನೂ ಬಿಟ್ಟು

ತವಾಂತಿಕಮನುಪ್ರಾಪ್ತಃ ಪ್ರಸಾದಂ ಕರ್ತುಮರ್ಹಸಿ ।
ತಚ್ಛ್ರುತ್ವಾ ಚಾಂಧಕೋ ವಾಕ್ಯಂ ಪ್ರಾಹ ಮೇಘಸ್ವನಂ ವಚಃ ॥ ೪೫ ॥

ನಭೇತವ್ಯಂ ತ್ವಯಾ ತಸ್ಮಾತ್ಸತ್ಯಂ ಗೋಪ್ತಾಸ್ಮಿ ದಾನವ ।
ಮಹಿಷಸ್ತಾರಕಶ್ಚೋಗ್ರೋ ಬಾಣಶ್ಚ ಬಲಿನಂದನಃ ॥ ೪೬ ॥

ಅನಾಖ್ಯಾಯ್ಯೈವ ತೇ ವೀರಾಸ್ತ್ವಂಧಕಂ ಮಹಿಷಾದಯಃ ।
ಸ್ವಪರಿಗ್ರಹಸಂಯುಕ್ತಾ ಭೂಮೌ ಯುದ್ಧಾಯ ನಿರ್ಯಯುಃ ॥ ೪೭ ॥

ಯತ್ರ ತೇ ದಾರುಣಾಕಾರಾ ಗಣಾಶ್ಚಕ್ರುರ್ಮಹಾಸ್ವನಂ ।
ತತ್ರ ದೈತ್ಯಾಃ ಸಮಾಜಗ್ಮುಃ ಸಾಯುಧಾಸ್ಸಬಲಾ ಮುನೇ ॥ ೪೮ ॥

ದೈತ್ಯಾನಾಂ ಪತಯೋ ದೃಷ್ಟ್ವಾ ಕಾರ್ತಿಕೇಯಗಣಾಂಸ್ತತಃ ।
ಅಭ್ಯದ್ರವಂತ ಸಹಸಾ ತೇಚೋಗ್ರಂ ಮಾತೃಮಂಡಲಂ ॥ ೪೯ ॥

ತೇಷಾಂ ಪುರಸ್ಸರಃ ಸ್ಥಾಣುಃ ಪ್ರಗೃಹ್ಯ ಪರಿಘಂ ಬಲೀ ।
ನ್ಯಷೂದಯತ್ಪರಬಲಂ ಕ್ರುದ್ಧೋ ರುದ್ರಃ ಪಶೂನಿವ ॥ ೫೦ ॥

ತಂ ನಿಘ್ನಂತಂ ಮಹಾದೇವಂ ನಿರೀಕ್ಷ್ಯ ಕಲಶೋದರಃ ।
ಕುಠಾರಂ ಪಾಣಿನಾದಾಯ ಹಂತಿ ಸರ್ವಾನ್ಮಹಾಸುರಾನ್ ॥ ೫೧ ॥

೪೫-೪೯. ನಿನ್ನಲ್ಲಿ ಬಂದಿದ್ದೇನೆ. ನೀನು ಅನುಗ್ರಹಮಾಡಿ ನನ್ನನ್ನು ರಕ್ಷಿಸು ಎಂದನು. ಆ ಮಾತನ್ನು ಕೇಳಿ ಅಂಧಕನು ಅವನನ್ನು ಕುರಿತು ನೀನು ಭಯಪಡಬೇಡ. ನಾನು ನಿನ್ನನ್ನು ರಕ್ಷಿಸುವೆನೆಂದು ಸಮಾಧಾನಪಡಿಸಿದನು. ಆ ಸಮಯದಲ್ಲಿ ಮಹಿಷ, ತಾರಕ, ಬಲಿಪುತ್ರನಾದ ಬಾಣ ಇವರು ಈ ವೃತ್ತಾಂತವನ್ನು ಕೇಳಿ ತಮ್ಮ ತಮ್ಮ ಪರಿಕರಗಳೊಡನೆ ಅಂಧಕನಿಗೆ ತಿಳಿಯಪಡಿಸದಂತೆಯೇ ಭೂಮಿಯಲ್ಲಿ ಯುದ್ಧಕ್ಕಾಗಿ ಹೊರಟರು. ಎಲ್ಲಿ ಆ ಗಣಗಳು ಭಯಂಕರವಾದ ಸಿಂಹನಾದಮಾಡುತ್ತಿದ್ದರೋ ಅಲ್ಲಿಗೇ ಈ ದೈತ್ಯರು ಆಯುಧಸಹಿತರಾಗಿ ಬಂದು ಸೇರಿದರು. ಆ ದೈತ್ಯಮುಖ್ಯರು ಷಣ್ಮುಖನ ಗಣಗಳನ್ನು ನೋಡಿ ಅಲ್ಲಿದ್ದ ಮಾತೃಮಂಡಲದ ಮೇಲೆ ವೇಗದಿಂದ ಎರಗಿದರು.

೫೦-೫೧. ಅವರಲ್ಲಿ ಮುಂದಾಳಾದ ಸ್ಥಾಣುವು ಪರಿಘಾಯುಧಧಾರಿಯಾಗಿ ಕಾಲರುದ್ರನು ಪಶುಗಳನ್ನು ಕೊಲ್ಲುವಂತೆ ಶತ್ರುಬಲವನ್ನು ನಾಶಪಡಿಸತೊಡಗಿದನು. ಹಾಗೆ ಕಾದುತ್ತಿರುವ ಅವನನ್ನು ನೋಡಿ ಕಲಶೋದರನು ಕೈಯ್ಯಲ್ಲಿ ಕೊಡಲಿಯನ್ನು

ಜ್ವಾಲಾಮುಖೋ ಭಯಂಕರಃ ಕರೇಣಾದಾಯ ಚಾಸುರಂ ।
ಸರಥಂ ಸಗಜಂ ಸಾಶ್ವಂ ವಿಸ್ತೃತೇ ವದನೇಽಕ್ಷಿಪತ್ ॥ ೫೨ ॥

ದಂಡಕಶ್ಚಾಪಿ ಸಂಕ್ರುದ್ಧಃ ಪ್ರಾಸಪಾಣಂ ಮಹಾಸುರಂ ।
ಸವಾಹನಂ ಪ್ರಕ್ಷಿಪತಿ ಸಮುತ್ಪಾಟ್ಯ ಮಹಾರ್ಣವೇ ॥ ೫೩ ॥

ಶಂಕುಕರ್ಣಶ್ಚ ಮುಸಲೀ ಹಲೇನಾಹತ್ಯ ದಾನವಾನ್ ।
ಸಂಚೂರ್ಣಯತಿ ಮಂತ್ರೀವ ರಾಜಾನಂ ಹೀನಪೌರುಷಂ ॥ ೫೪ ॥

ಖಡ್ಗಚರ್ಮಧರೋ ವೀರಃ ಪುಷ್ಪದಂತೋ ಗಣೇಶ್ವರಃ ।
ದ್ವಿಧಾ ತ್ರಿಧಾ ಚ ಬಹುಧಾ ಚಕ್ರೇ ದೈತೇಯದಾನವಾನ್ ॥ ೫೫ ॥

ಪಿಂಗಲೋ ದಂಡಮುಂಡ್ಯೈಶ್ಚ ಯತ್ರ ಯತ್ರ ಪ್ರಧಾವತಿ ।
ತತ್ರ ತತ್ರ ಪ್ರದೃಶ್ಯಂತೇ ರಾಶಯಃ ಸರ್ವದಾನವೈಃ ॥ ೫೬ ॥

ಸಹಸ್ರನಯನಃ ಶೂಲಂ ಭ್ರಾಮಯನ್ ವೈ ಗಣಾಗ್ರಣೀಃ ।
ನಿಜಘಾನಾಸುರಾನ್ ವೀರಃ ಸವಾಜಿರಥಕುಂಜರಾನ್ ॥ ೫೭ ॥

ಹಿಡಿದು ಅಸುರರನ್ನು ಕೊಲ್ಲುತ್ತ ಹೊರಟನು. ಜ್ವಾಲಾಮುಖನು ಭಯಂಕರವಾದ ಕೈಗಳಿಂದ ಅಸುರನನ್ನು ರಥ, ಗಜ, ಅಶ್ವ ಸಹಿತವಾಗಿ ವಿಶಾಲವಾದ ತನ್ನ ಬಾಯಿನಲ್ಲಿ ಹಾಕಿಕೊಳ್ಳತೊಡಗಿದನು. ದಂಡಕನೂ ಕೋಪಗೊಂಡು ಪ್ರಾಸಾಯುಧಧಾರಿಯಾದ ಮಹಾಸುರನನ್ನು ವಾಹನಸಹಿತವಾಗಿ ಎತ್ತಿ ಸಮುದ್ರಕ್ಕೆ ಎಸೆಯಲಾರಂಭಿಸಿದನು.

೫೪-೫೭. ಶಂಕುಕರ್ಣನು ಮುಸಲಾಯುಧವನ್ನು ಧರಿಸಿ ಹಲಾಯುಧದಿಂದ ಹೊಡೆದು ಪೌರುಷವಿಲ್ಲದ ರಾಜನನ್ನು ಮಂತ್ರಿಯು ನಾಶಮಾಡುವಂತೆ ಪುಡಿ ಪುಡಿ ಮಾಡುತ್ತಾನೆ. ಗಣಾಧಿಪತಿಯಾದ ಪುಷ್ಪದಂತನು ಕತ್ತಿ ಗುರಾಣಿಗಳನ್ನು ಧರಿಸಿ ದಾನವರನ್ನು ಎರಡಾಗಿಯೂ ಮೂರಾಗಿಯೂ ಅನೇಕ ವಿಧವಾಗಿ ಸೀಳಲಾರಂಭಿಸಿದನು. ಪಿಂಗಲನು ದಂಡ ಮುಂಡರೊಡನೆ ಎಲ್ಲಿ ಎಲ್ಲಿ ಓಡುತ್ತಾನೆಯೋ ಅಲ್ಲಲ್ಲಿ ದಾನವರು ರಾಶಿರಾಶಿಯಾಗಿ ಸೇರುತ್ತಿದ್ದಾರೆ. ಸಹಸ್ರನಯನನು ಗಣಾಗ್ರಗಣ್ಯನಾಗಿ ಶೂಲವನ್ನು ತಿರುಗಿಸುತ್ತಾ ಗಜಾಶ್ವವೇ ಮೊದಲಾದ ವಾಹನಗಳೊಡನೆ ಅಸುರರನ್ನು ನಾಶಪಡಿಸತೊಡಗಿದನು.

ಭೀಮೋ ಭೀಮಶಿಲಾವರ್ಷೈಃ ಸಪುರಸ್ಸರಿಣೋಽಸುರಾನ್ ।
ನಿಜಘಾನ ಯಥೈವೇಂದ್ರೋ ವಜ್ರವೃಷ್ಟ್ಯಾ ನಗೋತ್ತಮಾನ್ ॥ ೫೮ ॥

ರೌದ್ರಃ ಶಕಟಚಕ್ರಾಖ್ಯೋ ಗಣಃ ಪಂಚಶಿಖೋ ಬಲೀ ।
ಭ್ರಾಮಯನ್ ಮುದ್ಗರಂ ವೇಗಾನ್ನಿಜಘಾನ ಬಲಾದ್ರಿಪೂನ್ ॥ ೫೯ ॥

ಗಿರಿಭೇದೀ ತಲೇನೈವ ಸಾರೋಹಂ ಕುಂಜರಂ ರಣೇ ।
ಭಸ್ಮ ಚಕ್ರೆ ಮಹಾವೇಗೋ ರಥಂ ಚ ರಥಿನಾ ಸಹ ॥ ೬೦ ॥

ನಾಡೀಜಂಘೋ ನಿಪಾತೈಶ್ಚ ಮುಷ್ಟಿಭಿಃ ಜಾನುನಾ ಸುರಾನ್ ।
ಕೀಲಾಭಿರ್ವಜ್ರತುಲ್ಯಾಭಿಃ ಜಘಾನ ಬಲವಾನ್ ಮುನೇ ॥ ೬೧ ॥

ಕೂರ್ಮಗ್ರೀವೋ ಹಯಗ್ರೀವಃ ಶಿರಸಾ ಚರಣೇನ ಚ ।
ಲುಂಠನೇನ ತದಾ ದೈತ್ಯಾನ್ನಿಜಘಾನ ಸವಾಹನಾನ್ ॥ ೬೨ ॥

ಪಿಂಡಾಕರಸ್ತು ತುಂಡೇನ ಶೃಙ್ಗಾಭ್ಯಾಂ ಚ ಕಲಿಪ್ರಿಯಃ ।
ವಿದಾರಯತಿ ಸಂಗ್ರಾಮೆ ದಾನವಾನ್ ಸಮರೋದ್ಧತಾನ್ ॥ ೬೩ ॥

೫೮-೬೧. ಭೀಮನು ಭಯಂಕರವಾದ ಶಿಲಾವೃಷ್ಟಿಯಿಂದ ಮುಂದ ಬಂದ ಅಸುರರೆಲ್ಲರನ್ನೂ ವಜ್ರಾಯುಧದಿಂದ ಇಂದ್ರನು ಪರ್ವತಗಳನ್ನು ನಾಶಪಡಿಸುವಂತೆ ಹೊಡೆದು ನಾಶಮಾಡಿದನು. ಭಯಂಕರನಾದ ಶಕಟಚಕ್ರನೆಂಬ ಗಣವು ಮುದ್ಗರಾಯುಧವನ್ನು ತಿರುಗಿಸುತ್ತ ಶತ್ರುಗಳನ್ನು ನಾಶಪಡಿಸಲು ತ್ವರಿತನಾದನು. ಗಿರಿಭೇದಿಯು ಮಾವಟಿಗನೊಡನೆ ಆನೆಯನ್ನು ಅಂಗೈಯ್ಯಿನಿಂದಲೇ ಅಪ್ಪಳಿಸಿ ಮಹಾವೇಗದಿಂದ ರಥಗಳನ್ನೂ ರಥಿಗಳೊಡನೆ ನಾಶಪಡಿಸಿದನು. ನಾಡೀಜಂಘನು ಮುಷ್ಟಿಪಾತಗಳಿಂದಲೂ ಮಂಡಿಯ ಪ್ರಹಾರದಿಂದಲೂ ವಜ್ರಸದೃಶವಾದ ಕೀಲಾಯುಧಗಳಿಂದಲೂ ಶತ್ರುಗಳನ್ನು ಬಲವಾಗಿ ಪ್ರಹರಿಸಿದನು.

೬೨-೬೩. ಕೂರ್ಮಗ್ರೀವನು ತಲೆಯಿಂದಲೂ ಹಯಗ್ರೀವನು ಪಾದದಿಂದಲೂ ಸಹ ವಾಹನ ಸಹಿತರಾದ ದೈತ್ಯರನ್ನು ನಾಶಪಡಿಸಿದರು. ಪಿಂಡಾಕರನು ಮುಖದಿಂದಲೂ, ಕಲಿಪ್ರಿಯನು ಕೊಂಬುಗಳಿಂದಲೂ ಯುದ್ಧದಲ್ಲಿ ಕೊಬ್ಬಿದ್ದ ದಾನವರನ್ನು ಸೀಳಿದರು. ಆ ರೀತಿ ತನ್ನ ಬಲವೆಲ್ಲವೂ ಗಣಗಳಿಂದ ನಾಶವಾಗುತ್ತಿರುವುದನ್ನು

ತತೋ ವೃಷ್ಟ್ವೈವ ಸ್ವಬಲಂ ವಧ್ಯಮಾನಂ ಗಣೇಶ್ವರೈಃ ।
ಪ್ರಮುದ್ರಾವಾಥ ಮಹಿಷಃ ತಾರಕಶ್ಚ ಗಣಾಗ್ರಣೀಃ ॥ ೬೪ ॥

ತೇಽಹನ್ಯಮಾನಾಃ ಪ್ರಮಥಾ ದಾನವಾನಾಂ ವರಾಯುಧೈಃ ।
ಪರಿವಾರ್ಯ ಸಮಂತಾತ್ತೇ ಯುಯುಧುಃ ಕುಪಿತಾಸ್ತದಾ ॥ ೬೫ ॥

ಹಂಸಾಸ್ಯಃ ಪಟ್ಟಿಶೇನಾಥ ಜಘಾನ ಮಹಿಷಾಸುರಂ ।
ಷೋಡಶಾಸ್ಯಃ ತ್ರಿಶೂಲೇನ ಶತಶೀರ್ಷೋ ವರಾಸಿನಾ ॥ ೬೬ ॥

ಶ್ರುತಾಯುಧಸ್ತು ಗದಯಾ ವಿಶೋಕೋ ಮುಸಲೇನ ಚ ।
ಬಂಧುದತ್ತಸ್ತು ಶೂಲೇನ ಮೂರ್ಧ್ನಿ ದೈತ್ಯಮತಾಡಯತ್ ॥ ೬೭ ॥

ತಥಾನ್ಯೈಃ ಪಾರ್ಷದೈರ್ಯುದ್ಧೇ ಶೂಲಶಕ್ತ್ಯೃಷ್ಟಿಪಟ್ಟಿಶೈಃ ।
ನಾಕಂಪತ್ತುದ್ಯಮಾನೋಽಪಿ ಮೈನಾಕ ಇವ ಪರ್ವತಃ ॥ ೬೮ ॥

ತಾರಕೋ ಭದ್ರಕಾಲ್ಯಾಚ ತಥೋಽಲೂಖಲಯಾ ರಣೇ ।
ಬಧ್ಯತೇಽನೇಕಚೂಡಾಯಾ ದಾರ್ಯತೇ ಪರಮಾಯುಧೈಃ ॥ ೬೯ ॥

ನೋಡಿ ಯೂಥಪತಿಗಳಾದ ಮಹಿಷನೂ ತಾರಕನೂ ಯುದ್ಧೋನ್ಮುಖರಾಗಿ ಓಡಿ ಬಂದರು. ಆಗ ಪ್ರಮಥರೆಲ್ಲರೂ ದಾನವರ ಆಯುಧಗಳಿಂದ ಪೆಟ್ಟು ತಿಂದು ಬಹಳ ಕೋಪದಿಂದ ದಾನವರನ್ನು ಸುತ್ತುವರಿದು ಯುದ್ಧಮಾಡಲಾರಂಭಿಸಿದರು.

೬೬-೬೯. ಹಂಸಾಸ್ಯನು ಪಟ್ಟಿಶಾಯುಧದಿಂದಲೂ, ಷೋಡಶಾಸ್ಯನು ತ್ರಿಶೂಲದಿಂದಲೂ, ಶತಶೀರ್ಷನು ಖಡ್ಗದಿಂದಲೂ, ಶ್ರುತಾಯುಧನು ಗದೆಯಿಂದಲೂ, ವಿಶೋಕನು ಮುಸಲಾಯುಧದಿಂದಲೂ, ಬಂಧುದತ್ತನು ಶೂಲದಿಂದಲೂ ಮಹಿಷನನ್ನು ಪ್ರಹರಿಸಿದರು. ಹಾಗೆಯೇ ಅವನ ಇತರ ಅನುಯಾಯಿಗಳು ಶೂಲ, ಶಕ್ತಿ, ಪಟ್ಟಿಶ ಮೊದಲಾದ ಆಯುಧಗಳಿಂದ ಅವನನ್ನು ಪ್ರಹರಿಸಿದರು. ಇಷ್ಟುಮಟ್ಟಿಗೆ ಎಲ್ಲರಿಂದಲೂ ಹಿಂಸಿಸಲ್ಪಡುತ್ತಿರುವ ಆ ಮಹಿಷನು ಮೈನಾಕಪರ್ವತದಂತೆ ನಿಶ್ಚಲನಾಗಿದ್ದನೇ ಹೊರತು ಸ್ವಲ್ಪವೂ ಅಲ್ಲಾಡಲಿಲ್ಲ. ಹಾಗೆಯೇ ತಾರಕನನ್ನು ಭದ್ರಕಾಲಿಯೂ, ಉಲೂಖಲೆಯೂ, ಅನೇಕಚೂಡೆಯೂ ಸಹ ನಾನಾವಿಧವಾದ ಆಯುಧಗಳಿಂದ ಬಂಧಿಸಿ ಸೀಳಿದರು.

ತೌ ತಾಡ್ಯಮಾನೌ ಪ್ರಮಥೈಃ ಮಾತೃಭಿಶ್ಚ ಮಹಾಸುರೈಃ ।
ನ ಕ್ಷೋಭಂ ಜಗ್ಮತುರ್ವೀರೌ ಕ್ಷೋಭಯಂತೌ ಗಣಾನಪಿ ॥ ೨೦ ॥

ಮಹಿಷೋ ಗದಯಾತೂರ್ಣಂ ಪ್ರಹಾರೈಃ ಪ್ರಮಥಾನಪಿ ।
ಪರಾಜಿತ್ಯ ಪ್ರಯಾತ್ಯೇವ ಕುಮಾರಂ ಪ್ರತಿ ಸಾಯುಧಃ ॥ ೨೧ ॥

ತಮಾಪತಂತಂ ಮಹಿಷಂ ಸುಚಕ್ರಾಕ್ಷೋ ನಿರೀಕ್ಷ್ಯಹಿ ।
ಚಕ್ರಮುದ್ಯಮ್ಯ ಸಂಕ್ರುದ್ಧೋ ರುರೋಧ ದನುನಂದನಂ ॥ ೨೨ ॥

ಗದಾಚಕ್ರಾಙ್ಕಿತಕರೌ ಗಣಾಸುರಮಹಾರಥೌ ।
ಅಯುಧ್ಯೇತಾಂ ತದಾ ಬ್ರಹ್ಮನ್ ಲಘುಚಿತ್ರಂ ಚ ಸುಷ್ಠು ಚ ॥ ೨೩ ॥

ಗದಾಂ ಮುಮೋಚ ಮಹಿಷಃ ಸಮಾವಿಧ್ಯ ಗಣಾಯ ತು ।
ಸುಚಕ್ರಾಕ್ಷೋ ನಿಜಂ ಚಕ್ರಮುತ್ಸಸರ್ಜ ರಥಂ ಪ್ರತಿ ॥ ೨೪ ॥

ಗದಾಂ ಛಿತ್ವಾ ಸುತೀಕ್ಷ್ಣಾರಂ ಚಕ್ರಂ ಮಹಿಷಮಾದ್ರವತ್ ।
ತತಉಚ್ಚುಕ್ರುಶುರ್ದೈತ್ಯಾ ಹಾ ಹತೋ ಮಹಿಷಸ್ತ್ವಿತಿ ॥ ೨೫ ॥

೨೦-೨೨. ಆ ವೀರರಿಬ್ಬರೂ (ತಾರಕ, ಮಹಿಷ) ಪ್ರಮಥಗಳಿಂದಲೂ, ದೇವತೆಗಳಿಂದಲೂ ಅಷ್ಟುಮಟ್ಟಿಗೆ ಪ್ರಹರಿಸಲ್ಪಟ್ಟರೂ ತಾವು ಎದೆಗುಂದದೆ ಗಣಗಳನ್ನೆಲ್ಲಾ ನಡುಗಿಸುತ್ತ ನಿಂತರು. ಆಗ ಮಹಿಷನು ಗದಾಧಾರಿಯಾಗಿ ರಭಸದಿಂದ ಪ್ರಮಥಗಳೆಲ್ಲರನ್ನೂ ಪ್ರಹಾರದಿಂದ ಪರಾಜಯಗೊಳಿಸಿ ಆಯುಧಧಾರಿಯಾಗಿ ಕುಮಾರಸ್ವಾಮಿಯ ಸಮೀಪಕ್ಕೆ ಬಂದೇ ಬಂದನು. ಹಾಗೇ ಬರುತ್ತಿರುವ ಆ ಮಹಿಷನನ್ನು ಸುಚಕ್ರಾಕ್ಷನು ನೋಡಿ ತನ್ನ ಚಕ್ರವನ್ನು ಎತ್ತಿಹಿಡಿದು ಕೋಪದಿಂದ ಆ ಮಹಿಷನನ್ನು ತಡೆದನು.

೨೩-೨೬. ಗದಾ ಚಕ್ರಗಳಿಂದ ಯುದ್ಧಭೂಮಿಯಲ್ಲಿ ಮಹಿಷ ಮತ್ತು ಸುಚಕ್ರಾಕ್ಷರಿಬ್ಬರೂ ಬಹಳ ಲಘುವಾಗಿಯೂ, ಆಶ್ಚರ್ಯಕರವಾಗಿಯೂ ಇರುವ ಯುದ್ಧನೈಪುಣ್ಯವನ್ನು ತೋರಿಸಿದರು. ಆಗ ಮಹಿಷನು ಗದೆಯನ್ನು ಎತ್ತಿ ಆ ಗಣಾಗ್ರಗಣ್ಯನ ಮೇಲೆ ಪ್ರಹರಿಸಿದನು. ಸುಚಕ್ರಾಕ್ಷನೂ ತನ್ನ ಚಕ್ರವನ್ನು ಅವನ ರಥದ ಮೇಲೆ ಪ್ರಯೋಗಿಸಿದನು. ಆ ಚಕ್ರವು ತೀಕ್ಷ್ಣವಾದ ಮುಳ್ಳುಗಳುಳ್ಳ ಆ ಗದೆಯನ್ನು ಕತ್ತರಿಸಿ ಮಹಿಷನನ್ನು ಓಡಿಸಿಕೊಂಡು ಬಂದಿತು. ಆಗ ದೈತ್ಯರೆಲ್ಲರೂ ಹಾ ಹಾ ಮಹಿಷನು ಹತನಾದನು ಎಂದು ಘಟ್ಟಿಯಾಗಿ ಕಿರಿಚಿದರು. ಆ ಧ್ವನಿಯನ್ನು ಕೇಳಿ

ತಚ್ಛ್ರುತ್ವಾಭ್ಯದ್ರವದ್ಬಾಣಃ ಪ್ರಾಸಮಾವಿಧ್ಯ ವೇಗವಾನ್ ।
ಜಘಾನ ಚಕ್ರಂ ರಕ್ತಾಕ್ಷಂ ಪಂಚಮುಷ್ಟಿಶತೇನಹಿ ॥ ೭೬ ॥

ಪಂಚಬಾಹುಶತೇನಾಪಿ ಸುಚಕ್ರಾಕ್ಷಂ ಬಬಂಧ ಸಃ ।
ಬಲವಾನಪಿಬಾಣೇನ ನಿಷ್ಪ್ರಯತ್ನಗತಿಃ ಕೃತಃ ॥ ೭೭ ॥

ಸುಚಕ್ರಾಕ್ಷಂ ಸಚಕ್ರಂ ಹಿ ಬದ್ಧಂ ಬಾಣಾಸುರೇಣ ಹಿ ।
ದೃಷ್ಟ್ವಾದ್ರವದ್ಗದಾಪಾಣಿರ್ಮಕರಾಕ್ಷೋ ಮಹಾಬಲಃ ॥ ೭೮ ॥

ಗದಯಾ ಮೂರ್ಧ್ನಿಪಾತೇನ ನಿಜಘಾನ ಮಹಾಬಲಃ ।
ಸಚಾಪಿ ತೇನ ಸಂಯುಕ್ತೋ ವ್ರೀಡಾಯುಕ್ತೋ ಮಹಾಮನಾಃ ॥ ೭೯ ॥

ಸ ಸಂಗ್ರಾಮಂ ಪರಿತ್ಯಜ್ಯ ಶಾಲಿಗ್ರಾಮಮುಪಾಯಯೌ ।
ಬಾಣೋಽಪಿ ಮಕರಾಕ್ಷೇಣ-ತಾಡಿತೋಽಭೂತ್ಪರಾಙ್ಮುಖಃ ॥ ೮೦ ॥

ದೊಡನೆಯೇ ಬಾಣನು ಪ್ರಾಸಾಯುಧವನ್ನು ಧರಿಸಿ ವೇಗದಿಂದ ಅಲ್ಲಿಗೆ ಓಡಿಬಂದನು. ಬಂದೊಡನೆಯೇ ಕೆಂಪಾದ ಅಚ್ಚುಳ್ಳ ಭಯಂಕರವಾದ ಆ ಚಕ್ರವನ್ನು ಐನೂರು ಮುಷ್ಟಿ ಪ್ರಹಾರದಿಂದ ಹೊಡೆದನು.

೭೭-೮೦. ಐದುನೂರು ಬಾಹುಗಳಿಂದ ಆ ಸುಚಕ್ರಾಕ್ಷನನ್ನು ಬಾಣನು ಬಂಧಿಸಿಯೂ ಆಯಿತು. ಬಲಿಷ್ಠನಾದ ಆ ಸುಚಕ್ರಾಕ್ಷನೂ ಸಹ ಬಾಣನ ಬಂಧನ ದಿಂದ ನಿರೋಧಿಸಲ್ಪಟ್ಟು ನಿಷ್ಪ್ರಯತ್ನನಾಗಿಯೂ, ನಿರ್ಗತಿಯಾಗಿಯೂ ಆದನು. ಹಾಗೆ ಬಾಣಾಸುರನಿಂದ ಬದ್ಧನಾದ ಸುಚಕ್ರಾಕ್ಷನನ್ನು ನೋಡಿ ಬಲಶಾಲಿಯಾದ ಮಕರಾಕ್ಷನು ಗದಾಪಾಣಿಯಾಗಿ ಬಾಣನನ್ನು ಎದುರಿಸಲು ಬಂದನು. ಗದೆಯಿಂದ ಬಾಣನ ತಲೆಯಮೇಲೆ ವೇಗವಾಗಿ ಹೊಡೆದನು. ಬಾಣನೂ ಸಹ ಆ ಪ್ರಹಾರವನ್ನು ಸಹಿಸಿಕೊಂಡು ದೃಢಬುದ್ಧಿಯಿಂದ ಲಜ್ಜೆಗೊಂಡು ಯುದ್ಧವನ್ನು ಬಿಟ್ಟು ಶಾಲಿಗ್ರಾಮ ಕ್ಷೇತ್ರಕ್ಕೆ ಹೊರಟು ಬಂದನು. ಮಕರಾಕ್ಷನಿಂದ ಹೊಡೆಯಲ್ಪಟ್ಟ ಬಾಣನು ಪರಾಙ್ಮುಖನಾಗಿಯೇ ಆದನು.

ಅಭಜ್ಯತ ಬಲಂ ಸರ್ವಂ ದೈತ್ಯಾನಾಂ ಸುರತಾಪಸ ।
ಪ್ರಭಜ್ಯ ತದ್ಬಲಂ ಸರ್ವಂ ದೈತ್ಯಾನಾಂ ತೇ ಗಣೇಶ್ವರಾಃ ॥ ೮೧ ॥

ತಿಷ್ಠಂತಸ್ತೆ ಭೃಶಂ ಕ್ರುದ್ಧಾಃ ದೈತ್ಯಾನ್ ವ್ಯದ್ರಾವಯದ್ರಣೆ ।
ತತಃ ಸ್ವಬಲಮಿಾಕ್ಷ್ಯೈವ ಪ್ರಭಗ್ನಂ ತಾರಕೋ ಬಲೀ ।
ಖಡ್ಗೋದ್ಯತಕರೋ ದೈತ್ಯಃ ಪ್ರದುದ್ರಾವ ಗಣೇಶ್ವರಾನ್ ॥ ೮೨ ॥

ತತಸ್ತು ತೇನಾಪ್ರತಿಮೇನ ಸಾಸಿನಾ
ತೇ ಹಂಸವಕ್ತ್ರಪ್ರಮುಖಾ ಗಣೇಶ್ವರಾಃ ।
ತಾ ಮಾತರಶ್ಚಾಪಿ ಪರಾಜಿತಾ ರಣೆ
ಸ್ಕಂದಂ ಭಯಾರ್ತಾಃ ಶರಣಂ ಪ್ರಪೇದಿರೆ ॥ ೮೩ ॥

ಭಗ್ನಾನ್ ಗಣಾನ್ ವೀಕ್ಷ್ಯ ಮಹೇಶ್ವರಾತ್ಮಜ
ಸ್ತಂ ತಾರಕಂ ಸಾಸಿನಮಾಪತಂತಂ ।
ದೃಷ್ಟ್ವೈವ ಶಕ್ತ್ಯಾ ಹೃದಯೇ ಬಿಭೇದ
ಸಭಿನ್ನಮರ್ಮಾ ನ್ಯಪತತ್ಪೃಥಿವ್ಯಾಂ ॥ ೮೪ ॥

೮೧-೮೩. ಎಲೈ ಸುರಮುನಿಯೇ, ಆ ದೈತ್ಯಬಲವೆಲ್ಲವೂ ಆಗ ಭಗ್ನವಾಗಿ ಹೋಯಿತು. ಆಗ ಗಣಾಧಿಪರೆಲ್ಲರೂ ಬಹಳ ಕೋಪದಿಂದ ಭಗ್ನರಾದ ದೈತ್ಯಸೇನೆ ಯನ್ನು ಯುದ್ಧಭೂಮಿಯಿಂದ ಓಡಿಸಿದರು. ಆಗ ಬಲಿಷ್ಠನಾದ ತಾರಕಾಸುರನು ಭಗ್ನವಾದ ತನ್ನ ಬಲವನ್ನು ನೋಡಿ ಖಡ್ಗಧಾರಿಯಾಗಿ ಗಣಾಧಿಪರೆಲ್ಲರನ್ನೂ ಎದುರಿ ಸಲು ವೇಗದಿಂದ ಬಂದನು. ಆಗ ಖಡ್ಗಧಾರಿಯಾದ ಆ ತಾರಕನಿಂದ ಹಂಸವಕ್ತ್ರನೇ ಮೊದಲಾದ ಗಣಾಧಿಪತಿಗಳೂ, ಮಾತೃವರ್ಗವೂ ಸಹ ಪರಾಜಿತರಾಗಿ ಭಯದಿಂದ ಓಡಿಬಂದು ಸ್ಕಂದನನ್ನು ಶರಣುಹೊಕ್ಕರು.

೮೪-೮೬. ಗಣಗಳೆಲ್ಲವೂ ಭಯದಿಂದ ಭಗ್ನವಾದುದನ್ನು ನೋಡಿ ಷಣ್ಮು ಖನು ಖಡ್ಗದೊಡನೆ ಎದುರಾಗಿ ಬರುತ್ತಿರುವ ತಾರಕನನ್ನೂ ನೋಡಿ ಶಕ್ತ್ಯಾಯುಧ ದಿಂದ ಆ ತಾರಕನ ಹೃದಯದಲ್ಲಿ ಪ್ರಹರಿಸಿದನು. ಕೂಡಲೇ ತಾರಕನು ಮರ್ಮ

ತಸ್ಮಿನ್ ಹತೇ ಭ್ರಾತರಿ ಭಗ್ನದರ್ಪೇ
ಭಯಾತುರೋ ಭೂನ್ಮಹಿಷೋ ಮಹರ್ಷೇ ।
ಸಂತ್ಯಜ್ಯ ಸಂಗ್ರಾಮಶಿರೋ ದುರಾತ್ಮಾ
ಜಗಾಮ ಶೈಲಂ ಸಹಿಮಾಚಲಂ ಚ ॥ ೮೫ ॥

ಬಾಣೋಥ ವೀರೇ ನಿಹತೇಥ ತಾರಕೇ ಗತೇ
ಹಿಮಾದ್ರೌ ಮಹಿಷೇ ಭಯಾರ್ತೇ ।
ಭಯಾದ್ವಿವೇಶೋಗ್ರಮಪಾಂ ನಿಧಾನಂ
ಗಣೈರ್ಬಲೇ ವಿಧ್ಯತಿ ಸಾಪರಾಧೇ ॥ ೮೬ ॥

ಹತ್ವಾ ಕುಮಾರೋ ರಣಮೂರ್ಧ್ನಿ ತಾರಕಂ
ಪ್ರಗೃಹ್ಯ ಶಕ್ತಿಂ ಮಹತಾ ಜವೇನ ।
ಮಯೂರಮಾರುಹ್ಯ ಶಿಖಂಡಮಂಡಿತಂ
ಯಯೌ ನಿಹಂತುಂ ಮಹಿಷಾಸುರಂ ಚ ॥ ೮೭ ॥

ಸಪ್ರೆಷ್ಟತಃ ಪ್ರೇಕ್ಷ್ಯ ಶಿಖಂಡಿಕೇತನಂ
ಸಮಾಪತಂತಂ ವರಶಕ್ತಿಪಾಣಿನಂ ।

ಭೇದ ಹೊಂದಿ ಭೂಮಿಯಲ್ಲಿ ಬಿದ್ದನು. ಆ ಭ್ರಾತೃವು ನಷ್ಟನಾದುದನ್ನು ತಿಳಿದು ಮಹಿಷನು ಬಹಳ ಭಯಾಕ್ರಾಂತನಾಗಿ ಯುದ್ಧಭೂಮಿಯನ್ನು ಬಿಟ್ಟು ಹಿಮವತ್ಪರ್ವತಕ್ಕೆ ಓಡಿದನು. ಆಗ ಶೂರನಾದ ತಾರಕನು ಯುದ್ಧದಲ್ಲಿ ನಾಶಹೊಂದಿದುದನ್ನೂ ಮಹಿಷನು ಹಿಮವತ್ಪರ್ವತಕ್ಕೆ ಓಡಿದುದನ್ನೂ ನೋಡಿ ಬಾಣನೂ ಭಯಪಟ್ಟು ಅಪರಾಧಿಯಾದ ದೈತ್ಯಬಲವು ಗಣಗಳಿಂದ ಹೊಡೆಯಲ್ಪಡುತ್ತಿದ್ದರೂ ಸಹ ತಾನು ಮಾತ್ರ ಸಮುದ್ರವನ್ನು ಪ್ರವೇಶಿಸಿ ಅಲ್ಲಿ ಮರೆಯಾದನು.

೮೭-೮೯. ಆಗ ಕುಮಾರಸ್ವಾಮಿಯು ತಾರಕನನ್ನು ಯುದ್ಧದಲ್ಲಿ ಕೊಂದು ಶಕ್ತ್ಯಾಯುಧವನ್ನು ಧರಿಸಿ ಮಹಿಷನನ್ನೂ ಕೊಲ್ಲಲು ತನ್ನ ಮಯೂರದ ಮೇಲೆ ಕುಳಿತು ವೇಗದಿಂದ ಹೊರಟನು. ಆ ಮಹಿಷನೂ ಸಹ ಹಿಂಬಾಲಿಸಿ ಬರುತ್ತಿರುವ ಮಯೂರವಾಹನನಾಗಿಯೂ ಶಕ್ತಿಧಾರಿಯಾಗಿಯೂ ಇರುವ ಕುಮಾರನನ್ನು ನೋಡಿ ಕೈಲಾಸವನ್ನೂ ಹಿಮಾಚಲವನ್ನೂ ಬಿಟ್ಟು ಕ್ರೌಂಚಪರ್ವತಕ್ಕೆ ಹೋಗಿ ಅಲ್ಲಿ

ಕೈಲಾಸಮುತ್ಸೃಜ್ಯ ಹಿಮಾಚಲಂ
ತಥಾ ಕ್ರೌಂಚಂ ಸಮಭ್ಯೇತ್ಯ ಗುಹಾಂ ವಿವೇಶ ॥ ೮೮ ॥

ದೈತ್ಯಂ ಪ್ರವಿಷ್ಟಂ ಸಪಿನಾಕಿಸೂನುಃ
ಜುಗೋಪ ಯತ್ನಾದ್ಭಗವಾನ್ ಗುಹೋಽಪಿ ।
ಸ್ವಬಂಧುಹಂತಾ ಭವಿತಾ ಕಥಂ ತ್ವಹಂ
ವಿಚಿಂತಯನ್ನೇವ ತತಃ ಸ್ಥಿತೋಽಭೂತ್ ॥ ೮೯ ॥

ತತೋಽಭ್ಯಗಾತ್ಪುಷ್ಕರಸಂಭವಶ್ಚ
ಹರೋ ಮುರಾರಿಸ್ತ್ರಿದಶೇಶ್ವರಶ್ಚ ।
ಅಭ್ಯೇತ್ಯ ಚೋಚುಃ ಮಹಿಷಂ ಸಶೈಲಂ
ಭಿಂದಸ್ವ ಶಕ್ತ್ಯಾ ಕುರು ದೇವಕಾರ್ಯಂ ॥ ೯೦ ॥

ತತ್ಕಾರ್ತಿಕೇಯಃ ಪ್ರಿಯಮೇವ ತಥ್ಯಂ
ಶ್ರುತ್ವಾ ವಚಃ ಪ್ರಾಹ ಸುರಾನ್ವಿಹಸ್ಯ ।
ಕಥಂ ಹಿ ಮಾತಾಮಹ ನಪ್ತೃಕಂ ಚ
ಸ್ವಭ್ರಾತರಂ ಭ್ರಾತೃಸುತಂ ಚ ಮಾತುಃ ॥ ೯೧ ॥

ಗುಹೆಯಲ್ಲಿ ಅಡಗಿಕೊಂಡನು. ಹಾಗೆ ಗುಹೆಯಲ್ಲಿ ಅಡಗಿಕೊಂಡ ಆ ದೈತ್ಯನನ್ನು ಕ್ರೌಂಚವು ಅಲ್ಲಿಯೇ ಅವನನ್ನು ರಕ್ಷಿಸಿತು. ಕುಮಾರಸ್ವಾಮಿಯು ಅಂತಹ ಕ್ರೌಂಚನನ್ನು ನೋಡಿ ತನ್ನ ಬಂಧುವನ್ನು ತಾನು ಹೇಗೆ ನಾಶಮಾಡಲಿ ಎಂಬ ಚಿಂತೆಯಿಂದ ಹಾಗೆಯೇ ನಿಂತನು.

೯೦-೯೩. ಅನಂತರ ಚತುರ್ಮುಖನೂ ಹರನೂ ವಿಷ್ಣುವೂ ಇಂದ್ರನೂ ಸಹ ಅಲ್ಲಿ ಬಂದರು. ಅವರು ಕುಮಾರನನ್ನು ಕುರಿತು ಶೈಲಸಮೇತನಾದ ಈ ಮಹಿಷ ನನ್ನು ನಾಶಪಡಿಸು. ದೇವತೆಗಳ ಕಾರ್ಯವನ್ನು ನೀನು ಮಾಡಿದಂತಾಗುವುದೆಂದು ಪ್ರೋತ್ಸಾಹಿಸಿದರು. ಆಗ ಷಣ್ಮುಖನು ಪ್ರಿಯವಾಗಿಯೂ ಸತ್ಯವಾಗಿಯೂ ಇರುವ ಆ ಮಾತನ್ನು ಕೇಳಿ ನಗುತ್ತ ದೇವತೆಗಳನ್ನು ಕುರಿತು ಹೀಗೆಂದನು. ಮಾತಾಮಹ ನಾದ ಹಿಮವಂತನಿಗೆ ಮೊಮ್ಮಗನಾಗಿಯೂ ಮತ್ತೊಂದು ವಿಧದಲ್ಲಿ ನನಗೆ ಭ್ರಾತೃ ವಾಗಿಯೂ ತಾಯಿಗೆ ಭ್ರಾತೃಪುತ್ರನಾಗಿಯೂ ಇರುವ ಕ್ರೌಂಚನನ್ನು ಹೇಗೆ ನಾಶ

ಏಷಾ ಶ್ರುತಿಶ್ಚಾಪಿ ಪುರಾತನೀ ಕಿಲ
ಗಾಯಂತಿ ಯಾಂ ವೇದವಿದೋ ಮಹರ್ಷಯಃ ।
ಕೃತ್ವಾ ಚ ಯಸ್ಯಾಂ ಮತಮುತ್ತಮಾಯಾಂ
ಸ್ವರ್ಗಂ ವ್ರಜಂತಿತ್ವತಿಪಾಪಿನೋಽಪಿ ॥೯೨॥

ಗಾಂ ಬ್ರಾಹ್ಮಣಂ ವೃದ್ಧಮಥಾಪಿಜಾಢ್ಯಂ
ಬಾಲಂ ಸ್ವಬಂಧುಂ ಲಲನಾಂ ಸುದುಷ್ಟಾಂ ।
ಕೃತಾಪರಾಧಾಮಪಿ ನೈವ
ವಧ್ಯಾದಾಚಾರ್ಯಮುಖ್ಯಾ ಗುರವಸ್ತಥೈವ ॥೯೩॥

ಏವಂ ಜಾನನ್ ಧರ್ಮಮಗ್ರ್ಯಂ ಸುರೇಂದ್ರಾ
ನಾಹಂ ವಧ್ಯಾಂ ಭ್ರಾತರಂ ಮಾತುಲೇಯಂ ।
ಯಥಾ ದೈತ್ಯೋಽಭಿಗಮಿಷ್ಯದ್ಗುಹಾತಃ
ತಥಾ ಶಕ್ತ್ಯಾ ಘಾತಯಿಷ್ಯಾಮಿ ಶತ್ರುಂ ॥೯೪॥

ಶ್ರುತ್ವಾ ಕುಮಾರವಚನಂ ಭಗವಾನ್ ಮಹರ್ಷೇ
ಕೃತ್ವಾ ಮತಂ ಸ್ವಹೃದಯೇ ಗುಹಮಾಹ ಶಕ್ರಃ ।
ಮತ್ತೋಽ ಭವಾನ್ನಮತಿಮಾನ್ವದಸೆ ಕಿಮಿತ್ಥಂ
ವಾಕ್ಯಂ ಶೃಣುಷ್ವ ಹರಿಣಾ ಗದಿತಂ ಹಿ ಪೂರ್ವಂ ॥೯೫॥

ಪಡಿಸಲಿ. ವೇದಜ್ಞರಾದ ಮಹರ್ಷಿಗಳೂ ಸಹ ಯಾವ ಪುರಾತನವಾದ ವೇದವಾಣಿಯನ್ನವಲಂಭಿಸಿ ಸ್ವರ್ಗಗಾಮಿಗಳಾಗುವರೋ ಪಾಪಿಗಳೂ ಸಹ ಸ್ವರ್ಗಹೊಂದುವರೋ ಅಂತಹ ಶ್ರುತಿಯನ್ನು ಹೇಗೆ ಅತಿಕ್ರಮಿಸಲಿ. ಆ ವಚನವೂ ಸಹ ಗೋವನ್ನೂ ಬ್ರಾಹ್ಮಣನನ್ನೂ, ವೃದ್ಧನನ್ನೂ, ಆಢ್ಯನನ್ನೂ, ಬಾಲನನ್ನೂ, ಬಂಧುವನ್ನೂ, ದುಷ್ಟಳಾದ ಸ್ತ್ರೀಯನ್ನೂ, ಆಚಾರ್ಯ, ಗುರು ಇವರನ್ನೂ ಸಹ ಅಪರಾಧಿಗಳಾಗಿದ್ದರೂ ಕೊಲ್ಲಕೂಡದೆಂದು ಹೇಳುತ್ತಿದೆಯಲ್ಲಾ ಎಂದನು.

೯೪-೯೮. ಎಲೈ ಸುರಾಗ್ರೇಸರರೇ, ಈ ರೀತಿಯಾದ ಧರ್ಮ ರಹಸ್ಯವನ್ನು ತಿಳಿದ ನಾನು ಭ್ರಾತೃವಾಗಿಯೂ ಮಾತುಲ (ಮಾವ) ಪುತ್ರನಾಗಿಯೂ ಇರುವ ಕ್ರೌಂಚವನ್ನು ವಧಿಸುವುದಿಲ್ಲ. ಆದರೆ ಆ ದೈತ್ಯನು ಗುಹೆಯಿಂದ ಹೊರಗೆ ಬರುವಂತೆ ಮಾಡಿ ಅವನನ್ನು ಶಕ್ತ್ಯಾಯುಧದಿಂದ ನಾಶಪಡಿಸುತ್ತೇನೆ ಎಂದನು. ಆಗ ಇಂದ್ರನು ಕುಮಾರಸ್ವಾಮಿಯ ಈ ಮಾತನ್ನು ಕೇಳಿ ಇವನ ಅಭಿಪ್ರಾಯವನ್ನೂ ತಿಳಿದು

ನೈಕಸ್ಯಾರ್ಥೇ ಬಹೂನ್ ಹನ್ಯಾದಿತಿ ಶಾಸ್ತ್ರೇಷು ನಿಶ್ಚಯಃ ।
ಏಕಂ ಹನ್ಯಾದ್ಬಹೂನಾಂ ಹಿ ನ ಪಾಪೀ ತೇನ ಜಾಯತೇ ॥ ೯೬ ॥

ಏತಚ್ಛ್ರುತ್ವಾ ಮಯಾ ಪೂರ್ವಂ ಸಮಯಸ್ತೇನಚಾಗ್ನಿಜ ।
ನಿಹತೋ ನಮುಚಿಃ ಪೂರ್ವಂ ಸೋದರೋಽಪಿ ಸಹಾನುಜಃ ॥ ೯೭ ॥

ತಸ್ಮಾದ್ಬಹೂನಾಮರ್ಥಾಯ ಸಕ್ರೌಂಚಂ ಮಹಿಷಾಸುರಂ ।
ಘಾತಯಸ್ವ ಪದಾಕ್ರಮ್ಯ ಶಕ್ತ್ಯಾ ಪಾವಕದತ್ತಯಾ ॥ ೯೮ ॥

ಪುರಂದರವಚಃ ಶ್ರುತ್ವಾ ಕ್ರೋಧಾದಾರಕ್ತಲೋಚನಃ ।
ಕುಮಾರಃ ಪ್ರಾಹ ವಚನಂ ಕಂಪಮಾನಃ ಶತಕ್ರತುಂ ॥ ೯೯ ॥

ಮೂಢ ಕಿಂತೇ ಬಲಂ ಬಾಹ್ವೋಃ ಶಾರೀರಂ ನಾಪಿ ವೃತ್ರಹನ್ ।
ಯೇನಾಧಿಕ್ಷಿಪಸೇ ಮಾಂ ತ್ವಂ ಭುವನೇ ಮತಿಮಾನಸಿ ॥ ೧೦೦ ॥

ಅವನನ್ನು ಕುರಿತು ಹೀಗೆ ಹೇಳುತ್ತಾನೆ. ಕುಮಾರ, ನನಗಿಂತಲೂ ನೀನು ಬುದ್ಧಿವಂತನೇ ? ಹೀಗೆ ಏಕೆ ಹೇಳುತ್ತೀಯೆ, ಮೊದಲೇ ಹರಿಯು ಹೇಳಿದ ಮಾತನ್ನು ಗಮನಿಸಿ (ಕುರುದೇವಕಾರ್ಯಮ್) ಅದರಂತೆ ನಡೆದುಕೋ. ಶಾಸ್ತ್ರಗಳಲ್ಲಿ ಇರುವ ಧರ್ಮದ ರಹಸ್ಯಾರ್ಥ ನಿಶ್ಚಯವು ಹೀಗಿದೆ. ನೋಡು, ಒಬ್ಬನ ಹಿತಕ್ಕಾಗಿ ಬಹಳ ಜನರನ್ನು ಕೊಲ್ಲಬಾರದು. ಬಹುಜನಗಳ ಹಿತಕ್ಕಾಗಿ ಒಬ್ಬನನ್ನು ಕೊಲ್ಲಬಹುದು. ಅದರಿಂದ ಅವನಿಗೆ ಪಾಪವಿಲ್ಲ. ಇದನ್ನು ತಿಳಿದೇ ನಾನು ಪೂರ್ವದಲ್ಲಿ ಸೋದರನಾಗಿಯೂ ಏಕೋದರನಾಗಿಯೂ ಇದ್ದ ನಮುಚಿಯನ್ನು ಮಯನೊಡನೆ ಕೊಂದೆನು. ಆದುದರಿಂದ ಅನೇಕರ ಹಿತಕ್ಕಾಗಿ ಕ್ರೌಂಚ ಸಹಿತನಾದ ಮಹಿಷನನ್ನು ಕಾಲಿನಿಂದ ಆಕ್ರಮಿಸಿ ಅಗ್ನಿದತ್ತವಾಗಿರುವ ಶಕ್ತ್ಯಾಯುಧದಿಂದ ನಾಶಪಡಿಸು.

೯೯-೧೦೨. ಇಂದ್ರನ ಮಾತನ್ನು ಕೇಳಿ ಕೋಪದಿಂದ ಕೆಂಗಣ್ಣಿ ಕುಮಾರನು ಆವೇಗದಿಂದ ನಡುಗುತ್ತಾ ಇಂದ್ರನನ್ನು ಕುರಿತು, ಎಲೈ ಮೂಢನೇ ನಿನ್ನ ಬಾಹುಬಲವು ಎಷ್ಟಿರಬಹುದು. ಪ್ರಪಂಚದಲ್ಲೆಲ್ಲಾ ನಾನೇ ಬುದ್ಧಿವಂತನೆಂದು ತಿಳಿದು ನನ್ನನ್ನೇ ನಿಂದಿಸುತ್ತಿದ್ದೀಯೆ, ಎಂದನು. ಅದಕ್ಕೆ ಪ್ರತಿಯಾಗಿ ಇಂದ್ರನು ಗುಹ, ನಾನು ನನ್ನಿಂದಲೇ ಬಲಶಾಲಿಯಾಗಿದ್ದೇನೆ ಎಂದನು. (ನಿನ್ನಂತೆ ಇತರರ ಸಹಕಾರದಿಂದ ಬಲಹೊಂದಿದವನಲ್ಲವೆಂದು ಗೂಢವಾದ ನಿಂದೆ ತೋರುತ್ತದೆ.) ಆಗ

ತಮುವಾಚ ಸಹಸ್ರಾಕ್ಷಃ ಸ್ವತೋಽಹಂ ಬಲವಾನ್ ಗುಹ ।
ತಂ ಗುಹಃ ಪ್ರಾಹ ಏಹ್ಯೇಹಿ ಯುಧ್ಯಸ್ವ ಬಲವಾನ್ಯದಿ ॥ ೧೦೧ ॥

ಶಕ್ರಃ ಪ್ರಾಹಾಥ ಬಲವಾನ್ ಜಾಯತೇ ಕೃತ್ತಿಕಾಸುತ ।
ಪ್ರದಕ್ಷಿಣಂ ಶೀಘ್ರತರಂ ಯಃ ಕುರ್ಯಾತ್ ಕ್ರೌಂಚಮೇವ ಹಿ ॥ ೧೦೨ ॥

ಶ್ರುತ್ವಾ ತದ್ವಚನಂ ಸ್ಕಂದೋ ಮಯೂರಂ ಪ್ರೋಜ್ಝ್ಯ ತತ್ಕ್ಷಣಾತ್ ।
ಪ್ರದಕ್ಷಿಣಂ ಪಾದಚಾರೀ ಕರ್ತುಂ ತೂರ್ಣತರೋಽಭ್ಯಗಾತ್ ॥ ೧೦೩ ॥

ಶಕ್ರೋಽವತೀರ್ಯ ನಾಗೇಂದ್ರಾತ್ಪಾದೇನಾಥ ಪ್ರದಕ್ಷಿಣಾಂ ।
ಕೃತ್ವಾ ತಸ್ಥೌ ಗುಹೋಽಭ್ಯೇತ್ಯ ಮೂಢ ಕಿಂ ಸ್ಥಿತೋ ಭವಾನ್ ॥ ೧೦೪ ॥

ತಮಿಂದ್ರಃ ಪ್ರಾಹ ಕೌಟಿಲ್ಯಾನ್ಮಯಾ ಪೂರ್ವಂ ಪ್ರದಕ್ಷಿಣಾ ।
ಕೃತಾಸ್ಯ ತತ್ತ್ವಯಾ ಪೂರ್ವಂ ಕುಮಾರಃ ಶಕ್ರಮಬ್ರವೀತ್ ॥ ೧೦೫ ॥

ಗುಹನು ನೀನು ಬಲಶಾಲಿಯಾಗಿದ್ದರೆ ಬಾ ಬಾ ಯುದ್ಧಕ್ಕೆ ಬಾ ಎಂದು ಇಂದ್ರನನ್ನು ಕರೆದನು. ಆಗ ಇಂದ್ರನು ಈ ಕ್ರೌಂಚಪರ್ವತವನ್ನು ಯಾರು ಶೀಘ್ರವಾಗಿ ಪ್ರದಕ್ಷಿಣೆ ಮಾಡುವರೋ ಅವರೇ ಬಲಶಾಲಿ ಎಂದು ಭಾವಿಸಲ್ಪಡತಕ್ಕವರು ಎಂದನು. (ಇಲ್ಲಿ ಕೃತ್ತಿಕಾಸುತಃ ಎಂಬ ಸಂಬುದ್ಧಿಯು ಸ್ತ್ರೀಪ್ರಾಧಾನ್ಯದಿಂದ ಅಸಾಮರ್ಥ್ಯ ಸೂಚಕವಾಗಿ ಪರಿಹಾಸದಲ್ಲಿ ಪರ್ಯವಸಾನ ಹೊಂದುತ್ತದೆ)

೧೦೩-೧೦೫. ಆ ಮಾತನ್ನು ಕೇಳಿದೊಡನೆಯೇ ಸ್ಕಂದನು ಮಯೂರವನ್ನು ಬಿಟ್ಟು ಆಕ್ಷಣದಲ್ಲಿಯೇ ಪಾದಚಾರಿಯಾಗಿ ಪ್ರದಕ್ಷಿಣೆ ಮಾಡಲು ಹೊರಟನು. ಇಂದ್ರನೂ ಆನೆಯಿಂದಿಳಿದು ನಿಂತಲ್ಲಿಯೇ ಪಾದಗಳಿಂದ ಪ್ರದಕ್ಷಿಣೆ ಮಾಡಿ ನಿಂತನು. ಆಗ ಗುಹನು ಪ್ರದಕ್ಷಿಣೆ ಮಾಡಿ ಇಂದ್ರನ ಸಮೀಪಕ್ಕೆ ಬಂದು ಎಲೈ ಮೂಢನೇ ಏಕೆ ಹಾಗೆಯೇ ನಿಂತೆ ಎಂದು ಕೇಳಲಾಗಿ ಇಂದ್ರನು ಕೌಟಿಲ್ಯದಿಂದ ನಾನು ಮೊದಲೇ ಪ್ರದಕ್ಷಿಣೆ ಮಾಡಿ ಬಂದೆನು ಎಂದನು. ನೀನೇ ಮೊದಲು ಪ್ರದಕ್ಷಿಣೆ ಮಾಡಿ ಬಂದೆಯಾ? ಎಂದು ಕುಮಾರನು ಇಂದ್ರನನ್ನು ಕೇಳಿದನು.

ಮಯಾ ಪೂರ್ವಂ ಮಯಾ ಪೂರ್ವಂ ವಿವದಂತೌ ಪರಸ್ಪರಂ ।
ಆಗಮ್ಯೋಚುರ್ಮಹೇಶಾಯ ಬ್ರಹ್ಮಣೇ ಮಾಧವಾಯ ಚ ॥ ೧೦೬ ॥

ಅಥೋವಾಚ ಹರಿಃ ಸ್ಕಂದಂ ಪ್ರಷ್ಟುಮರ್ಹಸಿ ಪರ್ವತಂ ।
ಯೋಽಯಂ ವಕ್ಷ್ಯತಿ ಪೂರ್ವಂ ಸ ಭವಿಷ್ಯತಿ ಮಹಾಬಲಃ ॥ ೧೦೭ ॥

ತನ್ಮಾಧವವಚಃ ಶ್ರುತ್ವಾ ಕ್ರೌಂಚಮಭ್ಯೇತ್ಯ ಪಾವಕಿಃ ।
ಪಪ್ರಚ್ಛಾದ್ರಿಮಿದಂ ಕೇನ ಕೃತಂ ಪೂರ್ವಂ ಪ್ರದಕ್ಷಿಣಂ ॥ ೧೦೮ ॥

ಇತ್ಯೇವಮುಕ್ತಃ ಕ್ರೌಂಚಸ್ತು ಪ್ರಾಹ ಪೂರ್ವಂ ಮಹಾಮತಿಃ ।
ಚಕಾರ ಗೋತ್ರಭಿತ್ಪೂರ್ವಂ ತ್ವಯಾ ಕೃತಮಥೋ ಗುಹ ॥ ೧೦೯ ॥

ಏವಂ ಬ್ರುವಂತಂ ಕ್ರೌಂಚಂ ಸ ಕ್ರೋಧಾತ್ಪ್ರಸ್ಫುರಿತಾಧರಃ ।
ಬಿಭೇದ ಶಕ್ತ್ಯಾ ಕೌಟಿಲ್ಯಾನ್ಮಹಿಷೇಣ ಸಮಂ ತದಾ ॥ ೧೧೦ ॥

ತಸ್ಮಿನ್ ಹತೇಽಥ ತನಯೇ ಬಲವಾನ್ ಸುನಾಭೋ
ವೇಗೇನ ಭೂಮಿಧರಪಾರ್ಥಿವಜಸ್ತ್ವಧಾಗಾತ್ ।

೧೦೬-೧೦೯. ನಾನು ಮೊದಲು ನಾನು ಮೊದಲು ಎಂದು ವಿವಾದಮಾಡುತ್ತಾ ಶಂಕರ, ಬ್ರಹ್ಮ, ವಿಷ್ಣು ಇವರುಗಳ ಸಮೀಪಕ್ಕೆ ಬಂದು ತಮ್ಮ ವಿವಾದವನ್ನು ಹೇಳಿಕೊಂಡರು. ಆಗ ಹರಿಯು ಸ್ಕಂದನನ್ನು ಕುರಿತು ಈ ವಿಷಯದಲ್ಲಿ ನೀನು ಪರ್ವತವನ್ನೇ ಕೇಳಬೇಕು. ಆ ಪರ್ವತವು ಯಾರು ಮೊದಲು ಎಂದು ಹೇಳುತ್ತದೆಯೋ ಅವರೇ ಬಲಶಾಲಿಗಳೆಂದು ತಿಳಿಯಬೇಕು ಎಂದನು. ಹರಿಯ ಆ ಮಾತನ್ನು ಕೇಳಿ ಸ್ಕಂದನು ಕ್ರೌಂಚಪರ್ವತದಲ್ಲಿ ಹೋಗಿ ಯಾರು ಮೊದಲು ನಿನ್ನ ಪ್ರದಕ್ಷಿಣೆ ಮಾಡಿದರೆಂದು ಕೇಳಲು ಆ ಕ್ರೌಂಚವು ಇಂದ್ರನೇ ಮೊದಲು ಪ್ರದಕ್ಷಿಣೆ ಮಾಡಿದನೆಂದೂ ಅನಂತರ ನೀನು ಮಾಡಿದೆ ಎಂದೂ ಸೂಕ್ಷ್ಮದೃಷ್ಟಿಯಿಂದ ಉತ್ತರ ಹೇಳಿತು.

೧೧೦-೧೧೩. ಹೀಗೆ ಹೇಳಿದ ಆ ಕ್ರೌಂಚನನ್ನು ನೋಡಿ ಕೋಪದಿಂದ ನಡುಗಿದ ತುಟಿಯುಳ್ಳ ಆ ಕುಮಾರನು ಕೌಟಿಲ್ಯವನ್ನಾಶ್ರಯಿಸಿ ಮಹಿಷನೊಡಗೂಡಿದ ಕ್ರೌಂಚನನ್ನು ಶಕ್ತ್ಯಾಯುಧದಿಂದ ಭೇದಿಸಿದನು. ಆಗ ಮಗನಾದ ಕ್ರೌಂಚನು ಹತನಾದುದನ್ನು ನೋಡಿ ಹಿಮವತ್ಪುತ್ರನಾದ ಸುನಾಭನು ವೇಗದಿಂದ ಓಡಿಬಂದನು.

ಬ್ರಹ್ಮೇಂದ್ರರುದ್ರಮರುದಶ್ವಿವಸುಪ್ರಧಾನಾ
ಜಗ್ಮುರ್ದಿವಂ ಮಹಿಷಮೀಕ್ಷ್ಯ ಹತಂ ಗುಹೇನ ॥ ೧೧೧ ॥

ಸ್ವಮಾತುಲಂ ವೀಕ್ಷ್ಯ ಬಲೀ ಕುಮಾರಃ
ಶಕ್ತಿಂ ಸಮುತ್ಪಾಟ್ಯ ನಿಹಂತುಕಾಮಃ ।
ನಿವಾರಿತಶ್ಚಕ್ರಧರೇಣ ವೇಗಾದಾಲಿಂಗ್ಯ
ದೋರ್ಭ್ಯಾಂ ಗುರುರಿತ್ಯುದೀರ್ಯ ॥ ೧೧೨ ॥

ಸುನಾಭಮಭ್ಯೇತ್ಯ ಹಿಮಾಚಲಸ್ತು
ಪ್ರಗೃಹ್ಯ ಹಸ್ತೇನ ನಿನಾಯ ತಂ ಚ ।
ಹರಿಂ ಕುಮಾರಂ ಸಶಿಖಂಡಿನಂ
ನಯನ್ನೇಗಾದ್ದಿವಂ ಪನ್ನಗಶತ್ರುಪತ್ರಃ ॥ ೧೧೩ ॥

ತತೋ ಗುಹಃ ಪ್ರಾಹ ಹರಿಂ ಸುರೇಶಂ
ಮೋಹೇನ ನಷ್ಟೋ ಭಗವನ್ ವಿವೇಕೀ
ಭ್ರಾತಾ ಮಯಾ ಮಾತುಲೇಯೋ
ನಿರಸ್ತಃ ತಸ್ಮಾತ್ಕರಿಷ್ಯೆ ಸ್ವಶರೀರಶೋಷಂ ॥ ೧೧೪ ॥

ಬ್ರಹ್ಮ, ಇಂದ್ರ, ರುದ್ರ, ಮರುತ್ತುಗಳು, ಇವರೆಲ್ಲರೂ ಗುಹನಿಂದ ಸತ್ತ ಮಹಿಷನನ್ನು ನೋಡಿ ಸ್ವರ್ಗಕ್ಕೆ ನಡೆದರು. ಆಗ ಓಡಿಬಂದ ಮಾವನಾದ ಸುನಾಭನನ್ನು ನೋಡಿ ಕುಮಾರಸ್ವಾಮಿಯು ಅವನನ್ನು ಶಕ್ತ್ಯಾಯುಧದಿಂದ ನಾಶಪಡಿಸಲು ಪ್ರಯತ್ನಿಸಿದನು. ಆಗ ಹರಿಯು ವೇಗದಿಂದ ಓಡಿಬಂದು ತನ್ನ ತೋಳುಗಳಿಂದ ಆ ಸುನಾಭನನ್ನು ತಬ್ಬಿಹಿಡಿದು ಗುರುಜನವನ್ನು ಕೊಲ್ಲಕೂಡದೆಂದು ಹೇಳುತ್ತಾ ತಡೆದನು. ಆಗ ಹಿಮವಂತನು ಪುತ್ರಶೋಕದಿಂದ ದುಃಖಿಸುತ್ತಿರುವ ಸುನಾಭನ ಸಮೀಪಕ್ಕೆ ಬಂದು ಕೈಯ್ಯಿನಿಂದ ಅವನನ್ನು ಹಿಡಿದುಕೊಂಡು ಸಮಾಧಾನಪಡಿಸಿ ಕರೆದುಕೊಂಡು ಹೋದನು. ಗರುಡವಾಹನನಾದ ಹರಿಯೂ ಸಹ ಮಯೂರ ವಾಹನನಾದ ಕುಮಾರನನ್ನು ಸಮಾಧಾನಪಡಿಸಿ ಸ್ವರ್ಗಲೋಕಕ್ಕೆ ಒಯ್ದನು.

೧೧೪-೧೧೬. ಅನಂತರ ಗುಹನು ಸುರಾಗ್ರಗಣ್ಯನಾದ ಹರಿಯನ್ನು ಕುರಿತು ಎಲೈ ಪೂಜ್ಯನೇ, ನನ್ನ ಅಜ್ಞಾನದಿಂದ ವಿವೇಕಿಯಾಗಿಯೂ ಭ್ರಾತೃವಾಗಿಯೂ ಮಾತುಲಪುತ್ರನಾಗಿಯೂ ಇದ್ದ ಕ್ರೌಂಚನು ನಷ್ಟನಾದನು. ಇಂತಹ ಅಕಾರ್ಯಕ್ಕೆ ಒಳಗಾದ ನಾನು ಅನುತಾಪದಿಂದ ಪ್ರಾಯಶ್ಚಿತ್ತ ರೂಪವಾದ ಕಾಯಶೋಷಣವನ್ನು

ತಮಾಹ ವಿಷ್ಣುಃ ವ್ರಜತೀರ್ಥವರ್ಯಂ
ಪೃಥೂದಕಂ ಪಾಪಹರಂ ಕುಮಾರ ।
ಸ್ನಾತ್ವೌಘವತ್ಯಾಂ ಹರಮೀಕ್ಷ್ಯ ಭಕ್ತ್ಯಾ
ಭವಿಷ್ಯಸೆ ಸೂರ್ಯಸಮಪ್ರಭಾವಃ ॥ ೧೧೫ ॥

ಇತ್ಯೇವಮುಕ್ತೋ ಹರಿಣಾ ಕುಮಾರ
ಸ್ತ್ವಭ್ಯೇತ್ಯ ತೀರ್ಥಂ ಪ್ರಸಮೀಕ್ಷ್ಯ ಶಂಭುಂ ।
ಸ್ನಾತ್ವಾರ್ಚ್ಯದೇವಾನ್ ಸ ರವಿಪ್ರಕಾಶೋ
ಜಗಾಮ ಶೈಲಂ ಸದನಂ ಹರಸ್ಯ ॥ ೧೧೬ ॥

ಸುಚಕ್ರನೇತ್ರೋಽಪಿ ಮಹಾಶ್ರಮೇ ತಪ-
ಶ್ಚಚಾರ ಶೈಲೆ ಪವನಾಶನಸ್ತು ।
ಆರಾಧಯಾಮಾಸ ವೃಷಧ್ವಜಂ ತಥಾ
ಹರೋಽಪಿ ತುಷ್ಟೋ ವರದೋ ಬಭೂವ ॥ ೧೧೭ ॥

ಹೊಂದುತ್ತೇನೆ ಎಂದನು. ಆಗ ಹರಿಯು ಅವನ ಅನುತಾಪವನ್ನು ನೋಡಿ ಕುಮಾರನೇ ದುಃಖಪಡಬೇಡ ಪೃಥೂದಕವೆಂಬ ಸರ್ವಪಾಪನಾಶಕವಾದ ತೀರ್ಥವಿದೆ. ಅಲ್ಲಿ ಹೋಗಿ ಓಘವತಿಯಲ್ಲಿ ಸ್ನಾನಮಾಡಿ ಅಲ್ಲಿರುವ ಶಂಕರನನ್ನು ಭಕ್ತಿಯಿಂದ ದರ್ಶನಮಾಡಿದಲ್ಲಿ ಸಕಲ ಪಾಪಗಳನ್ನೂ ಹೋಗಲಾಡಿಸಿಕೊಂಡು ಸೂರ್ಯನಂತೆ ಪ್ರಕಾಶಹೊಂದಿ ಬೆಳಗುತ್ತೀಯೆ, ಎಂದು ಸಮಾಧಾನಗೊಳಿಸಿದನು. ಹೀಗೆ ಹರಿಯಿಂದ ಹೇಳಲ್ಪಟ್ಟ ಕುಮಾರನು ಪೃಥೂದಕ ತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿ ಶಂಭುವನ್ನು ದರ್ಶನಮಾಡಿ ದೇವತೆಗಳನ್ನೂ ಪೂಜಿಸಿ ನಿಷ್ಕಲ್ಮಷನಾಗಿ ಸೂರ್ಯನಂತೆ ಜ್ವಲಿಸುತ್ತಾ ಹರನ ವಾಸಸ್ಥಾನವಾದ ಪರ್ವತಕ್ಕೆ ಹೊರಟುಹೋದನು.

೧೧೭-೧೨೧. ಸುಚಕ್ರನೇತ್ರನೂ ಸಹ ವಾಯುಭಕ್ಷಕನಾಗಿ ಮಹಾಶ್ರಮದಲ್ಲಿಯೇ ತಪಸ್ಸನ್ನು ಮಾಡಿ ಶಂಕರನನ್ನು ಪ್ರೀತಿಗೊಳಿಸಿದನು. ಸಂತುಷ್ಟನಾದ ಶಂಕರನನ್ನು ಕ್ರೌಂಚನಾಶಕನಾದ ಕುಮಾರನಂತೆ ತಾನೂ ಬಾಣನ ಬಾಹುವನ್ನು

ದೇವಾತ್ಸವನ್ರೇ ವರಮಾಯುಧಾರ್ಥೇ
ಕ್ರೌಂಚಾಂತಕಾರೀ ರಿಪುಬಾಹುಖಂಡಂ ।
ಛಿಂದ್ಯಾಂ ಯಥಾ ತ್ವತ್ಪ್ರತಿಮಂ
ಕರೇಣ ಬಾಣಸ್ಯ ತನ್ಮೆ ಭಗವಾನ್ ದದಾತು ॥ ೧೧೮ ॥

ತಮಾಹ ಶಂಭುರ್ವ್ರಜ ದತ್ತಮೇತದ್ವರಂ
ಹಿ ಚಕ್ರಸ್ಯ ತವಾಯುಧಸ್ಯ ।
ಬಾಣಸ್ಯ ತದ್ಬಾಹುವನಂ ಪ್ರವೃದ್ಧಂ
ಸಂಛೇತ್ಸ್ಯಸೆ ನಾತ್ರ ವಿಚಾರ್ಯಮಸ್ತಿ ॥ ೧೧೯ ॥

ವರೆ ಪ್ರದತ್ತೆ ತ್ರಿಪುರಾಂತಕೇನ
ಗಣೇಶ್ವರಃ ಸ್ಕಂದಮುಪಾಜಗಾಮ ।
ನಿಪತ್ಯ ಪಾದೌ ಪ್ರತಿವೇದ್ಯ ಹೃಷ್ಟೋ
ನಿವೇದಯಾಮಾಸ ಹರಪ್ರಸಾದಂ ॥ ೧೨೦ ॥

ಏವಂ ತವೋಕ್ತಂ ಮಹಿಷಾಸುರಸ್ಯ ವಧಃ
ತ್ರಿನೇತ್ರಾತ್ಮಜಶಕ್ತಿಭೇದಾತ್ ।

ಕತ್ತರಿಸಬೇಕೆಂದೂ ಅದಕ್ಕಾಗಿ ತನಗೆ ಆಯುಧವು ವರರೂಪದಿಂದ ಕೊಡಲ್ಪಡ ಬೇಕೆಂದೂ ಪ್ರಾರ್ಥಿಸಿದನು. ಆಗ ಶಂಕರನು ಅವನನ್ನು ಕುರಿತು ಆಗಲಿ ನೀನು ಹೊರಡು ನಿನ್ನ ಚಕ್ರಾಯುಧಕ್ಕೆ ನಾನು ಆ ವರವನ್ನು ಕೊಟ್ಟಿದ್ದೇನೆ. ನಿಸ್ಸಂಶಯ ವಾಗಿಯೂ ನೀನು ಬಾಣಾಸುರನ ಬಾಹುವನವನ್ನು ಛೇದಿಸುತ್ತೀಯೆ ಎಂದನು. ಶಂಭುವಿನಿಂದ ಈ ಪ್ರಕಾರವಾದ ವರವು ದೊರೆತ ಮೇಲೆ ಗಣೇಶ್ವರನಾದ ಆ ಸುಚಕ್ರನೇತ್ರನು ಸ್ಕಂದನ ಸಮೀಪಕ್ಕೆ ಬಂದು ಅವನ ಪಾದಗಳಿಗೆ ವಂದಿಸಿ ತನಗೆ ದೊರೆತ ಶಂಕರಾನುಗ್ರಹವನ್ನು ಸಂತೋಷದಿಂದ ಸ್ಕಂದನಿಗೆ ಹೇಳಿದನು. ಈ ಪ್ರಕಾರ ಶಂಕರಪುತ್ರನಾದ ಷಣ್ಮುಖನ ಶಕ್ತ್ಯಾಯುಧದಿಂದ ಮಹಿಷಾಸುರ ಮತ್ತು ತಾರಕಾಸುರ ಇವರು ಹತರಾದುದನ್ನು ನಿನಗೆ ಹೇಳಿಯಾಯಿತು. ಈ ಉಪಾಖ್ಯಾನವು

ಕ್ರೌಂಚಸ್ಯ ಮೃತ್ಯುಃ ಶರಣಾಗತಾನಾಂ
ಪಾಪಾಪಹಂ ಪುಣ್ಯವಿವರ್ಧನಂ ಚ ॥೧೨೦॥

ಇತಿ ಶ್ರೀ ವಾಮನಪುರಾಣೇ ಮಹಿಷಾಸುರತಾರಕವಧೋಪಾಖ್ಯಾನೇ
ಕ್ರೌಂಚ ಭೇದನಂ ನಾಮಾಷ್ಟ ಪಂಚಾಶತ್ತಮೋಽಧ್ಯಾಯಃ

ಕ್ರೌಂಚನ ಮೃತ್ಯುವಿಗೆ ಬೋಧಕವಾಗಿಯೂ ಶರಣಾಗತರಾದ ಭಕ್ತರಿಗೆ ಪಾಪನಾಶಕವಾಗಿಯೂ ಪುಣ್ಯವರ್ಧಕವಾಗಿಯೂ ಇರುತ್ತದೆ.

ಇಲ್ಲಿಗೆ ಶ್ರೀ ವಾಮನಪುರಾಣದ ಮಹಿಷಾಸುರ ತಾರಕವಧೋಪಾಖ್ಯಾನದಲ್ಲಿ
ಕ್ರೌಂಚಭೇದನವೆಂಬ ಐವತ್ತೆಂಟನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಸೇನಾಪತಿಯಾಗಿ ಅಭಿಷಿಕ್ತನಾದ ಕುಮಾರಸ್ವಾಮಿಯು ಶಂಕರನನ್ನೂ, ಪಾರ್ವತಿಯನ್ನೂ, ಅಗ್ನಿ, ಕೃತ್ತಿಕಾ, ಕುಟಿಲೆಯರನ್ನೂ ಸಹ ವಂದಿಸಿ ಚತುರ್ಮುಖನನ್ನೂ ನಮಸ್ಕರಿಸಿ, ದೇವತೆಗಳನ್ನೂ, ತಪಸ್ವಿಗಳನ್ನೂ ಸಂಬೋಧಿಸಿ ನಿಮ್ಮ ಅನುಗ್ರಹದಿಂದ ಮಹಿಷನನ್ನೂ, ತಾರಕನನ್ನೂ ನಾನು ಜಯಿಸುವೆನು. ನಾನು ಶಿಶುವಾಗಿರುವದ್ದರಿಂದ ಮತ್ತೇನನ್ನೂ ಹೇಳಲು ಅರಿತವನಾಗಿಲ್ಲ ಬ್ರಹ್ಮನ ಅನುಗ್ರಹವನ್ನು ಪ್ರಾರ್ಥಿಸುತ್ತಿದ್ದೇನೆ ಎಂದು ಹೇಳಲಾಗಿ ದೇವತೆಗಳೆಲ್ಲರೂ ಆ ಮಾತನ್ನು ಕೇಳಿ ಸಂತೋಷಪಟ್ಟು ನಿರ್ಭಯರಾಗಿ ನಿಂತರು. ಆಗ ಶಂಕರನು ಬ್ರಹ್ಮನನ್ನು ಬಲಗೈ ಹಿಡಿದು ಕರೆದುಕೊಂಡು ಬಂದು ಕುಮಾರನ ಪ್ರೀತಿಗಾಗಿ ಅವನ ಸಮೀಪದಲ್ಲಿ ಕುಳ್ಳಿರಿಸಿದನು. ಆಗ ಪಾರ್ವತಿಯು ಮಗುವೇ, ಲೋಕವಂದ್ಯನಾದ ಈ ವಿಷ್ಣುವಿನ ಪಾದಗಳಿಗೆ ವಂದಿಸು ಎಂದು ಹೇಳಿ ವಿಷ್ಣುವಿನ ಸರ್ವೋತ್ಕರ್ಷವನ್ನು ಶಂಕರನ ಉಪದೇಶದಿಂದ ತಾನು ತಿಳಿದಿದ್ದಂತೆ ಅವನಿಗೆ ತಿಳಿಯಹೇಳಿದಳು. ಆಗ ಕುಮಾರನು ಆ ಮಹಾವಿಷ್ಣುವಿಗೆ ನಮಸ್ಕರಿಸಿ ಅವನಿಂದ ನಾನಾವಿಧವಾದ

ಮಂಗಲಾಶೀರ್ವಾದವನ್ನು ಪಡೆದನೆಂದು ಹೇಳಲಾಯಿತು. ಅನಂತರ ಕುಮಾರನು ಶಕ್ತ್ಯಾಯುಧಧಾರಿಯಾಗಿ ಗಗನಕ್ಕೆ ಹಾರಿದನು. ಅವನ ಅನುಚರರಾದ ಗಣಗಳೆಲ್ಲವೂ ಅವನನ್ನು ಅನುಸರಿಸಿ ಹಾರಿದವು. ಬಹುದೂರ ಪ್ರಯಾಣಮಾಡಿದನಂತರ ಸ್ಕಂದನ ಆಜ್ಞೆಯಿಂದ ಆ ಗಣಗಳೆಲ್ಲವೂ ಭೂಮಿಗೆ ಇಳಿದು ಪರ್ವತ ಸಮೀಪದಲ್ಲಿ ನಿಂತು ಕೋಲಾಹಲಮಾಡಲಾಗಿ ಆ ಧ್ವನಿಯು ಭೂಮ್ಯಾಕಾಶಗಳನ್ನೆಲ್ಲಾ ವ್ಯಾಪಿಸಿ ಪಾತಾಲ ಲೋಕಕ್ಕೂ ಮುಟ್ಟಿತು. ಆ ಧ್ವನಿಯನ್ನು ಕೇಳಿ ಮಹಿಷ, ತಾರಕ, ವಿರೋಚನ, ಕುಂಭ ಮೊದಲಾದ ದಾನವರೆಲ್ಲರೂ ಭಯಪಟ್ಟು ಅಂಧಕನ ಬಳಿಗೆ ಬಂದು ಅಲ್ಲಿ ತರ್ಕವಿತರ್ಕಗಳಿಂದ ಮಂತ್ರಾಲೋಚನೆಗೆ ತೊಡಗಿದರು ಆ ಸಮಯದಲ್ಲಿ ಪಾತಾಲ ಕೇತುವೆಂಬ ದೈತ್ಯನು ಭೂಮಿಯಲ್ಲಿದ್ದ ಗಾಲವಾಶ್ರಮವನ್ನು ನಾಶಪಡಿಸಲು ಹೋಗಿದ್ದು ಕುಮಾರನ ಸೈನ್ಯದಿಂದ ಬಲವಾಗಿ ಪೆಟ್ಟನ್ನು ತಿಂದು ತಾನು ಓಡಿಬಂದ ಸಂಗತಿಯನ್ನು ಅಲ್ಲಿ ಹೇಳಲು ಅಂಧಕನು ಅವನಿಗೆ ಅಭಯವನ್ನಿತ್ತನೆಂದೂ ಹೇಳ ಲಾಯಿತು. ನಂತರ ಮಹಿಷ, ತಾರಕ, ಬಾಣ ಇವರು ಅಂಧಕನಿಗೆ ತಿಳಿಯಪಡಿಸದೆ ವೀರಾವೇಶದಿಂದ ತಮ್ಮ ತಮ್ಮ ಪರಿವಾರದೊಡನೆ ಭೂಯುದ್ಧಕ್ಕಾಗಿ ಹೊರಟರು. ಆ ದಾನವರಿಗೂ ಕುಮಾರನ ಗಣಗಳಿಗೂ ಮಹಾಯುದ್ಧ ನಡೆದು ದೈತ್ಯರೆಲ್ಲರೂ ವಿನಾಶೋನ್ಮುಖರಾಗಲು ಅದನ್ನು ನೋಡಿ ಮಹಿಷತಾರಕರು ಯುದ್ಧಕ್ಕಿಳಿದು ಗಣ ಗಳನ್ನೆಲ್ಲಾ ಪರಾಜಯಗೊಳಿಸಿ ಕುಮಾರನ ಸಮೀಪಕ್ಕೂ ಮುಂದುವರಿದು ಬಂದರು. ಆಗ ಸುಚಕ್ರಾಕ್ಷನೆಂಬ ಗಣಪತಿಯು ಮಹಿಷನನ್ನು ಚಕ್ರಾಯುಧದಿಂದ ಎದುರಿಸಲು ದಾನವರ ಹಾಹಾಕಾರವು ಗಗನವನ್ನು ಮುಟ್ಟಿತು. ಅದನ್ನು ಕೇಳಿ ಬಲಿಪುತ್ರನಾದ ಬಾಣನು ವೇಗದಿಂದ ಬಂದು ಆ ಸುಚಕ್ರಾಕ್ಷನನ್ನು ಬಂಧಿಸಿದನು. ಆಗ ಮಕರಾಕ್ಷನು ಗದಾಪಾಣಿಯಾಗಿ ಬಾಣನನ್ನು ಎದುರಿಸಲು ಆ ಬಾಣನೂ ಪರಾಙ್ಮುಖನಾದನು. ದಾನವರ ಸೈನ್ಯವೆಲ್ಲವೂ ಪರಾಙ್ಮುಖವಾದುದನ್ನು ನೋಡಿ ತಾರಕನು ಯುದ್ಧಭೂಮಿ ಯಲ್ಲಿ ಸುರಸೈನ್ಯವನ್ನೆಲ್ಲಾ ವ್ಯಾಕುಲಪಡಿಸಿ ಕುಮಾರನನ್ನು ಎದುರಿಸಲು ಅಭಿಮುಖ ನಾಗಿ ಬಂದನು. ಆಗ ಕುಮಾರನು ಶಕ್ತ್ಯಾಯುಧದಿಂದ ತಾರಕನನ್ನು ನಾಶಪಡಿಸಿ ದನು. ತಾರಕನು ಮರಣಹೊಂದಿದುದನ್ನು ನೋಡಿ ಭಯದಿಂದ ಮಹಿಷನು ಯುದ್ಧಭೂಮಿಯಿಂದ ಓಡಿಹೋಗಿ ಹಿಮವತ್ಪರ್ವತದಲ್ಲಿ ಅಡಗಿಕೊಂಡನು. ಬಾಣನೂ ಸಹ ಸಮುದ್ರವನ್ನು ಪ್ರವೇಶಿಸಿ ಅಲ್ಲಿ ಅಡಗಿಕೊಂಡನು. ಅನಂತರ ಕುಮಾರನು ಮಹಿಷನನ್ನೂ ನಾಶಪಡಿಸಲು ಆಯುಧಧಾರಿಯಾಗಿ ತನ್ನ ಮಯೂರವನ್ನು ಆರೋಹಣಮಾಡಿ ಹೊರಟನು. ಆಗ ಮಹಿಷನು ಕುಮಾರನನ್ನು ನೋಡಿ ಕೈಲಾಸ ವನ್ನೂ ಹಿಮವತ್ಪರ್ವತವನ್ನೂ ಬಿಟ್ಟು ಕ್ರೌಂಚ ಪರ್ವತಕ್ಕೆ ಹೋಗಿ ಅಲ್ಲಿ ಗುಹೆಯಲ್ಲಿ ಅಡಗಿಕೊಂಡನು. ಕ್ರೌಂಚ ಪರ್ವತವನ್ನು ಭೇದಿಸುವ ವಿಷಯದಲ್ಲಿ ಬಂಧುಹನನ

ದಿಂದ ಪರಾಙ್ಮುಖನಾಗಿದ್ದ ಗುಹನ ಮನಸ್ಸು ಒಡಂಬಡಲಿಲ್ಲ. ಆಗ ಬ್ರಹ್ಮ, ಹರಿ, ಹರ, ಇಂದ್ರ ಇವರೆಲ್ಲರೂ ಬಂದು ಕ್ರೌಂಚ ಸಹಿತನಾದ ಮಹಿಷನನ್ನು ನಾಶಪಡಿಸಿ ದೇವಕಾರ್ಯಕ್ಕೆ ಸಹಾಯಮಾಡೆಂದು ಕುಮಾರನನ್ನು ಪ್ರೋತ್ಸಾಹಿಸಿದರು. ಆಗ ಕುಮಾರನು ತನಗೆ ಭ್ರಾತೃವಾಗಿಯೂ, ತಾಯಿಗೆ ತಮ್ಮನ ಮಗನಾಗಿಯೂ ಇರುವ ಬಂಧುವಾದ ಕ್ರೌಂಚವನ್ನು ಕೊಲ್ಲಲಾರೆನು. ದೈತ್ಯನೇ ಅಲ್ಲಿಂದ ಹೊರಗೆ ಬರುವಂತೆ ಮಾಡಿ, ಅವನನ್ನು ಕೊಲ್ಲುತ್ತೇನೆ ಎಂದನು. ಆಗ ಇಂದ್ರನು ನನಗಿಂತಲೂ ನೀನು ಬುದ್ಧಿವಂತನೇ, ಏಕೆ ಹೀಗೆ ಹೇಳುತ್ತೀಯೆ. ಬಹು ಜನರ ಸುಖಕ್ಕಾಗಿ ಒಬ್ಬನನ್ನು ಕೊಲ್ಲಬಹುದು. ಒಬ್ಬನ ಸುಖಕ್ಕಾಗಿ ಬಹುಜನರನ್ನು ಕೊಲ್ಲಬಾರದು. ನಾನೂ ಈ ಧರ್ಮಸೂಕ್ಷ್ಮವನ್ನು ತಿಳಿದು ಪೂರ್ವದಲ್ಲಿ ನಮುಚಿಯನ್ನು ಕೊಂದಿದ್ದೇನೆ ಆದುದರಿಂದ ಹರಿಯ ಮಾತನ್ನು ಕೇಳಿ ಅದರಂತೆ ನಡೆದುಕೊ ಎಂದು ಆಕ್ಷೇಪಿಸಿ ಹೇಳಿದನು. ಆಗ ಕೋಪಗೊಂಡ ಕುಮಾರನಿಗೂ ಇಂದ್ರನಿಗೂ ಕಟುತರವಾದ ಮಾತುಗಳೇ ನಡೆದುವು. ಆಗ ಯಾರು ಬುದ್ಧಿವಂತರೆಂಬುದನ್ನು ನಿರ್ಣಯಿಸಲು ತ್ವರಿತವಾದ ಕ್ರೌಂಚಪ್ರದಕ್ಷಿಣೆಯೇ ಅವರಿಗೆ ಪಣ ಬಂಧವಾಗಿ ನಿಂತಿತು. ಕುಮಾರನು ವೇಗದಿಂದ ಪ್ರದಕ್ಷಿಣೆ ಬರುವುದರೊಳಗೆ ಇಂದ್ರನು ಇದ್ದಲ್ಲಿಯೇ ಪ್ರದಕ್ಷಿಣೆಯನ್ನು ತ್ವರೆಯಿಂದ ನಡೆಸಿದನು. ಆಗ ಯಾರು ಮುಂದೆ ಎಂಬ ಚರ್ಚೆಯಲ್ಲಿ ಕ್ರೌಂಚನೇ ಸಾಕ್ಷಿಯಾಗಬೇಕೆಂದು ಹರಿಯು ನಿರ್ಧರಿಸಿದನು. ಕ್ರೌಂಚವು ಇಂದ್ರನೇ ಮೊದಲು ಪ್ರದಕ್ಷಿಣೆಮಾಡಿದನೆಂದು ಸಾಕ್ಷಿ ನುಡಿಯಲು ಕುಮಾರನು ಕೋಪದಿಂದ ಕ್ರೌಂಚವನ್ನು ಮಹಿಷನೊಡನೆ ಶಕ್ತ್ಯಾಯುಧದಿಂದ ಭೇದಿಸಿದನು. ಬ್ರಹ್ಮೇಂದ್ರಾದಿಗಳು ಮಹಿಷನಾಶದಿಂದ ಸಂತುಷ್ಟರಾಗಿ ಸ್ವರ್ಗಕ್ಕೆ ತೆರಳಿದರು. ಆಗ ಕ್ರೌಂಚನ ನಾಶದಿಂದ ದುಃಖಿತನಾದ ಸುನಾಭನು ವೇಗದಿಂದ ಅಲ್ಲಿಗೆ ಬರಲು ಅವನನ್ನೂ ಶಕ್ತ್ಯಾಯುಧದಿಂದ ಸಂಹರಿಸಲು ಕುಮಾರನು ಉದ್ಯುಕ್ತನಾದನು. ಆಗ ಹರಿಯು ವೇಗದಿಂದ ಬಂದು ಅವನನ್ನು ತಡೆದನು ಹಿಮವಂತನು ಬಂದು ಪುತ್ರನಾದ ಸುನಾಭನನ್ನು ಸಂತೈಸಿ ಕರೆದೊಯ್ದನು. ಆಗ ಕುಮಾರನು ಬಂಧು ನಾಶಕ್ಕಾಗಿ ದುಃಖಿಸಿ ಶರೀರಶೋಷಣೆ ಮಾಡಲು ಸಿದ್ಧನಾಗಲು ಹರಿಯ ಉಪದೇಶದಿಂದ ಪೃಥೂದಕ ತೀರ್ಥದಲ್ಲಿ ಓಘವತಿಯ ಸ್ನಾನವೇ ಸರ್ವಪಾಪನಾಶಕವೆಂದು ತಿಳಿದು ಕುಮಾರನು ಅಲ್ಲಿ ಹೋಗಿ ಸ್ನಾನಮಾಡಿ ತೇಜಸ್ವಿಯಾಗಿ ಬೆಳಗಿದನು. ನಂತರ ಹರನ ಸ್ಥಾನಕ್ಕೆ ತೆರಳಿದನು. ಸುಚಕ್ರಾಕ್ಷನೂ ಸಹ ಬಾಣನನ್ನು ಕೊಲ್ಲಲು ಶಂಕರನನ್ನು ಆರಾಧಿಸಿ ಅವನಿಂದ ವರವನ್ನು ಹೊಂದಿ ಕುಮಾರಸ್ವಾಮಿಯ ಸಮೀಪಕ್ಕೆ ಬಂದನೆಂದೂ ಹೇಳಿ ಫಲಶ್ರುತಿಯೊಡನೆ ಉಪಸಂಹರಿಸಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ನವಪಂಚಾಶತ್ತಮೋಽಧ್ಯಾಯಃ

ನಾರದ ಉವಾಚ

ಯೋಽಸೌ ಮಂತ್ರಯುತಾಂ ಪ್ರಾಪ್ತೋ ದೈತ್ಯಾನಾಂ ಶರತಾಡಿತಃ ।
ಸ ಕೇನ ವದ ನಿರ್ಭಿನ್ನಃ ಶರೇಣ ದಿತಿಜೇಶ್ವರಃ ॥ ೧ ॥

ಪುಲಸ್ತ್ಯ ಉವಾಚ

ಆಸೀನ್ನೃಪೋ ರಘುಕುಲೇ ರಿಪುಜಿನ್ಮಹರ್ಷೇ
ತಸ್ಯಾತ್ಮಜೋ ಗುಣಗಣೈಕನಿಧಿರ್ಮಹಾತ್ಮಾ ।
ಶೂರೋರಿಸೈನ್ಯದಮನೋ ಬಲವಾನ್ ಸುಧೃಷ್ಟೋ
ವಿಪ್ರಾಂಧದೀನಕೃಪಣಾರ್ತಿಶಮಃ ಪೃಥಿವ್ಯಾಂ ॥ ೨ ॥

ಋತಧ್ವಜೋ ನಾಮ ಮಹಾಮಹೀಶಃ
ಸ ಗಾಲವಾರ್ಥೇ ತುರಗಾಧಿರೂಢಃ ।
ಪಾತಾಲಕೇತುಂ ನಿಜಘಾನ ಪೃಷ್ಠೇ
ಬಾಣೇನ ಚಂದ್ರಾರ್ಧನಿಭೇನ ವೇಗಶಃ ॥ ೩ ॥

ಐವತ್ತೊಂಭತ್ತನೆಯ ಅಧ್ಯಾಯವು

೧-೩. ನಾರದರು ಪ್ರಶ್ನೆಮಾಡುತ್ತಾರೆ. ದೈತ್ಯರು ಮಂತ್ರಾಲೋಚನೆ ಮಾಡುತ್ತಿದ್ದ ಕಾಲದಲ್ಲಿ ಬಾಣಗಳಿಂದ ಹೊಡೆಯಲ್ಪಟ್ಟು ಓಡಿಬಂದ ಆ ದೈತ್ಯನನ್ನು ಯಾರು ಸಂಹರಿಸಿದರು. ಇದಕ್ಕೆ ಉತ್ತರವಾಗಿ ಪುಲಸ್ತ್ಯರು ರಘುಕುಲದಲ್ಲಿ ಒಬ್ಬ ಪ್ರಸಿದ್ಧನಾದ ರಾಜನಿದ್ದನು. ಅವನಿಗೆ ಶೂರನಾಗಿಯೂ ದೀನರಲ್ಲಿ ದಯಾಶಾಲಿಯಾಗಿಯೂ ಸರ್ವಗುಣ ಸಮೃದ್ಧನಾಗಿಯೂ ಇದ್ದ ಋತಧ್ವಜನೆಂಬ ಮಗನಿದ್ದನು. ಅವನು ಗಾಲವನಿಗಾಗಿ ಅಶ್ವಾರೂಢನಾಗಿ ಹಿಂದಿನಿಂದ ಹೋಗಿ ಅರ್ಧಚಂದ್ರಬಾಣದಿಂದ ಆ ಪಾತಾಲಕೇತುವನ್ನು ನಾಶಮಾಡಿದನು ಎಂದರು.

ನಾರದ ಉವಾಚ

ಕಿಮರ್ಥಂ ಗಾಲವಸ್ಯಾಸೌ ಸಾಧಯಾಮಾಸ ಸತ್ತಮ ।
ಯೇನಾಸೌ ಪತ್ರಿಣಾ ತೂರ್ಣಂ ನಿಜಘಾನ ನೃಪಾತ್ಮಜಃ ॥ ೪ ॥

ಪುಲಸ್ತ್ಯ ಉವಾಚ

ಪುರಾ ತಪಸ್ತಪ್ಯತಿ ಗಾಲವರ್ಷೌ
ಮಹಾಶ್ರಮೆ ಸ್ವೆ ಸತತಂ ನಿವಿಷ್ಟೆ ।
ಪಾತಾಲಕೇತುಸ್ತಪಸೋಽಸ್ಯ ವಿಘ್ನಂ
ಕರೋತಿ ಮೌಢ್ಯಾತ್ಸಮಾಧಿಭಂಗಂ ॥ ೫ ॥

ನಚೇಷ್ಯತೇಽಸೌ ತಪಸೋ ವ್ಯಯಂ ಹಿ
ಶಕ್ನೋತಿ ಕರ್ತುಂ ತ್ವಥ ಭಸ್ಮಸಾತ್ತಂ ।
ಆಕಾಶಮೀಕ್ಷ್ಯಾಥ ಸ ದೀರ್ಘಮುಷ್ಣಂ
ಮುಮೋಚ ನಿಶ್ವಾಸಮನುತ್ತಮಂ ಹಿ ॥ ೬ ॥

ತತೋಽಂಬರಾದ್ವಾಜಿವರಃ ಪಪಾತ
ಬಭೂವ ವಾಣೀ ತ್ವಶರೀರಿಣೀ ಚ ।

೪-೮. ಪುನಃ ನಾರದರು ಎಲೈ ಮಹಾತ್ಮನೇ ಬಾಣದಿಂದ ಪಾತಾಲಕೇತುವನ್ನು ಹೊಡೆದು ನಾಶಮಾಡಿದ ಈ ರಾಜಪುತ್ರನು ಗಾಲವನಿಗಾಗಿ ಏಕೆ ಈ ಕಾರ್ಯಕ್ಕೆ ಹೋದನು ಎಂದು ಪ್ರಶ್ನೆಮಾಡಲಾಗಿ ಪುಲಸ್ತ್ಯರು ಅದಕ್ಕೆ ಉತ್ತರವಾಗಿ ಪೂರ್ವದಲ್ಲಿ ಗಾಲವ ಋಷಿಯು ತನ್ನ ಮಹಾಶ್ರಮದಲ್ಲಿ ಯಾವಾಗಲೂ ತಪಸ್ಸಿನಲ್ಲೇ ನಿರತನಾಗಿರುತ್ತಿರಲಾಗಿ ಪಾತಾಲಕೇತುವು ಮೂಢತನದಿಂದ ಆ ಋಷಿಯ ತಪೋನಿಯಮಕ್ಕೆ ಭಂಗತರುತ್ತಿದ್ದನು. ಮಹರ್ಷಿಯು ಅವನನ್ನು ನಾಶಮಾಡಲು ಸಮರ್ಥನಾಗಿದ್ದರೂ ತನ್ನ ತಪಸ್ಸಿನ ನಾಶಕ್ಕಾಗಿ ಭಯಪಟ್ಟು ತಾನಾಗಿಯೇ ಅವನನ್ನು ಕೊಲ್ಲಲು ಇಷ್ಟಪಡಲಿಲ್ಲ ಆಗ ಆ ಋಷಿಯು ಒಂದು ದಿನ ಆಕಾಶವನ್ನು ನೋಡುತ್ತಾ ಈ ದಾನವನ ಹಿಂಸೆಯಿಂದ ದೀರ್ಘವಾಗಿಯೂ ಉಷ್ಣವಾಗಿಯೂ ಇರುವ ನಿಟ್ಟುಸುರನ್ನು ಬಿಡುತ್ತ ಕೂತನು. ಆಗ ಆಕಾಶದಿಂದ ಒಂದು ಉತ್ತಮಾಶ್ವವು ಕೆಳಕ್ಕೆ ಬಿದ್ದಿತು. ಅಶರೀರವಾಣಿಯೂ ಕೇಳಿಸಿತು. ಈ ಕುದುರೆಯು ಬಹಳ ಬಲಿಷ್ಟ

ಅಸೌ ತುರಂಗೋ ಬಲವಾನ್ ಕ್ರಮೇತ
ತ್ವಹ್ನಾ ಸಹಸ್ರಾಣಿ ತು ಯೋಜನಾನಾಂ ॥ ೭ ॥

ಸ ತಂ ಪ್ರಗೃಹ್ಯಾಶ್ವವರಂ ತುರಂಗ
ಮೃತಧ್ವಜಂ ಯೋಜ್ಯ ತದಾತ್ತಶಸ್ತ್ರಂ।
ಸ್ಥಿತಸ್ತಪಸ್ಯೇವ ತತೋ ಮಹರ್ಷಿಃ
ದೈತ್ಯಂ ಸಮಭ್ಯೇತ್ಯ ನೃಪೋ ಬಿಭೇದ ॥ ೮ ॥

ನಾರದ ಉವಾಚ

ಕೇನಾಂಬರತಲಾದ್ವಾಜೀ ನಿಸ್ಸೃಷ್ಟೋ ವದ ಸುವ್ರತ।
ವಾಕ್ಚಸ್ಯಾದೇಹಿನೀ ಜಾತಾ ಪರಂ ಕೌತೂಹಲಂ ಮಮ ॥ ೯ ॥

ಪುಲಸ್ತ್ಯ ಉವಾಚ

ವಿಶ್ವಾವಸುರ್ನಾಮ ಮಹೇಂದ್ರಗಾಯನೋ
ಗಂಧರ್ವರಾಜೋ ಬಲವಾನ್ ಯಶಸ್ವೀ।
ನಿಸ್ಸೃಷ್ಟವಾನ್ ಭೂವಲಯೆತುರಂಗ
ಮೃತಧ್ವಜಸ್ಯೈವ ಸುತಾರ್ಥಮಾಶು ॥ ೧೦ ॥

ವಾದದ್ದು. ಅದು ಹಗಲಿನಲ್ಲಿ ಸಾವಿರ ಯೋಜನಗಳನ್ನು ನಡೆಯಬಲ್ಲದು. ಈ ಮಾತನ್ನು ಕೇಳಿ ಗಾಲವನು ಋತಧ್ವಜನನ್ನು ಈ ಕುದುರೆಗೆ ನಾಯಕನನ್ನಾಗಿ ಸೇರಿಸಿ ಶಸ್ತ್ರಧಾರಿಯಾದ ಅವನನ್ನು ದಾನವ ನಾಶಕ್ಕಾಗಿ ಪ್ರೇರಿಸಿ ತಾನು ತಪಸ್ಸಿನಲ್ಲೇ ನಿರತನಾದನು. ಆಗ ಆ ಧೊರೆಯು ದೈತ್ಯನನ್ನು ಈ ಕುದುರೆಯ ಸಹಾಯದಿಂದ ಅಟ್ಟಿಸಿಕೊಂಡು ಹೋಗಿ ನಾಶಪಡಿಸಿದನು ಎಂದರು.

೯-೧೧. ಪುನಃ ನಾರದರು ಆಕಾಶದಿಂದ ಆ ಕುದುರೆಯನ್ನು ಕಳುಹಿಸಿದವರು ಯಾರು. ಆ ಅಶರೀರವಾಣಿಯೂ ಕೂಡ ಯಾರದು ಎಂದು ಪ್ರಶ್ನೆಮಾಡಲು ಅದಕ್ಕೆ ಉತ್ತರವಾಗಿ ಪುಲಸ್ತ್ಯರು ವಿಶ್ವಾವಸುವೆಂಬ ಯಶಸ್ವಿಯಾಗಿಯೂ ಇಂದ್ರನ ಗಾಯಕನಾಗಿಯೂ ಇದ್ದ ಗಂಧರ್ವರಾಜನು ಋತಧ್ವಜನಿಗೆ ಪುತ್ರಿಯನ್ನು ತರಲು ಆ ಕುದುರೆಯನ್ನು ಭೂಮಿಗೆ ಕಳುಹಿಸಿಕೊಟ್ಟನೆಂದರು. ಪುನಃ ನಾರದರು ಗಂಧರ್ವ ರಾಜನಿಗೆ ಆ ಕುದುರೆಯನ್ನು ಕಳುಹಿಸಿದುದರಿಂದ ಪ್ರಯೋಜನವೇನು. ಆ ಉತ್ತ

ನಾರದ ಉವಾಚ

ಕೋऽಸೌ ಗಂಧರ್ವರಾಜಸ್ಯ ಯೇನಾಪ್ರೈಷೀನ್ಮಹಾಜವಂ ।
ರಾಜ್ಞಃ ಕುವಲಯಾಶ್ವಸ್ಯ ಕೋऽಸೌ ನೃಪಸುತಸ್ಯ ಚ ॥ ೧೧ ॥

ಪುಲಸ್ತ್ಯ ಉವಾಚ

ವಿಶ್ವಾವಸೋಃ ಶೀಲಗುಣೋಪಪನ್ನಾ
ಆಸೀತ್ಪುರಂಧ್ರೀ ಸುಭಗಾ ತ್ರಿಲೋಕೇ ।
ಲಾವಣ್ಯರಾಶಿಃ ಶಶಿಕಾಂತಿತುಲ್ಯಾ
ಮದಾಲಸಾ ನಾಮ ಮದಾಲಸೇವ ॥ ೧೨ ॥

ತಾಂ ನಂದನೇ ದೇವರಿಪುಸ್ತರಸ್ವೀ
ಸಂಕ್ರೀಡಂತೀಂ ರೂಪವತೀಂ ದದರ್ಶ ।
ಪಾತಾಲಕೇತುಸ್ತು ಜಹಾರ ತನ್ವೀಂ
ತಸ್ಯಾರ್ಥತಃ ಸೋऽಶ್ವವರಃ ಪ್ರದತ್ತಃ ॥ ೧೩ ॥

ಹತ್ವಾರಿದೈತ್ಯಂ ನೃಪತೇಸ್ತನೂಜೋ
ಲಬ್ಧ್ವಾ ವರೋರೂಮಪಿ ವಸ್ಥಿತೋऽಭೂತ್ ।
ದೃಷ್ಟ್ವಾ ಯಥಾ ದೇವಪತಿರ್ಮಹೇಂದ್ರಃ
ಶಚ್ಯಾ ತಥಾ ರಾಜಸುತೋ ಮೃಗಾಕ್ಷ್ಯಾ ॥ ೧೪ ॥

ಮಾಶ್ವವನ್ನು ಹೊಂದಿದ ರಾಜಪುತ್ರನಿಗಾದರೂ ಪ್ರಯೋಜನವೇನು ಎಂದು ಪ್ರಶ್ನೆ ಮಾಡಲು.

೧೨-೧೪. ಪುಲಸ್ತ್ಯರು, ವಿಶ್ವಾವಸುವಿಗೆ ಗುಣಶೀಲವತಿಯಾಗಿಯೂ ಸುಂದರಿಯಾಗಿಯೂ ಇರುವ ಮದಾಲಸೆ ಎಂಬ ಪುತ್ರಿಯು ಇದ್ದಳು. ಅವಳು ನಂದನವನದಲ್ಲಿ ಆಡುತ್ತಿರುವಾಗ ದೇವಶತ್ರುವಾದ ಪಾತಾಲಕೇತುವು ವೇಗದಿಂದ ಬಂದು ಅವಳನ್ನು ಅಪಹರಿಸಿದನು. ಅವಳನ್ನು ತರುವುದಕ್ಕಾಗಿ ಆ ಕುದುರೆಯು ಗಂಧರ್ವರಾಜನಿಂದ ಕೊಡಲ್ಪಟ್ಟಿತು. ಆ ರಾಜಪುತ್ರನೂ ಸಹ ಶತ್ರುವಾದ ದೈತ್ಯನನ್ನು ನಾಶಪಡಿಸಿ ಗಂಧರ್ವರಾಜಪುತ್ರಿಯನ್ನು ಹೊಂದಿ ಬಂದನು. ದೇವಪತಿಯಾದ ಇಂದ್ರನನ್ನು ಶಚೀದೇವಿಯು ನೋಡುವಂತೆ ಆ ಕನ್ಯಕೆಯೂ ಸಹ ಶೂರನಾದ ರಾಜಪುತ್ರನನ್ನು ಪ್ರೀತಿಯಿಂದ ನೋಡಿದಳು ಎಂದು ಉತ್ತರವಿತ್ತರು.

ನಾರದ ಉವಾಚ

ಏವಂ ನಿರಸ್ತೆ ಮಹಿಷೆ ತಾರಕೇ ಚ ಮಹಾಸುರೇ ।
ಹಿರಣ್ಯಾಕ್ಷಸುತೋ ಧೀಮಾನ್ಕಿಮಾಚೇಷ್ಟತ ವೈ ಪುನಃ ॥ ೧೫ ॥

ಪುಲಸ್ತ್ಯ ಉವಾಚ

ತಾರಕಂ ನಿಹತಂ ದೃಷ್ಟ್ವಾ ಮಹಿಷಂ ಚ ರಣೇಽಂಧಕಃ ।
ಕೋಪಂಚಕ್ರೆ ಸುದುರ್ಬುದ್ಧಿಃ ದೈತ್ಯಾನಾಂ ದೇವಸೈನ್ಯಹಾ ॥ ೧೬ ॥

ತತಃ ಸ್ವಲ್ಪಪರೀವಾರಃ ಪ್ರಗೃಹ್ಯ ಪರಿಘಂ ಕರೆ ।
ನಿರ್ಜಗಾಮಾಥ ಪಾತಾಲಾದ್ವಿಚಚಾರ ಚ ಮೇದಿನೀಂ ॥ ೧೭ ॥

ತತೋ ವಿಚರತಾ ತೇನ ಮಂದರೆ ಚಾರುಕಂದರೆ ।
ದೃಷ್ಟಾ ಗೌರೀ ಚ ಗಿರಿಜಾ ಸಖೀ ಮಧ್ಯಸ್ಥಿತಾ ಶುಭಾ ॥ ೧೮ ॥

ತತೋಽಭೂತ್ಕಾಮಬಾಣಾರ್ತಃ ಸಹಸೈವಾಂಧಕಾಸುರಃ ।
ತಾಂ ದೃಷ್ಟ್ವಾ ಚಾರುಸರ್ವಾಂಗೀಂ ಗಿರಿರಾಜಸುತಾಂ ವನೆ ॥ ೧೯ ॥

೧೫-೧೭. ಪುನಃ ನಾರದರು ಈ ರೀತಿ ಮಹಿಷನೂ ಮಹಾಸುರನಾದ ತಾರಕನೂ ನಾಶಹೊಂದಿದ ಮೇಲೆ ಬುದ್ಧಿಶಾಲಿಯಾದ ಹಿರಣ್ಯಾಕ್ಷನ ಪುತ್ರನಾದ ಅಂಧಕನು ಪುನಃ ಏನು ಮಾಡಿದನು ಎಂದು ಪ್ರಶ್ನೆಮಾಡಿದರು. ಅದಕ್ಕೆ ಉತ್ತರವಾಗಿ ಪುಲಸ್ತ್ಯರು ಹೇಳುತ್ತಾರೆ. ತಾರಕನೂ ಮಹಿಷನೂ ಸಹ ಯುದ್ಧದಲ್ಲಿ ನಾಶಹೊಂದಿದನಂತರ ದುರ್ಬುದ್ಧಿಯಾದ ಅಂಧಕನು ದೇವಸೈನ್ಯದ ಮೇಲೆ ಬಹಳ ಕೋಪಗೊಂಡನು. ಅನಂತರ ಮಿತಪರಿವಾರದೊಡನೆ ಪರಿಘಾಯುಧವನ್ನು ಧರಿಸಿ ಪಾತಾಲದಿಂದ ಮೇಲಕ್ಕೆ ಬಂದು ಭೂಮಿಯಲ್ಲೆಲ್ಲಾ ಸಂಚಾರಮಾಡತೊಡಗಿದನು.

೧೮-೨೨. ಹೀಗೆ ಸಂಚರಿಸುವ ಸಮಯದಲ್ಲಿ ಆ ಅಂಧಕನು ಮಂದರಪರ್ವತದಲ್ಲಿ ಸಖಿಗಳ ಮಧ್ಯದಲ್ಲಿ ವಿಹರಿಸುತ್ತಿರುವ ಗೌರಿಯನ್ನು ಕಂಡನು. ಆಗ ಸರ್ವಾಂಗಸುಂದರಿಯಾದ ಆ ಗಿರಿಜೆಯನ್ನು ನೋಡಿದ ಮಾತ್ರದಿಂದಲೇ ಅಂಧಕನು ಕಾಮಾತುರ

ಅಥೋವಾಚಾಸುರೋ ಮೂಢೋ ವಚನಂ ಮನ್ಮಥಾಂಧಕಃ ।
ಕಸ್ಯೇಯಂ ಚಾರುಸರ್ವಾಂಗೀ ವನೇ ಚರತಿ ಸುಂದರೀ ॥ ೨೦ ॥

ಇಯಂ ಯದಿ ಭವೇನ್ನೈವ ಮಮಾಂತಃಪುರವಾಸಿನೀ ।
ತನ್ಮದೀಯೇನ ಜೀವೇನ ಕ್ರಿಯತೇ ನಿಷ್ಫಲೇನ ಕಿಂ ॥ ೨೧ ॥

ಯದಸ್ಯಾಸ್ತನುಮಧ್ಯಾಯಾ ನಪರಿಷ್ವಂಗವಾನಹಂ ।
ಅತೋ ಧಿಙ್ಮಮರೂಪೇಣ ಕಿಂ ಸ್ಥಿರೇಣ ಪ್ರಯೋಜನಂ ॥ ೨೨ ॥

ಸಮೇ ಬಂಧುಃ ಸ ಸಚಿವಃ ಸ ಭ್ರಾತಾ ಸಾಂಪರಾಯಿಕಃ ।
ಯೋಮಾಮುಸಿತಕೇಶೀಂ ತಾಂ ಯೋಜಯೇನ್ಮೃಗಲೋಚನಾಂ ॥ ೨೩ ॥

ಇತ್ಥಂ ವದತಿ ದೈತ್ಯೇಂದ್ರೆ ಪ್ರಹ್ಲಾದೋ ಬುದ್ಧಿಸಾಗರಃ ।
ಪಿಧಾಯ ಕರ್ಣೌ ಹಸ್ತಾಭ್ಯಾಂ ಶಿರಃ ಕಂಪಂ ವಚೋಽಬ್ರವೀತ್ ॥ ೨೪ ॥

ಮಾ ಮೈವಂ ವದ ದೈತ್ಯೇಂದ್ರ ಜಗತೋ ಜನನೀತ್ವಿಯಂ ।
ಲೋಕನಾಥಸ್ಯ ಭಾರ್ಯೇಯಂ ಶಂಕರಸ್ಯ ತ್ರಿಶೂಲಿನಃ ॥ ೨೫ ॥

ನಾದನು. ಆ ಸಮಯದಲ್ಲಿ ಮನ್ಮಥನಿಂದಲೂ ಅಂಧನಾದ ಈ ಅಂಧಕನು ಈ ವನದಲ್ಲಿ ವಿಹರಿಸುತ್ತಿರುವ ಈ ಸರ್ವಾಂಗ ಸುಂದರಿಯು ಯಾರಿಗೆ ಸೇರಿದವಳಾಗಿರ ಬಹುದು. ಇವಳು ನನ್ನ ಅಂತಃಪುರವಾಸಿನಿಯಾಗದಿದ್ದಲ್ಲಿ ನಿಷ್ಫಲವಾದ ನನ್ನ ಜೀವದಿಂದ ಫಲವೇನು. ಈ ಕೃಶೋದರಿಯ ಆಲಿಂಗನವು ನನಗೆ ಲಭಿಸದಿದ್ದಲ್ಲಿ ನನ್ನ ಈ ರೂಪವು ನಿಷ್ಫಲವಾಗುತ್ತದೆ. ಮತ್ತು ನಿಂದಾರ್ಹವಾಗಿಯೂ ಆಗುತ್ತದೆ.

೨೩-೨೭. ಈ ಮೃಗಾಕ್ಷಿಯೊಡನೆ ನನ್ನನ್ನು ಯಾರು ಸೇರಿಸುತ್ತಾರೆಯೋ ಅವನೇ ನನಗೆ ಬಂಧು, ಅವನೇ ನನಗೆ ಮಂತ್ರಿ, ಅವನೇ ಭ್ರಾತೃವು, ಅವನೇ ಶೂರನು. ಈ ಪ್ರಕಾರ ಆ ಅಂಧಕನು ಹೇಳುತ್ತಿರಲಾಗಿ ಸಮೀಪದಲ್ಲಿದ್ದ ಗಂಭೀರ ಬುದ್ಧಿಯುಳ್ಳ ಪ್ರಹ್ಲಾದನು, ಕೈಗಳಿಂದ ಕಿವಿಗಳನ್ನು ಮುಚ್ಚಿಕೊಳ್ಳುತ್ತಾ ತಲೆಯನ್ನು ಅಲ್ಲಾಡಿಸುತ್ತಾ ಹೀಗೆ ಹೇಳಿದನು. ಎಲೈ ದೈತ್ಯರಾಜನೇ ನೀನು ಹೀಗೆ ಹೇಳ ಕೂಡದು. ಇವಳು ಲೋಕನಾಥನಾಗಿಯೂ ತ್ರಿಶೂಲಿಯಾಗಿಯೂ ಇರುವ ಶಂಕರನ ಭಾರ್ಯೆಯು. ಇವಳು ಜಗನ್ಮಾತೆಯಾಗಿರುವಳು, ಇವಳ ವಿಷಯದಲ್ಲಿ ವಂಶನಾಶಕ

ಮಾ ಕುರುಷ್ವ ಸುದುರ್ಬುದ್ಧಿಂ ಸದ್ಯಃ ಕುಲವಿನಾಶನೀಂ ।
ಭವತಃ ಪರದಾರೇಯಂ ಮಾ ನಿಮಜ್ಜ ರಸಾತಲೇ ॥ ೨೬ ॥

ಸತ್ಸು ಕುತ್ಸಿತಮೇವಂ ಹಿ ಅಸತ್ಸ್ವಪಿಹಿ ಕುತ್ಸಿತಂ ।
ಶತ್ರವಸ್ತೇ ಪ್ರಕುರ್ವಂತು ಪರದಾರಾವಗಾಹನಂ ॥ ೨೭ ॥

ಕಿಂ ನ ಶ್ರುತೋ ದೈತ್ಯನಾಥೇಹ ಕಿಂನು
ಗೀತಃ ಶ್ಲೋಕೋಗಾಧಿನಾ ಪಾರ್ಥಿವೇನ ।
ದೃಷ್ಟ್ವಾ ಸೈನ್ಯಂ ವಿಪ್ರಯಾತಂ ಪ್ರಸಕ್ತಂ
ಪಥ್ಯಂ ತಥ್ಯಂ ಸರ್ವಲೋಕೇ ಹಿತಂ ಚ ॥ ೨೮ ॥

ವರಂ ಪ್ರಾಣಾಃ ತ್ಯಾಜ್ಯಾಃ ನ ಬತಪರಹಿಂಸಾ ತ್ವಭಿಮತಾ ।
ವರಂ ಮೌನಂ ಕಾರ್ಯಂ ನಚ ವಚನ ಮುಕ್ತಂ ಯದನೃತಂ ॥
ವರಂ ಕ್ಲೀಬೈರ್ಭಾವ್ಯಂ ನ ಚ ಪರಕಳತ್ರಾಭಿಗಮನಂ ।
ವರಂ ಭಿಕ್ಷಾರ್ಥಿತ್ವಂ ನ ಚ ಪರಧನಾನಾಂ ಹಿ ಹರಣಂ ॥ ೨೯ ॥

ವಾದ ಈ ದುರ್ಬುದ್ಧಿಯನ್ನು ನೀನು ಹೊಂದಬೇಡ. ಧರ್ಮದೃಷ್ಟಿಯಿಂದ ಇವಳು ನಿನಗೆ ಪರಸ್ತ್ರೀಯಾಗಿರುವಳು. ಪರಸ್ತ್ರೀ ವ್ಯಾಮೋಹದಿಂದ ನರಕದಲ್ಲಿ ಮುಳುಗ ಬೇಡ. ಸತ್ಪುರುಷರಲ್ಲೇ ಆಗಲಿ, ಅಸತ್ಪುರುಷರಲ್ಲೇ ಆಗಲಿ ಈ ರೀತಿಯಾದ ಕುತ್ಸಿತಕಾರ್ಯವು ನಿನ್ನ ಶತೃಗಳ ಪಾಲಿಗೇ ಇರಲಿ ನಿನಗೆ ಬೇಡ.

೨೮-೨೯ ಎಲೈ ದೈತ್ಯರಾಜನೇ, ಶತ್ರುವನ್ನು ಆಕ್ರಮಿಸಿ ಹಿಂದೆ ಬಂದ ತನ್ನ ಸೈನ್ಯವನ್ನು ನೋಡಿ ಗಾಧಿಯೆಂಬ ಧೊರೆಯು ಸತ್ಯವಾಗಿಯೂ ಪಥ್ಯವಾಗಿಯೂ ಸರ್ವಲೋಕಹಿತವಾಗಿಯೂ ಹೇಳಿದ ಈ ಶ್ಲೋಕವನ್ನು ನೀನು ಕೇಳಿಲ್ಲವೆ. ಈಗ ಲಾದರೂ ಆ ಶ್ಲೋಕವನ್ನು ಕೇಳು. ಅಶನವಿಲ್ಲದೆ ಪ್ರಾಣವನ್ನಾದರೂ ಬಿಡಬಹುದು. ಅದಕ್ಕಾಗಿ ಬುದ್ಧಿಪೂರ್ವಕವಾಗಿ ಪರಹಿಂಸೆಯನ್ನು ಮಾಡಬಾರದು. ಅನೃತವನ್ನು ಹೇಳಿ ಜೀವಿಸುವುದಕ್ಕೆ ಬದಲಾಗಿ ಮೌನದಿಂದ ಜೀವಿಸಬಹುದು. ಅನೃತವನ್ನು ಮಾತ್ರ ಆಡಬಾರದು. ನಪುಂಸಕನಾಗಿಯಾದರೂ ಜೀವಿಸಿರುವುದು ಲೇಸು. ಪರ ಕಲತ್ರರತಿಯನ್ನು ಹೊಂದಬಾರದು. ಭಿಕ್ಷಾರ್ಥಿಯಾಗಿದ್ದಾದರೂ ಜೀವಿಸಿರಬಹುದು. ಪರದ್ರವ್ಯಾಪಹರಣದಿಂದ ಜೀವಿಸಿರಬಾರದು. (ಇಲ್ಲಿ ಪ್ರಾಣತ್ಯಾಗಾದಿಗಳು ವಿಧೇಯ ವಲ್ಲ. ಪರಹಿಂಸಾದಿಗಳ ನಿಷೇಧದಲ್ಲಿ ತಾತ್ಪರ್ಯ)

ಸ ಪ್ರಹ್ಲಾದವಚಃ ಶ್ರುತ್ವಾ ಕ್ರೋಧಾಂಧೋ ಮದನಾತುರಃ ।
ಇಯಂ ಸಾ ಶತ್ರುಜನನೀ ತ್ಯೇವಮುಕ್ತ್ವಾ ಪ್ರದುದ್ರುವೆ ॥ ೩೦ ॥

ತತೋಽನ್ವಧಾವನ್ ದೈತೇಯಾ ಯಂತ್ರಮುಕ್ತಾ ಇವೋಪಲಾಃ ।
ತಾನದ್ರಾವೀದ್ಬಲಾನ್ನಂದೀ ಚಕ್ರೋದ್ಯತಕರೋಽವ್ಯಯಃ ॥ ೩೧ ॥

ಮಯತಾರಪುರೋಗಾಸ್ತೆ ವಾರಿತಾ ದ್ರಾವಿತಾ ಸ್ತಥಾ ।
ಕುಲಶೇನಾಹತಾಸ್ತೂರ್ಣಂ ಜಗ್ಮುರ್ಭೀತಾ ದಿಶೋದಶ ॥ ೩೨ ॥

ತಾನರ್ದಿತಾನ್ರಣೆ ದೃಷ್ಟ್ವಾ ನಂದಿನಾಂಧಕದಾನವಃ ।
ಪರಿಘೇಣ ಸಮಾಹತ್ಯ ಪಾತಯಾಮಾಸ ನಂದಿನಂ ॥ ೩೩ ॥

ಶೈಲೇಯಂ ಪತಿತಂ ದೃಷ್ಟ್ವಾ ಧಾವಮಾನಂ ತಥಾಂಧಕಂ ।
ಶತರೂಪಾಭವದ್ಗೌರೀ ಭಯಾತ್ತಸ್ಯ ದುರಾತ್ಮನಃ ॥ ೩೪ ॥

ತತಃ ಸ ದೇವೀಗಣಮಧ್ಯಸಂಸ್ಥಿತಃ
ಪರಿಭ್ರಮನ್ ಭಾತಿ ಮಹಾಸುರೇಂದ್ರಃ ।

೩೦-೩೩. ಪ್ರಹ್ಲಾದನ ಈ ಮಾತನ್ನು ಕೇಳಿದೊಡನೆಯೇ ಮದನಾವೇಶ ದಿಂದಲೂ ಕೋಪದಿಂದಲೂ ಅಂಧನಾದ ಆ ಅಂಧಕನು ಇವಳೇ ನಮ್ಮ ಶತ್ರುಗಳಿಗೆ ತಾಯಿಯಾಗಿರುವವಳು ಎಂದು ಹೇಳುತ್ತಾ ವೇಗದಿಂದ ಅವಳ ಮೇಲೆ ಮುತ್ತಿದನು. ಅವನನ್ನೇ ಅನುಸರಿಸಿ ಅವನ ಪರಿವಾರದವರೂ ಕವಣೆಯಿಂದ ಬರುವ ಕಲ್ಲುಗಳಂತೆ ಓಡಿದರು. ಆಗ ನಂದಿಯು ಚಕ್ರಾಯುಧಧಾರಿಯಾಗಿ ನಿಂತು ಅವರನ್ನೆಲ್ಲಾ ಎದುರಿಸಿದನು. ಮಯ, ತಾರ ಮೊದಲಾದ ದೈತ್ಯರೆಲ್ಲರೂ ನಂದಿಯಿಂದ ತಡೆಯಲ್ಪಟ್ಟು ಹಾಗೂ ಓಡಿಸಲ್ಪಟ್ಟು ವಜ್ರಾಯುಧದಿಂದಲೂ ಆಹತರಾಗಿ ವೇಗದಿಂದ ಹತ್ತುದಿಕ್ಕಿಗೂ ಓಡಿದರು. ನಂದಿಯಿಂದ ಹಾಗೆ ಪೀಡಿಸಲ್ಪಟ್ಟ ದೈತ್ಯರನ್ನು ನೋಡಿ ಅಂಧಕನು ಪರಿಘಾಯುಧದಿಂದ ಹೊಡೆದನು. ನಂದಿಯನ್ನು ನೆಲಕ್ಕೆ ಕೆಡವಿದನು.

೩೪-೩೭. ನಂದಿಯು ಕೆಳಕ್ಕೆ ಬಿದ್ದುದನ್ನೂ ಓಡಿಬರುತ್ತಿರುವ ಅಂಧಕನನ್ನೂ ನೋಡಿ ಗೌರಿಯು ಆ ದುರಾತ್ಮನ ಭಯದಿಂದ ಅವನಿಗೆ ಸಿಕ್ಕದಂತೆ ತಾನೂ ಅನೇಕ ರೂಪಗಳನ್ನು ಧರಿಸಿದಳು. ಅನಂತರ ದೇವಿಯ ಗಣಗಳ ಮಧ್ಯದಲ್ಲಿ ಓಡಾಡು ತ್ತಿರುವ ಆ ಅಂಧಕಾಸುರನು ಆ ವನದಲ್ಲಿ ಹೆಣ್ಣಾನೆಗಳ ಮಧ್ಯದಲ್ಲಿ ಮದದಿಂದ

ಯಥಾವನೇ ಮತ್ತಕರೀ ಪರಿಭ್ರಮನ್
ಕರೇಣುಮಧ್ಯೇ ಮದಲೋಲದೃಷ್ಟಿಃ ॥ ೩೫ ॥

ನಪರಿಜ್ಞಾತವಾಂಸ್ತತ್ರ ಕಾ ತು ಸಾ ಗಿರಿಕನ್ಯಕಾ ।
ನಾತ್ರಾಶ್ಚರ್ಯಂ ನ ಪಶ್ಯಂತಿ ಚತ್ವಾರೋಮೀ ಸದೈವಹಿ ॥ ೩೬ ॥

ನ ಪಶ್ಯತೀಹ ಜಾತ್ಯಂಧೋ ರಾಗಾಂಧೋಪಿ ನ ಪಶ್ಯತಿ ।
ನ ಪಶ್ಯತಿ ಮದೋನ್ಮತ್ತೋ ಲೋಭಾಕ್ರಾಂತೋ ನ ಪಶ್ಯತಿ ।
ಸೋಽಪಶ್ಯಮಾನೋ ಗಿರಿಜಾಂ ಪಶ್ಯನ್ನಪಿ ತದಾಂಧಕಃ ॥ ೩೭ ॥

ಪ್ರಧಾವನ್ನಾದದತ್ತ್ರಾಸಾಂ ಯುವತ್ಯ ಇತಿ ಚಿಂತಯನ್ ।
ತತೋ ದೇವ್ಯಾ ಸ ದುಷ್ಟಾತ್ಮಾ ಶತಾವರ್ಯಾ ನಿರಾಕೃತಃ ॥ ೩೮ ॥

ಕುಟ್ಟಿತಃ ಪ್ರವರೈಶ್ಶಸ್ತ್ರೈ ರ್ನಿಪಪಾತ ಮಹೀತಲೇ ।
ವೀಕ್ಷ್ಯಾಂಧಕಂ ನಿಪತಿತಂ ಶತರೂಪಾ ವಿಭಾವರೀ ॥ ೩೯ ॥

ತಸ್ಮಾತ್ ಸ್ಥಾನಾದಪಾಕ್ರಮ್ಯ ಗತಾಂತರ್ಧಾನಮಂಬಿಕಾ ।
ಪತಿತಂ ಚಾಂಧಕಂ ದೃಷ್ಟ್ವಾ ದೈತ್ಯದಾನವಯೂಥಪಾಃ ॥ ೪೦ ॥

ಚಂಚಲವಾದ ದೃಷ್ಟಿಹೊಂದಿ ಓಡಾಡುವ ಸಲಗನಂತೆ ತೋರಿಬರುತ್ತಿದ್ದನು. ಅಲ್ಲಿ ಆ ಅಂಧಕನು ಗೌರಿಯು ಯಾರೆಂಬುದನ್ನು ತಿಳಿಯಲಾಗಲಿಲ್ಲ. ಈ ವಿಷಯದಲ್ಲಿ ಯಾರಿಗೂ ಆಶ್ಚರ್ಯವಾಗುವಂತಿಲ್ಲ. ಏತಕ್ಕೆಂದರೆ ಜಾತ್ಯಂಧನೂ ರಾಗಾಂಧನೂ ಮದೋನ್ಮತ್ತನೂ, ಲೋಭಾಕ್ರಾಂತನೂ ಈ ನಾಲ್ಕು ಜನರೂ ಮುಂದಿರುವ ವಸ್ತುವನ್ನೂ ನೋಡಲಾರರೆಂಬುದು ಎಲ್ಲರಿಗೂ ತಿಳಿದಿರುತ್ತದೆಯಷ್ಟೆ. (ಈ ದೋಷಗಳಿಲ್ಲದಿರುವವರು ನಾನಾರೂಪದಲ್ಲಿರುವ ದೇವಿಯನ್ನೂ ನೋಡಲು ಸಮರ್ಥರಾದಾರೆಂದು ತಾತ್ಪರ್ಯ) ಆದುದರಿಂದ ಕಣ್ಣಿನಿಂದ ನೋಡುತ್ತಿದ್ದರೂ ಆ ಅಂಧಕನು ಗೌರಿಯ ಅರಿವನ್ನು ಹೊಂದಲಾಗಲೇ ಇಲ್ಲ.

೩೮-೪೧. ಹಾಗೆ ಓಡಾಡಿಯೂ ಕೇವಲ ಸ್ತ್ರೀಯರೆಂದು ಆಲೋಚಿಸುತ್ತಾ ದೇವಿಯನ್ನು ಗ್ರಹಿಸಲೇ ಇಲ್ಲ. ಆಗ ಶತಾವರೀ ಎಂಬ ದೇವಿಯ ಮೂರ್ತಿಯು ಶಸ್ತ್ರಾಸ್ತ್ರಗಳಿಂದ ಹೊಡೆದು ಅಂಧಕನನ್ನು ಪರಾಭವಗೊಳಿಸಿತು. ಅಂಧಕನೂ ಭೂಮಿಯಲ್ಲಿ ಬಿದ್ದನು. ಅಂಧಕನು ಬಿದ್ದುದನ್ನು ನೋಡಿ ನಾನಾರೂಪದಿಂದಿದ್ದ ದೇವಿಯು ಆ ಸ್ಥಲದಿಂದ ಹೊರಟು ಅಂತರ್ಧಾನವನ್ನು ಹೊಂದಿದಳು. ಅಂಧಕನು

ಕುರ್ವಂತಃ ಸುಮಹಾಶಬ್ದಂ ಪ್ರಾದ್ರವಂತರಣಾರ್ಥಿನಃ ।
ತೇಷಾಮಾಪತತಾಂ ಶಬ್ದಂ ಶ್ರುತ್ವಾ ತಸ್ಥೌ ಗಣೇಶ್ವರಃ ॥ ೪೧ ॥

ಆದಾಯ ವಜ್ರಂ ಬಲವಾನ್ ಮಘವಾನಿವ ಕೋಪಿತಃ ।
ದಾನವಾನ್ ಸಮಯಾನ್ ವೀಕ್ಷ್ಯ ಪರಾಜಿತ್ಯ ಗಣೇಶ್ವರಃ ॥ ೪೨ ॥

ಸಮಭ್ಯೇತ್ಯಾಂಬಿಕಾಂ ದೃಷ್ಟ್ವಾ ವವಂದೆ ಚರಣೌ ಶುಭೌ ।
ದೇವೀ ಚ ತಾ ನಿಜಾಮೂರ್ತೀರ್ಸ್ತ್ವಾಹ ಗಚ್ಛಧ್ವಮಿಚ್ಛಯಾ ॥ ೪೩ ॥

ವಿಹರಧ್ವಂ ಮಹೀಪೃಷ್ಠೇ ಪೂಜ್ಯಮಾನಾ ನರೈರಿಹ ।
ವಸತಿರ್ಭವತೀನಾಂ ಚ ಉದ್ಯಾನೇಷು ವನೇಷು ಚ ।
ವನಸ್ಪತಿಷು ವೃಕ್ಷೇಷು ಗಚ್ಛಧ್ವಂ ವಿಗತಜ್ವರಾಃ ॥ ೪೪ ॥

ತಾಸ್ತ್ವೇವಮುಕ್ತಾಃ ಶೈಲೇಯ್ಯಾ ಪ್ರಣಿಪತ್ಯಾಂಬಿಕಾಂ ಕ್ರಮಾತ್ ।
ದಿಕ್ಷು ಸರ್ವಾಸು ಜಗ್ಮುಸ್ತಾಃ ಸ್ತೂಯಮಾನಾಶ್ಚ ಕಿನ್ನರೈಃ ॥ ೪೫ ॥

ಬಿದ್ದುದನ್ನು ನೋಡಿ ದೈತ್ಯ ದಾನವ ಯೂಥಪತಿಗಳೆಲ್ಲರೂ ಕೋಲಾಹಲಮಾಡುತ್ತಾ ಯುದ್ಧಕ್ಕಾಗಿ ಎದುರುಬಿದ್ದರು. ಅವರ ಶಬ್ಧವನ್ನು ಕೇಳಿ ಗಣೇಶ್ವರನೂ ಎದ್ದು ಕುಳಿತನು.

೪೨-೪೪. ಆಗ ಗಣೇಶ್ವರನಾದ ನಂದಿಯು ಇಂದ್ರನಂತೆ ವಜ್ರಾಯುಧವನ್ನು ಧರಿಸಿ ಕೋಪದಿಂದ ಮಯನೇ ಮೊದಲಾದ ದಾನವರನ್ನೆಲ್ಲಾ ಪರಾಜಯಗೊಳಿಸಿ ದೇವಿಯ ಸಮೀಪಕ್ಕೆ ಬಂದು ಅವಳ ಪಾದಗಳಿಗೆ ನಮಸ್ಕರಿಸಿದನು. ದೇವಿಯು ತನ್ನ ಆ ಮೂರ್ತಿಗಳನ್ನೆಲ್ಲಾ ಕರೆದು ಇನ್ನು ನೀವು ಇಷ್ಟಬಂದಂತೆ ಹೊರಡಿರಿ. ಭೂಮಿಯಲ್ಲಿ ಮನುಷ್ಯರಿಂದ ಪೂಜಿಸಲ್ಪಡುತ್ತ ವಿಹರಿಸಿರಿ. ನಿಮಗೆ ಭೂಮಿಯಲ್ಲಿರುವ ಉದ್ಯಾನಗಳಲ್ಲಿಯೂ ವನಗಳಲ್ಲಿಯೂ ಗಿಡಮರಗಳಲ್ಲಿಯೂ ವಸತಿಯು ಲಭಿಸುತ್ತದೆ. ನಿಶ್ಚಿಂತರಾಗಿ ಹೊರಡಿರಿ ಎಂದಳು.

೪೫-೪೭. ಹೀಗೆ ಹೇಳಲ್ಪಟ್ಟ ಆ ಮೂರ್ತಿಗಳೆಲ್ಲಾ ಅಂಬಿಕೆಗೆ ನಮಸ್ಕಾರ ಮಾಡಿ ಕಿನ್ನರರುಗಳಿಂದ ಹೊಗಳಲ್ಪಡುತ್ತಾ ಎಲ್ಲಾ ದಿಕ್ಕಿಗೂ ಹೊರಟವು. ನೆಲದಲ್ಲಿ

ಅಂಧಕೋಽಪಿ ಸ್ಮೃತಿಂ ಲಬ್ಧ್ವಾ ಅಪಶ್ಯನ್ನದ್ರಿನಂದಿನೀಂ ।
ಸ್ವಬಲಂ ನಿರ್ಜಿತಂ ದೃಷ್ಟ್ವಾ ತತಃ ಪಾತಾಲಮಾದ್ರವತ್ ॥ ೪೬ ॥

ತತೋ ದುರಾತ್ಮಾ ಸ ತದಾಂಧಕೋ
ಮುನೇ ಪಾತಾಲಮಭ್ಯೇತ್ಯ ದಿವಾನಭುಂಕ್ತೆ ।
ರಾತ್ರೌ ನ ಶೇತೆ ಮದನೇಷುತಾಡಿತೋ
ಗೌರೀಂ ಸ್ಮರನ್ ಕಾಮಬಲಾಭಿಪನ್ನಃ ॥ ೪೭ ॥

ಇತಿ ಶ್ರೀ ವಾಮನಪುರಾಣೇ ಭೈರವಪ್ರಾದುರ್ಭಾವೇ
ನವಪಂಚಾಶತ್ತಮೋಽಧ್ಯಾಯಃ

ಬಿದ್ದಿದ್ದ ಅಂಧಕನು ಎದ್ದು ಪ್ರಜ್ಞೆಯನ್ನು ಹೊಂದಿ ಪಾರ್ವತಿಯನ್ನು ಅಲ್ಲಿ ಕಾಣದೆ ತನ್ನ ಸೈನ್ಯವೆಲ್ಲವೂ ಪರಾಜಿತವಾದುದನ್ನು ನೋಡಿ ತಾನೂ ಪಾತಾಲಕ್ಕೆ ಓಡಿದನು. ಆ ದುರಾತ್ಮನಾದ ಅಂಧಕನು ಪಾತಾಲವನ್ನು ಹೊಂದಿ ಅಲ್ಲಿಯೂ ಗೌರಿಯನ್ನು ಸ್ಮರಿಸುತ್ತಾ ಕಾಮಾರ್ತನಾಗಿ ಊಟವನ್ನೂ ಮಾಡದೆ ರಾತ್ರಿಯಲ್ಲಿ ನಿದ್ದೆಯನ್ನೂ ಹೊಂದದೆ ಕಾಲಕಳೆಯುತ್ತಿದ್ದನು.

ಇಲ್ಲಿಗೆ ವಾಮನ ಪುರಾಣದ ಭೈರವಪ್ರಾದುರ್ಭಾವದಲ್ಲಿ
ಐವತ್ತೊಂಭತ್ತನೆಯ ಅಧ್ಯಾಯ ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ನಾರದರ ಉಪಪ್ರಶ್ನೆಗೆ ಉತ್ತರವಾಗಿ ಪಾತಾಲಕೇತುವನ್ನು ನಾಶಪಡಿಸಿದ ಋತಧ್ವಜನ ವೃತ್ತಾಂತವನ್ನು ಹೇಳಿ ಅದಕ್ಕೂ ಕಾರಣವಾದ ವಿಶ್ವಾವಸುವಿನ ಮಗಳಾದ ಮದಾಲಸೆಯ ಅಪಹಾರವನ್ನೂ ವಿವರಿಸಲಾಯಿತು. ಅನಂತರ ಮಹಿಷ ತಾರಕರ ನಾಶಾನಂತರ ಅಂಧಕನ ವೃತ್ತಾಂತವೇನಾಯಿತೆಂಬ ನಾರದರ ಪ್ರಶ್ನೆಗೆ ಉತ್ತರವಾಗಿ ಮಹಿಷ ತಾರಕರ ನಾಶದಿಂದ ಕೋಪಾಕ್ರಾಂತನಾದ ಅಂಧಕನು ದುರ್ಬುದ್ಧಿಯಿಂದ ಸ್ವಲ್ಪ ಪರಿವಾರದೊಡನೆ ಭೂಮಿಯಲ್ಲಿ ಸುತ್ತುತ್ತಾ ಮಂದರಪರ್ವತದಲ್ಲಿ ಸಖಿಯರೊಡನೆ ವಿಹರಿಸುತ್ತಿದ್ದ ಗೌರಿಯನ್ನು ನೋಡಿ ಕಾಮಾರ್ತನಾದನೆಂದೂ ಪ್ರಹ್ಲಾದನು ಆಗ ಅವನನ್ನು ಕುರಿತು ಸದುಪದೇಶ ಮಾಡಿದನೆಂದೂ ಹೇಳಲಾಯಿತು. ಪ್ರಹ್ಲಾದನ ಉಪದೇಶದಿಂದ ಸದ್ಬುದ್ಧಿಯುಂಟಾಗುವುದಕ್ಕೆ ಬದಲಾಗಿ ಅಂಧಕನಿಗೆ ಕೋಪವೇ ಉಂಟಾಯಿತು. ಆಗ ಅವನು ಇವಳೇ ನನ್ನ ಶತ್ರುಗಳಿಗೆ ಜನನಿ ಎನ್ನುತ್ತಾ ಗೌರಿಯನ್ನು ಎದುರಿಸಲು ಸಿದ್ಧನಾದನು. (ಆಗ ಗೌರಿಯು ನಾನಾ ರೂಪವನ್ನು ಧರಿಸಿ ಅಂಧಕನ ಕಣ್ಣಿನಿಂದ ಮರೆಯಾದಳು) ಆಗ ನಂದಿಯು ಅವನನ್ನು ಎದುರಿಸಲು ಹೋಗಿ ಅವನ ಪರಿಘ ಪ್ರಹಾರದಿಂದ ಕೆಳಕ್ಕೆ ಬಿದ್ದನು. ಆಗ ಗೌರಿಯು ನಂದಿಯೂ ಬಿದ್ದುದನ್ನು ನೋಡಿ ಭಯದಿಂದ ನಾನಾರೂಪವನ್ನು ಹೊಂದಿ ಅಂಧಕನ ಕಣ್ಣಿನಿಂದ ಮರೆಯಾದಳು. ಅಂಧಕನು ಎಷ್ಟು ನೋಡಿದರೂ ದೇವಿಯನ್ನು ಕಾಣಲಾಗಲಿಲ್ಲ. ಆಗ ಶತಾವರಿ ಎಂಬ ದೇವಿಯ ಮೂರ್ತಿಯು ಅಂಧಕನನ್ನು ಹೊಡೆದು ಕೆಳಕ್ಕೆ ಕೆಡವಿತು. ಅನಂತರ ದೇವಿಯೂ ಆ ಸ್ಥಲವನ್ನು ಬಿಟ್ಟು ಅಂತರ್ಧಾನ ಹೊಂದಿದಳು. ಆಗ ನಂದಿಯು ದಾನವಸೈನ್ಯದ ಹಾಹಾಕಾರದಿಂದ ಎದ್ದು ವಜ್ರಾಯುಧದಿಂದ ದಾನವರನ್ನೆಲ್ಲಾ ಪರಾಜಯಗೊಳಿಸಿ ದೇವಿಯ ಸಮೀಪಕ್ಕೆ ಬಂದು ಅವಳನ್ನು ನಮಸ್ಕರಿಸಿದನು. ದೇವಿಯ ಆಜ್ಞೆಯಿಂದ ಆ ಮೂರ್ತಿಗಳೆಲ್ಲವೂ ಭೂಮಂಡಲದಲ್ಲಿ ವಿಹಾರಕ್ಕಾಗಿ ಹೊರಟವು. ಅಂಧಕನು ಪ್ರಜ್ಞೆಹೊಂದಿ ಎದ್ದು ಗೌರಿಯನ್ನೂ ಕಾಣದೆ ಸೈನ್ಯದ ಪರಾಜಯವನ್ನೂ ನೋಡಿ ಪಾತಾಲಕ್ಕೆ ಓಡಿದನು. ಅಲ್ಲಿಯೂ ಗೌರಿಯ ಧ್ಯಾನದಿಂದ ಆಹಾರ ನಿದ್ರೆಯಿಲ್ಲದೆ ಸಂತಪಿಸುತ್ತಿದ್ದನು.

॥ ಶ್ರೀಃ ॥

ಶ್ರೀವಾಮನಪುರಾಣಂ

ಷಷ್ಟಿತಮೋಽಧ್ಯಾಯಃ

ನಾರದ ಉವಾಚ

ಕ್ವಗತಃ ಶಂಕರೋಹ್ಯಾಸೀದ್ಯೇನಾಂಬಾ ನಂದಿನಾ ಸಹ ।
ಅಂಧಕಂ ಯೋಧಯಾಮಾಸ ಏತನ್ಮೇನ ಕ್ತುಮರ್ಹಸಿ ॥ ೧ ॥

ಪುಲಸ್ತ್ಯ ಉವಾಚ

ಯದಾ ವರ್ಷ ಸಹಸ್ರಂತು ಮಹಾನೋಽಹೆ ಸ್ಥಿತೋಽಭವಃ ।
ತದಾಪ್ರಭೃತಿ ನಿಸ್ತೇಜಾ ಹೀನವೀರ್ಯಃ ಪ್ರದೃಶ್ಯತೆ ॥ ೨ ॥

ಸ್ವಮಾತ್ಮಾನಂ ನಿರೀಕ್ಷ್ಯಾಥ ನಿಸ್ತೇಜೋಽಂಶಂ ಮಹೇಶ್ವರಃ ।
ತಪೋಽರ್ಥಾಯ ತದಾ ಚಕ್ರೆ ಮತಿಂ ಮತಿಮತಾಂ ವರಃ ॥ ೩ ॥

ಅರವತ್ತನೆಯ ಅಧ್ಯಾಯವು

೧-೩. ನಾರದರು ದೇವಿಯು ನಂದಿಯಿಂದಲೇ ಅಂಧಕನನ್ನು ಎದುರಿಸಲು ಏಕೆ ಹೊರಟಳು. ಆಗ ಶಂಕರನು ಎಲ್ಲಿ ಹೋಗಿದ್ದನು. ಇದನ್ನು ಹೇಳಬೇಕು. ಎಂದು ಪ್ರಶ್ನೆಮಾಡಲು ಪುಲಸ್ತ್ಯರು ಹೇಳುತ್ತಾರೆ. ಶಂಕರನು ಪಾರ್ವತಿಯೊಡನೆ ವರ್ಷಸಹಸ್ರ ಪರ್ಯಂತವೂ ಮಹಾ ಮೈಥುನದಲ್ಲಿ ಸಕ್ತನಾದ ಮೊದಲು ಅವನು ನಿಸ್ತೇಜಸ್ಕನಾಗಿ ಹೀನವೀರ್ಯನಾಗಿ ಕಾಣುತ್ತಿದ್ದನು. ಆಗ ಆ ಶಂಕರನು ತಾನು ನಿಸ್ತೇಜಸ್ಕನಾದುದನ್ನು ತಿಳಿದು ತಪಸ್ಸನ್ನು ಮಾಡಲು ನಿಶ್ಚೈಸಿದನು.

ಸ ಮಹಾವ್ರತಮುತ್ಪಾದ್ಯ ಸಮಾಶ್ವಾಸ್ಯಾಂಬಿಕಾಂ ವಿಭುಃ ।
ಶೈಲಾದಿಂ ಸ್ಥಾಪ್ಯ ಗೋಪ್ತಾರಂ ವಿಚಚಾರ ಮಹೀತಲೇ ॥ ೪ ॥

ಮಹಾಮುದ್ರಾರ್ಪಿತಗ್ರೀವೋ ಮಹಾಹಿಕೃತಕುಂಡಲಃ ।
ಧಾರಯಂಶ್ಚ ಕಟೀದೇಶೇ ಮಹಾಶಂಖಸ್ಯ ಮೇಖಲಾಂ ॥ ೫ ॥

ಕಪಾಲಂ ದಕ್ಷಿಣೇ ಹಸ್ತೇ ಸವ್ಯೇ ಗೃಹ್ಯ ಕಮಂಡಲುಂ ।
ಏಕಾಹವಾಸೀ ವೃಕ್ಷಾದ್ರಿಶೈಲಸಾನುನದೀಷು ಚ ॥ ೬ ॥

ಸ್ಥಾನಂ ತ್ರೈಲೋಕ್ಯಮಾಸ್ಥಾಯ ಮೂಲಾಹಾರೋಂಬುಭೋಜನಃ ।
ವಾಯ್ವಾಹಾರಸ್ತಥಾ ತಸ್ಥೌ ನವವರ್ಷಶತಂ ಕ್ರಮಾತ್ ॥ ೭ ॥

ತತೋ ವೀಟಾಂ ಮುಖೇ ಕ್ಷಿಪ್ಯ ನಿರುಚ್ಛ್ವಾಸೋ ಭವೇದ್ಯದಿ ।
ವಿಸ್ತೃತೇ ಹಿಮವತ್ಪೃಷ್ಠೇ ರಮ್ಯೇ ಸಮಶಿಲಾತಲೇ ॥ ೮ ॥

ತತೋ ವೀಟಾಂ ವಿದಾರ್ಯೈವ ಕಪಾಲಂ ಪರಮೇಷ್ಠಿನಃ ।
ಸಾರ್ಚಿಷ್ಮತೀ ಜಟಾಮಧ್ಯಾನ್ನಿಃಕ್ಷಿಪ್ತಾ ಧರಣೀತಲೇ ॥ ೯ ॥

೪-೭. ಆ ಶಂಕರನು ಮಹಾವ್ರತವನ್ನಾಶ್ರಯಿಸಿ ಗೌರಿಯನ್ನು ಸಂತೈಸಿ ನಂದಿಯನ್ನು ಅವಳಿಗೆ ರಕ್ಷಕನನ್ನಾಗಿ ಇಟ್ಟು ಭೂಮಿಯಲ್ಲಿ ಸಂಚಾರಮಾಡತೊಡಗಿದನು. ಮಹಾಮುದ್ರೆಯಿಂದ ನಿಶ್ಚಲವಾದ ಕುತ್ತಿಗೆಯನ್ನು ಧರಿಸಿ ಮಹಾ ಸರ್ಪಗಳನ್ನೇ ಕುಂಡಲಗಳನ್ನಾಗಿ ಧರಿಸಿ ಸೊಂಟದಲ್ಲಿ ಮಹಾಶಂಖಗಳ ಮಾಲಿಕೆಯನ್ನೂ ಧರಿಸಿ ಬಲಗೈಯ್ಯಿನಲ್ಲಿ ಕಪಾಲವನ್ನೂ ಎಡಗೈಯ್ಯಿನಲ್ಲಿ ಕಮಂಡಲುವನ್ನೂ ಧರಿಸಿ ಮರ, ಬೆಟ್ಟ ಮುಂತಾದ ಸ್ಥಲಗಳಲ್ಲಿ ಒಂದೊಂದೇ ದಿನ ವಾಸಮಾಡುತ್ತಾ ತ್ರಿಲೋಕದಲ್ಲಿಯೂ ತನ್ನ ಸ್ಥಾನವನ್ನು ಏರ್ಪಡಿಸಿಕೊಂಡು ಫಲ, ಮೂಲ, ನೀರು, ವಾಯು ಇವೇ ಮೊದಲಾದ ಆಹಾರದಿಂದ ಒಂಭೈನೂರುವರ್ಷಪರ್ಯಂತ ವ್ರತಧಾರಿಯಾಗಿ ಸಂಚರಿಸಿದನು.

೮-೧೧. ಅನಂತರ ವೀಟಾ ಎಂಬ ಯೋಗಮುದ್ರೆಯನ್ನು ಹಣೆಯಲ್ಲಿ ಧರಿಸಿ ಹರನು ವಿಸ್ತಾರವಾಗಿಯೂ ಸಮವಾದ ಶಿಲಾಫಲಕವುಳ್ಳದ್ದಾಗಿಯೂ ಇರುವ ಹಿಮವತ್ಪರ್ವತದ ಹಿಂಭಾಗದಲ್ಲಿ ನಿರುಚ್ಛ್ವಾಸನಾಗಿ ಕುಳಿತನು. ಆಗ ಬ್ರಹ್ಮಕಪಾಲವು ವೀಟೆಯನ್ನೂ ಭೇದಿಸಿಕೊಂಡು ತೇಜಃಪುಂಜದಿಂದ ಕೂಡಿ ಶಂಭುವಿನ ಜಟಾಮಧ್ಯ

ವೀಟಿಯಾತು ಪತಂತ್ಯಾದ್ರಿಃದಾರಿತಃಕ್ಷ್ಮಾ ಸಮೋಭವತ್ ।
ಯಾವತ್ತೀರ್ಥವರಃ ಪುಣ್ಯಃ ಕೇದಾರ ಇತಿ ವಿಶ್ರುತಃ ॥ ೧೦ ॥

ತತೋ ಹರಃ ವರಂ ಪ್ರಾದಾತ್ಕೇದಾರೆ ವೃಷಭಧ್ವಜಃ ।
ಪುಣ್ಯವೃದ್ಧಿಕರಂಬ್ರಹ್ಮನ್ ಪಾಪಘ್ನಂ ಮೋಕ್ಷಸಾಧನಂ ॥ ೧೧ ॥

ಯೇ ಜಲಂ ತಾವಕೇತೀರ್ಥೆಪೀತ್ವಾ ಸಂಯಮಿನೋ ನರಾಃ ।
ಮಧುಮಾಂಸನಿವೃತ್ತಾಸ್ತು ಬ್ರಹ್ಮಚಾರಿವ್ರತೆ ಸ್ಥಿತಾಃ ॥ ೧೨ ॥

ಷಣ್ಮಾಸಾದ್ಧಾರಯಿಷ್ಯಂತಿ ನಿವೃತ್ತಾಃ ಪರಪಾಕತಃ ।
ತೇಷಾಂ ಹೃತ್ಪಂಕಜೇಷ್ವೇವ ತಲ್ಲಿಂಗಂ ಭವಿತಾ ಧ್ರುವಂ ॥ ೧೩ ॥

ನ ಚಾಸ್ಯ ಪಾಪೇಷು ರತಿಃ ಭವಿಷ್ಯತಿ ಕದಾಚನ ।
ಪಿತ್ರೂಣಾಮಕ್ಷಯಂ ಶ್ರಾದ್ಧಂ ಭವಿಷ್ಯತಿ ನ ಸಂಶಯಃ ॥ ೧೪ ॥

ಸ್ನಾನದಾನತಪಾಂಸೀಹ ಹೋಮಜಪ್ಯಾದಿಕಾಃ ಕ್ರಿಯಾಃ ।
ಭವಿಷ್ಯಂತ್ಯಕ್ಷಯಾ ನ್ರೂಣಾಂ ಮೃತಾನಾಮಪುನರ್ಭವಃ ॥ ೧೫ ॥

ದಿಂದ ಹೊರಟು ಭೂಮಿಯಲ್ಲಿ ಬಿದ್ದಿತು. ಹಾಗೆ ಬಿದ್ದ ವೀಟಿಯಿಂದ ಹಿಮವತ್ಪರ್ವತವು ಭೇದಿಸಲ್ಪಟ್ಟು ಭೂಮಿಗೆ ಸಮನಾಗಿ ಆಯಿತು. ಆ ಹಿಮವತ್ಪರ್ವತದಲ್ಲಿ ಆ ಹಳ್ಳವು ಕೇದಾರತೀರ್ಥವೆಂದು ಪ್ರಸಿದ್ಧಿಹೊಂದಿತು. ಆಗ ಶಿವನು ಆ ತೀರ್ಥಕ್ಕೆ ಪುಣ್ಯವೃದ್ಧಿಕರವೂ ಮೋಕ್ಷಸಾಧನವೂ ಆಗುವಂತೆ ವರವನ್ನು ಕೊಟ್ಟನು.

೧೨-೧೬. ಯಾರು ನಿನ್ನ ತೀರ್ಥದಲ್ಲಿ ಜಲಪಾನಮಾಡಿ ಜಿತೇಂದ್ರಿಯರಾಗಿಯೂ ಮಧುಮಾಂಸ ಭಕ್ಷಣದಿಂದ ನಿವೃತ್ತರಾಗಿಯೂ ಬ್ರಹ್ಮಚರ್ಯದಿಂದಿರುತ್ತಾರೋ, ಮತ್ತು ಆರು ತಿಂಗಳವರಿಗೂ ಪರಾನ್ನರಹಿತರಾಗಿ ದೇಹಧಾರಣಮಾಡಿಕೊಂಡಿರುವರೋ ಅಂತಹವರ ಹೃದಯದಲ್ಲಿ ಈ ಕೇದಾರೇಶ್ವರ ಲಿಂಗವೇ ಅಚಂಚಲವಾಗಿ ನಿಲ್ಲುತ್ತದೆ. ಅಂತಹವರಿಗೆ ಪಾಪಕಾರ್ಯದಲ್ಲಿ ಯಾವಾಗಲೂ ಇಚ್ಛೆಯುಂಟಾಗುವುದಿಲ್ಲ. ಪಿತೃಗಳಿಗೂ ಸಹ ಅಕ್ಷಯ್ಯವಾದ ಶ್ರಾದ್ಧವನ್ನೇ ಅವನು ಮಾಡಿದಂತಾಗುತ್ತದೆ. ಮನುಷ್ಯರು ಇಲ್ಲಿ ಮಾಡಿದ ಸ್ನಾನ, ದಾನ, ಹೋಮ, ತಪಸ್ಸು, ಜಪ, ಇತ್ಯಾದಿ ಕ್ರಿಯೆಗಳು ಅಕ್ಷಯ್ಯಫಲಪ್ರದವಾಗಿ ಆಗುತ್ತವೆ. ಇಲ್ಲಿ ಮೃತಿ ಹೊಂದಿ

ಏತದ್ವರಂ ಹರಾತ್ತೀರ್ಥಂ ಪ್ರಾಪ್ಯ ಮುಷ್ಣಂತಿ ದೇವತಾಃ ।
ಪುನಾತಿ ಪುಂಸಾಂ ಕೇದಾರಸ್ತ್ರೀನೇತ್ರವಚನಂ ಯಥಾ ॥ ೧೬ ॥

ಕೇದಾರಾಯ ವರಂ ದತ್ವಾ ಜಗಾಮ ತ್ವರಿತೋ ಹರಃ ।
ಸ್ನಾತುಂ ಭಾನುಸುತಾಂ ದೇವೀಂ ಕಾಲಿಂದೀಂ ಪಾಪನಾಶನೀಂ ॥ ೧೭ ॥

ಅವತೀರ್ಯ ತತಃ ಸ್ನಾತುಂ ನಿಮಗ್ನಶ್ಚ ಮಹಾಂಭಸಿ ।
ದ್ರುಪದಾಂ ನಾಮ ಗಾಯತ್ರೀಂ ಜಜಾಪಾಂತರ್ಜಲೇ ಹರಃ ॥ ೧೮ ॥

ನಿಮಗ್ನೇ ಶಂಕರೇ ದೇವ್ಯಾಂ ಸರಸ್ವತ್ಯಾಂ ಕಲಪ್ರಿಯ ।
ಸಾರ್ಧಃ ಸಂವತ್ಸರೋ ಯಾತಃ ನಚೋನ್ಮಜ್ಜತ್ತ್ರಿದೇಶ್ವರಃ ॥ ೧೯ ॥

ಏತಸ್ಮಿನ್ನಂತರೇ ಬ್ರಹ್ಮಾ ಭುವನಾನ್ಯರ್ಣವಾಸ್ತಥಾ ।
ಚೇಲುಃ ಪೇತುಃ ಧರಣ್ಯಾಂ ಚ ನಕ್ಷತ್ರಂ ತಾರಕೈಸ್ಸಹ ॥ ೨೦ ॥

ಆಸನೇಭ್ಯಃ ಪ್ರಚಲಿತಾ ದೇವಾಃ ಶಕ್ರಪುರೋಗಮಾಃ ।
ಸ್ವಸ್ತ್ಯಸ್ತು ಲೋಕೇಭ್ಯ ಇತಿ ಜಪಂತಃ ಪರಮರ್ಷಯಃ ॥ ೨೧ ॥

ದವರಿಗೆ ಪುನರ್ಜನ್ಮವೇ ಇರುವದಿಲ್ಲ. ಈ ಪ್ರಕಾರವಾದ ವರವನ್ನು ಶಂಕರನಿಂದ ಹೊಂದಿ ಈ ತೀರ್ಥವು ದೇವತೆಗಳನ್ನೂ ಆಕರ್ಷಿಸುತ್ತಿದೆ. ತ್ರಿನೇತ್ರನ ವಚನದಂತೆ ಈ ತೀರ್ಥವು ಮನುಷ್ಯರನ್ನು ಪಾವನಮಾಡುತ್ತಿದೆ.

೧೭-೨೦. ಕೇದಾರತೀರ್ಥಕ್ಕೆ ಈ ರೀತಿ ವರವನ್ನು ಕೊಟ್ಟು ಹರನು ಕಾಲಿಂದೀ ನದಿಯಲ್ಲಿ ಸ್ನಾನಮಾಡಲು ವೇಗದಿಂದ ಹೊರಟುಹೋದನು. ಆ ನದಿಯ ಆಳವಾದ ನೀರಿನಲ್ಲಿ ಇಳಿದು ದ್ರುಪದವೆಂಬ ಗಾಯತ್ರಿಯನ್ನು ಜಪಿಸುತ್ತ ಅಲ್ಲಿಯೇ ನಿಂತನು. ಆ ನದಿಯಲ್ಲಿ ಮುಳುಗಿದ ಶಂಕರನು ವಂದೂವರೆವರ್ಷದವರಿಗೂ ಮೇಲಕ್ಕೆ ಏಳಲೇ ಇಲ್ಲ. ಈ ಸಮಯದಲ್ಲಿ ಬ್ರಹ್ಮನೂ ಎಲ್ಲಾ ಲೋಕಗಳೂ ಸಪ್ತಸಮುದ್ರಗಳೂ ಸಹ, ಚಲಿಸಿದವು. ನಕ್ಷತ್ರಗಳೆಲ್ಲವೂ ಚುಕ್ಕಿಗಳೊಡನೆ ಭೂಮಿಯಲ್ಲಿ ಬಿದ್ದುವು.

೨೧-೨೪. ಪ್ರಪಂಚದ ಚಲನದಿಂದ ಇಂದ್ರನೇ ಮೊದಲಾದ ದೇವತೆಗಳು ತಮ್ಮ ತಮ್ಮ ಆಸನಗಳಿಂದ ಅಲ್ಲಾಡಿದರು. ಋಷಿಗಳೆಲ್ಲರೂ ಜಪಪರಾಯಣರಾಗಿ ಲೋಕಕ್ಕೆ ಮಂಗಳವಾಗಲಿ ಎಂದು ಹರಸಹತ್ತಿದರು. ದೇವತೆಗಳೆಲ್ಲರೂ ಕ್ಷೋಭ

ಕ್ಷುಬ್ಧಾಶ್ಚ ದೇವಾಲೋಕೇಷು ಬ್ರಹ್ಮಾಣಂ ಪ್ರಷ್ಟುಮಾಗತಾಃ ।
ದೃಷ್ಟ್ವೋಚುಃ ಕಿಮಿದಂ ಲೋಕಾಃ ಕ್ಷುಬ್ಧಾಃ ಸಂಶಯಮಾಗತಾಃ ॥ ೨೨ ॥

ತಾನಾಹ ಪದ್ಮಸಂಭೂತೋ ನ ತದ್ವೇದ್ಮಿ ಚ ಕಾರಣಂ ।
ತದಾಗಚ್ಛತ ವೋ ಯುಕ್ತಂ ಪ್ರಷ್ಟುಂ ಚಕ್ರಗದಾಧರಂ ॥ ೨೩ ॥

ಪಿತಾಮಹೇನ್ಯೈವಮುಕ್ತಾ ದೇವಾಃ ಶಕ್ರಪುರೋಗಮಾಃ ।
ಪಿತಾಮಹಂ ಪುರಸ್ಕೃತ್ಯ ಮುರಾರಿಸದನಂ ಗತಾಃ ॥ ೨೪ ॥

ನಾರದ ಉವಾಚ

ಕೋಽಸೌ ಮುರಾರಿರ್ದೇವರ್ಷೆ ದೇವೋ ಯಕ್ಷೋ ನು ಕಿನ್ನರಃ ।
ದೈತ್ಯೋ ವಾ ರಾಕ್ಷಸೋ ವಾಪಿ ಪಾರ್ಥಿವೋ ವಾ ತದುಚ್ಯತಾಂ ॥ ೨೫ ॥

ಪುಲಸ್ತ್ಯ ಉವಾಚ

ಯೋಽಸೌ ರಜಸ್ಸತ್ವಮಯೋ ಗುಣವಾಂ ಶ್ಚ ತಮೋಮಯಃ ।
ನಿರ್ಗುಣಃ ಸರ್ವಗೋ ವ್ಯಾಪೀ ಮುರಾರಿರ್ಮಧುಸೂದನಃ ॥ ೨೬ ॥

ಗೊಂಡು ಇದಕ್ಕೆ ಕಾರಣವೇನೆಂದು ಕೇಳಲು ಬ್ರಹ್ಮನಲ್ಲಿ ಹೋದರು. ಬ್ರಹ್ಮನನ್ನು ಕುರಿತು ಲೋಕವೆಲ್ಲವೂ ಈ ರೀತಿ ಕ್ಷೋಭೆಗೊಂಡು ಜೀವಿತಸಂಶಯವನ್ನು ಹೊಂದುತ್ತಿದೆ ಇದಕ್ಕೆ ಕಾರಣವೇನೆಂದು ಕೇಳಿದರು. ಆಗ ಚತುರ್ಮುಖನು ಇದಕ್ಕೆ ಕಾರಣವು ನನಗೂ ತಿಳಿದಿಲ್ಲ. ಬನ್ನಿರಿ, ಎಲ್ಲರೂ ಹೋಗಿ ಶಂಖಚಕ್ರಗದಾಪಾಣಿಯಾದ ಮಹಾವಿಷ್ಣುವಿನಲ್ಲಿ ಇದನ್ನು ತಿಳಿಯೋಣ ಎಂದನು. ಈ ರೀತಿ ಬ್ರಹ್ಮನಿಂದ ಹೇಳಲ್ಪಟ್ಟ ಇಂದ್ರಾದಿ ದೇವತೆಗಳೆಲ್ಲರೂ ಅವನನ್ನೇ ಮುಂದಿಟ್ಟುಕೊಂಡು ಮಹಾವಿಷ್ಣುವಿನ ಸ್ಥಾನಕ್ಕೆ ಹೊರಟರು.

೨೫-೨೭. ನಾರದರು ನೀವು ಮುರಾರಿ ಎಂದು ಕರೆಯುತ್ತಿರುವವರಾರು. ಅವನು ದೇವರ್ಷಿಯೋ, ದೇವತೆಯೋ, ಯಕ್ಷನೋ, ಕಿನ್ನರನೋ, ದೈತ್ಯನೋ, ರಾಕ್ಷಸನೋ, ಭೂರೆಯೋ ಇದನ್ನು ಹೇಳಬೇಕೆಂದು ಪ್ರಶ್ನೆ ಮಾಡಲಾಗಿ ಪುಲಸ್ತ್ಯರು ಸತ್ವರಜಸ್ತಮೋ ರೂಪವಾದ ಗುಣತ್ರಯಗಳ ವ್ಯಾಮಿಶ್ರಣದಿಂದ ನಡೆದು ಬರುತ್ತಿರುವ ಈ ಪ್ರಪಂಚದಲ್ಲಿ ಆ ಗುಣಗಳಿಗೆ ಅಧೀನನಾಗದೆಯೂ, ಅವುಗಳಿಗೂ, ನಿಯಾಮಕನಾಗಿಯೂ ಸರ್ವವ್ಯಾಪಿಯಾಗಿಯೂ ಇರುವ ಮಧುಸೂದನನೇ ಮುರಾರಿಯೆಂದು ಕರೆಯಲ್ಪಡು

ನಾರದ ಉವಾಚ

ಕೋಽಸೌ ಮುರ ಇತಿ ಖ್ಯಾತಃ ಕಸ್ಯ ಪುತ್ರಃ ಸಗೀಯತೇ ।
ಕಥಂ ಚ ನಿಹತಃ ಸಂಖ್ಯೇ ವಿಷ್ಣುನಾ ತದ್ವದಸ್ವ ಮೇ ॥ ೨೭ ॥

ಪುಲಸ್ತ್ಯ ಉವಾಚ

ಶ್ರೂಯತಾಂ ಕಥಯಿಷ್ಯಾಮಿ ಮುರಾಸುರನಿಬರ್ಹಣಂ ।
ವಿಚಿತ್ರಮಿದಮಾಖ್ಯಾನಂ ಪುಣ್ಯದಂ ಪಾಪನಾಶನಂ ॥ ೨೮ ॥

ಕಶ್ಯಪಸ್ಯೌರಸಃ ಪುತ್ರೋ ಮುರೋನಾಮ ದನೂದ್ಭವಃ ।
ಸದದರ್ಶ ರಣೇ ಭಗ್ನಾನ್ ದಿತಿಪುತ್ರಾನ್ ಸುರೋತ್ತಮೈಃ ॥ ೨೯ ॥

ತತಃ ಸಮರಣಾದ್ಭೀತಃ ತಪ್ತ್ವಾ ವರ್ಷಗಣಾನ್ ಬಹೂನ್ ।
ಆರಾಧಯಾಮಾಸ ವಿಭುಂ ಬ್ರಹ್ಮಾಣಮಪರಾಜಿತಂ ॥ ೩೦ ॥

ತತೋಽಸ್ಯ ತುಷ್ಟೋ ವರದಃ ಪ್ರಾಹ ವತ್ಸ ವರಂ ವೃಣು ।
ಸ ಚ ವವ್ರೇ ವರಂ ದೈತ್ಯೋ ವರಮೇವಂ ಪಿತಾಮಹಾತ್ ॥ ೩೧ ॥

ತ್ತಿರುವನು ಎಂದು ಉತ್ತರವಿತ್ತರು. ಪುನಃ ನಾರದರು, ಮುರನೆಂದು ಪ್ರಸಿದ್ಧಿ ಪಡೆದಿರುವ ಆ ವ್ಯಕ್ತಿಯು ಯಾರ ಮಗನು. ವಿಷ್ಣುವೂ ಸಹ ಅವನನ್ನು ಯುದ್ಧದಲ್ಲಿ ಹೇಗೆ ಕೊಂದನು ಇದನ್ನು ಹೇಳಬೇಕು. ಎಂದು ಪ್ರಶ್ನೆಮಾಡಲು ಪುಲಸ್ತ್ಯರು ಹೇಳುತ್ತಾರೆ.

೨೮-೩೨. ಮುರಾಸುರನ ವಧವೃತ್ತಾಂತವನ್ನು ಹೇಳುತ್ತೇನೆ, ಕೇಳೋಣಾ ಗಲಿ. ಈ ಉಪಾಖ್ಯಾನವು ಆಶ್ಚರ್ಯಕರವಾಗಿಯೂ ಪುಣ್ಯಪ್ರದವಾಗಿಯೂ, ಪಾಪ ನಾಶಕವಾಗಿಯೂ ಇರುತ್ತದೆ. ಕಶ್ಯಪನಿಗೆ ದನುವಿನಲ್ಲಿ ಹುಟ್ಟಿದ ಮುರನೆಂಬ ಔರಸ ಪುತ್ರನಿದ್ದನು. ಅವನು ದೇವತೆಗಳಿಂದ ಯುದ್ಧದಲ್ಲಿ ಪರಾಜಿತರಾದ ದೈತ್ಯರನ್ನು ನೋಡಿದನು. ಆಗ ಅವನು ಮರಣದಿಂದ ಭಯಪಟ್ಟು ಅನೇಕ ವರ್ಷಪರ್ಯಂತ ತಪಸ್ಸನ್ನು ಮಾಡಿ ಚತುರ್ಮುಖನನ್ನು ಸಂತೋಷಪಡಿಸಿದನು. ಆಗ ಸಂತುಷ್ಟನಾದ ಚತುರ್ಮುಖನು ವರವನ್ನು ಬೇಡು ಎಂದು ಹೇಳಲಾಗಿ ಅವನಿಂದ ಮುರನು ಈ ವರವನ್ನು ಬೇಡಿದನು. ನಾನು ಯುದ್ಧದಲ್ಲಿ ಯಾರು ಯಾರನ್ನು ನನ್ನ

ಯಂ ಯಂ ಕರತಲೇ ನಾಹಂ ಸ್ಪೃಶೇಯಂ ಸಮರೇ ವಿಭೋ ।
ಸಸಮುದ್ಧಸ್ತಸಂಸ್ಪೃಷ್ಟಸ್ತ್ವಮರೋಽಪಿ ಮ್ರಿಯೇದಜ ।
ಬಾಢಮಿತ್ಯಾಹ ಭಗವಾನ್ ಬ್ರಹ್ಮಾ ಲೋಕಪಿತಾಮಹಃ ॥ ೩೨ ॥

ತತೋಽಭ್ಯಾಗಾನ್ಮಹಾತೇಜಾ ಮುರಃ ಸುರಗಿರಿಂ ಬಲೀ ॥ ೩೩ ॥

ಸಮೇತ್ಯಾಹ್ವಯತೇ ದೇವಂ ಯಕ್ಷಂ ಕಿನ್ನರಮೇವವಾ ।
ನಕಶ್ಚಿದ್ಯುಯುಧೇ ತೇನ ಸಮಂ ದೈತ್ಯೇನ ನಾರದ ॥ ೩೪ ॥

ತತೋಽಮರಾವತೀಂ ಕ್ರುದ್ಧಃ ಸಗತ್ವಾ ಶಕ್ರಮಾಹ್ವಯತ್ ।
ನಾನೇನ ಸಹ ಯೋದ್ಧುಂ ವೈ ಮತಿಂ ಚಕ್ರೇ ಪುರಂದರಃ ॥ ೩೫ ॥

ತತಃ ಸ ಕರಮುದ್ಯಮ್ಯ ಪ್ರವಿವೇಶಾಮರಾವತೀಂ ।
ಪ್ರವಿಶಂತಂ ನ ತಂ ಕಶ್ಚಿನ್ನಿವಾರಯಿತುಮುತ್ಸಹೇತ್ ॥ ೩೬ ॥

ಸ ಗತ್ವಾ ಶಕ್ರಸದನಂ ಪ್ರೋವಾಚೇಂದ್ರಂ ಮುರಸ್ತದಾ ।
ದೇಹಿ ಯುದ್ಧಂ ಸಹಸ್ರಾಕ್ಷ ನೋಽಚೇತ್ಸ್ವರ್ಗಂ ಪರಿತ್ಯಜ ॥ ೩೭ ॥

ಕೈಯಿನಿಂದ ಮುಟ್ಟುತ್ತೇನೋ ಅವನು ನನ್ನ ಕೈಯ್ಯಿನ ಸ್ಪರ್ಶಮಾತ್ರದಿಂದಲೇ ಅವನು ದೇವತೆಯಾದರೂ ಸರಿ ಮರಣಹೊಂದಲೇಬೇಕು. ಆಗ ಚತುರ್ಮುಖನು ಇಂತಹ ವರವನ್ನೂ ಸಹ ಆಗಬಹುದೆಂದು ಒಪ್ಪಿದನು.

೩೪-೩೭. ಅನಂತರ ತೇಜಸ್ವಿಯಾದ ಆ ಮುರನು ಹಿಮವತ್ಪರ್ವತಕ್ಕೆ ಬಂದು ದೇವತೆ, ಯಕ್ಷ, ಕಿನ್ನರ ಮುಂತಾದವರೊಡನೆ ಸೇರಿ ಯುದ್ಧಮಾಡಲು ಕರೆಯುತ್ತಾನೆ. ಆ ದೈತ್ಯನೊಡನೆ ಯಾರೂ ಯುದ್ಧಮಾಡಲಿಲ್ಲ. ಆಗ ಕುಪಿತನಾದ ಆ ಮುರನು ಅಮರಾವತಿಗೆ ಹೋಗಿ ಇಂದ್ರನನ್ನು ಯುದ್ಧಕ್ಕೆ ಕರೆದನು. ಇಂದ್ರನೂ ಇವನೊಡನೆ ಯುದ್ಧಮಾಡಲು ಒಪ್ಪಲಿಲ್ಲ. ಅನಂತರ ಆ ಮುರನು ಕೈಯ್ಯನ್ನೆತ್ತಿಕೊಂಡು ಅಮರಾವತಿಗೆ ನುಗ್ಗಿದನು. ಹಾಗೆ ನುಗ್ಗಿದ ಅವನನ್ನು ಅಲ್ಲಿ ಯಾರೂ ತಡೆಯಲಾಗಲಿಲ್ಲ. ಆಗ ಆ ಮುರನು ಇಂದ್ರನ ಭವನಕ್ಕೆ ಹೋಗಿ ಅವನನ್ನು ಕುರಿತು ಎಲೈ ಸಹಸ್ರಾಕ್ಷನೇ ನನಗೆ ಯುದ್ಧಭಿಕ್ಷೆಯನ್ನು ನೀಡು. ಇಲ್ಲವಾದರೆ ಸ್ವರ್ಗವನ್ನು ಬಿಟ್ಟು ಹೊರಡು ಎಂದನು.

ಇತ್ಯೇವಮುಕ್ತೋ ದೈತ್ಯೇನ ಬ್ರಹ್ಮನ್ ಹರಿಹಯಸ್ತದಾ ।
ಸ್ವರ್ಗರಾಜ್ಯಂ ಪರಿತ್ಯಜ್ಯ ಭೂಚರಃ ಸಮಜಾಯತ ॥ ೩೮ ॥

ತತೋ ಗಜೇಂದ್ರಕುಲಿಶೌ ಹೃತೌ ಶಕ್ರಸ್ಯ ಶತ್ರುಣಾ ।
ಸಕಲತ್ರೋ ಮಹಾತೇಜಾ ದೇವೈಸ್ಸಹ ಸುತೇನಚ ॥ ೩೯ ॥

ಕಾಲಿಂದ್ಯಾ ದಕ್ಷಿಣೇ ಕೂಲೇ ನಿವಿವೇಶ ಪುರಂ ಹರಿಃ ।
ಮುರಶ್ಚಾಪಿ ಮಹಾಭೋಗಾನ್ಬುಭುಜೆ ಸ್ವರ್ಗಸಂಸ್ಥಿತಃ ॥ ೪೦ ॥

ದಾನವಾಶ್ಚಾಪರೇ ರೌದ್ರಾ ಮಯತಾರಪುರೋಗಮಾಃ ।
ಮುರಮಾಸಾದ್ಯ ಮೋದ್ಯಂತೇ ಸ್ವರ್ಗೇ ಸುಕೃತಿನೋ ಯಥಾ ॥ ೪೧ ॥

ಸ ಕದಾ ಚಿನ್ಮಹೀಪೃಷ್ಠಂ ಸಮಾಯಾತೋ ಮಹಾಸುರಃ ।
ಏಕಾಕೀ ಕುಂಜರಾರೂಢಃ ಸರಯೂಂ ನಿಮ್ನಗಾಂ ಪ್ರತಿ ॥ ೪೨ ॥

ಸ ಸರಯ್ವಾಸ್ತಟೇ ವೀರಂ ರಾಜಾನಂ ಸೂರ್ಯವಂಶಜಂ ।
ದದೃಶೇ ರಘುನಾಮಾನಂ ದೀಕ್ಷಿತಂ ಯಜ್ಞಕರ್ಮಣಿ । ॥ ೪೩ ॥

೩೮-೪೧. ಆ ದೈತ್ಯನಿಂದ ಹೀಗೆ ಹೇಳಲ್ಪಟ್ಟ ಇಂದ್ರನು ತನ್ನ ಸ್ವರ್ಗರಾಜ್ಯವನ್ನು ಆ ಮುರನಿಗೆ ಒಪ್ಪಿಸಿ ತಾನು ಭೂಮಿಯಲ್ಲಿ ಸಂಚರಿಸತೊಡಗಿದನು. ಆ ಇಂದ್ರನ ಐರಾವತವೂ ವಜ್ರಾಯುಧವೂ ಸಹ ಶತ್ರುವಿನಿಂದ ಅಪಹರಿಸಲ್ಪಟ್ಟವು. ಆಗ ಇಂದ್ರನು ಪತ್ನಿಪುತ್ರರೊಡನೆಯೂ ಅನುಯಾಯಿಗಳಾದ ದೇವತೆಗಳೊಡನೆಯೂ ಸಹ ಕಾಲಿಂದೀ ನದಿಯ ದಕ್ಷಿಣ ತೀರದಲ್ಲಿ ನಗರವನ್ನು ಮಾಡಿಕೊಂಡು ಅಲ್ಲಿ ನಿಂತನು. ಸ್ವರ್ಗವನ್ನು ಆಶ್ರಯಿಸಿದ ಆ ಮುರನೂ ಸಹ ನಾನಾವಿಧವಾದ ಭೋಗಗಳನ್ನನುಭವಿಸಿದನು. ಮಯ, ತಾರ ಮೊದಲಾದ ಇತರ ದಾನವರೂ ಸಹ ಆ ಮುರನನ್ನು ಆಶ್ರಯಿಸಿಕೊಂಡು ಪುಣ್ಯಶಾಲಿಗಳು ಪುಣ್ಯಬಲದಿಂದ ಸ್ವರ್ಗಸುಖವನ್ನನುಭವಿಸುವಂತೆ ತಾವೂ ಅನುಭವಿಸಿದರು.

೪೨-೪೪. ಆ ಮುರನು ಒಂದಾನೊಂದು ಕಾಲದಲ್ಲಿ ಭೂಮಿಗೆ ಬಂದು ಗಜಾರೂಢನಾಗಿ ಏಕಾಕಿಯಾಗಿ ಸರಯೂ ತೀರದಲ್ಲಿ ಸಂಚರಿಸುತ್ತಿರುವಾಗ ಅಲ್ಲಿ ಸೂರ್ಯವಂಶದ ರಘುವೆಂಬ ಯಜ್ಞದೀಕ್ಷೆಯುಳ್ಳ ರಾಜನನ್ನು ನೋಡಿದನು. ಅವನನ್ನು

ತಮುಪೇತ್ಯಾಬ್ರವೀದ್ದೈತ್ಯೋ ಯುದ್ಧಂ ಮೇ ದೀಯತಾಮಿತಿ ।
ನೋ ಚೇನ್ನಿವರ್ತತಾಂ ಯಜ್ಞೋ ನೇಷ್ಟವ್ಯಾ ದೇವತಾಸ್ತ್ವಯಾ ॥ ೪೪ ॥

ತಮುಪೇತ್ಯ ಮಹಾತೇಜಾ ಮಿತ್ರಾವರುಣಸಂಭವಃ ।
ಪ್ರೋವಾಚ ಬುದ್ಧಿಮಾನ್ ಬ್ರಹ್ಮನ್ ವಸಿಷ್ಠಸ್ತಪತಾಂ ವರಃ ॥ ೪೫ ॥

ಕಿಂತೇ ಜಿತೈರ್ನರೈರ್ದೈತ್ಯ ಅಜಿತಾನನುಶಾಸಯ ।
ಪ್ರಹರ್ತುಮಿಚ್ಛಸಿ ಯದಿ ತಂ ನಿವಾರಯ ಚಾಂತಕಂ ॥ ೪೬ ॥

ಸ ಬಲೀ ಶಾಸನಂ ತೇಽನ್ಯೇ ನ ಕರೋತಿ ಮಹಾಸುರ ।
ತಸ್ಮಿನ್ ಜಿತೇ ಹಿ ವಿಜಿತಂ ಸರ್ವಮನ್ಯಚ್ಚ ಭೂತಲಂ ॥ ೪೭ ॥

ಸ ತದ್ವಸಿಷ್ಠವಚನಂ ನಿಶಮ್ಯ ದನುಪುಂಗವಃ ।
ಜಗಾಮ ಧರ್ಮರಾಜಾನಂ ವಿಜೇತುಂ ದಂಡಪಾಣಿನಂ ॥ ೪೮ ॥

ನೋಡಿ ಮುರನು ನನಗೆ ಯುದ್ಧಭಿಕ್ಷೆಯನ್ನು ನೀಡು ಇಲ್ಲದಿದ್ದರೆ ಹಿಂದೆ ತಿರುಗು ದೇವತೆಗಳನ್ನುದ್ದೇಶಿಸಿ ನೀನು ಯಜ್ಞಮಾಡಬೇಕಾದುದಿಲ್ಲ ಎಂದನು.

೪೫-೪೮. ಆಗ ಬುದ್ಧಿಶಾಲಿಯಾಗಿಯೂ ತಪಸ್ವಿಯಾಗಿಯೂ ಇದ್ದ ವಸಿಷ್ಠ ಮಹರ್ಷಿಯು ಆ ದೈತ್ಯನನ್ನು ಕುರಿತು ಹೀಗೆ ಹೇಳಿದನು. ಎಲೈ ದೈತ್ಯರಾಜನೇ ಯಾವಾಗಲೂ ನಿಮಗೆ ಅಧೀನರಾಗಿಯೇ ಇರುವ ನರರ ವಿಜಯದಿಂದ ನಿನಗೇನು ಫಲವಾದೀತು. ಅಜಿತರಾಗಿರುವ ದೇವತೆಗಳನ್ನು ಶಿಕ್ಷಿಸಲು ಯತ್ನಿಸು. ನೀನೇ ಪ್ರಹರಿಸಲು ಅಪೇಕ್ಷೆ ಇದ್ದಲ್ಲಿ ಎಲ್ಲರನ್ನೂ ಪ್ರಹರಿಸಲು ಅಧಿಕಾರಹೊಂದಿರುವ ಯಮನನ್ನು ಮೊದಲು ಪರಾಜಯಗೊಳಿಸಿ ಹಿಮ್ಮೆಟ್ಟಿಸು. (ಅನಂತರ ಅವನ ಆ ಅಧಿಕಾರವು ನಿನ್ನನ್ನೇ ಸೇರುತ್ತದೆ ಎಂದು ತಾತ್ಪರ್ಯ) ಆ ಪ್ರಬಲನಾದ ಯಮನು ನಿನ್ನ ಆಜ್ಞೆಗೆ ಅಧೀನನಾಗುವುದಿಲ್ಲ. ಅವನೊಬ್ಬನನ್ನು ನೀನು ಜಯಿಸಿ ಆಜ್ಞಾಧಾರಕನನ್ನಾಗಿ ಮಾಡಿಕೊಂಡಲ್ಲಿ ಎಲ್ಲರನ್ನೂ ಹಾಗೂ ಪ್ರಪಂಚವನ್ನೂ ನೀನು ಜಯಿಸಿದಂತೆಯೇ ಆಗುತ್ತದೆ. ವಸಿಷ್ಠರ ಈ ಮಾತನ್ನು ಕೇಳಿ ಆ ದಾನವನು ದಂಡಧಾರಿಯಾದ ಯಮನನ್ನೇ ಜಯಿಸಲು ಹೊರಟನು.

ತಮಾಯಾಂತಂ ಯಮಃ ಶ್ರುತ್ವಾ ಮತ್ವಾ*ವಧ್ಯಂ ಚ ಸಂಯುಗೇ ।
ಸ ಸಮಾರುಹ್ಯ ಮಹಿಷಂ ಕೇಶವಾಂತಿಕಮಾಗಮತ್ ॥ ೪೯ ॥

ಸಮೇತ್ಯಚಾಭಿವಾದ್ಯೈನಂ ಪ್ರೋವಾಚ ಮುರಚೇಷ್ಟಿತಂ ।
ಸಚಾಹ ಗಚ್ಛ ಮಾಮದ್ಯ ಪ್ರೇಷಯಸ್ವ ಮಹಾಸುರಂ ॥ ೫೦ ॥

ಸ ವಾಸುದೇವವಚನಂ ಶ್ರುತ್ವಾ ಚ ತ್ವರಯಾನ್ವಿತಃ ।
ಏತಸ್ಮಿನ್ನಂತರೇ ದೈತ್ಯಃ ಸಂಪ್ರಾಪ್ತೋ ನಗರೀಂ ಮುರಃ ॥ ೫೧ ॥

ತಮಾಗತಂ ಯಮಃ ಪ್ರಾಹ ಕಿಮು ರೇ ಕರ್ತುಮಿಚ್ಛಸಿ ।
ವದಸ್ವ ವಚನಂ ಕರ್ತಾ ತ್ವದೀಯಂ ದಾನವೇಶ್ವರ ॥ ೫೨ ॥

ಮುರ ಉವಾಚ

ಯಮ ಪ್ರಜಾಸಂಯಮನಾನ್ನಿವೃತ್ತಿಂ ಕರ್ತುಮರ್ಹಸಿ ।
ನೋಚೇತ್ತವಾದ್ಯ ಛಿತ್ವಾಹಂ ಮೂರ್ಧಾನಂ ಪಾತಯೇ ಭುವಿ ॥ ೫೩ ॥

ತಮಾಹ ಧರ್ಮರಾಡ್ವಾಕ್ಯಂ ಯದಿ ಸಂಯಮಸೇ ಮಹಾನ್ ।
ಮುರೋ ನಿತ್ಯಂ ಗೋಪಿತಾಸ್ಮಿ ಕರಿಷ್ಯೇ ವಚನಂ ತವ ॥ ೫೪ ॥

೪೯-೫೨ ಹಾಗೆ ಯುದ್ಧಾಭಿಲಾಷೆಯಿಂದ ಬರುತ್ತಿರುವ ಮುರನನ್ನು ತಿಳಿದು ಯುದ್ಧದಲ್ಲಿ ಇವನು ಕೊಲ್ಲಲ್ಪಡತಕ್ಕವನೆಂದೂ ಊಹಿಸಿ ಮಹಿಷಾರೂಢನಾಗಿ ನಾರಾಯಣನ ಸಮೀಪಕ್ಕೆ ಹೋಗಿ ಅವನಿಗೆ ನಮಸ್ಕರಿಸಿ ಮುರಾಸುರನ ಈ ಚೇಷ್ಟೆಯನ್ನೆಲ್ಲಾ ಅರಿಕೆಮಾಡಿದನು. ಆಗ ನಾರಾಯಣನು, ಇರಲಿ ನೀನು ಹೋಗು. ಆ ಅಸುರನನ್ನು ನನ್ನಲ್ಲಿಗೆ ಕಳುಹಿಸು ಎಂದನು. ಈ ಮಾತನ್ನು ಕೇಳಿ ಯಮನು ತ್ವರೆಯಿಂದ ತನ್ನ ನಗರಕ್ಕೆ ಹಿಂತಿರುಗಿದನು. ಇಷ್ಟರಲ್ಲಿಯೇ ಮುರಾಸುರನು ಯಮನಗರಕ್ಕೆ ಬಂದೇಬಂದನು. ಹಾಗೆ ಬಂದ ಆ ದೈತ್ಯನನ್ನು ಕುರಿತು ಯಮನು ಎಲೈ ದೈತ್ಯೇಶ್ವರನೇ ಏನು ಮಾಡಬೇಕೆಂದು ಇಲ್ಲಿ ಬಂದಿರುವೆ. ನಿನ್ನ ಅಪೇಕ್ಷೆ ಏನು ಎಂದು ಪ್ರಶ್ನೆಮಾಡಲು ಮುರನು ಹೇಳುತ್ತಾನೆ.

೫೩-೫೬. ಎಲೈ ಯಮನೇ ಪ್ರಜೆಗಳ ವಿಷಯದಲ್ಲಿ ನೀನು ಹೊಂದಿರುವ ನಿಯಾಮಕತ್ವವನ್ನು ಇನ್ನು ಮುಂದೆ ಬಿಟ್ಟುಬಿಡಬೇಕು. ಆ ಅಧಿಕಾರವು ಇನ್ನು ಮುಂದೆ ನಿನಗೆ ಸೇರಿದುದಲ್ಲ. ಹಾಗಿಲ್ಲದಿದ್ದರೆ ಈಗಲೇ ನಿನ್ನ ತಲೆಯನ್ನು ಕಡಿದು ಭೂಮಿಯಲ್ಲಿ ಕೆಡಹುತ್ತೇನೆ ಎಂದನು. ಆಗ ಯಮನು ಇನ್ನು ಮುಂದೆ ನೀನೇ

* ಇಲ್ಲಿ ಅವಧ್ಯತ್ವಂ ಎಂದೂ ಪದವಿಭಾಗ ಮಾಡಬಹುದು.

ಮುರಸ್ತಮಾಹ ಭವತಃ ಕೋಽಧಿಕಸ್ತಂ ವದಸ್ವ ಮೇ ।
ಅಹಮೇನಂ ಪರಾಜಿತ್ಯ ವಾರಯಾಮಿ ನ ಸಂಶಯಃ ॥ ೫೫ ॥

ಯಮಸ್ತಂ ಪ್ರಾಹ ಮೇ ವಿಷ್ಣುಃ ದೇವಶ್ಚಕ್ರಗದಾಧರಃ ।
ಶ್ವೇತದ್ವೀಪನಿವಾಸೀ ಯಃ ಸ ಮಾಂ ಸಂಯಮತ್ಯವ್ಯಯಃ ॥ ೫೬ ॥

ತಮಾಹ ದೈತ್ಯಶಾರ್ದೂಲಃ ಕ್ವಾಸೌ ವಸತಿ ಕೀರ್ತಯ ।
ಸ್ವಯಂ ತತ್ರ ಗಮಿಷ್ಯಾಮಿ ತಸ್ಯ ಸಂಯಮನೋದ್ಯತಃ ॥ ೫೭ ॥

ತಮುವಾಚ ಯಮೋ ಗಚ್ಛ ಕ್ಷೀರೋದಂ ನಾಮ ಸಾಗರಂ ।
ತತ್ರಾಸ್ತೇ ಭಗವಾನ್ ವಿಷ್ಣುಃ ಲೋಕನಾಥೋ ಜಗನ್ಮಯಃ ॥ ೫೮ ॥

ಮುರಸ್ತದ್ವಾಕ್ಯಮಾಕರ್ಣ್ಯ ಪ್ರಾಹ ಗಚ್ಛಾಮಿ ಕೇಶವಂ ।
ಕಿಂತು ತ್ವಯಾ ನತಾವದ್ಧಿ ಸಂಯಮ್ಯಾ ಧರ್ಮಮಾನವಾಃ ॥ ೫೯ ॥

ಪ್ರಜೆಗಳಿಗೆ ನಿಯಾಮಕನಾಗಿರುವ ಪಕ್ಷದಲ್ಲಿ ನೀನೇ ರಕ್ಷಕನಾಗಿರು. ನಿನ್ನ ಮಾತನ್ನೇ ನಾನು ನಡೆಸುತ್ತೇನೆ ಎಂದನು. ಆಗ ಮುರನು ನಿನಗೂ ನಿಯಾಮಕನಾಗಿ ಅಧಿಕನಾಗಿರುವವನು ಯಾರು ಅವನನ್ನೂ ಜಯಿಸಿ ನಾನು ತಡೆಯುತ್ತೇನೆ ಎಂದು ಕೇಳಲು ಯಮನು ಅವನನ್ನು ಕುರಿತು ಚಕ್ರಗದಾಪಾಣಿಯಾದ ವಿಷ್ಣುವೇ ನನಗೆ ದೈವವು ಅವನೇ ನನಗೆ ನಿಯಾಮಕನು ಶಾಶ್ವತನಾದ ಆ ಮಹಾವಿಷ್ಣುವು ಶ್ವೇತದ್ವೀಪದಲ್ಲಿ ವಾಸಮಾಡುತ್ತಿರುತ್ತಾನೆ ಎಂದನು.

೫೭-೬೦. ಆಗ ಆ ಯಮನನ್ನು ಕುರಿತು ದೈತ್ಯರಾಜನಾದ ಮುರನು, ಆ ವಿಷ್ಣುವು ಎಲ್ಲಿರುವನು ಹೇಳು. ಅವನನ್ನು ಶಾಸನ ಮಾಡಲು ನಾನೇ ಅಲ್ಲಿಗೆ ಹೋಗುವೆನು, ಎನ್ನಲು ಯಮನು ಹೊರಡು ಕ್ಷೀರಸಮುದ್ರವೆಂದು ಪ್ರಸಿದ್ಧಿಹೊಂದಿರುವ ಸಾಗರವಿದೆ. ಲೋಕನಾಥನಾಗಿಯೂ ಜಗನ್ಮಯನಾಗಿಯೂ ಇರುವ ವಿಷ್ಣುವು ಅಲ್ಲಿಯೇ ಇರುವನು ಎಂದನು. ಆಗ ಆ ಮುರನು ಆ ಮಾತನ್ನು ಕೇಳಿ ನಾನು ಆ ಕೇಶವನ ಬಳಿಗೆ ಹೋಗುತ್ತೇನೆ, ಆದರೆ ಅಲ್ಲಿಯವರೆವಿಗೂ ಮಾನವರ ಸಂಯಮನ ವ್ಯಾಪಾರವನ್ನು ನೀನು ಮಾಡಕೂಡದು. ಎನ್ನಲು ಯಮನು ನೀನು ವಿಜಯಕ್ಕಾಗಿ

ಸಪ್ರಾಹ ಗಚ್ಛ ತ್ವತ್ತ್ತೋ್ಽವಾ ಪ್ರವರ್ತಿಷ್ಯೇ ಜಯಂ ಪ್ರತಿ ।
ಸಂಯಂತುಂ ವಾಯಥಾವಾಪಿ ತತೋಽ ಯುಕ್ತಂ ಸಮಾಚರೆ ॥ ೬೦ ॥

ಇತ್ಯೇವಮುಕ್ತ್ವಾ ವಚನಂ ದುಗ್ಧಾಬ್ಧಿಮಗಮನ್ಮುರಃ ।
ಯತ್ರಾಸ್ತೆ ಶೇಷಪರ್ಯಂಕೆ ಚತುರ್ಮೂರ್ತಿರ್ಜನಾರ್ದನಃ ॥ ೬೧ ॥

ನಾರದ ಉವಾಚ

ಚತುರ್ಮೂರ್ತಿಃ ಕಥಂ ವಿಷ್ಣುರೇಕಏವ ನಿಗದ್ಯತೆ ।
ಸರ್ವಗತ್ವಾತ್ಕಥಮಪಿ ಅವ್ಯಕ್ತತ್ವಾಚ್ಚ ತದ್ವದ ॥ ೬೨ ॥

ಪುಲಸ್ತ್ಯ ಉವಾಚ

ಅವ್ಯಕ್ತಃ ಸರ್ವಗೋಽಪೀಹ ಏಕಏವ ಮಹಾಮುನೆ ।
ಚತುರ್ಮೂರ್ತಿಃ ಜಗನ್ನಾಥೋ ಯಥಾ ಬ್ರಹ್ಮಂಸ್ತಥಾ ಶೃಣು ॥ ೬೩ ॥

ಹೊರಡು. ನಿನ್ನಿಂದಲೇ ನಾನು ಸಂಯಮನನ್ನು ನಡೆಸುತ್ತಿರುತ್ತೇನೆ. ಹೇಗಾದರೂ ಆಗಲಿ ಯುಕ್ತವಾದ ಕೆಲವನ್ನು ನಡೆಸುತ್ತಿರುತ್ತೇನೆ ಎಂದನು.

೬೧-೬೪. ಹೀಗೆ ಹೇಳಿ ಆ ಮುರನು ಚತುರ್ಮೂರ್ತಿಧರನಾಗಿ ಶೇಷಪರ್ಯಂಕ ಶಾಯಿಯಾಗಿರುವ ಜನಾರ್ದನನ ಆವಾಸಸ್ಥಾನವಾದ ಕ್ಷೀರಸಮುದ್ರಕ್ಕೆ ಹೊರಟನು. ನಾರದರು ಪ್ರಶ್ನೆ ಮಾಡುತ್ತಾರೆ. ಸರ್ವವ್ಯಾಪಿಯಾಗಿರುವದ್ದರಿಂದಲೂ ಅವ್ಯಕ್ತಮೂರ್ತಿಯಾಗಿರುವದ್ದರಿಂದಲೂ ವಿಷ್ಣುವು ಒಬ್ಬನೇ ಎಂದು ಹೇಳಲ್ಪಡುತ್ತಿರುವನು. ಅವನು ಚತುರ್ಮೂರ್ತಿಯಾಗಿ ಹೇಗೆ ಆದಾನು. (ವ್ಯಾಪಕವಾಗಿಯೂ ಅವ್ಯಕ್ತವಾಗಿಯೂ ಇರುವ ವಸ್ತುವಿನಲ್ಲಿ ಭೇದಕ್ಕೆ ಅವಕಾಶವಿಲ್ಲವೆಂದು ತಾತ್ಪರ್ಯ.) ಈ ಪ್ರಶ್ನೆಗೆ ಪುಲಸ್ತ್ಯರು ಅವ್ಯಕ್ತನಾಗಿಯೂ ಸರ್ವವ್ಯಾಪಿಯಾಗಿಯೂ ಇರುವ ಜಗನ್ನಾಥನು ಒಬ್ಬನೇ ಆಗಿದ್ದರೂ ಹೇಗೆ ಚತುರ್ಮೂರ್ತಿಯಾಗುವನು ಎಂಬುದನ್ನು ಹೇಳುತ್ತೇನೆ ಕೇಳು ಊಹಿಸುವುದಕ್ಕೂ ಇತ್ಥಂ ಎಂದು ನಿರ್ದೇಶಿಸುವುದಕ್ಕೂ ಅಶಕ್ಯವಾಗಿಯೂ (ತರ್ಕಾತ್ಮಕವಾದ ಬುದ್ಧಿಗೂ ಇಂದ್ರಿಯ ಜನ್ಯವಾದ ಜ್ಞಾನದಿಂದ ನಿರ್ದೇಶಮಾಡ

ಅಪ್ರತರ್ಕ್ಯಮನಿರ್ದೇಶ್ಯಂ ಶುಕ್ಲಂ ಶಾಂತಂ ಪರಂ ಪದಂ ।
ವಾಸುದೇವಾಖ್ಯಮವ್ಯಕ್ತಂ ಸ್ಮೃತಂ ದ್ವಾದಶಪತ್ರಕಂ ॥ ೬೪ ॥

ನಾರದ ಉವಾಚ

ಕಥಂ ಶುಕ್ಲಂ ಕಥಂ ಶಾಂತಂ ಅಪ್ರತರ್ಕ್ಯಮನಿಂದಿತಂ ।
ಕಾನ್ಯಸ್ಯ ದ್ವಾದಶೋಕ್ತಾನಿ ಪತ್ರಕಾಣಿ ಮಹಾಮುನೆ ॥ ೬೫ ॥

ಪುಲಸ್ತ್ಯ ಉವಾಚ

ಶೃಣುಷ್ವ ವಚನಂ ಗುಹ್ಯಂ ಪರಮೇಷ್ಠಿಪ್ರಭಾಷಿತಂ ।
ಶ್ರುತಂ ಸನತ್ಕುಮಾರೇಣ ತೇನಾಖ್ಯಾತಂ ಚ ಯನ್ಮಮ ॥ ೬೬ ॥

ನಾರದ ಉವಾಚ

ಕೋಽಯಂ ಸನತ್ಕುಮಾರೇತಿ ಯಥೋಕ್ತಂ ಬ್ರಹ್ಮಣಃ ಸ್ವಯಂ ।
ತವಾಪಿ ತೇನ ಗದಿತಂ ವದ ಮಾಮನುಪೂರ್ವಶಃ ॥ ೬೭ ॥

ಲಿಕ್ಕೂ ನಿಲುಕಿಸುವುದಿಲ್ಲವೆಂದು ತಾತ್ಪರ್ಯ) ಶುದ್ಧವಾಗಿಯೂ ಶಾಂತವಾಗಿಯೂ ಉತ್ಕೃಷ್ಟಪ್ರಾಪ್ತವಸ್ತುವಾಗಿಯೂ ಇರುವ ವಾಸುದೇವನೆಂಬ ಅವ್ಯಕ್ತ ವಸ್ತುವು ಹನ್ನೆರಡು ಕಲಿಗಳುಳ್ಳದ್ದು ಎಂದು ಶಾಸ್ತ್ರದಿಂದ ತಿಳಿದು ಬರುತ್ತದೆ.

೬೫-೬೭. ಪುನಃ ನಾರದರು ಆ ಅವ್ಯಕ್ತವಸ್ತುವು ಶುಕ್ಲವಾಗಿಯೂ ಶಾನ್ತ ವಾಗಿಯೂ ಇರುವದು ಹೇಗೆ, ಅಪ್ರತರ್ಕ್ಯ ಅನಿಂದಿತ ಎಂದರೇನು. ಅದಕ್ಕೆ ತಾವು ಹೇಳಿದ ಹನ್ನೆರಡು ಪತ್ರಗಳಾವುವು ಎಂದು ಪ್ರಶ್ನೆಮಾಡಲಾಗಿ ಪುಲಸ್ತ್ಯರು, ಹೇಳುತ್ತೇನೆ ಕೇಳು. ಈ ರಹಸ್ಯ ವಿಷಯವು ಚತುರ್ಮುಖನಿಂದ ಸನತ್ಕುಮಾರನಿಗೆ ಹೇಳಲ್ಪಟ್ಟಿತು. ಆ ಸನತ್ಕುಮಾರನೂ ಸಹ ತಾನು ಬ್ರಹ್ಮನಿಂದ ಕೇಳಿದುದನ್ನು ನನಗೆ ಹೇಳಿದ್ದಾನೆ, ಎಂದರು. ಪುನಃ ನಾರದರು ಸನತ್ಕುಮಾರನೆಂಬುವನಾರು, ಬ್ರಹ್ಮನಿಂದ ಅವನಿಗೆ ಏನು ಹೇಳಲ್ಪಟ್ಟಿತು. ತಮಗೂ ಸಹ ಅವನು ಏನು ಹೇಳಿರು ವನು, ಇದನ್ನು ಕ್ರಮವಾಗಿ ಹೇಳಬೇಕು ಎಂದು ಪ್ರಶ್ನೆಮಾಡಿದನು.

ಪುಲಸ್ತ್ಯ ಉವಾಚ

ಧರ್ಮಸ್ಯ ಭಾರ್ಯಾ ಹಿಂಸಾಖ್ಯಾ ತಸ್ಯಾಂ ಪುತ್ರಚತುಷ್ಟಯಂ ।
ಸಂಜಾತಂ ಮುನಿಶಾರ್ದೂಲ ಯೋಗಶಾಸ್ತ್ರವಿಚಾರಕಂ ॥ ೬೮ ॥

ಜ್ಯೇಷ್ಠಃ ಸನತ್ಕುಮಾರೋಽಭೂದ್ದ್ವಿತೀಯಶ್ಚ ಸನಾತನಃ ।
ತೃತೀಯಃ ಸನಕೋ ನಾಮ ಚತುರ್ಥಶ್ಚ ಸನಂದನಃ ॥ ೬೯ ॥

ಸಾಂಖ್ಯವೇತ್ತಾರಮಪರಂ ಕಪಿಲಂ ವೋಢುಮಾಸುರಿಂ ।
ದೃಷ್ಟ್ವಾ ಪಂಚಶಿಖಂ ಶ್ರೇಷ್ಠಂ ಯೋಗಯುಕ್ತಂ ತಪೋನಿಧಿಂ ॥ ೭೦ ॥

ತತಸ್ತೇಭ್ಯಾಸನಂ ದತ್ವಾ ಜ್ಯಾಯಾನಪಿ ಕನೀಯಸೇ ।
ಮೌನಂ ಗುಹ್ಯಂ ಮಹಾಯೋಗಂ ಕಪಿಲಾದೀನುವಾಚ ಸಃ ॥ ೭೧ ॥

ಸನತ್ಕುಮಾರಶ್ಚಾಭ್ಯೇತ್ಯ ಬ್ರಹ್ಮಾಣಂ ಕಮಲೋದ್ಭವಂ ।
ಅಪೃಚ್ಛದ್ಯೋಗವಿಜ್ಞಾನಂ ತಮುವಾಚ ಪ್ರಜಾಪತಿಃ ॥ ೭೨ ॥

೬೮-೭೧. ಯಮನಿಗೆ ಹಿಂಸಾ ಎಂಬ ಭಾರ್ಯೆಯಿದ್ದಳು. ಅವಳಿಗೆ ಯೋಗ ಶಾಸ್ತ್ರವಿಚಾರಕರಾದ ನಾಲ್ಕುಜನ ಮಕ್ಕಳು ಹುಟ್ಟಿದರು. ಅವರಲ್ಲಿ ಜ್ಯೇಷ್ಠನೇ ಸನತ್ಕುಮಾರ, ಎರಡನೆಯವನು ಸನಾತನ, ಮೂರನೇಯವನು ಸನಕ, ನಾಲ್ಕನೇ ಯವನು ಸನಂದನ. ಮತ್ತು ಆಸುರಿ ಎಂಬ ಶಿಷ್ಯನನ್ನು ವಹಿಸಲು ಸಾಂಖ್ಯ ಶಾಸ್ತ್ರಜ್ಞನಾದ ಕಪಿಲನನ್ನೂ ಮತ್ತು ತಪಸ್ವಿಯಾಗಿಯೂ ಯೋಗಜ್ಞನಾಗಿಯೂ ಇರುವ ಪಂಚಶಿಖಾಚಾರ್ಯನನ್ನೂ ನೋಡಿ ತಾನು ದೊಡ್ಡವನಾದರೂ ಚಿಕ್ಕವರಾದ ಅವರನ್ನು ಜ್ಞಾನಿಗಳೆಂದು ತಿಳಿದು ಬ್ರಹ್ಮನು ಆಸನಾದಿಗಳಿಂದ ಸತ್ಕರಿಸಿ ಬಹಳ ರಹಸ್ಯವಾದ ಈ ಮಹಾಯೋಗವನ್ನು ಕಪಿಲಾದಿಗಳಿಗೆ ಉಪದೇಶಿಸಿದನು.

೭೨-೭೫. ಆಗ ಸನತ್ಕುಮಾರನು ಬ್ರಹ್ಮನಲ್ಲಿ ಬಂದು ಯೋಗಶಾಸ್ತ್ರದ ರಹಸ್ಯ ವನ್ನು ಉಪದೇಶಮಾಡಬೇಕೆಂದು ಪ್ರಾರ್ಥಿಸಲು ಚತುರ್ಮುಖನು ಹೇಳುತ್ತೇನೆ ಆದರೆ ನಾನು ನಿನ್ನ ವಿಷಯದಲ್ಲಿ ಪುತ್ರನೆಂಬ ವ್ಯವಹಾರವನ್ನು ಹೊಂದುವೆನು.

ಬ್ರಹ್ಮೋವಾಚ

ಕಥಯಿಷ್ಯಾಮಿ ತೇ ಸಾಧ್ಯಂ ಯದಿಪುತ್ರ್ರೇತಿ ಮೆ ವಚಃ ।
ಶೃಣೋಷಿ ಕುರುಷೆ ತಚ್ಚ ಜ್ಞಾನಂ ಸಾಂಖ್ಯಯುತೋ ಭವಾನ್ ॥ ೭೩ ॥

ಸನತ್ಕುಮಾರ ಉವಾಚ

ಪುತ್ರಏವಾಸ್ಮಿ ದೇವೇಶ ಯತಃ ಶಿಷ್ಯೋऽಸ್ಮ್ಯಹಂ ವಿಭೋ ।
ನ ವಿಶೇಷೋऽಸ್ತಿ ಪುತ್ರಸ್ಯ ಶಿಷ್ಯಸ್ಯ ಚ ಪಿತಾಮಹ ॥ ೭೪ ॥

ಬ್ರಹ್ಮೋವಾಚ

ವಿಶೇಷಃ ಶಿಷ್ಯಪುತ್ರಾಭ್ಯಾಂ ವಿದ್ಯತೆ ಧರ್ಮನಂದನ ।
ಧರ್ಮಕರ್ಮಸಮಾಯೋಗೆ ತಥಾಪಿ ಗದತಃ ಶೃಣು ॥ ೭೫ ॥

ಪುನ್ನಾಮ್ನೋ ನರಕಾತ್ತ್ರಾತಿ ಪುತ್ರಸ್ತೇನೇಹ ಗೀಯತೆ ।
ಶೇಷಃ ಪಾಪಹರಃ ಶಿಷ್ಯ ಇತೀಯಂ ವೈದಿಕೀ ಶ್ರುತಿಃ ॥ ೭೬ ॥

ಸನತ್ಕುಮಾರ ಉವಾಚ

ಕೋऽಯಂ ಪುನ್ನಾಮಕೋ ದೇವ ಯಸ್ಮಾತ್ತ್ರಾತಿ ಚ ಪುತ್ರಕಃ ।
ತಸ್ಮಾಚ್ಛೇಷಂ ತಥಾ ಪಾಪಂ ಹರೇಚ್ಛಿಷ್ಯಶ್ಚ ತದ್ವದ ॥ ೭೭ ॥

ನೀನು ಅದನ್ನು ಕೇಳಿ ಅಂಗೀಕರಿಸಿ ಅದರಂತೆ ನಡೆದುಕೊಂಡದ್ದೇ ಆದರೆ ಆಗ ಆ ಜ್ಞಾನವು ನಿನಗೆ ಸಾಧ್ಯವಾದೀತು. ನೀನೂ ಜ್ಞಾನಿಯಾಗಿ ಆಗುತ್ತೀಯೆ, ಎಂದನು. ಅನಂತರ ಸನತ್ಕುಮಾರನು ಎಲೈ ದೇವಾಧಿಪನೇ ನಾನು ನಿನಗೆ ಪುತ್ರನೇ ಆಗಿರುವೆನು. ಇದಕ್ಕೆ ಶಿಷ್ಯನಾಗಿರುವುದೇ ನಿದರ್ಶನವಾಗಿದೆ. ಪುತ್ರನಿಗೂ ಶಿಷ್ಯನಿಗೂ ವಿಶೇಷವಿಲ್ಲವಷ್ಟೆ. ಎನ್ನಲು ಬ್ರಹ್ಮನು ಎಲೈ ಧರ್ಮಪುತ್ರನೇ, ಶಿಷ್ಯನಿಗೂ ಪುತ್ರನಿಗೂ ಅವರವರ ಧರ್ಮಕರ್ಮಾನುಷ್ಠಾನಮೂಲಕವಾದ ವಿಶೇಷವಿದ್ದೇ ಇದೆ. ಇರಲಿ ಹೇಳುತ್ತೇನೆ ಕೇಳು ಎಂದನು.

೭೬-೭೮. ಪುನ್ನಾಮಕವಾದ ನರಕದ ದೆಶೆಯಿಂದ ರಕ್ಷಿಸತಕ್ಕವನು ಪುತ್ರನೆಂದು ಹೇಳಲ್ಪಟ್ಟಿದೆ. ಶಿಷ್ಯನಾದರೋ ಪಾಪನಾಶಕನಾಗುತ್ತಾನೆಂದು ವೇದಾನುಸಾರಿಗಳ ನಿರ್ಣಯ. ಇದನ್ನು ಕೇಳಿದ ಸನತ್ಕುಮಾರನು ಪುನ್ನಾಮಕವಾದ ನರಕವಾವುದು. ಅದರಿಂದ ಪುತ್ರನಾದವನು ರಕ್ಷಿಸುತ್ತಾನೆಂದು ಹೇಳಿರುವಿರಿ. ಅವನಿಂದ ಬೇರೆಯಾದ

ಬ್ರಹ್ಮೋವಾಚ

ಏತತ್ಪುರಾಣಂ ಪರಮಂ ಮಹರ್ಷೆ
ಯೋಗಾಜ್ಞಯುಕ್ತಂ ಚ ತಥಾ ಸದೈವ ।
ತಥೈವಚೋಗ್ರಂ ಭಯಹಾರಿ ಪುಣ್ಯಂ
ಪದಾಮಿ ತೇ ಶಾಮ್ಯತಿ ಯೇನ ಪಾಪಂ ॥ ೭೮ ॥

ಇತಿ ಶ್ರೀ ವಾಮನಪುರಾಣೇ ಭೈರವಪ್ರಾದುರ್ಭಾವೇ
ಷಷ್ಟಿತಮೋಽಧ್ಯಾಯಃ

ಶಿಷ್ಯನೂ ಹೇಗೆ ಪಾಪಹರನಾಗುತ್ತಾನೆ ಇದನ್ನು ಅಪ್ಪಣೆಕೊಡಿಸಬೇಕೆಂದನು. ಆಗ ಬ್ರಹ್ಮನು, ಮಹರ್ಷಿಯೇ ಯೋಗಾಜ್ಞಗಳಿಂದ ಕೂಡಿದ ಈ ವಿಷಯವು ಪುರಾತನೋಪದೇಶ ಪರಂಪರೆಯಿಂದ ಬಂದದ್ದಾಗಿಯೂ, ಜ್ಞೇಯವಾಗಿಯೂ, ಭಯಂಕರವಾಗಿಯೂ ಭಯಹಾರಿಯಾಗಿಯೂ ಪುಣ್ಯಪ್ರದವಾಗಿಯೂ ಇದೆ. ಇದರ ಶ್ರವಣವೂ ಪಾಪನಾಶಕವಾದದ್ದು ಇದನ್ನು ನಿನಗೆ ಹೇಳುತ್ತೇನೆ ಎಂದು, ಉಪಕ್ರಮಿಸಿದನು.

ಇಲ್ಲಿಗೆ ಶ್ರೀ ವಾಮನಪುರಾಣದ ಭೈರವಪ್ರಾದುರ್ಭಾವದಲ್ಲಿ
ಅರವತ್ತನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಗೌರಿಯೇ ನಂದಿಯ ಸಹಾಯದಿಂದ ಅಂಧಕನೊಡನೆ ಯುದ್ಧಮಾಡತಕ್ಕ ಪ್ರಸಂಗವೇನಿತ್ತು. ಆಗ ಶಂಕರನು ಎಲ್ಲಿ ಹೋಗಿದ್ದನೆಂಬ ನಾರದರ ಉಪಪ್ರಶ್ನೆಗೆ ಉತ್ತರವಾಗಿ ಪುಲಸ್ತ್ಯರು ಶಂಕರನು ಪಾರ್ವತಿಯೊಡನೆ ಮಹಾ ಮೋಹದಲ್ಲಿ ಆಸಕ್ತನಾದನಂತರ ಬಹಳ ಹೀನಬಲನಾದನು. ಆಗ ತನ್ನ ಅಸಾಮರ್ಥ್ಯ ವನ್ನು ತಿಳಿದ ಆ ಶಂಕರನು ಪಾರ್ವತಿಯನ್ನು ಸಮಾಧಾನಗೊಳಿಸಿ ಅವಳ ರಕ್ಷಣೆಗಾಗಿ ನಂದಿಯನ್ನು ನಿಯಮಿಸಿ ತಾನು ತಪಸ್ಸಿಗಾಗಿ ಗಿರಿ, ನದಿ, ತೀರ್ಥಾದಿಗಳನ್ನು ಉದ್ದೇಶಿಸಿ ನಡೆದನು. ಮಹಾವ್ರತವನ್ನು ಕೈಕೊಂಡು ಕ್ರಮವಾಗಿ ಫಲ, ಮೂಲ, ಜಲ, ವಾಯು ಇವುಗಳ ಅಶನದಿಂದ ತಪಸ್ಸನ್ನು ಮಾಡುತ್ತಾ ಹಿಮವತ್ಪರ್ವತದ ಪಾರ್ಶ್ವದಲ್ಲಿ ಮೀಟಾ ಎಂಬ ಯೋಗಮುದ್ರೆಯೊಡನೆ ಕುಳಿತನು. ಆಗ ಇವನ ಕಪಾಲವು ಮೀಟಿಯನ್ನೂ ಭೇದಿಸಿಕೊಂಡು ಜಟಾಮಾರ್ಗದಿಂದ ತೇಜೋಮಯವಾಗಿ ಭೂಮಿ ಯಲ್ಲಿ ಬಿದ್ದು ಹಿಮವತ್ಪರ್ವತವನ್ನೂ ಭೇದಿಸಿ ನೆಲಸಮಮಾಡಿತು. ಅದು ಕೇದಾರ ವೆಂದು ಪ್ರಸಿದ್ಧವಾದ ಪುಣ್ಯಕ್ಷೇತ್ರವಾಯಿತು. ಆಗ ಆ ಕೇದಾರಕ್ಕೆ ಶಂಕರನು ಬಹು ವಿಧವಾದ ವರವನ್ನು ಕೊಟ್ಟು ತಾನೂ ಸ್ನಾನಕ್ಕಾಗಿ ಕಾಳಿಂದೀನದಿಗೆ ಹೋಗಿ ನೀರಿನಲ್ಲಿ ಮುಳುಗಿ ದ್ರುಪದಾ ಎಂಬ ಗಾಯತ್ರಿಯನ್ನು ಜಪಿಸುತ್ತಾ ಅಲ್ಲಿಯೇ ನಿಂತನು. ವಂದೂವರೆ ವರ್ಷದ ವರಿಗೂ ಮೇಲಕ್ಕೆ ಏಳಲೇ ಇಲ್ಲ. ಈ ಸಮಯದಲ್ಲಿ ಬ್ರಹ್ಮನೂ ಲೋಕಗಳೂ ಸಮುದ್ರಗಳೂ ಚಲಿಸಲಾರಂಭಿಸಿದವು. ಇದನ್ನು ತಿಳಿಯಲು ಕ್ಷುಬ್ಧರಾದ ದೇವತೆಗಳು ಬ್ರಹ್ಮನಲ್ಲಿ ಹೋದರು. ಬ್ರಹ್ಮನೂ ಸಹ ನನಗೆ ಈ ವಿಚಾರವು ತಿಳಿದಿಲ್ಲ ನಡೆಯಿರಿ. ಎಲ್ಲರೂ ಮುರಾರಿಯಲ್ಲಿ ಹೋಗಿ ತಿಳಿಯೋಣವೆಂಬ ಬ್ರಹ್ಮನ ಮಾತಿನಂತೆ ಇಂದ್ರಾದಿಗಳೆಲ್ಲರೂ ಅಲ್ಲಿಗೆ ಹೊರಟರೆಂದು ಕಥಾಭಾಗವನ್ನು ಮುಗಿಸಲಾಯಿತು. ಅನಂತರ ಮುರಾರಿ ಎಂಬುವನಾರು ಎಂಬ ನಾರದರ ಉಪಪ್ರಶ್ನೆಗೆ ಉತ್ತರವಾಗಿ ಪುಲಸ್ತ್ಯರ. ಅಕರ್ಮವಶ್ಯನಾಗಿಯೂ ಗುಣಾತೀತನಾಗಿಯೂ ಇರುವ ವ್ಯಾಪಕವಸ್ತುವೇ ಮುರಾರಿ ಎಂದು ಹೇಳಲಾಗಿ ಪುನಃ ನಾರದರು ಮುರನ ವೃತ್ತಾಂತವನ್ನೂ ವಿಷ್ಣುವಿ ನಿಂದ ಅವನ ನಾಶವನ್ನೂ ಪ್ರಶ್ನೆಮಾಡಲು, ಅದಕ್ಕೆ ಉತ್ತರವಾಗಿ ಪುಲಸ್ತ್ಯರು ಕಶ್ಯಪನಿಗೆ ಔರಸಪುತ್ರನಾದ ಮುರನು ದೇವತೆಗಳಿಂದ ದೈತ್ಯರ ನಾಶವನ್ನು ನೋಡಿ ಭಯಪಟ್ಟು ಬ್ರಹ್ಮನನ್ನು ಕುರಿತು ತಪಸ್ಸುಮಾಡಿದನೆಂತಲೂ ಅದಕ್ಕೆ ಮೆಚ್ಚಿದ ಬ್ರಹ್ಮನು ಅವನ ಕೋರಿಕೆಯಂತೆ ಯಾರನ್ನು ಕೈಯ್ಯಿನಿಂದ ಮುಟ್ಟುವನೋ ಅವನು

ಸಾಯಬೇಕೆಂದು ವರವನ್ನು ಕೊಟ್ಟನೆಂದೂ ಈ ವರದಿಂದ ಕೊಬ್ಬಿದ ಮುರನು ಎಲ್ಲರನ್ನೂ ಯುದ್ಧಕ್ಕೆ ಕರೆಯುತ್ತಾ ಇಂದ್ರನನ್ನೂ ಕರೆದು ಅವನು ಬರದೇ ಹೋದುದರಿಂದ ಸ್ವರ್ಗವನ್ನು ತಾನೇ ಆಕ್ರಮಿಸಿ ಭೋಗಿಯಾದನೆಂದೂ ಹೇಳಲಾಯಿತು. ಅನಂತರ ಇಂದ್ರನು ತನ್ನ ಪರಿವಾರದೊಡನೆ ಭೂಮಿಗೆ ಬಂದು ಕಾಲಿಂದೀನದಿಯ ಬಲದಡದಲ್ಲಿ ಸ್ಥಾನಮಾಡಿಕೊಂಡನೆಂದೂ ಹೇಳಲಾಯಿತು. ಒಂದಾನೊಂದು ದಿವಸ ಸ್ವರ್ಗವಾಸಿಯಾದ ಮುರನು ಆನೆಯ ಮೇಲೆ ಕುಳಿತು ಭೂಮಿಗೆ ಬಂದು ಸರಯೂ ತೀರದಲ್ಲಿ ಸಂಚರಿಸುತ್ತಾ ಅಲ್ಲಿ ಬಂದಿದ್ದ ಯಜ್ಞದೀಕ್ಷಿತನಾದ ರಘುವನ್ನು ಯುದ್ಧಕ್ಕೆ ಕರೆದನು. ಸಮೀಪದಲ್ಲಿದ್ದ ವಸಿಷ್ಠರು ಉಪಾಯದಿಂದ ದೈತ್ಯರಾಜನೇ ಯಾವಾಗಲೂ ಪರಾಜಿತರೇ ಆಗಿರುವ ಮನುಷ್ಯರ ಜಯದಿಂದ ನಿನಗೆ ಫಲವೇನು, ಸಂಯಮನದಲ್ಲಿಯೂ ವಧದಲ್ಲಿಯೂ ಅಧಿಕಾರ ಹೊಂದಿರುವ ಯಮನನ್ನು ಜಯಿಸು. ಆಗ ಲೋಕವೆಲ್ಲವೂ ನಿನಗೆ ಅಧೀನವಾದೀತು ಎಂದು ಅವನನ್ನು ಪ್ರೋತ್ಸಾಹಿಸಲು ಆ ಮೂರ್ಖನು ಯಮನನ್ನೂ ಜಯಿಸಲು ಹೊರಟನು. ಇವನ ಆಗಮನವನ್ನು ತಿಳಿದ ಯಮನು ವಾಸುದೇವನ ಅಪ್ಪಣೆಯಿಂದ ತನಗೂ ನಿಯಾಮಕನಾಗಿರುವ ವಿಷ್ಣುವನ್ನು ಜಯಿಸಲು ಪ್ರೋತ್ಸಾಹಿಸಿ ಅವನ ಸ್ಥಾನವನ್ನೂ ಹೇಳಿಕಳುಹಿಸಿದನು. ಅನಂತರ ಪ್ರಸಕ್ತಾನು ಪ್ರಸಕ್ತವಾಗಿ ವಿಷ್ಣುವಿನ ಚತುರ್ಮೂರ್ತಿತ್ವ ವಿಷಯದಲ್ಲೂ ಹನ್ನೆರಡು ಪತ್ರಗಳ ವಿಷಯದಲ್ಲೂ ಉಂಟಾದ ನಾರದರ ಪ್ರಶ್ನೆಗೆ ಉತ್ತರವಾಗಿ ಪುಲಸ್ತ್ಯರು ತನಗೆ ಸಾಂಖ್ಯಯೋಗವನ್ನು ಉಪದೇಶಿಸಿದ ಸನತ್ಕುಮಾರನಿಗೂ ಬ್ರಹ್ಮನಿಗೂ ಉಂಟಾದ ಪ್ರಶ್ನೋತ್ತರಗಳನ್ನು ನಿದರ್ಶಿಸುತ್ತಾರೆ.

॥ ಶ್ರೀಃ ॥

ಶ್ರೀ ವಾಮನಪುರಾಣಂ

ಏಕಷಷ್ಟಿತಮೋಽಧ್ಯಾಯಃ

ಬ್ರಹ್ಮೋವಾಚ

ಪರದಾರಾಭಿಗಮನಂ ಪಾಪಿನಾಮುಪಸೇವನಂ ।
ಪಾರುಷ್ಯಂ ಸರ್ವಭೂತಾನಾಂ ಪ್ರಥಮಂ ನರಕಂ ಮತಂ ॥ ೧ ॥

ಫಲಸ್ತೇಯಂ ಮಹಾಪಾಪಂ ಫಲಹೀನಂ ತಥಾಟನಂ ।
ಛೇದನಂ ವೃಕ್ಷಜಾತೀನಾಂ ದ್ವಿತೀಯಂ ನರಕಂ ಸ್ಮೃತಂ ॥ ೨ ॥

ವರ್ಜ್ಯಾದಾನಂ ತಥಾ ದುಷ್ಟಮವಧ್ಯವಧಬಂಧನಂ ।
ವಿವಾಹೋಽಬಾಂಧವೈಸ್ಸಾರ್ಧಂ ತೃತೀಯಂ ನರಕಂ ಮತಂ ॥ ೩ ॥

ಭಯದಂ ಸರ್ವಸತ್ತ್ವಾನಾಂ ಭವಭೂತಿವಿನಾಶನಂ ।
ಭ್ರಂಶನಂ ನಿಜಧರ್ಮಾಣಾಂ ಚತುರ್ಥಂ ನರಕಂ ಸ್ಮೃತಂ ॥ ೪ ॥

ಅರವತ್ತೊಂದನೆಯ ಅಧ್ಯಾಯವು

೧-೫. ಪುಣ್ಯನಾಮಕವಾದ ನರಕವನ್ನು ಹೇಳುವ ಉದ್ದೇಶದಿಂದ ಬ್ರಹ್ಮನು ಇತರ ನರಕಗಳನ್ನೂ ಉಪೋದ್ಘಾತ ರೂಪವಾಗಿ ಹೇಳುತ್ತಾನೆ. ಪರಸ್ತ್ರೀಗಮನವೂ ಪಾಪಿಗಳ ಸಹವಾಸ ಅಥವಾ ಸೇವೆ, ಸರ್ವಪ್ರಾಣಿಗಳ ವಿಷಯದಲ್ಲೂ ಕ್ರೂರಿಯಾಗಿರುವಿಕೆ. ಇವು ಮೊದಲನೆಯ ನರಕ (ಈ ಸ್ಥಲದಲ್ಲೆಲ್ಲಾ ನರಕಕ್ಕೆ ಮುಖ್ಯಕಾರಣವಾದುದರಿಂದ ನರಕವೇ ಎಂದು ಉಪಚಾರದಿಂದ ನಿರ್ದೇಶಿಸಿರುತ್ತಾರೆ) ಫಲಗಳನ್ನು ಕದಿಯೋಣವೂ ಮಹಾಪಾಪವು. ನಿರರ್ಥಕವಾದ ಸಂಚಾರ, ಉತ್ತಮ ಜಾತಿಯ ಫಲಪುಷ್ಪವೃಕ್ಷಗಳನ್ನು ನಾಶಪಡಿಸುವಿಕೆ ಇವೆಲ್ಲವೂ ಎರಡನೆಯ ನರಕ. ಶಾಸ್ತ್ರದಲ್ಲಿ ನಿಷಿದ್ಧವಾದುದನ್ನು ಸ್ವೀಕರಿಸುವದು, ಅವಧ್ಯನನ್ನು ವಧಿಸುವದು, ಬಂಧಿಸುವುದು, (ಇದು ಪ್ರಭುತ್ವ ಹೊಂದಿರುವವರ ವಿಷಯ), ಬಾಂಧವರಲ್ಲದವರೊಡನೆ ವಿವಾಹಾದಿ ಸಂಬಂಧ ಇವು ಮೂರನೆಯ ನರಕ. ಸರ್ವ ಪ್ರಾಣಿಗಳನ್ನೂ ಭಯಪಡಿಸುವಿಕೆ,

ಮಾರಣಂ ಮಿತ್ರಕೌಟಿಲ್ಯಂ ಮಿಥ್ಯಾಭಿಶಂಸನಂ ಚಯತ್ ।
ಮಿಷ್ಟೈಕಾಶನಮಿತ್ಯುಕ್ತಂ ಪಂಚಮಂ ತು ನೃಯಾತನಂ ॥ ೫ ॥

ಯಾತ್ರಾಫಲಾದಿಹರಣಂ ಯಮನಂ ಯೋಗನಾಶನಂ ।
ಯಾನಯುಗ್ಮಸ್ಯ ಹರಣಂ ಷಷ್ಠಮುಕ್ತಂ ನೃಯಾತನಂ ॥ ೬ ॥

ರಾಜಭಾಗಹರಂ ಮೂಢಂ ರಾಜಜಾಯಾನಿಷೇವಣಂ ।
ರಾಜ್ಞಾಮಹಿತಕರ್ತೃತ್ವಂ ಸಪ್ತಮಂ ನರಕಂ ಸ್ಮೃತಂ ॥ ೭ ॥

ಲುಬ್ಧತ್ವಂ ಲೋಲುಪತ್ವಂ ಚ ಲಬ್ಧಧರ್ಮಾರ್ಥನಾಶನಂ ।
ಲಾಲಾಸಂಕೀರ್ಣಮೇವೋಕ್ತಂ ಅಷ್ಟಮಂ ನರಕಂ ಸ್ಮೃತಂ ॥ ೮ ॥

ವಿಪ್ರೋಕ್ತಂ ಬ್ರಹ್ಮಹರಣಂ ಬ್ರಾಹ್ಮಣಾನಾಂ ವಿನಿಂದನಂ ।
ವಿರೋಧಂ ಬಂಧುಭಿಶ್ಚೋಕ್ತಂ ನವಮಂ ನರಯಾತನಂ ॥ ೯ ॥

ಶಿಷ್ಟಾಚಾರವಿನಾಶಂ ಚ ಶಿಷ್ಟದ್ವೇಷಂ ಶಿಶೋರ್ವಧಂ ।
ಶಾಸ್ತ್ರಸ್ತೇಯಂ ಧರ್ಮಸ್ತೇಯಂ ದಶಮಂ ಪರಿಕೀರ್ತಿತಂ ॥ ೧೦ ॥

ಶಿವಾಲಯದ ಐಶ್ವರ್ಯವನ್ನು ನಾಶಪಡಿಸುವಿಕೆ, ಸ್ವಧರ್ಮದಿಂದ ಭ್ರಂಶ ಹೊಂದುವಿಕೆ ಇವು ನಾಲ್ಕನೆ ನರಕ, ಮತ್ತೊಬ್ಬನನ್ನು ಕೊಲ್ಲುವಿಕೆ, ಮಿತ್ರರಲ್ಲಿಯೂ ಕುಟಿಲತೆ ಅನೃತ ಭಾಷಣ, ಸ್ವಾದುವಾದ ಅನ್ನವನ್ನು ಒಬ್ಬನೇ ಭುಂಜಿಸುವಿಕೆ, ಮನುಷ್ಯನನ್ನು ಅಪಹರಿಸುವಿಕೆ ಇವು ಐದನೆಯ ನರಕ.

೬-೧೦. ಮತ್ತೊಬ್ಬನ ಕ್ಲೇಶಲಬ್ಧವಾದ ಯಾತ್ರಾಫಲವನ್ನು ಅನಾಯಾಸದಿಂದ ಅಪಹರಿಸುವ ಪ್ರಯತ್ನ, ಯೋಗಕ್ಕೆ ನಾಶಕವಾದ ವ್ಯರ್ಥವಾದ ಇಂದ್ರಿಯ ಜಯ ಯಾನದ್ವಯಾಪಹರಣ ಇವು ಆರನೆಯ ನರಕ. ರಾಜಭಾಗವನ್ನು ಅಪಹರಿಸೋಣ, ರಾಜಪತ್ನಿಯ ಉಪಭೋಗ, ರಾಜನಿಗೆ ಅಹಿತವಾದ ಮಾರ್ಗದಲ್ಲಿ ವರ್ತಿಸುವಿಕೆ ಇವು ಏಳನೆಯ ನರಕ. ಶಾಸ್ತ್ರಾನುವರ್ತನದಿಂದ ಹೊಂದಿರುವ ಧರ್ಮಾರ್ಥಗಳಿಗೂ ನಾಶಕವಾದ ಲೋಭ, (ಆಶೆ) ವಿಷಯಚಾಪಲ್ಯ, ಜೊಲ್ಲು ಮೊದಲಾದ ಅಶುದ್ಧವಸ್ತು ಸಾಂಕರ್ಯ ಇವು ಎಂಟನೆಯ ನರಕ. ಬ್ರಾಹ್ಮಣನಿಂದ ಹೊಂದಿದ ವೇದವನ್ನು ವಿಸ್ಮರಣದಿಂದ ಹೋಗಲಾಡಿಸಿಕೊಳ್ಳುವಿಕೆ. ಬ್ರಾಹ್ಮಣರ ನಿಂದೆ, ಬಂದುಗಳೊಡನೆ ವಿರೋಧ ಇವು ಒಂಭತ್ತನೆಯ ನರಕ. ಶಿಷ್ಟಾಚಾರವನ್ನು

ಷಡಂಗನಿಧನಂ ಘೋರಂ ಷಾಡ್ಗುಣ್ಯಪ್ರತಿಷೇಧನಂ ।
ಏಕಾದಶಂ ತಥೈವೋಕ್ತಂ ನರಕಂ ಸದ್ಭಿರುತ್ತಮಂ ॥ ೧೧ ॥

ಸತ್ಸು ನಿಂದಾ ಸದಾಚಾರಮನಾಚಾರಮಸತ್ಕ್ರಿಯಾ ।
ಸಂಸ್ಕಾರಪರಿಹೀನತ್ವಮಿದಂ ದ್ವಾದಶಮುಚ್ಯತೆ ॥ ೧೨ ॥

ಹಾನಿರ್ಧರ್ಮಾರ್ಥಕಾಮಾನಾಮಪವರ್ಗಸ್ಯ ಹಾರಣಂ ।
ಸಂವೇದಃ ಸಂವಿದಾಮೇತತ್ತ್ರಯೋದಶಮುಚ್ಯತೆ ॥ ೧೩ ॥

ಕ್ಷಪಣಂ ಧರ್ಮಹೀನಂ ಚ ಯದ್ವರ್ಜ್ಯಂ ಯಚ್ಚವಹ್ನಿದಂ ।
ಚತುರ್ದಶಂ ತಥೈವೋಕ್ತಂ ನರಕಂ ತದ್ವಿಗರ್ಹಿತಂ ॥ ೧೪ ॥

ನಾಶಪಡಿಸುವುದು, ಶಿಷ್ಯರನ್ನು ದ್ವೇಷಿಸುವುದು, ಶಿಶುವನ್ನು ಕೊಲ್ಲುವುದು, ಶಾಸ್ತ್ರವನ್ನು ಅಪಹರಿಸುವುದು, (ಉಪದೇಶಕನ ಅನುಮತಿ ಇಲ್ಲದೆ ವಂಚನೆಯಿಂದ ಶಾಸ್ತ್ರರಹಸ್ಯವನ್ನು ತಿಳಿದುಕೊಳ್ಳುವುದೆಂದು ತಾತ್ಪರ್ಯ) ಧರ್ಮವನ್ನು ಅಪಹರಿಸುವುದು, (ಮತ್ತೊಬ್ಬರ ಧರ್ಮಾನುಷ್ಠಾನವನ್ನು ನೋಡಿ ಅಸಹನೆಯಿಂದ ತಾನೂ ಆ ಧರ್ಮಪ್ರಾಪ್ತಿಗಾಗಿ ಪ್ರಯತ್ನ ಪಡುವಿಕೆ ಅಥವಾ ಧರ್ಮಾರ್ಥವಾದ ಪದಾರ್ಥಗಳನ್ನು ಸ್ವಾಧೀನಮಾಡಿಕೊಂಡು ಭೋಗಿಸುವಿಕೆ) ಇವು ಹತ್ತನೆಯ ನರಕ.

೧೧-೧೪. ಷಡಂಗವೇದಾಧ್ಯಾಯಿಯನ್ನು ನಾಶಪಡಿಸುವುದು, ರಾಜರನೀತಿ ಶಾಸ್ತ್ರಪ್ರಯೋಗಕ್ಕೆ ತೊಂದರೆಪಡಿಸುವುದು ಇದು ಹನ್ನೊಂದನೆಯ ನರಕವು. ಸತ್ಪುರುಷರ ವಿಷಯದಲ್ಲಿ ನಿಂದೆ, ಯಾವಾಗಲೂ ಚೌರ್ಯಮಾಡುವುದು, ಅನಾಚಾರ ಶೀಲತೆ, ಕೆಟ್ಟಕೆಲಸದಲ್ಲಿ ಪ್ರವೃತ್ತಿ, ಆಯಾಯ ವರ್ಣೋಚಿತವಾದ ಸಂಸ್ಕಾರವನ್ನು ಬಿಡುವಿಕೆ ಇವು ಹನ್ನೆರಡನೆಯ ನರಕ. ಶಾಸ್ತ್ರೀಯವಾದ ಧರ್ಮಾರ್ಥಕಾಮಗಳ ಹಾನಿ, ಮೋಕ್ಷಾಧಿಕಾರಿಯ ಮೋಕ್ಷೋಪಾಯವನ್ನು ನಾಶಪಡಿಸುವುದು, ಪರಿಷತ್ತಿನಲ್ಲಿ ತೀರ್ಮಾನವಾದ ಶಿಕ್ಷೆಯನ್ನು ಪಾಪಿಗೆ ತಿಳಿಸುವಿಕೆ ಇದು ಹದಿಮೂರನೆಯ ನರಕ. ಮತ್ತೊಬ್ಬರ ವಸ್ತುವನ್ನೂ ನಾಶಪಡಿಸುವುದು, ಧರ್ಮರಹಿತವಾದ ಕಾರ್ಯಾಚರಣೆ, ಶಾಸ್ತ್ರನಿಷಿದ್ಧಸೇವನ ಮತ್ತೊಬ್ಬರ ವಸ್ತುವಿಗೆ ಅಗ್ನಿಪ್ರದಾನಮಾಡುವುದೇ ಮೊದಲಾದ ನಿಂದಿತಕಾರ್ಯ ಇವು ಹದಿನಾಲ್ಕನೆಯ ನರಕವು.

ಅಜ್ಞಾನಂ ಚಾಪ್ಯಸೂಯುತ್ವಮಶೌಚಮಶುಭಾವಹಂ ।
ಸ್ಮೃತಂ ತತ್ಪಂಚದಶಕಮಸತ್ಯವಚನಾನಿ ಚ ॥ ೧೫ ॥

ಆಲಸ್ಯಂ ವೈ ಷೋಡಶಕಂ ಸಕ್ರೋಧಂ ಚ ವಿಶೇಷತಃ ।
ಸರ್ವಸ್ಯ ಚಾತತಾಯಿತ್ವಮಾವಾಸೇಷ್ವಗ್ನಿದಾಪನಂ ॥ ೧೬ ॥

ಇಚ್ಛಾಚ ಪರದಾರೇಷು ನರಕಾಯ ನಿಗದ್ಯತೆ ।
ಈರ್ಷ್ಯಾಭಾವಶ್ಚ ಶಾಸ್ತ್ರೇಷು ಉದ್ಧತತ್ವಂ ವಿಗರ್ಹಿತಂ ॥ ೧೭ ॥

ಏತೈಸ್ತು ಪಾಪೈಃ ಪುರುಷಃ ಪುನ್ನಾಮಾದ್ಯೈರ್ನಸಂಶಯಃ ।
ಸಂಯುಕ್ತಃ ಪ್ರೀಣಯೇದ್ದೇವಂ ಸಂತತ್ಯಾ ಜಗತಃ ಪತಿಂ ॥ ೧೮ ॥

ಪ್ರೀತಃ ಸೃಷ್ಟ್ಯಾ ತು ಶುಭಯಾ ಸಮುಧ್ಯಾಸ್ತೇ ತಮಚ್ಯುತಂ ।
ಪುನ್ನಾಮನರಕಂ ಘೋರಂ ವಿನಾಶಯತಿ ಸರ್ವತಃ ॥ ೧೯ ॥

ಏತಸ್ಮಾತ್ಕಾರಣಾತ್ಸಾಧ್ಯ ತತಃ ಪುತ್ರೇತಿ ಗದ್ಯತೆ ।
ಅತಃ ಪರಂ ಪ್ರವಕ್ಷ್ಯಾಮಿ ಶೇಷಪಾಪಸ್ಯ ಲಕ್ಷಣಂ ॥ ೨೦ ॥

೧೫-೧೮. ಅಜ್ಞಾನಿಯಾಗಿರುವಿಕೆ, ಅಸೂಯೆ, ಅಶುಭಹೇತುವಾದ ಅಶುಚಿಸ್ವಭಾವ, ಅಸತ್ಯವಚನ ಇವು ಹದಿನೈದನೆಯ ನರಕವು. ಶಾಸ್ತ್ರೀಯ ವ್ಯಾಪಾರಕ್ಕೂ ಅವಕಾಶಕೊಡದ ಆಲಸ್ಯ, ಬಹಳ ಕೋಪಿಯಾಗಿರುವಿಕೆ, ಮನೆಗಳಿಗೆ ಅಗ್ನಿಯನ್ನು ಹಾಕುವುದರಿಂದುಂಟಾದ ಆತತಾಯಿತ್ವ, ಪರದಾರವಿಷಯದಲ್ಲಿ ಇಚ್ಛಾ, ಇವು ಯಾವಾಗಲೂ ನರಕಕ್ಕೆ ಕಾರಣವಾಗುತ್ತವೆ. ಶಾಸ್ತ್ರಗಳ ಅಭ್ಯಾಸಕಾಲದಲ್ಲಿ ಈರ್ಷ್ಯೆಯಿಂದಿರಬೇಕು ಅದಿಲ್ಲದಿರುವದೂ ಒಂದು ದೋಷ (ಅಂದರೆ ಯುಕ್ತಿಪೂರ್ವಕವಾದ ಶಾಸ್ತ್ರವಿಚಾರದಲ್ಲಿ ಹೇಳಿದುದನ್ನೇ ಒಪ್ಪಿಕೊಳ್ಳದೆ ಅಸೂಯೆಯಿಂದ ಪ್ರತಿಭಟಿಸಿ ಚರ್ಚೆಯಿಂದ ಯುಕ್ತಿಪೂರ್ವಕವಾಗಿ ಅರ್ಥನಿರ್ಣಯಮಾಡಿಕೊಳ್ಳಬೇಕೆಂದು ತಾತ್ಪರ್ಯ) ಉದ್ಧತ (ಅವಿನೀತ) ನಾಗಿರುವದೂ ದೋಷವೇ. ಇವೇ ಮೊದಲಾದ ಪುನ್ನಾಮಕಗಳಾದ ದೋಷಗಳಿಂದ ಕೂಡಿರುವ ಮನುಷ್ಯನು ಜಗತ್ಪತಿಯಾದ ನಾರಾಯಣನನ್ನು ಅವನ ಲೀಲೆಗೆ ಸಾಧಕವಾದ ಸಂತತಿಯನ್ನು ಹೊಂದುವುದರಮೂಲಕ ಆರಾಧಿಸಬೇಕು.

೧೯-೨೩. ಯಾವನು ತಾನೂ ಸಂತುಷ್ಟನಾಗಿ ಶುಭವಾದ ಸಂತಾನದೊಡನೆ ಆ ಅಚ್ಯುತನನ್ನು ಸೇವಿಸುತ್ತಾನೆಯೋ ಪುನ್ನಾಮಕಗಳಾದ ಈ ನರಕಗಳನ್ನೆಲ್ಲಾ ಎಲ್ಲ ಕಡೆಯಲ್ಲೂ ನಾಶಮಾಡುತ್ತಾನೆಯೋ ಈ ಕಾರಣದಿಂದಲೇ ಪುತ್ರನೆಂದು ಅವನಿಗೆ

ದೇಯಂ ದೇವರ್ಷಿಭೂತಾನಾಮನುಜಾನಾಂ ಪಿತೄನಥ ।
ಲಿಪ್ಸಾ ಪರಧನೇಷ್ವೇವ ಸರ್ವವರ್ಣೇಷು ಚೈಕತಾ ॥ ೨೧ ॥

ಓಂಕಾರಾದಪಿ ನಿರ್ವೃತ್ತಿಃ ಪಾಪಕಾರೀ ಸ್ಮೃತಶ್ಚ ಸಃ ।
ಗುರೋರ್ವಾದೋ ಮಹಾಪಾಪಮಗಮ್ಯಾಗಮನಂ ತಥಾ ॥ ೨೨ ॥

ಘೃತಾದಿವಿಕ್ರಯೋ ಘೋರಶ್ಚಂಡಾಲಾದಿಪರಿಗ್ರಹಃ ।
ಸ್ವದೋಷಚ್ಛಾದನಂ ಪಾಪಂ ಪರದೋಷಪ್ರಕಾಶನಂ ॥ ೨೩ ॥

ಮತ್ಸರಿತ್ವಂ ವಾಗ್ದುಷ್ಟತ್ವಂ ನಿಷ್ಠುರತ್ವಂ ತಥಾಪರೆ ।
ಟೋಕಿತ್ವಂ ತಾಲವಾದಿತ್ವಂ ನಾಮ್ನಾ ವಾಚಾಪ್ಯಧರ್ಮಜಂ ॥ ೨೪ ॥

ದಾರುಣತ್ವಮಧರ್ಮಿತ್ವಂ ನರಕಾವಹಮುಚ್ಯತೆ ।
ಏತೈಶ್ಚ ಪಾಪೈಸ್ಸಂಯುಕ್ತಃ ಪ್ರೀಣಯೇದ್ಯದಿಶಂಕರಂ ॥ ೨೫ ॥

ಜ್ಞಾನಾಧಿಕಮಶೇಷೇಣ ಶೇಷಂ ಪಾಪಂ ಜಯೇತ್ತತಃ ।
ಶಾರೀರಂ ವಾಚಿಕಂ ಯಚ್ಚ ಮಾನಸಂ ಸಾಧಿಕಂ ಚ ಯತ್ ॥ ೨೬ ॥

ಹೆಸರು ಬಂದಿದೆ. ಇನ್ನು ಮುಂದೆ ಶೇಷಪಾಪದ ಸ್ವರೂಪವನ್ನು ಹೇಳುತ್ತೇನೆ. ದೇವ, ಋಷಿ, ಭೂತ ಇವುಗಳ ವಿಷಯದಲ್ಲೂ, ಕನಿಷ್ಠಭ್ರಾತೃ ವಿಷಯದಲ್ಲೂ ಶಾಸ್ತ್ರದೃಷ್ಟಿಯಿಂದ ನಡೆಸಬೇಕಾದ ಕಾರ್ಯದಿಂದ ತಪ್ಪಕೂಡದು. ಪರಧನದಲ್ಲೇ ಆಶೆಯನ್ನಿಡುವದು, ಎಲ್ಲಾ ವರ್ಣದಲ್ಲೂ ಏಕತಾಬುದ್ಧಿ, ಓಂಕಾರ ಮಾತ್ರದಿಂದ ತೃಪ್ತನಾಗಿ ವೇದದಿಂದ ನಿವೃತ್ತಿಹೊಂದುವಿಕೆ ಇವನ್ನು ಹೊಂದಿರುವವನು ಪಾಪಕಾರಿ ಯೆಂದು ಹೇಳಲ್ಪಡುತ್ತಾನೆ. ಗುರುವಿನ ವಿಷಯದಲ್ಲಿ ದೋಷಾರೋಪಣವೂ, ಅಗಮ್ಯಳಾದ ಸ್ತ್ರೀಗಮನವೂ ಸಹ ಮಹಾಪಾಪವೆನಿಸುತ್ತವೆ. ತುಪ್ಪ ಮೊದಲಾದ ವಸ್ತುಗಳ ವಿಕ್ರಯದಿಂದ ಜೀವನ, ಚಂಡಾಲಾದಿಗಳ ಪರಿಗ್ರಹ ಮತ್ತು ತನ್ನ ದೋಷವನ್ನು ಮರೆಮಾಚುವುದು, ಪರದೋಷವನ್ನು ಪ್ರಕಾಶಗೊಳಿಸುವುದು ಇವೂ ಮಹಾಪಾಪಗಳು.

೨೪-೨೯. ಪರಸಮೃದ್ಧಿಯಲ್ಲಿ ಮಾತ್ಸರ್ಯ, ದುಷ್ಟವಾದ ವಾಣಿ, ಕಠಿನಪ್ರಕೃತಿ ಯಾಗಿರುವಿಕೆ, ವಿಲಾಸಿತ್ವ, ತಾಲವಾದದಿಂದ ಜೀವನ, ಅಧರ್ಮಹೇತುವಾದ ಹೆಸರು. ಮತ್ತು ವಾಕ್ಕು, ನಿರ್ದಯತ್ವ, ಅಧರ್ಮಾಚರಣಶೀಲತ್ವ ಇವೆಲ್ಲವೂ ನರಕಪಾತಕ್ಕೆ ಕಾರಣವಾಗುತ್ತವೆ. ಇಂತಹ ಪಾಪಗಳಿಂದ ಕೂಡಿದವನು ಶಂಭುವನ್ನು ಆರಾಧಿಸಿ

ಪಿತೃಮಾತೃಕೃತಂ ಯಚ್ಚ ಕೃತಂ ಯಚ್ಚಾಶ್ರಿತೈರ್ನರೈಃ ।
ಭ್ರಾತೃಭಿಃ ಬಾಂಧವೈಶ್ಚಾಪಿ ತಸ್ಮಿನ್ ಜನ್ಮನಿ ಧರ್ಮಜ ॥ ೨೭ ॥

ತತ್ಸರ್ವಂ ವಿಲಯಂ ಯಾತಿ ಸ ಧರ್ಮಃ ಸುತಶಿಷ್ಯಯೋಃ ।
ವಿಪರೀತೆ ಭವೇತ್ಸಾಧ್ಯ ವಿಪರೀತಃ ಪದಕ್ರಮಃ ॥ ೨೮ ॥

ತಸ್ಮಾಚ್ಚ ಪುತ್ರಶಿಷ್ಯೌ ಹಿ ವಿಧಾತವ್ಯೌ ವಿಪಶ್ಚಿತಾ ।
ಏತದರ್ಥಮಭಿಧ್ಯಾಯೇಚ್ಛಿಷ್ಯಾಚ್ಛ್ರೇಷ್ಠತರಸ್ಸುತಃ ।
ಶೇಷಾಂಸ್ತಾರಯತೆ ಶಿಷ್ಯಃ ಸರ್ವತೋಽಪಿ ಹಿ ಪುತ್ರಕಃ ॥ ೨೯ ॥

ಪುಲಸ್ತ್ಯ ಉವಾಚ

ಪಿತಾಮಹವಚಃ ಶ್ರುತ್ವಾ ಸಾಧ್ಯಃ ಪ್ರಾಹ ತಪೋಧನಃ ।
ತ್ರಿಸತ್ಯಂ ತವ ಪುತ್ರೋಽಹಂ ದೇವ ಯೋಗಂ ವದಸ್ವ ಮೇ ॥ ೩೦ ॥

ಪ್ರೀತಿಗೊಳಿಸಬೇಕು. ಆಗ ಜ್ಞಾನಾಧಿಕನಾದ ಅವನ ಅನುಗ್ರಹದಿಂದ ಶಾರೀರವಾಗಿಯೂ ಇರುವ ಪಾಪಗಳೂ ಮತ್ತು ಮಾತಾಪಿತೃಗಳಿಂದಲೂ, ಆಶ್ರಿತರಿಂದಲೂ, ಅಣ್ಣತಮ್ಮಂದಿರಿಂದಲೂ, ಬಂಧುಗಳಿಂದಲೂ ಮಾಡಲ್ಪಟ್ಟು ತನ್ನಲ್ಲಿ ಸಂಕ್ರಾಂತವಾಗಿರುವ ಪಾಪಗಳೂ ಸಹ ಅದೇ ಜನ್ಮದಲ್ಲಿ ನಾಶಹೊಂದುವವು ಇದೇ ಶೇಷಧರ್ಮವು. ಪುತ್ರನಿಗೂ, ಶಿಷ್ಯನಿಗೂ ಇವು ಈರೀತಿ ವ್ಯತ್ಯಸ್ತವಾಗಿವೆ. ಇವರ ಪರಸ್ಪರ ಪ್ರವೃತ್ತಿಯೂ ಭಿನ್ನಭಿನ್ನವಾಗಿದೆ. ಆದುದರಿಂದ ಬುದ್ಧಿಶಾಲಿಯಾದ ಪಂಡಿತನು ಪುತ್ರನನ್ನೂ, ಶಿಷ್ಯನನ್ನೂ ಹೊಂದಿರಬೇಕು. ಶಿಷ್ಯನಾದವನು ಶೇಷಪಾಪಗಳಿಂದ ಗುರುವನ್ನು ಮುಕ್ತನನ್ನಾಗಿ ಮಾಡುತ್ತಾನೆ. ಪುತ್ರನಾದರೋ ಎಲ್ಲಾ ಪಾಪಗಳಿಂದಲೂ ತಂದೆಯನ್ನು ಮುಕ್ತನನ್ನಾಗಿ ಮಾಡುವನು. ಈ ಕಾರಣದಿಂದಲೇ ಶಿಷ್ಯನಿಗಿಂತಲೂ ಪುತ್ರನೇ ಶ್ರೇಷ್ಠನೆಂದು ಶಾಸ್ತ್ರಗಳು ಹೇಳುತ್ತವೆ. (ಶಿಷ್ಯನಿಂದ ಕೆಲವು ಪಾಪಗಳು ನಾಶಹೊಂದಿದರೂ ಸರ್ವಪಾಪನಾಶಕನಾದ ಪುತ್ರನು ಅವನಿಗಿಂತಲೂ ಉತ್ಕೃಷ್ಟನೆಂದು ತಾತ್ಪರ್ಯ. ಆದುದರಿಂದ ನೀನು ಶಿಷ್ಯನಾಗುವುದಕ್ಕಿಂತಲೂ ಪುತ್ರನಾದಲ್ಲಿ ನಾನು ಸಂತೋಷಪಡುತ್ತೇನೆಂದು ಭಾವ)

೩೦-೩೩. ಪುಲಸ್ತ್ಯರು ಹೇಳುತ್ತಾರೆ:- ಈ ಪ್ರಕಾರವಾದ ಬ್ರಹ್ಮನ ಮಾತನ್ನು ಕೇಳಿ ತಪೋನಿಧಿಯಾದ ಸನತ್ಕುಮಾರನು ಪ್ರಭುವೇ, ಸತ್ಯಂ ಸತ್ಯಂ ಸತ್ಯಂ ಎಂದು ಮೂರು ಬಾರಿ ಪ್ರತಿಜ್ಞೆಯಿಂದ ಹೇಳುತ್ತಿದ್ದೇನೆ. ನಾನು ನಿನ್ನ ಪುತ್ರನು ನನಗೆ ಯೋಗ

ತಮುವಾಚ ಮಹಾಯೋಗೀ ತ್ವನ್ಮಾತಾ ಪಿತರೌ ಯದಿ ।
ದಾಸ್ಯೇತೆ ಚ ತತೋ ಯೋಗಂ ದಾಯಾದೋಽಸ್ಯಸಿ ಪುತ್ರಕ ॥ ೩೧ ॥

ಸನತ್ಕುಮಾರಃ ಪ್ರೋವಾಚ ದಾಯಾದಪರಿಕಲ್ಪನಾ ।
ಯೇಯಂ ಹಿ ಭವತಾ ಪ್ರೋಕ್ತಾ ತಾಂ ಮೇ ತ್ವಂ ಖ್ಯಾತುಮರ್ಹಸಿ ॥ ೩೨ ॥

ತದುಕ್ತಂ ಸಾಧ್ಯಮುಖ್ಯೇನ ವಾಕ್ಯಂ ಶ್ರುತ್ವಾ ಪಿತಾಮಹಃ ।
ಪ್ರಾಹ ಪ್ರಹಸ್ಯ ಭಗವಾನ್ ಶೃಣು ವತ್ಸೇತಿ ನಾರದ ॥ ೩೩ ॥

ಔರಸಃ ಕ್ಷೇತ್ರಜಶ್ಚೈವ ದತ್ತಃ ಕೃತ್ರಿಮ ಏವ ಚ ।
ಗೂಢೋತ್ಪನ್ನೋಽಪವಿದ್ಧಶ್ಚ ದಾಯಾದಾ ಬಾಂಧವಾಸ್ತು ಷಟ್ ॥ ೩೪ ॥

ಅಮೀಷು ಷಟ್ಸು ಪುತ್ರೇಷು ಋಣಪಿಂಡಧನಕ್ರಿಯಾಃ ।
ಗೋತ್ರಸಾಮ್ಯಂ ಕುಲೆ ವೃತ್ತಿಃ ಪ್ರತಿಷ್ಠಾ ಶಾಶ್ವತೀ ತಥಾ ॥ ೩೫ ॥

ಕಾನೀನಶ್ಚ ಸಹೋಢಶ್ಚ ಕ್ರೀತಃ ಪೌನರ್ಭವಸ್ತಥಾ ।
ಸ್ವಯಂ ದತ್ತಃ ಪಾರಶವಃ ಷಟ್ ಪುತ್ರಾಸ್ತು ಪ್ರಕೀರ್ತಿತಾಃ ॥ ೩೬ ॥

ಅಮೀಷಾಂ ಋಣಪಿಂಡಾದಿ ಕಥಾ ನೈವೇಹ ವಿದ್ಯತೆ ।
ನಾಮಧಾರಕ ಏವೇಹ ಗೋತ್ರೇ ಚ ಕುಲಸಮ್ಮತಃ ॥ ೩೭ ॥

ವನ್ನು ಉಪದೇಶಿಸು ಎಂದು ಪ್ರಾರ್ಥಿಸಲು ಮಹಾಯೋಗಿಯಾದ ಬ್ರಹ್ಮನು ಅವನನ್ನು ಕುರಿತು ನಿನ್ನ ಮಾತಾಪಿತೃಗಳು ನಿನ್ನನ್ನು ನನಗೆ ಕೊಡುವುದಾದರೆ ಆಗ ನೀನು ನನ್ನ ಪುತ್ರನಾಗಿ ದಾಯಾದನಾದೀಯೆ ಎಂದನು. ಆಗ ಸನತ್ಕುಮಾರನು ನೀನು ಈಗ ಹೇಳಿದ ದಾಯಾದನೆಂಬುದರ ಅರ್ಥವೇನು, ಈ ದಾಯಾದಪರಿಕಲ್ಪನೆಯು ಎಂತಹುದು ಇದನ್ನು ನನಗೆ ಹೇಳಬೇಕೆಂದು ಪ್ರಾರ್ಥಿಸಲು ಬ್ರಹ್ಮನು ಅದನ್ನು ಕೇಳಿ ನಗುತ್ತಾ ಮಗುವೇ ಹೇಳುತ್ತೇನೆ ಕೇಳು ಎಂದು ಉಪಕ್ರಮಿಸಿದನು-

೩೪-೩೭. ಔರಸ, ಕ್ಷೇತ್ರಜ, ದತ್ತ, ಕೃತ್ರಿಮ, ಗೂಢೋತ್ಪನ್ನ, ಅಪವಿದ್ಧ ಎಂಬ ಆರು ಜನ ಪುತ್ರರೂ ದಾಯಾದರಾಗುತ್ತಾರೆ. ಈ ಆರು ಜನರಲ್ಲಿಯೂ ಋಣ, ಪಿಂಡಪ್ರದಾನ, ಧನ, ಕ್ರಿಯೆ ಇವುಗಳೂ, ಗೋತ್ರಸಾಮ್ಯವೂ, ಕುಲದಲ್ಲಿ ಪರಿಗಣನೆಯೂ, ಶಾಶ್ವತವಾದ ಪ್ರತಿಷ್ಠೆಯೂ ಸಮಾನವಾಗಿರುತ್ತೆ. ಆದರೆ ಕಾನೀನ, ಸಹೋಢ, ಕ್ರೀತ, ಪೌನರ್ಭವ, ಸ್ವಯಂದತ್ತ, ಪಾರಶವ ಇವರೂ ಪುತ್ರರೆಂದು ಹೇಳಲ್ಪಡುತ್ತಾರೆ. ಇವರಿಗೆ ಪಿತೃಋಣ, ಪಿಂಡಾದಿಸಂಬಂಧವೇ ಇರುವದಿಲ್ಲ. ಇವರು ಆ ಗೋತ್ರದಲ್ಲಿದ್ದುಕೊಂಡು ನಾಮಮಾತ್ರಕ್ಕೆ ವಂಶಕ್ಕೆ ಸೇರಿವದರಾಗುತ್ತಾರೆ.

ತತ್ತಸ್ಯ ವಚನಂ ಶ್ರುತ್ವಾ ಬ್ರಹ್ಮಣಃ ಸನಕಾಗ್ರಜಃ ।
ಉವಾಚೈನಂ ವಿಶೇಷಂ ಹಿ ಬ್ರಹ್ಮನ್ ಮೇ ಖ್ಯಾತುಮರ್ಹಸಿ ॥ ೩೮ ॥

ತತೋಽಬ್ರವೀತ್ಸುರಪತಿರ್ವಿಶೇಷಂ ಶೃಣು ಪುತ್ರಕ ।
ಔರಸೋಽಯಃ ಸ್ವಯಂ ಜಾತಃ ಪ್ರತಿಬಿಂಬಮಿವಾತ್ಮನಃ ॥ ೩೯ ॥

ಕ್ಲೀಬೋನ್ಮತ್ತೇ ವ್ಯಸನಿನಿ ಪತ್ಯೌ ತಸ್ಯಾಜ್ಞಯಾ ತು ಯಃ ।
ಭಾರ್ಯಾರ್ಹ್ಯನಾತುರಾ ಪುತ್ರಂ ಜನಯೇತ್ಕ್ಷೇತ್ರಜಸ್ತು ಸಃ ॥ ೪೦ ॥

ಮಾತಾಪಿತೃಭ್ಯಾಂ ಯೋ ದತ್ತಃ ಸ ದತ್ತಃ ಪರಿಗೀಯತೇ ।
ಮಿತ್ರಪುತ್ರಂ ಮಿತ್ರದತ್ತಂ ಕೃತ್ರಿಮಂ ಪ್ರಾಹುರುತ್ತಮಾಃ ॥ ೪೧ ॥

ನ ಜ್ಞಾಯತೇ ಗೃಹೇ ಕೇನ ಜಾತಸ್ತಿಷ್ಠತಿ ಸ ಗೂಢಕಃ ।
ಬಾಹ್ಯತಃ ಸ್ವಯಮಾನೀತಃ ಸೋಽಪವಿದ್ಧಃ ಪ್ರಕೀರ್ತಿತಃ ॥ ೪೨ ॥

೩೮-೪೨. ಬ್ರಹ್ಮನ ಆ ಮಾತನ್ನು ಕೇಳಿ ಸನತ್ಕುಮಾರರು ಈ ಪುತ್ರರ ಸ್ವರೂಪವನ್ನೂ ತಾರತಮ್ಯವನ್ನೂ ಹೇಳಬೇಕೆಂದು ಪ್ರಶ್ನೆ ಮಾಡಲು ಚತುರ್ಮುಖನು ಪುತ್ರನೇ ವಿಶೇಷವನ್ನು ಹೇಳುತ್ತೇನೆ ಕೇಳು ಎಂದುಪಕ್ರಮಿಸಿ ಔರಸನೆಂದರೆ ಸ್ವಭಾರ್ಯೆಯಲ್ಲಿ ತನ್ನ ಪ್ರತಿಬಿಂಬದಂತೆ ಉದಯಿಸಿದವನು. ತನ್ನ ಪತಿಯು ಷಂಡನಾಗಿಯೋ, ಉನ್ಮತ್ತನಾಗಿಯೋ, ಮದ್ಯಮೃಗಯಾದಿವ್ಯಸನಿಯಾಗಿಯೋ ಇದ್ದು ಗಂಡನಿಂದ ಪುತ್ರನನ್ನು ಹೊಂದದಿರುವ ಭಾರ್ಯೆಯು ಆ ಪತಿಯ ಅಪ್ಪಣೆಯಿಂದ ಕೇವಲ ಕಾಮುಕಿಯಾಗದೆ ಪುತ್ರಪ್ರಾಪ್ತಿಗಾಗಿ ಮತ್ತೊಬ್ಬನನ್ನಾಶ್ರಯಿಸಿ ಹೊಂದಿದ ಪುತ್ರನು ಕ್ಷೇತ್ರಜ *ನೆನಿಸುತ್ತಾನೆ. ತಾಯಿತಂದೆಗಳಿಂದ ಮತ್ತೊಂದು ವಂಶದ ಅಭಿವೃದ್ಧಿಗಾಗಿ ಕೊಡಲ್ಪಟ್ಟವನು ದತ್ತನೆನಿಸುತ್ತಾನೆ. ಮಿತ್ರನ ಮಗನೂ, ಮಿತ್ರನಿಂದ ಕೊಡಲ್ಪಟ್ಟವನೂ ಪುತ್ರನೆಂಬ ಅಭಿಮಾನಕ್ಕೆ ವಿಷಯನಾಗಿ ಕೃತ್ರಿಮಪುತ್ರನೆಂದು ಕರೆಯಲ್ಪಡುತ್ತಾನೆ. ಯಾರಿಂದ ಉತ್ಪನ್ನನಾದನೆಂದು ತಿಳಿಯದೆ ಮನೆಯಲ್ಲಿದ್ದುಕೊಂಡು ಪುತ್ರನೆಂಬ ಅಭಿಮಾನಕ್ಕೆ ವಿಷಯನಾಗಿದ್ದಲ್ಲಿ ಅವನೇ ಗೂಢಕನೆನಿಸುತ್ತಾನೆ.

---

* ಇಲ್ಲಿ ಕೆಲವು ಪುತ್ರರನ್ನು ಕಲಿಯುಗದಲ್ಲಿ ಧರ್ಮಶಾಸ್ತ್ರಕಾರರು ನಿಷೇಧಿಸಿರುತ್ತಾರೆ.

ಕನ್ಯಾಜಾತಸ್ತು ಕಾನೀನಃ ಸಗರ್ಭೋಢಃ ಸಹೋಢಜಃ ।
ಮೂಲ್ಯೈರ್ಗೃಹೀತಃ ಕ್ರೀತಸ್ಯಾದ್ದ್ವಿವಿಧಸ್ಯಾತ್ಪುನರ್ಭವಃ ॥ ೪೩ ॥

ದತ್ತಾಪ್ಯೇಕಸ್ಯ ಯಾ ಕನ್ಯಾ ಭೂಯೋಽನ್ಯಸ್ಯ ಪ್ರದೀಯತೇ ।
ತಜ್ಜಾತಸ್ತನಯೋ ಜ್ಞೇಯೋ ಲೋಕೇ ಪೌನರ್ಭವಃ ಸ್ಮೃತಃ ॥ ೪೪ ॥

ದುರ್ಭಿಕ್ಷೇ ವ್ಯಸನೇಚಾಪಿ ಯೇನಾತ್ಮಾ ವಿನಿವೇದಿತಃ ।
ಸ ಸ್ವಯಂ ದತ್ತ ಇತ್ಯುಕ್ತಸ್ತಥಾನ್ಯೈಃ ಕಾರಣಾಂತರೈಃ ॥ ೪೫ ॥

ಬ್ರಾಹ್ಮಣಸ್ಯ ಸುತಃ ಶೂದ್ರ್ಯಾಂ ಜಾಯತೇ ಯಸ್ತು ಸುವ್ರತ ।
ಊಢಾಯಾಂ ಚಾಪ್ಯನೂಢಾಯಾಂ ಸ ಪಾರಶವ ಉಚ್ಯತೇ ॥ ೪೬ ॥

ಏತಸ್ಮಾತ್ಕಾರಣಾತ್ಪುತ್ರ ನ ಸ್ವಯಂ ದಾತುಮರ್ಹಸಿ ।
ಸ್ವಮಾತ್ಮಾನಂ ಗಚ್ಛ ಶೀಘ್ರಂ ಪಿತರೌ ಸಮುಪಾಹ್ವಯ ॥ ೪೭ ॥

ತತಃ ಸ ಮಾತಾಪಿತರೌ ಸಸ್ಮಾರ ವಚನಾದ್ವಿಭೋಃ ।
ತಾವಾಜಗ್ಮತುರೀಶಾನಂ ದ್ರಷ್ಟುಂ ವೈ ದಂಪತೀ ಮುನೇ ॥ ೪೮ ॥

೪೩-೪೬. ಕನ್ಯಕಾವಸ್ಥೆಯಲ್ಲಿಯೇ ಹುಟ್ಟಿದವನು ಕಾನೀನ. ಗರ್ಭಿಣಿಯಾದವಳನ್ನೇ ಮದುವೆಮಾಡಿಕೊಂಡು ಅವಳಲ್ಲುಂಟಾದ ಪುತ್ರನು ಸಹೋಢಜನಾಗುತ್ತಾನೆ. ಮೂಲ್ಯದಿಂದ ಕೊಂಡುಕೊಳ್ಳಲ್ಪಟ್ಟವನು ಕ್ರೀತನಾಗುತ್ತಾನೆ. ಪೌನರ್ಭವನು ಎರಡುವಿಧ ತಾನಾಗಿಯೇ ಇಬ್ಬರನ್ನು ಮದುವೆಯಾಗಿ, ಅಥವಾ ಒಬ್ಬನಿಗೆ ಕೊಡಲ್ಪಟ್ಟವಳು ಪಿತ್ರಾದಿಗಳಿಂದ ಮತ್ತೊಬ್ಬನಿಗೆ ಕೊಡಲ್ಪಟ್ಟು ಪುತ್ರನನ್ನು ಹೊಂದಿದರೆ ಆ ಮಗನು ಪೌನರ್ಭವನೆನಿಸುತ್ತಾನೆ. ದುರ್ಭಿಕ್ಷಕಾಲದಲ್ಲಾಗಲಿ ಮಹಾ ವ್ಯಸನಕ್ಕೆ ಸಿಲುಕಿಯಾಗಲಿ ತನ್ನನ್ನು ತಾನೇ ಮತ್ತೊಬ್ಬನಿಗೆ ಕೊಟ್ಟಲ್ಲಿ ಅಥವಾ ಕಾರಣಾಂತರಗಳಿಂದ ತನ್ನನ್ನು ತಾನೇ ಮತ್ತೊಬ್ಬನಿಗೆ ಕೊಟ್ಟಲ್ಲಿ ಅವನು ಸ್ವಯಂ ದತ್ತನೆನಿಸುತ್ತಾನೆ. ಬ್ರಾಹ್ಮಣನಾದವನಿಗೆ ಮದುವೆಯಾಗಿರುವ ಅಥವಾ ಆಗದಿರುವ ಶೂದ್ರಸ್ತ್ರೀಯಲ್ಲಿ ಹುಟ್ಟಿದವನು ಪಾರಶವನೆನಿಸುತ್ತಾನೆ.

೪೭-೫೩. ಈ ಕಾರಣದಿಂದ ನೀನೇ ನಿನ್ನನ್ನು ಕೊಡಲು ಅರ್ಹನಾಗಿಲ್ಲ. ಆದುದರಿಂದ ಜಾಗ್ರತೆಯಾಗಿ ಮಾತಾಪಿತೃಗಳನ್ನು ಕರೆದುಕೊಂಡು ಬಾ ಎಂದು ಬ್ರಹ್ಮನು ಹೇಳಲು ಸನತ್ಕುಮಾರನು ಅವನ ಮಾತಿನಂತೆ ತನ್ನ ಮಾತಾಪಿತೃಗಳನ್ನು

ಪ್ರಣಿಪತ್ಯ ತು ಬ್ರಹ್ಮಾಣ ಮಾದೇಶೋ ದೇವ ದೀಯತಾಂ ।
ಉಪವಿಷ್ಟೌ ಸುಖಾಸೀನೌ ಸಾಧ್ಯೋ ವಚನಮಬ್ರವೀತ್ ॥ ೪೯ ॥

ಸನತ್ಕುಮಾರ ಉವಾಚ

ಯೋಗಂ ಜಿಗಮಿಷುಸ್ತಾತ ಬ್ರಹ್ಮಾಣಂ ಸಮುಚೋಚುದಂ ।
ಮಾಮುಕ್ತವಾಂಸ್ತು ಪುತ್ರಾರ್ಥೆ ತಸ್ಮಾತ್ತ್ವಂ ದಾತುಮರ್ಹಸಿ ॥ ೫೦ ॥

ತಾವೇವಮುಕ್ತ್ವೌ ಪುತ್ರೇಣ ಯೋಗಾಚಾರ್ಯಂ ಪಿತಾಮಹಂ ।
ಉಕ್ತವಂತೌ ಪ್ರಭೋಽಯಂ ಹಿ ಆವಯೋಸ್ತನಯೋಽಸ್ತಿಚ ॥ ೫೧ ॥

ಅದ್ಯಪ್ರಭೃತ್ಯಯಂ ಪುತ್ರಸ್ತವ ಬ್ರಹ್ಮನ್ ಭವಿಷ್ಯತಿ ।
ಇತ್ಯುಕ್ತ್ವಾ ಜಗ್ಮತುಃ ಸ್ವರ್ಗಂ ಯೇನೈವಾಭ್ಯಾಗತೌ ಯಥಾ ॥ ೫೨ ॥

ಪಿತಾಮಹೋಽಪಿ ತಂ ಪುತ್ರಂ ಸಾಧ್ಯಂ ಚ ವಿನಿಯಾನ್ವಿತಂ ।
ಸನತ್ಕುಮಾರಂ ಪ್ರೋವಾಚ ಯೋಗಂ ದ್ವಾದಶಪತ್ರಕಂ ॥ ೫೩ ॥

ಸ್ಮರಿಸಲಾಗಿ ಅವರೂ ದಂಪತಿಗಳಿಬ್ಬರೂ ಚತುರ್ಮುಖನನ್ನು ನೋಡಲು ಬಂದರು. ಬಂದು ಬ್ರಹ್ಮನನ್ನು ನಮಸ್ಕರಿಸಿ ಎಲೈ ದೇವನೇ, ಏನಪ್ಪಣೆ ಎಂದರು. ಆಗ ಸುಖಾಸೀನರಾದ ಆ ದಂಪತಿಗಳನ್ನು ಕುರಿತು ತಂದೆಯೇ ಯೋಗವನ್ನು ತಿಳಿಯಲಿಚ್ಛೆಯಿಂದ ನಾನು ಚತುರ್ಮುಖನನ್ನು ಪ್ರಾರ್ಥಿಸಿಕೊಂಡೆನು. ಅವನು ನನ್ನನ್ನು ಪುತ್ರನಾಗಿರ ಬೇಕೆಂದು ಹೇಳುತ್ತಾನೆ. ಆದುದರಿಂದ ನನ್ನನ್ನು ಚತುರ್ಮುಖನಿಗೆ ನೀವು ಕೊಡ ಬೇಕು ಎಂದನು. ಹೀಗೆ ಸನತ್ಕುಮಾರನಿಂದ ಹೇಳಲ್ಪಟ್ಟ ಆ ದಂಪತಿಗಳು ಬ್ರಹ್ಮನನ್ನು ಕುರಿತು ಪ್ರಭುವೇ ನಮಗೆ ಇದುವರೆಗೂ ಮಗನಾಗಿದ್ದ ಈ ಸನತ್ಕುಮಾರನು ಇದು ಮೊದಲು ನಿನ್ನ ಮಗನೇ ಆಗಿರುವನು ಎಂದು ಹೇಳಿ ತಾವು ಬಂದ ಮಾರ್ಗವನ್ನು ಹಿಡಿದು ಸ್ವರ್ಗಕ್ಕೆ ಹೊರಟು ಹೋದರು. ಅನಂತರ ಚತುರ್ಮುಖನೂ, ವಿನೀತನೂ ಸಾಧ್ಯನೂ ಆಗಿರುವ ಆ ಸನತ್ಕುಮಾರನನ್ನು ಪುತ್ರನನ್ನಾಗಿ ಸ್ವೀಕರಿಸಿ ದ್ವಾದಶದಳ ವುಳ್ಳ ಈ ಯೋಗವನ್ನು ಅವನಿಗೆ ಉಪದೇಶಿಸಿದನು.

ಶಿಖಾಸಂಸ್ಥಸ್ತು ಓಂಕಾರೋ ಮೇಷೋಽಸ್ಯ ಶಿರಸಿ ಸ್ಥಿತಃ ।
ಪತ್ರಂ ವೈಶಾಖಮಾಸೇ ಹಿ ಪ್ರಥಮಂ ಪರಿಕೀರ್ತಿತಂ ॥ ೫೪ ॥

ನಕಾರೋ ಮುಖಸಂಸ್ಥೋಽಪಿ ವೃಷಸ್ತತ್ರ ಪ್ರಕೀರ್ತಿತಃ ।
ಜ್ಯೇಷ್ಠಮಾಸಶ್ಚ ತತ್ಪತ್ರಂ ದ್ವಿತೀಯಂ ಪರಿಕೀರ್ತಿತಂ ॥ ೫೫ ॥

ಮೋಕಾರೋ ಭುಜಯೋರ್ಯುಗ್ಮಂ ಮಿಥುನಸ್ತತ್ರ ಸಂಸ್ಥಿತಃ ।
ಆಷಾಢ ಇತಿವಿಖ್ಯಾತಃ ತೃತೀಯಂ ಪತ್ರಕಂ ಸ್ಮೃತಂ ॥ ೫೬ ॥

ಭಕಾರಂ ನೇತ್ರಯುಗಲಂ ತತ್ರ ಕರ್ಕಟಕಃ ಸ್ಥಿತಃ ।
ಮಾಸಃ ಶ್ರಾವಣ ಇತ್ಯುಕ್ತಃ ಚತುರ್ಥಂ ಪತ್ರಕಂ ಸ್ಮೃತಂ ॥ ೫೭ ॥

ಶಕಾರಂ ಹೃದಯಂ ಪ್ರೋಕ್ತಂ ಸಿಹ್ಮೋ ವಸತಿ ತತ್ರ ಚ ।
ಮಾಸೋ ಭಾದ್ರಪದಃ ಪ್ರೋಕ್ತಃ ಪಂಚಮಂ ಪರಿಗೀಯತೆ ॥ ೫೮ ॥

೫೪-೫೮. ಈ ಚತುರ್ಮುಖನ ಉಪದೇಶದಲ್ಲಿ ವಾಸುದೇವ ದ್ವಾದಶಾಕ್ಷರ ಮಂತ್ರವನ್ನು ಅಕ್ಷರ ಸಂಖ್ಯೆಯಿಂದ ಹನ್ನೆರಡು ಪತ್ರಗಳನ್ನಾಗಿಯೂ, ವತ್ಸರರೂಪಿಯಾದ ಪರಮಾತ್ಮನಿಗೆ ಅವಯವಗಳಾಗಿ ಮೇವಾದಿ ಮಾಸಗಳನ್ನೂ ರೂಪಣಮಾಡಿ ಚಾಂದ್ರಮಾಸದಿಂದೊಡಗೂಡಿದ ಮೇಷಾದಿ ಸೌರಮಾಸವನ್ನು ಒಂದೊಂದವಯುವವಾಗಿ ರೂಪಿಸಿ ಅಲ್ಲಿ ಪ್ರಣವಾದಿ ವರ್ಣಗಳ ಸ್ಥಿತಿಯನ್ನು ವರ್ಣಿಸುತ್ತಾ ವಾಸುದೇವ ದ್ವಾದಶಾಕ್ಷರ ಮಂತ್ರವು ಕಾಲಸ್ವರೂಪಿಯಾದ ಪರಮಾತ್ಮೋಪಾಸನ ರೂಪವೆಂಬುದನ್ನು ಸೂಚಿಸುತ್ತಾರೆ. ಓಂಕಾರವೆಂಬುದು ಶಿಖೆಯ ಮೇಲಿರುವ ಮೊದಲನೇ ಪತ್ರ. ವೈಶಾಖಮಾಸದಿಂದ ಕೂಡಿರುವ ಮೇಘಮಾಸವೇ ಶಿರೋರೂಪವಾಗಿ ಇದಕ್ಕೆ ಆಶ್ರಯವಾಗಿವೆ. ಅನಂತರ ಸಂವತ್ಸರ ರೂಪಿಯಾದ ಪರಮಾತ್ಮನ ಮುಖದಲ್ಲಿರುವ ನಕಾರವು ಎರಡನೇ ಪತ್ರ. ಜ್ಯೇಷ್ಠಮಾಸದಿಂದೊಡಗೂಡಿದ ವೃಷಭ ಮಾಸವೇ ಆ ಮುಖಕ್ಕೆ ಆಶ್ರಯವಾಗಿದೆ. ಮೋಕಾರವು ಮೂರನೇ ಪತ್ರ. ಅದು ವತ್ಸರರೂಪಿಯಾದ ಪರಮಾತ್ಮನ ಭುಜಯುಗ್ಮದಲ್ಲಿದೆ. ಆಷಾಢಮಾಸದಿಂದೊಡಗೂಡಿದ ಮಿಥುನ ಮಾಸವು ಆ ಭುಜಕ್ಕೆ ಆಶ್ರಯವಾಗಿದೆ. ಭಕಾರವು ಆ ಪರಮಾತ್ಮನ ನೇತ್ರಯುಗ್ಮರೂಪ. ಇದು ನಾಲ್ಕನೇಯಪತ್ರ. ಶ್ರಾವಣಮಾಸದಿಂದೊಡಗೂಡಿದ ಕರ್ಕಾಟಕ ಮಾಸವು ಆ ನೇತ್ರಗಳಿಗೆ ಆಶ್ರಯವಾಗಿದೆ. ಗಕಾರವು ಆ ವತ್ಸರಪುರುಷನ ಹೃದಯರೂಪವಾದದ್ದು. ಇದು ಐದನೇ ಪತ್ರ. ಭಾದ್ರಪದಮಾಸದಿಂದೊಡಗೂಡಿದ ಸಿಹ್ಮಮಾಸವು ಆ ಹೃದಯವನ್ನು ಆಶ್ರಯಿಸಿದೆ.

ವಕಾರಂ ಕವಚಂ ವಿದ್ಯಾತ್ಕ್ರುತ್ಯಾ ತತ್ರ ಪ್ರತಿಷ್ಠಿತಾ ।
ಮಾಸಶ್ಚಾಶ್ವಯುಜಿ ಪ್ರೋಕ್ತೋ ಷಷ್ಠಂ ತತ್ಪತ್ರಕಂ ಸ್ಮೃತಂ ॥ ೫೯ ॥

ತೆಕಾರಂ ಮನಸಿ ಪ್ರೋಕ್ತಂ ತುಲಾ ತತ್ರ ಚ ಸಂಸ್ಥಿತಾ ।
ಮಾಸಶ್ಚ ಕಾರ್ತಿಕೋ ನಾಮ ಸಪ್ತಮಂ ಪತ್ರಕಂ ಸ್ಮೃತಂ ॥ ೬೦ ॥

ವಾಕಾರಂ ನಾಭಿಸಂಯುಕ್ತಂ ಸ್ಥಿತಸ್ತತ್ರತು ವೃಶ್ಚಿಕಃ ।
ಮಾಸೋ ಮಾರ್ಗಶಿರಾ ನಾಮ ತ್ವಷ್ಟಕಂ ಪತ್ರಕಂ ಮುನೆ ॥ ೬೧ ॥

ಸುಕಾರಂ ಜಘನಂ ಪ್ರೋಕ್ತಂ ತತ್ರಸ್ಥಶ್ಚ ಧನುರ್ಧರಃ ।
ಪೌಷೋ ನಿಗದಿತೋ ಮಾಸೋ ನವಮಂ ಪರಿಕೀರ್ತಿತಂ ॥ ೬೨ ॥

ದೇಕಾರಶ್ಚಾಂಘ್ರಿಯುಗಲೆ ತತ್ರಸ್ಥಸ್ತಿಮಿರುಚ್ಯತೆ ।
ಮಾಸೋ ಮಾಘೇತಿ ವಿಖ್ಯಾತೋ ದಶಮಂ ಪತ್ರಕಂ ಸ್ಮೃತಂ ॥ ೬೩ ॥

ವಾಕಾರೋ ಜಾನುಯುಗ್ಮಂ ಚ ಕುಂಭಸ್ತತ್ರಾದಿಸಂಸ್ಥಿತಃ ।
ಪತ್ರಕಂ ಫಾಲ್ಗುನಃ ಪ್ರೋಕ್ತಂ ತದೇಕಾದಶಮುತ್ತಮಂ ॥ ೬೪ ॥

೫೯-೬೨. ವಕಾರವು ಕವಚರೂಪವಾಗಿದೆ. ಆಶ್ವಯುಜಮಾಸದಿಂದ ಕೂಡಿದ ಕನ್ಯಾಮಾಸವು ಅದನ್ನು ಆಶ್ರಯಿಸಿದೆ. ಇದು ಆರನೇ ಪತ್ರಕ. ತೆಕಾರವು ಆ ಪರಮಾತ್ಮನ ಮನೋರೂಪವಾದದ್ದು. ಕಾರ್ತಿಕಮಾಸದಿಂದ ಕೂಡಿದ ತುಲಾಮಾಸವು ಅದನ್ನು ಆಶ್ರಯಿಸಿದೆ. ಇದು ಆ ವತ್ಸರ ಪುರುಷನ ಏಳನೇ ಪತ್ರಕ. ವಕಾರವು ನಾಭಿರೂಪವಾಗಿದೆ. ಮಾರ್ಗಶಿರಮಾಸದಿಂದ ಕೂಡಿದ ವೃಶ್ಚಿಕಮಾಸವು ಅದನ್ನು ಆಶ್ರಯಿಸಿದೆ. ಇದು ಎಂಟನೇ ಪತ್ರಕ. ಸುಕಾರವು ಆ ಪುರುಷನ ಜಘನರೂಪವಾಗಿದೆ. ಪುಷ್ಯಮಾಸದಿಂದ ಕೂಡಿದ ಧನುರ್ಮಾಸವು ಅದನ್ನು ಆಶ್ರಯಿಸಿದೆ. ಇದು ಒಂಭತ್ತನೇ ಪತ್ರಕ. ದೇಕಾರವು ಪಾದಯುಗ್ಮರೂಪವಾಗಿದೆ. ಮಾಘಮಾಸದಿಂದ ಕೂಡಿದ ಮಕರಮಾಸವು ಅದನ್ನು ಅಶ್ರಯಿಸಿದೆ. ಇದು ಹತ್ತನೇ ಪತ್ರಕ.

೬೩-೬೬. ವಾಕಾರವು ಎರಡು ಮಂಡಿಗಳ ರೂಪವಾಗಿದೆ. ಫಾಲ್ಗುನಮಾಸದಿಂದ ಕೂಡಿದ ಕುಂಭಮಾಸವು ಅದನ್ನು ಆಶ್ರಯಿಸಿದೆ. ಇದು ಹನ್ನೊಂದನೇಯ ಪತ್ರಕ. ಯಕಾರವು ಪಾದದ್ವಯ ರೂಪವಾಗಿದೆ. ಚೈತ್ರಮಾಸದಿಂದ ಕೂಡಿದ ಮೀನಮಾಸವು ಅದನ್ನು ಆಶ್ರಯಿಸಿದೆ. ಇದು ವತ್ಸರರೂಪಿಯಾದ ಆ ಕೇಶವನ ಹನ್ನೆರಡನೇ ಪತ್ರಕ. ಹನ್ನೆರಡು ಮಾಸಗಳೆಂಬ ಅರಗಳುಳ್ಳ ಆ ಚಕ್ರವು ಆರುನಾಭಿ

ಪಾದೌ ಯಕಾರೌ ವಿಜ್ಞಾನೋಽಪಿ ಸಚ್ಚೈತ್ರೇ ವಸತೇ ಮುನೇ ।
ಇದಂ ತು ದ್ವಾದಶಂ ಪ್ರೋಕ್ತಂ ಪತ್ರಂ ವೈಕೇಶವಸ್ಯ ಹಿ ॥ ೬೫ ॥

ದ್ವಾದಶಾರಂ ತಥಾ ಚಕ್ರಂ ಷಣ್ಣಾಭಿ ದ್ವಿಯುತಂ ತಥಾ ।
ತ್ರಿವ್ಯೂಹಮೇಕಮೂರ್ತಿಶ್ಚ ತಥೋಕ್ತಃ ಪರಮೇಶ್ವರಃ ॥ ೬೬ ॥

ತತ್ರ ಚೋಕ್ತಂ ತು ದೇವಸ್ಯ ರೂಪಂ ದ್ವಾದಶಪತ್ರಕಂ ।
ಯಸ್ಮಿನ್ ಜ್ಞಾತೆ ಮುನಿಶ್ರೇಷ್ಠ ನ ಭೂಯೋಮರಣಂ ಲಭೇತ್ ॥ ೬೭ ॥

ದ್ವಿತೀಯಮುಕ್ತಂ ಸತ್ವಾದ್ಯಂ ಚತುರ್ವರ್ಣಂ ಚತುರ್ಮುಖಂ ।
ಚತುರ್ಬಾಹುಮುದಾರಾಙ್ಗಂ ಶ್ರೀವತ್ಸಧರಮವ್ಯಯಂ ॥ ೬೮ ॥

ತೃತೀಯಸ್ತಾಮಸೋ ನಾಮ ಶೇಷಮೂರ್ತಿಃ ಸಹಸ್ರಧಾ ।
ಸಹಸ್ರವದನಃ ಶ್ರೀಮಾನ್ ಪ್ರಜಾಪ್ರಲಯಕಾರಕಃ ॥ ೬೯ ॥

(ಆರು ರೇಖೆಗಳನ್ನು ಅರಗಳ ರೂಪದಲ್ಲಿ ಹಾಕಿದರೆ ಪ್ರತಿಯೊಂದು ರೇಖೆಯೂ ಅಗ್ರ ಭಾಗದಲ್ಲಿ ಎರಡೆರಡು ಅರಗಳಾಗುತ್ತದೆ. ಆ ಆರು ರೇಖೆಯ ಮಧ್ಯಭಾಗವೇ ನಾಭಿ) ಯಿಂದೊಡಗೂಡಿರುತ್ತದೆ. ಅಗ್ರಭಾಗದಲ್ಲಿ ಎರಡೆರಡು ಅರಗಳಿಂದ ಕೂಡಿರುತ್ತದೆ. ಅದರಲ್ಲಿ ಮೂರು ಗುಂಪಾಗಿ ಅಂಶವು ವಿಭಕ್ತವಾಗಿದ್ದರೂ ವಿಶಿಷ್ಟವಾದ ಪರಮಾತ್ಮನ ಏಕಮೂರ್ತಿಯೇ ತೋರಿಬರುವದು.

೬೭-೭೧. ಹೀಗೆ ತೋರಿಬರುವ ದ್ವಾದಶಪತ್ರಗಳುಳ್ಳ ರೂಪವೇ ಪರವಾಸು ದೇವನ ಸ್ವರೂಪ. ಇಂತಹ ಮೂರ್ತಿಯನ್ನು ತಿಳಿದು ಉಪಾಸನ ಮಾಡಿದ್ದೇ ಆದರೆ ಪುನಃ ಮರಣವೇ ಉಂಟಾಗುವುದಿಲ್ಲ. (ಜನ್ಮ ಮರಣ ರೂಪವಾದ ಸಂಸಾರ ಚಕ್ರದಿಂದ ಬಿಡುಗಡೆಯನ್ನು ಹೊಂದುತ್ತಾನೆಂದು ತಾತ್ಪರ್ಯ) ಆ ವಾಸುದೇವನ ಎರಡನೇ ಮೂರ್ತಿಯಾದರೋ ಸತ್ವಗುಣಪ್ರಚುರವಾಗಿಯೂ ನಾಲ್ಕು ವರ್ಣವುಳ್ಳ ದ್ದಾಗಿಯೂ, ನಾಲ್ಕು ಮುಖವುಳ್ಳದ್ದಾಗಿಯೂ ನಾಲ್ಕು ಬಾಹು ಉಳ್ಳದ್ದಾಗಿಯೂ ಶ್ರೀವತ್ಸಧಾರಿಯಾಗಿಯೂ ರಮಣೀಯವಾದ ಅವಯವ ಸನ್ನಿವೇಶವುಳ್ಳದ್ದಾಗಿಯೂ ಶಾಶ್ವತವಾಗಿಯೂ ಇರುತ್ತದೆ. ಆ ವಾಸುದೇವನ ಮೂರನೇ ಮೂರ್ತಿಯು ತಮೋ ಗುಣಮಯವಾಗಿಯೂ, ಶೇಷರೂಪನಾಗಿಯೂ, ಸಹಸ್ರ ಮುಖನಾಗಿ ಪ್ರಜೆಗಳ ಪ್ರಲಯದಲ್ಲಿ ಅಧಿಕಾರ ಹೊಂದಿರುವನು. ನಾಲ್ಕನೇ ಮೂರ್ತಿಯು ರಜೋಗುಣ ಪ್ರಚುರವಾಗಿಯೂ ರಕ್ತವರ್ಣನಾಗಿಯೂ, ನಾಲ್ಕುಮುಖವುಳ್ಳದ್ದಾಗಿಯೂ, ಭುಜ

ಚತುರ್ಥೋ ರಾಜಸೋ ನಾಮ ರಕ್ತವರ್ಣಶ್ಚತುರ್ಮುಖಃ ।
ದ್ವಿಭುಜೋ ಧಾರಯನ್ಮಾಲಾಂ ಸೃಷ್ಟಿಕೃತ್ಸಾದಿಪೂರುಷಃ ॥ ೭೦ ॥

ಅವ್ಯಕ್ತಾತ್ಸಂಭವನ್ತ್ಯೇತೇ ತ್ರಯೋಽವ್ಯಕ್ತಾ ಮಹಾಮುನೇ ।
ಅತೋ ಮರೀಚಿಪ್ರಮುಖಾಸ್ತಥಾನ್ಯೇಽಪಿ ಸಹಸ್ರಶಃ ॥ ೭೧ ॥

ಏತತ್ತವೋಕ್ತಂ ಮುನಿವರ್ಯರೂಪಂ
ವಿಷ್ಣೋಃ ಪುರಾಣಂ ಮತಿಪುಷ್ಟಿವರ್ಧನಂ ।
ಚತುರ್ಭುಜಂ ಚಾಪಿ ಮುರೋ ದುರಾತ್ಮಾ
ಕೃತಾಂತವಾಕ್ಯಾತ್ಪ್ರಸರಾಸಸಾದ ॥ ೭೨ ॥

ತಮಾಗತಂ ಪ್ರಾಹ ಮುನೇ ಮಧುಘ್ನಃ
ಪ್ರಾಪ್ತೋಽಸಿ ಕೇನಾಸುರ ಕಾರಣೇನ ।

ದ್ವಯದಿಂದ ಕೂಡಿ ಮಾಲಾಧಾರಿಯಾಗಿ ಸೃಷ್ಟಿಕಾರ್ಯಾಧಿಕೃತವಾಗಿ ಆದಿಪುರುಷ ರೂಪದಿಂದಿರುತ್ತದೆ. ಅವ್ಯಕ್ತವಾದ ಪರಮಾತ್ಮ ಸ್ವರೂಪದಿಂದ ಈ ಮೂರುಮೂರ್ತಿಗಳೂ ಅತೀಂದ್ರಿಯವಾಗಿ ಅಭಿವ್ಯಕ್ತಿಹೊಂದುತ್ತವೆ. ಅನಂತರ ಮರೀಚ್ಯಾದಿಗಳ ಸೃಷ್ಟಿಯು ವಿಸ್ತಾರವಾಗಿ ಉಂಟಾಗುತ್ತದೆ. (ಇಲ್ಲಿ ದ್ವಾದಶಾಕ್ಷರದಿಂದ ಉಪಾಸ್ಯವಾದ ಮೂರ್ತಿಯು ಪರವಾಸುದೇವ ಮೂರ್ತಿಯೆಂತಲೂ ಎರಡನೇಯ ಮೂರ್ತಿಯು ಅದರಿಂದ ಅಭಿವ್ಯಕ್ತವಾದ ವ್ಯೂಹವಾಸುದೇವ ಅಥವಾ ವಿಷ್ಣುವೆಂತಲೂ ನಾಲ್ಕನೇಯ ಮೂರ್ತಿಯು ಚತುರ್ಮುಖನೆಂತಲೂ ಮೂರನೇ ಮೂರ್ತಿಯು ರುದ್ರಮೂರ್ತಿಯೆಂತಲೂ ಪೌರಾಣಿಕರು ಹೇಳುವ ವಾಡಿಕೆ ಇದೆ. ಭಗವಚ್ಛಾಸ್ತ್ರದೃಷ್ಟಿಯಿಂದ ಈ ಮೂರ್ತಿಗಳನ್ನು ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧ ಎಂಬುದಾಗಿ ವ್ಯವಹರಿಸಬಹುದಾಗಿದೆ.)

೭೩-೭೪. ಎಲೈ ಮುನಿಶ್ರೇಷ್ಠನೇ ಬುದ್ಧಿಪ್ರದವಾಗಿಯೂ ಪುಷ್ಟಿಪ್ರದವಾಗಿಯೂ ಇರುವ ಮಹಾವಿಷ್ಣುವಿನ ಪುರಾತನವಾದ ಈ ರೂಪವನ್ನು ನಿನಗೆ ಹೇಳಿರುತ್ತೇನೆ. ಇಂತಹ ಅಜೇಯವಾದ ಚತುರ್ಭುಜವುಳ್ಳ ಆ ಪರಮಾತ್ಮನನ್ನು ದುಷ್ಟನಾದ ಮುರಾಸುರನು ಯಮನ ಮಾತಿನಂತೆ ಹೋಗಿ ಸೇರಿದನು. ಹಾಗೆ ಬಂದ ಅವನನ್ನು ಕುರಿತು ಮಧುಸೂದನನು ಅಸುರನೇ ಏತಕ್ಕಾಗಿ ನೀನು ಇಲ್ಲಿಗೆ

ಸ ಪ್ರಾಹ ಯೋದ್ಧುಂ ಸಹ ವೈ ತ್ವಯಾದ್ಯ
ತಂ ಪ್ರಾಹ ಭೂಯೋಽಸುರಪೂಗಹಂತಾ ॥ ೭೩ ॥

ಯದೀಹ ಮಾಂ ಯೋದ್ಧುಮುಪಾಗತೋಽಸಿ
ತತ್ಕಂಪತೆ ತೇ ಹೃದಯಂ ಕಿಮರ್ಥಂ ।
ಜ್ವರಾತುರಸ್ಯೇವ ಮುಹುರ್ಮುಹುರ್ವೈ
ತನ್ನೈವಯೋತ್ಸ್ಯೆ ಸಹ ಕಾತರೇಣ ॥ ೭೪ ॥

ಇತ್ಯೇವಮುಕ್ತೋಽಮಧುಸೂದನೇನ
ಮುರಸ್ತದಾಸ್ಯದ್ಧೃದಯೇ ಸ್ವಹಸ್ತಂ ।
ಕಥಂ ಕ್ವ ಕಸ್ಯೇತಿ ಮುರಸ್ತದೋಕ್ತ್ವಾ
ನಿಪಾತಯಾಮಾಸ ವಿಪನ್ನಬುದ್ಧಿಃ ॥ ೭೫ ॥

ಹರಿಶ್ಚ ಚಕ್ರಂ ಮೃದುಲಾಘವೇನ
ಮುಮೋಚ ತದ್ಧೃತ್ಕಮಲಂ ಚ ಶತ್ರೋಃ
ಚಿಚ್ಛೇದ ದೇವಾಸ್ತು ಗತವ್ಯಥಾಽಭವನ್
ದೇವಂ ಪ್ರಶಂಸಂತಿ ಚ ಪದ್ಮನಾಭಂ ॥ ೭೬ ॥

ಬಂದೆ ಎಂದು ಕೇಳಲಾಗಿ, ಅವನು ನಿನ್ನೊಡನೆ ಯುದ್ಧಮಾಡಲು ಬಂದಿದ್ದೇನೆಂದು ಉತ್ತರಕೊಟ್ಟನು. ಆಗ ಅಸುರನಾಶಕನಾದ ಹರಿಯು ನನ್ನೊಡನೆ ಯುದ್ಧಮಾಡಲು ನೀನು ಇಲ್ಲಿಗೆ ಬಂದಿರುವುದಾದರೆ ಜ್ವರ ಬಂದವನಿಗೆ ಉಂಟಾಗುವಂತೆ ನಿನ್ನ ಹೃದಯದಲ್ಲಿ ಹೀಗೆ ಕಂಪವು ಏತಕ್ಕೆ ಉಂಟಾಗುತ್ತಿದೆ. ಆದುದರಿಂದ ಭಯದಿಂದ ಕಂಪಿಸುತ್ತಿರುವ ನಿನ್ನೊಡನೆ ನಾನು ಯುದ್ಧಮಾಡುವದಿಲ್ಲ.

೭೫-೭೬. ಹೀಗೆ ಹರಿಯಿಂದ ಹೇಳಲ್ಪಟ್ಟ ಮುರನು ತನ್ನ ಕೈಯನ್ನು ಹೃದಯದ ಮೇಲೆ ಇರಿಸಿ ಏನು, ಎಲ್ಲಿ, ಯಾರಿಗೆ ಎಂದು ಹೇಳುತ್ತಾ ಬುದ್ಧಿವಿಪರ್ಯದಿಂದ ಕೆಳಕ್ಕೆ ಬಿದ್ದನು. ಆಗ ಹರಿಯು ಚಕ್ರಾಯುಧವನ್ನು ಲಾಘವದಿಂದ ಶತ್ರುವಿನ ಹೃದಯಕಮಲಕ್ಕೆ ಗುರಿಯಿಟ್ಟು ಪ್ರಯೋಗಿಸಿದನು. ಹೃದಯವನ್ನೂ ಛೇದಿಸಿದನು. ದೇವತೆಗಳೆಲ್ಲರೂ ಮುರನ ನಾಶದಿಂದ ಸಂತುಷ್ಟರಾಗಿ ಪದ್ಮನಾಭನನ್ನು ಪ್ರಶಂಸಿಸ

ಏತತ್ತವೋಕ್ತಂ ಮುರದೈತ್ಯನಾಶನಂ
ಕೃತಂ ಹಿ ಯುಕ್ತ್ಯಾ ಶಿತಚಕ್ರಪಾಣಿನಾ ।
ತತಃ ಪ್ರಸಿದ್ಧಂ ಸಮುಪಾಜಗಾಮ
ಮುರಾರಿರಿತ್ಯೇವ ವಿಭುರ್ನೃಸಿಹ್ಮಃ ॥ ೭೭ ॥

ಇತಿ ಶ್ರೀ ವಾಮನಪುರಾಣೇ ಭೈರವ ಪ್ರಾದುರ್ಭಾವೇ
ಮುರವಧೋ ನಾಮೈಕ ಷಷ್ಟಿತಮೋಽಧ್ಯಾಯಃ

ತೊಡಗಿದರು. ಈರೀತಿ ಹರಿತವಾದ ಚಕ್ರದಿಂದ ಮುರದೈತ್ಯನನ್ನು ಯುಕ್ತಿಯಿಂದ ಹರಿಯು ನಾಶಮಾಡಿದುದನ್ನು ನಿನಗೆ ಹೇಳಿದ್ದಾಯಿತು. ಈ ಕಾರಣದಿಂದಲೇ ಪ್ರಭುವಾದ ನೃಸಿಂಹನು ಮುರಾರಿ ಎಂದು ಪ್ರಸಿದ್ಧಿ ಹೊಂದಿದನು.

ಇಲ್ಲಿಗೆ ಶ್ರೀ ವಾಮನಪುರಾಣದ ಭೈರವಪ್ರಾದುರ್ಭಾವದಲ್ಲಿ ಮುರವಧವೆಂಬ
ಅರವತ್ತೊಂದನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಪುತ್ರಶಬ್ದಾರ್ಥವನ್ನು ಹೇಳಲು ಹಿಂದಿನ ಅಧ್ಯಾಯದಿಂದ ಅನುಗತವಾದ ಕಥಾಂಶಕ್ಕಾಗಿ ಹದಿನಾರು ನರಕಗಳನ್ನು ನಿರೂಪಿಸಿ ಇಂತಹ ಪುನ್ನಾಮಕವಾದ ನರಕಗಳನ್ನು ಹೋಗಲಾಡಿಸಿಕೊಳ್ಳಲು ಸಂತಾನಹೊಂದಿ ಅಚ್ಯುತನನ್ನು ಸೇವಿಸಬೇಕೆಂದು ಹೇಳಿ ಶೇಷಪಾಪಗಳನ್ನೂ ಪರಿಗಣನೆಮಾಡಿ ಇಂತಹ ಪಾಪಗಳಿಗೆ ಶಿಷ್ಯನು ನಾಶಕನಾಗುವನೆಂದು ಹೇಳಿ ಪುತ್ರಶಿಷ್ಯರುಗಳಿಗೆ ವೈಲಕ್ಷಣ್ಯವನ್ನು ನಿರೂಪಿಸಿ ಪುತ್ರನಿಗೆ ಉತ್ಕರ್ಷವನ್ನು ಉಪಪಾದಿಸಲಾಯಿತು. ಇದನ್ನು ಕೇಳಿದ ಸನತ್ಕುಮಾರನು ಯೋಗೋಪದೇಶಾಕಾಂಕ್ಷೆಯಿಂದ ಸತ್ಯವಾಗಿಯೂ ನಾನು ನಿನ್ನ ಪುತ್ರನೇ ಆಗಿರುವೆನು. ನನಗೆ ಯೋಗವನ್ನು ಉಪದೇಶಿಸಬೇಕೆಂದು ಬೇಡಲು ಆಗ ಚತುರ್ಮುಖನು ದಾಯಾದರಾಗಬಹುದಾದ ಪುತ್ರರ ಸ್ವರೂಪವನ್ನೂ ಭೇದವನ್ನೂ ವಿವರಿಸಿ ನೀನು

ನನಗೆ ದತ್ತಪುತ್ರನಾಗಬೇಕೇ ಹೊರತು ಬೇರೆ ಯಾವ ರೀತಿಯಲ್ಲೂ ಪುತ್ರನಾಗಲು ಅವಕಾಶವಿಲ್ಲ. ಆದುದರಿಂದ ನಿನ್ನ ಮಾತಾಪಿತೃಗಳು ಬಂದು ನಿನ್ನನ್ನು ನನಗೆ ಕೊಡಬೇಕೆಂದು ಹೇಳಲಾಗಿ ಸನತ್ಕುಮಾರನು ತನ್ನ ಮಾತಾಪಿತೃಗಳನ್ನು ಸ್ಮರಣ ಮಾತ್ರದಿಂದ ಬರಮಾಡಿಕೊಂಡು ಅವರಲ್ಲಿ ವಿಜ್ಞಾಪಿಸಲು ಅವರೂ ಈ ಸನತ್ಕುಮಾರ ನನ್ನು ಬ್ರಹ್ಮನಿಗೆ ದತ್ತಪುತ್ರನನ್ನಾಗಿ ಮಾಡಿದರೆಂದೂ ಹೇಳಲಾಯಿತು. ಅನಂತರ ಸನತ್ಕುಮಾರನನ್ನು ಪುತ್ರನನ್ನಾಗಿ ಸ್ವೀಕರಿಸಿ ಬ್ರಹ್ಮನು ಅವನಿಗೆ ವಾಸುದೇವ ದ್ವಾದಶಾಕ್ಷರಮಂತ್ರಪ್ರತಿಪಾದ್ಯನಾದ ಸರ್ವಜ್ಯೇಷ್ಠನಾದ ನಾರಾಯಣನನ್ನು ವತ್ಸರ ರೂಪದಿಂದ ರೂಪಣಮಾಡಿ ಹನ್ನೆರಡು ಮಾಸಗಳನ್ನೂ ಅದಕ್ಕೆ ಆಶ್ರಯವಾಗಿರುವ ಹನ್ನೆರಡು ಅಕ್ಷರಗಳನ್ನೂ ಅವಯವ ವಿಭಾಗದಿಂದ ನಿರೂಪಿಸಿ ದ್ವಾದಶಪತ್ರಕನನ್ನಾ ಗಿಯೂ ನಂತರ ಅವನ ಎರಡನೇ ಮತ್ತು ಮೂರನೇ, ನಾಲ್ಕನೇ ರೂಪವನ್ನು ನಿರೂಪಿಸಿ ಈ ನಾಲ್ಕು ರೂಪಗಳಿಂದ ಜನಾರ್ದನನು ಚತುರ್ಮೂರ್ತಿಯಾಗಿರು ವನೆಂದು ಅವಾಂತರ ಕಥಾಸಂದರ್ಭವನ್ನು ಪೂರ್ತಿಗೊಳಿಸಿ ಇಂತಹ ಜನಾರ್ದನನ್ನು ಮುರನು ಹೋಗಿ ಸೇರಿದನೆಂದು ಮುಖ್ಯ ಕಥಾಭಾಗಕ್ಕೆ ಸಂಗಮನಮಾಡಲಾಯಿತು. ಆಗ ಮುರನನ್ನು ಕುರಿತು ಏತಕ್ಕಾಗಿ ಇಲ್ಲಿ ಬಂದೆ ಎಂದು ಹರಿಯು ಕೇಳಲಾಗಿ ನಾನು ಯುದ್ಧಮಾಡಲು ಇಲ್ಲಿ ಬಂದಿರುವೆನೆಂದನು. ಆಗ ಹರಿಯು ಯುದ್ಧಮಾಡಲು ನೀನು ಇಲ್ಲಿ ಬಂದಿದ್ದಲ್ಲಿ ನಿನ್ನ ಹೃದಯವು ಏಕೆ ನಡುಗುತ್ತಿದೆ, ಭಯದಿಂದ ನಡು ಗುತ್ತಿರುವವನೊಡನೆ ನಾನು ಯುದ್ಧಮಾಡುವುದಿಲ್ಲವೆನ್ನಲು ಮುರನು ಎಲ್ಲಿ, ಯಾರದು ಎಂದು ಹೇಳುತ್ತಾ ತನ್ನ ಹಸ್ತವನ್ನು ಹೃದಯದ ಮೇಲಿಟ್ಟು ಬುದ್ಧಿ ವ್ಯತ್ಯಾಸದಿಂದ ಕೆಳಕ್ಕೆ ಬಿದ್ದನು. ಆಗ ಮುರಾರಿಯು ಅವನ ಹೃದಯವನ್ನು ಚಕ್ರ ದಿಂದ ಸೀಳಿ ಸಂಹರಿಸಿದನು. ಈ ಕಾರಣದಿಂದ ವಾಸುದೇವನು ಮುರಾರಿ ಎಂದು ಪ್ರಸಿದ್ಧಿ ಹೊಂದಿದನೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ದ್ವಿಷಷ್ಟಿತಮೋಽಧ್ಯಾಯಃ

ಪುಲಸ್ತ್ಯ ಉವಾಚ

ತತೋ ಮುರಾರಿಭವನಂ ಸಮಭ್ಯೇತ್ಯ ಸುರಾಸ್ತತಃ ।
ಊಚುರ್ದೇವಂ ನಮಸ್ಕೃತ್ಯ ಜಗತ್ಸಂಕ್ಷೋಭಕಾರಣಂ ॥ ೧ ॥

ತಚ್ಛ್ರುತ್ವಾ ಭಗವಾನ್ ಪ್ರಾಹ ಗಚ್ಛಾಮೋ ಹರಮಂದಿರಂ ।
ಸವೇತ್ಸ್ಯತಿ ಮಹಾಜ್ಞಾನೀ ಜಗತ್ಸುಬ್ಧಂ ಚರಾಚರಂ ॥ ೨ ॥

ತಥೋಕ್ತಾ ವಾಸುದೇವೇನ ದೇವಾಃ ಶಕ್ರಪುರೋಗಮಾಃ ।
ಜನಾರ್ದನಂ ಪುರಸ್ಕೃತ್ಯ ಜಗ್ಮುಃ ಮಂದರಭೂಧರಂ ॥ ೩ ॥

ನ ತತ್ರ ದೇವಂ ವೃಷಭಂ ನ ದೇವೀಂ ಚ ನ ನಂದಿನಂ ।
ಶೂನ್ಯಂ ಗಿರಿಮಪಶ್ಯಂತ ಹ್ಯಜ್ಞಾನತಿಮಿರಾವೃತಾಃ ।
ತಾನ್ಮೂಢದೃಷ್ಟೀನ್ಸಂಪ್ರೇಕ್ಷ್ಯ ದೇವೋ ವಿಷ್ಣುರ್ಮಹಾದ್ಯುತಿಃ ॥ ೪ ॥

ಅರವತ್ತೆರಡನೆಯ ಅಧ್ಯಾಯವು

೧-೪. ಪುಲಸ್ತ್ಯರು ಹೇಳುತ್ತಾರೆ:—ಅನಂತರ ದೇವತೆಗಳೆಲ್ಲರೂ ಹರಿಯ ಭವನವನ್ನು ಸೇರಿ ಅಲ್ಲಿ ಅವನನ್ನು ನಮಸ್ಕರಿಸಿ ಈ ವಿಧವಾದ ಜಗತ್ತಿನ ಕ್ಷೋಭಕ್ಕೆ ಕಾರಣವೇನೆಂದು ಕೇಳಿದರು. ಅದನ್ನು ಕೇಳಿ ಪರಮಾತ್ಮನು ಆ ಹರನ ಮಂದಿರಕ್ಕೆ ಹೋಗೋಣ ಜ್ಞಾನಿಯಾದ ಆ ಹರನೇ ಇದಕ್ಕೆ ಕಾರಣವನ್ನು ತಿಳಿದಿದ್ದಾನು, ಎನ್ನಲು ಇಂದ್ರಾದಿದೇವತೆಗಳೆಲ್ಲರೂ ಪರಮಾತ್ಮನನ್ನೇ ಮುಂದಿಟ್ಟುಕೊಂಡು ಮಂದರಪರ್ವತಕ್ಕೆ ಹೊರಟರು. ಅಲ್ಲಿ ಹೋದ ದೇವತೆಗಳೆಲ್ಲರೂ ಅಜ್ಞಾನಾಂಧಕಾರದಿಂದ ಆವೃತರಾಗಿ ಅಲ್ಲಿ ಹರನನ್ನಾಗಲಿ, ಅವನ ವಾಹನವಾದ ವೃಷಭವನ್ನಾಗಲಿ, ದೇವಿಯನ್ನಾಗಲಿ ನಂದಿಯನ್ನಾಗಲಿ ನೋಡಲಿಲ್ಲ. ಶೂನ್ಯವಾದ ಆ ಮಂದರಪರ್ವತವನ್ನು ಮಾತ್ರ

ಪ್ರೋವಾಚ ಕಿಂ ನಪಶ್ಯಧ್ವಂ ಮಹೇಶಂ ಪುರತಸ್ಸ್ಥಿತಂ ।
ತಮೂಚುರ್ನೈವ ದೇವೇಶಂ ಪಶ್ಯಾಮೋ ಗಿರಿಜಾಪತಿಂ ॥ ೫ ॥

ನ ವಿದ್ಮಃ ಕಾರಣಂ ತಚ್ಚ ಯೇನ ದೃಷ್ಟಿರ್ಹತಾ ಹಿ ನಃ ।
ತಾನುವಾಚ ಜಗನ್ಮೂರ್ತಿಃ ಯೂಯಂ ದೇವಸ್ಯ ಸಾಗಸಃ ॥ ೬ ॥

ಪಾಪಿಷ್ಠಾ ಗರ್ಭಹಂತಾರೋ ಮೃಡಾನ್ಯಾಃ ಸ್ವಾರ್ಥತತ್ಪರಾಃ ।
ತೇನ ಜ್ಞಾನಂ ವಿವೇಕೋ ವಾ ಹೃತೋ ದೇವೇನ ಶೂಲಿನಾ ॥ ೭ ॥

ಯೇನಾಗ್ರತಃ ಸ್ಥಿತಮಪಿ ಪಶ್ಯಂತೋಽಪಿ ನ ಪಶ್ಯಥ ।
ತಸ್ಮಾತ್ಕಾಯವಿಶುದ್ಧ್ಯರ್ಥಂ ದೇವದೃಷ್ಟ್ಯರ್ಥಮಾದರಾತ್ ॥ ೮ ॥

ತಪ್ತಕೃಚ್ಛ್ರೇಣ ಸಂಶುದ್ಧಾಃ ಕುರುಧ್ವಂ ಜ್ಞಾನಮೀಶ್ವರೇ ।
ಕ್ಷೀರಸ್ನಾನಂ ಪ್ರಯುಂಜೀತ ಸಾಗ್ರಕುಂಭಶತಂ ಪುರಾ ॥ ೯ ॥

ನೋಡಿದರು. ಹಾಗೆ ಮೂಢರಾಗಿ ನಿಂತ ದೇವತೆಗಳನ್ನು ನೋಡಿ ಮಹಾತೇಜಸ್ವಿಯಾದ ವಿಷ್ಣುವು ದೇವೇಶನಾದ ಶಂಕರನು ಮುಂದೆಯೇ ಇರುವನಲ್ಲಾ ಇವನನ್ನು ನೋಡಲಿಲ್ಲವೇ ಎಂದನು.

೬-೯. ಆಗ ದೇವತೆಗಳು ಗಿರಿಜಾಪತಿಯಾದ ಶಂಭುವನ್ನು ನಾವು ನೋಡುತ್ತಿಲ್ಲ. ನಮ್ಮ ಈ ದೃಷ್ಟಿಯು ಏಕೆ ಅಪಹೃತವಾಗಿದೆಯೋ ಇದರ ಕಾರಣವು ನಮಗೆ ಗೊತ್ತಾಗಲಿಲ್ಲವೆಂದರು. ಆಗ ಪರಮಾತ್ಮನು ನೀವು ಶಂಭುವಿನ ವಿಷಯದಲ್ಲಿ ಅಪರಾಧಿಗಳಾಗಿದ್ದೀರಿ. ಪಾಪಿಷ್ಠರಾಗಿಯೂ, ಪಾರ್ವತಿಯ ಗರ್ಭಘಾತಕರಾಗಿಯೂ, ಸ್ವಾರ್ಥಪರರಾಗಿಯೂ ಇದ್ದೀರಿ. ಆದುದರಿಂದಲೇ ನಿಮ್ಮ ಜ್ಞಾನ, ವಿವೇಕ ಎಲ್ಲವೂ ಅವನಿಂದ ಅಪಹರಿಸಲ್ಪಟ್ಟಿದೆ. ಆದುದರಿಂದಲೇ ಎದುರಿಗಿರುವ ಆ ದೇವನನ್ನು ನೋಡಿಯೂ ನೋಡದವರಂತೆ ಇರುವಿರಿ. ಆದುದರಿಂದ ನೀವು ದೇಹಶುದ್ಧಿಗಾಗಿಯೂ, ದೇವದರ್ಶನಕ್ಕಾಗಿ ಅವಶ್ಯಕವಾದ ಜ್ಞಾನಕ್ಕಾಗಿಯೂ ಆದರದಿಂದ ತಪ್ತಕೃಚ್ಛ್ರಾನುಷ್ಠಾನವನ್ನು ಮಾಡಿ ದೇಹಶುದ್ಧಿಯನ್ನೂ ಈಶ್ವರನಲ್ಲಿ ಜ್ಞಾನವನ್ನೂ ಹೊಂದಿರಿ. ಸಾಗ್ರವಾದ ನೂರು ಕುಂಭಗಳನ್ನು ಸ್ಥಾಪಿಸಿ ಕ್ಷೀರದಿಂದ ಸ್ನಾನವನ್ನು ಮಾಡಬೇಕು.

ದಧಿಸ್ನಾನೆ ಚತುಷ್ಷಷ್ಟಿಃ ದ್ವಾತ್ರಿಂಶದ್ಧವಿಷೋಽರ್ಹಣೆ ।
ಪಂಚಗವ್ಯಸ್ಯ ತುದ್ಧಸ್ಯ ಕುಂಭಾಃ ಷೋಡಶ ಕೀರ್ತಿತಾಃ ॥ ೧೦ ॥

ಮಧುನೋಽಷ್ಟೌ ಜಲಸ್ಯೋಕ್ತಾಃ ಸರ್ವೇ ತೇ ದ್ವಿಗುಣಾಃ ಸುರಾಃ ।
ತತೋ ರೋಚನಯಾ ದೇವಮಷ್ಟೋತ್ತರಶತೇನ ಹಿ ॥ ೧೧ ॥

ಅನುಲಿಂಪೇತ್ಕುಂಕುಮೇನ ಚಂದನೇನ ಚ ಭಕ್ತಿತಃ ।
ಬಿಲ್ವಪತ್ರೈಃ ಸಕಮಲೈಃ ಕರ್ಪೂರಾಗರುಚಂದನೈಃ ॥ ೧೨ ॥

ಮಂದಾರೈಃ ಪಾರಿಜಾತೈಶ್ಚ ಅತಿಮುಕ್ತೈಸ್ತಥಾರ್ಚಯೇತ್ ।
ಅಗರುಂ ಸಹ ಕಾಲೇಯಂ ಚಂದನೇನಾಪಿ ಧೂಪಯೇತ್ ॥ ೧೩ ॥

ಜಪ್ತವ್ಯಂ ಶತರುದ್ರೀಯಂ ಋಗ್ವೇದೋಕ್ತಂ ಪದಕ್ರಮೈಃ ।
ಏವಂ ಕೃತೇ ತು ದೇವೇಶಂ ಪಶ್ಯಧ್ವಂ ನೇತರೇಣ ಹಿ ॥ ೧೪ ॥

ಇತ್ಯುಕ್ತಾ ವಾಸುದೇವೇನ ದೇವಾಃ ಕೇಶವಮಬ್ರುವನ್ ।
ವಿಧಾನಂ ತಪ್ತಕೃಚ್ಛ್ರಸ್ಯ ಕಥ್ಯತಾಂ ಮಧುಸೂದನ ।
ಯಸ್ಮಿಂಶ್ಚೀರ್ಣೆ ಕಾಯಶುದ್ಧಿಃ ಭವಿತಾ ಸಾರ್ವಕಾಲಿಕೀ ॥ ೧೫ ॥

೧೦-೧೪. ದಧಿ ಸ್ನಾನಕ್ಕಾಗಿ (ಮೊಸರು) ಅರವತ್ತನಾಲ್ಕು ಕುಂಭಗಳೂ, ಹವಿಸ್ಸಿಗಾಗಿ (ತುಪ್ಪ) ಮೂವತ್ತೆರಡು ಕುಂಭಗಳೂ, ಶುದ್ಧವಾದ ಪಂಚಗವ್ಯಕ್ಕಾಗಿ ಹದಿನಾರು ಕುಂಭಗಳೂ, ಮಧು (ಜೇನು) ಪೂರ್ಣವಾದ ಎಂಟು ಕುಂಭಗಳೂ, ಅದರ ಎರಡರಷ್ಟು ಜಲಪೂರ್ಣ ಕುಂಭಗಳೂ ಇಡಲ್ಪಡಬೇಕು. ಅನಂತರ ಗೋರೋಚನದಿಂದ ಭಗವಂತನನ್ನು ನೂರ ಎಂಟು ಆವರ್ತಿ ಅನುಲೇಪಿಸಿ ಹಾಗೆಯೇ ಕುಂಕುಮದ ಹೂವಿಂದಲೂ ಚಂದನದಿಂದಲೂ ಲೇಪಿಸಿ, ಬಿಲ್ವಪತ್ರೆ, ಕಮಲ, ಕರ್ಪೂರ, ಅಗರು, ಚಂದನ, ಕಂಚುವಾಳದ ಹೂವು, ಪಾರಿಜಾತದ ಹೂವು, ಮಲ್ಲಿಗೆ ಹೂವು ಇವುಗಳಿಂದ ಭಕ್ತಿಯೊಡನೆ ಅರ್ಚಿಸಬೇಕು. ಅಗರು, ಹಾಲುಮಡ್ಡಿ, ಚಂದನ, ಇವುಗಳಿಂದ ಧೂಪಿಸಬೇಕು. ಋಗ್ವೇದೋಕ್ತಪದಕ್ರಮ ರೀತಿಯಿಂದ ಶತರುದ್ರೀಯವನ್ನು ಜಪಿಸಬೇಕು. ಹೀಗೆ ಮಾಡಿದಲ್ಲಿ ಆ ದೇವೇಶನನ್ನು ನೀವು ನೋಡುತ್ತೀರಿ. ಇಲ್ಲದಿದ್ದರೆ ಉಪಾಯವಿಲ್ಲ.

೧೫-೧೭. ಹೀಗೆ ವಾಸುದೇವನಿಂದ ಹೇಳಲ್ಪಟ್ಟ ದೇವತೆಗಳು ಅವನನ್ನು ಕುರಿತು ಪ್ರಭುವೇ ತಪ್ತಕೃಚ್ಛ್ರದ ವಿಧಾನವೇನು. ಯಾವ ಕೃಚ್ಛ್ರವನ್ನು ಆಚರಿಸಿ

ವಾಸುದೇವ ಉವಾಚ

ತ್ರ್ಯಹಮುಷ್ಣಾಃ ಪಿಬೇಚ್ಚಾಪಃ ತ್ರ್ಯಹಮುಷ್ಣಂ ಪಯಃ ಪಿಬೇತ್ ।
ತ್ರ್ಯಹಮುಷ್ಣಂ ಪಿಬೇತ್ಸರ್ಪಿಃ ವಾಯುಭಕ್ಷೋ ದಿನತ್ರಯಂ ॥ ೧೬ ॥

ಪಲಾ ದ್ವಾದಶ ತೋಯಸ್ಯ ಪಲಾಷ್ಟೌ ಪಯಸಃ ಸುರಾಃ ।
ಷಟ್‌ಪಲಾಃ ಸರ್ಪಿಷಃ ಪ್ರೋಕ್ತಾ ದಿವಸೆ ದಿವಸೆ ಪಿಬೇತ್ ॥ ೧೭ ॥

ಪುಲಸ್ತ್ಯ ಉವಾಚ

ಇತ್ಯೇವಮುಕ್ತೆ ವಚನೆ ಸುರಾಃ ಕಾಯವಿಶುದ್ಧಯೆ ।
ತಪ್ತಕೃಚ್ಛ್ರರಹಸ್ಯಂ ವೈ ಚಕ್ರುಃ ಶಕ್ರಪುರೋಗಮಾಃ ॥ ೧೮ ॥

ತತೋ ವ್ರತೆ ಸುರಾಶ್ಚೀರ್ಣೆ ವಿಮುಕ್ತಾಃ ಪಾಪತೋಽಭವನ್ ।
ವಿಮುಕ್ತಪಾಪಾ ದೇವೇಶಂ ವಾಸುದೇವಮಥಾಬ್ರುವನ್ ॥ ೧೯ ॥

ಕ್ವಾಸೌ ವದ ಜಗನ್ನಾಥ ಶಂಭುಸ್ತಿಷ್ಠತಿ ಕೇಶವ ।
ಯಂ ಕ್ಷೀರಾದ್ಯಭಿಷೇಕೇಣ ಸ್ನಾಪಯಾಮೋ ವಿಧಾನತಃ ॥ ೨೦ ॥

ದಲ್ಲಿ ಸರ್ವಕಾಲದಲ್ಲೂ ದೇಹಶುದ್ಧಿಯುಂಟಾದೀತು. ದಯವಿಟ್ಟು ಹೇಳಬೇಕೆಂದು ವಾಸುದೇವನನ್ನೇ ಕೇಳಿದರು. ಆಗ ವಾಸುದೇವನು ಮೂರುದಿನ ಬಿಸಿ ನೀರನ್ನೇ ಕುಡಿಯಬೇಕು, ಅನಂತರ ಮೂರು ದಿವಸ ಬಿಸಿಯಾದ ಹಾಲನ್ನೂ ನಂತರ ಮೂರು ದಿನ ಬಿಸಿಯಾದ ತುಪ್ಪವನ್ನೂ ಪಾನಮಾಡಿ ಅನಂತರ ಮೂರು ದಿನ ವಾಯುಭಕ್ಷ ನಾಗಿರಬೇಕು. ನೀರನ್ನು ಹನ್ನೆರಡು ಪಲ ಪರಿಮಾಣದಲ್ಲೂ, ಹಾಲನ್ನು ಎಂಟು ಪಲ ಪರಿಮಾಣದಲ್ಲೂ, ತುಪ್ಪವನ್ನು ಆರು ಪಲ ಪರಿಮಾಣದಲ್ಲೂ ಪ್ರತಿದಿನವೂ ಕುಡಿಯತಕ್ಕದ್ದು.

೧೮-೨೧. ಪುಲಸ್ತ್ಯರು ಮುಂದಿನ ವೃತ್ತಾಂತವನ್ನು ಹೇಳುತ್ತಾರೆ. ಹೀಗೆ ಕೇಶವನಿಂದ ಉಪದೇಶಿಸಲ್ಪಟ್ಟ ದೇವತೆಗಳು ಇಂದ್ರನನ್ನೂ ಪುರಸ್ಕರಿಸಿಕೊಂಡು ರಹಸ್ಯವಾದ ತಪ್ತಕೃಚ್ಛ್ರವನ್ನೂ ಆಚರಿಸಿದರು. ಅನಂತರ ಆ ವ್ರತವು ಮುಗಿದ ನಂತರ ಪಾಪದಿಂದ ಮುಕ್ತರಾಗಿ ವಾಸುದೇವನನ್ನು ಕುರಿತು ಪ್ರಭುವೇ ಶಂಭುವು ಎಲ್ಲಿದ್ದಾನೆ, ಅವನನ್ನು ಕ್ಷೀರಾದಿಗಳಿಂದ ವಿಧಿಪೂರ್ವಕವಾಗಿ ಅಭಿಷೇಕಮಾಡುವೆವು

ಅಥೋವಾಚ ಸುರಾನ್ವಿಷ್ಣುರೇಷ ತಿಷ್ಠತಿ ಶಂಕರಃ ।
ಮದ್ದೇಹೆ ಕಿಂನಪಶ್ಯಧ್ವಂ ಯೋಗಂ ಪ್ರಾಪ್ಯ ಪ್ರತಿಷ್ಠಿತಂ ॥ ೨೧ ॥

ತಮೂಚುಃ ನೈವ ಪಶ್ಯಾಮಃ ಸ್ವತೋನ್ಯೆ ತ್ರಿಪುರಾಂತಕಂ ।
ಸತ್ಯಂ ವದ ಸುರೇಶಾನ ಮಹೇಶಾನಃ ಕ್ವ ತಿಷ್ಠತಿ ॥ ೨೨ ॥

ತತೋವ್ಯಯಾತ್ಮಾ ಸಹರಿಃ ಸ್ವಹೃತ್ಪಂಕಜಶಾಯಿನಂ ।
ದರ್ಶಯಾಮಾಸ ದೇವಾನಾಂ ಮುರಾರಿರ್ಲಿಂಗಮೈಶ್ವರಂ ॥ ೨೩ ॥

ತತೋಮರಾಃ ಕ್ರಮೇಣೈವ ಕ್ಷೀರಾದಿಭಿರನುತ್ತಮೈಃ ।
ಸ್ನಾಪಯಾಂಚಕ್ರಿರೆ ಲಿಂಗಂ ಶಾಶ್ವತಂ ಧ್ರುವಮವ್ಯಯಂ ॥ ೨೪ ॥

ಆಲಿಪ್ಯ ಗೋರೋಚನಯಾ ಚಂದನೇನ ಸುಗಂಧಿನಾ ।
ಬಿಲ್ವಪತ್ರಾಂಬುಜೈರ್ದೇವಂ ಪೂಜಯಾಮಾಸುರಂಜಸಾ ॥ ೨೫ ॥

ಧೂಪಯಿತ್ವಾಗುರುಂ ಭಕ್ತ್ಯಾ ನಿವೇದ್ಯ ಪರಮೌಷಧೀಃ ।
ಜಪ್ತ್ವಾಷ್ಟಶತನಾಮಾನಿ ಪ್ರಣಾಮಂ ಚಕ್ರಿರೆ ತತಃ ॥ ೨೬ ॥

ಎಂದು ಕೇಳಲಾಗಿ ವಾಸುದೇವನು ಇಗೋ ಶಂಕರನು ಇಲ್ಲಿಯೇ ಇದ್ದಾನೆ. ನನ್ನ ದೇಹದಲ್ಲೇ ಯೋಗದಿಂದ ಕುಳಿತಿರುವ ಆ ಶಂಭುವನ್ನು ನೀವು ನೋಡಲಿಲ್ಲವೇ ಎಂದನು.

೨೨-೨೫. ಆಗ ದೇವತೆಗಳು ಸತ್ಯವಾಗಿಯೂ ನಾವು ತ್ರಿಪುರಾಂತಕನನ್ನು ಸ್ವಂತವಾಗಿ ನೋಡುತ್ತಿಲ್ಲ. ಪ್ರಭುವೇ, ನಿಜವಾಗಿ ಹೇಳು, ಮಹೇಶ್ವರನು ಎಲ್ಲಿರುವನು ಎಂದು ಕೇಳಲು ಶಾಶ್ವತಮೂರ್ತಿಯಾದ ಹರಿಯು ತನ್ನ ಹೃದಯ ಪಂಕಜದಲ್ಲಿ ಮಲಗಿರುವ ಲಿಂಗರೂಪಿಯಾದ ಶಂಭುವನ್ನು ದೇವತೆಗಳಿಗೆ ತೋರಿಸಿದನು. ಅನಂತರ ದೇವತೆಗಳು ಕ್ರಮವಾಗಿ ಕ್ಷೀರಾದಿಗಳಿಂದ ಆ ಪರಮೇಶ್ವರನ ಲಿಂಗವನ್ನು ಸ್ನಾನ ಮಾಡಿಸಿದರು. ಗೋರೋಚನದಿಂದಲೂ ಸುಗಂಧಿಯಾದ ಚಂದನದಿಂದಲೂ ಲೇಪನ ಮಾಡಿ ಬಿಲ್ವಪತ್ರೆ, ಕಮಲ ಮುಂತಾದುವುಗಳಿಂದ ಚನ್ನಾಗಿ ಪೂಜಿಸಿದರು

೨೬-೨೯. ಭಕ್ತಿಯಿಂದ ಅಗರು ಧೂಪವನ್ನೂ ಓಷಧಿಯುತವಾದ ನೈವೇದ್ಯವನ್ನೂ ಅರ್ಪಿಸಿ ಅಷ್ಟೋತ್ತರ ಶತನಾಮಗಳನ್ನು ಜಪಿಸಿ ಪ್ರಣಾಮಾದಿಗಳನ್ನು ನೆರವೇರಿಸಿದರು. ಆಗ ನಾರದರು ಪ್ರಶ್ನೆ ಮಾಡುತ್ತಾರೆ. ದೇವತೆಗಳು ಹೀಗೆ ಆಲೋಚಿಸು

ನಾರದ ಉವಾಚ

ಇತ್ಯೇವಂ ಚಿಂತಯಂತಸ್ತೇ ದೇವದೇವೌ ಹರಾಚ್ಯುತೌ ।
ಕಥಂ ಯೋಗಂ ತಮಾಪನ್ನೌ ಸತ್ವೇನ ತಮಸಾವೃತೌ ॥ ೨೭ ॥

ಪುಲಸ್ತ್ಯ ಉವಾಚ

ಸುರಾಣಾಂ ಚಿಂತಿತಂ ಜ್ಞಾತ್ವಾ ವಿಶ್ವಮೂರ್ತಿರಭೂದ್ವಿಭುಃ ।
ಸರ್ವಲಕ್ಷಣಸಂಯುಕ್ತಃ ಸರ್ವಾಯುಧಧರೋಽವ್ಯಯಃ ॥ ೨೮ ॥

***ಸಾರ್ಧದ್ವಿನೇತ್ರಂ ಕನಕಾಹಿಕುಂಡಲಂ**
ಜಟಾಗುಡಾಕೇಶಖಗರ್ಷಭಧ್ವಜಂ ।
ಸಮಾಧವಂ ಹಾರಭುಜಂಗಭೂಷಣಂ
ಪೀತಾಜಿನಾಚ್ಛನ್ನಕಟಿಪ್ರದೇಶಂ । ॥ ೧೯ ॥

ತ್ತಿರುವಾಗ ಸತ್ವಗುಣದಿಂದಲೂ, ತಮೋಗುಣದಿಂದಲೂ ಆವೃತರಾಗಿದ್ದ ಅಚ್ಯುತ ಮತ್ತು ಹರ ಇವರಿಬ್ಬರೂ ಹೇಗೆ ಪ್ರತ್ಯಕ್ಷತ್ವವನ್ನು ಹೊಂದಿದರು. ಈ ಪ್ರಶ್ನೆಗೆ ಉತ್ತರವಾಗಿ ಪುಲಸ್ತ್ಯರು ದೇವತೆಗಳ ಆಲೋಚನೆಯನ್ನು ತಿಳಿದು ಪ್ರಭುವಾದ ಪರಮಾತ್ಮನು ವಿಶ್ವಮೂರ್ತಿಯಾಗಿ ಸ್ವಸಂಕಲ್ಪದಿಂದಲೇ ತೋರ್ಪಡಿಸಿಕೊಂಡನು. ಹರಿಹರರುಗಳ ಸರ್ವಲಕ್ಷಣಗಳಿಂದಲೂ ಸರ್ವಾಯುಧಗಳಿಂದಲೂ ಕೂಡಿದ ತನ್ನ ಸ್ವರೂಪವನ್ನೇ ಇವರಿಗೆ ಪ್ರತ್ಯಕ್ಷಗೊಳಿಸಿದನು. ತ್ರಿನೇತ್ರವಾಗಿಯೂ ದ್ವಿನೇತ್ರವಾಗಿಯೂ ಕನಕಕುಂಡಲವುಳ್ಳದ್ದಾಗಿಯೂ ಸರ್ಪಕುಂಡಲವುಳ್ಳದ್ದಾಗಿಯೂ, ಜಟಾಕೇಶವಾಗಿಯೂ, ಗುಡಾಕೇಶವಾಗಿಯೂ (ಗುಡಾಕೇಶನೆಂದರೆ ಗಂಟಿನ ರೂಪವಾಗಿ ಏಕೀಕೃತವಾದ ಕೇಶವುಳ್ಳವನೆಂದೂ ಒಂದರ್ಥವನ್ನು ಗೀತಾಭಾಷ್ಯದ ತಾತ್ಪರ್ಯ ಚಂದ್ರಿಕೆಯಲ್ಲಿ ವೇದಾಂತಾಚಾರ್ಯರು ನಿರೂಪಿಸಿರುವರು) ವೃಷಭಧ್ವಜವಾಗಿಯೂ ಗರುಡಧ್ವಜವಾಗಿಯೂ, ಹಾರಭೂಷಣವಾಗಿಯೂ, ಸರ್ಪಭೂಷಣವಾಗಿಯೂ, ಪೀತಾಂಬರವುಳ್ಳ ಕಟಿಕಪ್ರದೇಶವುಳ್ಳದ್ದಾಗಿಯೂ ಚರ್ಮಾವೃತಕಟಿ ಪ್ರದೇಶವುಳ್ಳದ್ದಾಗಿಯೂ, ಚಕ್ರ, ಖಡ್ಗ, ಹಲ, ಶಾರ್ಙ್ಗಪಾಣಿಯಾಗಿಯೂ, ಪಿನಾಕ, ತ್ರಿಶೂಲ ಅಜಗವನಾಮಕವಾದ ಧನುಸ್ಸು ಇವುಗಳಿಂದ ಕೂಡಿದುದಾಗಿಯೂ ಮತ್ತು

---

* ಈ ಶ್ಲೋಕದಲ್ಲಿ ವಿಶೇಷಣಗಳಿಗೆ ಕ್ರಮವನ್ನು ವಿವಕ್ಷೆಮಾಡಿರುವದಿಲ್ಲ.

ಚಕ್ರಾಸಿಹಸ್ತಂ ಹಲಶಾರ್ಙ್ಗಪಾಣಿಂ
ಪಿನಾಕಶೂಲಾಜಗವಾನ್ವಿತಂ ಚ
ಕಪರ್ದಖಟ್ವಾಂಗ ಕಪಾಲಘಂಟಂ
ಸಶಂಖಟಂಕಾರರವಂ ಮಹರ್ಷೇ ॥ ೩೦ ॥

ದೃಷ್ಟ್ವೈವ ದೇವಾಹರಿಶಂಕರಂತಂ
ನಮೋಽಸ್ತು ತೇ ಸರ್ವಗತಾವ್ಯಯೇತಿ ।
ಪ್ರೋಕ್ತಪ್ರಣಾಮಾಃ ಕಮಲಾಸನಾದ್ಯಾಃ
ಚಕ್ರುರ್ಮತಿಂ ಚೈಕತರಾಂ ನಿಯುಜ್ಯ ॥ ೩೧ ॥

ತಾನೇಕಚಿತ್ತಾನ್ ವಿಜ್ಞಾಯ ದೇವಾನ್ ದೇವಪತಿರ್ಹರಿಃ ।
ಪ್ರಗೃಹ್ಯಾಭ್ಯದ್ರವತ್ತೂರ್ಣಂ ಕುರುಕ್ಷೇತ್ರಂ ಸ್ವಮಾಶ್ರಮಂ ॥ ೩೨ ॥

ತತೋಽಪಶ್ಯಂತ ದೇವೇಶಂ ಸ್ಥಾಣುಭೂತಂ ಜಲೇಸ್ಥಿತಂ ।
ದೃಷ್ಟ್ವಾ ನಮಃ ಸ್ಥಾಣವೇತು ಪ್ರೋಕ್ತ್ವಾ ಸರ್ವೇಪ್ಯುಪಾವಿಶನ್ ॥ ೩೩ ॥

೩೦-೩೩. ಜಟಾಜೂಟ, ಯೋಗದಂಡ, ಕಪಾಲ, ಘಂಟೆ ಇವುಗಳಿಂದಲೂ, ಶಂಖ ಮತ್ತು ಧನುಷ್ಟಂಕಾರ ಇವುಗಳಿಂದಲೂ ಕೂಡಿರುವ ಹರಿಶಂಕರಮೂರ್ತಿಯನ್ನು ದೇವತೆಗಳು ನೋಡಿ ಸರ್ವವ್ಯಾಪಕನೇ, ಶಾಶ್ವತಮೂರ್ತಿಯೇ ನಿನಗೆ ನಮಸ್ಕಾರವೆಂದರು. ಚತುರ್ಮುಖನೇ ಮೊದಲಾದವರು ಹೀಗೆ ಪ್ರಣಾಮೋಕ್ತಿಯನ್ನು ಹೇಳಿ ಹರಿಹರರಲ್ಲಿ ಐಕ್ಯಬುದ್ಧಿಯನ್ನೇ ಹೊಂದಿದರು. (ಇಲ್ಲಿ ಸರ್ವವ್ಯಾಪಕನಾಗಿಯೂ, ಸರ್ವಶರೀರಿಯಾಗಿಯೂ ಇರುವ ಮಹಾವಿಷ್ಣುವು ಗೀತೆಯಲ್ಲಿ ವಿಶ್ವರೂಪವನ್ನು ತೋರಿಸಿದಂತೆ ಇಲ್ಲಿಯೂ ಸರ್ವಶರೀರಿಯಾದ ತನಗೆ ಹರನೂ ಶರೀರದಲ್ಲಿ ಅಂತರ್ಭೂತನೆಂಬುದನ್ನು ತೋರ್ಪಡಿಸಿ ಜಗದ್ರೂಪನಾಗಿಯೂ, ಜಗಚ್ಛರೀರಿಯಾಗಿಯೂ ಇರುವ ನನ್ನಲ್ಲಿ ಯಾರೂ ಭೇದಬುದ್ಧಿಯನ್ನು ಹೊಂದಬಾರದೆಂದೂ ನನ್ನ ವಿಶಿಷ್ಟ ಸ್ವರೂಪವು ಒಂದೇ ಆಗಿರುವದೆಂದೂ, ನನ್ನಲ್ಲಿ ಶರೀರಭಾವವನ್ನು ಹೊಂದದೆ ಬೇರೆಯಾಗಿರುವ ಸ್ವತಂತ್ರ ವಸ್ತುವು ಯಾವುದೂ ಇಲ್ಲವೆಂದೂ ತಿಳಿಯಪಡಿಸಿದಂತಾಯಿತು.) ಆಗ ಹರಿಯು ಈ ದೇವತೆಗಳ ಏಕಚಿತ್ತತೆಯನ್ನು ತಿಳಿದು ಇವರನ್ನು ಕರೆದುಕೊಂಡು ಕುರುಕ್ಷೇತ್ರದಲ್ಲಿರುವ ತನ್ನ ಆಶ್ರಮಕ್ಕೆ ವೇಗದಿಂದ ನಡೆದನು. ಅಲ್ಲಿ ಸ್ಥಾಣುರೂಪದಿಂದ ಜಲದಲ್ಲಿ ಮುಳುಗಿರುವ ಶಂಭುವನ್ನು ಎಲ್ಲರೂ ನೋಡಿದರು. ನೋಡಿ ಸ್ಥಾಣುವೇ ನಿನಗೆ ನಮಸ್ಕಾರಗಳು ಎಂದು ಹೇಳಿ ಎಲ್ಲರೂ ಅಲ್ಲಿ ಕುಳಿತರು.

ತತೋಽಬ್ರವೀತ್ಸುರಪತಿಃ ಏಹಿನೋ ದೀಯತಾಂ ವರಃ ।
ಕ್ಷುಬ್ಧಂ ಜಗಜ್ಜಗನ್ನಾಥ ಉನ್ಮಜ್ಜಸ್ವ ಪ್ರಿಯಾತಿಥೆ ॥ ೩೪ ॥

ತತಸ್ತಾಂ ಮಧುರಾಂ ವಾಣೀಂ ಶುಶ್ರಾವ ವೃಷಭಧ್ವಜಃ ।
ಶ್ರುತ್ವೋತ್ತಸ್ಥೌ ಚ ವೇಗೇನ ಸರ್ವವ್ಯಾಪೀ ನಿರಂಜನಃ ॥ ೩೫ ॥

ನಮೋಽಸ್ತು ದೇವದೇವೇಭ್ಯಃ ಪ್ರೋವಾಚ ಪ್ರಹಸನ್ ಹರಃ ।
ಸಚಾಗತಃ ಸುರೈಃ ಸೇಂದ್ರೈಃ ಪ್ರಣತೋ ವಿನಯಾನ್ವಿತಃ ॥ ೩೬ ॥

ತಮೂಚುರ್ದೇವತಾಸ್ಸರ್ವಾಃ ತ್ಯಜ್ಯತಾಂ ಶಂಕರದ್ರುತಂ ।
ಮಹಾವ್ರತಂ ತ್ರಯೋಲೋಕಾಃ ಕ್ಷುಬ್ಧಾಃ ತೆ ತೇಜಸಾರ್ದಿತಾಃ ॥ ೩೭ ॥

ಅಥೋವಾಚ ಮಹಾದೇವೋ ಮಯಾತ್ಯಕ್ತೋ ಮಹಾವ್ರತಃ ।
ತತಸ್ಸುರಾ ದಿವಂ ಜಗ್ಮುಃ ಹೃಷ್ಟಾಃ ಪ್ರಯತಮಾನಸಃ ॥ ೩೮ ॥

ತತೋ ವಿಕಂಪತೆ ಪೃಥ್ವೀ ಸಾಬ್ಧಿದ್ವೀಪಾ ಮಹಾಮುನೆ ।
ತತೋಽಹ್ಯಚಿಂತಯದ್ರುದ್ರಃ ಕಿಮರ್ಥಂ ಕ್ಷುಭಿತಾ ಮಹೀ ॥ ೩೯ ॥

೩೪-೩೭. ಆಗ ದೇವಪತಿಯಾದ ಇಂದ್ರನು ಎಲೈ ಜಗತ್ಪತಿಯೇ, ಬಾ, ನಮಗೆ ವರವನ್ನು ಕೊಡು ಜಗತ್ತೆಲ್ಲವೂ ಕ್ಷೋಭೆಗೊಂಡಿದೆ. ಎಲೈ ಪ್ರಿಯಾತಿಥಿಯೇ, ಮೇಲಕ್ಕೆ ಏಳು ಎಂದನು. ಇಂದ್ರನ ಆ ಮಧುರವಾಣಿಯನ್ನು ಕೇಳಿ ನಿಷ್ಪಾಪನಾದ ಆ ಶಂಭುವು ದಯೆಯಿಂದ ಮೇಲಕ್ಕೆ ಎದ್ದನು. ನಗುತ್ತಾ ದೇವತೆಗಳೆಲ್ಲರಿಗೂ ನಮಸ್ಕಾರವು ಎಂದು ಹೇಳುತ್ತಾ ಇಂದ್ರಾದಿಗಳಿಂದ ವಂದಿಸಲ್ಪಡುತ್ತಿದ್ದರೂ ವಿನಯದಿಂದಕೂಡಿ ನಿಂತನು. ಆಗ ಅವನನ್ನು ದೇವತೆಗಳು ಶಂಕರನೇ ನೀನು ಈಗ ಆಚರಿಸುತ್ತಿರುವ ಮಹಾವ್ರತವನ್ನು ಜಾಗ್ರತೆಯಾಗಿ ತ್ಯಜಿಸಬೇಕು. ಮೂರು ಲೋಕವೂ ನಿನ್ನ ತೇಜಸ್ಸಿನಿಂದ ಕ್ಷುಭಿತವಾಗಿ ಪೀಡಿಸಲ್ಪಡುತ್ತಿದೆ ಎಂದರು.

೩೮-೪೧. ಆಗ ಮಹಾದೇವನು ದೇವತೆಗಳನ್ನು ಕುರಿತು ಮಹಾವ್ರತವನ್ನು ನಾನು ಬಿಟ್ಟಿದ್ದೇನೆ ಎನ್ನಲು ದೇವತೆಗಳೆಲ್ಲರೂ ಸಂತುಷ್ಟರಾಗಿ ಶುದ್ಧಮನಸ್ಸಿನಿಂದ ಸ್ವರ್ಗಕ್ಕೆ ಹೊರಟುಹೋದರು. ಅನಂತರ ಸಮುದ್ರದ್ವೀಪಗಳೊಡಗೂಡಿದ ಭೂಮಂಡಲವೇ ನಡುಗಲಾರಂಭಿಸಿತು. ಆಗ ರುದ್ರನು ಏತಕ್ಕೆ ಭೂಮಿಯು ಹೀಗೆ ಚಲಿಸುತ್ತಿದೆ

ತತಃ ಪರ್ಯಚರಚ್ಛೂಲೀ ಕುರುಕ್ಷೇತ್ರಂ ಸಮಂತತಃ ।
ದದರ್ಶೌಘವತೀತೀರೆ ಉಶನಸಂ ತಪೋನಿಧಿಂ ॥ ೪೦ ॥

ತತೋಽಬ್ರವೀತ್ಸುರಪತಿಃ ಕಿಮರ್ಥಂ ತಪ್ಯತೆ ತಪಃ ।
ಜಗತ್ಕ್ಷೋಭಕರಂ ವಿಪ್ರ ತಚ್ಛೀಘ್ರಂ ಕಥ್ಯತಾಂ ಮಮ ॥ ೪೧ ॥

ಉಶನಾ ಉವಾಚ

ತವಾರಾಧನಕಾಮಾರ್ಥಂ ತಪ್ಯತೇ ಹಿ ಮಹತ್ತಪಃ ।
ತಸ್ಮಾತ್ಸಂಜೀವಿನೀಂ ವಿದ್ಯಾಂ ಜ್ಞಾತುಮಿಚ್ಛೆ ತ್ರಿಲೋಚನ ॥ ೪೨ ॥

ಹರ ಉವಾಚ

ತಪಸಾ ಪರಿತುಷ್ಟೋಽಸ್ಮಿ ಸುತಪ್ತೇನ ತಪೋಧನ ।
ತಸ್ಮಾತ್ಸಂಜೀವಿನೀಂ ವಿದ್ಯಾಂ ಭವಾನ್ ಜ್ಞಾಸ್ಯತಿ ತತ್ತ್ವತಃ ॥ ೪೩ ॥

ವರಂ ಲಬ್ಧ್ವಾ ತತಃ ಶುಕ್ರಃ ತಪಸಃ ಸ ನ್ಯವರ್ತತ ।
ತಥಾಪಿ ಚಲತೆ ಪೃಥ್ವೀ ಸಾಬ್ಧಿಭೂಭೃನ್ನಗಾವೃತಾ ॥ ೪೪ ॥

ಎಂದು ಆಲೋಚಿಸಿದನು. ಆಗ ಆ ಶೂಲಿಯು ಕುರುಕ್ಷೇತ್ರದ ಸುತ್ತಲೂ ಸಂಚರಿಸ ಲಾರಂಭಿಸಿದನು. ಆಗ ಓಘವತೀ ತೀರದಲ್ಲಿ ತಪಸ್ಸನ್ನು ಮಾಡುತ್ತಿದ್ದ ಉಶನಸನೆಂಬ ಮುನಿಯನ್ನು ನೋಡಿದನು. ಆಗ ಶಂಕರನು ಏತಕ್ಕೆ ನೀನು ಜಗತ್ತಿಗೆ ಕ್ಷೋಭಕರ ವಾಗಿರುವ ಈ ಮಹಾತಪಸ್ಸನ್ನು ಮಾಡುತ್ತಿದ್ದೀಯೆ ಜಾಗ್ರತೆಯಾಗಿ ನನಗೆ ಹೇಳು ಎಂದನು. ಆಗ ಉಶನಸನು ಹೇಳುತ್ತಾನೆ.

೪೨-೪೬. ನಿನ್ನ ಪ್ರೀತಿಗಾಗಿಯೇ ಈ ಮಹಾತಪಸ್ಸನ್ನು ಮಾಡುತ್ತಿದ್ದೇನೆ. ಆದುದರಿಂದ ನಿನ್ನ ಅನುಗ್ರಹದಿಂದ ಸಂಜೀವಿನೀ ವಿದ್ಯೆಯನ್ನು ತಿಳಿಯಲು ಅಪೇಕ್ಷಿಸು ತ್ತಿದ್ದೇನೆ ಎಂದನು. ಆಗ ಹರನು ಎಲೈ ತಪೋಧನನೇ ನಿನ್ನ ಈ ತಪಸ್ಸಿನಿಂದ ನಾನು ಸಂತುಷ್ಟನಾಗಿದ್ದೇನೆ. ಆದುದರಿಂದ ಸಂಜೀವಿನೀ ವಿದ್ಯೆಯನ್ನು ನನ್ನ ಅನು ಗ್ರಹದಿಂದ ನೀನು ಸರಿಯಾಗಿ ತಿಳಿಯುತ್ತೀಯೆ ಎಂದು ವರವನ್ನು ಕೊಡಲು ಶುಕ್ರನು ಕೃತಕೃತ್ಯನಾಗಿ ತಪಸ್ಸಿನಿಂದ ನಿವೃತ್ತಿಹೊಂದಿದನು. ಅನಂತರವೂ ಭೂಮಿಯು ಸಮುದ್ರ ಪರ್ವತಗಳೊಡನೆ ಪುನಃ ಚಲಿಸಲಾರಂಭಿಸಿತು. ಆಗ ಶಂಕರನು ಇದಕ್ಕೆ

ತತೋಽಗಮನ್ಮಹಾದೇವಃ ಸಪ್ತಸಾರಸ್ವತಂ ಶುಚಿಃ ।
ದದರ್ಶ ನೃತ್ಯಮಾನಂ ಚ ಋಷಿಂ ಮಂಕಣಸಂಜ್ಞಿತಂ ॥ ೪೫ ॥

ಭಾವೇನ ಪ್ರೋಪ್ಲಯತಿ
ಬಾಲವತ್ಸಭುಜೌಪ್ರಸಾರ್ಯೈವ ನನರ್ತ ವೇಗಾತ್ ।
ತಸ್ಯೈವ ವೇಗೇನ ಸಮಾಹತಾ
ತು ಚಚಾಲ ಭೂರ್ಭೂಮಿಧರೈಸ್ಸಹೈವ ॥ ೪೬ ॥

ತಂ ಶಂಕರೋಭ್ಯೇತ್ಯ ಕರೇನಿಗೃಹ್ಯ
ಪ್ರೋವಾಚ ವಾಕ್ಯಂ ಪ್ರಹಸನ್ ಮಹರ್ಷೇ ।
ಕಿಂಭಾವಿತೋನೃತ್ಯಸಿ ಕೇನ ಹೇತುನಾ
ವದಸ್ವ ಮಾಮದ್ಯ ಕಿಮತ್ರ ತುಷ್ಟಿಃ ॥ ೪೭ ॥

ಸ ಬ್ರಾಹ್ಮಣಃ ಪ್ರಾಹ ಮಮಾದ್ಯ ತುಷ್ಟಿಃ
ಯೆನೇಹ ಜಾತಾ ಶೃಣು ತದ್ದ್ವಿಜೇಂದ್ರ ।
ತಪಸ್ಯತೋ ಮೆ ಬಹವೋ ಗತಾ
ಹಿ ಸಂವತ್ಸರಾಃ ಕಾಯವಿಶೋಧನಾರ್ಥಂ ॥ ೪೮ ॥

ಕಾರಣವನ್ನು ವಿಚಾರಮಾಡಲು ಸಪ್ತಸಾರಸ್ವತ ಕ್ಷೇತ್ರದಲ್ಲಿ ಸಂಚರಿಸುತ್ತಾ ಅಲ್ಲಿ ಕುಣಿಯುತ್ತಿದ್ದ ಮಂಕಣನೆಂಬ ಋಷಿಯನ್ನು ನೋಡಿದನು. ಆ ಋಷಿಯು ಸಂತೋಷದಿಂದ ಉಂಟಾದ ಉನ್ಮಾದಾವಸ್ಥೆಯಿಂದ ಭುಜಗಳನ್ನು ವಿಸ್ತರಿಸಿ ವೇಗದಿಂದ ಬಾಲನಂತೆ ನರ್ತನಮಾಡುತ್ತಿದ್ದುದರಿಂದ ಅವನ ವೇಗದಿಂದ ಅಭಿಹತವಾದ ಭೂಮಿಯು ಪರ್ವತಗಳೊಡನೆ ಚಲಿಸಲಾರಂಭಿಸಿತು.

೪೭-೪೯. ಆಗ ಶಂಕರನು ಅವನ ಸಮೀಪಕ್ಕೆ ಹೋಗಿ ಅವನ ಕೈಯ್ಯನ್ನು ಹಿಡಿದು ಅಭಿನಂದಿಸಿ ನಗುತ್ತಾ ಅವನನ್ನು ಕುರಿತು ಮಹರ್ಷಿಯೇ, ಯಾವ ಭಾವನೆಯಿಂದ ಹೀಗೆ ಕುಣಿಯುತ್ತಿದ್ದೀಯೆ, ಇದಕ್ಕೆ ಕಾರಣವೇನು, ಈಗ ನಿನಗೆ ಉಂಟಾಗಿರುವ ತುಷ್ಟಿಯು ತಾನೆ ಎಂತಹುದು ಎಂದು ಕೇಳಲಾಗಿ ಆ. ಬ್ರಾಹ್ಮಣನು ನನಗೆ

ತತೋಽನು ಪಶ್ಯಾಮಿ ಕರಾತ್ಕ್ಷತೋತ್ಥಂ
ನಿರ್ಗಚ್ಛತೇ ಶಾಕರಸಂ ಮಮೇಹ ।
ತೇನಾತಿತುಷ್ಟೋಽಸ್ಮಿ ಭೃಶಂ ದ್ವಿಜೇಂದ್ರ
ಯೇನಾಸ್ಮಿ ನೃತ್ಯಾಮಿ ಸುಭಾವಿತಾತ್ಮಾ ॥ ೪೯ ॥

ತಂ ಪ್ರಾಹ ಶಂಭುಃ ದ್ವಿಜ ಪಶ್ಯ ಮಹ್ಯಂ
ಭಸ್ಮ ಪ್ರವೃತ್ತಂ ಕರತೋಽತಿಶುಕ್ಲಂ ।
ಸಂತಾಡನಾದೇವ ನ ಚ ಪ್ರಹರ್ಷೋ
ಮಮಾಸ್ತಿ ನೂನಂ ಹಿ ಭವಾನ್ ಪ್ರಮತ್ತಃ ॥ ೫೦ ॥

ಶುತ್ವಾಥ ವಾಕ್ಯಂ ವೃಷಭಧ್ವಜಂ ತಂ
ನತ್ವಾ ಮುನಿರ್ಮಂಕಣಕೋ ಮಹರ್ಷೇ ।
ನೃತ್ಯಂ ಪರಿತ್ಯಜ್ಯ ಸುವಿಸ್ಮಿತೋಽಥ
ವವಂದ ಪಾದೌ ವಿನಯಾವನಮ್ರಃ ॥ ೫೧ ॥

ತಮಾಹ ಶಂಭುರ್ದ್ವಿಜಗಚ್ಛ ಲೋಕಂ
ತಂ ಬ್ರಹ್ಮಣೋ ದುರ್ಗಮಮೇವ ಯಚ್ಚ ।
ಇದಂ ಚ ತೀರ್ಥಂ ಪ್ರವರಂ ಪೃಥಿವ್ಯಾಂ
ಪೃಥೂದಕಂ ಸ್ಯಾತ್ಸುಮಹತ್ಫಲಂ ಹಿ ॥ ೫೨ ॥

ಉಂಟಾದ ತುಷ್ಟಿಗೆ ಕಾರಣವನ್ನು ಹೇಳುತ್ತೇನೆ ಕೇಳು. ನಾನು ಕಾಯಶೋಧನೆಗಾಗಿ ತಪಸ್ಸನ್ನು ಪ್ರಾರಂಭಿಸಿ ಬಹಳ ವರ್ಷಗಳಾಯಿತು, ಅನಂತರ ನನ್ನ ಕೈಯಿನ ಗಾಯದಿಂದ ಹೊರಗೆ ಬಂದ ಶಾಕರಸವನ್ನು ನೋಡುತ್ತಿದ್ದೇನೆ. ಇದರಿಂದ ಸಂತೋಷಗೊಂಡ ನಾನು ಭಾವನೆಯಿಂದ ಕುಣಿಯುತ್ತಿದ್ದೇನೆ ಎಂದನು.

೫೦-೫೩. ಅವನನ್ನು ಕುರಿತು ಶಂಭುವು ನನ್ನನ್ನು ನೋಡು. ತಾಡನ ಮಾತ್ರದಿಂದ ಈ ನನ್ನ ಕೈಯ್ಯಿನಿಂದ ಬಿಳುಪಾದ ಭಸ್ಮವು ಹೊರಗೆ ಬರುತ್ತಿದೆ, ಇದರಿಂದ ನಾನು ಹರ್ಷಪಡುತ್ತಿಲ್ಲ. ನೀನು ಹುಚ್ಚನಾಗಿದ್ದೀಯೆ, ಎಂದನು. ಶಂಕರನ ಈ ಮಾತನ್ನು ಕೇಳಿ ವಿಸ್ಮಿತನಾದ ಆ ಮುನಿಯು ಅವನಿಗೆ ನಮಸ್ಕರಿಸಿ ನರ್ತನವನ್ನು ಬಿಟ್ಟು ವಿನಯದಿಂದ ತಲೆಬಾಗಿ ನಿಂತನು. ಆಗ ಶಂಭುವು ಅವನನ್ನು ಕುರಿತು ಬ್ರಾಹ್ಮಣನೇ ನನ್ನ ಅನುಗ್ರಹದಿಂದ ಇತರರಿಗೆ ದುರ್ಲಭವಾದ ಬ್ರಹ್ಮಲೋಕವನ್ನು ನೀನು ಹೊಂದುತ್ತೀಯೆ. ನಿನ್ನಿಂದ ಸೇವಿಸಲ್ಪಡುತ್ತಿರುವ ಈ ತೀರ್ಥವೂ ಸಹ

ಸಾನ್ನಿಧ್ಯಮತ್ರೈವ ಸುರಾಸುರಾಣಾಂ
ಗಂಧರ್ವವಿದ್ಯಾಧರಕಿನ್ನರಾಣಾಂ ।
ಸದಾಸ್ತು ಧರ್ಮಸ್ಯ ನಿಧಾನ ಮಗ್ರ್ಯಂ
ಸಾರಸ್ವತಂ ಪಾಪಮಲಾಪಹಾರಿ ॥ ೫೩ ॥

ಸುಪ್ರಭಾ ಕಾಂಚನಾಕ್ಷೀ ಚ ಸುವೇಣುರ್ವಿಮಲೋದಕಾ ।
ಮಹೋದರಾ ಚೌಘವತೀ ವಿಶಾಲಾ ಚ ಸರಸ್ವತೀ ॥ ೫೪ ॥

ಏತಾಃ ಸಪ್ತ ಸರಸ್ವತ್ಯೋ ನಿವಸಿಷ್ಯಂತಿ ನಿತ್ಯಶಃ ।
ಸೋಮಪಾನಫಲಂ ಸರ್ವಾಃ ಪ್ರಯಚ್ಛಂತಿ ಸುಪುಣ್ಯದಾಃ ॥ ೫೫ ॥

ಭವಾನಪಿ ಕುರುಕ್ಷೇತ್ರೇ ಮೂರ್ತಿಂ ಸ್ಥಾಪ್ಯ ಗರೀಯಸೀಂ ।
ಗಮಿಷ್ಯತಿ ಮಹಾಪುಣ್ಯಂ ಬ್ರಹ್ಮಲೋಕಂ ಸುದುರ್ಗಮಂ ॥ ೫೬ ॥

ಇತ್ಯೇವಮುಕ್ತೋ ದೇವೇನ ಶಂಕರೇಣ ತಪೋಧನ ।
ಮೂರ್ತಿಂ ಸ್ಥಾಪ್ಯ ಕುರುಕ್ಷೇತ್ರೇ ಬ್ರಹ್ಮಲೋಕಮಗಾದ್ವಶೀ ॥ ೫೭ ॥

ಮಹಾಫಲಪ್ರದವಾಗಿ ಪೃಥೂದಕವೆಂಬ ಹೆಸರಿನಿಂದ ಭೂಮಿಯಲ್ಲಿ ಪ್ರಸಿದ್ಧಿಹೊಂದಲಿ. ಮತ್ತು ಈ ತೀರ್ಥವು ಸರಸ್ವತೀ ಸಂಬಂಧದಿಂದ ಸಕಲಪಾಪನಾಶಕವಾಗಿಯೂ ಧರ್ಮಸ್ಥಾನವಾಗಿಯೂ ಆಗಲಿ, ಸುರಾಸುರರ, ಹಾಗೂ ಗಂಧರ್ವವಿಧ್ಯಾದರ, ಕಿನ್ನರ ಮುಂತಾದ ದೇವಯೋನಿಗಳ ಸಾನ್ನಿಧ್ಯವು ಈ ತೀರ್ಥಕ್ಕೆ ಯಾವಾಗಲೂ ಇರಲಿ.

೫೪-೫೭. ಈ ಕ್ಷೇತ್ರದಲ್ಲಿ ಸುಪ್ರಭಾ, ಕಾಂಚನಾಕ್ಷೀ, ಸುವೇಣು, ವಿಮಲೋದಕಾ, ಮಹೋದರಾ, ಓಘವತೀ, ವಿಶಾಲಾ ಎಂಬ ಏಳು ಸರಸ್ವತಿಯ ಶಾಖೆಗಳೂ ಯಾವಾಗಲೂ ಸಾನ್ನಿಧ್ಯಹೊಂದಿ ವಾಸಮಾಡುತ್ತವೆ. ಇವೆಲ್ಲವೂ ಸೋಮಪಾನ ಮಾಡುವುದರಿಂದ ಲಭಿಸಬಹುದಾದ ಮಹಾಫಲವನ್ನು ಕೊಡುತ್ತಾ ಪುಣ್ಯಪ್ರದವಾಗಿರುತ್ತವೆ. ನೀನೂ ಸಹ ಈ ಕುರುಕ್ಷೇತ್ರದಲ್ಲಿ ದೊಡ್ಡದೊಂದು ಮೂರ್ತಿಯನ್ನು ಸ್ಥಾಪಿಸಿ ಪುಣ್ಯಕರವಾಗಿಯೂ, ದುರ್ಲಭವಾಗಿಯೂ ಇರುವ ಬ್ರಹ್ಮಲೋಕವನ್ನು ಹೊಂದುತ್ತೀಯೆ ಎಂದು ವರವನ್ನಿತ್ತನು. ಹೀಗೆ ಶಂಕರನಿಂದ ಅನುಗ್ರಹಿಸಲ್ಪಟ್ಟ ಆ ಮಂಕಣಕನು ಹೊರಟುಹೋದಮೇಲೆ ಭೂಮಿಯು ನಿಶ್ಚಲವಾಯಿತು. ಅನಂತರ

ಗತೆ ಮಂಕಣಕೆ ಪೃಥ್ವೀ ನಿಶ್ಚಲಾ ಸಮಜಾಯತ ।
ಅಥಾಗಾನ್ಮಂದರಂ ಶಂಭುಃ ನಿರ್ಜನಾವಸಥಂ ಶುಚಿ ॥ ೫೮ ॥

ಏವಂ ತವೋಕ್ತಂ ದ್ವಿಜ ಶಂಕರಸ್ತು
ಗತಸ್ತದಾಸೀತ್ತಪಸಸ್ತು ಶೈಲೆ ।
ಶೂನ್ಯೆಭ್ಯಯಾದ್ರಷ್ಟುಮತಿರ್ಹಿದೇವ್ಯಾ
ಸಯೋಽಚಿತೋ ಯೇನ ಹಿ ಕಾರಣೇನ ॥ ೫೯ ॥

ಇತಿ ಶ್ರೀ ವಾಮನಪುರಾಣೇ ಭೈರವಪ್ರಾದುರ್ಭಾವೇ
ದ್ವಿಷಷ್ಟಿತಮೋಽಧ್ಯಾಯಃ

ಶಂಭುವು ನಿರ್ಜನವಾಗಿಯೂ, ಶುಚಿಯಾಗಿಯೂ ಇದ್ದ ಮಂದರಕ್ಕೇ ಬಂದು ಸೇರಿದನು. ಈ ಪ್ರಕಾರ ಶಂಕರನು ತಪಸ್ಸಿಗಾಗಿ ಹೋಗಿದ್ದುದನ್ನೂ ಮರಳಿ ಶೂನ್ಯವಾದ ಆ ಶೈಲಕ್ಕೆ ಬಂದು ಪಾರ್ವತಿಯ ದರ್ಶನೇಚ್ಛೆಯಿಂದ ಅಲ್ಲಿ ಸೇರಿದುದನ್ನೂ ಸಕಾರಣವಾಗಿ ನಿನಗೆ ಹೇಳಿರುತ್ತೇನೆ.

ಇಲ್ಲಿಗೆ ಶ್ರೀ ವಾಮನಪುರಾಣದ ಭೈರವಪ್ರಾದುರ್ಭಾವದಲ್ಲಿ
ಅರವತ್ತೆರಡನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ದೇವತೆಗಳೆಲ್ಲರೂ ಮುರಾರಿಯ ಸ್ಥಾನಕ್ಕೆ ಹೋಗಿ ಜಗತ್ತಿನ ಈ ಕ್ಷೋಭಕ್ಕೆ ಕಾರಣವೇನೆಂದು ಕೇಳಲು ಮುರಾರಿಯು ಹರನ ಸ್ಥಾನಕ್ಕೆ ಹೋಗೋಣ ಸರ್ವಜ್ಞನಾದ ಅವನಿಂದಲೇ ಇದನ್ನು ತಿಳಿಯೋಣವೆಂದು ಹೇಳಲು ಅವನೊಡನೆ ದೇವತೆಗಳೆಲ್ಲರೂ ಮಂದರಪರ್ವತಕ್ಕೆ ಹೋಗಿ ನೋಡಲು ಅಲ್ಲಿ ಶಂಕರನೂ, ಅವನ ಅನುಯಾಯಿಗಳೂ ಕಾಣಸಲಿಲ್ಲವಾದುದರಿಂದ ನಷ್ಟದೃಷ್ಟಿಗಳಾಗಿ ನಿಂತರೆಂದು ಹೇಳಲಾಯಿತು. ಆಗ ಜಗನ್ಮೂರ್ತಿಯಾದ ಹರಿಯು ದೀನರಾಗಿ ನಿಂತ ದೇವತೆಗಳನ್ನು

ನೋಡಿ ನೀವು ಹರನ ವಿಷಯದಲ್ಲಿ ಅಪರಾಧಿಗಳಾಗಿರುವಿರಿ. ಆದುದರಿಂದಲೇ ಎದುರಿಗಿರುವ ಅವನನ್ನು ನೀವು ನೋಡುತ್ತಿಲ್ಲ. ಆದುದರಿಂದ ನೀವು ಕಾಯಶುದ್ಧಿಗಾಗಿಯೂ, ಅವನ ದರ್ಶನಕ್ಕಾಗಿಯೂ ತಪ್ತಕೃಚ್ಛ್ರವನ್ನು ಆಚರಿಸಿ ಬನ್ನಿರೆಂದು ಹೇಳಿ ಅದರ ಆಚರಣಕ್ರಮವನ್ನೂ ಹೇಳಿದನೆಂದೂ ಹೇಳಲಾಯಿತು. ಆ ಪ್ರಕಾರ ಕೃಚ್ಛ್ರಾನುಷ್ಠಾನಮಾಡಿ ಬಂದರೂ ಅವರು ಅಲ್ಲಿ ಶಂಕರನನ್ನು ನೋಡಲಾಗಲಿಲ್ಲ. ಆಗ ಶಂಕರನೆಲ್ಲಿರುವನೆಂದು ವಿಷ್ಣುವನ್ನು ಅವರು ಕೇಳುವಾಗ ವಿಷ್ಣುವು ತನ್ನ ದೇಹದಲ್ಲೇ ಆ ಶಂಕರನ ಮೂರ್ತಿಯನ್ನು ತೋರಿಸಲು ಆ ಮೂರ್ತಿಯನ್ನು ದೇವತೆಗಳೆಲ್ಲರೂ ಪೂಜಿಸಿದರೆಂದೂ ಹೇಳಲಾಯಿತು. ಆಗ ವಿಗ್ರಹದಿಂದಲೂ, ಆಯುಧಗಳಿಂದಲೂ, ಭೂಷಣಗಳಿಂದಲೂ, ಉಭಯಸಾಧಾರಣವಾದ ಆ ಹರಿಶಂಕರಮೂರ್ತಿಯನ್ನು ನೋಡಿ ಬ್ರಹ್ಮಾದಿಗಳೂ ಪ್ರಣಾಮಮಾಡಿದರು. ಅನಂತರ ಆ ದೇವತೆಗಳೆಲ್ಲರನ್ನೂ ಕರೆದುಕೊಂಡು ಹರಿಯು ಕುರುಕ್ಷೇತ್ರಕ್ಕೆ ಹೋಗಿ ಅಲ್ಲಿ ಜಲದಲ್ಲಿರುವ ಸ್ಥಾಣುವನ್ನು ತೋರಿಸಲು ಎಲ್ಲರೂ ನಮಸ್ಕಾರಮಾಡಿ ಕುಳಿತರು. ಆಗ ಇಂದ್ರನು ಜಗತ್ತೆಲ್ಲವೂ ಕ್ಷೋಭಹೊಂದಿದೆ, ಜನಗನ್ನಾಥನೇ ಮೇಲಕ್ಕೆ ಏಳು, ಇದೊಂದು ವರವನ್ನು ದಯಪಾಲಿಸು ಎನ್ನಲು, ಆ ಮಾತನ್ನು ಕೇಳಿ ಹರನು ಮೇಲಕ್ಕೆ ಎದ್ದನು. ಆಗ ದೇವತೆಗಳೆಲ್ಲರೂ ನಮಸ್ಕರಿಸಿ ಈ ಮಹಾವ್ರತವನ್ನು ತ್ಯಜಿಸಬೇಕೆಂದು ಪ್ರಾರ್ಥಿಸಲು ನಾನು ಮಹಾವ್ರತವನ್ನು ಬಿಟ್ಟಿದ್ದೇನೆ ಎಂಬ ಶಿವನ ಮಾತನ್ನು ಕೇಳಿ ಸಂತೋಷದಿಂದ ಸ್ವರ್ಗಕ್ಕೆ ಹೊರಟರೆಂದೂ ಹೇಳಲಾಯಿತು. ಅನಂತರ ಪುನಃ ಭೂಮಿಯು ಕ್ಷೋಭಗೊಂಡಿರುವದನ್ನು ನೋಡಿ ಹರನು ಕುರುಕ್ಷೇತ್ರದಲ್ಲಿ ಸಂಚರಿಸುತ್ತಾ ಅಲ್ಲಿ ತಪಸ್ಸು ಮಾಡುತ್ತಿದ್ದ ಶುಕ್ರನನ್ನು ನೋಡಿ ಇಂತಹ ತಪಸ್ಸನ್ನು ಏಕೆ ಮಾಡುತ್ತಿದ್ದೀಯೆ ಎಂದು ಪ್ರಶ್ನೆಮಾಡಲು ಶುಕ್ರನು ನಿನ್ನನ್ನು ಆರಾಧಿಸಿ ಸಂಜೀವಿನೀ ವಿದ್ಯೆಯನ್ನು ಹೊಂದಲು ತಪಸ್ಸುಮಾಡುತ್ತಿರುವೆನೆಂದು ಉತ್ತರವಿತ್ತನು. ಆಗ ಹರನು ಆ ವಿದ್ಯಾಸಿದ್ಧಿಯುಂಟಾಗಲೆಂದು ವರವನ್ನು ಕೊಟ್ಟನಂತರ ಅವನು ತಪಸ್ಸಿನಿಂದ ನಿವೃತ್ತನಾದನು. ಪುನಃ ಭೂಮಿಯು ಚಲಿಸುತ್ತಿರುವುದನ್ನು ನೋಡಿ ಹರನು ಸಪ್ತಸಾರಸ್ವತಕ್ಷೇತ್ರದಲ್ಲಿ ಸಂಚರಿಸುತ್ತಾ ಅಲ್ಲಿ ಉನ್ಮಾದದಿಂದ ನರ್ತನಮಾಡುತ್ತಿದ್ದ ಮಂಕಣನನ್ನು ನೋಡಿ ಅವನ ಉನ್ಮಾದವನ್ನು ಹೋಗಲಾಡಿಸಿ ಅವನಿಗೆ ಅಪೇಕ್ಷಿತವಾದ ವರವನ್ನೂ ಕೊಟ್ಟು ಅವನನ್ನು ಬ್ರಹ್ಮಲೋಕಕ್ಕೆ ಹೋಗುವಂತೆ ಅನುಗ್ರಹಿಸಿ ಪುನಃ ತಾನು ಮಂದರಗಿರಿಯನ್ನೇ ಹೊಂದಿ ಪಾರ್ವತಿಯೊಡನೆ ಸೇರಿದನು ಎಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ತ್ರಿಷಷ್ಟಿತಮೋಽಧ್ಯಾಯಃ

ನಾರದ ಉವಾಚ

ಗತೋಽಂಧಕಸ್ತು ಪಾತಾಲೇ ಕಿಮಚೇಷ್ಟತ ದಾನವಃ ।
ಶಂಕರೋ ಮಂದರಸ್ಥೋಽಪಿ ಯಚ್ಚಕಾರ ತದುಚ್ಯತಾಂ ॥ ೧ ॥

ಪುಲಸ್ತ್ಯ ಉವಾಚ

ಪಾತಾಲಸ್ಥೋಽಂಧಕೋ ಬ್ರಹ್ಮನ್ ಬಾಧ್ಯತೆ ಮದನಾಗ್ನಿನಾ ।
ಸಂತಪ್ತವಿಗ್ರಹಃ ಸರ್ವಾನ್ ದಾನವಾನಿದಮಬ್ರವೀತ್ ॥ ೨ ॥

ಸ ಮೇ ಸುಹೃತ್ಸ ಮೇ ಬಂಧುಃ ಸ ಭ್ರಾತಾ ಸ ಪಿತಾ ಮಮ ।
ಯಸ್ತಾಮದ್ರಿಸುತಾಂ ಶೀಘ್ರಂ ಮಮಾಂತಿಕಮುಪಾನಯೇತ್ ॥ ೩ ॥

ಏವಂ ಬ್ರುವತಿ ದೈತ್ಯೇಂದ್ರೇ ಅಂಧಕೆ ಮದನಾತುರೆ ।
ಮೇಘಗಂಭೀರನಿರ್ಘೋಷಂ ಪ್ರಹ್ಲಾದೋ ವಾಕ್ಯಮಬ್ರವೀತ್ ॥ ೪ ॥

ಅರವತ್ತಮೂರನೆಯ ಅಧ್ಯಾಯವು

೧-೪. ಅನಂತರ ನಾರದರು ಪಾತಾಲಕ್ಕೆ ಹೋಗಿ ಸೇರಿದ ಅಂಧಕನು ಆ ಮೇಲೆ ಏನುಮಾಡಿದನು. ಮಂದರಪರ್ವತವನ್ನು ಸೇರಿ ಶಂಕರನೂ ಏನು ಮಾಡಿದನೆಂದು ಪ್ರಶ್ನೆಮಾಡಲು ಅದಕ್ಕೆ ಉತ್ತರವಾಗಿ ಪುಲಸ್ತ್ಯರು ಹೇಳುತ್ತಾರೆ. ಬ್ರಾಹ್ಮಣೋತ್ತಮನೇ, ಪಾತಾಲವನ್ನು ಸೇರಿದ ಅಂಧಕನು ಮದನಾಗ್ನಿಯಿಂದ ಪೀಡಿತನಾಗಿ ಬಹಳ ಸಂತಪ್ತನಾಗಿ ಎಲ್ಲಾ ದಾನವರನ್ನೂ ಕುರಿತು, ಯಾರು ಆ ಪರ್ವತಪುತ್ರಿಯನ್ನು ಜಾಗ್ರತೆಯಾಗಿ ನನ್ನ ಸಮೀಪವನ್ನು ಸೇರಿಸುತ್ತಾರೋ ಅವರೇ ನನಗೆ ಸ್ನೇಹಿತರು, ಅವರೇ ನನಗೆ ಬಂಧುವು, ಅವರೇ ಭ್ರಾತೃವು ಮತ್ತು ಪಿತೃವು. ಹೀಗೆಂದು ಹೇಳುತ್ತ ಇರಲಾಗಿ ಸಮೀಪದಲ್ಲಿದ್ದ ಪ್ರಹ್ಲಾದನು ಮೇಘದಂತೆ ಗಂಭೀರವಾದ ಧ್ವನಿಯಿಂದ ಹೀಗೆ ಹೇಳಿದನು.

ಯೇಯಂ ಗಿರಿಸುತಾ ವೀರ ಸಾ ಮಾತಾ ಧರ್ಮತಸ್ತವ ।
ಪಿತಾ ತ್ರಿನಯನೋ ದೇವಃ ಶ್ರೂಯತಾಮತ್ರಕಾರಣಂ ॥ ೫ ॥

ತವ ಪಿತ್ರಾ ತ್ವಪುತ್ರೇಣ ಧರ್ಮನಿತ್ಯೇನ ದಾನವ ।
ಆರಾಧಿತೋ ಹರೋ ದೇವಃ ಪುತ್ರಾರ್ಥಾಯ ಪುರಾ ಕಿಲ ॥ ೬ ॥

ತಸ್ಮೈ ತ್ರಿಲೋಚನೇನಾಸೀದ್ದತ್ತೋಽಂಧೋಽಪ್ಯೇವ ದಾನವಃ ।
ಪುತ್ರಕಃ ಪುತ್ರಕಾಮಸ್ಯ ಪ್ರೋಕ್ತ್ವೇತ್ಥಂ ವಚನಂ ವಿಭೋ ॥ ೭ ॥

ನೇತ್ರತ್ರಯಂ ಹಿರಣ್ಯಾಕ್ಷ ಸನರ್ಮಸುತಯಾ ಮಮ ।
ಪಿಹಿತಂ ಯೋಗಸಂಸ್ಥಸ್ಯ ತತೋಽಧ್ವರ್ಮಭವತ್ತಮಃ ॥ ೮ ॥

ತಸ್ಮಾಚ್ಚ ತಮಸೋ ಜಾತೋ ಭೂತೋಽಸಿಲಘುನಸ್ವನಃ ।
ತದಿದಂ ಗೃಹ್ಯತಾಂ ದೈತ್ಯ ತವೌಪಯಿಕಮಾತ್ಮಜಂ ॥ ೯ ॥

ಯದಾತು ಲೋಕವಿದ್ವಿಷ್ಟಂ ಕರ್ಮಚಾಯಂ ಕರಿಷ್ಯತಿ ।
ತ್ರೈಲೋಕ್ಯಜನನೀಂ ಚಾಪಿ ತ್ವಭಿವಾಂಛಿಷ್ಯತೇಽಧಮಃ ॥ ೧೦ ॥

೫-೮. ಎಲೈ ವೀರನೇ, ಈ ಗಿರಿಸುತೆಯಾದ ಪಾರ್ವತಿಯು ಧರ್ಮದೃಷ್ಟಿಯಿಂದ ನಿನಗೆ ತಾಯಿಯಾಗಿರುವಳು. ತ್ರಿಲೋಚನನಾದ ರುದ್ರನು ನಿನಗೆ ತಂದೆಯಾಗಿರುವನು. ಇದಕ್ಕೆ ಕಾರಣವನ್ನು ಹೇಳುತ್ತೇನೆ ಕೇಳು. ನಿನ್ನ ತಂದೆಯಾದ ಹಿರಣ್ಯಾಕ್ಷನು ಧರ್ಮಿಷ್ಠನಾಗಿದ್ದರೂ ಅಪುತ್ರವಂತನಾಗಿದ್ದುದರಿಂದ ಪುತ್ರಪ್ರಾಪ್ತಿಗಾಗಿ ಪೂರ್ವದಲ್ಲಿ ತ್ರಿಲೋಚನನಾದ ಹರನನ್ನು ಆರಾಧಿಸಿದನು. ಆಗ ಹರನು ನಿನ್ನ ತಂದೆಗೆ ಅಂಧಕನಾದ ನಿನ್ನನ್ನೇ ಪುತ್ರನನ್ನಾಗಿ ಕೊಟ್ಟು ಪುತ್ರಕಾಮನಾದ ನಿನಗೆ ಇವನೇ ಪುತ್ರನಾಗಿರುವನು. ಎಲೈ ಹಿರಣ್ಯಾಕ್ಷನೇ ನನ್ನ ಮೂರು ನೇತ್ರಗಳನ್ನೂ ನಾನು ಯೋಗದಲ್ಲಿರುವ ಕಾಲದಲ್ಲಿ ಆಟಕ್ಕಾಗಿ ನನ್ನ ಪುತ್ರಿಯು ಮುಚ್ಚಿದಳು. ಆಗ ಅಂಧಕಾರವೇ ಮೇಲಕ್ಕೆ ಎದ್ದಿತು.

೯-೧೨. ಆ ಅಂಧಕಾರದಿಂದ ನೀಲಮೇಘದಂತಹ ಧ್ವನಿಯುಳ್ಳ ಇವನು ಹುಟ್ಟಿದನು. ದೈತ್ಯನೇ ನಿನಗೆ ಲಭ್ಯನಾದ ಈ ಮಗುವನ್ನು ತೆಗೆದುಕೊ. ಇವನು ಲೋಕಕ್ಕೆ ಅಹಿತವಾದ ಕೆಲಸಮಾಡಲು ಹೊರಟದ್ದೇ ಆದರೆ, ಲೋಕಮಾತೆಯನ್ನೂ ಅಪೇಕ್ಷಿಸಿದುದೇ ಆದರೆ, ಬ್ರಾಹ್ಮಣನನ್ನು ಆಕ್ಷೇಪಿಸಿ ತೊಂದರೆ ಕೊಡುವುದಾದರೂ

ಘಾತಯಿಷ್ಯತಿ ವಾ ವಿಪ್ರಂ ಯದಾ ಪ್ರಕ್ಷಿಪ್ಯೈಚಾಸುರ ।
ತದಾಸ್ಯ ಸ್ವಯಮೇವಾಹಂ ಕರಿಷ್ಯೆ ಕಾಯಶೋಷಣಂ ॥ ೧೧ ॥

ಏವಮುಕ್ತ್ವಾ ಗತಃ ಶಂಭುಃ ಸ್ವಸ್ಥಾನಂ ಮಂದರಾಚಲಂ ।
ತ್ವತ್ಪಿತಾಪಿ ಸಮಭ್ಯಾಗಾತ್ತ್ವಾಮಾದಾಯ ರಸಾತಲಂ ॥ ೧೨ ॥

ಏತೇನ ಕಾರಣೇನಾಂಬಾ ಶೈಲಜಾ ತವ ದಾನವ ।
ಸರ್ವಸ್ಯಾಪೀಹಜಗತೋ ಗುರುಃ ಶಂಭುಃ ಪಿತಾ ಧ್ರುವಂ ॥ ೧೩ ॥

ಭವಾನಪಿ ತಥಾಯುಕ್ತಃ ಶಾಸ್ತ್ರವೇತ್ತಾ ಗುಣಾದ್ಭುತಃ ।
ನೇದೃಶೇ ಪಾಪಸಂಕಲ್ಪೇ ಮತಿಂ ಕುರ್ಯಾದ್ಭವದ್ವಿಧಃ ॥ ೧೪ ॥

ತ್ರೈಲೋಕ್ಯಪ್ರಭುರವ್ಯಕ್ತೋ ಭವಃ ಸರ್ವೈರ್ನಮಸ್ಕೃತಃ ।
ಅಜೇಯಸ್ತಸ್ಯ ಭಾರ್ಯೇಯಂ ನತ್ವಮರ್ಹೋಽಸುರಾರ್ದನ ॥ ೧೫ ॥

ನಚಾಪಿ ಶಕ್ತಃ ಸಂಪ್ರಾಪ್ತುಂ ಶೈಲರಾಜಾತ್ಮಜಾಂ ಶುಭಾಂ ।
ಅಜಿತ್ವಾ ಸಗಣಂ ರುದ್ರಂ ಸಚ ಕಾಮೋಽಥದುರ್ಲಭಃ ॥ ೧೬ ॥

ಸರಿ ಆಗ ನಾನೇ ಇವನ ಕಾಯವನ್ನು ಶೋಷಿಸುತ್ತೇನೆ, ಎಂದು ಹೇಳಿ ಶಂಭುವು ಸ್ವಸ್ಥಾನವಾದ ಮಂದರಪರ್ವತಕ್ಕೆ ಹೊರಟುಹೋದನು ನಿನ್ನ ತಂದೆಯೂ ಸಹ ನಿನ್ನನ್ನೆತ್ತಿಕೊಂಡು ಪಾತಾಲಕ್ಕೆ ಬಂದು ಸೇರಿದನು.

೧೩-೧೬. ಈ ಕಾರಣದಿಂದಲೇ ಪಾರ್ವತಿಯು ನಿನಗೆ ತಾಯಿಯಾಗಿರುತ್ತಾಳೆ. ಈ ಜಗತ್ತಿಗೆಲ್ಲಾ ಗುರುವಾದ ಶಂಭುವೇ ತಂದೆ ಎಂಬುದು ನಿಶ್ಚಿತ. ನೀನೂ ಕೂಡ ಯುಕ್ತರೀತಿಯುಳ್ಳವನು. ಶಾಸ್ತ್ರವನ್ನೂ ತಿಳಿದವನು, ಬಹಳ ಗುಣಶಾಲಿ, ನಿನ್ನಂಥವರು ಈ ರೀತಿಯಾದ ಪಾಪಕಾರ್ಯದಲ್ಲಿ ಸಂಕಲ್ಪರೂಪವಾಗಿಯೂ ಬುದ್ಧಿಯನ್ನು ಮಾಡಲಾರರು. ತ್ರಿಲೋಕಪ್ರಭುವಾಗಿಯೂ, ಅವ್ಯಕ್ತಸ್ವರೂಪನಾಗಿಯೂ ಇರುವ ಶಂಭುವು ಎಲ್ಲಾರಿಂದಲೂ ನಮಸ್ಕರಿಸಲ್ಪಡತಕ್ಕವನು. ಅವನು ಅಜೇಯನಾದವನು ಅವನ ಪತ್ನಿಯೇ ಈ ಪಾರ್ವತಿ. ಆದುದರಿಂದ ನೀನು ಈ ಕಾರ್ಯಕ್ಕೆ ಅರ್ಹನಲ್ಲ. ಪ್ರಯತ್ನಮಾಡಿದರೂ ಆ ಶೈಲಪುತ್ರಿಯನ್ನು ಹೊಂದಲು ಶಕ್ತನೂ ಅಲ್ಲ. ಪ್ರಮಥ ಗಣಗಳಿಂದ ಕೂಡಿರುವ ಆ ರುದ್ರನನ್ನು ಜಯಿಸದೆ ಈ ಅಭಿಲಾಷೆಯು ನಿನ್ನಿಂದ ಹೊಂದಲು ಸಾಧ್ಯವೇ ಆಗುವುದಿಲ್ಲ.

ಯಸ್ತರೇತ್ಸಾಗರಂ ದೋರ್ಭ್ಯಾಂ ಪಾತಯೇದ್ಭುವಿ ಭಾಸ್ಕರಂ ।
ಮೇರುಮುತ್ಪಾಟಯೇದ್ವಾಪಿ ಸ ಜಯೇಚ್ಛೂಲಪಾಣಿನಂ ॥ ೧೭ ॥

ಉತಾಹೋಸ್ವಿದಿಮಾಂ ಶಕ್ತಃ ಕ್ರಿಯಾಂ ಕರ್ತುಂ ಮಹಾಬಲಃ ।
ನಚ ಶಕ್ಯೋ ಹರೋ ಜ್ಞಾತುಂ ಸತ್ಯಂ ಸತ್ಯಂ ಮಯೋದಿತಂ ॥ ೧೮ ॥

ಕಿಂ ತ್ವಯಾ ನ ಶ್ರುತಂ ದೈತ್ಯ ಯಥಾ ದಂಡೋ ಮಹಿಪತಿಃ ।
ಪರಸ್ತ್ರೀಕಾಮನಾವಮೂಢಃ ಸರಾಷ್ಟ್ರೋ ನಾಶಮಾಪ್ತವಾನ್ ॥ ೧೯ ॥

ಆಸೀದ್ದಂಡೋನಾಮ ನೃಪಃ ಪ್ರಭೂತಬಲವಾಹನಃ ।
ಸಚ ವವ್ರೇ ಮಹಾತೇಜಾಃ ಪೌರೋಹಿತ್ಯಾಯ ಭಾರ್ಗವಂ ॥ ೨೦ ॥

ಈಜೇ ಚ ವಿವಿಧೈರ್ಯಜ್ಞೈರ್ನೃಪತಿಃ ಶುಕ್ರಪಾಲಿತಃ ।
ಶುಕ್ರಸ್ಯಾಸೀಚ್ಚ ದುಹಿತಾ ಅರಜಾ ನಾಮ ನಾಮತಃ ॥ ೨೧ ॥

ಶುಕ್ರಃ ಕದಾಚಿದಗಮದ್ವೃಷಪರ್ವಾಣಮಾಸುರಂ ।
ತೇನಾರ್ಚಿತಶ್ಚಿರಂ ತತ್ರ ತಸ್ಥೌ ಭಾರ್ಗವಸತ್ತಮಃ ॥ ೨೨ ॥

೧೭-೨೦. ಯಾವನು ಸಮುದ್ರವನ್ನು ಬಾಹುಗಳಿಂದ ದಾಟಲು ಸಮರ್ಥನಾಗುವನೋ, ಯಾವನು ಸೂರ್ಯನನ್ನೂ ಭೂಮಿಗೆ ಕೆಡಹಲು ಸಮರ್ಥನಾಗುವನೋ ಯಾವನು ಮೇರುಪರ್ವತವನ್ನೂ ಕಿತ್ತೊಗೆಯಲು ಸಮರ್ಥನಾದಾನೋ ಅವನೇ ಶೂಲಪಾಣಿಯಾದ ರುದ್ರನನ್ನು ಜಯಿಸಿಯಾನು, ಇಂತಹ ಕಾರ್ಯಗಳನ್ನು ಮಾಡಲು ನೀನು ಬಲಶಾಲಿಯಾಗಿರುವೆಯಾ, ಹರನನ್ನು ಸರಿಯಾಗಿ ತಿಳಿಯುವ ಕಾರ್ಯವೂ ನಿನ್ನಿಂದಾಗಲಾರದು. ನಾನು ಹೇಳಿದುದೆಲ್ಲಾ ಸತ್ಯ ಸತ್ಯ ಇದರಲ್ಲಿ ಸಂದೇಹವಿಲ್ಲ. ಹಿಂದೆ ದಂಡನೆಂಬ ಧೊರೆಯು ಮೌಢ್ಯದಿಂದ ಪರಸ್ತ್ರೀಯಲ್ಲಿ ಕಾಮುಖನಾಗಿ ತನ್ನ ರಾಷ್ಟ್ರದೊಡನೆ ನಾಶಹೊಂದಿದುದನ್ನು ನೀನು ಕೇಳಿಲ್ಲವೇ. ದಂಡನೆಂದು ಪ್ರಸಿದ್ಧನಾದ ಒಬ್ಬ ಧೊರೆಯಿದ್ದನು. ಅವನು ಗಜಾಶ್ವಾದಿರಾಜೋಚಿತವಾದ ವಾಹನಗಳಿಂದ ಕೂಡಿ ವೈಭವದಿಂದಿದ್ದು ತನ್ನ ಪೌರೋಹಿತ್ಯಕ್ಕಾಗಿ ಭಾರ್ಗವನನ್ನು ಪ್ರಾರ್ಥಿಸಿದನು.

೨೧-೨೪. ಆ ಶುಕ್ರನಿಂದ ಸಹಕರಿಸಲ್ಪಟ್ಟು ಧೊರೆಯು ಅನೇಕ ಯಜ್ಞಯಾಗಾದಿಗಳನ್ನು ನೆರವೇರಿಸಿದನು. ಶುಕ್ರನಿಗೆ ಅರಜಾ ಎಂಬ ಮಗಳಿದ್ದಳು. ಶುಕ್ರನು ಒಂದಾನೊಂದು ಕಾಲದಲ್ಲಿ ಅಸುರನಾದ ವೃಷಪರ್ವನಲ್ಲಿಗೆ ಹೋದನು. ಅವನಿಂದ

ಅರಜಾಃ ಸ್ವಗೃಹೆ ವಹ್ನಿಂ ಶುಶ್ರೂಷಂತೀ ಮಹಾಸುರ ।
ಅತಿಷ್ಠತ ಸುಚಾರ್ವಙ್ಗೀ ತತೋಽಭ್ಯಾಗಾನ್ನರಾಧಿಪಃ ॥ ೨೩ ॥

ಸಪಪ್ರಚ್ಛ ಕ್ವ ಶುಕ್ರೋಽಸ್ತಿ ತಮೂಚುಃ ಪರಿಚಾರಿಕಾಃ ।
ಗತಃ ಸ ಭಗವಾನ್ ಶುಕ್ರೋ ಯಾಜನಾಯ ದನೋಽಸ್ಸುತಂ ॥ ೨೪ ॥

ಪಪ್ರಚ್ಛ ನೃಪತಿಃ ಕಾತು ತಿಷ್ಠತೆ ಭಾರ್ಗವಾಶ್ರಮೆ ।
ತಾಸ್ತಮೂಚುಃ ಗುರೋಃ ಪುತ್ರೀ ಸಂತಿಷ್ಠತ್ಯಜರಾ ನೃಪ ॥ ೨೫ ॥

ತಾಮಾಶ್ರಮೆ ಶುಕ್ರಸುತಾಂ ದ್ರಷ್ಟುಮಿಕ್ಷ್ವಾಕುನಂದನಃ ।
ಪ್ರವಿವೇಶ ಮಹಾಬಾಹುಃ ದದರ್ಶಾರಜಸಂ ತತಃ ॥ ೨೬ ॥

ತಾಂ ದೃಷ್ಟ್ವಾ ಕಾಮಸಂತಪ್ತಸ್ತತ್ಕ್ಷಣಾದೇವ ಪಾರ್ಥಿವಃ ।
ಸಂಜಾತೋಽಂಧಕದಂಡಶ್ಚ ಕೃತಾಂತಬಲಚೋದಿತಃ ॥ ೨೭ ॥

ವಿಸರ್ಜಯಾಮಾಸ ತದಾ ಭೃತ್ಯಾನ್ ಭ್ರಾತೄನ್ ಸುಹೃತ್ತಮಾನ್ ।
ಶುಕ್ರಶಿಷ್ಯಾನಪಿ ಬಲೀ ಏಕಾಕೀ ಪೃಷ್ಠ ಆವ್ರಜಿತ್ ॥ ೨೮ ॥

ಸತ್ಕರಿಸಲ್ಪಟ್ಟು ಬಹಳ ಕಾಲ ಅಲ್ಲಿಯೇ ನಿಂತನು. ಅವನ ಮಗಳಾದ ಅರಜಾ ಎಂಬ ಸುಂದರಿಯು ಅಗ್ನಿ ಶುಶ್ರೂಷೆಮಾಡುತ್ತಾ ಮನೆಯಲ್ಲಿಯೇ ಇದ್ದಳು. ಆಗ ಈ ಧೊರೆಯು ಅಲ್ಲಿಗೆ ಬಂದು ಶುಕ್ರನು ಎಲ್ಲಿದ್ದಾನೆ ಎಂದು ಕೇಳಲು ಅಲ್ಲಿದ್ದ ಪರಿಚಾರಕ ಸ್ತ್ರೀಯರು ಯಾಗ ಮಾಡಿಸಲು ದಾನವರಾಜನಲ್ಲಿ ಹೋಗಿದ್ದಾನೆಂದು ಹೇಳಿದರು.

೨೫-೨೮. ಆಗ ಧೊರೆಯು ಶುಕ್ರನ ಆಶ್ರಮದಲ್ಲಿ ಈಗ ಯಾರಿದ್ದಾರೆಂದು ಕೇಳಲು ಗುರುಪುತ್ರಿಯಾದ ಅಜರೆಯೇ ಇರುವಳೆಂದು ಆ ಸ್ತ್ರೀಯರು ಹೇಳಿದರು. ಆಗ ಆಶ್ರಮದಲ್ಲಿದ್ದ ಶುಕ್ರಸುತೆಯನ್ನು ನೋಡಲು ಧೀರನಾದ ಆ ಧೊರೆಯು ಒಳಗೆ ಪ್ರವೇಶಿಸಿ ಅವಳನ್ನು ನೋಡಿ ಕಾಮಪೀಡಿತನಾಗಿ ಯಮನ ಪಾಶಕ್ಕೆ ಗುರಿಯಾದನು. ಅನಂತರ ಆ ಧೊರೆಯು ತನ್ನ ಪರಾಕ್ರಮದಿಂದ ಅಲ್ಲಿದ್ದ ಶುಕ್ರಶಿಷ್ಯರನ್ನೂ ಭೃತ್ಯರನ್ನೂ ಭ್ರಾತೃಗಳನ್ನೂ ಸ್ನೇಹಿತರನ್ನೂ ಸಹ ಅಲ್ಲಿಂದ ಹೊರಡಿಸಿ ತಾನೊಬ್ಬನೇ ಆ ಅಜರೆಯನ್ನು ಹಿಡಿದು ನಿಂತನು.

ತಮಾಗತಂ ಶುಕ್ರಸುತಾ ಪ್ರತ್ಯುತ್ಥಾಯ ಯಶಸ್ವಿನೀ ।
ಪೂಜಯಾಮಾಸ ಸಂಹೃಷ್ಟಾ ಭ್ರಾತೃಭಾವೇನ ದಾನವ ॥ ೨೯ ॥

ತತಸ್ತಾಮಾಹ ನೃಪತಿಃ ಬಾಲೇ ಕಾಮಾಗ್ನಿತಾಪಿತಂ ।
ಮಾಂ ಸಮಾಹ್ಲಾದಯಸ್ವಾದ್ಯ ಸ್ವಪರಿಷ್ವಂಗವಾರಿಣಾ ॥ ೩೦ ॥

ಸಾಪಿ ಪ್ರಾಹ ನರಶ್ರೇಷ್ಠಂ ಸುವಿನೀತಾ ತಮಾಸುರಂ ।
ಪಿತಾ ಮಮ ಮಹಾಕ್ರೋಧೀ ತ್ರಿದಶಾನಪಿ ನಿರ್ದಹೇತ್ ॥ ೩೧ ॥

ಮೂಢಬುದ್ಧೇ ಭವಾನ್ ಭ್ರಾತಾ ಮಮಾಪಿ ಸ್ವಯಮಾಗತಃ ।
ಭಗಿನೀಧರ್ಮತಸ್ತೇಹಂ ಭವಾನ್ ಶಿಷ್ಯಃ ಪಿತುರ್ಮಮ ॥ ೩೨ ॥

ಸೋಽಬ್ರವೀದ್ಭೀರು ಮಾಂ ಶುಕ್ರಃ ಕಾಲೇನ ಪರಿಧಕ್ಷ್ಯತಿ ।
ಕಾಮಾಗ್ನಿರ್ನಿರ್ದಹತಿ ಮಾಂ ಅದ್ಯೈವ ತನುಮಧ್ಯಮೆ ॥ ೩೩ ॥

ಸಾ ಪ್ರಾಹ ದಂಡಂ ನೃಪತಿಂ ಮುಹೂರ್ತಂ ಪರಿಪಾಲಯ ।
ತಮೇವಯಾಚಸ್ವ ಗುರುಂ ಸ ತೆ ದಾಸ್ಯತ್ಯಸಂಶಯಂ ॥ ೩೪॥

೨೯-೩೨. ಹಾಗೆ ಬಂದ ಆ ದೊರೆಯನ್ನು ಯಶಸ್ವಿನಿಯಾದ ಶುಕ್ರಪುತ್ರಿಯು ಪ್ರತ್ಯುತ್ಥಾನಾದಿಗಳನ್ನುಮಾಡಿ ಸಂತುಷ್ಟಳಾಗಿ ಭ್ರಾತೃವೆಂಬ ಭಾವನೆಯಿಂದ ಪೂಜಿಸಿದಳು. ಆಗ ಅವಳನ್ನು ಕುರಿತು ದೊರೆಯು ಎಲೈ ಬಾಲೆಯೇ, ನಾನು ಕಾಮಾಗ್ನಿಯಿಂದ ಪೀಡಿತನಾಗಿರುವೆನು. ಇಂತಹ ನನ್ನನ್ನು ಆಲಿಂಗನವೆಂಬ ಜಲದಿಂದ ಆಹ್ಲಾದಪಡಿಸು ಎಂದನು. ಆಗ ಅಜರೆಯು ಆಸುರಸ್ವಭಾವದಿಂದ ಕೂಡಿರುವ ದೊರೆಯನ್ನು ಕುರಿತು ಮೂಢಬುದ್ಧಿಯೇ, ನೀನಾಗಿಯೇ ಇಲ್ಲಿಗೆ ಬಂದಿರುವುದರಿಂದ ಭ್ರಾತೃವಾಗಿದ್ದೀಯೆ. ನನ್ನ ತಂದೆಯು ಬಹಳ ಕೋಪಿಯಾದವನು, ಅವನು ದೇವತೆಗಳನ್ನೂ ಸಹ ಕೋಪದಿಂದ ಸುಟ್ಟುಬಿಟ್ಟಾನು, ಅವನಲ್ಲಿ ನೀನು ಅಪರಾಧಿಯಾಗಿ ಕೋಪಕ್ಕೆ ಗುರಿಯಾಗಬೇಡ, ಧರ್ಮದೃಷ್ಟಿಯಿಂದ ನೀನು ನನ್ನ ತಂದೆಗೆ ಶಿಷ್ಯನು, ನಾನು ನಿನಗೆ ತಂಗಿಯಾಗಬೇಕು.

೩೩-೩೪. ಆಗ ಆ ದೊರೆಯು ಎಲೈ ಭೀರುವೇ, ಶುಕ್ರನು ನನ್ನನ್ನು ಮುಂದೆ ದಹಿಸುವುದಿರಲಿ, ಕಾಮಾಗ್ನಿಯು ಈಗಲೇ ನನ್ನನ್ನು ದಹಿಸುತ್ತಿದೆಯಲ್ಲಾ ಎನ್ನಲು ಅಜರೆಯು ಹಾಗಿದ್ದಲ್ಲಿ ಮುಹೂರ್ತಕಾಲ ಸಹಿಸಿಕೋ, ಆ ಗುರುವನ್ನೇ ನೀನು

ದಂಡೋಽಬ್ರವೀತ್ಸುತನ್ವಂಗಿ ಕಾಲಕ್ಷೇಪೋ ನ ಮೇ ಕ್ಷಮಃ ।
ಹುತಾವಸರಕರ್ತೃತ್ವೇ ವಿಘ್ನಮಾಯಾತಿ ಸುಂದರಿ ॥ ೩೫ ॥

ತತೋಽಬ್ರವೀಚ್ಚ ವಿರಜಾ ನಾಹಂ ತ್ವಾಂ ಪಾರ್ಥಿವಾತ್ಮಜ ।
ದಾತುಂ ಶಕ್ತಾ ತಥಾತ್ಮಾನಮಸ್ವತಂತ್ರಾ ಹಿ ಯೋಷಿತಃ ॥ ೩೬ ॥

ಕಿಂವಾ ತೇ ಬಹುನೋಕ್ತೇನ ದ್ರಾಕ್ ತ್ವಂ ನಾಶಂ ನರಾಧಿಪ ।
ಗಚ್ಛಸ್ವ ಶುಕ್ರಶಾಪೇನ ಸಭೃತ್ಯಜ್ಞಾತಿಬಾಂಧವಃ ॥ ೩೭ ॥

ತತೋಽಬ್ರವೀನ್ನರಪತಿಃ ಸುತನು ಶೃಣು ಚೇಷ್ಟಿತಂ ।
ಚಿತ್ರಾಙ್ಗದಾಯಾ ಯದ್ವೃತ್ತಂ ಪುರಾ ದೇವಯುಗೇ ಶುಭೆ ॥ ೩೮ ॥

ವಿಶ್ವಕರ್ಮಸುತಾ ಸಾಧ್ವೀ ನಾಮ್ನಾ ಚಿತ್ರಾಙ್ಗದಾ ಭವತ್ ।
ರೂಪಯೌವನಸಂಪನ್ನಾ ಪದ್ಮಹೀನಾ ತು ಪದ್ಮಿನೀ ॥ ೩೯ ॥

ಯಾಚಿಸು, ಅವನೇ ನನ್ನನ್ನು ನಿನಗೆ ನಿಸ್ಸಂಶಯವಾಗಿಯೂ ಕೊಡುತ್ತಾನೆ ಎಂದಳು. ಆಗ ದಂಡನು ಎಲೈ ಕೃಶಾಂಗಿಯೇ, ನಾನು ಕಾಲವಿಲಂಬವನ್ನು ಸಹಿಸುವ ಸ್ಥಿತಿಯಲ್ಲಿಲ್ಲ, ಯಾಗವನ್ನು ಮುಗಿಸಿ ಬರುವ ಶುಕ್ರನೇ ಈ ಪ್ರದಾನದಲ್ಲಿ ಕರ್ತೃವಾದಲ್ಲಿ ಇದಕ್ಕೆ ವಿಘ್ನವೇ ಬಂದಂತಾದೀತು ಎಂದನು.

೩೬-೩೯. ಆಗ ಅರಜೆಯು ಎಲೈ ರಾಜಪುತ್ರನೇ, ನಾನಾಗಿಯೇ ನನ್ನನ್ನು ನಿನಗೆ ಕೊಡಲು ನಾನು ಸಮರ್ಥಳಾಗಿಲ್ಲ. ಸ್ತ್ರೀಯರಿಗೆ ಅಂತಹ ಸ್ವಾತಂತ್ರ್ಯವು ಇಲ್ಲವೇ ಇಲ್ಲ. ಹೆಚ್ಚಾಗಿ ಹೇಳಿ ಏನು ಪ್ರಯೋಜನ, ಎಲೈ ಧೊರೆಯೇ, ನೀನು ಈ ಅಕಾರ್ಯದಿಂದ ಶುಕ್ರಪಾಪಕ್ಕೆ ಗುರಿಯಾಗಿ ಜ್ಞಾತಿಬಾಂಧವಭೃತ್ಯರೊಡನೆ ನಾಶಹೊಂದು ತ್ತೀಯೆ ಎಂದಳು. ಆಗ ಧೊರೆಯು ಅವಳನ್ನು ಸಮಾಧಾನಪಡಿಸಲು ಮತ್ತೊಂದು ಪೂರ್ವವೃತ್ತಾಂತವನ್ನು ಉದಹರಿಸುತ್ತಾನೆ. ಶೋಭನಾಂಗಿಯೇ, ಕೇಳು ಪೂರ್ವ ಕಾಲದಲ್ಲಿ ದೇವಯುಗದಲ್ಲಿ ನಡೆದ ಚಿತ್ರಾಂಗದೆಯ ವೃತ್ತಾಂತವನ್ನು ಹೇಳುತ್ತೇನೆ. ವಿಶ್ವಕರ್ಮನಿಗೆ ಚಿತ್ರಾಂಗದೆ ಎಂಬ ಮಗಳಿದ್ದಳು. ಅವಳು ರೂಪಯೌವನಗಳಿಂದ ಕೂಡಿ ಪದ್ಮಹೀನವಾದ ಕಮಲಲತೆಯಂತೆಯೇ ಇದ್ದಳು.

ಸಾ ಕದಾಚಿನ್ಮಹಾರಣ್ಯಂ ಸಖೀಭಿಃ ಪರಿವಾರಿತಾ ।
ಜಗಾಮ ನಿಮಿಷಂ ನಾಮ ಸ್ನಾತುಂ ಕಮಲಲೋಚನಾ ॥ ೪೦ ॥

ಸಾ ಸ್ನಾತುಮವತೀರ್ಣಾ ಚ ಅಥಾಭ್ಯಾಗಾನ್ನರೇಶ್ವರಃ ।
ಸುದೇವತನಯೋ ಧೀಮಾನ್ಸುರಥೋ ನಾಮ ನಾಮತಃ ॥ ೪೧ ॥

ಸಂವೃತಾ ಸಾ ಸಖೀಃ ಪ್ರಾಹ ವಚನಂ ಸತ್ವಸಂಯುತಂ ।
ಅಸೌ ನರಾಧಿಪಸುತೋ ಮದನೇನ ಕದರ್ಥ್ಯತೇ ॥ ೪೨ ॥

ಯದರ್ಥೆ ಚಕ್ಷಮಂ ಮೇಽಸ್ಯ ಸ್ವಪ್ರದಾನಂ ಸುರೂಪಿಣಃ ।
ಸಖ್ಯಸ್ತಾಮಬ್ರುವನ್ ಬಾಲಾ ಅಪ್ರಗಲ್ಭಾಸಿ ಸುಂದರಿ ॥ ೪೩ ॥

ಅಸ್ವಾತಂತ್ರ್ಯಂ ತವಾಸ್ತೀಹ ಪ್ರದಾನೇ ಸ್ವಾತ್ಮನೋಽನಘೇ ।
ಪಿತಾ ತವಾಸ್ತಿ ಧರ್ಮಿಷ್ಠಃ ಸರ್ವಶಾಸ್ತ್ರವಿಶಾರದಃ ॥ ೪೪ ॥

ನ ತೇ ಯುಕ್ತಮಿಹಾತ್ಮಾನಂ ದಾತುಂ ನರಪತೇಃ ಸ್ವಯಂ ।
ಏತಸ್ಮಿನ್ನಂತರೇ ರಾಜಾ ಸುರಥಃ ಸತ್ಯಕಃ ಶುಭಃ ॥ ೪೫ ॥

೪೦-೪೪. ಆ ಚಿತ್ರಾಂಗದೆಯು ಸಖಿಗಳೊಡಗೂಡಿ ಒಂದಾನೊಂದುದಿನ ನಿಮಿಷವೆಂಬ ಮಹಾರಣ್ಯಕ್ಕೆ ಸ್ನಾನಕ್ಕಾಗಿ ಹೋದಳು. ಅವಳು ಸ್ನಾನಕ್ಕೆ ಇಳಿಯುವ ಕಾಲಕ್ಕೆ ಸರಿಯಾಗಿ ಸುದೇವನ ಪುತ್ರನಾದ ಸುರಥನೆಂಬ ಧೊರೆಯು ಅಲ್ಲಿಗೆ ಬಂದನು. ಆಗ ಆ ಚಿತ್ರಾಂಗದೆಯು ಸಖಿಗಳೊಡನೆ ರಹಸ್ಯವಾಗಿ ಸತ್ವಯುಕ್ತವಾದ ಈ ಮಾತ ನ್ನಾಡಿದಳು. ಈ ರಾಜಪುತ್ರನು ಮನ್ಮಥನಿಂದ ಪೀಡಿಸಲ್ಪಡುತ್ತಿರುವನು, ಸುರೂಪಿ ಯಾಗಿರುವ ಇವನಿಗಾಗಿ ನನ್ನನ್ನು ನಾನೇ ಪ್ರದಾನಮಾಡುವುದು ಉಚಿತವಾಗಿದೆ. ಆಗ ಸಖಿಗಳು ಅವಳನ್ನು ಕುರಿತು, ಎಲೈ ಸುಂದರಿಯೇ, ನೀನು ಉಚಿತಜ್ಞಳಾಗಿಲ್ಲ, ನಿನ್ನನ್ನು ಕೊಡುವ ವಿಷಯದಲ್ಲಿ ನಿನಗೆ ಸ್ವಾತಂತ್ರ್ಯವಿಲ್ಲ, ಧರ್ಮಿಷ್ಠನಾಗಿಯೂ, ಸರ್ವಶಾಸ್ತ್ರವಿಶಾರದನಾಗಿಯೂ ಇರುವ ನಿನ್ನ ತಂದೆ ಇದ್ದಾನೆ, ಆದುದರಿಂದ ಧೊರೆಗೆ ನಿನ್ನನ್ನು ನೀನೇ ದಾನಮಾಡಿಕೊಳ್ಳುವುದು ಯುಕ್ತವಲ್ಲ ಎಂದರು.

೪೫-೪೯. ಈ ಸಮಯಕ್ಕೆ ಸರಿಯಾಗಿ ಸತ್ಯಶೀಲನಾದ ಸುರಥನು ಅಲ್ಲಿಗೆ ಬಂದು ಕಾಮಶರಪೀಡಿತನಾಗಿ ಎಲೈ ಸುಂದರಿಯೇ, ಮತ್ತವಾದ ನಿನ್ನ ಕಣ್ಣು ಗಳಿಂದಲೇ ನನ್ನನ್ನು ಮೋಹಗೊಳಿಸುತ್ತಿದ್ದೀಯೆ. ನಿನ್ನ ಕಟಾಕ್ಷಶರವನ್ನೇ ಬಾಣ

ಸಮಭ್ಯೇತ್ಯಾಬ್ರವೀದೇನಾಂ ಕಂದರ್ಪಶರಪೀಡಿತಃ ।
ತ್ವಂ ಮುಗ್ಧೆ ಮೋಹಯಸಿ ಮಾಂದೃಷ್ಟ್ವೈವ ಮದಿರೇಕ್ಷಣೇ ॥ ೪೬ ॥

ತ್ವದ್ದೃಷ್ಟಿಶರಬಾಣೇನ ಸ್ಮರೇಣಾಭ್ಯೇತ್ಯ ತಾಡಿತಃ ।
ತನ್ಮಾಂ ಕುಚತಲೆ ತಲ್ಪೆ ಅಭಿಶಾಯಿತುಮರ್ಹಸಿ ॥ ೪೭ ॥

ನೋಚೇತ್ಪ್ರಧಕ್ಷ್ಯತೆ ಕಾಮೋ ಭೂಯೋ ಭೂಯೋತಿದರ್ಶನಾತ್ ।
ತತಃ ಸಾ ಚಾರುಸರ್ವಾಂಗೀ ರಾಜ್ಞೋರಾಜೀವಲೋಚನಾ ॥ ೪೮ ॥

ವಾರ್ಯಮಾಣಾ ಸಖೀಭಿಸ್ತು ಪ್ರಾದಾದಾತ್ಮಾನಮಾತ್ಮನಾ ।
ಏವಂ ಪುರಾ ತಯಾ ತನ್ವ್ಯಾ ಪರಿತ್ರಾತಃ ಸ ಭೂಪತಿಃ ॥ ೪೯ ॥

ತಸ್ಮಾತ್ತ್ವಮಪಿ ಸುಶ್ರೋಣಿ ಮಾಂ ಪರಿತ್ರಾತುಮರ್ಹಸಿ ।
ಅರಜಸ್ಕಾಬ್ರವೀದ್ದಂಡಂ ತಸ್ಯಾ ಯದ್ವೃತ್ತ*ಮುತ್ತಮಂ ॥ ೫೦ ॥

ಕಿಂ ತ್ವಯಾ ನಪರಿಜ್ಞಾತಂ ತಸ್ಮಾತ್ತತ್ ಕಥಯಾಮ್ಯಹಂ ।
ತದಾ ತಯಾ ತು ತನ್ವಜ್ಞ್ಯಾ ಸುರಥಸ್ಯ ಮಹೀಪತೇಃ ॥ ೫೧ ॥

ವನ್ನಾಗಿ ಹೊಂದಿರುವ ಮನ್ಮಥನಿಂದ ನಾನು ಬಹಳ ಪೀಡಿಸಲ್ಪಡುತ್ತಿರುವೆನು. ಆದುದರಿಂದ ಈ ನನ್ನನ್ನು ನಿನ್ನ ಕುಚಪ್ರದೇಶವೆಂಬ ಹಾಸಿಗೆಯಲ್ಲಿ ಮಲಗಿಸಿಕೊಂಡು ಉಪಚರಿಸಲು ನೀನು ಅರ್ಹಳಾಗಿದ್ದೀಯೆ, ಹಾಗಿಲ್ಲದಿದ್ದರೆ ಪುನಃ ಪುನಃ ನಿನ್ನ ದರ್ಶನ ದಿಂದ ಮನ್ಮಥನು ನನ್ನನ್ನು ದಹಿಸುವನು ಎಂದನು. ಆಗ ಸರ್ವಾಂಗಸುಂದರಿಯಾದ ಆ ಚಿತ್ರಾಂಗದೆಯು ದೊರೆಯ ದೈನ್ಯವನ್ನು ನೋಡಿ ಸಖಿಗಳಿಂದ ತಡೆಯಲ್ಪಟ್ಟರೂ ಸಹ ಅದನ್ನು ಲಕ್ಷಿಸದೆ ತನ್ನನ್ನು ತಾನಾಗಿಯೇ ದೊರೆಗೆ ದಾನಮಾಡಿಕೊಂಡಳು. ಹೀಗೆ ಆ ಚಿತ್ರಾಂಗದೆಯಿಂದ ಆ ದೊರೆಯು ರಕ್ಷಿಸಲ್ಪಟ್ಟನು. ಆದುದರಿಂದ ನೀನೂ ಸಹ ಈ ಅವಸ್ಥೆಯಲ್ಲಿರುವ ನನ್ನನ್ನು ಕಾಪಾಡಲು ಅರ್ಹಳಾಗಿರುತ್ತೀಯೆ ಎಂದು ದಂಡನು ಅರಜೆಯನ್ನು ಸಮಾಧಾನಪಡಿಸಲು ಪ್ರಯತ್ನಿಸಿದನು.

೫೦-೫೩. ಆಗ ಅರಜೆಯು ದಂಡನನ್ನು ಕುರಿತು ಆ ಚಿತ್ರಾಂಗದೆಯ ಮುಂದಿನ ವೃತ್ತಾಂತವು ನಿನಗೆ ತಿಳಿದಿಲ್ಲವೆಂದು ತೋರುತ್ತದೆ. ಅದನ್ನು ನಾನು ಹೇಳುತ್ತೇನೆ. ಆ ಚಿತ್ರಾಂಗದೆಯು ಸ್ವಾತಂತ್ರ್ಯವನ್ನು ವಹಿಸಿ ದೊರೆಯಾದ ಸುರಥ ನಿಗೆ ಆತ್ಮಪ್ರದಾನಮಾಡಿದುದರಿಂದಲೇ ಅವಳ ತಂದೆಯು ಅವಳಿಗೆ ಈ ರೀತಿ ಶಾಪ

---

* ಇಲ್ಲಿ ಉತ್ತರಂ ಎಂದು ಪಾಠವಿರಬೇಕೆಂದು ತೋರುತ್ತದೆ.

ಆತ್ಮಾ ಪ್ರದತ್ತಃ ಸ್ವಾತಂತ್ರ್ಯಾತ್ತತಸ್ತ್ವಾಮುಶಪತ್ಪಿತಾ ।
ಯಸ್ಮಾದ್ಧರ್ಮಂ ಪರಿತ್ಯಜ್ಯ ಸ್ತ್ರೀಭಾವಾನ್ಮಂದಚೇತಸೇ ॥ ೫೨ ॥

ಆತ್ಮಾ ಪ್ರದತ್ತಃ ತಸ್ಮಾದ್ಧಿ ನ ವಿವಾಹೋಭವಿಷ್ಯತಿ ।
ವಿವಾಹರಹಿತಾ ನೈವ ಸುಖಂ ಲಪ್ಸ್ಯಸಿ ಭರ್ತೃತಃ ॥ ೫೩ ॥

ನ ಚ ಪುತ್ರಫಲಂ ನೈವ ಪತಿನಾ ಯೋಗಮೇಷ್ಯಸಿ ।
ಉತ್ಸೃಷ್ಟಮಾತ್ರೇ ಶಾಪೇ ತು ಹ್ಯಪೋವಾಹ ಸರಸ್ವತೀ ॥ ೫೪ ॥

ಅಕೃತಾರ್ಥಂ ನರಪತಿಂ ಯೋಜನಾನಿ ತ್ರಯೋದಶ ।
ಅಪಕೃಷ್ಟೇ ನರಪತೌ ಸಾಪಿ ಮೋಹಮುಪಾಗತಾ ॥ ೫೫ ॥

ತತಸ್ತಾಃ ಸಿಷಿಚುಃ ಸರ್ವಾಃ ಸರಸ್ವತ್ಯಾ ಜಲೇನ ಹಿ ।
ಸಾ ಸಿಚ್ಯಮಾನಾ ಸುತರಾಂ ಶಿಶಿರೇಣಾಥ ವಾರಿಣಾ ॥ ೫೬ ॥

ಮೃತಕಲ್ಪಾ ಹತೋತ್ಸಾಹಾ ವಿಶ್ವಕರ್ಮಸುತಾ ಭವತ್ ।
ತಾಂ ಮೃತಾಮಿವ ವಿಜ್ಞಾಯ ಜಗ್ಮುಃ ಸಖ್ಯಃ ತ್ವರಾನ್ವಿತಾಃ ॥ ೫೭ ॥

ವಿತ್ತನು. ಯಾವ ಕಾರಣದಿಂದ ಧರ್ಮವನ್ನು ತಿರಸ್ಕರಿಸಿ ಸ್ತ್ರೀ ಸ್ವಭಾವ ಸುಲಭವಾದ ಚಾಪಲ್ಯದಿಂದ ಅಲ್ಪಮತಿಯಾದ ಧೊರೆಗೆ ಆತ್ಮಪ್ರದಾನಮಾಡಿದೆಯೋ ಆದುದರಿಂದ ನಿಮ್ಮಗಳ ಆ ವಿವಾಹವೇ ನಡೆಯುವುದಿಲ್ಲ. ವಿವಾಹವಿಲ್ಲದೆ ಪತಿಯಿಂದ ಯಾವ ಸುಖವನ್ನೂ ಹೊಂದಲಾರೆ. ಪುತ್ರಫಲವೇ ಆಗಲಿ ಪತಿಯ ಸಮಾಗಮವೇ ಆಗಲಿ ನಿನಗೆ ದೊರೆಯುವುದೇ ಇಲ್ಲ.

೫೪-೫೮. ಈ ಪ್ರಕಾರ ವಿಶ್ವಕರ್ಮನು ಶಾಪವನ್ನು ಕೊಟ್ಟ ಒಡನೆಯೇ ಕಾರ್ಯಸಿದ್ಧಿಯನ್ನೇ ಹೊಂದದ ಆ ಧೊರೆಯನ್ನು ಸರಸ್ವತೀ ನದಿಯು ಹದಿಮೂರು ಯೋಜನ ಪರ್ಯಂತ ದೂರಕ್ಕೆ ತಳ್ಳಿತು. ಹಾಗೆ ಆ ಧೊರೆಯು ದೂರಕ್ಕೆ ಒಯ್ಯಲ್ಪಟ್ಟ ಮೇಲೆ ಚಿತ್ರಾಂಗದೆಯು ವ್ಯಥೆಯಿಂದ ಮೂರ್ಛಿತಳಾದಳು. ಆಗ ಸಖಿಯರು ಸರಸ್ವತಿಯ ನೀರಿನಿಂದ ಸೇಚನೆಮಾಡಿ ಶೈತ್ಯೋಪಚಾರವನ್ನು ನಡೆಸಿದರು. ಆಗಲೂ ಆ ಚಿತ್ರಾಂಗದೆಯು ಉತ್ಸಾಹರಹಿತಳಾಗಿ ಮೃತಳಂತೆಯೇ ತೋರಿಬಂದಳು. ಆಗ

ಆಹರ್ತುಮಪರಾಃ ಕಾಷ್ಠಂ ವಹ್ನಿಮಾನೇತುಮಾಕುಲಾಃ ।
ಸಾ ಚ ತಾಸ್ವಪಿ ಸರ್ವಾಸು ಗತಾಸು ವನಮುತ್ತಮಂ ॥ ೫೮ ॥

ಸಂಜ್ಞಾಂ ಲೇಭೇ ಸುಚಾರ್ವಙ್ಗೀ ದಿಶಶ್ಚೇತ್ಯವಲೋಕ್ಯ ಚ ।
ಅಪಶ್ಯಂತೀ ನರಪತಿಂ ತಥಾ ಸ್ನಿಗ್ಧಂ ಸಖೀಜನಂ ॥ ೫೯ ॥

ನಿಪಪಾತ ಸರಸ್ವತ್ಯಾಂ ಪಯೋಭಿಸ್ತರಲೇಕ್ಷಣಾ ।
ತಾಂ ವೇಗಾತ್ಕಾಂಚನಾಕ್ಷೀ ತು ಮಹಾನದ್ಯಾಂ ನರೇಶ್ವರ ॥ ೬೦ ॥

ಗೋಮತ್ಯಾಂ ಚ ಪ್ರಚಿಕ್ಷೇಪ ತರಂಗಕುಟಿಲೇ ಜಲೇ ।
ತಯಾಪಿ ತಸ್ಯಾಃ ತದ್ಭಾವ್ಯಂ ವಿದಿತ್ವಾಥ ವಿಶಾಂ ಪತೇ ॥ ೬೧ ॥

ಮಹಾವನೇ ಪರಿಕ್ಷಿಪ್ತಾ ಸಿಹ್ಮವ್ಯಾಘ್ರಸಮಾಕುಲೇ ।
ಏವಂ ತಸ್ಯಾ ಸ್ವಯಂ ತತ್ರ ಯಾತ್ವವಸ್ಥಾ ಶ್ರುತಾ ಮಯಾ ॥ ೬೨ ॥

ಸಖಿಗಳು ಅವಳು ಮೃತಳಾಗಿರುವಳೆಂದೆ ತಿಳಿದು ತ್ವರೆಯಿಂದ ಕೆಲವರು ಸೌದೆಯನ್ನು ತರುವದಕ್ಕೂ, ಕೆಲವರು ಅಗ್ನಿಯನ್ನು ತರುವದಕ್ಕೂ ಹೋದರು. ಅವರೆಲ್ಲರೂ ವನ ಮಧ್ಯಕ್ಕೆ ಹೋದನಂತರ ಆ ಕೋಮಲಾಂಗಿಯು ಎಚ್ಚೆತ್ತು ಎಲ್ಲಾ ಕಡೆಯಲ್ಲಿಯೂ ನೋಡಿ ಧೊರೆಯನ್ನೂ ತನ್ನ ಪ್ರಿಯಸಖಿಯರನ್ನೂ ಕಾಣದೆ ದುಃಖದಿಂದ ಪ್ರವಾಹ ದಿಂದ ತುಂಬಿದ್ದ ಸರಸ್ವತೀ ನದಿಯಲ್ಲಿಯೇ ಬಿದ್ದಳು.

೬೦-೬೨. ಹಾಗೆ ಬಿದ್ದ ಅವಳನ್ನು ಕಾಂಚನಾಕ್ಷೀ ಎಂಬ ಸರಸ್ವತಿಯ ಪ್ರವಾಹವು ತರಂಗಗಳಿಂದ ಭೋರ್ಗರೆಯುತ್ತಿರುವ ಗೋಮತಿಯೆಂಬ ಮಹಾನದಿಯಲ್ಲಿ ತಳ್ಳಿತು. ಆ ಗೋಮತಿಯೂ ಸಹ ಅವಳ ಮುಂದಿನ ಭವಿತವ್ಯತೆಯನ್ನು ತಿಳಿದವಳಾದುದರಿಂದ ಸಿಂಹ ಹುಲಿ ಮುಂತಾದುವುಗಳಿಂದ ಭಯಂಕರವಾದ ಮಹಾವನದಲ್ಲಿ ತಳ್ಳಿದಳು. ಈ ರೀತಿ ಸ್ವಯಂಪ್ರದಾನದಲ್ಲಿ ಹೊರಟ ಆ ಚಿತ್ರಾಂಗದೆಯ ಅವಸ್ಥೆಯನ್ನು ನಾನು ಕೇಳಿದ್ದೇನೆ. ಆದುದರಿಂದ ನನ್ನ ಶೀಲರಕ್ಷಣೆಯಲ್ಲಿ ಜಾಗರೂಕಳಾಗಿ ಇರುವ ನಾನು ಸ್ವಯಂ ಆತ್ಮಪ್ರದಾನಮಾಡುವ ಸಾಹಸವನ್ನು ಕೈಗೊಳ್ಳುವುದಿಲ್ಲ

ತಸ್ಮಾನ್ನದಾಸ್ಯಾಮ್ಯಾತ್ಮಾನಂ ರಕ್ಷಂತೀ ಶೀಲಮುತ್ತಮಂ ।
ತಸ್ಯಾಸ್ತದ್ವಚನಂ ಶ್ರುತ್ವಾ ದಂಡಃ ಶಕ್ರಸಮೋಬಲೀ ।
ವಿಹಸ್ಯತ್ವರಜಾಂ ಪ್ರಾಹ ಸ್ವಾರ್ಥಮಂಗಕ್ಷಯಂಕರಂ । ॥ ೬೩ ॥

ದಂಡ ಉವಾಚ

ತಸ್ಯಾಯದುತ್ತರಂ ವೃತ್ತಂ ತತ್ಪಿತುಶ್ಚ ಕೃಶೋದರಿ ।
ಸುರಥಸ್ಯ ತಥಾ ರಾಜ್ಞಃ ತಚ್ಛ್ರೋತುಂ ಮತಿಮಾಪಧೇ ॥ ೬೪ ॥

ಯದಾ ಪ್ರಕೃಷ್ಟೇ ನೃಪತೌ ಪತಿತಾ ಸಾ ಮಹಾವನಂ ।
ತದಾ ಗಗನಸಂಚಾರೀ ದೃಷ್ಟವಾನ್ ಗುಹ್ಯಕೋಜನಃ ॥ ೬೫ ॥

ತತಃ ಸೋಭ್ಯೇತ್ಯ ತಾಂ ಬಾಲಾಂ ಪರಿಭಾಷ್ಯಪ್ರಯತ್ನತಃ ।
ಪ್ರಾಹಚಾಗಚ್ಛ ಸುಭಗೆ ನಯಾಮಿ ಸುರಥಂ ಪ್ರತಿ ॥ ೬೬ ॥

ಧ್ರುವಮೇಷ್ಯಸಿ ತೇನ ತ್ವಂ ಸಂಯೋಗಮಸಿತೇಕ್ಷಣೇ ।
ತಸ್ಮಾದ್ಗಚ್ಛಸ್ವ ಶೀಘ್ರಂ ತ್ವಂ ದ್ರಷ್ಟುಂ ಶ್ರೀಕಂಠಮೀಶ್ವರಂ ॥ ೬೭ ॥

ಎಂದಳು. ಅವಳ ಆ ಮಾತನ್ನು ಕೇಳಿದೊಡನೆ ಪರಾಕ್ರಮಶಾಲಿಯಾದ ದಂಡನು ನಗುತ್ತಾ ಅರಜೆಯನ್ನು ಕುರಿತು ಸ್ವಾರ್ಥಕ್ಕಾಗಿ ತನ್ನ ನಾಶಕ್ಕೇ ಕಾರಣವಾದ ಈ ಮಾತನ್ನು ಹೇಳತೊಡಗಿದನು.

೬೪-೬೭. ಅನಂತರ ಆ ಚಿತ್ರಾಂಗದೆಯ ವೃತ್ತಾಂತವೇನಾಯಿತು, ಅವಳ ತಂದೆಯ ಕಥೆಯೇನು, ರಾಜನಾದ ಸುರಥನ ಗತಿಯೂ ಸಹ ಏನಾಯಿತು ಎಂಬುದನ್ನು ಕೇಳಲು ಆ ದಂಡನು ಅಪೇಕ್ಷಿಸಿದ ಮೇಲೆ ಅರಜೆಯು ಹೇಳುತ್ತಾಳೆ. ದೊರೆಯು ದೂರಕ್ಕೆ ಒಯ್ಯಲ್ಪಟ್ಟದ್ದನ್ನೂ ಚಿತ್ರಾಂಗದೆಯು ಮಹಾವನದಲ್ಲಿ ಬಂದು ಬಿದ್ದುದನ್ನೂ ಗಗನ ಸಂಚಾರಿಯಾಗಿದ್ದ ಒಬ್ಬ ಗುಹ್ಯಕನು ನೋಡಿದನು. ಅವನು ಅವಳ ಸಮೀಪಕ್ಕೆ ಬಂದು ಪ್ರಯತ್ನದಿಂದ ಮಾತನಾಡಿಸಿ ನಾರೀಮಣಿಯೇ ಏಳು ಹೊರಡು ನಿನ್ನನ್ನು ಸುರಥನ ಸಮೀಪಕ್ಕೆ ಒಯ್ಯುತ್ತೇನೆ. ಶೋಭನಾಂಗಿಯೇ ನಿಜವಾಗಿಯೂ ನೀನು ಆ ದೊರೆಯೊಡನೆ ಸುಖಾಗಮನವನ್ನು ಹೊಂದುತ್ತೀಯೆ. ಆದುದರಿಂದ ಶ್ರೀಕಂಠೇಶ್ವರನನ್ನು ದರ್ಶನಮಾಡಲು ಇಲ್ಲಿಂದ ಜಾಗ್ರತೆಯಾಗಿ ಹೊರಡು.

ಇತ್ಯೇವಮುಕ್ತ್ವಾ ಸಾ ತೇನ ಗುಹ್ಯಕೇನ ಸುಲೋಚನಾ ।
ಶ್ರೀಕಂಠಮಾಗತಾ ತೂರ್ಣಂ ಕಾಲಿಂದ್ಯಾ ದಕ್ಷಿಣೋತ್ತರಂ ॥ ೬೮ ॥

ದೃಷ್ಟ್ವಾ ಮಹೇಶಂ ಶ್ರೀಕಂಠಂ ಸ್ನಾತ್ವಾ ರವಿಸುತಾಜಲೇ ।
ಅತಿಷ್ಠತ ಶಿರೋನಮ್ರಾ ಯಾವನ್ಮಧ್ಯೇ ಸ್ಥಿತೋ ರವಿಃ । ॥ ೬೯ ॥

ಅಥಾಜಗಾಮ ದೇವಸ್ಯ ಸ್ನಾನಂ ಕರ್ತುಂ ತಪೋಧನಃ ।
ಶುಭಃ ಪಾಶುಪತಾಚಾರ್ಯಃ ಸಾಮವೇದೀ ಋತುಧ್ವಜಃ ॥ ೭೦ ॥

ರುದತೀಮಿವ ಸ್ಥಿತಾಂ ತಾಮನಂಗಪರಿವರ್ಜಿತಾಂ ।
ತಾಂ ದೃಷ್ಟ್ವಾ ಸ ಮುನಿರ್ದಧ್ಯೌನ ಮಗಮತ್ಕೇಯಮಿತ್ಯಥ ॥ ೭೧ ॥

ಅಥ ಸಾ ತಮೃಷಿಂ ವಂದ್ಯ ಕೃತಾಂಜಲಿರುಪಸ್ಥಿತಾ ।
ತಾಂ ಪ್ರಾಹ ಪುತ್ರಿ ಕಸ್ಯಾಸಿ ಸುತಾ ಸುರಸುತೋಪಮಾ ॥ ೭೨ ॥

ಕಿಮರ್ಥಮಾಗತಾಸೀಹ ನಿರ್ಮನುಷ್ಯಮೃಗೇ ವನೇ ।
ತತಃ ಸಾ ಪ್ರಾಹ ತಮೃಷಿಂ ಯಾಥಾತಥ್ಯಂ ಕೃಶೋದರೀ ॥ ೭೩ ॥

೬೮-೭೧. ಹೀಗೆ ಆ ಗುಹ್ಯಕನಿಂದ ಹೇಳಲ್ಪಟ್ಟ ಚಿತ್ರಾಂಗದೆಯು ಕಾಲಿಂದೀ ನದಿಗೆ ದಕ್ಷಿಣೋತ್ತರವಾಗಿರುವ ಶ್ರೀಕಂಠ ದೇವಾಲಯಕ್ಕೆ ಜಾಗ್ರತೆಯಾಗಿ ಹೋಗಿ ಸೇರಿದಳು. ಅಲ್ಲಿ ಮಹೇಶ್ವರನಾದ ಶ್ರೀಕಂಠನನ್ನು ದರ್ಶನಮಾಡಿ ಕಾಲಿಂದೀ ನದಿಯಲ್ಲಿ ಸ್ನಾನಮಾಡಿ ತಲೆಯನ್ನು ಬಗ್ಗಿಸಿಕೊಂಡು ಮಧ್ಯಾಹ್ನಪರ್ಯಂತವೂ ನಮ್ರಳಾಗಿ ನಿಂತಿದ್ದಳು. ಆಗ ಆ ದೇವನಿಗೆ ಸ್ನಾನಮಾಡಿಸಲೋಸುಗ ಸಾಮವೇದಿ ಯಾಗಿಯೂ ತಪಸ್ವಿಯಾಗಿಯೂ ಇರುವ ಋತುಧ್ವಜನೆಂಬ ಪಾಶುಪತಾಚಾರ್ಯನು ಅಲ್ಲಿಗೆ ಬಂದನು. ಅಲ್ಲಿ ವಿಲಾಸ ರಹಿತಳಾಗಿ ಅಳುತ್ತಾ ನಿಂತಿರುವ ಯುವತಿಯಾದ ಆ ಚಿತ್ರಾಂಗದೆಯನ್ನು ನೋಡಿ ಇವಳು ಯಾರೆಂದು ತಿಳಿಯಲು ಧ್ಯಾನಾಸಕ್ತನಾದನು.

೭೨-೭೪. ಅನಂತರ ಚಿತ್ರಾಂಗದೆಯು ಆ ಋಷಿಗೆ ನಮಸ್ಕರಿಸಿ ಕೈಮುಗಿದು ಕೊಂಡು ನಿಂತಳು. ಆಗ ಆ ಋಷಿಯು ಮಗುವೇ ಅಪ್ಸರೆಯಂತೆ ಸುಂದರಿಯಾಗಿರುವ ನೀನು ಯಾರ ಮಗಳು, ಏತಕ್ಕಾಗಿ ನಿರ್ಮನುಷ್ಯವಾದ ಈ ಘೋರವಾದ ವನಕ್ಕೆ ಬಂದಿದ್ದೀಯೆ ಎಂದು ಕೇಳಲು ಚಿತ್ರಾಂಗದೆಯು ತನ್ನ ವೃತ್ತಾಂತವನ್ನೆಲ್ಲಾ ಆ ಋಷಿಗೆ ಸತ್ಯವಾಗಿ ಹೇಳಿದಳು. ಇದನ್ನು ಕೇಳಿ ಕುಪಿತನಾದ ಆ ಋಷಿಯು ವಿಶ್ವಕರ್ಮನಿಗೆ

ಶ್ರುತ್ವರ್ಷಿಃ ಕೋಪಮಗಮದಶಪಚ್ಛಿಲ್ಪಿನಾಂ ವರಂ ।
ಯಸ್ಮಾತ್ತ್ವಸ್ವನುಜಾತೇಯಂ ಪರದೇಯಾಪಿ ಪಾಪಿನಾ ॥ ೭೪ ॥

ಯೋಜಿತಾ ನೈವ ಪತಿನಾ ತಸ್ಮಾಚ್ಛಾಖಾಮೃಗೋಸ್ತುಸಃ ।
ಇತ್ಯುಕ್ತ್ವಾ ಸ ಮಹಾಭಾಗೋ ಭೂಯಃ ಸ್ನಾತ್ವಾ ವಿಧಾನತಃ ॥ ೭೫ ॥

ಉಪಾಸ್ಯ ಪಶ್ಚಿಮಾಂ ಸಂಧ್ಯಾಂ ಪೂಜಯಾಮಾಸ ಶಂಕರಂ ।
ಸಂಪೂಜ್ಯ ದೇವದೇವೇಶಂ ಯಥೋಕ್ತವಿಧಿನಾ ಹರಂ ॥ ೭೬ ॥

ಉವಾಚ ಗಮ್ಯತಾಂ ಸುಭ್ರೂಂ ರುದಂತೀಂ ಪತಿಲಾಲಸಾಂ ।
ಗಚ್ಛಸ್ವ ಸುಭಗೇ ದೇಶಂ ಸಪ್ತಗೋದಾವರಂ ಶುಭಂ ॥ ೭೭ ॥

*ತತ್ರೋಪಾಸ್ಯ ಮಹಾದೇವಂ ಮಹಾಂತಂ ಹಾಟಕೇಶ್ವರಂ ।
ತತ್ರಸ್ಥಿತಾಯಾ ರಂಭೋರು ಖ್ಯಾತಾ ವೇದವತೀ ಶುಭಾ ॥ ೭೮ ॥

ಈ ರೀತಿ ಶಾಪವನ್ನಿತ್ತನು. ಯಾವ ಕಾರಣದಿಂದ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಈ ಮಗಳನ್ನು ಮತ್ತೊಬ್ಬರಿಗೆ ಅವಶ್ಯಕೊಡಬೇಕಾಗಿದ್ದರೂ ಪತಿಯೊಡನೆ ಸೇರಿಸದಿರುವನೋ ಇದರಿಂದ ಆ ಪಾಪಿಯು ಕಪಿಯ ಜನ್ಮವನ್ನು ತಾಳಲಿ ಎಂದು,

೭೫-೮೧. ಮಹಾತ್ಮನಾದ ಆ ಮುನಿಯು ಹೀಗೆ ಶಾಪವನ್ನು ಕೊಟ್ಟು ಪುನಃ ಯಥಾವಿಧಿಯಾಗಿ ಸ್ನಾನಮಾಡಿ ಸಾಯಂಸಂಧ್ಯಾವಂದನವನ್ನು ನಡೆಸಿ ವಿಧಿಪೂರ್ವಕವಾಗಿ ಶಂಕರನನ್ನೂ ಪೂಜಿಸಿ ಹೊರಡಲುದ್ಯುಕ್ತನಾಗಿ ಪತಿಯ ಸಮಾಗಮಾಶೆಯಿಂದ ದೀನಳಾಗಿ ಅಳುತ್ತಿರುವ ಆ ಚಿತ್ರಾಂಗದೆಯನ್ನು ನೋಡಿ ಎಲೈ ನಾರೀಮಣಿಯೇ, ನೀನು ಇಲ್ಲಿಂದ ಸಪ್ತಗೋದಾರವವೆಂಬಕ್ಷೇತ್ರಕ್ಕೆ ಹೊರಡು, ಅಲ್ಲಿ ಹೋಗಿ ಮಹಾದೇವನಾದ ಹಾಟಕೇಶ್ವರನನ್ನು ಪೂಜಿಸುತ್ತಾ ಅಲ್ಲಿ ಇರು. ನೀನು ಅಲ್ಲಿರುವಾಗಲೇ ದೈತ್ಯನಾದ ಕಂದರಮಾಲಿಯ ಪುತ್ರಿಯಾದ ಸುಪ್ರಸಿದ್ಧಳಾಗಿರುವ ವೇದವತಿಯು ಅಲ್ಲಿಗೆ

---

* ಈ ಉಪಾಖ್ಯಾನದಲ್ಲಿ ವೇದವತಿಃ ದೇವವತೀ ಎಂಬ ಹೆಸರುಗಳಲ್ಲಿ ಮುದ್ರಣಪ್ರಮಾದದಿಂದ ಅಲ್ಲಲ್ಲಿ ಸಾಂಕರ್ಯವು ಮುದ್ರಿತಮೂಲಪುಸ್ತಕದಲ್ಲಿ ಕಂಡುಬರುತ್ತಿದೆ. ಇದರಲ್ಲಿ ಬಂದಿರುವ ಪಾತ್ರಗಳನ್ನು ವಾಚಕರು ಈರೀತಿ ನಿಶ್ಚಯಿಸಿಕೊಳ್ಳಬೇಕು. ವಿಶ್ವಕರ್ಮನಪುತ್ರಿಯಾದ ಚಿತ್ರಾಂಗದೆಯು ಮೊದಲನೆಯವಳು. ವಿಶ್ವಕರ್ಮನಿಗೆ ಶಾಪಬಂದಮೇಲೆ ಕಪಿರೂಪಿಯಾದ ಅವನಿಂದ ಒಯ್ಯಲ್ಪಟ್ಟ ಕಂದರಮಾಲಿ ಎಂಬ ದೈತ್ಯನ ಮಗಳಾದ ವೇದವತಿಯೇ ಎರಡನೆಯವಳು. ಗುಹ್ಯಕನ ಮಗಳೇ ದಮಯಂತಿ, ಇವಳು ಮೂರನೆಯವಳು. ಪರ್ಜನ್ಯನ ಮಗಳಾದ (ಘೃತಾಚಿಯಲ್ಲಿ ಹುಟ್ಟಿದವಳು) ದೇವವತಿಯೇ ನಾಲ್ಕನೆಯವಳು. (ಇವಳೇ ಇಂದ್ರದ್ಯುಮ್ನನಿಗೆ ಪತ್ನಿಯಾಗುತ್ತಾಳೆ.)

ಆಗಮಿಷ್ಯತಿ ದೈತ್ಯಸ್ಯ ಪುತ್ರೀ ಕಂದರಮಾಲಿನಃ ।
ತಥಾನ್ಯಾ ಗುಹ್ಯಕಸುತಾ ದಮಯಂತೀತಿ ವಿಶ್ರುತಾ ॥ ೭೯ ॥

ಅಂಜನಸ್ಯಾಪಿ ತತ್ರಾಪಿ ಸಮೇಷ್ಯತಿ ತಪಸ್ವಿನೀ ।
ತಥಾಪರಾ ದೇವವತೀ ಪರ್ಜನ್ಯದುಹಿತಾ ಶುಭಾ ॥ ೮೦ ॥

ಯದಾ ತಿಸ್ರಃ ಸಮೇಷ್ಯಂತಿ ಸಪ್ತಗೋದಾವರೆ ಜಲೆ ।
ಹಾಟಕಾಖ್ಯೆ ಮಹಾದೇವೇ ತದಾ ಸಂಯೋಗಮೇಷ್ಯಸಿ ॥ ೮೧ ॥

ಇತ್ಯೇವಮುಕ್ತಾ ಮುನಿನಾ ಬಾಲಾ ಚಿತ್ರಾಂಗದಾ ತದಾ ।
ಸಪ್ತಗೋದಾವರಂ ತೀರ್ಥಮಗಮತ್ತ್ವರಿತಾ ತತಃ ॥ ೮೨ ॥

ಸಂಪ್ರಾಪ್ಯ ತತ್ರ ದೇವೇಶಂ ಪೂಜಯಂತೀ ತ್ರಿಲೋಚನಂ ।
ಸಮಧ್ಯಾಸ್ತೆ ಶುಚಿಪರಾ ಫಲಮೂಲಾಶನಾಭವತ್ ॥ ೮೩ ॥

ಸಚರ್ಷಿಃ ಜ್ಞಾನಸಂಪನ್ನಃ ಶ್ರೀಕಂಠಾಯ ತತೋಲಿಖತ್ ।
ಶ್ಲೋಕಂ ತ್ವೇಕಂ ಮಹಾತ್ಮಾನಂ ತಸ್ಯಾಶ್ಚ ಪ್ರಿಯಕಾಮ್ಯಯಾ ॥ ೮೪ ॥

ಬರುವಳು. ಹಾಗೆಯೇ ಅಂಜನನೆಂಬ ಗುಹ್ಯಕನ ಪುತ್ರಿಯಾದ ದಮಯಂತಿಯೂ ಅಲ್ಲಿ ಬಂದು ಸೇರುವಳು. ಹಾಗೆಯೇ ಪರ್ಜನ್ಯನಪುತ್ರಿಯಾದ ದೇವವತಿಯೆಂಬ ಮತ್ತೊಬ್ಬ ಮಹಿಳೆಯೂ ಅಲ್ಲಿ ಬಂದು ಸೇರುವಳು. ಈ ಮೂರು ಸ್ತ್ರೀಯರೂ ಸಪ್ತಗೋದಾವರಕ್ಷೇತ್ರದ ಜಲದಲ್ಲಿ ಯಾವಾಗ ಸೇರುವರೋ ಆಗ ಆ ಹಾಟಕಾಖ್ಯನಾದ ಮಹಾದೇವನ ಸ್ಥಾನದಲ್ಲಿ ನೀನು ಪತಿಯೊಡನೆ ಸಂಯೋಗವನ್ನು ಹೊಂದುತ್ತೀಯೆ ಎಂದು ಹೇಳಿದನು.

೮೨-೮೬. ಆ ಋಷಿಯಿಂದ ಈ ಪ್ರಕಾರ ಹೇಳಲ್ಪಟ್ಟ ಚಿತ್ರಾಂಗದೆಯು ಸಪ್ತಗೋದಾವರಕ್ಷೇತ್ರಕ್ಕೆ ತ್ವರೆಯಿಂದ ಹೊರಟಳು. ಅಲ್ಲಿಗೆ ಹೋಗಿ ಅಲ್ಲಿರುವ ಶಂಕರನನ್ನು ಪೂಜಿಸುತ್ತಾ ಫಲಮೂಲಾಶನದಿಂದ ಶುಚಿವ್ರತಧಾರಿಣಿಯಾಗಿ ಅಲ್ಲಿ ನೆಲಸಿದ್ದಳು. ಜ್ಞಾನಿಯಾದ ಆ ಋಷಿಯು ಚಿತ್ರಾಂಗದೆಗೆ ಪ್ರಿಯವನ್ನು ಬಯಸಿ ಆ ಮಹಾತ್ಮನಾದ ಶ್ರೀಕಂಠೇಶ್ವರನಿಗೆ ಈ ಶ್ಲೋಕವನ್ನೂ ಬರೆದು ಕಳುಹಿಸಿದನು. ಈ ಮೃಗಾಕ್ಷಿಗೆ ಈಗ ಒದಗಿರುವ ಈ ದುಃಖವನ್ನು ತನ್ನ ಪರಾಕ್ರಮದಿಂದ ಯಾವನು

ನಸೋಽಸ್ತಿ ಕಶ್ಚಿತ್ರಿದಶೋಽಸುರೋವಾ
ಯಕ್ಷೋಽಥ ಮರ್ತ್ಯೋ ರಜನೀಚರೋ ವಾ ।
ಇದಂ ಹಿ ದುಃಖಂ ಮೃಗಶಾಬನೇತ್ರ್ಯಾ
ನಿರ್ಮಾಜಯೇದ್ಯಃ ಸ್ವಪರಾಕ್ರಮೇಣ ॥ ೮೫ ॥

ಇತ್ಯೇವಮುಕ್ತ್ವಾ ಸಮುನಿರ್ಜಗಾಮ
ದ್ರಷ್ಟುಂ ವಿಭುಂ ಪುಷ್ಕರನಾಥಮಾದ್ಯಂ ।
ನಂದೀಂ ಪಯೋಷ್ಣೀಂ ಮುನಿವೃಂದವಂದ್ಯಾಂ
ಸಂಚಿಂತಯನ್ನೇವ ವಿಶಾಲನೇತ್ರಾಂ ॥ ೮೬ ॥

ಇತಿ ಶ್ರೀ ವಾಮನಪುರಾಣೇ ಭೈರವಪ್ರಾದುರ್ಭಾವೇ
ದಂಡೋಪಾಖ್ಯಾನೇ ತ್ರಿಷಷ್ಟಿತಮೋಽಧ್ಯಾಯಃ

ಹೋಗಲಾಡಿಸುತ್ತಾನೆಯೋ ಅಂತಹ ದೇವತೆಯೇ ಆಗಲಿ, ರಾಕ್ಷಸನಾಗಲಿ, ಯಕ್ಷನಾಗಲಿ, ಮನುಷ್ಯನಾಗಲಿ ಯಾವನೂ ಇರುವಂತೆ ನನಗೆ ಕಂಡುಬಂದಿಲ್ಲ. ಈರೀತಿ ಶ್ಲೋಕದಿಂದ ತನ್ನ ದಯೆಯನ್ನು ಪ್ರಕಾಶಪಡಿಸಿ ಆ ಋಷಿಯು ಪುಷ್ಕರನಾಥನನ್ನು ಸೇವಿಸಲು ಮತ್ತು ನಂದೀ, ಪಯೋಷ್ಣೀ ನದಿಗಳನ್ನು ಸೇವಿಸುವುದಕ್ಕೂ ಸಹ ಚಿತ್ರಾಂಗದೆಯ ವೃತ್ತಾಂತವನ್ನು ಮನಸ್ಸಿನಲ್ಲೇ ಆಲೋಚಿಸುತ್ತಾ ಹೊರಟನು.

ಇಲ್ಲಿಗೆ ಶ್ರೀ ವಾಮನಪುರಾಣದ ಭೈರವಪ್ರಾದುರ್ಭಾವದಲ್ಲಿ ದಂಡೋಪಾಖ್ಯಾನದಲ್ಲಿ ಅರವತ್ತಮೂರನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಪಾತಾಲವನ್ನು ಸೇರಿದ ಅಂಧಕನ ವೃತ್ತಾಂತವೇನಾಯಿತು ಎಂಬ ನಾರದರ ಪ್ರಶ್ನೆಗೆ ಉತ್ತರವಾಗಿ ಪುಲಸ್ತ್ಯರು ಅಂಧಕನು ಪಾತಾಲದಲ್ಲಿದ್ದರೂ ಪಾರ್ವತಿಯ ಚಿಂತೆಯಿಂದ ದುಃಖಪಡುತ್ತಾ ತನ್ನ ಪ್ರಜೆಗಳಾದ ದಾನವರಲ್ಲಿ ದೈನ್ಯದಿಂದ ಆ ಪರ್ವತಪುತ್ರಿಯನ್ನು ನನಗೆ ಸಾಧಿಸಿಕೊಡುವವನೇ ಬಂಧುವೆಂದೂ ಗುರುವೆಂದೂ ಭ್ರಾತೃವೆಂದೂ ಬಹು ವಿಧವಾಗಿ ಉದ್ಘೋಷಿಸಲು ಸಮೀಪದಲ್ಲಿದ್ದ ಪ್ರಹ್ಲಾದನು ಅವನಿಗೆ ಅರ್ಥತತ್ವವನ್ನುಪದೇಶಿಸಿ ಪಾರ್ವತಿಯು ನಿನಗೆ ಧರ್ಮದೃಷ್ಟಿಯಿಂದ

ತಾಯಿಯಾಗಬೇಕೆಂದೂ ಶಿವನು ತಂದೆಯಾಗಬೇಕೆಂದೂ ಉಪದೇಶಿಸಿ ಅವಳ ವಿಷಯವಾದ ವ್ಯಾಮೋಹವು ನಿನಗೆ ಫಲಕಾರಿಯಾಗಿಯೂ ಆಗಲಾರದು. ಅನರ್ಥ ಹೇತುವಾಗಿಯೂ ಆದೀತು ಎಂದು ಹೇಳಿ ಇದಕ್ಕೆ ನಿದರ್ಶನವಾಗಿ ಇಕ್ಷ್ವಾಕುವಂಶದ ದಂಡನೆಂಬ ಧೊರೆಯು ಅರಜೆಯೆಂಬ ಶುಕ್ರಕನ್ಯೆಯ ವಿಷಯದಲ್ಲಿ ಪ್ರವೃತ್ತನಾಗಿ ಸರ್ವನಾಶಹೊಂದಿದನೆಂದೂ ಹೇಳಿ ಆ ಉಪಾಖ್ಯಾನವನ್ನು ಪ್ರಾರಂಭಿಸಿದನು. ಅನಂತರ ಅವಾಂತರಕಥಾರೂಪವಾಗಿ ಅರಜೆಗೂ ದಂಡನಿಗೂ ಆದ ಸಂವಾದದಲ್ಲಿ ಸ್ತ್ರೀ ಸ್ವಾತಂತ್ರ್ಯವನ್ನು ಒಪ್ಪದಿರುವ ಅರಜೆಯಿಂದ ದಂಡನು ತಿರಸ್ಕೃತನಾಗಲು ಚಿತ್ರಾಂಗದೆಯ ಉಪಾಖ್ಯಾನದಿಂದ ದಂಡನು ಸ್ತ್ರೀ ಸ್ವಾತಂತ್ರ್ಯವನ್ನೂ ಸಾಧಿಸಿದನು. ಅನಂತರ ಸ್ವಾತಂತ್ರ್ಯದಿಂದ ಆತ್ಮಪ್ರದಾನಮಾಡಿದ ಚಿತ್ರಾಂಗದೆಗೆ ಆದ ಅನರ್ಥವನ್ನು ವರ್ಣಿಸಿ ಅರಜೆಯು ಸ್ತ್ರೀಸ್ವಾತಂತ್ರ್ಯವನ್ನು ನಿರಾಕರಿಸಿದಳು. ಅನಂತರ ಚಿತ್ರಾಂಗದೆಯ ವೃತ್ತಾಂತವೇನಾಯಿತೆಂದು ದಂಡನ ಪ್ರಶ್ನೆಗೆ ಉತ್ತರವಾಗಿ ತಂದೆಯಾದ ವಿಶ್ವಕರ್ಮನನ್ನೂ ಲಕ್ಷಿಸದೆ .ಸ್ವಾತಂತ್ರ್ಯದಿಂದ ಸುರಥನೆಂಬ ಧೊರೆಗೆ ಆತ್ಮಪ್ರದಾನಮಾಡಿದುದರಿಂದ ಕೋಪಗೊಂಡ ತಂದೆಯು ಅವಳ ವಿವಾಹವಿಚ್ಛೇದವಾಗಲು ಶಪಿಸಿದನೆಂದೂ ಒಡನೆ ಸುರಥನು ಸರಸ್ವತೀನದಿಯಿಂದ ಬಹುದೂರ ಒಯ್ಯಲ್ಪಟ್ಟು ಅವರಿಗೆ ವಿಶ್ಲೇಷ ಉಂಟಾಯಿತೆಂದೂ ಈ ದುಃಖದಿಂದ ಮೂರ್ಛಿತಳಾದ ಚಿತ್ರಾಂಗದೆಯು ಎಚ್ಚರಗೊಂಡು ಧೊರೆಯನ್ನೂ, ಸಖೀಜನರನ್ನೂ ಸಮೀಪದಲ್ಲಿ ಕಾಣದೆ ಸರಸ್ವತಿನದಿಯಲ್ಲಿ ಬಿದ್ದಳೆಂದೂ ಹೇಳಲಾಯಿತು. ಆ ಸರಸ್ವತಿಯು ತನ್ನ ಪ್ರವಾಹದಿಂದ ಅವಳನ್ನು ಗೋಮತೀನದಿಗೆ ಸೇರಿಸಿತೆಂದೂ ಆ ಗೋಮತಿಯು ಅವಳನ್ನು ಘೋರವಾದ ಕಾಡಿಗೆ ಒಯ್ಯಿತೆಂದೂ ಹೇಳಲಾಯಿತು. ಆ ವನದಲ್ಲಿ ಗಗನಚಾರಿಯಾಗಿ ಬಂದ ಗುಹ್ಯಕನೊಬ್ಬನು ಚಿತ್ರಾಂಗದೆಯನ್ನು ನೋಡಿ ದಯೆಯಿಂದ ಸಮೀಪದಲ್ಲಿದ್ದ ಶ್ರೀಕಂಠದೇವಾಲಯಕ್ಕೆ ಹೋಗುವಂತೆ ಹೇಳಲು ಅಲ್ಲಿ ಹೋಗಿ ಕಾಲಿಂದೀನದಿಯಲ್ಲಿ ಸ್ನಾನಮಾಡಿ ನಿಯಮದಿಂದಿರುವ ಚಿತ್ರಾಂಗದೆಯನ್ನು ಅಲ್ಲಿಗೆ ಶಂಕರಾರ್ಚನೆಗಾಗಿ ಬಂದ ಋತಧ್ವಜನೆಂಬ ಪಾಶುಪತಮುನಿಯು ನೋಡಿ ಇವಳ.ವೃತ್ತಾಂತವನ್ನೆಲ್ಲಾ ಕೇಳಿ ಇವಳನ್ನು ಈ ರೀತಿಯಾದ ಕಷ್ಟಕ್ಕೆ ಒಳಪಡಿಸಿದ ವಿಶ್ವಕರ್ಮನಿಗೆ ಕಪಿಯಾಗುವಂತೆ ಶಪಿಸಿ ಇವಳನ್ನೂ ಸಪ್ತಗೋದಾವರಕ್ಷೇತ್ರಕ್ಕೆ ಹೋಗುವಂತೆಯೂ ಅಲ್ಲಿ ದೇವವತೀ, ದಮಯಂತೀ, ವೇದವತೀ ಎಂಬ ಮಹಿಳೆಯರು ಸೇರುತ್ತಾರೆಂದೂ ಅಲ್ಲಿ ನಿಯಮದಿಂದಿರುವ ನಿನಗೆ ಅಲ್ಲಿರುವ ಹಾಟಕೇಶ್ವರನ ಅನುಗ್ರಹದಿಂದ ಪತಿಸಮಾಗಮವಾಗುತ್ತದೆಯೆಂದೂ ಹೇಳಿ ತಾನು ಇವಳ ಚಿಂತೆಯಿಂದ ಪುಷ್ಕರನಾಥನ ಸೇವೆಗಾಗಿ ಹೊರಟು ಹೋದನೆಂದೂ ಅನಂತರ ಚಿತ್ರಾಂಗದೆಯು ಸಪ್ತಗೋದಾವರಕ್ಷೇತ್ರದಲ್ಲಿ ನಿಯಮಪರಳಾಗಿ ಇರುತ್ತಿದ್ದಳೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಚತುಃಷಷ್ಟಿತಮೋಽಧ್ಯಾಯಃ

ದಂಡ ಉವಾಚ

ಚಿತ್ರಾಂಗದಾಯಾಸ್ತ್ವರಜೆ ತತ್ರ ಸತ್ಯಾ ಯಥಾಸುಖಂ ।
ಸ್ಮರಂತ್ಯಾ ಸುರಥಂ ವೀರಂ ಮಹಾನ್ ಕಾಲಃ ಸಮಭ್ಯಗಾತ್ ॥ ೧ ॥

ವಿಶ್ವಕರ್ಮಾಪಿ ಮುನಿನಾ ಶಪ್ತೋ ವಾನರತಾಂ ಗತಃ ।
ನ್ಯಪತನ್ಮೇರುಶಿಖರಾದ್ಭೂಪೃಷ್ಠಂ ವಿಧಿಚೋದಿತಃ ॥ ೨ ॥

ವನಂ ಘೋರಂ ಸುಗುಲ್ಮಾಢ್ಯಂ ನದೀಂ ಶಾಲೂಕಿನೀಮನು ।
ಸತ್ವೇವಂ ಪರ್ವತಶ್ರೇಷ್ಠಂ ಸಮಾವಸತಿ ಸುಂದರಿ ॥ ೩ ॥

ತತ್ರಾಸತೋಽಸ್ಯ ಸುಚಿರಂ ಫಲಮೂಲಾನ್ಯಥಾಶ್ನತಃ ।
ಕಾಲೋತ್ಯಗಾದ್ವರಾರೋಹೆ ಬಹುವರ್ಷಗಣೋ ವನೇ ॥ ೪ ॥

ಅರವತ್ತನಾಲ್ಕನೆಯ ಅಧ್ಯಾಯವು

೧-೪. ದಂಡನು ಚಿತ್ರಾಂಗದೆಯ ಮುಂದಿನ ವೃತ್ತಾಂತವನ್ನು ಹೇಳುತ್ತಾನೆ. ಅರಜೆಯೇ, ಆ ಸಪ್ತಗೋದಾವರದಲ್ಲಿ ಚಿತ್ರಾಂಗದೆಯು ಶೂರನಾದ ಸುರಥನನ್ನು ಸ್ಮರಿಸುತ್ತಾ ಸುಖದಿಂದ ಬಹಳ ಕಾಲವನ್ನು ಕಳೆದಳು. ಮುನಿಯ ಶಾಪಕ್ಕೆ ಗುರಿಯಾದ ವಿಶ್ವಕರ್ಮನು ಇತ್ತ ವಾನರನಾಗಿ ಮೇರುಶಿಖರದಿಂದ ಭೂಮಿಗೆ ಬಿದ್ದನು. ಹಾಗೆ ಬಿದ್ದ ಅವನು ಶಾಲೂಕಿನೀನದೀ ತೀರದಲ್ಲಿರುವ ಪೊದರುಗಳಿಂದ ಕೂಡಿದ ಘೋರವಾದ ವನವನ್ನು ಹೊಂದಿ ಅಲ್ಲಿರುವ ಪರ್ವತದಲ್ಲಿ ವಾಸಮಾಡುತ್ತಿದ್ದನು. ಫಲಮೂಲಾದಿ ಭಕ್ಷಣದಿಂದ ಬಹುಕಾಲ ಅಲ್ಲೇ ವಾಸಿಸುತ್ತಿದ್ದ ಅವನು ಹಾಗೆಯೇ ಅನೇಕ ವರ್ಷಗಳನ್ನೂ ಕಳೆದನು.

ಏಕದಾ ದೈತ್ಯಶಾರ್ದೂಲಃ ಕಂದರಾಖ್ಯಃ ಸುತಾಂ ಪ್ರಿಯಾಂ ।
ಪ್ರತಿಗೃಹ್ಯ ಸಮಭ್ಯಾಗಾತ್ ಖ್ಯಾತಾಂ ವೇದವತೀಂ ದಿವಿ ॥ ೫ ॥

ತಾಂ ಚ ತದ್ವನಮಾಯಾತಾಂ ಸಮಂ ಪಿತ್ರಾ ವರಾನನಾಂ ।
ದದರ್ಶ ವಾನರಶ್ರೇಷ್ಠಃ ಪ್ರಜಗ್ರಾಹ ಬಲಾತ್ಕರೆ ॥ ೬ ॥

ತತೋ ಗೃಹೀತಾಂ ಕಪಿನಾ ಸದೈತ್ಯಃ ಸ್ವಸುತಾಂ ಶುಭೆ ।
ಕಂದರೋ ವೀಕ್ಷ್ಯ ಸಂಕ್ರುದ್ಧಃ ಖಡ್ಗಮುದ್ಯಮ್ಯ ಚಾದ್ರವತ್ ॥ ೭ ॥

ತಮಾಪತಂತಂ ದೈತ್ಯೇಂದ್ರಂ ದೃಷ್ಟ್ವಾ ಶಾಖಾಮೃಗೋ ಬಲೀ ।
ತಥೈವ ಸಹಚಾರ್ವಂಗ್ಯಾ ಹಿಮಾಚಲಮುಪಾಗಮತ್ ॥ ೮ ॥

ದದರ್ಶ ಚ ಮಹಾದೇವಂ ಶ್ರೀಕಂಠಂ ಯಮುನಾತಟೆ ।
ತಸ್ಯಾವಿದೂರೆ ಗಹನಮಾಶ್ರಮಂ ಋಷಿವರ್ಜಿತಂ ॥ ೯ ॥

ತಸ್ಮಿನ್ ಮಹಾಶ್ರಮೇ ಪುಣ್ಯೇ ಸ್ಥಾಪ್ಯ ವೇದವತೀಂ ಕಪಿಃ ।
ನ್ಯಮಜ್ಜತ ಸ ಕಾಲಿಂದ್ಯಾಂ ಪಶ್ಯತಃ ಕಂದರಸ್ಯ ಹಿ ॥ ೧೦ ॥

೫-೮. ಒಂದಾನೊಂದು ಕಾಲದಲ್ಲಿ ಕಂದರನೆಂಬ ದೈತ್ಯಶ್ರೇಷ್ಠನು ತನ್ನ ಮಗಳಾದ ವೇದವತಿಯೊಡನೆ ಆಕಾಶಮಾರ್ಗದಲ್ಲಿ ಅಲ್ಲಿಗೆ ಬಂದನು. ತಂದೆಯೊಡನೆ ಆ ವನಕ್ಕೆ ಬಂದ ವೇದವತಿಯನ್ನು ನೋಡಿ ಆ ಕಪಿಯು ಬಲಾತ್ಕಾರದಿಂದ ಅವಳ ಕೈಯ್ಯನ್ನು ಹಿಡಿದುಕೊಂಡಿತು. ಹಾಗೆ ಕಪಿಯಿಂದ ಹಿಡಿಯಲ್ಪಟ್ಟ ತನ್ನ ಮಗಳನ್ನು ನೋಡಿ ಕುಪಿತನಾದ ಆ ದೈತ್ಯನು ಖಡ್ಗಪಾಣಿಯಾಗಿ ಕಪಿಯನ್ನು ಎದುರಿಸಲು ಓಡಿ ಬಂದನು. ಹಾಗೆ ಬರುತ್ತಿರುವ ಆ ದೈತ್ಯನನ್ನು ನೋಡಿ ಬಲಶಾಲಿಯಾದ ಆ ಕಪಿಯು ಅವಳನ್ನೂ ಹೊತ್ತುಕೊಂಡು ಹಿಮಾಚಲಕ್ಕೆ ಓಡಿತು.

೯-೧೨. ಅಲ್ಲಿ ಯಮುನಾನದಿಯ ದಡದಲ್ಲಿ ಶ್ರೀಕಂಠದೇವನನ್ನು ನೋಡಿತು. ಆ ದೇವಾಲಯದ ಸಮೀಪದಲ್ಲಿಯೇ ಋಷಿರಹಿತವಾದ ಗೂಢವಾದ ಆಶ್ರಮವೊಂದಿದ್ದಿತು. ಆ ಆಶ್ರಮದಲ್ಲಿ ವೇದವತಿಯನ್ನು ಇಟ್ಟು ಆ ಕಪಿಯು ದೈತ್ಯನಾದ ಕಂದರನು ನೋಡುತ್ತಿರುವಾಗಲೇ ಕಾಲಿಂದಿಯ ನೀರಿನಲ್ಲಿ ಮುಳುಗಿತು. ಆಗ

ಸೋಽಜಾನತ ಮೃತಾಂ ಪುತ್ರೀಂ ಸಮಂ ಶಾಖಾಮೃಗೇಣ ಹಿ ।
ಜಗಾಮ ಚ ಮಹಾತೇಜಾಃ ಪಾತಾಲಂ ನಿಲಯಂ ನಿಜಂ ॥ ೧೧ ॥

ಸಚಾಪಿ ವಾನರೋ ದೇವ್ಯಾ ಕಾಲಿಂದ್ಯಾ ವೇಗತೋ ಭೃಶಂ ।
ನೀತಃ ಶಿವೇತಿವ್ಯಾಖ್ಯಾತಂ ದೇಶಂ ಸ್ಫೀತಜನಾಶ್ರಿತಂ ॥ ೧೨ ॥

ತತಃ ತೀರ್ತ್ವಾಽಥ ವೇಗೇನ ಸ ಕಾಪಿಲವನಂ ಪ್ರತಿ ।
ಗಂತುಕಾಮೋ ಮಹಾತೇಜಾ ಯತ್ರಾಸ್ಯಸ್ತಾ ಸುಲೋಚನಾ ॥ ೧೩ ॥

ಅಥಾಪಶ್ಯತ್ಸಮಾಯಾಂತಮಂಜನಂ ಗುಹ್ಯಕೋತ್ತಮಂ ।
ದಮಯಂತ್ಯಾ ಸಮಂ ಪುತ್ರ್ಯಾ ಗತ್ವಾ ಜಿಗಮಿಷುಃ ಕಪಿಃ ॥ ೧೪ ॥

ತಾಂ ದೃಷ್ಟ್ವಾಽಮನ್ಯತ ಶ್ರೀಮಾನ್ಸೇಯಂ ವೇದವತೀ ಧ್ರುವಂ ।
ತನ್ಮೇ ವೃಥಾ ಶ್ರಮೋ ಜಾತೋ ಜಲಮಜ್ಜನಸಂಭವಃ ॥ ೧೫ ॥

ಇತಿ ಸಂಚಿಂತಯನ್ನೇವ ಸಮಾದ್ರವತ ಸುಂದರಿ ।
ಸಾತದ್ಭಯಾಚ್ಚ ನ್ಯಪತನ್ನದೀಂ ಚೈವ ಹಿರಣ್ವತೀಂ ॥ ೧೬ ॥

ಕಂದರನು ಕಪಿಯೊಡನೆ ತನ್ನ ಮಗಳೂ ಸತ್ತುಹೋದಳೆಂದು ತಿಳಿದು ತನ್ನ ವಾಸ ಸ್ಥಾನವಾದ ಪಾತಾಲಕ್ಕೆ ಹೊರಟುಹೋದನು. ಕಾಲಿಂದಿಯಲ್ಲಿ ಮುಳುಗಿದ ಆ ಕಪಿಯೂ ಸಹ ನದಿಯ ವೇಗದಿಂದ ಶಿವವೆಂದು ಪ್ರಸಿದ್ಧಿಹೊಂದಿದ್ದ ಸಮೃದ್ಧವಾದ ದೇಶಕ್ಕೆ ಒಯ್ಯಲ್ಪಟ್ಟಿತು.

೧೩-೧೬. ಹಾಗೆ ನದಿಯನ್ನು ದಾಟಿ ಬಂದು ವೇದವತಿಯನ್ನು ತಾನು ಇಟ್ಟು ಬಂದ ಕಾಪಿಲವನಕ್ಕೆ ಹೋಗುತ್ತಿರುವಾಗ ಮಾರ್ಗದಲ್ಲಿಯೇ ಮಗಳಾದ ದಮಯಂತಿ ಯೊಡನೆ ಬರುತ್ತಿದ್ದ ಅಂಜನನೆಂಬ ಗುಹ್ಯಕನನ್ನು ನೋಡಿತು. ಮುಂದೆ ಹೋಗಲು ಇಚ್ಛೆಯಿಂದ ವೇಗವಾಗಿ ಹೋಗುತ್ತಿದ್ದ ಆ ಕಪಿಗೆ ದಮಯಂತಿಯನ್ನು ನೋಡಿದ ಒಡನೆಯೇ ಇವಳು ವೇದವತಿಯೇ ಸರಿ ಇವಳಿಗಾಗಿ ನಾನು ನೀರಿನಲ್ಲಿ ಮುಳುಗಿ ಶ್ರಮಪಟ್ಟದ್ದೆಲ್ಲಾ ವ್ಯರ್ಥವಾಯಿತು ಎಂದು ಆಲೋಚಿಸಿ ಆ ದಮಯಂತಿಯನ್ನು ಅಟ್ಟಿಸಿಕೊಂಡು ಹೋಯಿತು. ಆಗ ಅವಳು ಕಪಿಯಿಂದ ಭಯಪಟ್ಟು ಓಡಿಹೋಗಿ ಹಿರಣ್ವತೀನದಿಯಲ್ಲಿ ಬಿದ್ದಳು.

ಗುಹ್ಯಕೋ ವೀಕ್ಷ್ಯ ತನಯಾಂ ಪತಿತಾಮಾಪಗಾಜಲೆ ।
ದುಃಖಶೋಕಸಮಾಯುಕ್ತೋ ಜಗಾಮಾಂಜನಪರ್ವತಂ ॥ ೧೭ ॥

ತತ್ರಾಸೌ ತಪಆಸ್ಥಾಯ ಮೌನವ್ರತಧರಃ ಶುಚಿಃ ।
ಸಮಾಸ್ತೆ ವೈ ಮಹಾತೇಜಾಃ ಸಂವತ್ಸರಗಣಾನ್ಬಹೂನ್ ॥ ೧೮ ॥

ದಮಯನ್ತ್ಯಪಿ ವೇಗೇನ ಹಿರಣ್ವತ್ಯಾಪವಾಹಿತಾ ।
ನೀತಾ ದೇಶಂ ಮಹಾಪುಣ್ಯಂ ಕೋಸಲಂ ಸಾಧುಭಿರ್ಯುತಂ ॥ ೧೯ ॥

ಗಚ್ಛಂತೀ ಸಾ ಚಾರುದತೀ ದದೃಶೆ ವಟಪಾದಪಂ ।
ಪ್ರರೋಹ ಪ್ರಾವೃತತನುಂ ಜಟಾಧರಮಿವೇಶ್ವರಂ ॥ ೨೦ ॥

ತಂ ದೃಷ್ಟ್ವಾ ವಿಪುಲಚ್ಛಾಯಂ ವಿಶಶ್ರಾಮ ವರಾನನಾ ।
ಉಪವಿಷ್ಟಾ ಶಿಲಾಪಟ್ಟೆ ತತೋ ವಾಚಂ ಪ್ರಶುಶ್ರುವೆ ॥ ೨೧ ॥

ನಸೋಽಸ್ತಿ ಪುರುಷಃ ಕಶ್ಚಿದ್ಯಸ್ತಂ ಬ್ರೂಯಾತ್ತಪೋಧನಂ ।
ಯಥಾ ಸತನಯಸ್ತುಭ್ಯಮುದ್ಬದ್ಧೋವಟಪಾದಪೆ ॥ ೨೨ ॥

೧೭-೨೧. ಹಾಗೆ ನದಿಯ ನೀರಿನಲ್ಲಿ ಬಿದ್ದ ಮಗಳನ್ನು ನೋಡಿ ಗುಹ್ಯಕನು ದುಃಖಪಟ್ಟು ಅಂಜನಪರ್ವತಕ್ಕೆ ಹೊರಟುಹೋದನು. ಅಲ್ಲಿ ಆ ಗುಹ್ಯಕನು ಮೌನ ವ್ರತಧಾರಿಯಾಗಿ ಶುಚಿಯಾಗಿ ತಪಸ್ಸಿನಲ್ಲಿ ನಿರತನಾಗಿ ಅನೇಕ ವರ್ಷಗಳನ್ನು ಕಳೆದನು. ನೀರಿನಲ್ಲಿ ಬಿದ್ದ ದಮಯಂತಿಯು ಹಿರಣ್ವತೀನದಿಯಿಂದ ಒಯ್ಯಲ್ಪಟ್ಟು ಸಾಧುಗಳಿಂದ ಕೂಡಿ ಪುಣ್ಯಕರವಾಗಿರುವ ಕೋಸಲದೇಶಕ್ಕೆ ಒಯ್ಯಲ್ಪಟ್ಟಳು. ಅಲ್ಲಿಂದ ಮುಂದೆ ಹೋಗುತ್ತಾ ಬಿಳಲುಗಳಿಂದ ಆವರಿಸಲ್ಪಟ್ಟು ಜಟಾಧರನಾದ ಈಶ್ವರನಂತಿರುವ ಆಲದಮರವನ್ನು ನೋಡಿದಳು. ವಿಸ್ತಾರವಾದ ನೆರಳಿನಿಂದ ಕೂಡಿ ಆ ಮರವನ್ನು ನೋಡಿ ಕೆಳಗಿದ್ದ ಕಲ್ಲುಚಪ್ಪಡಿಯ ಮೇಲೆ ಕುಳಿತು ವಿಶ್ರಾಂತಿಸುಖವನ್ನನುಭವಿಸುತ್ತಾ ಈ ಮಾತನ್ನು ಕೇಳಿದಳು.

೨೨-೨೬. ಯಾವ ತಪಸ್ವಿಯ ಮಗನಾದ ನಾನು ಈ ವಟವೃಕ್ಷದಲ್ಲಿ ಬಿಗಿದು ಕಟ್ಟಲ್ಪಟ್ಟಿರುವನೋ ಆ ತಪಸ್ವಿಯನ್ನು ಕುರಿತು ನಿನ್ನ ಮಗನು ಇಲ್ಲಿ ಕಟ್ಟಲ್ಪಟ್ಟಿರು

ಸಾ ಶ್ರುತ್ವಾ ತಾಂ ತದಾವಾಣೀಂ ವಿಶಿಷ್ಟಾಕ್ಷರಸಂಯುತಾಂ ।
ತಿರ್ಯಗೂರ್ಧ್ವಮಧಶ್ಚೈವ ಸಮಂತಾದವಲೋಕಯತ್ ॥ ೨೩ ॥

ದದೃಶೆ ವೃಕ್ಷಶಿಖರೆ ಶಿಶುಂ ಪಂಚಾಬ್ದಿಕಂ ಸ್ಥಿತಂ ।
ಪಿಂಗಲಾಭಿರ್ಜಟಾಭಿಸ್ತು ಉದ್ಬದ್ಧಂ ಯತ್ನತಃ ಶುಭೆ ॥ ೨೪ ॥

ತಂ ವಿಬ್ರುವಂತಂ ದೃಷ್ಟ್ವೈವ ದಮಯಂತೀ ಸುದುಃಖಿತಾ ।
ಪ್ರಾಹ ಕೇನಾಸಿ ಬದ್ಧಸ್ತ್ವಂ ಪಾಪಿನಾ ವದ ಪೋತಕಃ ॥ ೨೫ ॥

ಸ ತಾಮಾಹ ಮಹಾಭಾಗೆ ಬದ್ಧೋಽಸ್ಮಿ ಕಪಿನಾ ವಟೆ ।
ಜಟಾಸ್ವೇವಂ ಸುದುಷ್ಟೇನ ಜೀವಾಮಿ ತಪಸೋ ಬಲಾತ್ ॥ ೨೬ ॥

ಪುರಾ ಮನುಪುರೆ ಚೈವ ತತ್ರ ದೇವೋ ಮಹೇಶ್ವರಃ ।
ತತ್ರಾಸ್ತಿ ತಪಸೋ ರಾಶಿಃ ಪಿತಾ ಮಮ ಋತಧ್ವಜಃ ॥ ೨೭ ॥

ತಸ್ಯಾಸ್ಮಿ ತಪ್ಯಮಾನಸ್ಯ ಮಹಾಯೋಗಾನ್ಮಹಾತ್ಮನಃ ।
ಜಾತೋಽಲಿವೃಂದಸಂಯುಕ್ತಃ ಸರ್ವಶಾಸ್ತ್ರವಿಶಾರದಃ ॥ ೨೮ ॥

ವನೆಂದು ಹೇಳುವವನು ಯಾವನೂ ಇಲ್ಲವೇ, ಈರೀತಿ ವಿಶೇಷಾರ್ಥವಾದ ಆ ವಾಣಿಯನ್ನು ಕೇಳಿ ದಮಯಂತಿಯು ಕೆಳಗೂ ಮೇಲೂ ಸುತ್ತಲೂ ನೋಡಿದಳು. ಆಗ ಆ ಮರದ ಮೇಲ್ಭಾಗದಲ್ಲಿ ಪಿಂಗಲವಾದ ಜಟೆಗಳಿಂದ ಪ್ರಯತ್ನಪೂರ್ವಕವಾಗಿ ಕಟ್ಟಲ್ಪಟ್ಟಿರುವ ಐದುವರ್ಷ ವಯಸ್ಸಿನ ಮಗುವನ್ನು ನೋಡಿದಳು. ಹಾಗೆ ಅರಚಿಕೊಳ್ಳುತ್ತಿರುವ ಆ ಮಗುವನ್ನು ನೋಡಿ ದುಃಖಿತಳಾದ ದಮಯಂತಿಯು ಮಗುವೇ ಯಾವ ಪಾಪಿಯು ನಿನ್ನನ್ನು ಹೀಗೆ ಕಟ್ಟಿರುವನು ಹೇಳು ಎಂದು ಕೇಳಿದಳು. ಎಲೈ ನಾರೀಮಣಿಯೇ, ದುಷ್ಟವಾದ ಆ ಕಪಿಯಿಂದ ಹೀಗೆ ಜಟೆಗಳಲ್ಲಿ ಬಿಗಿದು ಕಟ್ಟಲ್ಪಟ್ಟಿದ್ದೇನೆ, ಆದರೂ ನನ್ನ ತಪೋಮಹಿಮೆಯಿಂದ ಜೀವಿಸಿದ್ದೇನೆ ಎಂದನು.

೨೭-೨೮. ಪೂರ್ವದಲ್ಲಿ ಮನುಪುರದಲ್ಲಿ ಮಹೇಶ್ವರರೂಪನೇ ಆದ ತಪೋಮೂರ್ತಿಯಾದ ಋತಧ್ವಜನಿದ್ದನು. ಅವನೇ ನನ್ನ ತಂದೆಯು. ತಪಸ್ಸಿನಲ್ಲಿ ನಿರತನಾಗಿದ್ದ ಆ ಮಹಾತ್ಮನ ಯೋಗಮಹಿಮೆಯಿಂದ ನಾನು ಹುಟ್ಟಿದೆನು. ಹುಟ್ಟುವಾಗಲೇ ಭ್ರಮರಪಂಕ್ತಿಯಿಂದ ಕೂಡಿಯೂ ಸರ್ವಶಾಸ್ತ್ರವಿಶಾರದನಾಗಿಯೂ ಇದ್ದೆನು. ಆಗ ನನ್ನ ತಂದೆಯು ತಪಸ್ವಿಯಾದ ಜಾಬಾಲಿಯೇ ನಾನೆಂದು ತಿಳಿದು

ತತೋ ಮಾಮಬ್ರವೀತ್ತಾತೋ ನಮಸ್ಕೃತ್ಯ ಶುಭಾನನೆ ।
ಜಾಬಾಲೀತಿ ಪರಿಜ್ಞಾಯ ತಚ್ಛೃಣುಷ್ವ ಶುಭಾನನೆ ॥ ೨೯ ॥

ಪಂಚವರ್ಷಸಹಸ್ರಾಣಿ ಬಾಲಏವ ಭವಿಷ್ಯಸಿ ।
ದಶವರ್ಷಸಹಸ್ರಾಣಿ ಕುಮಾರತ್ವೆ ಭವಿಷ್ಯಸಿ ॥ ೩೦ ॥

ವಿಂಶತಿಯೌವನಸ್ಥಾಯಿಾ ಸ್ಥಾವಿರ್ಕ್ಯೆ ದ್ವಿಗುಣಂ ತತಃ ।
ಪಂಚವರ್ಷಶತಾನ್ಬಾಲೋ ಭೋಕ್ಷ್ಯಸೆ ಬಂಧನಂ ಧೃಢಂ । ॥ ೩೧ ॥

ದಶವರ್ಷಶತಾನ್ಯೇವ ಕೌಮಾರೆ ಕಾಯಪೀಡನಂ ।
ಯೌವನೆ ಪರಮಾ್ ಭೋಗಾ್ ದ್ವಿಸಹಸ್ರಸಮಾಸ್ತಥಾ ॥ ೩೨ ॥

ಚತ್ವಾರಿಂಶಚ್ಛತಾನ್ಯೇವ ವಾರ್ಧಕೆ ಕ್ಲೇಶಮುತ್ತಮಂ ।
ಅಪ್ಸ್ಯಸೆ ಭೂಮಿಶಯ್ಯಾಯಾಂ ಕದನ್ನಾಶನಭೋಜನಂ ॥ ೩೩ ॥

ಇತೀವಮುಕ್ತಃ ಪಿತ್ರಾಹಂ ಬಾಲಃ ಪಂಚಾಬ್ದದೇಶ್ಯಕಃ ।
ವಿಚರಾಮಿ ಮಹೀಪೃಷ್ಠಂ ಗಚ್ಛ್ ಸ್ನಾತುಂ ಹಿರಣ್ವತೀಂ ॥ ೩೪ ॥

ನಮಸ್ಕರಿಸಿ ಹೀಗೆ ಹೇಳಿದನು. ಅದನ್ನು ನಿನಗೆ ಹೇಳುತ್ತೇನೆ ಕೇಳು ಎಂದು ತನ್ನ ವೃತ್ತಾಂತವನ್ನು ಹೇಳಲಾರಂಭಿಸಿದನು.

೩೦-೩೪. ನೀನು ಐದುಸಾವಿರ ವರ್ಷಪರ್ಯಂತವೂ ಬಾಲಕನಾಗಿಯೇ ಇರುವೆ. ಆಮೇಲೆ ಹತ್ತುಸಾವಿರ ವರ್ಷಪರ್ಯಂತವೂ ಕುಮಾರನಾಗಿರುವೆ. ಇಪ್ಪತ್ತು ಸಾವಿರ ವರ್ಷ ಯೌವನದಲ್ಲಿರುವೆ. ಅದರ ಎರಡರಷ್ಟು ಕಾಲ ವೃದ್ಧಾಪ್ಯದಲ್ಲಿರುವೆ. ಬಾಲ್ಯದಲ್ಲಿ ಐದುನೂರು ವರ್ಷಪರ್ಯಂತ ದೃಢವಾದ ಬಂಧನವನ್ನು ಅನುಭವಿಸುತ್ತೀಯೆ. ಕೌಮಾರಾವಸ್ಥೆಯಲ್ಲಿ ಒಂದುಸಾವಿರ ವರ್ಷ ಕಾಯಪೀಡೆಯನ್ನು ಅನುಭವಿಸುತ್ತೀಯೆ. ಯೌವನಾವಸ್ಥೆಯಲ್ಲಿ ಎರಡುಸಾವಿರ ವರ್ಷಪರ್ಯಂತ ಉತ್ತಮವಾದ ಭೋಗಗಳನ್ನನುಭವಿಸುತ್ತೀಯೆ. ನಾಲ್ಕು ಸಾವಿರವರ್ಷ ವಾರ್ಧಕದಲ್ಲಿ ಬಹಳ ಕ್ಲೇಶವನ್ನನುಭವಿಸುತ್ತೀಯೆ. ಆಗ ನಿನಗೆ ಭೂಮಿಶಯನವೂ ಕುತ್ಸಿತಾನ್ನ ಭೋಜನವೂ ಉಂಟಾಗುತ್ತದೆ. ಈ ಪ್ರಕಾರ ಆ ತಂದೆಯಿಂದ ಹೇಳಲ್ಪಟ್ಟ ನಾನು ಐದು ವರ್ಷಕ್ಕೂ ಸ್ವಲ್ಪ ಚಿಕ್ಕವನಾಗಿರುವಾಗಲೇ ಭೂಮಿಯಲ್ಲಿ ಸಂಚರಿಸತೊಡಗಿದೆನು. ಒಂದಾನೊಂದು ಕಾಲದಲ್ಲಿ ಸ್ನಾನಮಾಡಲು ಹಿರಣ್ವತೀನದಿಗೆ ಹೊರಟೆನು.

ತತೋಽಪಶ್ಯಂ ಕಪಿವರಂ ಸೋಽವದನ್ಮಾಂ ಕ್ವಯಾಸ್ಯಸಿ ।
ಇಮಾಂ ವೇದವತೀಂಗೃಹ್ಯ ಮೂಢ ನ್ಯಸ್ತಾಂ ಮಹಾಶ್ರಮೇ ॥ ೩೫ ॥

ತತೋಽಸೌ ಮಾಂ ಸಮಾದಾಯ ವಿಸ್ಫುರಂತಂ ಶಿಶುಂ ತತಃ ।
ವಟಾಗ್ರೇಽಸ್ಮಿನ್ನುದ್ಬಬಂಧ ಜಟಾಭಿರಪಿ ಸುಂದರಿ ॥ ೩೬ ॥

ತಥಾ ಚ ರಕ್ಷಾ ಕಪಿನಾ ಕೃತಾ ಭೀರು ನಿರಂತರೈಃ ।
ಲತಾಪಾಶೈರ್ಮಹಾಯಂತ್ರಮಧ್ಯಸ್ಥಾ ದುಷ್ಟಬುದ್ಧಿನಾ ॥ ೩೭ ॥

ಅಭೇದ್ಯೋಽಯಮನಾಕ್ರಮ್ಯ ಉಪರಿಷ್ಟಾತ್ತಥಾಪ್ಯಧಃ ।
ದಿಶಾಂ ಮುಖೇಷು ಸರ್ವೇಷು ಕೃತಂ ಯಂತ್ರಂ ಲತಾಮಯಂ ॥ ೩೮ ॥

ಸಂಯಮ್ಯ ಮಾಂ ಕಪಿವರಃ ಪ್ರಯಾತೋಽಮರಪರ್ವತಂ ।
ಯಥೇಚ್ಛಯಾ ಮಯಾ ದೃಷ್ಟಮೇತತ್ತೆ ಗದಿತಂ ಶುಭೆ ॥ ೩೯ ॥

ಭವತೀ ಕಾ ಮಹಾರಣ್ಯೆ ಲಲನಾ ಪತಿವರ್ಜಿತಾ ।
ಸಮಾಯಾತಾ ಸುಚಾರ್ವಂಗೀ ಕೇನ ಕಾರ್ಯೇಣ ಮಾಂ ವದ ॥ ೪೦ ॥

೩೫-೩೭. ಹಾಗೆ ಹೋಗುತ್ತಿರುವಾಗಲೇ ಒಂದು ಮಹಾಕಪಿಯನ್ನು ಕಂಡೆನು. ಆ ಕಪಿಯು ಮೂಢ. ಆಶ್ರಮದಲ್ಲಿ ನನ್ನಿಂದ ಇಡಲ್ಪಟ್ಟಿದ್ದ ದೇವವತಿಯನ್ನು ಕರೆದುಕೊಂಡು ಎಲ್ಲಿ ಹೋಗುತ್ತೀಯೆ ಎಂದು ಗದರಿಸುತ್ತಾ ಶಿಶುವಾಗಿಯೇ ಇದ್ದ ನನ್ನನ್ನು ಈ ಆಲದ ಮರದ ಮೇಲ್ಭಾಗದಲ್ಲಿ ಬಿಳಲುಗಳಿಂದ ಕಟ್ಟಿದನು. ಇಲ್ಲಿ ದಟ್ಟವಾದ ಲತಾಪಾಶಗಳಿಂದ ಯಂತ್ರವನ್ನೇರ್ಪಡಿಸಿ ಆ ದುಷ್ಟಕಪಿಯು ಇತರರು ತೆಗೆಯದಂತೆ ರಕ್ಷಣೆಯನ್ನು ಮಾಡಿರುವನು.

೩೮-೪೧. ಈ ರಕ್ಷಾಯಂತ್ರವು ಮೇಲ್ಭಾಗದಲ್ಲಿರುವದ್ದರಿಂದ ಇತರರಿಗೆ ಅಭೇದ್ಯವಾಗಿಯೂ ಆಕ್ರಮಿಸಲಶಕ್ಯವಾಗಿಯೂ ನಾಶಪಡಿಸಲು ಅಸಾಧ್ಯವಾಗಿಯೂ ಇದೆ. ಎಲ್ಲಾ ದಿಙ್ಮುಖಗಳಲ್ಲಿಯೂ ಲತಾಮಯವಾದ ಯಂತ್ರಗಳಿಂದ ಭದ್ರಪಡಿಸಲ್ಪಟ್ಟಿದೆ. ಹೀಗೆ ನನ್ನನ್ನು ಇಲ್ಲಿ ಕಟ್ಟಿ ಆ ಕಪಿಯು ಹಿಮವತ್ಪರ್ವತಕ್ಕೆ ಹೊರಟುಹೋಯಿತು. ನನ್ನ ಇಚ್ಛೆಯಿಂದ ನೋಡಿ ತಿಳಿದುದನ್ನು ಈ ರೀತಿ ನಿನಗೆ ತಿಳಿಯ ಹೇಳಿದ್ದೇನೆ. ಅಮ್ಮಾ ನೀನು ಯಾರು, ಕೋಮಲಾಂಗಿಯಾದ ನೀನು ಪತಿಯಿಂದ ಅಗಲಿ ಈ ಮಹಾರಣ್ಯಕ್ಕೆ ಬರಲು ಕಾರಣವೇನು, ಯಾವ ಕಾರ್ಯಕ್ಕಾಗಿ ಬಂದೆ ನನಗೆ ಹೇಳು

ಶಾಸ್ತ್ರುದೀದಂಜನೋನಾಮ ಗುಹ್ಯಕೇಂದ್ರಃ ಪಿತಾ ಮಮ ।
ದಮಯಂತೀತಿ ಮೇ ನಾಮ ಪ್ರಮ್ಲೋಚಾಗರ್ಭಸಂಭವಾ ॥ ೪೧ ॥

ತತ್ರ ಮೇ ಜಾತಕೆ ಪ್ರೋಕ್ತಮೃಷಿಣಾ ಮುದ್ಗಲೇ ನ ಹಿ ।
ಇಯಂ ನರೇಂದ್ರಮಹಿಷೀ ಭವಿಷ್ಯತಿ ನ ಸಂಶಯಃ ॥ ೪೨ ॥

ತದ್ವಾಕ್ಯಸಮಕಾಲಂ ತು ನ್ಯನದದ್ದಿವಿ ದುಂದುಭಿಃ ।
ಶಿವಾಶ್ಚಾಶಿವನಿರ್ಘೋಷಾಃ ತತೋ ಭೂಯೋಬ್ರವೀನ್ಮುನಿಃ ॥ ೪೩ ॥

ನ ಸಂದೇಹೋ ನರಪತೇರ್ಮಹಾರಾಜ್ಞೀ ಭವಿಷ್ಯತಿ ।
ಮಹಾಂತಂ ಸಂಶಯಂ ಘೋರಂ ಕನ್ಯಾಭಾವೆ ಸಮೇಷ್ಯಸಿ ॥ ೪೪ ॥

ತತೋ ಜಗಾಮ ಸ ಋಷಿರೇವಮುಕ್ತ್ವಾ ವಚೋ ದ್ರುತಂ ।
ಪಿತಾ ಮಾಮಪಿ ಚಾದಾಯ ಸಮಾಗಂತುಮಥೈಚ್ಛತ ॥ ೪೫ ॥

ತೀರ್ಥಂ ತತೋ ಹಿರಣ್ವತ್ಯಾಸ್ತೀರಾತ್ಕಪಿರಥೋತ್ಪತತ್ ।
ತದ್ಭಯಾಚ್ಚ ಮಯಾಹ್ಯಾತ್ಮಾ ಕ್ಷಿಪ್ತಃ ಸಾಗರಗಾಜಲೆ ।
ತಯಾಸ್ಮಿ ದೇಶಮಾನೀತಾ ಇಮಂ ಮಾನುಷವರ್ಜಿತಂ ॥ ೪೬ ॥

ಎಂದು ಆ ಮಗುವು ಕೇಳಲಾಗಿ ಆ ದಮಯಂತಿಯು ಅಂಜನನೆಂಬ ಗುಹ್ಯಕ ಶ್ರೇಷ್ಠನು ನನ್ನ ತಂದೆ, ಪ್ರಮ್ಲೋಚಾ ಎಂಬುವಳು ನನ್ನ ತಾಯಿ, ನನ್ನ ಹೆಸರು ದಮಯಂತಿ ಎಂದು ಹೇಳಿ ತನ್ನ ಜಾತಕದ ವಿಚಾರವನ್ನೂ ಹೀಗೆ ಹೇಳಿದಳು.

೪೨-೪೬. ಮುದ್ಗಲನೆಂಬ ಒಬ್ಬ ಋಷಿಯು ನನ್ನ ಜಾತಕವನ್ನು ನೋಡಿ ಇವಳು ರಾಜಪತ್ನಿಯೇ ಆಗುತ್ತಾಳೆ ಇದರಲ್ಲಿ ಸಂದೇಹವಿಲ್ಲವೆಂದು ಹೇಳಿದನು. ಹಾಗೆ ಅವನು ಹೇಳುತ್ತಿರುವಾಗಲೇ ಆಕಾಶದಲ್ಲಿ ದುಂದುಭಿ ಧ್ವನಿಯಾಯಿತು. ನರಿಗಳೂ ಕೂಡ ಅಮಂಗಲಧ್ವನಿಯಿಂದ ಕೂಗಿದವು. ಆಗ ಪುನಃ ಮುದ್ಗಲನು, ಇವಳು ದೊರೆಗೆ ಪಟ್ಟಮಹಿಷಿಯಾಗುವುದರಲ್ಲಿ ಸಂದೇಹವಿಲ್ಲ. ಆದರೆ ಕನ್ಯಕಾವಸ್ಥೆಯಲ್ಲಿ ಕಷ್ಟಕ್ಕೆ ಗುರಿಯಾಗಿ ಪ್ರಾಣಸಂಶಯವನ್ನೇ ಹೊಂದುತ್ತಾಳೆ ಎಂದು ಹೇಳಿ ಜಾಗ್ರತೆಯಾಗಿ ಹೊರಟುಹೋದನು. ನನ್ನ ತಂದೆಯೂ ನನ್ನನ್ನು ಕರೆದುಕೊಂಡು ಸಂಚರಿಸಲು ಅಪೇಕ್ಷಿಸಿದನು. ಹಾಗೆ ಸಂಚರಿಸುತ್ತಾ ಹಿರಣ್ವತೀ ನದಿಯ ಸಮೀಪದಲ್ಲಿ ನಾವು ಬರುತ್ತಿರುವಾಗ ಆ ಕಪಿಯು ನನ್ನನ್ನು ಎದುರಿಸಲು ಓಡಿಬಂದಿತು. ನಾನು ಭಯದಿಂದ ನದಿಯ ಪ್ರವಾಹದಲ್ಲಿ ಹೋಗಿ ಬಿದ್ದೆನು. ಆ ನದಿಯ ಪ್ರವಾಹದಿಂದ ಒಯ್ಯಲ್ಪಟ್ಟ ನಾನು ನಿರ್ಮಾನುಷವಾದ ಈ ಪ್ರದೇಶಕ್ಕೆ ಒಯ್ಯಲ್ಪಟ್ಟೆನು.

ದಂಡ ಉವಾಚ

ಶ್ರುತ್ವಾ ಜಾಬಾಲಿರಥತದ್ವಚನಂ ವೈ ತಯೋದಿತಂ ।
ಪ್ರಾಹ ಸುಂದರಿ ಗಚ್ಛಸ್ವ ಶ್ರೀಕಂಠಂ ಯಮುನಾತಟೆ ॥ ೪೭ ॥

ತತ್ರಾಗಚ್ಛತಿ ಮಧ್ಯಾಹ್ನೆ ಮತ್ಪಿತಾ ಶಿವಮರ್ಚಿತುಂ
ತಸ್ಮೈ ನಿವೇದಯಾಶು ತ್ವಂ ತತಃ ಶ್ರೇಯೋಽಭಿಲಪ್ಸ್ಯಸೆ ॥ ೪೮ ॥

ತತಸ್ತು ತ್ವರಿತಾ ಕಾಲೇ ದಮಯಂತೀ ತಪೋನಿಧಿಂ ।
ಪರಿತ್ರಾಣಾರ್ಥಮಗಮದ್ಧಿಮಾದ್ರೌ ಯಮುನಾಂ ನದೀಂ ॥ ೪೯ ॥

ಸಾತ್ವದೀರ್ಘೇಣ ಕಾಲೇನ ಕಂದಮೂಲಫಲಾಶನಾ ।
ಸಂಪ್ರಾಪ್ತಾ ಶಂಕರಸ್ಥಾನಂ ಯತ್ರಾಗಚ್ಛತಿ ತಾಪಸಃ ॥ ೫೦ ॥

ತತಃ ಸಾ ದೇವದೇವೇಶಂ ಶ್ರೀಕಂಠಂ ಲೋಕವಂದಿತಂ ।
ಪ್ರತಿವಂದ್ಯ ತತೋಽಪಶ್ಯದಕ್ಷರಾಣಿ ಮಹಾಮುನೆ ॥ ೫೧ ॥

ತೇಷಾಮರ್ಥಂ ಹಿ ವಿಜ್ಞಾಯ ಸಾ ತದಾ ಚಾರುಹಾಸಿನೀ ।
ಚಾಪಮಾಲ್ಯುದಿತಂ ಶ್ಲೋಕಮಲಿಖಚ್ಚಾನ್ಯಮಾತ್ಮನಃ ॥ ೫೨ ॥

೪೭-೫೦. ದಂಡನು ಹೇಳುತ್ತಾನೆ. ದಮಯಂತಿಯಿಂದ ಹೇಳಲ್ಪಟ್ಟ ಆ ಮಾತನ್ನೆಲ್ಲಾ ಕೇಳಿ ಜಾಬಾಲಿಯು ಎಲೈ ಸುಂದರಿಯೇ, ಯಮುನಾ ದಡದಲ್ಲಿರುವ ಶ್ರೀಕಂಠಕ್ಷೇತ್ರಕ್ಕೆ ನೀನು ಜಾಗ್ರತೆಯಾಗಿ ತೆರಳು. ಅಲ್ಲಿ ಮಧ್ಯಾಹ್ನದ ಸಮಯಕ್ಕೆ ಸರಿಯಾಗಿ ಶಂಕರನನ್ನು ಆರಾಧಿಸಲು ನನ್ನ ತಂದೆಯು ಬರುತ್ತಾನೆ. ಅವನಿಗೆ ಈ ವಿಚಾರವನ್ನೆಲ್ಲಾ ನೀನು ಜಾಗ್ರತೆಯಾಗಿ ತಿಳಿಸು. ನಿನಗೂ ಇದರಿಂದ ಶ್ರೇಯಸ್ಸು ಉಂಟಾಗುತ್ತದೆ ಎಂದನು. ಆಗ ದಮಯಂತಿಯು ಅವನ ಮಾತಿನಂತೆ ಆ ಜಾಬಾಲಿಯ ಮತ್ತು ತನ್ನ ರಕ್ಷಣೆಗಾಗಿ ಹಿಮವತ್ಪರ್ವತದಲ್ಲಿರುವ ಯಮುನಾ ತೀರಕ್ಕೆ ತ್ವರೆಯಿಂದ ಹೊರಟಳು. ಹಾಗೆ ಹೊರಟು ಮಾರ್ಗದಲ್ಲಿ ಕಂದಮೂಲಗಳ ಆಹಾರದಿಂದ ಆ ತಾಪಸನು ಬರುವ ಶಂಕರನ ಸ್ಥಾನಕ್ಕೆ ಸ್ವಲ್ಪಕಾಲದಲ್ಲೇ ಹೋಗಿ ಸೇರಿದಳು.

೫೧-೫೩. ಅಲ್ಲಿ ಆ ದಮಯಂತಿಯು ಲೋಕವಂದ್ಯನಾದ ಶ್ರೀಕಂಠನನ್ನು ನಮಸ್ಕರಿಸಿ ಅಲ್ಲಿ ಋತಧ್ವಜನಿಂದ ಬರೆಯಲ್ಪಟ್ಟಿದ್ದ ಶ್ಲೋಕವನ್ನು ಅಕ್ಷರಶಃ ನಿರೀಕ್ಷಿಸಿದಳು. ಆ ಶ್ಲೋಕಾರ್ಥವನ್ನು ತಿಳಿದುಕೊಂಡು ಜಾಬಾಲಿಯಿಂದ ಹೇಳಲ್ಪಟ್ಟಿದ್ದ ಮತ್ತು ತನ್ನ ವಿಷಯವಾದ ಶ್ಲೋಕವನ್ನೂ ಸಹ ಅಲ್ಲಿ ಬರೆದಳು. ಮುದ್ಗಲನಿಂದ ರಾಜಪತ್ನಿ

ಮುಖೇನಾಸ್ಮಿ ಗದಿತಾ ರಾಜಪತ್ನೀ ಭವಿಷ್ಯತಿ ।
ಸಾ ಭಾವಸ್ಥಾಮಿಮಾಂ ಪ್ರಾಪ್ತಾ ಕಶ್ಚಿನ್ಮಾಂ ತ್ರಾತುಮೀಶ್ವರಃ ॥ ೫೩ ॥

ಇತ್ಯುಲ್ಲಿಖ್ಯ ಶಿಲಾಪಟ್ಟೇ ಗತಾ ಸ್ನಾತುಂ ಯಮುನಾನುಜಾಂ ।
ದದೃಶೇ ಚಾಶ್ರಮವರಂ ಮತ್ತಕೋಕಿಲನಾದಿತಂ ॥ ೫೪ ॥

ಅತೋ ಮಧ್ಯಮಸಾವೃಷಿಸೂನಂ ತಿಷ್ಠತಿಸತ್ತಮಃ ।
ಇತ್ಯೇವಂ ಚಿಂತಯಂತೀ ಸಾ ಸಂಪ್ರವಿಷ್ಟಾ ಮಹಾಶ್ರಮಂ ॥ ೫೫ ॥

ತತೋ ದದರ್ಶ ದೇವಾನಾಂ ಸ್ಥಿತಾಂ ವೇದವತೀಂ ಶುಭಾಂ ।
ಶುಷ್ಕಾಸ್ಯಾಂ ಚಲನೇತ್ರಾಂ ತು ಪರಿಮ್ಲಾನಾಮಿವಾಬ್ಜಿನೀಂ ॥ ೫೬ ॥

ಸಾ ಚಾಪತಂತೀಂ ದದೃಶೇ ಯಕ್ಷಜಾಂ ದೈತ್ಯನಂದಿನೀಂ ।
ಕೇಯಮಿತ್ಯೇವ ಸಂಚಿತ್ಯಂ ಸಮುತ್ಥಾಯ ಸ್ಥಿರಾಭವತ್ ॥ ೫೭ ॥

ತತೋಽನ್ಯೋನ್ಯಂ ಸಮಾಶ್ಲಿಷ್ಯ ಗಾಢಂಗಾಢಂ ಸುಹೃತ್ತಯಾ ।
ಪರ್ಯಪೃಚ್ಛತ್ತದಾನ್ಯೋನ್ಯಂ ಕಥಯಾಮಾಸತು ಸ್ತತಃ ॥ ೫೮ ॥

ಯಾಗುತ್ತಾಳೆಂದು ಹೇಳಲ್ಪಟ್ಟ ನಾನು ಈ ಅವಸ್ಥೆಯನ್ನು ಹೊಂದಿ ಇಲ್ಲಿರುವೆನು. ನನ್ನನ್ನು ಪ್ರಭುವಾದ ಒಬ್ಬ ಮಹಾಪುರುಷನು ರಕ್ಷಿಸಬೇಕಾಗಿದೆ ಎಂದು ಆ ಕಲ್ಲಿನ ಮೇಲೆ ಬರೆದು ತಾನೂ ಸ್ನಾನಕ್ಕಾಗಿ ಯಮುನಾ ನದಿಗೆ ಹೋದಳು. ಅಲ್ಲಿ ಕೋಕಿಲ ಧ್ವನಿಯಿಂದ ರಮಣೀಯವಾಗಿದ್ದ ಆಶ್ರಮವನ್ನು ನೋಡಿ ಈ ಆಶ್ರಮದ ಮಧ್ಯ ದಲ್ಲಿಯೇ ಆ ತಾಪಸೋತ್ತಮನು ಇರಬಹುದೆಂದು ಆಲೋಚಿಸುತ್ತಾ ಒಳಕ್ಕೆ ಪ್ರವೇಶಿಸಿದಳು.

೫೬-೬೦. ಅಲ್ಲಿ ದೇವತೆಗಳ ಎದುರಿಗೆ ಕುಳಿತಿರುವ ವೇದವತಿಯನ್ನು ನೋಡಿದಳು. ಅವಳು ಒಣಗಿ ಹೋಗಿರುವ ಮುಖದಿಂದಲೂ ಚಂಚಲವಾದ ಕಣ್ಣುಗಳಿಂದಲೂ ಕೂಡಿ ಬಾಡಿದ ಕಮಲಲತೆಯಂತೆ ದಯನೀಯಳಾಗಿದ್ದಳು. ಅವಳೂ ಸಹ ಬರುತ್ತಿದ್ದ ಆ ದೈತ್ಯಪುತ್ರಿಯನ್ನು ನೋಡಿ ಇವಳು ಯಾರು ಎಂದು ಆಲೋಚಿಸುತ್ತಾ ಮೇಲಕ್ಕೆದ್ದು ಹಾಗೇ ನಿಂತಳು. ಅನಂತರ ಅವರಿಬ್ಬರೂ ಸುಹೃ ದ್ಭಾವದಿಂದ ಪರಸ್ಪರಗಾಢಾಲಿಂಗನಾದಿಗಳನ್ನು ಅನುಭವಿಸಿ ಕುಳಿತು ಪರಸ್ಪರ

ತೇ ಪರಿಜ್ಞಾತತತ್ತ್ವಾರ್ಥೆ ಅನ್ಯೋನ್ಯಂ ಲಲನೋತ್ತಮೆ ।
ಸಮಾಸಾತೆ ಕಥಾಭಿಸ್ತೇ ನಾನಾರೂಪಾಭಿರಾದರಾತ್ ॥ ೫೯ ॥

ಏತಸ್ಮಿನ್ನನಂತರೆ ಪ್ರಾಪ್ತಃ ಮುನಿಃ ಶ್ರೀಕಂಠಮರ್ಚಿತುಂ ।
ಋತಧ್ವಜೋ ಮುನಿಶ್ರೇಷ್ಠಸ್ತತೋ ಪಶ್ಯದಥಾಕ್ಷರಾನ್ ॥ ೬೦ ॥

ಸ ದೃಷ್ಟ್ವಾ ವಾಚಯಿತ್ವಾ ಚ ತದರ್ಥಮಧಿಗಮ್ಯ ಚ ।
ಮುಹೂರ್ತಂಧ್ಯಾನಮಾಸ್ಥಾಯ ವ್ಯಜಾನಾಚ್ಚ ತಪೋನಿಧಿಃ ॥ ೬೧ ॥

ತತಃ ಸಂಪೂಜ್ಯ ದೇವೇಶಂ ತ್ವರಯಾ ಸ ಋತಧ್ವಜಃ ।
ಅಯೋಧ್ಯಾಮಗಮತೀಕ್ಷಿಪ್ರಂ ದ್ರಷ್ಟುಮಿಕ್ಷ್ವಾಕುಮೀಶ್ವರಂ ॥ ೬೨ ॥

ತಂ ದೃಷ್ಟ್ವಾ ನೃಪತಿಶ್ರೇಷ್ಠಂ ತಾಪಸೋ ವಾಕ್ಯಮಬ್ರವೀತ್ ।
ಶ್ರೂಯತಾಂ ನರಶಾರ್ದೂಲ ವಿಜ್ಞಪ್ತಿರ್ಮಮಪಾರ್ಥಿವ ॥ ೬೩ ॥

ವೃತ್ತಾಂತವನ್ನು ಕೇಳುತ್ತಲೂ ಹೇಳುತ್ತಲೂ ಇದ್ದರು. ತತ್ತ್ವಾರ್ಥವನ್ನು ತಿಳಿದಿದ್ದ ಆ ನಾರೀಮಣಿಗಳಿಬ್ಬರೂ ನಾನಾರೂಪಗಳಾದ ಕಥೆಗಳನ್ನು ಹೇಳುತ್ತಲೂ ಆದರದಿಂದ ಕೇಳುತ್ತಲೂ ಹಾಗೆಯೇ ಕುಳಿತರು. ಈ ಸಮಯಕ್ಕೆ ಸರಿಯಾಗಿ ತಾಪಸೋತ್ತಮನಾದ ಋತಧ್ವಜನು ಶ್ರೀಕಂಠನನ್ನು ಪೂಜಿಸಲು ಅಲ್ಲಿಗೆ ಬಂದನು. ಹಾಗೆ ಬಂದ ಅವನು ಅಲ್ಲಿ ಬರೆದಿದ್ದ ಶ್ಲೋಕಾಕ್ಷರಗಳನ್ನೂ ನೋಡಿದನು.

೬೧-೬೩. ಅದನ್ನು ಓದಿ ಅದರ ಅರ್ಥವನ್ನೂ ಗ್ರಹಿಸಿ ಸ್ವಲ್ಪಕಾಲ ಧ್ಯಾನಾರೂಢನಾಗಿದ್ದು ತಪೋಮಹಿಮೆಯಿಂದ ಎಲ್ಲಾ ವಿಚಾರಗಳನ್ನೂ ತಿಳಿದನು. ಅನಂತರ ಆ ಋಷಿಯು ತ್ವರೆಯಿಂದ ಶಂಕರನನ್ನು ಪೂಜಿಸಿ ಇಕ್ಷ್ವಾಕು ವಂಶದ ಧೊರೆಯನ್ನು ನೋಡಲು ತ್ವರೆಯಿಂದ ಅಯೋಧ್ಯೆಗೆ ಹೊರಟನು. ಅಲ್ಲಿ ಹೋಗಿ ಆ ನರಾಧಿಪತಿಯನ್ನು ನೋಡಿ ಋತಧ್ವಜನು ಹೀಗೆ ಹೇಳಲಾರಂಭಿಸಿದನು. ಎಲೈ ಕ್ಷತ್ರಿಯೋತ್ತಮನೇ ಈ ನನ್ನ ವಿಜ್ಞಾಪನೆಯನ್ನು ಕೇಳು.

ಮಮ ಪುತ್ರೋ ಗುಣೈರ್ಯುಕ್ತಃ ಸರ್ವಶಾಸ್ತ್ರವಿಶಾರದಃ ।
ಉದ್ಬದ್ಧಃ ಕಪಿರಾಜೇನ ವಿಷಯಾಸ್ತೆ ತವೈವ ಹಿ ॥ ೬೪ ॥

ತಂ ಹಿ ಮೋಚಯಿತುಂ ನಾನ್ಯಃ ಶಕ್ತಃ ತ್ವತ್ತನಯಾದೃತೆ ।
ಶಕುನಿರ್ನಾಮ ರಾಜೇಂದ್ರ ಸಹ್ಯತ್ರ ವಿಧಿಪಾರಗಃ ॥ ೬೫ ॥

ತನ್ಮುನೇರ್ವಾಕ್ಯಮಾಕರ್ಣ್ಯ ಪಿತಾ ಮಮ ಕೃಶೋದರಿ ।
ಆದಿದೇಶ ಪ್ರಿಯಂ ಪುತ್ರಂ ಶಕುನಿಂ ನಾಮಶಾಂತಯೆ ॥ ೬೬ ॥

ತತಃ ಸ ಪ್ರಹಿತಃ ಪಿತ್ರಾ ಭ್ರಾತಾ ಮಮ ಮಹಾಭುಜಃ ।
ಸಂಪ್ರಾಪ್ತೋಽಥ ವನೋದ್ದೇಶಂ ಸಮಂ ಹಿ ಪರಮರ್ಷಿಣಾ ॥ ೬೭ ॥

ದೃಷ್ಟ್ವಾ ನ್ಯಗ್ರೋಧಮತ್ಯುಚ್ಚಂ ಪ್ರರೋಹಶ್ವೇತದಿಙ್ಮುಖಂ ।
ದದರ್ಶ ವೃಕ್ಷಶಿಖರೆ ಉದ್ಬದ್ಧಮೃಷಿಪುತ್ರಕಂ ॥ ೬೮ ॥

೬೪-೬೮. ಗುಣವಂತನಾಗಿಯೂ ಸರ್ವಶಾಸ್ತ್ರವಿಶಾರದನಾಗಿಯೂ ಇರುವ ನನ್ನ ಮಗನು ನಿನ್ನ ದೇಶದಲ್ಲಿಯೇ ಒಬ್ಬ ಕಪಿರಾಜನಿಂದ ಮರದ ಮೇಲೆ ಕಟ್ಟಲ್ಪಟ್ಟಿರುವನು. ಅವನನ್ನು ಆ ಬಂಧನದಿಂದ ಬಿಡಿಸಲು ನಿನ್ನ ಮಗನೊಬ್ಬನನ್ನು ಬಿಟ್ಟು ಮತ್ತಾರೂ ಸಮರ್ಥರಾಗಿಲ್ಲ. ನಿನ್ನ ಮಗನಾದ ಶಕುನಿಯೇ ಈ ಕೆಲಸವನ್ನು ನೆರವೇರಿಸಲು ಸಮರ್ಥನಾಗಿರುವನು ಎಂದು ಪ್ರಾರ್ಥಿಸಲು ನನ್ನ ತಂದೆಯಾದ ಆ ದೊರೆಯು ಮುನಿಯ ವಾಕ್ಯವನ್ನು ಕೇಳಿ ತನ್ನ ಪ್ರಿಯಪುತ್ರನಾದ ಶಕುನಿಯನ್ನು ಈ ಕಾರ್ಯವನ್ನು ನಿರ್ವಹಿಸಿ ಶಾಂತಿಯನ್ನುಂಟುಮಾಡಲು ಆಜ್ಞಾಪಿಸಿದನು. ಹಾಗೆ ತಂದೆಯಿಂದ ಕಳುಹಿಸಲ್ಪಟ್ಟ ನನ್ನ ತಮ್ಮನಾದ ಪರಾಕ್ರಮದಿಂದ ಕೂಡಿದ್ದ ಆ ಶಕುನಿಯು ಮಹರ್ಷಿಯಾದ ಋತಧ್ವಜನೊಡನೆ ಆ ವನದ ಪ್ರದೇಶಕ್ಕೆ ಬಂದನು. ಅಲ್ಲಿ ಬಿಳಲುಗಳಿಂದ ಬಿಳುಪಾಗಿ ಮಾಡಲ್ಪಟ್ಟ ದಿಕ್ಪ್ರದೇಶವುಳ್ಳ ಉನ್ನತವಾಗಿರುವ ಆ ಆಲದ ಮರವನ್ನೂ ಮೇಲೆ ಅದರ ಶಿಖರದಲ್ಲಿ ಕಟ್ಟಲ್ಪಟ್ಟಿದ್ದ ಋಷಿಪುತ್ರನನ್ನೂ ಸಹ ನೋಡಿದನು.

ತತಶ್ಚ ಲಲತಾಪಾಶಂ ದೃಷ್ಟ್ವಾರ್ಥ ಸ ಸಮಂತತಃ ।
ದೃಷ್ಟ್ವಾ ಸಮುನಿಪುತ್ರಂ ತಂ ಸ್ವಜಟಾಸಂಯುತಂ ವಟೆ ॥ ೬೯ ॥

ಧನುರಾದಾಯ ಬಲವಾನಧಿಜ್ಯಂ ಸ ಚಕಾರ ಹ ।
ಲಾಘವಾದೃಷಿಪುತ್ರಸ್ಯ ಸಮಂ ಚಿಚ್ಛೇದ ಮಾರ್ಗಣೈಃ ॥ ೭೦ ॥

ಕಪಿನಾ ಯತ್ಕೃತಂ ಪೂರ್ವಂ ಲತಾಪಾಶಂ ಚತುರ್ದಿಶಂ ।
ಪಂಚವರ್ಷಶತೆ ಕಾಲೆ ಗತೆ ಕೃತ್ತಂ ತದಾ ಶರೈಃ ॥ ೭೧ ॥

ಲತಾಚ್ಛನ್ನಂ ತತಸ್ತೂರ್ಣಮಾರುರೋಹ ಮುನಿರ್ವಟಂ ।
ಪ್ರಾಪ್ತಂ ಸ್ವಪಿತರಂ ದೃಷ್ಟ್ವಾ ಜಾಬಾಲಿಃ ಸಂಯುತೋಽಪಿ ಸಃ ॥ ೭೨ ॥

ಆದರಾತಿಶಯಾನ್ಮೂರ್ಧ್ನಾ ವವಂದೆ ತು ವಿಧಾನತಃ ।
ಸಂಪರಿಷ್ವಜ್ಯಸಮುನಿಃ ಮೂರ್ಧ್ನ್ಯಾಘ್ರಾಯ ಸಮಂತತಃ ॥ ೭೩ ॥

ಉನ್ಮೋಚಯಿತುಮಾರಬ್ಧೋ ನಶಶಾಕ ಸುಯಂತ್ರಿತಃ ।
ತತಸ್ತೂರ್ಣಂ ಧನುರ್ನಮ್ಯ ಬಾಣಾಂಶ್ಚ ಶಕುನಿರ್ಬಲೀ ॥ ೭೪ ॥

೬೯-೭೩. ಅಲ್ಲಿ ಎಲ್ಲಾ ಕಡೆಯಲ್ಲಿಯೂ ಕಟ್ಟಲ್ಪಟ್ಟಿರುವ ಲತಾಪಾಶವನ್ನೂ ವಟವೃಕ್ಷದ ಮೇಲ್ಭಾಗದಲ್ಲಿ ತನ್ನ ಜಟೆಗಳಿಂದಲೇ ಬಿಗಿದು ಕಟ್ಟಲ್ಪಟ್ಟಿರುವ ಮುನಿ ಪುತ್ರನನ್ನು ನೋಡಿ ಧನುಸ್ಸನ್ನು ತೆಗೆದುಕೊಂಡು ಹೆದೆ ಏರಿಸಿ ಲಕ್ಷ್ಯಾಭಿಮುಖನಾಗಿ ನಿಂತನು. ಧನುರ್ವಿದ್ಯಾಭ್ಯಾಸದಿಂದ ಗುರಿಗೆ ಸರಿಯಾಗಿ ಲಾಘವ ಹೊಂದಿ ಋಷಿ ಪುತ್ರನೊಡನೆ ಆ ಲತಾಪಾಶವನ್ನು ಕತ್ತರಿಸಿದನು. ಐದುನೂರು ವರ್ಷಗಳ ಹಿಂದೆ ಕಪಿಯು ಕಟ್ಟಿದ್ದ ಆ ಲತಾಪಾಶವು ಈಗ ಕತ್ತರಿಸಲ್ಪಟ್ಟಿತು. ಲತೆಯಿಂದ ಮುಚ್ಚಲ್ಪಟ್ಟಿದ್ದ ಆ ಮರವನ್ನು ಋಷಿಯು ಹತ್ತಿ ಮೇಲಕ್ಕೆ ಹೋದನು. ತನ್ನ ಹತ್ತಿರಕ್ಕೆ ಬಂದ ತಂದೆಯನ್ನು ನೋಡಿ ಜಾಬಾಲಿಯು ಕಟ್ಟಲ್ಪಟ್ಟಿದ್ದರೂ ಕೂಡ ಆದರದಿಂದ ಅಲ್ಲಿಯೇ ಶಿರಬಾಗಿಸಿ ಅವನನ್ನು ವಿಧಿಪೂರ್ವಕವಾಗಿ ವಂದಿಸಿದನು. ಆಗ ಮುನಿಯು ಮಗನನ್ನು ಆಲಂಗಿಸಿ ಪ್ರೀತಿಯಿಂದ ತಲೆಯನ್ನು ಆಘ್ರಾಣಿಸಿ ಸುತ್ತಲೂ ಬಿಗಿದಿದ್ದ ಲತೆಗಳನ್ನು ಬಿಡಿಸಲು ಪ್ರಾರಂಭಿಸಿ ಅವು ದೃಢವಾಗಿದ್ದುದರಿಂದ ಬಿಡಿಸಲು ಸಮರ್ಥನಾಗಲೇ ಇಲ್ಲ.

೭೪-೭೯. ಅನಂತರ ಬಲಶಾಲಿಯಾದ ಆ ಶಕುನಿಯು ಹೆದೆಯೇರಿಸಿದ ಧನುಸ್ಸನ್ನೂ ಬಾಣವನ್ನೂ ಸಿದ್ಧಗೊಳಿಸಿ ಋಷಿಪುತ್ರನ ಜಟೆಯನ್ನು ಬಿಡಿಸಲು ತ್ವರೆ

ಆರುರೋಹ ವಟಂ ತೂರ್ಣಂ ಸಮುನ್ಮೋಚಯಿತುಂ ಜಟಾಃ ।
ನಚ ಶಕ್ನೋತಿ ಸಂಯತ್ತಂ ದೃಢಂ ಕಪಿವರೇಣ ಹಿ ॥ ೭೫ ॥

ಯದಾ ನಶಕಿತಸ್ತೇನ ಸಮಂ ಮೋಚಯಿಂತುಂ ಜಟಾಃ ।
ತದಾವತೀರ್ಣಃ ಶಕುನಿಃ ಸಹಿತಃ ಪರಮುಷ್ಠಿಣಾ ॥ ೭೬ ॥

ಜಗ್ರಾಹ ಚ ಧನುರ್ಬಾಣಾನ್ ಚಕಾರ ಶರಮಂಡಪಂ ।
ಲಾಘವಾದರ್ಧಚಂದ್ರಾಭ್ಯಾಂ ಶಾಖಾಂ ಚಿಚ್ಛೇದ ಸ ತ್ರಿಧಾ ॥ ೭೭ ॥

ಶಾಖಯಾ ಕೃತ್ತಯಾ ಚಾಸೌ ಭಾರವಾಹೀ ತಪೋಧನಃ ।
ಶರಸೋಪಾನಮಾರ್ಗೇಣ ಅವತೀರ್ಣೋಥ ಪಾದಪಾತ್ ॥ ೭೮ ॥

ತಸ್ಮಿಂಸ್ತಥಾ ಸ್ವೈತನಯೆ ಋತಧ್ವಜ
ಸ್ತತೋ ನರೇಂದ್ರಸ್ಯ ಸುತೇನ ಧನ್ವಿನಾ ।
ಜಾಬಾಲಿನಾ ಭಾರವಹೇನ ಸಂಯುತಃ
ಸಮಾಜಗಾಮಾಥ ನದೀಂ ಸ ಸೂರ್ಯಜಾಂ ॥ ೭೯ ॥

ಇತಿ ಶ್ರೀ ವಾಮನಪುರಾಣೇ ಚತುಃಷಷ್ಟಿತಮೋಽಧ್ಯಾಯಃ

ಯಿಂದ ಆ ಮರಕ್ಕೆ ಹತ್ತಿದನು. ಆದರೂ ಕಪಿಯಿಂದ ದೃಢವಾಗಿ ಕಟ್ಟಲ್ಪಟ್ಟಿದ್ದ ಆ ಜಟೆಯನ್ನು ಬಿಡಿಸಲು ಸಮರ್ಥನಾಗಲೇ ಇಲ್ಲ. ಆ ಬಾಲನ ಜಟೆಯೊಡನೆ ಬಿಡಿಸಲು ಸಾಧ್ಯವಾಗಲಿಲ್ಲವಾಗಿ ಆ ಧೊರೆಯು ಕೆಳಕ್ಕೆ ಇಳಿದು ಧನುರ್ಬಾಣಗಳನ್ನು ತೆಗೆದು ಕೊಂಡು ಶರಮಂಡಪವನ್ನು ರಚಿಸಿದನು. ಲಾಘವದಿಂದ ಅರ್ಧಚಂದ್ರಬಾಣದಿಂದ ಕೆಳಕ್ಕೆ ಸೆಳೆಯಲ್ಪಟ್ಟ ಬಾಲಕನು ಶರಸೋಪಾನಮಾರ್ಗದಿಂದ ಕೆಳಕ್ಕೆ ಇಳಿದು ಬಂದನು. ಹಾಗೆ ಪರಾಕ್ರಮಿಯಾದ ರಾಜಪುತ್ರನಿಂದ ಕೆಳಕ್ಕೆ ಇಳಿಸಲ್ಪಟ್ಟ ಮಗನಾದ ಜಾಬಾಲಿ ಯೊಡನೆ ಸೇರಿ ಋತಧ್ವಜನು ಕಾಳಿಂದೀನದಿಗೆ ತೆರಳಿದನು.

ಇಲ್ಲಿಗೆ ಶ್ರೀ ವಾಮನಪುರಾಣದಲ್ಲಿ ಅರವತ್ತನಾಲ್ಕನೆಯ ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಹಿಂದೆ ಪ್ರಸಕ್ತವಾಗಿದ್ದ ಚಿತ್ರಾಂಗದಾ ವೃತ್ತಾಂತವನ್ನು ಮುಂದುವರಿಸುತ್ತಾ ದಂಡನು ಚಿತ್ರಾಂಗದೆಯು ಬಹುಕಾಲ ಪತಿಯಾದ ಸುರಥನನ್ನು ಸ್ಮರಿಸುತ್ತಾ ಆಶ್ರಮದಲ್ಲಿ ಇರುತ್ತಿದ್ದಳೆಂದೂ, ಶಾಪಕ್ಕೆ ಈಡಾದ ವಿಶ್ವಕರ್ಮನು ಕಪಿಯಾಗಿ ಶಾಲೂಕಿನೀನದೀ ತೀರದಲ್ಲಿ ಪರ್ವತದಲ್ಲಿ ಬಹುಕಾಲ ಕಳೆದನೆಂದೂ ಆಗ ಕಂದರನೆಂಬ ದೈತ್ಯನು ವೇದವತಿಯೆಂಬ ಪುತ್ರಿಯೊಡನೆ ಅಲ್ಲಿ ಬರಲಾಗಿ ಆ ಕಪಿಯು ಅವಳ ಕೈಯ್ಯನು ಹಿಡಿದುಕೊಳ್ಳಲು ತಂದೆಯೂ ಕೋಪದಿಂದ ಖಡ್ಗಪಾಣಿಯಾಗಿ ಎದುರಿಸಬರಲಾಗಿ ಕಪಿಯು ಅವಳನ್ನು ಹೊತ್ತುಕೊಂಡು ಹಿಮಾಚಲಕ್ಕೆ ಓಡಿ ಅಲ್ಲಿ ಯಮುನಾ ದಡದಲ್ಲಿರುವ ಶ್ರೀಕಂಠಕ್ಷೇತ್ರದ ಆಶ್ರಮದಲ್ಲಿ ಆ ವೇದವತಿಯನ್ನಿರಿಸಿ ತಾನು ಆ ದೈತ್ಯನ ಎದುರಿಗೇ ಕಾಲಿಂದಿಯಲ್ಲಿ ಮುಳುಗಲಾಗಿ ಆ ದೈತ್ಯನು ಪುತ್ರಿಯು ಮೃತಳಾದಳೆಂದು ತಿಳಿದು ನಿರಾಶನಾಗಿ ಪಾತಾಲಕ್ಕೆ ಹೊರಟುಹೋದನೆಂದೂ ನದಿಯಲ್ಲಿ ಮುಳುಗಿದ ಕಪಿಯು ಪ್ರವಾಹ ವೇಗದಿಂದ ಶಿವಾ ಎಂಬ ದೇಶಕ್ಕೆ ಒಯ್ಯಲ್ಪಟ್ಟು ಕಾಪಿಲವನಕ್ಕೆ ಬಂದು ವೇದವತಿಯನ್ನು ಇಟ್ಟಿದ್ದ ಕಡೆಗೆ ಬರುತ್ತಾ ದಾರಿಯಲ್ಲಿ ಪುತ್ರಿಯಾದ ದಮಯಂತಿಯೊಡನೆ ಬರುತ್ತಿದ್ದ ಅಂಜನನೆಂಬ ಗುಹ್ಯಕನನ್ನು ನೋಡಿ ದಮಯಂತಿಯನ್ನೇ ವೇದವತಿಯೆಂದು ಭಾವಿಸಿ ತನ್ನ ಶ್ರಮವೆಲ್ಲ ವ್ಯರ್ಥವಾಯಿತೆಂದು ಭಾವಿಸಿ ಅವಳನ್ನು ಹಿಡಿಯಲು ಓಡಿಸಿಕೊಂಡು ಹೋಯಿತು. ಆ ಭಯದಿಂದ ಅವಳು ಹಿರಣ್ವತೀನದಿಗೆ ಧುಮುಕಲು ಗುಹ್ಯಕನು ನಿರಾಶನಾಗಿ ಅಂಜನಪರ್ವತಕ್ಕೆ ಹೊರಟು ಅಲ್ಲಿ ಅನೇಕ ವರ್ಷ ತಪಸ್ಸಿನಲ್ಲಿ ಕುಳಿತನು. ಹಿರಣ್ವತೀನದಿಯಿಂದ ಕೋಸಲದೇಶಕ್ಕೆ ಒಯ್ಯಲ್ಪಟ್ಟ ದಮಯಂತಿಯು ದಾರಿಯಲ್ಲಿ ಹೋಗುತ್ತಾ ದೊಡ್ಡ ಆಲದಮರವನ್ನು ನೋಡಿ ಅದರ ಕೆಳಗಿದ್ದ ಕಲ್ಲಿನ ಮೇಲೆ ವಿಶ್ರಾಂತಿಗಾಗಿ ಕುಳಿತಳು, ಆಗ ನಿನ್ನ ಮಗನು ಇಲ್ಲಿ ಕಟ್ಟಲ್ಪಟ್ಟಿರುವನೆಂದು ಆ ತಪಸ್ವಿಗೆ ಹೇಳುವರು ಯಾರೂ ಇಲ್ಲವೇ ಎಂಬ ಶಬ್ದವು ಕೇಳಿಬಂದಿತು. ಆಗ ಅವಳು ಮೇಲೆ ನೋಡಲು ಆ ಮರದ ಶಿಖರದಲ್ಲಿ ಜಟೆಯಿಂದ ಬಂಧಿಸಲ್ಪಟ್ಟಿದ್ದ ಬಾಲಕನನ್ನು ನೋಡಿ ದುಃಖಪಟ್ಟು ಅವನ ವೃತ್ತಾಂತವನ್ನೆಲ್ಲಾ ತಿಳಿದು ತನ್ನ ವೃತ್ತಾಂತವನ್ನೂ ಅವನಿಗೆ ಹೇಳಿ ಅವನ ಮಾತಿನಂತೆ ಯಮುನಾದಡದಲ್ಲಿರುವ ಶ್ರೀಕಂಠಕ್ಷೇತ್ರಕ್ಕೆ ಬಂದು ಅಲ್ಲಿ ಶ್ರೀಕಂಠದೇವನನ್ನು ನಮಸ್ಕರಿಸಿ ಅಲ್ಲಿನ ಕಲ್ಲಿನ ಹಲಗೆಯ ಮೇಲೆ ಋತಧ್ವಜನಿಂದ ಬರೆಯಲ್ಪಟ್ಟಿದ್ದ ವೇದವತೀ ವಿಷಯಕವಾದ ಶ್ಲೋಕವನ್ನು ನೋಡಿ ಅದರ ಕೆಳಗೆ ಜಾಬಾಲಿಯಿಂದ ಹೇಳಲ್ಪಟ್ಟ "ನಸ್ತ್ಯೋಸ್ತಿಪುರುಷಃ ಕಶ್ಚಿತ್" ಎಂಬ ಶ್ಲೋಕವನ್ನೂ ಅದರ ಕೆಳಗೆ

ಬರೆದು ಸ್ನಾನಕ್ಕೆ ಯಮುನಾನದಿಗೆ ಹೋಗುತ್ತಾ ಅಲ್ಲಿ ಆಶ್ರಮದಲ್ಲಿದ್ದ ಕೃಶಳಾದ ವೇದವತಿಯನ್ನು ಕಂಡು ಪರಸ್ಪರವೃತ್ತಾಂತಜ್ಞಾನದಿಂದ ಇಬ್ಬರೂ ಸಂತುಷ್ಟರಾಗಿ ಅಲ್ಲಿದ್ದರೆಂದೂ ಹೇಳಲಾಯಿತು. ಈ ಸಮಯಕ್ಕೆ ಸರಿಯಾಗಿ ಋತಧ್ವಜನು ಶಿವಾರ್ಚನೆಗಾಗಿ ಅಲ್ಲಿ ಬಂದು ಅಲ್ಲಿ ಬರೆಯಲ್ಪಟ್ಟಿದ್ದ ಶ್ಲೋಕವನ್ನು ನೋಡಿ ಧ್ಯಾನದಿಂದ ಎಲ್ಲಾ ಸಮಾಚಾರವನ್ನೂ ತಿಳಿದು ಶಿವಾರ್ಚನೆಯನ್ನು ತ್ವರೆಯಿಂದ ಮುಗಿಸಿಕೊಂಡು ಅಯೋಧ್ಯೆಗೆ ಹೋಗಿ ಇಕ್ಷ್ವಾಕುವಂಶದ ಧೊರೆಯನ್ನು ನೋಡಿ ನಿನ್ನ ದೇಶದಲ್ಲಿ ಬದ್ಧನಾಗಿರುವ ತಾಪಸಬಾಲಕನ ಬಂಧವಿಮೋಚನೆಗಾಗಿ ಸಮರ್ಥನಾದ ನಿನ್ನ ಎರಡನೇ ಮಗನನ್ನು ಕಳುಹಿಸಬೇಕೆಂದು ಪ್ರಾರ್ಥಿಸಿ ಅಲ್ಲಿಂದ ಅವನ ಎರಡನೇ ಮಗನಾದ ಶಕುನಿಯೊಡನೆ ಬಂದು ಆ ಆಲದಮರವನ್ನು ತೋರಿಸಿ ಅಲ್ಲಿ ಬಿಗಿಯಲ್ಪಟ್ಟಿರುವ ಬಾಲಕನನ್ನು ಬಿಡಿಸಲು ಪ್ರಯತ್ನಿಸಿದನೆಂದೂ ಹೇಳಲಾಯಿತು. ಆಗ ಆ ರಾಜಕುಮಾರನು ಸಾಮಾನ್ಯವಾದ ಪ್ರಯತ್ನದಿಂದ ಬಿಡಿಸಲಾಗದುದರಿಂದ ಶರಪಂಜರವನ್ನೇರ್ಪಡಿಸಿ ಆ ಮರದ ಕೊಂಬೆಯನ್ನೇ ಅರ್ಧಚಂದ್ರಬಾಣದಿಂದ ಕತ್ತರಿಸಲಾಗಿ ಸೋಪಾನದಂತಿದ್ದ ಶರಗಳನ್ನಾಶ್ರಯಿಸಿ ಆ ಋಷಿಕುಮಾರನು ಕೆಳಕ್ಕೆ ಬಂದನೆಂದೂ ಅವನೊಡನೆ ತಂದೆಯಾದ ಋತಧ್ವಜನು ಕಾಲಿಂದೀನದಿಗೆ ಸ್ನಾನಕ್ಕೆ ತೆರಳಿದನೆಂದೂ ಹೇಳಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಪಂಚಷಷ್ಟಿತಮೋಽಧ್ಯಾಯಃ

ದಂಡ ಉವಾಚ

ಏತಸ್ಮಿನ್ನಂತರೆ ಬಾಲೆ ಯಕ್ಷಾಸುರಸುತೆ *ಮುನೆ ।
ಸಮಾಗತೆ ಹರಂ ದ್ರಷ್ಟುಂ ತಂ ಮುನಿಂ ಯೋಗಿನಾಂ ವರಂ ।

ದದೃಶಾತೆ ಪರಿಮ್ಲಾನಂ ಸಂಶುಷ್ಕಕುಸುಮಂ ವಿಭುಂ ॥ ೧ ॥

ಬಹುನಿರ್ಮಾಲ್ಯಸಂಯುಕ್ತಂ ಗತೆ ತಸ್ಮಿನ್ನೃತಧ್ವಜೆ ॥ ೨ ॥

ತತಸ್ತು ವೀಕ್ಷ್ಯ ದೇವೇಶಂ ತೇ ಉಭೆ ವರಕನ್ಯಕೆ ।
ಸ್ನಾಪಯೇತೆ ವಿಧಾನೇನ ಪೂಜಯೇತೆ ಅಹರ್ನಿಶಂ ॥ ೩ ॥

ತಾಭ್ಯಾಂ ಸ್ಥಿತಾಭ್ಯಾಂ ತತ್ರೈವ ಋಷಿರಭ್ಯಾಗಮದ್ವನಂ ।
ದ್ರಷ್ಟುಂ ಶ್ರೀಕಂಠಮವ್ಯಕ್ತಂ ಗಾಲವೋನಾಮ ನಾಮತಃ ॥ ೪ ॥

ಅರವತ್ತೈದನೆಯ ಅಧ್ಯಾಯವು

೧-೪. ದಂಡನು ಮುಂದಿನ ವೃತ್ತಾಂತವನ್ನು ಹೇಳುತ್ತಾನೆ. ಈ ಸಮಯದಲ್ಲಿ ಆ ಆಶ್ರಮದಲ್ಲಿ ವೇದವತಿ ದಮಯಂತಿಯರಿಬ್ಬರೂ ಯೋಗೀಶ್ವರನಾದ ಶ್ರೀಕಂಠದೇವನನ್ನು ದರ್ಶನಮಾಡಲು ಬಂದು ಋತಧ್ವಜನಿಲ್ಲದಿರುವದ್ದರಿಂದ ಬಾಡಿದ ಹೂವುಗಳಿಂದಲೂ ಬಹು ನಿರ್ಮಾಲ್ಯದಿಂದಲೂ ಬಾಡಿದಂತಿದ್ದ ಪ್ರಭುವನ್ನು ದರ್ಶನ ಮಾಡಿದರು. ಆಗ ಅವರು ಪ್ರತಿದಿನವೂ ಆ ದೇವರಿಗೆ ಸ್ನಾನಮಾಡಿಸಿ ವಿಧಿಪೂರ್ವಕವಾಗಿ ಪೂಜಾದಿಗಳನ್ನು ಮಾಡಿಕೊಂಡಿರುತ್ತಿದ್ದರು. ಅವರು ಅಲ್ಲಿರುವಾಗಲೇ ಗಾಲವನೆಂಬ ಋಷಿಯು ಶ್ರೀಕಂಠೇಶ್ವರನ ದರ್ಶನಕ್ಕಾಗಿ ಆ ವನಕ್ಕೆ ಬಂದನು. ಹಾಗೆ

---

* ಇಲ್ಲಿ ಅಜರೆಯನ್ನು ಸಂಬೋಧಿಸಿ ದಂಡನು ಹೇಳುವ ಮಾತಿನಲ್ಲಿ ಮುನೆ ಎಂಬ ಸಂಬುದ್ಧಿಯು ಸಂಗತವಾಗಿ ಕಾಣುವದಿಲ್ಲ.

ಸ ದೃಷ್ಟ್ವಾ ಕನ್ಯಕಾಯುಗ್ಮಂ ಕಸ್ಯೇದಮಿತಿ ಚಿಂತಯನ್ ।
ಪ್ರವಿವೇಶ ಮುನಿಃ ಸ್ನಾತ್ವಾ ಕಾಲಿಂದ್ಯಾ ವಿಮಲೆ ಜಲೆ ॥ ೫ ॥

ತತೋಽನು ಪೂಜಯಾಮಾಸ ಶ್ರೀಕಂಠಂ ಗಾಲವೋ ಮುನಿಃ ।
ಗಾಯೇತೆ ಸುಸ್ವರಂ ಗೀತಂ ಯಕ್ಷಾಸುರಸುತೆ ತತಃ ॥ ೬ ॥

ತತಃ ಸಂಗೀತಮಾಕರ್ಣ್ಯ ಗಾಲವೋ ದ್ವೆ ಅಜಾನತ ।
ಗಂಧರ್ವಕನ್ಯಕೆ ಚೈವ ಸಂದೇಹೋ ನಾತ್ರ ವಿದ್ಯತೆ ॥ ೭ ॥

ಸಂಪೂಜ್ಯ ದೇವಮೀಶಾನಂ ಗಾಲವಸ್ತು ವಿಧಾನತಃ ।
ಕೃತಜಪ್ಯಃ ಸಮಧ್ಯಾಸ್ತೆ ಕನ್ಯಾಭ್ಯಾಮಭಿವಾದಿತಃ ॥ ೮ ॥

ತತಃ ಪಪ್ರಚ್ಛ ಸ ಮುನಿಃ ಕನ್ಯಕೆ ಕಸ್ಯ ಕಥ್ಯತಾಂ ।
ಕುಲಾಲಙ್ಕಾರಕರಣೆ ಭಕ್ತಿಯುಕ್ತೆ ಭವಸ್ಯ ಹಿ ॥ ೯ ॥

ತಮೂಚತುಃ ಮುನಿಶ್ರೇಷ್ಠಂ ಯಾಥಾತಥ್ಯಂ ಶುಭಾನನೆ ।
ಜಾತೋ ವಿದಿತವೃತ್ತಾನ್ತೋ ಗಾಲವಸ್ತಪತಾಂ ವರಃ ॥ ೧೦ ॥

ಬಂದ ಆ ಮುನಿಯು ಅಲ್ಲಿದ್ದ ಕನ್ಯಾಕಾಯುಗ್ಮವನ್ನು ನೋಡಿ ಇದು ಯಾರೆಂದು ಚಿಂತಿಸುತ್ತಾ ಸ್ನಾನಕ್ಕಾಗಿ ಕಾಲಿಂದೀ ನದಿಗೆ ಹೊರಟನು.

೬-೧೦. ಅನಂತರ ಗಾಲವನು ಶ್ರೀಕಂಠೇಶ್ವರನನ್ನು ಪೂಜಿಸಿದನು. ಆಗ ದೇವವತೀ ದಮಯಂತಿಯರಿಬ್ಬರೂ ಸುಸ್ವರದಿಂದ ಸಂಗೀತವನ್ನು ಗಾನಮಾಡಿದರು. ಗಾಲವನು ಅವರ ಸಂಗೀತವನ್ನು ಕೇಳಿ ಇವರು ಗಂಧರ್ವ ಕನ್ಯಕೆಗಳೆಂದೇ ನಿಸ್ಸಂಶಯ ವಾಗಿ ತಿಳಿದನು. ಅನಂತರ ವಿಧಿಪೂರ್ವಕವಾಗಿ ಈಶ್ವರನನ್ನು ಪೂಜಿಸಿ ಜಪಾದಿ ಗಳನ್ನೂ ಮುಗಿಸಿ ಈ ಕನ್ಯಕೆಯರಿಂದ ನಮಸ್ಕರಿಸಲ್ಪಟ್ಟು ಸುಖಾಸೀನನಾಗಿ ಕುಳಿತನು. ಅನಂತರ ಆ ಕನ್ಯಾದ್ವಯವನ್ನು ಕುರಿತು ಈ ದೇವಗೃಹವನ್ನು ಭಕ್ತಿಯಿಂದ ಅಲಂಕಾರಮಾಡುತ್ತಿರುವ ನೀವು ಯಾರ ಮಕ್ಕಳು ಎಂದು ಕೇಳಿದನು. ಆಗ ಆ ಇಬ್ಬರೂ ತಮ್ಮ ತಮ್ಮ ಯಥಾರ್ಥವಾದ ವೃತ್ತಾಂತವನ್ನು ಆ ಮುನಿಯಲ್ಲಿ ಅರಿಕೆ ಮಾಡಿದರು ಆಗ ತಪಸ್ವಿಯಾದ ಗಾಲವನು ಇವರ ವೃತ್ತಾಂತವನ್ನೆಲ್ಲಾ ತಿಳಿದನು.

ಸಮುಷ್ಯ ತತ್ರ ರಜನೀಂ ತಾಭ್ಯಾಂ ಸಂಪೂಜಿತೋಮುನಿಃ ।
ಪ್ರಾತರುತ್ಥಾಯ ಗೌರೀಶಂ ಸಂಪೂಜ್ಯಚ ವಿಧಾನತಃ ॥ ೧೧ ॥

ತೆ ಉಪೇತ್ಯಾಬ್ರವೀದ್ವಾಕ್ಯಂ ಪುಷ್ಕರಾರಣ್ಯಮುತ್ತಮಂ ।
ಆಮಂತ್ರಯಾಮಿ ವಾಂ ತನ್ವ್ಯೌ ಮಾಮನುಜ್ಞಾತುಮರ್ಹಥ ॥ ೧೨ ॥

ತತಸ್ತೇ ಊಚತುಬ್ರ್ರಹ್ಮನ್ ದುರ್ಲಭಂ ದರ್ಶನಂ ತವ ।
ಕಿಮರ್ಥಂ ಪುಷ್ಕರಾರಣ್ಯೆ ಭವಾನ್ಯಾಸ್ಯತ್ಯಥಾದರಾತ್ ॥ ೧೩ ॥

ತೆ ಉವಾಚ ಮಹಾತೇಜಾ ಅಹಂಕಾರಸಮನ್ವಿತಃ ।
ಕಾರ್ತಿಕೀ ಪುಣ್ಯದಾ ಭಾವಿಪುಷ್ಕರೇಷ್ವೇವ ಕಾರ್ತಿಕೆ ॥ ೧೪ ॥

ತೇ ಊಚತುರ್ವಯಂ ಯಾಮೋ ಭವಾನ್ ಯತ್ರ ಗಮಿಷ್ಯತಿ ।
ನ ತ್ವಯಾಸ್ಮ ವಿನಾ ಬ್ರಹ್ಮನ್ ಇಹಸ್ಥಾತುಂ ಸಮುತ್ಸಹೆ ॥ ೧೫ ॥

ಬಾಢಮಾಹ ಮುನಿಶ್ರೇಷ್ಠಸ್ತತೋ ನತ್ವಾ ಮಹೇಶ್ವರಂ ।
ಗತೆ ಚ ಋಷಿಣಾಸಾರ್ಧಂ ಪುಷ್ಕರಾರಣ್ಯಮಾದರಾತ್ ॥ ೧೬ ॥

೧೧-೧೫. ಆ ಗಾಲವನು ಆ ರಾತ್ರಿ ಅಲ್ಲಿಯೇ ಇದ್ದು ಆ ಕನ್ಯಕೆಯರಿಂದ ಸತ್ಕರಿಸಲ್ಪಟ್ಟವನಾಗಿ ಬೆಳಿಗ್ಗೆ ಎದ್ದು ಯಥಾವಿಧಿಯಾಗಿ ಗೌರೀಪತಿಯನ್ನು ಪೂಜಿಸಿ ಆ ಕನ್ಯಕೆಯರನ್ನು ಕುರಿತು ನಾನು ಪುಷ್ಕರಾರಣ್ಯಕ್ಕೆ ಹೊರಡುತ್ತಿದ್ದೇನೆ. ನಿಮ್ಮ ಅನುಮತಿಯನ್ನು ಅಪೇಕ್ಷಿಸಿ ಅದಕ್ಕಾಗಿ ನಿಮ್ಮನ್ನು ಕೇಳುತ್ತಿದ್ದೇನೆ ಎಂದನು. ಆಗ ಆ ಕನ್ಯೆಯರು ಎಲೈ ಬ್ರಾಹ್ಮಣೋತ್ತಮನೇ ಇನ್ನು ಮುಂದೆ ನಿಮ್ಮ ದರ್ಶನವು ನಮಗೆ ದುರ್ಲಭವಾಗುತ್ತದೆ. ಪುಷ್ಕರಾರಣ್ಯಕ್ಕೆ ಇಷ್ಟು ಆದರದಿಂದ ಏತಕ್ಕೆ ಹೊರಟಿರುವಿರಿ ಎಂದು ಪ್ರಶ್ನೆಮಾಡಲು ತೇಜಸ್ವಿಯಾದ ಆ ಮುನಿಯು ಅಹಂಕಾರದಿಂದ ಅಲ್ಲಿ ಮುಂದಿನ ಕಾರ್ತಿಕಮಾಸದಲ್ಲಿ ಕೃತ್ತಿಕಾ ನಕ್ಷತ್ರದಿಂದ ಕೂಡಿದ ಪುಣ್ಯಕರವಾದ ಪೂರ್ಣಿಮೆಯು ಬರುವದು ಎಂದು ಹೇಳಲು ಆ ಕನ್ಯೆಯರು ಪೂಜ್ಯರೇ ನೀವು ಎಲ್ಲಿಗೆ ಹೊರಟಿರುವಿರೋ ಅಲ್ಲಿಗೆ ನಾವುಗಳೂ ಬರುತ್ತೇವೆ. ನಿಮ್ಮಿಂದ ಬೇರೆಯಾಗಿ ಇಲ್ಲಿರಲು ನಮಗೆ ಉತ್ಸಾಹವಿಲ್ಲ.

೧೬-೨೦. ಆ ಮುನಿಯು ಹಾಗೇ ಆಗಲೆಂದು ಹೇಳಲು ಅವರಿಬ್ಬರೂ ಮಹೇಶ್ವರನನ್ನು ವಂದಿಸಿ ಆ ಋಷಿಯೊಡನೆ ಪುಷ್ಕರಾರಣ್ಯಕ್ಕೆ ಅಕ್ಕರೆಯಿಂದ

ತಥಾನ್ಯೇ ಋಷಯಸ್ತತ್ರ ಸಮಾಯಾತಾಸ್ಸಹಸ್ರಶಃ ।
[illegible]ವಾ ವಾ ಜಾನಪದಾ ಮುಕ್ತ್ವೈಕಂ ತು ಋತಧ್ವಜಂ ॥ ೧೭ ॥

ತತಃ ಸ್ನಾತುಂ ಚಕಾರ್ತಿಕ್ಯಾಮೃಷಯಃ ಪುಷ್ಕರೇಷ್ವಥ ।
ರಾಜಾನಶ್ಚ ಮಹಾಭಾಗಾ ನಾಭೋಗೇಕ್ಷ್ವಾಕುಸಂಯುತಾಃ ॥ ೧೮ ॥

ಗಾಲವೋಽಪಿ ಸಮಂ ತಾಭ್ಯಾಂ ಕನ್ಯಕಾಭ್ಯಾಮುಪಾತರತ್ ।
ಸ ಸ್ನಾತುಂ ಪುಷ್ಕರಜಲೆ ಮಧ್ಯಮೆ ಧನುಷಾಂ ಪ್ಲುತೌ ॥ ೧೯ ॥

ನಿಮಗ್ನಶ್ಚಾಪಿ ದದೃಶೆ ಮಹಾಮತ್ಸ್ಯಂ ಜಲೇಶಯಂ ।
ಬಹ್ವೀಭಿರ್ಮತ್ಸ್ಯಕನ್ಯಾಭಿಃ ಪ್ರೀಯಮಾಣಂ ಮುಹುರ್ಮುಹುಃ ॥ ೨೦ ॥

ಸ ತಾಶ್ಚಾಹ ವಿನಿರ್ಮುಕ್ತಾ ಇಮಂ ಧರ್ಮಂ ನ ಜಾನಥ ।
ಜನಾಪವಾದಂ ಘೋರಂ ಹಿ ನ ಶಕ್ತಃ ಸೋಢುಮುಲ್ಬಣಂ ॥ ೨೧ ॥

ತಾಸ್ತ್ವಾಊಚುರ್ಮಹಾಮತ್ಸ್ಯಂ ಕಿಂ ನಪಶ್ಯಾಮ ಗಾಲವಂ ।
ತಾಪಸಂ ಕನ್ಯಕಾಭ್ಯಾಂ ವೈ ವಿಚರಂತಂ ಯಥೇಚ್ಛಯಾ ॥ ೨೨ ॥

ಹೊರಟರು. ಹಾಗೇ ಸಾವಿರಾರು ಋಷಿಗಳೂ ರಾಜರುಗಳೂ ನಗರವಾಸಿಗಳೂ ಸಹ ಋತಧ್ವಜನ ಹೊರತು ಎಲ್ಲರೂ ಅಲ್ಲಿಗೆ ಬಂದು ಸೇರಿದರು. ನಾಭಾಗ, ಇಕ್ಷ್ವಾಕು ಮೊದಲಾದ ಮಹಾವಂಶದ ರಾಜರೂ ಋಷಿಗಳೊಡನೆ ಕೃತ್ತಿಕಾಪೂರ್ಣಿಮೆಯಲ್ಲಿ ಸ್ನಾನಮಾಡಲು ಅಲ್ಲಿ ಬಂದು ಸೇರಿದರು. ಗಾಲವನೂ ಸಹ ಆ ಕನ್ಯಕೆಗಳೊಡನೆ ಅಲ್ಲಿ ಸೇರಿ ಪುಷ್ಕರತೀರ್ಥದಲ್ಲಿ ಮಧ್ಯದ ಧನುಃಪ್ಲುತಿಯಲ್ಲಿ ಸ್ನಾನಕ್ಕಾಗಿ ಇಳಿದನು. ಆ ನೀರಿನಲ್ಲಿ ಮುಳುಗಿ ಅನೇಕ ಮತ್ಸ್ಯಕನ್ಯಕೆಯರಿಂದ ಸಂತೋಷಪಡುತ್ತಾ ಜಲಮಧ್ಯದಲ್ಲಿದ್ದ ಒಂದು ಮಹಾಮತ್ಸ್ಯವನ್ನು ನೋಡಿದನು.

೨೧-೨೪. ಅಲ್ಲಿದ್ದ ಮಹಾಮತ್ಸ್ಯವು ಹೆಣ್ಣುಮೀನುಗಳನ್ನು ಕುರಿತು ಮುಕ್ತಕಂಚುಕರಾಗಿ ವಿಹರಿಸುತ್ತಿರುವ ನೀವು ದಾಂಪತ್ಯ ಧರ್ಮದ ರಹಸ್ಯವನ್ನು ತಿಳಿದಿಲ್ಲ. ಘೋರವಾಗಿಯೂ ಉಲ್ಬಣವಾಗಿಯೂ ಉಂಟಾಗುವ ಜನಾಪವಾದವನ್ನು ನಾನು ಹೇಗೆ ಸಹಿಸಲಿ ಎಂದಿತು. ಅದಕ್ಕೆ ಉತ್ತರವಾಗಿ ಆ ಹೆಣ್ಣುಮೀನುಗಳು ತಾಪಸನಾದ ಗಾಲವನೂ ಸಹ ಎರಡು ಕನ್ಯಕೆಗಳೊಡಗೂಡಿ ಯಥೇಚ್ಛೆಯಿಂದ ಸಂಚರಿಸುತ್ತಿರುವ

ಯದ್ಯಸಾವಪಿ ಧರ್ಮಾತ್ಮಾ ನ ಬಿಭೇತಿ ತಪೋಧನಃ ।
ಜನಾಪವಾದಾತ್ತತ್ಕಿಂ ತ್ವಂ ಬಿಭೇಷಿ ಜಲಮಧ್ಯಗಃ ॥ ೨೩ ॥

ತತಶ್ಚಾಪ್ಯಾಹ ಸ ತಿಮಿರ್ನೈಷವೇತ್ತಿ ತಪೋಧನಃ ।
ರಾಗಾಂಧೋ ನಾಪಿ ಚ ಭಯಂ ವಿಜಾನಾತಿ ಸುಬಾಲಿಶಃ ॥ ೨೪ ॥

ತಚ್ಛ್ರುತ್ವಾ ಮತ್ಸ್ಯವಚನಂ ಗಾಲವೋ ವ್ರೀಡಯಾ ಯುತಃ ।
ನೋತ್ತತಾರ ನಿಮಗ್ನೋಽಪಿ ತಸ್ಥೌ ಸ ವಿಜಿತೇಂದ್ರಿಯಃ ॥ ೨೫ ॥

ಸ್ನಾತ್ವಾ ದ್ವೇ ತೇಽಪಿ ರಂಭೋರೂ ಸಮುತ್ತೀರ್ಯ ತಟೇ ಸ್ಥಿತೇ ।
ಪ್ರತೀಕ್ಷಂತ್ಯೌ ಮುನಿವರಂ ತದ್ದರ್ಶನಸಮುತ್ಸುಕೇ ॥ ೨೬ ॥

ವೃತ್ತಾ ತು ಪುಷ್ಕರೇ ಯಾತ್ರಾ ಗತೋ ಲೋಕೋ ಯಥಾಗತಂ ।
ಋಷಯಃ ಪಾರ್ಥಿವಾಶ್ಚಾನ್ಯೇ ನಾನಾಜಾನಪದಾಸ್ತಥಾ ॥ ೨೭ ॥

ತತ್ರಸ್ಥಿತೈಕಾ ಸುದತೀ ವಿಶ್ವಕರ್ಮತನೂರುಹಾ ।
ಚಿತ್ರಾಂಗದಾ ಸುಚಾರ್ವಂಗೀ ವೀಕ್ಷಂತೀ ತನುಮಧ್ಯಮಾ ॥ ೨೮ ॥

ದನ್ನು ನಾವು ನೋಡುತ್ತಿಲ್ಲವೆ. ತಪಸ್ವಿಯಾಗಿಯೂ ಇರುವ ಈ ಋಷಿಯೇ ಜನಾಪವಾದಕ್ಕೆ ಭಯಪಡದಿರುವ ಸಂದರ್ಭದಲ್ಲಿ ಜಲಮಧ್ಯದಲ್ಲಿರುವ ನೀನು ಇದಕ್ಕಾಗಿ ಏಕೆ ಭಯಪಡಬೇಕು ಎಂದು ಸಮಾಧಾನಪಡಿಸಿದವು. ಆಗ ಆ ಮತ್ಸ್ಯವು ಈ ತಾಪಸನು ರಾಗಾಂಧನಾಗಿಯೂ ಮೂರ್ಖನಾಗಿಯೂ ಇರುವದ್ದರಿಂದ ಲೋಕಾಪವಾದದಿಂದ ಬರಬಹುದಾದ ಭಯವನ್ನೇ ತಿಳಿಯುತ್ತಿಲ್ಲ ಎಂದಿತು.

೨೫-೨೮. ಆ ಮತ್ಸ್ಯದ ಮಾತನ್ನು ಕೇಳಿ ಗಾಲವನು ಲಜ್ಜೆಯಿಂದ ಅಲ್ಲಿಯೇ ಮುಳುಗಿದ್ದನು. ಜಿತೇಂದ್ರಿಯನಾದ ಅವನು ಮೇಲಕ್ಕೆ ಬರಲೇ ಇಲ್ಲ. ಆ ಕನ್ಯಕೆಯರಿಬ್ಬರೂ (ವೇದವತಿ ದಮಯಂತಿ) ಸ್ನಾನಮಾಡಿ ದಡದಲ್ಲಿ ಬಂದು ನಿಂತು ಮುನಿಯಾದ ಗಾಲವನನ್ನು ನೋಡಲು ಉದ್ಯುಕ್ತರಾಗಿ ಅವನನ್ನೇ ನಿರೀಕ್ಷಿಸುತ್ತಾ ದಡದಲ್ಲೇ ನಿಂತಿದ್ದರು. ಪುಷ್ಕರ ತೀರ್ಥದ ಆ ಯಾತ್ರೆಯೆಲ್ಲವೂ ಮುಗಿಯಿತು. ಬಂದಿದ್ದ ಜನರೆಲ್ಲರೂ ಅವರವರ ಮಾರ್ಗವನ್ನು ಹಿಡಿದು ನಡೆದರು. ಋಷಿಗಳೂ ರಾಜಮಹಾರಾಜರುಗಳೂ ನಾಗರಕ ಜನಗಳೂ ಎಲ್ಲರೂ ಹೊರಟುಹೋದರು. ಅಲ್ಲಿದ್ದವರಲ್ಲಿ ಉಳಿದಿರುವವರು ಯಾರೆಂದರೆ ವಿಶ್ವಕರ್ಮಪುತ್ರಿಯಾದ ಚಿತ್ರಾಂಗದೆಯೊಬ್ಬಳೇ. ಅವಳೂ ಸಹ ಇತ್ತ ಅತ್ತ ಯಾರನ್ನೋ ನಿರೀಕ್ಷಿಸುತ್ತಾ ನಿಂತಿದ್ದಳು.

ತೇ ಸ್ಥಿತೇ ಚಾಪಿ ವೀಕ್ಷಂತ್ಯೌ ಗಾಲವಂ ಮುನಿಸತ್ತಮಂ ।
ಸಂಸ್ಥಿತೇ ನಿರ್ಜನೇ ತೀರ್ಥೇ ಗಾಲವೋಽಂತರ್ಜಲೇ ತಥಾ ॥ ೨೯ ॥

ತತೋಽಭ್ಯಾಗಾದ್ದೇವವತೀ ನಾಮ್ನಾ ಗಂಧರ್ವಕನ್ಯಕಾ ।
ಪರ್ಜನ್ಯತನಯಾ ಸಾಧ್ವೀ ಘೃತಾಚೀಗರ್ಭಸಂಭವಾ ॥ ೩೦ ॥

ಕೂಲೇ ಪುಣ್ಯೇ ಸಮಭ್ಯೇತ್ಯ ಸ್ನಾತ್ವಾ ಮಧ್ಯಮಪುಷ್ಕರೇ ।
ದದರ್ಶ ಕನ್ಯಾತ್ರಿತಯ ಮುಭಯೋಸ್ತಟಯೋಃ ಸ್ಥಿತಂ ॥ ೩೧ ॥

ಚಿತ್ರಾಂಗದಾಂ ಸಮಭ್ಯೇತ್ಯ ಪರ್ಯಪೃಚ್ಛದನಿಷ್ಠುರಂ ।
ಕಾಸಿ ಕೇನ ಚ ಕಾರ್ಯೇಣ ನಿರ್ಜನೇ ಹಿಸ್ಥಿತವತ್ಯಸಿ ॥ ೩೨ ॥

ಸಾ ತಾಮುವಾಚ ಪುತ್ರೀಂ ಮಾಂ ವಿಂದಸ್ವ ಸುರವರ್ಧಕೇಃ ।
ಚಿತ್ರಾಂಗದೇತಿ ಸುಶ್ರೋಣಿ ವಿಖ್ಯಾತಾಂ ವಿಶ್ವಕರ್ಮಣಃ ॥ ೩೩ ॥

ಸಾಹಮಭ್ಯಾಗತಾ ಭದ್ರೇ ಸ್ನಾತುಂ ಪುಣ್ಯಾಂ ಸರಸ್ವತೀಂ ।
ನೈಮಿಷೇ ಕಾಂಚನಾಕ್ಷೀಂ ತು ವಿಖ್ಯಾತಾಂ ಧರ್ಮಮಾತರಂ ॥ ೩೪ ॥

೨೯-೩೩. ಹೀಗೆ ಋಷಿಯಾದ ಗಾಲವನನ್ನು ನಿರೀಕ್ಷಿಸುತ್ತಾ ಅವರಿಬ್ಬರೂ ದಡದಲ್ಲೇ ನಿಂತಿದ್ದರು. ಗಾಲವನೂ ಮೇಲಕ್ಕೆ ಬರದೆ ನೀರಿನ ಒಳಗೇ ನಿಂತನು. ಆಗ ಅಲ್ಲಿಗೆ ದೇವವತಿ ಎಂಬ ಪರ್ಜನ್ಯನಿಂದ ಘೃತಾಚಿಯ ಗರ್ಭದಲ್ಲಿ ಹುಟ್ಟಿದ ಗಂಧರ್ವಕನ್ಯೆಯು ಬಂದಳು. ಅವಳೂ ಮಧ್ಯಮಪುಷ್ಕರದಲ್ಲಿ ಸ್ನಾನಮಾಡಿ ಪುಣ್ಯಕರವಾದ ದಡದಲ್ಲಿ ಬಂದು ನಿಂತು ಎರಡುದಡದಲ್ಲಿಯೂ ನಿಂತಿದ್ದ ಈ ಕನ್ಯಾತ್ರಯ (ವೇದವತೀ, ದಮಯಂತೀ, ಚಿತ್ರಾಂಗದಾ) ವನ್ನೂ ನೋಡಿದಳು. ಹಾಗೆ ನೋಡಿ ಚಿತ್ರಾಂಗದೆಯ ಸಮೀಪಕ್ಕೆ ಬಂದು ಮೃದುವಾದ ಮಾತಿನಿಂದ ನೀನು ಯಾರು, ಯಾವ ಕಾರ್ಯಕ್ಕಾಗಿ ನಿರ್ಜನವಾದ ಈ ದಡದಲ್ಲಿ ನಿಂತಿದ್ದೀಯೆ ಎಂದು ಪ್ರಶ್ನೆ ಮಾಡಲು ಚಿತ್ರಾಂಗದೆಯು ನಾನು ದೇವಶಿಲ್ಪಿಯಾದ ವಿಶ್ವಕರ್ಮನ ಪುತ್ರಿಯು ನನ್ನ ಹೆಸರು ಚಿತ್ರಾಂಗದೆ ಎಂದಳು.

೩೪-೩೮. ಅಂತಹ ನಾನು ಸರಸ್ವತೀನದಿಯ ಸ್ನಾನಕ್ಕಾಗಿ ಹೊರಟು ನೈಮಿಷದಲ್ಲಿರುವ ಕಾಂಚನಾಕ್ಷಿ ಎಂಬ ಸುಪ್ರಸಿದ್ಧವಾದ ಧರ್ಮಮಾತೃವಾದ ಸರಸ್ವತಿಯ ಶಾಖೆಗೆ ಬಂದೆನು. ದೇವತೆಗಳಿಂದ ವರಿಸಲು ಅರ್ಹಳಾದ ನಾನು ಅಲ್ಲಿ ಬಂದಾಗ ವಿದರ್ಭ

ತತ್ರಾಗತಾ ಸುರಾಹಾರ್ಹಂ ಪೃಷ್ಟ್ವಾ ವೈದರ್ಭಕೇಣ ಹಿ ।
ಸುರಥೇನ ಸ ಕಾಮಾರ್ತೋ ಮಾಮೇವ ಶರಣಂ ಗತಃ ॥ ೩೫ ॥

ಮಯಾತ್ಮಾ ತಸ್ಯ ದತ್ತಶ್ಚ ಸಖೀಭಿರ್ವಾರ್ಯಮಾಣಯಾ ।
ತತಃ ಶಪ್ತಾಸ್ಮಿ ತಾತೇನ ವಿಯುಕ್ತಾಸ್ಮಿ ಚ ಭೂಭುಜಾ ॥ ೩೬ ॥

ಮರ್ತುಂ ಕೃತಮತಿರ್ಭದ್ರೆ ವಾರಿತಾ ಗುಹ್ಯಕೇನ ಚ ।
ಶ್ರೀಕಂಠಮಗಮಂ ದ್ರಷ್ಟುಂ ತತೋ ಗೋದಾವರೀ ಜಲಂ ॥ ೩೭ ॥

ತಸ್ಮಾದಿದಂ ಸಮಾಯಾತಾ ತೀರ್ಥಪ್ರವರಮುತ್ತಮಂ ।
ನ ಚಾಪಿ ದೃಷ್ಟಃ ಸುರಥಃ ಸ ಮನೋಹ್ಲಾದನಃ ಪತಿಃ ॥ ೩೮ ॥

ಭವತೀ ಚಾತ್ರ ಕಾ ಬಾಲೆ ವೃತ್ತೆ ಯಾತ್ರಾಫಲೇ ಧುನಾ ।
ಸಮಾಗತಾ ಹಿ ತಚ್ಛಂಸ ಮಮ ಸತ್ಯೇನ ಭಾಮಿನಿ ॥ ೩೯ ॥

ಸಾಬ್ರವೀಚ್ಛ್ರೂಯ ತಾಂ ಯಾಸ್ಮಿ ಮಂದಭಾಗ್ಯಾ ಕೃಶೋದರಿ ।
ಯಥಾ ಯಾತ್ರಾಫಲೆ ವೃತ್ತೆ ಸಮಾಯಾತಾಸ್ಮಿ ಪುಷ್ಕರಂ ॥ ೪೦ ॥

ದೇಶದ ಧೊರೆಯಾದ ಸುರಥನಿಂದ ಪ್ರಶ್ನೆಮಾಡಲ್ಪಟ್ಟೆನು. ಕಾಮಾರ್ತನಾದ ಆ ಧೊರೆಯು ನನ್ನನ್ನು ಅಪೇಕ್ಷಿಸಿ ತನ್ನ ಇಷ್ಟಸಿದ್ಧಿಗಾಗಿ ನನ್ನಲ್ಲೇ ಶರಣಾಗತನಾದನು. ಆಗ ಸಖಿಗಳು ತಡೆಯುತ್ತಿದ್ದರೂ ಅದನ್ನು ಲಕ್ಷಿಸದೆ ನಾನೇ ಅವನಿಗೆ ಆತ್ಮದಾನವನ್ನು ಮಾಡಿದೆನು. ಅನಂತರ ಕುಪಿತನಾದ ತಂದೆಯು ನನಗೆ ಶಾಪಕೊಟ್ಟದ್ದರಿಂದ ಆ ಧೊರೆಯಿಂದ ವಿಯುಕ್ತಳಾದೆನು. ಅಮ್ಮಾ, ಆಗ ಪ್ರಾಣವನ್ನೂ ಬಿಡಲು ಸಿದ್ಧಳಾಗಿದ್ದ ನನ್ನನ್ನು ಒಬ್ಬ ಗುಹ್ಯಕನು ತಡೆದನು. ಅನಂತರ ಅವನ ಮಾತಿನಂತೆ ಶ್ರೀಕಂಠಕ್ಷೇತ್ರಕ್ಕೆ ಬಂದೆನು. ಅಲ್ಲಿಂದ ಸಪ್ತಗೋದಾವರಕ್ಷೇತ್ರಕ್ಕೆ ಬಂದು ಅಲ್ಲಿಂದ ಈಗ ಈ ತೀರ್ಥಕ್ಕೆ ಬಂದಿದ್ದೇನೆ. ನನ್ನ ಮನಸ್ಸಿಗೆ ಆಹ್ಲಾದಕರನಾದ ಸುರಥನೆಂಬ ಆ ಪತಿಯನ್ನು ನಾನು ಇನ್ನೂ ನೋಡಲಿಲ್ಲ.

೩೯-೪೨. ಎಲೈ ಬಾಲೆಯೇ, ನೀನಾರು, ಯಾತ್ರೆಯ ಕೆಲಸವೆಲ್ಲವೂ ಮುಗಿದ ಮೇಲೆ ಏತಕ್ಕಾಗಿ ನೀನು ಬಂದಿದ್ದೀಯೆ, ಎಲ್ಲವನ್ನೂ ನಿಜವಾಗಿ ಹೇಳು ಎಂದು ಕೇಳಲಾಗಿ ಅವಳು ಎಲೈ ಸುಂದರಿಯೇ, ದುರ್ಭಾಗ್ಯಳಾದ ನಾನು ಯಾತ್ರೆಯೆಲ್ಲವೂ ಮುಗಿದಮೇಲೆ ಏತಕ್ಕೆ ಇಲ್ಲಿ ಬಂದನೆಂಬುದನ್ನೂ ಈ ಪುಷ್ಕರಕ್ಷೇತ್ರಕ್ಕೆ ಬಂದ ನಾನು

ಪರ್ಜನ್ಯಸ್ಯ ಘೃತಾಚ್ಯಾಂತು ಜಾತಾ ದೇವವತೀತಿಹಿ ।
ರಮಮಾಣಾ ವನೋದ್ದೇಶೇ ದೃಷ್ಟಾಸ್ಮಿ ಕ ಪಿನಾಸಖಿ ॥ ೪೧ ॥

ಸಮಾಭ್ಯೇತ್ಯಾಬ್ರವೀನ್ಮಾಂತು ಯಾಸಿ ವೇದವತೀಕ್ವಹಿ ।
ಆನೀತ್ಯಾಸ್ಯಾಶ್ರಮಾತ್ಕೇನ ಭೂಪೃಷ್ಠಾನ್ಮೇರುಪರ್ವತಂ ॥ ೪೨ ॥

ತತೋ ಮಯೋಕ್ತೋನಾಸ್ಮೀತಿಕಪೆ ವೇದವತೀತ್ಯಹಂ ।
ನಾಮ್ನಾ ದೇವವತೀತ್ಯೇವಂ ಮೇರಾವಪಿ ಕೃತಾಶ್ರಯಾ ॥ ೪೩ ॥

ತತಸ್ತೇನಾತಿ ದುಷ್ಟೇನ ವಾನರೇಣಾಭಿವಿದ್ರುತಾ ।
ಸಮಾರೂಢಾಸ್ಮಿ ಸಹಸಾ ಬಂಧುಜೀವಂ ನ ಗೋತ್ತಮಂ ॥ ೪೪ ॥

ತೇನಾಪಿ ವೃಕ್ಷಸ್ತರಸಾ ಪಾದಾಕ್ರಾಂತಸ್ತ್ವಭಜ್ಯತ ।
ತತೋಽಸ್ಯವಿಪುಲಾಂ ಶಾಖಾಂ ಸಮಾಲಿಂಗ್ಯಸ್ಥಿತಾತ್ವಹಂ ॥ ೪೫ ॥

ತತಃ ಪ್ಲವಂಗಮೋ ವೃಕ್ಷಂ ಪ್ರಾಕ್ಷಿಪತ್ಸಾಗರಾಂಭಸಿ ।
ಸಹ ತೇ ನೈವವೃಕ್ಷೇಣ ಪತಿತಾಸ್ಮ್ಯಹಮಾಕುಲಾ ॥ ೪೬ ॥

ಯಾರು ಎಂಬುದನ್ನೂ ಹೇಳುತ್ತೇನೆ ಕೇಳು. ಪರ್ಜನ್ಯನಿಂದ ಘೃತಾಚಿಯಲ್ಲಿ ಜನಿಸಿದ ವೇದವತಿಯು ನಾನು. ಕಾಡಿನಲ್ಲಿ ಸಂತೋಷದಿಂದ ವಿಹರಿಸುತ್ತಿದ್ದ ನನ್ನನ್ನು ಒಂದು ಕಪಿಯು ನೋಡಿತು. ಹಾಗೂ ಸಮೀಪಕ್ಕೆ ಬಂದು ವೇದವತಿ ಎಲ್ಲಿ ಹೋಗುತ್ತೀಯೆ, ಭೂಮಿಯಲ್ಲಿದ್ದ ಆಶ್ರಮದಿಂದ ನಿನ್ನನ್ನು ಮೇರುಪರ್ವತಕ್ಕೆ ಕರೆತಂದವರಾರು ಎಂದು ಕೇಳಿತು.

೪೩-೪೬. ಆಗ ನಾನು ಕಪಿಯೇ, ನಾನು ವೇದವತಿಯಲ್ಲ ದೇವವತಿ ಎಂದು ನನ್ನ ಹೆಸರು. ಈ ಹೆಸರಿನಿಂದಲೇ ನಾನು ಮೇರುಪರ್ವತದಲ್ಲಿ ಆಶ್ರಯಹೊಂದಿರುವೆನು ಎನ್ನಲು ಆ ದುಷ್ಟಕಪಿಯು ನನ್ನನ್ನು ಓಡಿಸಿಕೊಂಡುಬಂದಿತು. ಆಗ ನಾನು ತ್ವರೆಯಿಂದ ಸಮೀಪದಲ್ಲಿದ್ದ ಬಂಧುಜೀವವೃಕ್ಷಕ್ಕೆ ಹತ್ತಿಕೊಂಡೆನು. ಆ ಮರವೂ ಮೇಲಕ್ಕೆ ಹತ್ತಿದ ಕಪಿಯ ಪಾದದಿಂದ ಮುರಿದುಬಿದ್ದಿತು. ಆಗ ನಾನು ಆ ಮರದ ದೊಡ್ಡ ದೊಂದು ಕೊಂಬೆಯನ್ನು ತಬ್ಬಿಕೊಂಡು ಕುಳಿತೆನು. ಆಗ ಕಪಿಯು ಆ ಮರವನ್ನೇ ಸಮುದ್ರಕ್ಕೆ ಎಸೆಯಿತು. ಆಗ ನಾನೂ ಆ ಮರದೊಡನೆ ಸಮುದ್ರದಲ್ಲಿ ಬಿದ್ದು ವ್ಯಾಕುಲಳಾದೆನು.

ತತೋಂಬರತಲಾಧ್ವೃಕ್ಷಂ ನಿಪತಂತಂ ಯದೃಚ್ಛಯಾ ।
ದದೃಶುಃ ಸರ್ವಭೂತಾನಿ ಸ್ಥಾವರಾಣಿ ಚರಾಣಿ ಚ ॥ ೪೭ ॥

ತತೋ ಹಾಹಾಕೃತಂ ಲೋಕೈಃ ಮಾಂ ಪತಂತೀಂ ನಿರೀಕ್ಷ್ಯ ಹಿ ।
ಊಚುಶ್ಚ ಸಿದ್ಧಗಂಧರ್ವಾ ಕಷ್ಟಂ ಸೇಯಂ ಮಹಾತ್ಮನಃ ॥ ೪೮ ॥

ಇಂದ್ರದ್ಯುಮ್ನಸ್ಯ ಮಹಿಷೀ ಗದಿತಾ ಬ್ರಹ್ಮಣಾ ಸ್ವಯಂ ।
ಮನೋಃ ಪುತ್ರಸ್ಯ ವೀರಸ್ಯ ಸಹಸ್ರಕ್ರತುಯಾಜಿನಃ ॥ ೪೯ ॥

ತಾಂ ವಾಣೀಂ ಮಧುರಾಂ ಶ್ರುತ್ವಾ ಮೋಹಮಸ್ಮ್ಯಾಗತಾ ತತಃ ।
ನಚ ಜಾನೆ ಸ ಕೇನಾಪಿ ವೃಕ್ಷಶ್ಛಿನ್ನಃ ಸಹಸ್ರಧಾ ॥ ೫೦ ॥

ತತೋಽಸ್ಮಿ ವೇಗಾದ್ವಲಿನಾ ಹೃತಾನಲಸಖೇನ ಹಿ ।
ಸಮಾನೀತಾ ಸ್ಮ್ಯಹಮಿಮಂ ತ್ವಂ ದೃಷ್ಟ್ವಾ ಚಾದ್ಯ ಸುಂದರೀ ॥ ೫೧ ॥

ತತ ಉತ್ತಿಷ್ಠ ಗಚ್ಛಾವಃ ಕೇ ಉಭೆ ಸಂಸ್ಥಿತೆ ವರೆ ।
ಕನ್ಯಕೆ ಅನುಪಶ್ಯೇಹ ಪುಷ್ಕರಸ್ಯೋತ್ತರೆ ತಟೆ ॥ ೫೨ ॥

೪೭-೫೦. ಆಗ ಆಕಾಶಮಾರ್ಗದಿಂದ ಆಕಸ್ಮಿಕವಾಗಿ ಬೀಳುತ್ತಿರುವ ಆ ಮರವನ್ನು ಸರ್ವಭೂತಗಳೂ, ಚರಾಚರಗಳೂ ಆಶ್ಚರ್ಯದಿಂದ ನೋಡಿದವು. ಸಮುದ್ರದಲ್ಲಿ ಬೀಳುತ್ತಿರುವ ನನ್ನನ್ನು ನೋಡಿ ಪ್ರಪಂಚವೇ ಹಾಹಾಕಾರಮಾಡಿತು. ಸಿದ್ಧಗಂಧರ್ವರೆಲ್ಲರೂ ಮನುವಿನ ಪುತ್ರನಾಗಿಯೂ ಸಹಸ್ರಕ್ರತುವನ್ನು ಮಾಡಿ ಶೂರನಾಗಿಯೂ ಮಹಾತ್ಮನಾಗಿಯೂ ಇರುವ ಇಂದ್ರದ್ಯುಮ್ನನಿಗೆ ಮಹಿಷಿಯಾಗುವಳೆಂದು ಚತುರ್ಮುಖನಿಂದ ಸಾಕ್ಷಾತ್ತಾಗಿ ಹೇಳಲ್ಪಟ್ಟಿದ್ದ ಈ ದೇವವತಿಯು ಕಷ್ಟಕ್ಕೆ ಸಿಕ್ಕಿ ವಿಪತ್ತಿಗೆ ತುತ್ತಾಗುತ್ತಿದ್ದಾಳೆ ಎಂದು ಉದ್ಘೋಷಿಸಿದರು. ಮಧುರವಾದ ಆ ಮಾತನ್ನು ಕೇಳಿದ ಒಡನೆಯೇ ನಾನು ಮೂರ್ಛೆಹೊಂದಿದೆನು. ಆ ಮರವು ಸಾವಿರಾರು ತುಂಡಾಗಿ ಯಾರಿಂದ ಕತ್ತರಿಸಲ್ಪಟ್ಟಿತೋ ಅವನನ್ನು ನಾನರಿಯೆ.

೫೧-೫೨. ಅನಂತರ ಬಲವಾದ ವಾಯುವಿನಿಂದ ಒಯ್ಯಲ್ಪಟ್ಟ ನಾನು ಈ ಪ್ರದೇಶಕ್ಕೆ ಬಂದು ಬಿದ್ದೆನು. ಇಲ್ಲಿ ನನ್ನಂತೆ ದುಃಖಪಡುತ್ತಿರುವ ನಿನ್ನನ್ನು ನೋಡಿದೆನು. ಏಳು ಹೋಗೋಣ ಪುಷ್ಕರದ ಉತ್ತರ ತೀರದಲ್ಲಿ ಸುರೂಪಿಣಿಯರಾದ ಇಬ್ಬರು ಕನ್ಯೆಯರು ಇರುವಂತೆ ಕಾಣುತ್ತಿದೆ ನೋಡು ಎಂದು ಹೇಳಿ ಆ ಕನ್ಯೆಯರನ್ನು

ಏವಮುಕ್ತ್ವಾ ವರಾಂಗೀ ಸಾ ತಯಾ ಸುತನುಕನ್ಯಯಾ ।
ಜಗಾಮು ಕನ್ಯಕೆ ದ್ರಷ್ಟುಂ ಪ್ರಷ್ಟುಂ ಕಾರ್ಯಂ ತು ಕೌತುಕಾತ್ ॥ ೫೩ ॥

ತತೋ ಗತ್ವಾ ಪರ್ಯಪೃಚ್ಛತ್ತೆ ಊಚತು ರುಭೆ ಅಪಿ ।
ಯಥಾತಥ್ಯಂ ತಯೋಸ್ತಾಭ್ಯಾಂ ಸ್ವಮಾತ್ಮಾನಂ ನಿವೇದಿತಂ ॥ ೫೪ ॥

ತತಸ್ತಾಶ್ಚತುರೋಪೀಹ ಸಪ್ತಗೋದಾವರಂ ಜಲಂ ।
ಸಂಪ್ರಾಪ್ಯ ತೀರೆ ತಿಷ್ಠಂತಿ ಅರ್ಚಂತ್ಯೋ ಹಾಟಕೇಶ್ವರಂ ॥ ೫೫ ॥

ತತೋ ಬಹೂನ್ವರ್ಷಗಣಾನ್ ಬಭ್ರಮುಸ್ತೇ ಜನಾಸ್ತ್ರಯಃ ।
ತಾಸಾಮರ್ಥಾಯ ಶಕುನಿ ರ್ಜಾಬಾಲಿಃ ಸ ಋತಧ್ವಜಃ ॥ ೫೬ ॥

*ಭಾರವಾಹೀ ತತೋ ಭಿನ್ನೋ ದಶಾಂದಶತಿಕೆಗತೆ ।
ಕಾಲೇ ಜಗಾಮ ನಿರ್ವೇದಾತ್ಸಮಂ ಪಿತ್ರಾನುಶಾಕಲಂ ॥ ೫೭ ॥

ನೋಡಿ ಅವರ ಕಾರ್ಯವೇನೆಂಬುದನ್ನು ಕೇಳಲು ಕುತೂಹಲದಿಂದ ಹೊರಟರು. ಅವರ ಸಮೀಪಕ್ಕೆ ಹೋಗಿ ಅವರ ವೃತ್ತಾಂತವನ್ನು ಪ್ರಶ್ನೆಮಾಡಲು ಆ ಇಬ್ಬರೂ (ಹೇಳುತ್ತಾರೆ)

೫೪-೫೮. ತಮ್ಮ ವೃತ್ತಾಂತವನ್ನು ಯಥಾರ್ಥವಾಗಿ ಹೇಳಲು ತನ್ನ ಯೋಗ ಕ್ಷೇಮವನ್ನೂ ಅವರಿಗೆ ತಿಳಿಸಿದರು. ಅನಂತರ ಆ ನಾಲ್ಕು ಜನರೂ ಅಲ್ಲಿಂದ ಸಪ್ತ ಗೋದಾವರ ಕ್ಷೇತ್ರಕ್ಕೆ ಹೋಗಿ ತೀರದಲ್ಲಿರುವ ಹಾಟಕೇಶ್ವರನನ್ನು ಪೂಜಿಸುತ್ತಾ ಇರುತ್ತಿದ್ದರು. ಇತ್ತ ಅವರನ್ನು ಹುಡುಕಿಕೊಂಡು ಶಕುನಿ, ಜಾಬಾಲಿ, ಋತಧ್ವಜ ಈ ಮೂವರೂ ಅನೇಕ ವರ್ಷಪರ್ಯಂತ ದೇಶದಲ್ಲಿ ಸುತ್ತಿದರು. ಜಟೆಯಿಂದ ಬಿಗಿ ಯಲ್ಪಟ್ಟಿದ್ದ ಮರದ ಕೊಂಬೆಯ ತುಂಡನ್ನು ತಲೆಯಲ್ಲಿ ಹೊತ್ತು ಹೊತ್ತು ದಣಿದಿದ್ದ ಜಾಬಾಲಿಯು ಹೀಗೆಯೇ ಹತ್ತುಸಾವಿರ ವರ್ಷಕಳೆದ ಮೇಲೆ ಬಹಳ ನಿರ್ವೇದ ಹೊಂದಿ ತಂದೆಯೊಡನೆ ಶಾಕಲವೆಂಬ ದೇಶಕ್ಕೆ ಬಂದನು. ಅಲ್ಲಿ ಮನುಪುತ್ರನಾದ

---

* ಈ ಪಾಠವು ಅಶುದ್ಧವಾಗಿದೆ. ತಾತ್ಪರ್ಯದೃಷ್ಟಿಯಿಂದ ಅರ್ಥವನ್ನು ಬರೆಯಲಾಗಿದೆ.

ತಸ್ಮಿನ್ನರಪತಿಃ ಶ್ರೀಮಾನಿಂದ್ರದ್ಯುಮ್ನೋ ಮನೋಃ ಸುತಃ ।
ಸಮುಧ್ಯಾಸ್ತೆ ಸ ವಿಜ್ಞಾಯ ಸಾರ್ಘಪಾದ್ಯೋ ವಿನಿರ್ಯಯೌ ॥ ೫೮ ॥

ಸಮ್ಯಕ್ ಸಂಪೂಜಿತಸ್ತೇನ ಸಜಾಬಾಲಿ ಋತಧ್ವಜಃ ।
ಸ ಚೇಕ್ಷ್ವಾಕುಸುತೋ ಧೀಮಾನ್ಶಕುನಿಃ ಭ್ರಾತೃಜೋಽರ್ಚಿತಃ ॥ ೫೯ ॥

ತತೋ ವಾಕ್ಯಂ ಮುನಿಃ ಪ್ರಾಹ ಇಂದ್ರದ್ಯುಮ್ನಮೃತಧ್ವಜಃ ।
ರಾಜನ್ನಷ್ಟಾ ಸುತಾಸ್ಮಾಕಂ ದಮಯಂತೀತಿ ವಿಶ್ರುತಾ ॥ ೬೦ ॥

ತದರ್ಥಂ ಚೈವ ವಸುಧಾ ಅಸ್ಮಾಭಿರಟಿತಾ ನೃಪ ।
ತಸ್ಮಾದುತ್ತಿಷ್ಠ ಮಾರ್ಗಸ್ಯ ಸಾಹಾಯ್ಯಂ ಕರ್ತುಮರ್ಹಸಿ ॥ ೬೧ ॥

ಅಥೋವಾಚ ನೃಪೋ ಬ್ರಹ್ಮನ್ ಮಮಾಪಿ ಲಲನೋತ್ತಮಾ ।
ನಷ್ಟಾ ಕೃತಶ್ರಮಸ್ಯಾಪಿ ಕಸ್ಯಾಹಂ ಕಥಯಾಮಿ ತಾಂ ॥ ೬೨ ॥

ಆಕಾಶಾತ್ಪರ್ವತಾಕಾರಃ ಪತಮಾನೋ ನಗೋತ್ತಮಃ ।
ಸಿದ್ಧಾನಾಂ ವಾಕ್ಯಮಾಕರ್ಣ್ಯ ಬಾಣೈಶ್ಛಿನ್ನಃ ಸಹಸ್ರಧಾ ॥ ೬೩ ॥

ಇಂದ್ರದ್ಯುಮ್ನನೆಂಬ ಧೊರೆಯು ರಾಜ್ಯವಾಳುತ್ತಿದ್ದನು. ಆ ಧೊರೆಯೂ ಈ ಋಷಿಗಳ ಆಗಮನವನ್ನು ತಿಳಿದು ಅರ್ಘ್ಯಪಾದ್ಯಾದಿಪೂಜಾಸಾಮಗ್ರಿಗಳೊಡನೆ ಎದುರುಗೊಂಡು ಬಂದನು.

೫೯-೬೨. ಆ ಋತಧ್ವಜನು ಜಾಬಾಲಿಯೊಡನೆ ಇಂದ್ರದ್ಯುಮ್ನನಿಂದ ಚನ್ನಾಗಿ ಸತ್ಕರಿಸಲ್ಪಟ್ಟನು. ಆಗ ಇಂದ್ರದ್ಯುಮ್ನನ ತಮ್ಮನ ಮಗನಾದ ಶಕುನಿಯೂ ಸತ್ಕರಿಸಲ್ಪಟ್ಟನು. ಆಗ ಋತಧ್ವಜನು ಇಂದ್ರದ್ಯುಮ್ನನನ್ನು ಕುರಿತು ರಾಜನೇ ದಮಯಂತೀ ಎಂದು ಪ್ರಸಿದ್ಧಳಾದ ನಮ್ಮ ಮಗಳು ಎಲ್ಲಿಯೊ ನಷ್ಟವಾಗಿದ್ದಾಳೆ. ಅವಳನ್ನು ಹುಡುಕುವುದಕ್ಕಾಗಿಯೇ ನಾವು ಭೂಮಿಯನ್ನು ಸುತ್ತಿದೆವು. ಆದುದರಿಂದ ಅವಳನ್ನು ಪುನಃ ಹುಡುಕುವ ವಿಷಯದಲ್ಲಿ ಮಾರ್ಗಸಹಾಯವು ನಿನ್ನಿಂದ ದೊರೆಯ ಬೇಕಾಗಿದೆ. ಆದುದರಿಂದ ನಮಗೆ ಸಹಾಯಮಾಡಲು ಏಳು ಎಂದು ಕೇಳಲು ಆ ಧೊರೆಯು ಪೂಜ್ಯರೇ ನನ್ನದೊಂದು ಸ್ತ್ರೀರತ್ನವೂ ಕೂಡ ಎಲ್ಲಿಯೊ ನಷ್ಟವಾಗಿದೆ, ಎಷ್ಟು ಶ್ರಮಪಟ್ಟರೂ ಸಿಕ್ಕಲಿಲ್ಲ. ಈ ದುಃಖವನ್ನು ಯಾರೊಡನೆ ಹೇಳಲಿ ಎಂದನು.

೬೩-೬೬. ಆಕಾಶದಿಂದ ಪರ್ವತಾಕಾರವಾಗಿ ಬೀಳುತ್ತಿದ್ದ ಮರವನ್ನು ಸಿದ್ಧರ ಮಾತಿನಿಂದ ತಿಳಿದು ಬಾಣಗಳಿಂದ ಚೂರುಚೂರಾಗಿ ಕತ್ತರಿಸಿದೆನು. ಆ ಬಾಣ

*ಶಿಖ್ಯೈಃಸಾ ವರಾರೋಹಾ ವಿಭಿನ್ನಾ ಲಾಘವಾನ್ಮಯಾ ।
ನಹಿ ಜಾನಾಮಿ ಸಾ ಕುತ್ರ ತಸ್ಮಾದ್ಗಚ್ಛಾಮಿ ಮಾರ್ಗಿತುಂ ॥ ೬೪ ॥

ಇತ್ಯೇವಮುಕ್ತ್ವಾ ಸ ನೃಪಃ ಸಮುತ್ಥಾಯ ತ್ವರಾನ್ವಿತಃ ।
ಸ್ಯಂದನಾನಿ ದ್ವಿಜಾಭ್ಯಾಂ ಸ-ಭ್ರಾತೃಪುತ್ರಾಯ ಚಾರ್ಪಯತ್ ॥ ೬೫ ॥

ತೈರ್ಧಿರೂಢರಥಾಸ್ತೂರ್ಣಂ ಮಾರ್ಗಂತಿ ವಸುಧಾಂ ಕ್ರಮಾತ್ ।
ಬದರ್ಯಾಶ್ರಮಮಾಸಾದ್ಯ ದದೃಶುಃ ತಪಸಾಂ ನಿಧಿಂ ॥ ೬೬ ॥

ತಪಸಾ ಕರ್ಶಿತಂ ದೀನಂ ಮಲಪಂಕಜಟಾಧರಂ ।
ನಿಶ್ವಾಸಾಯಾಸಪರಮಂ ಪ್ರಥಮೇ ವಯಸಿ ಸ್ಥಿತಂ ॥ ೬೭ ॥

ತಮುಪೇತ್ಯಾಬ್ರವೀದ್ರಾಜಾ ಇಂದ್ರದ್ಯುಮ್ನೋ ಮಹಾಭುಜಃ ।
ತಪಸ್ವಿನ್ ಯೌವನೇ ಘೋರ ಆಸ್ಥಿತೋಽಸಿ ಸುದುಶ್ಚರಂ ॥ ೬೮ ॥

ಗಳಿಂದಲೇ ಕನ್ಯಾರತ್ನವನ್ನೂ ಲಾಘವದಿಂದ ಬಿಮ್ಮಿಸಿದೆನು. ಈಗ ಆ ಕನ್ಯೆಯು ಎಲ್ಲಿ ಸೇರಿರುವಳೋ ಅದು ನನಗೆ ತಿಳಿದಿಲ್ಲ. ಆದುದರಿಂದ ನಾನೂ ಹುಡುಕಲು ಹೊರಡುತ್ತೇನೆಂದು ಹೇಳಿ ಆ ಧೊರೆಯು ತ್ವರೆಯಿಂದ ಎದ್ದು ಪ್ರಯಾಣಾಸನ್ನದ್ಧನಾಗಿ ಆ ಬ್ರಾಹ್ಮಣೋತ್ತಮರಿಗೂ ತನ್ನ ತಮ್ಮನ ಮಗನಾದ ಶಕುನಿಗೂ ಸಹ ರಥಗಳನ್ನು ಸಿದ್ಧಪಡಿಸಿದನು. ಅವರೆಲ್ಲರೂ ರಥಾರೂಢರಾಗಿ ಭೂಮಿಯೆಲ್ಲವನ್ನೂ ಕ್ರಮವಾಗಿ ಸುತ್ತುತ್ತಾ ಬದರಿಕಾಶ್ರಮಕ್ಕೆ ಬಂದು ಅಲ್ಲಿದ್ದ ಒಬ್ಬ ತಪೋನಿಧಿಯನ್ನು ಕಂಡರು

೬೭-೭೧. ಅವನು ಪ್ರಥಮ ವಯಸ್ಸಿನವನಾದರೂ ತಪಸ್ಸಿನಿಂದ ಕೃಶನಾಗಿಯೂ ಬಹಳ ದೀನನಾಗಿಯೂ ಕೊಳೆಯಿಂದ ಕೂಡಿದ ಜಟಾಧಾರಿಯಾಗಿಯೂ ನಿಶ್ವಾಸೋಚ್ಛ್ವಾಸಗಳಿಂದ ಬಹಳ ಆಯಾಸಪಡುತ್ತಲೂ ಇದ್ದನು. ಅವನ ಸಮೀಪಕ್ಕೆ ಹೋಗಿ ಪರಾಕ್ರಮಿಯಾದ ಇಂದ್ರದ್ಯುಮ್ನನು ಎಲೈ ತಪಸ್ವಿಯೇ ನೀನು ಯೌವನಶಾಲಿಯಾಗಿದ್ದರೂ ಕೂಡ ಘೋರವಾದ ಹಾಗೂ ದುಶ್ಚರವಾದ ಈ ತಪಸ್ಸಿ

---

* ಇಲ್ಲಿ ಪಾಠವು ಸರಿಯಾಗಿಲ್ಲ.

ತಪಃ ಕಿಮರ್ಥಂ ತಚ್ಛಂಸ ಕಿಮಭಿಪ್ರೇತಮುಚ್ಯತಾಂ ।
ಸೋಽಬ್ರವೀತ್ಕೋ ಭವಾನ್ ಬ್ರೂಹಿ ಮಮಾತ್ಮಾನಂ ಸುಹೃತ್ತಯಾ ॥ ೬೯ ॥

ಪರಿಪೃಚ್ಛಸಿ ಶೋಕಾರ್ತಂ ಪರಿದ್ಯೂನಂ ತಪೋನ್ವಿತಂ ।
ಸ ಪ್ರಾಹ ರಾಜಾಸ್ಮಿ ಬಲೀ ತಪಸ್ವಿನ್ ಶಾಕಲೆ ಪುರೆ ॥ ೭೦ ॥

ಮನೋಃ ಪುತ್ರಃ ಪ್ರಿಯೋ ಭ್ರಾತಾ ಇಕ್ಷ್ವಾಕೋಃ ಕಥಿತಂ ತಪ ।
ಸಚಾಸ್ಮೈ ಪೂರ್ವಚರಿತಂ ಸರ್ವಂ ಕಥಿತವಾನ್ ನೃಪಃ ॥ ೭೧ ॥

ಶ್ರುತ್ವಾ ಪ್ರೋವಾಚ ರಾಜರ್ಷಿರ್ಮಾಮುಂಚ ಸ್ವಕಲೇಬರಂ ।
ಆಗಮಿಷ್ಯಾಮಿ ತನ್ವಂಗೀಂ ವಿಚೇತುಂ ಭ್ರಾತೃಜೋಸಿ ಮೆ ॥ ೭೨ ॥

ಇತ್ಯುಕ್ತ್ವಾ ಸಂಪರಿಷ್ವಜ್ಯ ನೃಪಂ ಧರ್ಮೆ ಸುಸಂಯುತಂ ।
ಸಮಾರೋಪ್ಯ ರಥಂ ತೂರ್ಣಂ ತಾಪಸಾಭ್ಯಾಂ ನ್ಯವೇದಯತ್ ॥ ೭೩ ॥

ಋತಧ್ವಜಃ ಸಪುತ್ರಸ್ತು ತಂ ದೃಷ್ಟ್ವಾ ಪೃಥಿವೀಪತಿಂ ।
ಪ್ರೋವಾಚ ರಾಜನ್ನೇಹ್ಯೇಹಿ ಕರಿಷ್ಯಾಮಿ ತವ ಪ್ರಿಯಂ ॥ ೭೪ ॥

ನಿಂದ ನಿನಗೆ ಅಭಿಮತವಾದುದೇನು ಹೇಳು ಎಂದು ಪ್ರಶ್ನೆಮಾಡಲು ಆ ತಪಸ್ವಿಯು ನನ್ನನ್ನು ಇಷ್ಟು ಸ್ನೇಹಭಾವದಿಂದ ಕೇಳುತ್ತಿರುವ ನೀನು ಯಾರು, ನಾನು ಶೋಕಾರ್ತನಾಗಿಯೂ ದೀನನಾಗಿಯೂ ತಪಸ್ಸಿನಲ್ಲಿ ನಿರತನಾಗಿದ್ದೇನೆ ಎಂದನು. ಆಗ ದೊರೆಯು ತಪಸ್ವಿಯೇ ನಾನು ಮನುವಿನ ಪ್ರಿಯಪುತ್ರನಾಗಿಯೂ ಇಕ್ಷ್ವಾಕುವಿಗೆ ಭ್ರಾತೃವಾಗಿಯೂ ಇರುವ ಶಾಕಲ ದೇಶದ ದೊರೆಯಾಗಿರುವೆನು ಎನ್ನಲು ತಪಸ್ವಿಯು ತನ್ನ ಪೂರ್ವಚರಿತ್ರೆಯನ್ನೆಲ್ಲಾ ಇಂದ್ರದ್ಯುಮ್ನನಿಗೆ ಹೇಳಿದನು.

೭೨-೭೫. ಅವನ ವೃತ್ತಾಂತವನ್ನೆಲ್ಲಾ ಕೇಳಿ ರಾಜರ್ಷಿಯಾದ ಇಂದ್ರದ್ಯುಮ್ನನು ಇದಕ್ಕಾಗಿ ನೀನು ಕಾಯಶೋಷಣದಿಂದ ದೇಹವನ್ನು ಬಿಡಬೇಡ. ನಿನ್ನ ಪ್ರಿಯೆಯನ್ನು ಹುಡುಕಲು ನಾನೂ ಬರುವೆನು. ನೀನೂ ನನಗೆ ಭ್ರಾತೃಪುತ್ರನಾಗಿರುವೆ. ಎಂದು ಸಮಾಧಾನಪಡಿಸಿ ಧರ್ಮನಿರತನಾಗಿದ್ದ ಆ ದೊರೆಯನ್ನು ಆಲಿಂಗನಾದಿಗಳಿಂದ ಸಂತೋಷಪಡಿಸಿ ತನ್ನ ರಥದ ಮೇಲೆ ಕುಳ್ಳಿರಿಸಿಕೊಂಡು ಋತಧ್ವಜನಿಗೂ ಜಾಬಾಲಿಗೂ ತೋರಿಸಿ ಅವರಿಗೂ ತಿಳಿಯಪಡಿಸಿದನು. ಆಗ ಸಪುತ್ರನಾದ ಋತಧ್ವಜನು ಆ ದೊರೆಯನ್ನು ನೋಡಿ ಎಲೈ ದೊರೆಯೇ ಬಾ. ನಿನಗೆ ಪ್ರಿಯವನ್ನುಂಟು

ಯಾಸೌ ಚಿತ್ರಾಂಗದಾ ನಾಮ ತ್ವಯಾ ದೃಷ್ಟಾ ಹಿ ನೈಮಿಷೇ।
ಸಪ್ತಗೋದಾವರೇ ತೀರ್ಥೇ ಸಾ ಮಯ್ಯೈವ ವಿವರ್ಜಿತಾ ॥ ೭೫ ॥

ಆಗಚ್ಛ ಚಾಗಮಿಷ್ಯಾಮೋ ತಸ್ಮಾದೇವ ಹಿ ಕಾರಣಾತ್।
ತತ್ರಾಸ್ಮಾಕಂ ಸಮೇಷ್ಯಂತಿ ಕನ್ಯಾಸ್ತಿಸ್ರಃ ತಥಾಪರಾಃ ॥ ೭೬ ॥

ಇತ್ಯೇವಮುಕ್ತ್ವಾ ಸ ಋಷಿಃ ಸಮಾಶ್ವಾಸ್ಯ ಸುದೇವಜಂ।
ಶಕುನಿಂ ಪುರತಃ ಕೃತ್ವಾ ಸೇಂದ್ರದ್ಯುಮ್ನಃ ಸಪುತ್ರಕಃ ॥ ೭೭ ॥

ಸ್ಯಂದನೇನಾಶ್ವಯುಕ್ತೇನ ಗಂತುಂ ಸಮುಪಚಕ್ರಮೇ।
ಸಪ್ತಗೋದಾವರಂ ತೀರ್ಥಂ ಯತ್ರ ತಾಃ ಕನ್ಯಕಾ ಗತಾಃ ॥ ೭೮ ॥

ಏತಸ್ಮಿನ್ನಂತರೇ ತನ್ವೀ ಘೃತಾಚೀ ಶೋಕಸಂಯುತಾ।
ವಿಚಚಾರೋದಯಗಿರಿಂ ವಿಚಿನ್ವಂತೀ ಸುತಾಂ ನಿಜಾಂ ॥ ೭೯ ॥

ತಮಾಸಸಾದ ಚ ಕಪಿಂ ಪರ್ಯಪೃಚ್ಛದ್ಯಥಾಪ್ಸರಾಃ।
ಕಿಂ ಬಾಲಾ ನ ತ್ವಯಾ ದೃಷ್ಟಾ ಕಪೇ ಸತ್ಯಂ ವದಸ್ವ ಮೇ ॥ ೮೦ ॥

ಮಾಡುತ್ತೇನೆ ಬಾ ಎಂದು ಹೇಳಿ ನೈಮಿಷಕ್ಷೇತ್ರದಲ್ಲಿ ಯಾವ ಚಿತ್ರಾಂಗದೆಯೆಂಬ ಕನ್ಯಾರತ್ನವನ್ನು ನೀನು ನೋಡಿದ್ದೆಯೋ ಅವಳನ್ನು ನಾನು ಸಪ್ತಗೋದಾವರತೀರ್ಥದಲ್ಲಿ ಬಿಟ್ಟಿರುವೆನು.

೭೬-೭೮. ನೀನೂ ಬಾ. ನಾವುಗಳೂ ಅದೇ ಕಾರಣದಿಂದ ಅಲ್ಲಿಗೆ ಬರುವೆವು. ಅಲ್ಲಿ ಇನ್ನೂ ಮೂರು ಜನ ನಮ್ಮ ಕನ್ಯೆಯರು ಸೇರಿರುವರು. ಹೀಗೆಂದು ಆ ಋತಧ್ವಜನು ಆ ಧೊರೆಯನ್ನು ಸಮಾಧಾನಪಡಿಸಿ ಶಕುನಿಯನ್ನೂ ಪುರಸ್ಕರಿಸಿಕೊಂಡು ಪುತ್ರನಾದ ಜಾಬಾಲಿ ಮತ್ತು ಇಂದ್ರದ್ಯುಮ್ನ ಇವರೊಡಗೂಡಿ ವೇಗಶಾಲಿಯಾದ ಕುದುರೆಗಳುಳ್ಳ ರಥದಿಂದ ಹೊರಡಲುಪಕ್ರಮಿಸಿದನು. ಆ ಕನ್ಯೆಗಳಿರುವ ಸಪ್ತಗೋದಾವರ ತೀರ್ಥವೇ ಇವರ ಪ್ರಯಾಣಕ್ಕೆ ಗುರಿಯಾಯಿತು.

೭೯-೮೨. ಈ ಸಮಯದಲ್ಲಿ ಘೃತಾಚೀ ಎಂಬ ಅಪ್ಸರೆಯು ಶೋಕಸಂತಪ್ತಳಾಗಿ ತನ್ನ ಮಗಳನ್ನು ಹುಡುಕುತ್ತಾ ಉದಯಗಿರಿಯ ಸಮೀಪದಲ್ಲೆಲ್ಲಾ ಸಂಚರಿಸುತ್ತಿದ್ದಳು. ಆಗ ಅವಳು ಅಲ್ಲಿದ್ದ ಕಪಿಯನ್ನು ನೋಡಿ ಎಲೈ ವಾನರನೇ ನಮ್ಮ ಹುಡುಗಿಯೊಬ್ಬಳನ್ನು ನೀನು ನೋಡಿದೆಯಾ. ಸತ್ಯದಿಂದ ಹೇಳು ಎಂದು ಪ್ರಶ್ನೆ

ತಸ್ಯಾಸ್ತದ್ವಚನಂ ಶ್ರುತ್ವಾ ಸ ಕಪಿಃ ಪ್ರಾಹ ಬಾಲಿಕಾಂ ।
ದೃಷ್ಟ್ವಾ ವೇದವತೀನಾಮ ಸಾಚನ್ಯಸ್ತಾ ಮಹಾಶ್ರಮೇ ॥ ೮೧ ॥

ಕಾಲಿಂದ್ಯಾವಿಮಲೆ ತೀರೆ ಮೃಗಪಕ್ಷಿಸಮನ್ವಿತೆ ।
ಶ್ರೀಕಂಠಾಯತನಸ್ಯಾಽಗ್ರೆ ಮಯಾ ಸತ್ಯಂ ತವೋದಿತಂ ॥ ೮೨ ॥

ಸಾ ಪ್ರಾಹ ವಾನರವರಂ ನಾಮ್ನಾ ದೇವವತೀತಿ ಸಾ ।
ನ ಹಿ ವೇದವತೀ ಖ್ಯಾತಾ ತದಾಗಚ್ಛ ಪ್ರಜಾವಹೆ । ॥ ೮೩ ॥

ಘೃತಾಚ್ಯಾಃ ತದ್ವಚಃ ಶ್ರುತ್ವಾ ವಾನರಃ ತ್ವರಿತಕ್ರಮಃ ।
ಪೃಷ್ಠತೋಽಸ್ಯಾಃ ಸಮಾಗಚ್ಛನ್ನದೀಮನ್ವೇವ ಕೌಶಿಕೀಂ ॥ ೮೪ ॥

ಪ್ರಾಪ್ತಾರಾಜರ್ಷಿಪ್ರವರಾ ಸ್ತ್ರಯಸ್ತೆ ಚಾಪಿ ಕೌಶಿಕೀಂ ।
ದ್ವಿತಯಂ ತಾಪಸಾಭ್ಯಾಂ ಚ ರಥಾಃ ಪಂಚಾಶ್ವವೇಗಿಭಿಃ ॥ ೮೫ ॥

ಅವತೀರ್ಯ ರಥೇಭ್ಯಸ್ತೆ ಸ್ನಾತುಮಭ್ಯಾಗಮನ್ನದೀಂ ।
ಘೃತಾಚ್ಯಪಿ ನದೀಂ ಸ್ನಾತುಂ ಸುಪುಣ್ಯಾಮಾಜಗಾಮ ಹ ॥ ೮೬ ॥

ಮಾಡಲು ಅವಳ ಮಾತನ್ನು ಕೇಳಿ ಆ ಕಪಿಯು ವೇದವತಿ ಎಂಬ ಕನ್ಯಕೆಯನ್ನು ನಾನು ನೋಡಿದೆನು. ಅವಳನ್ನು ಕಾಲಿಂದೀ ತೀರದಲ್ಲಿ ಶ್ರೀಕಂಠದೇವಾಲಯದ ಎದುರಿಗಿರುವ ಮೃಗಪಕ್ಷಿಗಳಿಂದ ರಮ್ಯವಾಗಿರುವ ಮಹಾಶ್ರಮದಲ್ಲಿ ಇಟ್ಟಿರುವೆನು. ಇದು ಸತ್ಯವಾದ ಮಾತು ಎಂದಿತು.

೮೩-೮೬. ಆಗ ಘೃತಾಚಿಯು ವಾನರನನ್ನು ಕುರಿತು ನನ್ನ ಮಗಳು ದೇವವತಿ. ನೀನು ಹೇಳುತ್ತಿರುವ ವೇದವತಿಯಲ್ಲ. ಆಗಲಿ ಬಾ ಹೋಗೋಣವೆಂದಳು. ಘೃತಾಚಿಯ ಆ ಮಾತನ್ನು ಕೇಳಿ ವಾನರನು ವೇಗದಿಂದ ಕೌಶಿಕೀ ತೀರವನ್ನು ಅನುಸರಿಸಿ ಅವಳ ಹಿಂದೆಯೇ ಬಂದನು. ರಾಜರ್ಷಿಗಳಾದ ಆ ಮೂರು ಜನರೂ (ಇಂದ್ರದ್ಯುಮ್ನ ಶಕುನಿ ತಾಪಸ) ಕೌಶಿಕಿ ನದಿಗೆ ಸೇರಿದರು. ತಾಪಸ ಯುಗ್ಮವೂ ಸಹ (ಋತಧ್ವಜ ಜಾಬಾಲಿ) ಅಲ್ಲಿ ಬಂದು ಸೇರಿದರು. ವೇಗಶಾಲಿಗಳಾದ ಐದು ರಥಗಳೂ ಅಲ್ಲಿ ನಿಂತವು. ಅವರೆಲ್ಲರೂ ರಥದಿಂದಿಳಿದು ಸ್ನಾನಮಾಡಲು ನದಿಗೆ ಹೋದರು. ಘೃತಾಚಿಯೂ ಸ್ನಾನಕ್ಕಾಗಿ ನದಿಗೆ ಹೋದಳು

ತಾಮನ್ವೇವ ಕಪಿಃ ಪ್ರಾಯಾದ್ದೃಷ್ಟೋ ಜಾಬಾಲಿನಾ ತಥಾ ।
ದೃಷ್ಟ್ವೈವ ಪಿತರಂ ಪ್ರಾಹ ಪಾರ್ಥಿವಂ ಚ ಮಹಾಬಲಂ ॥ ೮೭ ॥

ಸ ಏಷ ಪುನರಾಯಾತಿ ವಾನರಸ್ತಾತ ವೇಗವಾನ್ ।
ಪೂರ್ವಂ ಜಟಾಸ್ವೇವ ಬಲಾದ್ಯೇನ ಬದ್ಧೋಽಸ್ಮಿ ಪಾದಪೇ ॥ ೮೮ ॥

ತಜ್ಜಾಬಾಲಿವಚಃ ಶ್ರುತ್ವಾ ಶಕುನಿಃ ಕ್ರೋಧಸಂಯುತಃ ।
ಸಶರಂ ಧನುರಾನಮ್ಯ ಇದಂ ವಚನಮಬ್ರವೀತ್ ॥ ೮೯ ॥

ಬ್ರಹ್ಮನ್ ಪ್ರದೀಯತಾಂ ಮಹ್ಯಮಾಜ್ಞಾ ತಾತ ಪದಸ್ವಮಾಂ ।
ಯಾವದೇನಂ ನಿಹನ್ಮ್ಯದ್ಯ ಶರಣೈಕೇನ ವಾನರಂ ॥ ೯೦ ॥

ಇತ್ಯೇವಮುಕ್ತೆ ವಚನೆ ಸರ್ವಭೂತಹಿತೆ ರತಃ ।
ಮಹರ್ಷಿಃ ಶಕುನಿಂ ಪ್ರಾಹ ಹೇತುಯುಕ್ತಂ ವಚೋ ಮಹತ್ ॥ ೯೧ ॥

೮೭-೯೦. ಅವಳ ಹಿಂದೆಯೇ ಹೋಗುತ್ತಿದ್ದ ಆ ಕಪಿಯನ್ನು ಜಾಬಾಲಿಯು ನೋಡಿದನು. ನೋಡಿದೊಡನೆಯೇ ತಂದೆಗೂ: ಪರಾಕ್ರಮಿಯಾದ ಶಕುನಿಗೂ ಹೀಗೆ ಹೇಳಿದನು. ತಾತ ಮೊದಲು ನನ್ನನ್ನು ಬಲಾತ್ಕಾರದಿಂದ ಮರಕ್ಕೆ ಜಟೆಯಿಂದ ಬಿಗಿದು ಕಟ್ಟಿದ್ದ ಆ ಕಪಿಯೇ ಈಗ ತ್ವರೆಯಿಂದ ಬರುತ್ತಿದೆ. ಜಾಬಾಲಿಯ . ಈ ಮಾತನ್ನು ಕೇಳಿ ಕೋಪಗೊಂಡ ಶಕುನಿಯು ಬಾಣದೊಡನೆ ಧನುಸ್ಸನ್ನೂ ಬಗ್ಗಿಸುತ್ತ ಋತಧ್ವಜನನ್ನು ಕುರಿತು ಪೂಜ್ಯರೇ ನನಗೆ ಅಪ್ಪಣೆಯಾಗಲಿ ಈ ವಾನರನನ್ನು ಒಂದೇ ಬಾಣದಿಂದ ಕೊಲ್ಲಲು ಸಿದ್ಧನಾಗಿರುವೆನು ಎಂದನು.

೯೧-೯೪. ಈರೀತಿ ಶಕುನಿಯು ಕೇಳಲಾಗಿ ಸರ್ವಪ್ರಾಣಿಗಳ ವಿಷಯದಲ್ಲೂ ದಯಾಳುವಾದ ಆ ಮಹರ್ಷಿಯು ಶಕುನಿಯನ್ನು ಕುರಿತು ತಾತ (ಇಲ್ಲಿ ಪ್ರೀತಿ ಯಿಂದ ಈರೀತಿ ಸಂಬೋಧಿಸಿರುವರು) ಒಬ್ಬನಿಂದ ಮತ್ತೊಬ್ಬನು ವಧಿಸಲ್ಪಡುವುದೇ ಆಗಲಿ ಬಂಧಿಸಲ್ಪಡುವುದೇ ಆಗಲಿ ಅದು ಸಾಧ್ಯವಾಗಲಾರದು. ವಧಬಂಧಾದಿಗಳು

ನ ಕಶ್ಚಿತ್ತ್ರಾತ ಕೇನಾಪಿ ವಧ್ಯತೇ ಬಾಧ್ಯತೇ ಪಿ ವಾ ।
ವಧಬಂಧೌ ಪೂರ್ವಕರ್ಮವಶೌ ನೃಪತಿನಂದನ ॥ ೯೨ ॥

ಇತ್ಯೇವಮುಕ್ತಃ ಶಕುನಿಃ ಋಷಿಂ ವಚನಮಬ್ರವೀತ್ ।
ಮಮಾಜ್ಞಾ ದೀಯತಾಂ ಬ್ರಹ್ಮನ್ ಶಾಧಿ ಕಿಂಕರವಾಣ್ಯಹಂ ॥ ೯೩ ॥

ಇತ್ಯುಕ್ತಃ ಪ್ರಾಹ ಸ ಮುನಿಃ ತಂ ವಾನರಪತಿಂ ವಚಃ ।
ಮಮ ಪುತ್ರಸ್ತ್ವಯೋದ್ಬದ್ಧೋ ಜಟಾಭಿರ್ವಟಪಾದಪೆ ॥ ೯೪ ॥

ನಚೋನ್ಮೋಚಯಿತುಂ ಶಕ್ಯಶ್ಚಕ್ಷ್ಮ್ಯಯಾಚ್ಛಾಪಿ ಯತ್ನತಃ ।
ತದನೇನ ನರೇಂದ್ರೇಣ ತ್ರಿಧಾ ಕೃತ್ವಾ ತು ಶಾಖಿನಂ ॥ ೯೫ ॥

ಶಾಖಾಂ ವಹತಿ ಮತ್ಸೂನುಃ ಶಿರಸಾ ತಾಂ ವಿಮೋಚಯ ।
ದಶ ವರ್ಷಶತಾನ್ಯಸ್ಯ ಶಾಖಾಂ ವೈ ವಹತೋ ಗತಾಃ ॥ ೯೬ ॥

ಪೂರ್ವಕರ್ಮಕ್ಕೆ ಅನುಗುಣವಾಗಿ ಪ್ರಾಪ್ತವಾಗುತ್ತವೆ. (ಇಲ್ಲಿ ಚೇತನನಿಗೆ ಒದಗಬಹುದಾದ ಸುಖದುಃಖಗಳು ಪೂರ್ವಕರ್ಮದ ಫಲಗಳೇ ಹೊರತು ಆಕಸ್ಮಿಕಗಳಲ್ಲ. ಆದಕ್ಕೆ ಸಾಧನವಾಗುವ ಪ್ರಾಣಿಗಳು ಭವಿತವ್ಯತೆಗೆ ತಕ್ಕಂತೆ ಕೇವಲ ನಿಮಿತ್ತಮಾತ್ರವಾಗುತ್ತವೆ. ಮುಖ್ಯಕಾರಣವಲ್ಲ. ಆದುದರಿಂದ ಜಾಬಾಲಿಗೆ ಉಂಟಾದ ಬಂಧನಕ್ಕೂ ದುಃಖಪ್ರದವಾಗಬಹುದಾದ ಪ್ರಾಚೀನಕರ್ಮವೇ ಕಾರಣವೇ ಹೊರತು ಕಪಿಯು ಮುಖ್ಯಕಾರಣವಲ್ಲ. ಆದುದರಿಂದ ಇದನ್ನು ನಿಗ್ರಹಿಸಿ ಫಲವಿಲ್ಲವೆಂದು ತಾತ್ಪರ್ಯ) ಹೀಗೆ ಹೇಳಲ್ಪಟ್ಟ ಶಕುನಿಯು ಋಷಿಯನ್ನು ಕುರಿತು ಪೂಜ್ಯರೇ, ನನಗೆ ಅಪ್ಪಣೆಯಾಗಲಿ, ನಾನೇನುಮಾಡಲಿ ಆಜ್ಞೆಯಾಗಬೇಕೆಂದನು. ಹೀಗೆ ಶಕುನಿಯಿಂದ ಹೇಳಲ್ಪಟ್ಟ ಆ ಮುನಿಯು ಆ ಕಪಿಯನ್ನು ಕುರಿತು ಕಪಿಯೇ, ನನ್ನ ಮಗನಾದ ಈ ಜಾಬಾಲಿಯನ್ನು ನೀನು ಆಲದಮರದಲ್ಲಿ ಜಟೆಗಳಿಂದ ಬಿಗಿದು ಕಟ್ಟಿದ್ದೆಯಷ್ಟೆ.

೯೫-೯೯. ಪ್ರಯತ್ನಪಟ್ಟರೂ ಆ ಮರದಿಂದ ಜಟೆಯನ್ನು ಬಿಡಿಸಲು ಸಾಧ್ಯವಾಗದ ಪ್ರಯುಕ್ತ ಈ ದೊರೆಯಿಂದ ಆ ಮರವು ಮೂರಾಗಿ ತುಂಡುಮಾಡಲ್ಪಟ್ಟಿತು. ಆ ಮರದ ತುಂಡನ್ನು ತಲೆಯಿಂದಲೇ ನನ್ನ ಮಗನು ಹೊತ್ತು ತಿರುಗುತ್ತಿದ್ದಾನೆ. ಇವನು ಇದನ್ನು ಹೊತ್ತು ತಿರುಗಲಾರಂಭಿಸಿ ಹತ್ತುಸಾವಿರವರ್ಷಗಳಾದುವು. ಇದನ್ನು

ನ ಚಾಸ್ತಿ ಪುರುಷಃ ಕಶ್ಚಿದ್ಯೋಽಹ್ಯನ್ಮೋಽಚಯಿತುಂ ಕ್ಷಮಃ ।
ಋಷೇರ್ವಾಕ್ಯಮಾಕರ್ಣ್ಯ ಕಪಿರ್ಜಾಬಾಲಿನೋ ಜಟಾಃ ॥೯೭॥

ಶನೈರುನ್ಮೋಽಚಯಾಮಾಸ ಕ್ಷಣಾದುನ್ಮೋಽಚಿತಾಶ್ಚ ತಾಃ ।
ತತಃ ಪ್ರೀತೋ ಮುನಿಶ್ರೇಷ್ಠೋ ವರದೋಽಭೂದೃತಧ್ವಜಃ ॥೯೮॥

ಕಪಿಂ ಪ್ರಾಹ ವೃಣೀಷ್ವ ತ್ವಂ ವರಂ ಯನ್ಮನಸೇಽಪ್ಸಿತಂ ।
ಋತಧ್ವಜವಚಃ ಶ್ರುತ್ವಾ ಇಮಂ ವರಮಯಾಚತ ॥೯೯॥

ವಿಶ್ವಕರ್ಮಾ ಮಹಾತೇಜಾಃ ಕಪಿತ್ವೇ ಪ್ರತಿಸಂಸ್ಥಿತಃ ।
ಬ್ರಹ್ಮನ್ ಭವಾನ್ ವರಂ ಮಹ್ಯಂ ಯದಿ ದಾತುಮಿಹೇಚ್ಛಸಿ ॥೧೦೦॥

ಸಚ ದತ್ತೋ ಮಹಾಘೋರೋ ಮಮ ಶಾಪೋ ನಿವರ್ತ್ಯತಾಂ ।
ಚಿತ್ರಾಂಗದಾಯಾಃ ಪಿತರಂ ಮಾಂ ತ್ವಷ್ಟಾರಂ ತಪೋಧನಂ ॥೧೦೧॥

ಅಭಿಜಾನೀಹಿ ಭವತಃ ಶಾಪಾದ್ವಾನರತಾಂ ಗತಂ ।
ಸುಬಹೂನಿ ಚ ಪಾಪಾನಿ ಮಯಾ ಯಾನಿ ಕೃತಾನಿ ಹಿ ॥೧೦೨॥

ಬಿಡಿಸಲು ಸಮರ್ಥನಾದ ಪುರುಷನನ್ನೇ ನೋಡಲಿಲ್ಲ ಎಂದು ಹೇಳಲು ಕಪಿಯು ಋಷಿಯ ಮಾತನ್ನು ಕೇಳಿದೊಡನೆಯೇ ಜಾಬಾಲಿಯ ಜಟೆಯನ್ನು ಮೆಲ್ಲಗೆ ಬಿಡಿಸಿತು. ಕ್ಷಣಕಾಲದಲ್ಲಿ ಜಟೆಗಳೆಲ್ಲಾ ಬಿಡಿಸಲ್ಪಟ್ಟವು. ಆಗ ಸಂತುಷ್ಟನಾದ ಋತಧ್ವಜನು ಕಪಿಯ ವಿಷಯದಲ್ಲಿ ವರಪ್ರದಾನೋನ್ಮುಖನಾಗಿ ಅದನ್ನು ಕುರಿತು ನಿನಗೆ ಇಷ್ಟವಾದ ವರವನ್ನು ಕೇಳಿಕೊ ಎನ್ನಲು ಆ ಮಾತನ್ನು ಕೇಳಿದ ಕಪಿಯು ಈ ವರವನ್ನು ಬೇಡಿಕೊಂಡಿತು.

೧೦೦-೧೦೪. ಪೂಜ್ಯನೇ, ನಾನು ತೇಜಸ್ವಿಯಾದ ವಿಶ್ವಕರ್ಮನಾಗಿದ್ದು ಈಗ ಕಪಿತ್ವವನ್ನು ಹೊಂದಿದ್ದೇನೆ. ನನಗೆ ವರವನ್ನು ಕೊಡಲು ನೀನು ಇಚ್ಛೆಪಡುವುದಾದರೆ ನನಗೆ ಕೊಡಲ್ಪಟ್ಟಿರುವ ಈ ಘೋರವಾದ ಶಾಪವು ನಿವೃತ್ತವಾಗಲಿ. ಚಿತ್ರಾಂಗದೆಯ ತಂದೆಯಾದ ನಾನು ತಪಸ್ವಿಯೆಂದೂ ದೇವಶಿಲ್ಪಿಯೆಂದೂ ನಿನ್ನ ಶಾಪದಿಂದಲೇ ವಾನರನಾದನೆಂದೂ ತಿಳಿ. ಕಪಿತ್ವವನ್ನು ಹೊಂದಿದ ನಾನು ಆ ಕಪಿ

ಕಪಿಚಾಪಲ್ಯದೋಷೇಣ ತಾನಿ ಮೇ ಯಾಂತು ಸಂಕ್ಷಯಂ ।
ಋತಧ್ವಜಸ್ತತಃ ಪ್ರಾಹ ಶಾಪಸ್ಯಾಂತೋ ಭವಿಷ್ಯತಿ ॥ ೧೦೩ ॥

ಯದಾ ಘೃತಾಚ್ಯಾಂ ತನಯಂ ಜನಿಷ್ಯಸಿ ಮಹಾಬಲಂ ।
ಇತ್ಯೇಮುಕ್ತಃ ಸಂಹೃಷ್ಟಃ ಸ ತಥಾ ಕಪಿಸತ್ತಮಃ । ॥ ೧೦೪ ॥

ಸ್ನಾತುಂ ತೂರ್ಣಂ ಮಹಾನದ್ಯಾಮವತೀರ್ಣಃ ಕೃಶೋದರಿ ।
ತತಸ್ತು ಸರ್ವೆ ಕ್ರಮಶಃ ಸ್ನಾತ್ವಾ ಚ ಪಿತೃದೇವತಾಃ ॥ ೧೦೫ ॥

ಜಗ್ಮುಃ ಹೃಷ್ಟಾ ರಥೇಭ್ಯಸ್ತೆ ಘೃತಾಚೀ ದಿವಮುತ್ಪತತ್ ।
ತಾಮನ್ವೇವ ಮಹಾವೇಗಃ ಸ ಕಪಿಃ ಪ್ಲವತಾಂ ವರಃ ॥ ೧೦೬ ॥

ದದೃಶೆ ರೂಪಸಂಪನ್ನಾಂ ಘೃತಾಚೀಂ ಸಪ್ಲವಂಗಮಃ ।
ಸಾಪಿ ತಂ ಬಲಿನಾಂ ಶ್ರೇಷ್ಠಂ ದೃಷ್ಟ್ವೈವ ಕಪಿಕುಂಜರಂ ॥ ೧೦೭ ॥

ಜ್ಞಾತ್ವಾಥ ವಿಶ್ವಕರ್ಮಾಣಂ ಕಾಮಯಾಮಾಸ ಕಾಮಿನೀ ।
ತತೋನು ಪರ್ವತಶ್ರೇಷ್ಠೆ ಖ್ಯಾತೆ ಕೋಲಾಹಲೆ ಕಪಿಃ ॥ ೧೦೮ ॥

ಜಾತಿಗೆ ಸಹಜವಾದ ಚಾಪಲ್ಯದಿಂದ ಬಹಳ ಪಾಪಗಳನ್ನು ಮಾಡಿರುವೆನು. ಆ ಪಾಪಗಳೆಲ್ಲವೂ ನಿನ್ನ ಅನುಗ್ರಹದಿಂದ ನಾಶಹೊಂದಲಿ. ಈ ಮಾತನ್ನು ಕೇಳಿದ ಋತಧ್ವಜನು ಘೃತಾಚಿಯಲ್ಲಿ ನೀನು ಬಲಶಾಲಿಯಾದ ಪುತ್ರನನ್ನು ಹೊಂದಿದಮೇಲೆ ನಿನ್ನ ಈ ಶಾಪವು ನಿವೃತ್ತಿಹೊಂದುತ್ತದೆ.

೧೦೫-೧೦೭. ಹೀಗೆ ಹೇಳಲ್ಪಟ್ಟ ಆ ಕಪಿಯು ಸಂತುಷ್ಟನಾಗಿ ತ್ವರಿತವಾಗಿ ಸ್ನಾನಮಾಡಲು ಮಹಾನದಿಯಲ್ಲಿ ಇಳಿದನು. ಅನಂತರ ಎಲ್ಲರೂ ಕ್ರಮವಾಗಿ ಸ್ನಾನ ಮಾಡಿ ಪಿತೃದೇವತೆಗಳನ್ನೂ ತೃಪ್ತಿಪಡಿಸಿ ಸಂತುಷ್ಟರಾಗಿ ತಮ್ಮ ತಮ್ಮ ರಥವನ್ನೇರಿ ಹೊರಟರು. ಘೃತಾಚಿಯೂ ಆಕಾಶಕ್ಕೆ ಹಾರಿದಳು. ಆಗ ವೇಗಶಾಲಿಯಾದ ಆ ಕಪಿಯು ಅವಳನ್ನೇ ಅನುಸರಿಸಿ ಹೋಗಿ ರೂಪಸಂಪನ್ನಳಾದ ಆ ಘೃತಾಚಿಯನ್ನು ನೋಡಿತು. ಅವಳೂ ಸಹ ಬಲಶಾಲಿಯಾದ ಆ ವಾನರಶ್ರೇಷ್ಠನನ್ನು ನೋಡಿ ಇವನು ವಿಶ್ವಕರ್ಮನೆಂದು ತಿಳಿದು ಅವನನ್ನು ಕಾಮಿಸಿದಳು.

೧೦೮-೧೧೧. ಅನಂತರ ಪ್ರಖ್ಯಾತವಾಗಿದ್ದ ಕೋಲಾಹಲವೆಂಬ ಪರ್ವತದಲ್ಲಿ ಆ ಕಪಿಯೂ ಘೃತಾಚಿಯೂ ಪರಸ್ಪರ ಸಮಾಗಮಸುಖದಿಂದ ವಿಹರಿಸುತ್ತಾ ಬಹು

ರಮಯಾಮಾಸ ತಾಂ ತನ್ವೀಂ ಸಾ ಚ ತಂ ವಾನರೋತ್ತಮಂ ।
ಏವಂ ರಮಂತೌ ಸುಚಿರಂ ಪ್ರಾಪ್ತೌ ತೌ ವಿಂಧ್ಯಪರ್ವತಂ ॥ ೧೦೯ ॥

ರಥೇಷು ಚಾಪಿ ತತ್ತೀರ್ಥಂ ಸಂಪ್ರಾಪ್ತಾಸ್ತೇ ನರೋತ್ತಮಾಃ ।
ಮಧ್ಯಾಹ್ನಸಮಯೇ ಶ್ರಾಂತಾಃ ಸಪ್ತಗೋದಾವರಂ ಜಲಂ ॥ ೧೧೦ ॥

ಪ್ರಾಪ್ತಾವಿಶ್ರಾಮಹೇತ್ವರ್ಥಮವತೇರುಸ್ತೃಷಾರ್ದಿತಾಃ ।
ತೇಷಾಂ ಸಾರಥಯೋಽಶ್ವಾಶ್ಚ ಸ್ನಾತ್ವಾ ಪೀತೋದಕಾಃ ಪ್ಲುತಾಃ ॥ ೧೧೧ ॥

ರಮಣೀಯೆ ವನೋದ್ದೇಶೆ ಪ್ರಚಾರಾಯ ಸಮುತ್ಸೃಜನ್ ।
ಶಾದ್ವಲಾಢ್ಯೇಷು ದೇಶೇಷು ಮುಹೂರ್ತಾದೇವ ವಾಜಿನಃ ॥ ೧೧೨ ॥

ತೃಪ್ತಾಃ ಸಮಾದ್ರವನ್ ಸರ್ವೇ ದೇವಾಲಯಮನುತ್ತಮಂ ।
ತುರಂಗಖುರನಿರ್ಘೋಷಂ ಶ್ರುತ್ವಾ ತಾ ಯೋಷಿತಾಂ ವರಾಃ ॥ ೧೧೩ ॥

ಕಿಮೇತದಿತಿ ಚೋಕ್ತ್ವೈವ ಪ್ರಜಗ್ಮುಃ ಹಾಟಕೇಶ್ವರಂ ।
ಆರುಹ್ಯ ವಲಭೀಂ ತಾಸ್ತು ಸಮುದ್ವೈಕ್ಷಂತ ಸರ್ವಶಃ ॥ ೧೧೪ ॥

ಕಾಲದ ಮೇಲೆ ವಿಂಧ್ಯಪರ್ವತಕ್ಕೆ ಬಂದು ಸೇರಿದರು. ಇಂದ್ರದ್ಯುಮ್ನನೂ ಋಷಿಗಳೇ ಮೊದಲಾದವರೆಲ್ಲರೂ ಮಧ್ಯಾಹ್ನಕಾಲಕ್ಕೆ ಸಪ್ತಗೋದಾವರತೀರ್ಥಕ್ಕೆ ಶ್ರಾಂತರಾಗಿ ಬಂದು ಸೇರಿದರು. ಬಾಯಾರಿಕೆಯಿಂದ ಪೀಡಿತರಾಗಿದ್ದ ಅವರೆಲ್ಲರೂ ವಿಶ್ರಾಂತಿಗಾಗಿ ರಥದಿಂದ ಇಳಿದರು. ಅವರ ಸಾರಥಿಗಳೂ, ಕುದುರೆಗಳೂ ಜಲಪಾನದಿಂದಲೂ, ಜಲ ವಿಹಾರದಿಂದಲೂ ಸಂತುಷ್ಟರಾಗಿ ವಿಶ್ರಾಂತಿಹೊಂದಿದರು. ರಮ್ಯವಾದ ವನಪ್ರದೇಶ ದಲ್ಲಿ ಸಂಚಾರಕ್ಕಾಗಿ ಅಶ್ವಗಳನ್ನೂ ಬಿಟ್ಟರು.

೧೧೨-೧೧೫. ಹಸಿರು ಹುಲ್ಲಿನಿಂದ ಕೂಡಿದ್ದ ಆ ಪ್ರದೇಶದಲ್ಲಿ ಸ್ವಲ್ಪಕಾಲದಲ್ಲೇ ತೃಪ್ತಿಹೊಂದಿದ ಆ ಕುದುರೆಗಳು ದೇವಾಲಯದ ಸಮೀಪಕ್ಕೆ ಓಡಿಬಂದುವು. ಆ ಕುದುರೆಗಳ ಗೊರಸಿನ ಸದ್ದನ್ನು ಕೇಳಿದೊಡನೆಯೇ ಚಕಿತರಾದ ಆ ಸ್ತ್ರೀಯರೆಲ್ಲಾ ಇದೇನು ಎಂದು ಹೇಳುತ್ತಾ ಹಾಟಕೇಶ್ವರನ ದೇವಾಲಯಕ್ಕೆ ಎಲ್ಲರೂ ಬಂದು ಸೇರಿದರು. ಅವರೆಲ್ಲರೂ *ವಲಭಿಯನ್ನೇರಿ ತೀರ್ಥದಲ್ಲಿ ಸ್ನಾನಮಾಡುತ್ತಿದ್ದ ಮಹಾ ಪುರುಷರೆಲ್ಲರನ್ನೂ ನೋಡಿದರು. ಆಗ ಚಿತ್ರಾಂಗದೆಯು ಜಟಾಮಂಡಲವನ್ನು

---

* ವಲಭಿಯೆಂದರೆ ಸೂರಿನ ಕೆಳಭಾಗದಲ್ಲಿ ಮಾಡಿರುವ ವಿಶ್ರಾಂತಿಸ್ಥಾನ.

ಅಪಶ್ಯಂಕ್ಷೀರಸಲಿಲಆಪ್ಲುತಾಙ್ಞಾನ್ನರೋತ್ತಮಾನ್ ।
ತತಶ್ಚಿತ್ರಾಂಗದಾ ದೃಷ್ಟ್ವಾ ಜಟಾಮಂಡಲಧಾರಿಣಂ ।
ಹಸನ್ತೀ ಸುರಥಂ ಪ್ರಾಹ ಸಂರೋಹತ್ಪುಲಕಾ ಸಖೀಂ ॥ ೧೧೫ ॥

ಯೋಽಸೌ ಯುವಾನೀಲಘನಪ್ರಕಾಶಃ
ಸಂಲಕ್ಷ್ಯತೇ ದೀರ್ಘಭುಜಃ ಸುರೂಪಃ ।
ಸ ಏವ ನೂನಂ ನರದೇವಸೂನುರ್ವೃತೋ
ಮಯಾಪೂರ್ವಪತಿಃ ಪತಿರ್ಯಃ ॥ ೧೧೬ ॥

ಯಶ್ಚೈಷ ಜಾಂಬೂನದತುಲ್ಯವರ್ಣಃ
ಶ್ವೇತಂ ಜಟಾಭಾರಮಧಾರಯಿಷ್ಯತ್ ।
ಸ ಏಷ ನೂನಂ ತಪತಾಂ ವರಿಷ್ಟ
ಋತಧ್ವಜೋ ನಾತ್ರ ವಿಚಾರಣಾಸ್ತಿ ॥ ೧೧೭ ॥

ತತೋಽಬ್ರವೀದಧೋ ಹೃಷ್ಟಾ ದಮಯಂತೀ ಸಖೀಜನಂ ।
ಏಷೋಽಪರೋಽಸ್ಯೈವ ಸುತೋ ಜಾಬಾಲಿರ್ನಾತ್ರಸಂಶಯಃ ॥ ೧೧೮ ॥

ಇತ್ಯೇವಮುಕ್ತ್ವಾ ವಚನಂ ವಲಭ್ಯಾಅವತೀರ್ಯ ಚ ।
ಸಮಾಸನ್ನಾಗ್ರತಃ ಶಂಭೋರ್ಗಾಯಂತೀ ಗೀತಕಾನ್ ಶುಭಾನ್ ॥ ೧೧೯ ॥

ಧರಿಸಿರುವ ಸುರಥನನ್ನು ನೋಡಿ ನಗುತ್ತಾ ತನಗಾಗಿ ಇವನು ತಪಸ್ವಿಯೂ ಆದನೆಂಬ ಪ್ರೇಮಾತಿಶಯದಿಂದ ರೋಮಾಂಚಿತಳಾಗಿ ಸಖಿಯನ್ನು ಕುರಿತು ಹೇಳುತ್ತಾಳೆ.

೧೧೬-೧೧೯ ಇಗೋ ನೋಡು. ಇವರ ಮಧ್ಯದಲ್ಲಿ ನೀಲಮೇಘದಂತೆ ಸುರೂಪನಾಗಿಯೂ ದೀರ್ಘಬಾಹುವಾಗಿಯೂ ಯಾವನು ತೋರುತ್ತಿರುವನೋ ಅವನೇ ನನ್ನನ್ನು ಮೊದಲು ವರಿಸಿ ನಾನೂ ಮೆಚ್ಚಿಕೆಯಿಂದ ವರಿಸಿದ್ದ ರಾಜಪುತ್ರನು. ಯಾವನು ಚಿನ್ನದಂತೆ ರಮ್ಯವಾದ ಕಾಂತಿಯುಳ್ಳವನಾಗಿ ಬಿಳುಪಾಗಿರುವ ಜಟಾಭಾರ ವನ್ನು ವಹಿಸಿರುವನೋ ಇವನೇ ತಪೋನಿಧಿಯಾದ ಋತಧ್ವಜನು. ಇದರಲ್ಲಿ ಸಂದೇಹವಿಲ್ಲವೆಂದಳು. ಅನಂತರ ಸಂತುಷ್ಟಳಾದ ದಮಯಂತಿಯು ಸಖಿಯನ್ನು ಕುರಿತು ಜಾಬಾಲಿಯನ್ನು ನಿರ್ದೇಶಿಸಿ ಇವನೇ ಜಾಬಾಲಿ ಇದರಲ್ಲಿ ಸಂಶಯವಿಲ್ಲ ವೆಂದಳು. ಹೀಗೆ ಹೇಳಿ ವಲಭಿಯಿಂದ ಇಳಿದು ಹಾಟಕೇಶ್ವರನ ಸಮೀಪಕ್ಕೆ ಬಂದು ನಿಂತು ಶುಭಕರವಾದ ಗಾನವನ್ನು ಈ ರೀತಿ ಮಾಡಲಾರಂಭಿಸಿದರು.

ಗದ್ಯ—ಓಂ, ನಮೋಽಸ್ತು, ಶರ್ವ, ಶಂಭೋ, ತ್ರಿನೇತ್ರ, ಚಾರುಗಾತ್ರ, ತ್ರೈಲೋಕ್ಯನಾಥ, ಉಮಾಪತೇ, ದಕ್ಷಯಜ್ಞ ವಿಧ್ವಂಸಕಾರಕ, ಕಾಮಾಙ್ಗನಾಶನ, ಘೋರಪಾಪಪ್ರಣಾಶನ, ಮಹಾಪುರುಷ, ಮಹೋಗ್ರಮೂರ್ತೇ, ಸರ್ವಸತ್ತ್ವಕ್ಷಯಂಕರ, ಶುಭಂಕರ, ಮಹೇಶ್ವರ, ತ್ರಿಶೂಲಧರ, ಸ್ಮರಾರೇ, ಗುಹಾಧಾಮನ್ ದಿಗ್ವಾಸಃ, ಮಹಾಚಂದ್ರಶೇಖರ, ಜಟಾಧರ, ಕಪಾಲಮಾಲಿಕಾ ವಿಭೂಷಿತಶರೀರ, ವಾಮಚಕ್ಷುಃಕ್ಷುಭಿತದೇವಪ್ರಜಾಧ್ಯಕ್ಷ, ಭಗಾಕ್ಷ್ಣೋಃಕ್ಷಯಂಕರ, ಭೀಮಸೇನ, ನಾಥ, ಪಶುಪತೇ, ಕಾಮಾಙ್ಗದಾಹಿನ್.

ಗದ್ಯ—ಚತ್ವರವಾಸಿನ್, ಶಿವ, ಮಹಾದೇವ, ಈಶಾನ, ಶಂಕರ, ಭೀಮ, ಭವ, ವೃಷಭಧ್ವಜ, ಕಟಭ, ಪ್ರೌಢಮಹಾ ನಾಟ್ಯೇಶ್ವರ, ಭೂತಿರತ, ಅವಿಮುಕ್ತಕ, ರುದ್ರ, ರುದ್ರೇಶ್ವರ, ಸ್ಥಾಣೋ, ಏಕಲಿಂಗ, ಕಾ ಲಿಂ ದೀ ಪ್ರಿ ಯ, ಶ್ರೀಕಂಠ,

---

ಪ್ರಣವಪ್ರತಿಪಾದ್ಯನೇ, ಶರ್ವನೇ, ಸುಖಕಾರಿಯೇ, ಮೂರು ನೇತ್ರಗಳುಳ್ಳವನೇ, ರಮಣೀಯಶರೀರನೇ, ತ್ರಿಲೋಕಾಧಿಪತಿಯೇ, ಪಾರ್ವತೀಪತಿಯೇ, ದಕ್ಷಯಜ್ಞನಾಶಕನೇ, ಮನ್ಮಥನ ಅಂಗವನ್ನೂ ನಾಶಮಾಡಿದವನೇ, (ಅಥವಾ ಮನ್ಮಥನೆಂಬ ವನಿತೆಯನ್ನೇ ಅಶನವಾಗಿ ಹೊಂದಿದವನೇ) ಘೋರಪಾಪಗಳನ್ನೂ ನಾಶಮಾಡುವವನೇ, ಮಹಾಪುರುಷನೇ, ಉಗ್ರರೂಪಧಾರಿಯೇ, ಪ್ರಳಯಕಾಲದಲ್ಲಿ ಸರ್ವಪ್ರಾಣಿಗಳಿಗೂ ನಾಶಕನೇ, ಶುಭಪ್ರದಮೂರ್ತಿಯೇ, ಈಶ್ವರೋತ್ತಮನೇ, ತ್ರಿಶೂಲಧಾರಿಯೇ ಮನ್ಮಥಶತ್ರುವೇ, ಗಿರಿಗುಹಾವಾಸಿಯೇ, ದಿಗಂಬರನೇ, ಚಂದ್ರಶಿರೋಭೂಷಣನೇ, ಜಟಾಧಾರಿಯೇ, ಕಪಾಲಮಾಲೆಯಿಂದ ಅಲಂಕರಿಸಲ್ಪಟ್ಟ ದೇಹವುಳ್ಳವನೇ, ಎಡಗಣ್ಣಿನ ಕ್ಷೋಭೆಯಿಂದ ಇಂದ್ರನನ್ನೂ ನಡುಗಿಸಿದವನೇ, ಭಗದೇವತೆಯ ನೇತ್ರನಾಶಕನೇ, ಭಯಂಕರನೇ, ರಕ್ಷಕನೇ, ಸರ್ವಪ್ರಾಣಿಗಳಿಗೂ ಒಡೆಯನೇ, ಮನ್ಮಥದೇಹದಾಹಕನೇ, ನಿನಗೆ ಅನಂತ ನಮಸ್ಕಾರಗಳು.

ವಿವಿಕ್ತವಾದ ವಿಶಾಲಾಙ್ಗಣದಲ್ಲಿ ನೆಲಸಿರುವವನೇ, ಮಂಗಲಕರನೇ, ದೇವೋತ್ತಮನೇ. ರಕ್ಷಕನೇ, ಶುಭಪ್ರದನೇ, ಭಯಂಕರನೇ, ಸರ್ವೋತ್ತಮಕಾರಣನೇ, ವೃಷಭವಾಹನನೇ, ಶತ್ರುಸೈನ್ಯನಾಶಕನೇ, ಪ್ರೌಢವಾದ ನಾಟ್ಯಕ್ಕೆ ಅಧಿದೇವತೆಯೇ, ವಿಭೂತಿಪ್ರಿಯನೇ, ಪಾರ್ವತಿಯ ವಿಶ್ಲೇಷಹೊಂದದಿರುವವನೇ, ರೋದನಸ್ವಭಾವ

ನೀಲಕಂಠ, ಅಪರಾಜಿತ, ರಿಪುಭಯಂಕರ, ಸಂತೋಷಪತೇ, ವಾಮದೇವ, ಅಘೋರ, ತತ್ಪುರುಷ, ಮ ಹಾ ಘೋ ರ, ಅಘೋರಮೂರ್ತೇ, ಶಾಂತ, ಸರಸ್ವತೀಕಾಂತ, ಸಹಸ್ರಮೂರ್ತೇ, ಮಹೋದ್ಭವ.

ಗದ್ಯ—ವಿಭೋ, ಕಾಲಾಗ್ನೇ, ರುದ್ರ, ರೌದ್ರ, ಹರ, ಮಹೀಧರ, ಪ್ರಿಯ, ಸರ್ವತೀರ್ಥಾಧಿವಾಸ, ಹಂಸ, ಕಾಮೇಶ್ವರ, ಕೇದಾರಾಧಿಪತೇ, ಪರಿಪೂರ್ಣ, ಮುಚುಕುಂದ, ಮಧುನಿವಾಸ, ಕೃಪಾಣಪಾಣೇ, ಭಯಂಕರ, ವಿದ್ಯಾರಾಜ, ಸೋಮರಾಜ, ಕಾಮರಾಜ, ಮಹೀಧರರಾಜಕನ್ಯಾಹೃದಬ್ಜವಸತೇ,

---

ವುಳ್ಳವನೇ, ಏಕಾದಶರುದ್ರರ ಅಧಿಪತಿಯೇ, ಸ್ಥಿರನೇ, ಲಿಂಗಮಾತ್ರರೂಪಿಯೇ, ಕಾಲಿಂದೀಪ್ರಿಯನೇ, ಕಂಠದಲ್ಲಿ ನೆಲಸಿರುವ ವಿಷವುಳ್ಳವನೇ, ನೀಲವಾದ ಕಂಠವುಳ್ಳವನೇ, ಯಾರಿಂದಲೂ ಜಯಿಸಲ್ಪಡದಿರುವವನೇ, ಶತ್ರುನಾಶಕನೇ, ಸಂತೋಷಾಧಿಪತಿಯೇ, ನಮ್ರರಾದ ದೇವತೆಗಳುಳ್ಳವನೇ, ಅಘೋರಮೂರ್ತಿಯೇ, ಮಹಾಪುರುಷನೇ, ಘೋರರೂಪಧಾರಿಯೇ, ಶಾಂತಸ್ವರೂಪನೇ, ಸರಸ್ವತೀಪ್ರಿಯನೇ, ಅನೇಕ ಮೂರ್ತಿಧರನೇ, ಅಪ್ರಾಕೃತವಾದ ಉತ್ಪತ್ತಿಯುಳ್ಳವನೇ, ಅಥವಾ ಸರ್ವೋತ್ಪತ್ತಿಗೆ ಮುಖ್ಯಕಾರಣನೇ ಅಥವಾ ಉತ್ಸವಗಳಿಗೆ ಆಶ್ರಯಸ್ಥಾನನೇ,

ಪ್ರಭುವೇ, ಪ್ರಲಯಾಗ್ನಿರೂಪನೇ, ರುದ್ರನೇ, ಭಯಂಕರನೇ, ಭೂಮಿಧಾರಕನೇ, ಪ್ರಿಯನೇ, ಅಥವಾ ಭೂಮಿಧರನಾದ ಹಿಮವಂತನಲ್ಲಿ ಪ್ರೀತಿಯುಳ್ಳವನೇ, ಸರ್ವತೀರ್ಥವಾಸಿಯೇ, ಪರಮಾತ್ಮಸ್ವರೂಪನೇ, ಇಷ್ಟದಾತನೇ, ಕೇದಾರಕ್ಷೇತ್ರಾಧಿಪತಿಯೇ, ಪೂರ್ಣಸ್ವರೂಪನೇ, ಮುಚುಕುಂದಸ್ವರೂಪನೇ, ಆನಂದಾಶ್ರಯನೇ, ಅಥವಾ ಮಧುನಾಮಕರಾದ ದೇವತೆಗಳಿಗೆ ಆಶ್ರಯದಾತನೇ, ಖಡ್ಗಧಾರಿಯೇ, ಭಯಂಕರಮೂರ್ತಿಯೇ, ವಿದ್ಯಾಧಿಪತಿಯೇ, ಸೋಮಾಧಿಪತಿಯೇ, ಅಥವಾ ಚಂದ್ರಾಧಿಪತಿಯೇ, ಮನ್ಮಥನಿಯಾಮಕನೇ, ಪರ್ವತರಾಜಪುತ್ರಿಯ ಹೃದಯಾಬ್ಜವಾಸಿಯೇ ಸಮುದ್ರಶಾಯಿಯೇ (ಇಲ್ಲಿ ಸಮುದ್ರಶಯನವು ರುದ್ರನಲ್ಲಿ ಪ್ರಸಿದ್ಧವಲ್ಲ. ಇದನ್ನು ಮೂರ್ತ್ಯೈಕ್ಯದಿಂದಾಗಲಿ ಸಮುದ್ರಶಾಯಿಯಾದ ನಾರಾಯಣನನ್ನೇ ಅಂತರ್ಯಾಮಿಯಾಗಿ ಉಳ್ಳವನೆಂದು ನಿರೂಪಿಸುವದರಿಂದಾಗಲಿ ಸಮರಸವನ್ನಾಗಿ ತಿಳಿದುಕೊಳ್ಳ

ಸಮುದ್ರಶಾಯಿನ್, ಗಯಾಮುಖ, ಗೋಕರ್ಣ, ಬ್ರಹ್ಮ
ಯೋನೆ, ಸಹಸ್ರವಕ್ತ್ರಾಕ್ಷಿಚರಣ, ಹಾಟಕೇಶ್ವರ, ನಮಸ್ತೆ.

ಏತಸ್ಮಿನ್ನಂತರೆ ಪ್ರಾಪ್ತಾಃ ಸರ್ವಏವರ್ಷಿಪಾರ್ಥಿವಾಃ ।
ದ್ರಷ್ಟುಂ ತ್ರೈಲೋಕ್ಯಕರ್ತಾರಂ ತ್ರ್ಯಂಬಕಂ ಹಾಟಕೇಶ್ವರಂ ॥ ೧೨೦ ॥

ಸಮಾರೂಢಾಶ್ಚ ಸುಸ್ನಾತಾ ದದೃಶುರ್ಯೋಷಿತಃ ಶುಭಾಃ ।
ಸ್ಥಿತಾಸ್ತು ಪುರತಸ್ತಸ್ಯ ಗಾಯಂತ್ಯೋ ಗೇಯಮುತ್ತಮಂ ॥ ೧೨೧ ॥

ತತಸ್ಸುದೇವತನಯೋ ವಿಶ್ವಕರ್ಮಸುತಾಂ ಪ್ರಿಯಾಂ।
ದೃಷ್ಟ್ವಾ ಹೃಷಿತಚಿತ್ತಸ್ತು ಸಂರೋಹತ್ಪುಲಕೋ ಬಭೌ ॥ ೧೨೨ ॥

ಋತಧ್ವಜೋಽಪಿ ತನ್ವಙ್ಗೀಂ ದೃಷ್ಟ್ವಾ ಚಿತ್ರಾಂಗದಾಂ ಸ್ಥಿತಾಂ।
ಪ್ರತ್ಯಭಿಜ್ಞಾಯ ಯೋಗಾತ್ಮಾ ಬಾಲಾಂ ಮುದಿತಮಾನಸಃ ॥ ೧೨೩ ॥

ತತಸ್ತೇಽಪಿ ಸಮಭ್ಯೇತ್ಯ ದೇವೇಶಂ ಹಾಟಕೇಶ್ವರಂ ।
ಸಂಪೂಜಯಂತಃ ತ್ರ್ಯಕ್ಷಂ ತೇ ಸಂಸ್ತುವಂತಃ ಕ್ರಮಾತ್ತತಃ ॥ ೧೨೪ ॥

ಬೇಕು) ಗಯಾಮುಖವಾಸಿಯೇ, ಗೋಕರ್ಣವಾಸಿಯೇ, ಪ್ರಕೃತಿಗೂ ಕಾರಣನಾಗಿರುವವನೇ, ಸಾವಿರಾರು ಮುಖ, ಕಣ್ಣು ಕಾಲುಗಳುಳ್ಳವನೇ, ಹಾಟಕೇಶ್ವರ ನಿನಗೆ ಅನಂತ ನಮಸ್ಕಾರಗಳು.

೧೨೦-೧೨೩. ಆ ಕನ್ಯಕೆಯರು ಹೀಗೆ ಸ್ತೋತ್ರಮಾಡುತ್ತಿರುವ ಸಮಯದಲ್ಲೇ ಋಷಿಗಳೂ, ರಾಜರೂ ಸಹ ಸ್ನಾನಮಾಡಿಕೊಂಡು ಲೋಕನಾಥನಾದ ಹಾಟಕೇಶ್ವರನನ್ನು ದರ್ಶನಮಾಡಲು ಅಲ್ಲಿಗೆ ಬಂದು ಸೇರಿದರು. ಅಲ್ಲಿ ಸ್ನಾನದಿಂದ ಶುದ್ಧರಾಗಿ ದೇವಾಯತನವನ್ನು ಹತ್ತಿ ಆ ದೇವನ ಎದುರಿಗೆ ಉತ್ತಮೋತ್ತಮವಾದ ಗಾನದಲ್ಲಿ ಸಕ್ತರಾಗಿರುವ ಮಂಗಳಾಂಗಿಯರೆಲ್ಲರನ್ನೂ ನೋಡಿದರು. ಆಗ ಸುದೇವ ಪುತ್ರನಾದ ಸುರಥನು ವಿಶ್ವಕರ್ಮನ ಪ್ರಿಯಪುತ್ರಿಯಾದ ಚಿತ್ರಾಂಗದೆಯನ್ನು ನೋಡಿ ಸಂತೋಷದಿಂದ ರೋಮಾಂಚಿತನಾದನು. ಋತಧ್ವಜನೂ ಸಹ ಚಿಂತೆಯಿಂದ ಕೃಶಳಾಗಿದ್ದ ಚಿತ್ರಾಂಗದೆಯನ್ನು ನೋಡಿ ಯೋಗದೃಷ್ಟಿಯಿಂದ ಇವಳೇ ಎಂದು ನಿರ್ಧರಿಸಿ ಸಂತುಷ್ಟನಾದನು.

೧೨೪-೧೨೭. ಆಗ ಅವರೆಲ್ಲರೂ ಪ್ರಭುವಾದ ಹಾಟಕೇಶ್ವರನ ಸಮೀಪಕ್ಕೆ ಬಂದು ಎಲ್ಲರೂ ಕ್ರಮವಾಗಿ ಪೂಜಿಸಿ ಸ್ತೋತ್ರಮಾಡುತ್ತ ನಿಂತರು. ಚಿತ್ರಾಂಗದೆಯೂ

ಚಿತ್ರಾಂಗದಾಪಿ ತಾನ್ ದೃಷ್ಟ್ವಾ ಋತಧ್ವಜಪುರೋಗಮಾನ್ ।
ಸಮ್ಮಿತಾಭಿಃ ಕೃಶಾಙ್ಗೀಭಿಃ ಅಭ್ಯುತ್ಥಾಯಾಭ್ಯವಾದಯತ್ ॥ ೧೨೫ ॥

ಸ ಚ ತಾಃ ಪ್ರತಿನಂದ್ಯೈವ ಸಮಂ ಪುತ್ರೇಣ ತಾಪಸಃ ।
ಸಮಂ ನೃಪತಿಭಿಃ ಹೃಷ್ಟಃ ಸಂವಿವೇಶ ಯಥಾಸುಖಂ ॥ ೧೨೬ ॥

ತತಃ ಕಪಿವರಃ ಪ್ರಾಪ್ತೋ ಘೃತಾಖ್ಯಾ ಸಹ ಸುಂದರಿ ।
ಸ್ನಾತ್ವಾ ಗೋದಾವರೀತೀರ್ಥೆ ದಿದೃಕ್ಷುಃ ಹಾಟಕೇಶ್ವರಂ ॥ ೧೨೭ ॥

ತತೋಽಪಶ್ಯಚ್ಚ ತಾಂ ತನ್ವೀಂ ಘೃತಾಚೀ ಶುಭದರ್ಶನಾಂ ।
ಸಾಪಿ ತಾಂ ಮಾತರಂ ದೃಷ್ಟ್ವಾ ಹೃಷ್ಟಾಭೂದ್ವರವರ್ಣಿನೀ ॥ ೧೨೮ ॥

ತತೋ ಘೃತಾಚೀ ಸ್ವಾಂ ಪುತ್ರೀಂ ಪರಿಷ್ವಜ್ಯ ನ್ಯಪೀಡಯತ್ ।
ಸ್ನೇಹಾಂತ್ಸಬಾಷ್ಪನಯನಾ ಮುಹುಸ್ತಾಂ ಪರಿಜಿಘ್ರತೀ ॥ ೧೨೯ ॥

ಋತಧ್ವಜಸ್ತತಃ ಶ್ರೀಮಾನ್ಕಪಿಂ ವಚನಮಬ್ರವೀತ್ ।
ಗಚ್ಛಾನೇತುಂ ಗುಹ್ಯಕಂ ತ್ವಂ ಅಂಜನಾದ್ರೌ ಮಹಾಜನಂ ॥ ೧೩೦ ॥

ಸಹ ಋತಧ್ವಜನೇ ಮೊದಲಾದ ಅವರನ್ನೆಲ್ಲಾ ನೋಡಿ ತನ್ನ ಗೆಳತಿಯರಾದ ಯುವತಿಯರೊಡನೆ ಪ್ರತ್ಯುತ್ಥಾನಮಾಡಿ ನಮಸ್ಕರಿಸಿದಳು. ಋತಧ್ವಜನೂ ಸಹ ಆ ಸ್ತ್ರೀಯರೆಲ್ಲರನ್ನೂ ಅಭಿನಂದಿಸಿ ತನ್ನ ಪುತ್ರನೊಡನೆಯೂ ದೊರೆಗಳೊಡನೆಯೂ ಸಂತೋಷದಿಂದ ಸುಖಿಯಾಗಿ ಮಲಗಿದನು. ಅನಂತರ ಆ ಕಪಿಯೂ ಸಹ ಘೃತಾಚಿಯೊಡನೆ ಅಲ್ಲಿ ಬಂದು ಗೋದಾವರಿಯ ತೀರ್ಥದಲ್ಲಿ ಸ್ನಾನಮಾಡಿ ಹಾಟಕೇಶ್ವರನ ದರ್ಶನಕ್ಕಾಗಿ ಬಂದು ನಿಂತಿತು.

೧೨೮-೧೩೦. ಆಗ ಘೃತಾಚಿಯು ಸುಕುಮಾರಿಯಾದ ದೇವವತಿಯನ್ನು ಅಲ್ಲಿ ನೋಡಿದಳು. ಆ ಕೃಶಾಂಗಿಯೂ ತಾಯಿಯನ್ನು ನೋಡಿ ಸಂತುಷ್ಟಳಾದಳು. ಘೃತಾಚಿಯು ಆ ತನ್ನ ಪುತ್ರಿಯನ್ನು ಆಲಿಂಗಿಸಿ ಸ್ನೇಹದಿಂದ ಆನಂದಾಶ್ರುಗಳನ್ನು ಕಣ್ಣಿನಿಂದ ಸುರಿಸುತ್ತಾ ಬಾರಿಬಾರಿಗೂ ಅವಳನ್ನು ಆಘ್ರಾಣಿಸುತ್ತ ನಿಂತಳು. ಆಗ ಋತಧ್ವಜನು ಕಪಿಯನ್ನು ಕರೆದು, ಹೋಗು. ಅಂಜನಾದ್ರಿಯ ಮಹಾಜನ ನಗರದಲ್ಲಿರುವ ಗುಹ್ಯಕನನ್ನೂ, ಪಾತಾಲದಲ್ಲಿರುವ ಶೂರನಾದ ಕಂದಮಾಲಿಯೆಂಬ

ಪಾತಾಲಾದಪಿ ದೈತ್ಯೇಶಂ ವೀರಂ ಕಂದರಮಾಲಿನಂ ।
ಸ್ವರ್ಗಾದ್ಗಂಧರ್ವರಾಜಾನಂ ಪರ್ಜನ್ಯಂ ಶೀಘ್ರಮಾನಯ ॥ ೧೩೧ ॥

ಇತ್ಯೇವಮುಕ್ತೋ ಮುನಿನಾ ಪ್ರಾಹ ವೇದವತೀ ಕಪಿಂ ।
ಗಾಲವಂ ವಾ ನರಶ್ರೇಷ್ಠ ಇಹಾನೇತುಂ ತ್ವಮರ್ಹಸಿ ॥ ೧೩೨ ॥

ಇತ್ಯೇವಮುಕ್ತೋ ವಚನೇ ಕಪೀಂದ್ರೋಽಮಿತವಿಕ್ರಮಃ ।
ಗತ್ವಾಂಜನಂ ಸಮಾಮಂತ್ರ್ಯ ಜಗಾಮಾಮರಪರ್ವತಂ ॥ ೧೩೩ ॥

ಪರ್ಜನ್ಯಂ ತತ್ರ ಚಾಮಂತ್ರ್ಯ ಪ್ರೇಷಯಿತ್ವಾ ಮಹಾಶ್ರಮೇ ।
ಸಪ್ತಗೋದಾವರೀತೀರ್ಥೇ ಪಾತಾಲಮಗಮತ್ಕಪಿಃ । ॥ ೧೩೪ ॥

ತತ್ರಾಮಂತ್ರ್ಯ ಮಹಾವೀರ್ಯಃ ಕಪಿಃ ಕಂದರಮಾಲಿನಂ ।
ಪಾತಾಲದತಿನಿಷ್ಕ್ರಮ್ಯ ಮಹೀಂ ಪರ್ಯಚರಜ್ಜವೀ ॥ ೧೩೫ ॥

ಗಾಲವಂ ತಪಸೋ ಯೋನಿಂ ದೃಷ್ಟ್ವಾ ಮಾಹಿಷ್ಮತೀಮನು ।
ಸಮುತ್ಪತ್ಯಾನಯಚ್ಛೀಘ್ರಂ ಸಪ್ತಗೋದಾವರೀಜಲಂ ॥ ೧೩೬ ॥

ದೈತ್ಯರಾಜನನ್ನೂ, ಸ್ವರ್ಗದಲ್ಲಿರುವ ಗಂಧರ್ವರಾಜನಾದ ಪರ್ಜನ್ಯನನ್ನೂ ಜಾಗ್ರತೆಯಾಗಿ ಕರೆದುಕೊಂಡು ಬಾ ಎಂದನು.

೧೩೨-೧೩೬. ಋತಧ್ವಜನು ಹೀಗೆ ಹೇಳಿದನಂತರ ವೇದವತಿಯು ಕಪಿಯನ್ನು ಕುರಿತು ವಾನರಪತಿಯೇ, ಗಾಲವನನ್ನೂ ಇಲ್ಲಿ ಕರೆತರಬೇಕೆಂದಳು. ಹೀಗೆ ಹೇಳಿದ ಒಡನೆಯೇ ಪರಾಕ್ರಮಿಯಾದ ಆ ಕಪಿಯು ಅಂಜನಪರ್ವತಕ್ಕೆ ಹೋಗಿ ಅಂಜನನನ್ನು ಕರೆದು ಅಲ್ಲಿಂದ ಮೇರುಪರ್ವತಕ್ಕೂ ಹೋಗಿ ಪರ್ಜನ್ಯನನ್ನೂ ಕರೆದು ಅವನನ್ನೂ ಮಹಾಶ್ರಮಕ್ಕೆ ಕಳುಹಿಸಿ ಸಪ್ತಗೋದಾವರ ತೀರ್ಥದ ದಾರಿಯಿಂದ ಪಾತಾಲಲೋಕಕ್ಕೂ ಹೋಗಿ ಅಲ್ಲಿದ್ದ ಕಂದರಮಾಲಿಯನ್ನು ಆಹ್ವಾನಿಸಿ, ಪಾತಾಲದಿಂದ ಎದ್ದು ಬಂದು ಭೂಮಿಯನ್ನೆಲ್ಲಾ ಸುತ್ತಿ ಮಾಹಿಷ್ಮತಿಯಲ್ಲಿ ನೆಲಸಿದ್ದ ತಪೋನಿಧಿಯಾದ ಗಾಲವನನ್ನೂ ಆಮಂತ್ರಿಸಿ ವೇಗದಿಂದ ಹಾರಿ ಸಪ್ತಗೋದಾವರೀ ಜಲಕ್ಕೆ ಕರೆದುಕೊಂಡು ಬಂದಿತು.

ದದೃಶೇ ದಮಯಂತೀಂ ತಾಂ ಸ್ಥಿತಾಂ ವೇದವತೀಮಪಿ ॥ ೧೩೭ ॥

ತಂ ದೃಷ್ಟ್ವಾ ಗಾಲವಂ ಚೈವ ಸಮುತ್ಥಾಯಾಭ್ಯವಾದಯತ್ ।
ತೇ ಚಾಪಿ ನೃಪತಿಶ್ರೇಷ್ಠಾಸ್ತಂ ಸಂಪೂಜ್ಯ ತಪೋಧನಂ ॥ ೧೩೮ ॥

ಪ್ರಹರ್ಷಮತುಲಂ ಗತ್ವಾ ಉಪವಿಷ್ಟಾ ಯಥಾಸುಖಂ ।
ತೇಷೂಪವಿಷ್ಟೇಷು ತದಾ ವಾನರೇಣ ನಿಮಂತ್ರಿತಾಃ ॥ ೧೩೯ ॥

ಸಮಾಯಾತಾ ಮಹಾತ್ಮಾನೋ ಯಕ್ಷಗಂಧರ್ವದಾನವಾಃ ।
ತಾನಾಗತಾನ್ ಸಮೀಕ್ಷ್ಯೈವ ಪುತ್ರ್ಯಸ್ತಾಃ ಪೃಥುಲೋಚನಾಃ ॥ ೧೪೦ ॥

ಸ್ನೇಹಾರ್ದ್ರನಯನಾಸ್ತಾ ವೈ ತದಾ ಸಸ್ವಜಿರೆ ಪಿತೄನ್ ।
ದಮಯಂತ್ಯಾದಿಕಾ ದೃಷ್ಟ್ವಾ ಪಿತೃಯುಕ್ತಾ ವರಾನನಾಃ ॥ ೧೪೧ ॥

ಸಬಾಷ್ಪನಯನಾ ಜಾತಾ ವಿಶ್ವಕರ್ಮಸುತಾ ತದಾ ।
ಅಥ ತಾಮಾಹ ಸ ಮುನಿಃ ಸತ್ಯಂ ಸತ್ಯಧ್ವಜೋ ವಚಃ ॥ ೧೪೨ ॥

೧೩೭-೧೪೧. ಆ ತೀರ್ಥದಲ್ಲಿ ಯಥಾವಿಧಿಯಾಗಿ ಸ್ನಾನಮಾಡಿ ಹಾಟಕೇಶ್ವರನ ಸನ್ನಿಧಾನಕ್ಕೆ ಬಂದು ಅಲ್ಲಿದ್ದ ದಮಯಂತಿ ಮತ್ತು ವೇದವತಿಯರನ್ನೂ ನೋಡಿತು. ಅಲ್ಲಿದ್ದ ಗಾಲವನನ್ನೂ ನೋಡಿ ಪ್ರತ್ಯುತ್ಥಾನಮಾಡಿ ನಮಸ್ಕರಿಸಿತು. ಅಲ್ಲಿದ್ದ ರಾಜರುಗಳೂ ಗಾಲವನನ್ನು ಸತ್ಕರಿಸಿ ಪೂಜಿಸಿ ಸುಖವಾಗಿ ಕುಳಿತರು. ಅವರೆಲ್ಲರೂ ಕುಳಿತ ಮೇಲೆ ವಾನರನಿಂದ ಆಹೂತರಾಗಿದ್ದ ಯಕ್ಷ ಮತ್ತು ಗಂಧರ್ವ ದಾನವರೂ ಅಲ್ಲಿ ಬಂದು ಸೇರಿದರು. ಹಾಗೆ ಬಂದ ಅವರೆಲ್ಲರನ್ನೂ ನೋಡಿ ಆ ಯುವತಿಯರು ತಮ್ಮ ತಮ್ಮ ತಂದೆಯರೆಂಬ ಪ್ರೀತಿಯಿಂದ ಉತ್ಫುಲ್ಲಲೋಚನರಾಗಿ ತಮ್ಮ ತಮ್ಮ ತಂದೆಯರನ್ನು ಸಂತೋಷದಿಂದ ಆಲಂಗಿಸಿದರು. ಆಗ ದಮಯಂತೀ ದೇವವತೀ ವೇದವತಿಯರು ತಮ್ಮ ತಮ್ಮ ತಂದೆತಾಯಿಗಳೊಡನೆ ಸೇರಿದುದನ್ನು ನೋಡಿ ವಿಶ್ವಕರ್ಮಸುತೆಯಾದ ಚಿತ್ರಾಂಗದೆಯು ತನ್ನ ತಂದೆಯನ್ನು ನೋಡದೆ ಕಣ್ಣೀರು ಬಿಟ್ಟಳು.

೧೪೨-೧೪೫. ಆಗ ಆ ಚಿತ್ರಾಂಗದೆಯನ್ನು ಕುರಿತು, ಮಗು ದುಃಖಪಡಬೇಡ ನಿನ್ನ ತಂದೆಯೇ ಈ ವಾನರನು ಎಂದು ಸತ್ಯವಚನವನ್ನೇ ಋತಧ್ವಜನು ನುಡಿದನು.

ಮಾ ವಿಷಾದಂ ಕೃಥಾಃ ಪುತ್ರಿ ಪಿತಾಯಂ ತವ ವಾನರಃ ।
ಸಾ ತದ್ವಚನಮಾಕರ್ಣ್ಯ ವ್ರೀಡೋಪಹತಚೇತನಾ ॥ ೧೪೩ ॥

ಕಥಂ ತು ವಿಶ್ವಕರ್ಮಾಸೌ ವಾನರತ್ವಂ ಗತೋಧುನಾ ।
ದುಷ್ಪುತ್ರ್ಯಾಂ ಮಯಿ ಜಾತಾಯಾಂ ತಸ್ಮಾತ್ತ್ಯಕ್ಷ್ಯೇ ಕಲೇಬರಂ ॥ ೧೪೪ ॥

ಇತಿ ಸಂಚಿಂತ್ಯ ಮನಸಾ ಋತಧ್ವಜಮುವಾಚ ಹ ।
ಪರಿತ್ರಾಯಸ್ವ ಮಾಂ ಬ್ರಹ್ಮನ್ ಪಾಪೋಪಹತಚೇತಸಂ ॥ ೧೪೫ ॥

ಪಿತೃಘ್ನೀ ಮರ್ತುಮಿಚ್ಛಾಮಿ ತದನುಜ್ಞಾತುಮರ್ಹಸಿ ।
ಅಥೋವಾಚ ಮುನಿಸ್ತನ್ವೀಂ ಮಾ ವಿಷಾದಂ ಕೃಥಾಧುನಾ ॥ ೧೪೬ ॥

ಸಂಭಾವ್ಯೇನ ವಿನಾಶೋಸ್ತಿ ತನ್ಮಾತ್ಯಾಕ್ಷೀಃ ಕಲೇಬರಂ ।
ಭವಿಷ್ಯತಿ ಪಿತಾ ತುಭ್ಯಂ ಭೂಯೋಪ್ಯಮರವರ್ಧಕಿಃ ॥ ೧೪೭ ॥

ಜಾತೇಽಪತ್ಯೇ ಘೃತಾಚ್ಯಾಂ ತು ನಾತ್ರ ಕಾರ್ಯಾ ವಿಚಾರಣಾ ।
ಇತ್ಯೇವಮುಕ್ತೇ ವಚನೇ ಮುನಿನಾ ಭಾವಿತಾತ್ಮನಾ ॥ ೧೪೮ ॥

ಅವಳು ಆ ಮಾತನ್ನು ಕೇಳಿದೊಡನೆಯೇ ಬಹಳ ಲಜ್ಜಿತಳಾಗಿ, ವಿಶ್ವಕರ್ಮನೂ ಸಹ ಈ ವಾನರತ್ವವನ್ನು ಹೇಗೆ ಹೊಂದಿದನೆಂದು ಆಲೋಚಿಸಿ ನಾನು ದುಷ್ಪುತ್ರಿಯಾಗಿ ಹುಟ್ಟಿದುದೇ ಇದಕ್ಕೆ ಕಾರಣವೆಂದೂ ಇದಕ್ಕೆ ಪ್ರತೀಕಾರವಾಗಿ ದೇಹವನ್ನು ಬಿಡುವೆನೆಂದೂ ನಿಶ್ಚೈಸಿ ಋತಧ್ವಜನನ್ನು ಕುರಿತು, ಎಲೈ ಮಹಾತ್ಮನೇ ಪಾಪಿಯಾದ ನಾನು ತಂದೆಗೂ ಈ ರೀತಿ ಬೇರೆ ಜನ್ಮವನ್ನುಂಟುಮಾಡಿ ಪಿತೃಘ್ನಿಯಾಗಿರುವೆನು ಈ ಪಾಪದ ನಾಶಕ್ಕಾಗಿ ಮರಣಹೊಂದಲು ಆಶಿಸುತ್ತಿದ್ದೇನೆ· ಇದಕ್ಕೆ ನೀನು ಅಪ್ಪಣೆ ಯನ್ನಿತ್ತು ಕಾಪಾಡು ಎಂದು ಬೇಡಿದಳು.

೧೪೬-೧೫೦. ಆಗ ಋತಧ್ವಜನು ಚಿತ್ರಾಂಗದೆಯನ್ನು ಕುರಿತು, ಮಗುವೇ ಈ ವಿಷಯದಲ್ಲಿ ನೀನು ವ್ಯಥೆಪಡಬೇಡ, ಮುಂದೆ ಸಂಭಾವಿತವಾಗಿರುವ ಕಾರಣದಿಂದ ಈ ಶಾಪಕ್ಕೆ ನಾಶವುಂಟಾಗಿ ನಿನ್ನ ತಂದೆಯು ಪುನಃ ವಿಶ್ವಕರ್ಮನಾಗಿಯೇ ಆಗುವನು. ಆದುದರಿಂದ ದೇಹವನ್ನು ಪರಿತ್ಯಾಗಮಾಡುವಂತಹ ಸಾಹಸದಲ್ಲಿ ಕೈಯ್ಯಿಡಬೇಡ. ಘೃತಾಚಿಯಲ್ಲಿ ನಿನ್ನ ತಂದೆಯು ಪುತ್ರನನ್ನು ಹೊಂದಿದೊಡನೆಯೇ ಈ ಕಪಿತ್ವವು ಹೋಗುವುದರಲ್ಲಿ ಸಂದೇಹವಿಲ್ಲ ಎಂದು ಸಮಾಧಾನಪಡಿಸಿದನು. ಯೋಗಶಕ್ತಿಯನ್ನು

ಘೃತಾಚೀ ತಾಂ ಸಮುಭ್ಯೇತ್ಯ ಪ್ರಾಹ ಚಿತ್ರಾಂಗದಾಂ ವಚಃ ।
ಪರಿತ್ಯಜಸ್ವ ಶೋಕಂ ತ್ವಂ ಮಾಸೈರ್ದಶಭಿರಾತ್ಮಜಃ ॥ ೧೪೯ ॥

ಭವಿಷ್ಯತಿ ಪಿತುಸ್ತುಲ್ಯೋ ಮತ್ಸಕಾಶಾನ್ನಸಂಶಯಃ ।
ಇತ್ಯೇವಮುಕ್ತಾ ಸಂಹೃಷ್ಟಾ ಬಭೌ ಚಿತ್ರಾಂಗದಾ ತದಾ ॥ ೧೫೦ ॥

ಸ್ವಂ ಪ್ರತ್ಯೈಕ್ಷತ ಚಾರ್ವಙ್ಗೀ ವಿವಾಹಂ ಪಿತೃದರ್ಶನಂ ।
ಸರ್ವಾಸ್ತಾಅಪಿ ತಾವಂತಂ ಕಾಲಂ ಸುತನುಕನ್ಯಕಾಃ ॥ ೧೫೧ ॥

ಪ್ರತ್ಯೈಕ್ಷಂತ ವಿವಾಹಂ ಹಿ ತಸ್ಯಾ ಏವ ಪ್ರಿಯೇಪ್ಸಯಾ ।
ತತೋ ದಶಸು ಮಾಸೇಷು ಸಮತೀತೇಷ್ವಥಾಪ್ಸರಾಃ ॥ ೧೫೨ ॥

ತಸ್ಮಿನ್ಗೋದಾವರೀತೀರೆ ಪ್ರಸೂತಾ ತನಯಂ ನಲಂ ।
ಜಾತೇಽಪತ್ಯೆ ಕಪಿತ್ವಾಚ್ಚ ವಿಶ್ವಕರ್ಮಾಪ್ಯಮುಚ್ಯತ ॥ ೧೫೩ ॥

ಸಮುಭ್ಯೇತ್ಯ ಪ್ರಿಯಾಂ ಪುತ್ರೀಂ ಪರ್ಯಷ್ವಜತ ಚಾದರಾತ್ ।
ತತಃ ಪ್ರೀತೇನ ಮನಸಾ ಸಸ್ಮಾರ ಸುರವರ್ಧಕಿಃ ॥ ೧೫೪ ॥

ಹೊಂದಿರುವ ಆ ಮಹರ್ಷಿಯು ಹೀಗೆ ಹೇಳಿದೊಡನೆಯೇ ಘೃತಾಚಿಯೂ ಚಿತ್ರಾಂಗದೆಯ ಸಮೀಪಕ್ಕೆ ಬಂದು ಮಗುವೇ, ನೀನು ದುಃಖವನ್ನು ಬಿಡು. ಇನ್ನು ಹತ್ತು ತಿಂಗಳಲ್ಲಿ ನಿನ್ನ ತಂದೆಯು ತನ್ನ ಪರಾಕ್ರಮಕ್ಕೆ ಸದೃಶನಾದ ಮಗನನ್ನು ನನ್ನ ಗರ್ಭದಿಂದ ಹೊಂದುತ್ತಾನೆ. ಈ ವಿಷಯದಲ್ಲಿ ನಿನಗೆ ಸಂದೇಹಬೇಡ ಎಂದು ಹೇಳಿದೊಡನೆಯೇ ಅವಳೂ ಸಂತುಷ್ಟಳಾದಳು.

೧೫೧-೧೫೫. ಆಗ ಚಿತ್ರಾಂಗದೆಯು ಶಾಪದಿಂದ ಬಿಡುಗಡೆ ಹೊಂದಿ ಬಂದ ಪಿತೃದರ್ಶನವೇ ತನ್ನ ವಿವಾಹಕ್ಕೆ ಸರಿಯಾದ ಸಮಯವೆಂದು ಭಾವಿಸಿದಳು. ಉಳಿದ ಕನ್ಯೆಕೆಯರೆಲ್ಲರೂ ಅವಳ ಪ್ರೀತಿಗೆ ತಕ್ಕಂತೆ ತಮ್ಮ ವಿವಾಹಕ್ಕೂ ಅದೇ ಸಮಯವನ್ನು ನಿರೀಕ್ಷಿಸಿದರು. ಹೀಗೆಯೇ ಹತ್ತು ತಿಂಗಳು ಕಳೆದಮೇಲೆ ಘೃತಾಚಿಯು ನಲನೆಂಬ ಪುತ್ರನನ್ನು ಆ ಗೋದಾವರಿಯ ತೀರದಲ್ಲೇ ಪಡೆದಳು. ವಿಶ್ವಕರ್ಮನೂ ಸಹ ಕಪಿತ್ವದಿಂದ ನಿವೃತ್ತಿಹೊಂದಿ ಸ್ವಸ್ವರೂಪದಿಂದ ಬಂದು ಪುತ್ರಿಯಾದ ಚಿತ್ರಾಂಗದೆಯನ್ನು ಆಲಿಂಗಿಸಿ ಸಂತೋಷಪಟ್ಟನು. ಅನಂತರ ಸಂತುಷ್ಟನಾದ ವಿಶ್ವಕರ್ಮನು ಇಂದ್ರನನ್ನೂ ಅವನ ಅನುಯಾಯಿಗಳಾದ ದೇವತೆಗಳು ಮತ್ತು ಕಿನ್ನರರು ಇವರು

ಸುರಾಣಾಮಧಿಪಂ ಶಕ್ರಂ ಸಹೈವ ಸುರಕಿನ್ನರೈಃ ।
ಸ್ಮೃತ್ವಾಥ ಸಂಸ್ಮೃತಃ ಪ್ರಾಪ್ತಃ ಶಕ್ರೋಽಮರಗಣೈರ್ವೃತಃ ॥ ೧೫೫ ॥

ಸುರೈರ್ಮಹೇಂದ್ರಃ ಸಂಪ್ರಾಪ್ತಃ ತತ್ತೀರ್ಥಂ ಹಾಟಕಾಹ್ವಯಂ ।
ಸಮಾಯಾತೇಷು ದೇವೇಷು ಗಂಧರ್ವೇಷ್ವಪ್ಸರಸ್ಸು ಚ ॥ ೧೫೬ ॥

ಇಂದ್ರದ್ಯುಮ್ನೋ ಮುನಿಶ್ರೇಷ್ಠಮೃತಧ್ವಜಮುವಾಚ ಹ ।
ಜಾಬಾಲೇರ್ದೀಯತಾಂ ಬ್ರಹ್ಮನ್ ಸುತಾ ಕಂದರಮಾಲಿನಃ ॥ ೧೫೭ ॥

ಗೃಹ್ಣಾತು ವಿಧಿವತ್ಪಾಣಿಂ ದ್ವಿತೀಯತನಯಾ ತವ ।
ದಮಯಂತೀಂ ಚ ಶಕುನಿಃ ಪರಿಣೇತಾ ಸ್ವರೂಪವಾನ್ ॥ ೧೫೮ ॥

ಮಮೇಯಂ ದೇವವತ್ಯಸ್ತು ಹುತ್ವಾ ಹವ್ಯಂ ವಿಧಾನತಃ ।
ಬಾಢಮಿತ್ಯಬ್ರವೀತ್ಸೋಽಪಿ ಮುನಿರ್ಮನುಸುತಂ ನೃಪಂ ॥ ೧೫೯ ॥

ತತೋಽನುಜಜ್ಞುಃ ತಂ ಹೃಷ್ಟಾ ವಿವಾಹವಿಧಿಮುತ್ತಮಂ ।
ಋತ್ವಿಜೋ ಗಾಲವಾದ್ಯಾಶ್ಚ ಹುತ್ವಾ ಹವ್ಯಂ ವಿಧಾನತಃ ॥ ೧೬೦ ॥

ಗಳನ್ನೂ ಸಹ ಸ್ಮರಿಸಿಕೊಂಡನು. ಆದರಂತೆ ದೇವತೆಗಳೊಡಗೂಡಿದ ಇಂದ್ರನು ಆ ಹಾಟಕೇಶ್ವರತೀರ್ಥದಲ್ಲಿ ಸನ್ನಿಹಿತನಾದನು.

೧೫೬-೧೬೦. ದೇವತೆಗಳೂ ಗಂಧರ್ವರೂ ಅಪ್ಸರೆಯರೂ ಅಲ್ಲಿಗೆ ಬಂದು ಸೇರಿದನಂತರ ಇಂದ್ರದ್ಯುಮ್ನನು ಋತಧ್ವಜನನ್ನು ಕುರಿತು ಮಹಾತ್ಮನೇ, ಕಂದರ ಮಾಲಿಯ ಪುತ್ರಿಯಾದ ವೇದವತಿಯು ಜಾಬಾಲಿಗೆ ಕೊಡಲ್ಪಡಲಿ. ಜಾಬಾಲಿಯು ಯಥಾವಿಧಿಯಾಗಿ ಇವಳ ಪಾಣಿಗ್ರಹಣವನ್ನು ಮಾಡಲಿ. ದಮಯಂತಿಯನ್ನು ಶಕುನಿಯು ಪಾಣಿಗ್ರಹಣಮಾಡಲಿ. ದೇವವತಿಯನ್ನು ಯಥಾವಿಧಿಯಾಗಿ ನಾನೇ ವಿವಾಹಮಾಡಿಕೊಳ್ಳುತ್ತೇನೆ ಎಂದು ಪ್ರಾರ್ಥಿಸಲು ಆ ಮುನಿಯು ಆಗಬಹುದೆಂದು ಅಪ್ಪಣೆಯಿತ್ತನು. ಅನಂತರ ಗಾಲವನೇ ಮೊದಲಾಗಿ ಎಲ್ಲರೂ ಯಥಾವಿಧಿಯಾಗಿ ಹೋಮಾದಿಗಳನ್ನು ನಡೆಯಿಸಿ ವಿವಾಹವಿಧಿಯನ್ನು ಅನುಭವಿಸಿದರು.

ಗಾಯಂತಿ ತತ್ರ ಗಂಧರ್ವಾ ನೃತ್ಯಂತ್ಯಪ್ಸರಸಸ್ತಥಾ
ಆದೌ ಜಾಬಾಲಿನಃ ಪಾಣಿಃ ಗೃಹೀತೋ ದೈತ್ಯಕನ್ಯಯಾ ॥ ೧೬೧ ॥

ಇಂದ್ರದ್ಯುಮ್ನೇನ ತದನು ದೇವವತ್ಯಾ ವಿಧಾನತಃ ।
ತತಃ ಶಕುನಿನಾ ಪಾಣಿರ್ಗೃಹೀತೋ ಯಕ್ಷಕನ್ಯಯಾ ॥ ೧೬೨ ॥

ಚಿತ್ರಾಂಗದಾಯಾಃ ಕಲ್ಯಾಣಿ ಸುರಥಃ ಪಾಣಿಮಗ್ರಹೀತ್ ।
ಏವಂ ಕ್ರಮಾದ್ವಿವಾಹಸ್ತು ನಿರ್ವೃತ್ತಸ್ತನುಮಧ್ಯಮೆ ॥ ೧೬೩ ॥

ವೃತ್ತೆ ಮುನಿರ್ವಿವಾಹೇ ತು ಶಕ್ರಾದೀನ್ಪ್ರಾಹ ದಾನವಾನ್
ಅಸ್ಮಿಂಸ್ತೀರ್ಥೆ ಭವದ್ಭಿಸ್ತು ಸಪ್ತಗೋದಾವರೆ ಸದಾ ॥ ೧೬೪ ॥

ಸ್ಥೇಯಂ ವಿಶೇಷತೋ ಮಾಸಮಿಮಂ ಮಾಧವಮುತ್ತಮಂ
ಬಾಢಮುಕ್ತ್ವಾ ಸುರಾಸ್ಸರ್ವೆ ಜಗ್ಮುರ್ಹೃಷ್ಟಾ ದಿವಂ ಕ್ರಮಾತ್ ॥ ೧೬೫ ॥

ಮುನಯೋ ಮುನಿಮಾಪಾಯ ಸಪುತ್ರಂ ಜಗ್ಮುರಾದರಾತ್ ।
ಭಾರ್ಯಾಶ್ಚಾದಾಯ ರಾಜಾನಃ ಸ್ವಂ ಸ್ವಂ ನಗರಮಾಗತೌಃ ॥ ೧೬೬ ॥

೧೬೧-೧೬೪. ಅಲ್ಲಿ ಗಂಧರ್ವರೆಲ್ಲರೂ ಗಾನಮಾಡುತ್ತಲೂ ಅಪ್ಸರೆಯರು ನರ್ತನಮಾಡುತ್ತಲೂ ಇರುವ ಸಮಯದಲ್ಲಿ ಮೊದಲು ದೈತ್ಯಕನ್ಯೆಯು ಜಾಬಾಲಿಯ ಪಾಣಿಯನ್ನು ಗ್ರಹಿಸಿದಳು. ಅನಂತರ ಇಂದ್ರದ್ಯುಮ್ನನಿಂದ ದೇವವತಿಯ ಪಾಣಿಯು ವಿಧಿಪೂರ್ವಕವಾಗಿ ಗ್ರಹಿಸಲ್ಪಟ್ಟಿತು. ಅನಂತರ ಶಕುನಿಯು ಯಕ್ಷಕನ್ಯೆಯಾದ ದಮಯಂತಿಯ ಪಾಣಿಯನ್ನು ಹಿಡಿದನು. ಸುರಥನು ಚಿತ್ರಾಂಗದೆಯ ಪಾಣಿಯನ್ನು ಗ್ರಹಿಸಿದನು. ಈ ರೀತಿ ಅವರ ವಿವಾಹವೆಲ್ಲವೂ ಕ್ರಮವಾಗಿ ನಡೆದುವು. ವಿವಾಹ ವೆಲ್ಲವೂ ನಡೆದ ಮೇಲೆ ಋತಧ್ವಜನು ಇಂದ್ರಾದಿಗಳನ್ನು ಕುರಿತು, ಈ ಸಪ್ತ ಗೋದಾವರಿ ತೀರ್ಥದಲ್ಲಿ ಯಾವಾಗಲೂ ಸನ್ನಿಹಿತರಾಗಬೇಕು. ಈ ವೈಶಾಖ ಮಾಸವು ಮಾತ್ರ ವಿಶೇಷವಾದ ಸಾನ್ನಿಧ್ಯಕ್ಕೆ ಅರ್ಹವಾದುದು ಎಂದನು.

೧೬೫-೧೬೮. ಜಾಬಾಲಿಯೊಡಗೂಡಿದ ಋತಧ್ವಜನೊಡನೆ ಋಷಿಗಳೆಲ್ಲರೂ ತಮ್ಮ ತಮ್ಮ ಸ್ಥಾನಕ್ಕೆ ಹೊರಟರು. ರಾಜರುಗಳೂ ತಮ್ಮ ತಮ್ಮ ಭಾರ್ಯೆಯರೊಡನೆ ನಗರಗಳಿಗೆ ಹೊರಟರು. ಸಂತುಷ್ಟರಾಗಿ ತಮ್ಮ ತಮ್ಮ ನಗರಗಳಲ್ಲಿ ಭಾರ್ಯೆಯರ ಸಾನ್ನಿಧ್ಯದಿಂದ ಇಂದ್ರಿಯ ಸುಖವನ್ನು ಹೊಂದಿದರು. ಎಲೈ ಮಂಗಳಾಂಗಿಯೇ ಚಿತ್ರಾಂಗದೆಯ ಪೂರ್ವವೃತ್ತಾಂತವು ಪೂರ್ವಕಾಲದಲ್ಲಿ ಹೀಗೆ ನಡೆಯಿತು. ಆದುದರಿಂದ

[illegible] ಸ್ತ್ವಾಃ ಸಂಮುಖಂ ತಸ್ಥುಃ ಭುಂಜಾನಾ ವಿಷಯೇಂದ್ರಿಯಾನ್ ।
ಚಿತ್ರಾಂಗದಾಯಾಃ ಕಲ್ಯಾಣಿ ಪೂರ್ವವೃತ್ತಂ ಪುರಾ ಕಿಲ ।
ತಸ್ಮಾತ್ಕಮಲಪತ್ರಾಕ್ಷಿ ಭಜಸ್ವ ಲಲನೋತ್ತಮೇ ॥ ೧೬೭ ॥

ಇತ್ಯೇವಮುಕ್ತ್ವಾ ನರದೇವಸೂನು
ಸ್ತಾಂಭೂಮಿದೇವಸ್ಯ ಸುತಾಂ ವರೋರುಂ ।
ಸ್ತುವನ್ ಮೃಗಾಕ್ಷೀಂ ಮೃದುನಾ ಕ್ರಮೇಣ
ಸಾ ಚಾಪಿ ವಾಕ್ಯಂ ನೃಪತಿಂ ಬಭಾಷೆ ॥ ೧೬೮ ॥

ಇತಿ ಶ್ರೀ ವಾಮನಪುರಾಣೇ ಪಂಚಷಷ್ಟಿತಮೋಽಧ್ಯಾಯಃ

ಎಲೈ ಕಮಲಾಕ್ಷಿಯೇ ನೀನೂ ಹಾಗೆಯೇ ನನ್ನನ್ನು ಹೊಂದಿ ಸುಖಿಸು, ಎಂದು ದಂಡನು ಆ ಶುಕ್ರಕನ್ಯೆಯಾದ ಅರಜೆಯನ್ನು ಮೃದುವಾದ ಚಾಟೂಕ್ತಿಯಿಂದ ಸ್ತೋತ್ರ ಮಾಡುತ್ತಾ ಅವಳ ಮನಸ್ಸನ್ನು ತನ್ನ ಕಡೆಗೆ ಒಲಿಸಲು ಪ್ರಯತ್ನಿಸಿದನು. ದಂಡನ ಈ ಚಾಟುವಾಕ್ಯವನ್ನೆಲ್ಲಾ ಕೇಳಿ ಅರಜೆಯೂ ಸಹ ಆ ಧೊರೆಯನ್ನು ಕುರಿತು ಹೀಗೆ ಹೇಳಿದಳು.

ಇಲ್ಲಿಗೆ ಶ್ರೀವಾಮನ ಪುರಾಣದಲ್ಲಿ ಅರವತ್ತೈದನೆಯ
ಅಧ್ಯಾಯವು ಮುಗಿದಿದೆ.

ಅಧ್ಯಾಯಾರ್ಥ ಸಂಗ್ರಹ

ಈ ಅಧ್ಯಾಯದಲ್ಲಿ ಹಿಂದಿನ ಅಧ್ಯಾಯದಲ್ಲಿ ನಡೆದ ದಂಡನ ವೃತ್ತಾಂತವನ್ನೇ ಮುಂದುವರಿಸಿ ಶಕುನಿಯ ಸಹಾಯದಿಂದ ಜಾಬಾಲಿಯನ್ನು ಬಿಡಿಸಿಕೊಂಡು ಋತಧ್ವಜನು ಹೊರಟನಂತರ ಶ್ರೀಕಂಠಾಶ್ರಮದಲ್ಲಿದ್ದ ವೇದವತಿ ಮತ್ತು ದಮಯಂತಿಯರಿಬ್ಬರೂ ಈಶ್ವರನ ದರ್ಶನಕ್ಕಾಗಿ ಹೋಗಿ ಋತಧ್ವಜನಿಲ್ಲದಿದ್ದುದರಿಂದ ನಿರ್ಮಾಲ್ಯದಿಂದ ಕೂಡಿ ಕಾಂತಿರಹಿತನಾಗಿದ್ದ ಶ್ರೀಕಂಠೇಶ್ವರನನ್ನು ನೋಡಿ ಮರುಗಿ ತಾವೇ ನಿತ್ಯವೂ ಸ್ನಪನ ಮತ್ತು ಪೂಜೆಯನ್ನು ನಡೆಸುತ್ತಾ ಅಲ್ಲಿರುವಾಗ ಗಾಲವನೆಂಬ ಮುನಿಯು ದೇವದರ್ಶನಕ್ಕಾಗಿ ಅಲ್ಲಿ ಬಂದನೆಂದೂ ಹಾಗೆ ಬಂದಿದ್ದ ಆ ಋಷಿಯು ದೇವಪೂಜಾದಿಗಳನ್ನು ಮುಗಿಸಿ ಅಲ್ಲಿ ಗಾನಮಾಡುತ್ತಿದ್ದ ಕನ್ಯಕಾಯುಗ್ಮವು ಯಾರಿರ

ಬಹುದೆಂದು ಆಲೋಚಿಸಿ ಗಾನವೈಭವದಿಂದ ಗಂಧರ್ವಕನ್ನೆಕೆಯರೆಂದು ತಿಳಿದು ಅವರನ್ನೂ ಪ್ರಶ್ನೆಮಾಡಿ ವೃತ್ತಾಂತವನ್ನು ತಿಳಿದನೆಂದೂ ನಂತರ ಒಂದು ರಾತ್ರಿ ಅಲ್ಲಿ ನೆಲಸಿದ್ದು ಪುಷ್ಕರಾರಣ್ಯಕ್ಕೆ ಹೊರಟು ಪ್ರಯಾಣಕಾಲದಲ್ಲಿ ಆ ಕನ್ಯಕೆಯರಿಗೆ ಹೇಳಲು ಉದ್ಯುಕ್ತನಾದಾಗ ಅವರೂ ತನ್ನೊಡನೆ ಬರಲು ಒಪ್ಪಿದುದರಿಂದ ಅವರೊಡನೆ ಕಾರ್ತಿಕ ಪೂರ್ಣಿಮಾ ಸ್ನಾನಕ್ಕಾಗಿ ಪುಷ್ಕರಕ್ಕೆ ಗಾಲವನು ಹೊರಟನೆಂದೂ ಹೇಳಲಾಯಿತು. ಆ ಕ್ಷೇತ್ರದಲ್ಲಿ ಕನ್ಯಕೆಯರೊಡನೆ ಸ್ನಾನಕ್ಕಾಗಿ ಇಳಿದ ಗಾಲವನು ನೀರಿನ ಮಧ್ಯದಲ್ಲಿ ಮತ್ಸ್ಯಸ್ತ್ರೀಯರೊಡನೆ ವಿಹರಿಸುತ್ತಿದ್ದ ಮಹಾಮತ್ಸ್ಯವನ್ನು ನೋಡುತ್ತಾ ಅಲ್ಲೇ ಬಹಳ ಹೊತ್ತು ಇದ್ದು ತನ್ನ ವಿಷಯದಲ್ಲಿ ಆ ಮತ್ಸ್ಯಸ್ತ್ರೀಯರು ಆಡಿಕೊಂಡ ಮಾತಿನಿಂದ ಲಜ್ಜಿತನಾಗಿ ಮೇಲಕ್ಕೆ ಏಳದೇ ಅಲ್ಲೇ ಬಹುಕಾಲ ನಿಂತನೆಂದೂ ಕನ್ಯೆಕೆಯರು ಮಾತ್ರ ಸ್ನಾನಮಾಡಿ ಮೇಲಕ್ಕೆ ಬಂದು ಗಾಲವನನ್ನು ನಿರೀಕ್ಷಿಸುತ್ತಾ ನಿಂತಿರುವ ಸಮಯದಲ್ಲಿ ಅಲ್ಲಿದ್ದ ಚಿತ್ರಾಂಗದೆಯು ಈ ಕನ್ಯಾಯುಗ್ಮವನ್ನು ನೋಡುತ್ತಾ ತೀರದಲ್ಲೇ ಇದ್ದಳೆಂದೂ ಯಾತ್ರೆಯೆಲ್ಲವೂ ಮುಗಿದಮೇಲೆ ಈ ಮೂರುಸ್ತ್ರೀಯರೇ ಅಲ್ಲಿರುವದನ್ನು ನೋಡಿ ಘೃತಾಚಿಯ ಮಗಳಾದ ದೇವವತಿಯೂ ಅಲ್ಲಿ ಸೇರಿ ಚಿತ್ರಾಂಗದೆಯೊಡನೆ ತನ್ನ ವೃತ್ತಾಂತವೆಲ್ಲವನ್ನೂ ಹೇಳಿ ವೇದವತೀ, ದಮಯಂತಿಯರನ್ನೂ ಸೇರಿ ಪರಸ್ಪರ ವೃತ್ತಾಂತ ವಿನಿಮಯದಿಂದ ಎಲ್ಲರೂ ಸಖ್ಯಹೊಂದಿ ಹಾಟಕೇಶ್ವರನದೇವಾಲಯಕ್ಕೆ ಬಂದು ಅಲ್ಲಿಯೇ ಪೂಜಾದಿಗಳಿಂದ ಸಂತುಷ್ಟರಾಗುತ್ತಿದ್ದರೆಂದೂ ಹೇಳಲಾಯಿತು. ಅನಂತರ ಜಾಬಾಲಿ, ಋತಧ್ವಜ, ಶಕುನಿ ಈ ಮೂರು ಜನರೂ ಈ ಕನ್ಯಕೆಯರನ್ನು ಹುಡುಕಲು ದೇಶವನ್ನು ಸುತ್ತುತ್ತಾ ಶಾಕಲದೇಶದ ಧೊರೆಯಾದ ಇಂದ್ರದ್ಯುಮ್ನನನ್ನು ನೋಡಿ ಅವನಲ್ಲಿ ತಮ್ಮ ಕನ್ಯಾನ್ವೇಷಣಕಾರ್ಯವನ್ನು ತಿಳಿಸಿ ಸಹಾಯವನ್ನು ಅಪೇಕ್ಷಿಸಲಾಗಿ ಆ ಧೊರೆಯೂ ಸಹ ತನಗೆ ಸಂಬಂಧಪಟ್ಟ ಕನ್ಯಾರತ್ನವನ್ನು ಹುಡುಕುವ ಉದ್ದೇಶದಿಂದ ತಾನೂ ಹೊರಟು ಈ ಋಷಿ ಮತ್ತು ಶಕುನಿಗೂ ವಾಹನವನ್ನು ಒದಗಿಸಿಕೊಟ್ಟು ಇವರೊಡನೆ ಸುತ್ತಲು ಹೊರಟನೆಂದೂ ಹೇಳಲಾಯಿತು. ಅನಂತರ ಸಂಚಾರದಿಂದ ಬದರಿಕಾಶ್ರಮಕ್ಕೆ ಬಂದ ಇವರೆಲ್ಲರೂ ಅಲ್ಲಿ ತಪಸ್ಸುಮಾಡುತ್ತಿದ್ದ ಸುರಥನನ್ನು ಕಂಡು ಅವನನ್ನೂ ಸಮಾಧಾನಪಡಿಸಿ ತಮ್ಮೊಡನೆ ಅವನನ್ನೂ ಕರೆದುಕೊಂಡು ಸಪ್ತಗೋದಾವರೀತೀರ್ಥಕ್ಕೆ ಬರುತ್ತಿರುವಾಗ ಮಾರ್ಗದಲ್ಲಿ ಪುತ್ರಿಯ ಅಗಲುವಿಕೆಯಿಂದ ದುಃಖಿತೆಯಾದ ಘೃತಾಚಿಯು ಬರುತ್ತಾ ಕಪಿಯನ್ನು ಸಂದರ್ಶಿಸಿ ಅವನ ಮಾತಿನಂತೆ ದೇವವತಿಯನ್ನು ಹುಡುಕುತ್ತಾ ಅದೇ ತೀರ್ಥದ ಸಮೀಪಕ್ಕೆ ಬಂದಳೆಂದೂ ಇವರೆಲ್ಲರೂ ಆ ತೀರ್ಥದ ಸಮೀಪದಲ್ಲಿ ಸೇರಿದಾದ ಜಾಬಾಲಿಯು ತನ್ನನ್ನು ಬಂಧಿಸಿದ್ದ ಕಪಿಯನ್ನು ಗುರುತಿಸಿ ಶಕುನಿಗೆ ತೋರಿಸಲಾಗಿ ಶಕುನಿಯು ಕೋಪದಿಂದ ಅದನ್ನು ಕೊಲ್ಲಲು ಸನ್ನದ್ಧನಾಗಿ ಋತಧ್ವಜ

ಹೀಗೆ ಸಮಾಧಾನಪಡಿಸಲ್ಪಟ್ಟನೆಂದೂ ಅನಂತರ ಋತಧ್ವಜನು ಕಪಿಯನ್ನು ಕುರಿತು ಅದರ ಅಪರಾಧವನ್ನು ಹೇಳಲಾಗಿ ಕಪಿಯು ಅದನ್ನು ಒಪ್ಪಿಕೊಂಡು ಜಾಬಾಲಿಯ ಜಟೆಯನ್ನು ಮರದ ತುಂಡಿನಿಂದ ಬಿಡಿಸಿತೆಂದೂ ಅದನ್ನು ನೋಡಿ ಸಂತುಷ್ಟನಾದ ಋತಧ್ವಜನಿಂದ ಆ ಕಪಿಯು ಶಾಪವಿಮೋಚನೆಗಾಗಿ ವರವನ್ನು ಪಡೆಯಿತೆಂದೂ ಹೇಳಲಾಯಿತು. ಅನಂತರ ಈ ಋಷಿಗಳೂ ದೊರೆಗಳೂ ತೀರ್ಥಕ್ಕೆ ಹೋಗಿ ಸ್ನಾನ ಮಾಡುತ್ತಿರುವಾಗ ಹಾಟಕೇಶ್ವರನ ದೇವಾಲಯದ ವಲಭಿಯಲ್ಲಿ ಸೇರಿದ್ದ ಈ ಕನ್ಯೆಕೆಯರು ಎಲ್ಲರನ್ನೂ ನೋಡಿ ಪರಿಚಿತರಾಗಿದ್ದವರನ್ನು ಗುರುತಿಸಿ ನೋಡಿ ಸಂತುಷ್ಟರಾಗಿ ತಾವೂ ಹಾಟಕೇಶ್ವರನ ಸನ್ನಿಧಾನದಲ್ಲಿ ಬಹುವಿಧವಾಗಿ ಸ್ತೋತ್ರಮಾಡುತ್ತಿರಲು ಋಷಿಗಳೂ ರಾಜರೂ ಸಹ ಸ್ನಾನಮಾಡಿ ದೇವದರ್ಶನಕ್ಕಾಗಿ ಅಲ್ಲಿ ಬಂದು ಸೇರಿದರೆಂದೂ ದೇವದರ್ಶನವಾದನಂತರ ಎಲ್ಲರೂ ಇಲ್ಲಿರುವದನ್ನು ತಿಳಿದು ಋತಧ್ವಜನು ಈ ಕನ್ಯೆಕೆಯರ ತಂದೆಯರನ್ನು ಕರೆಸಲು ಆಲೋಚಿಸುವಾಗ ಘೃತಾಚಿಯೊಡನೆ ವಿಹರಿಸಲು ಹೋಗಿದ್ದ ಆ ಕಪಿಯು ಬರಲಾಗಿ ಅದರ ಮೂಲಕ ಯಕ್ಷ, ಗಂಧರ್ವ, ದೈತ್ಯರನ್ನೂ ಅಲ್ಲಿಗೆ ಬರಮಾಡಲಾಯಿತೆಂದೂ ಹೇಳಲಾಯಿತು. ಹಾಗೆ ಅಲ್ಲಿಗೆ ಬಂದ ತಂದೆಯರು ತಮ್ಮ ಪುತ್ರಿಯರಾದ ದೇವವತೀ, ವೇದವತೀ, ದಮಯಂತಿಯರನ್ನೂ ನೋಡಿ ಸಂತೋಷಪಡುತ್ತಿರುವಾಗ ಚಿತ್ರಾಂಗದೆಯು ತನ್ನ ತಂದೆ ಎಲ್ಲಿ ಎಂದು ಋತಧ್ವಜನನ್ನು ಕೇಳಲು ಅವನು ಆ ಕಪಿಯನ್ನೇ ತಂದೆಯೆಂದು ತೋರಿಸಲು ಲಜ್ಜೆಗೊಂಡ ಚಿತ್ರಾಂಗದೆಯು ತನಗಾಗಿ ತಂದೆಯು ಈ ಜನ್ಮಹೊಂದಿದನೆಂಬ ದುಃಖದಿಂದ ಪ್ರಾಣವನ್ನು ಬಿಡಲು ಸಿದ್ಧಳಾದಾಗ ಋತಧ್ವಜನು ಅವಳಿಗೆ ಶಾಪವಿಮೋಚನ ಸಮಯವನ್ನು ಹೇಳಿ ಸಮಾಧಾನಪಡಿಸಿದನೆಂದೂ ಹೇಳಲಾಯಿತು. ಅನಂತರ ಘೃತಾಚಿಯಲ್ಲಿ ಪುತ್ರನನ್ನು ಪಡೆದ ಆ ವಿಶ್ವಕರ್ಮನು ಕಪಿ ಜನ್ಮವನ್ನು ನೀಗಿ ಪುತ್ರಿಯನ್ನು ನೋಡಿ ಸಂತುಷ್ಟನಾದನೆಂದೂ ಇಂದ್ರದ್ಯುಮ್ನನ ಸಲಹೆಯಂತೆ ವೇದವತಿಯು ಜಾಬಾಲಿಯನ್ನೂ, ದಮಯಂತಿಯು ಶಕುನಿಯನ್ನೂ, ದೇವವತಿಯು ಇಂದ್ರದ್ಯುಮ್ನನನ್ನೂ, ಚಿತ್ರಾಂಗದೆಯು ಸುರಥನನ್ನೂ ವಿವಾಹಮಾಡಿಕೊಳ್ಳಲು ಋತಧ್ವಜನು ಅಪ್ಪಣೆಯಿತ್ತನೆಂದೂ ಅದರಂತೆ ಎಲ್ಲರೂ ಯಥಾವಿಧಿಯಾಗಿ ವಿವಾಹಿತರಾಗಿ ತಮ್ಮ ತಮ್ಮ ಪತಿಗಳೊಡನೆ ಅವರವರ ಭೋಗಭೂಮಿಗೆ ತೆರಳಿದರೆಂದೂ ಚಿತ್ರಾಂಗದೆಯ ವೃತ್ತಾಂತವನ್ನು ಈರೀತಿ ಮುಗಿಸಿ ದಂಡನು ಚಿತ್ರಾಂಗದೆಯಂತೆ ನೀನೂ ನನ್ನನ್ನು ವರಿಸಬೇಕೆಂದೂ ಅಜರೆಯನ್ನು ಬಹುಮುಖವಾಗಿ ಮೃದುನುಡಿಗಳಿಂದ ಪ್ರಾರ್ಥಿಸಲು ಅಜರೆಯು ಎಲ್ಲವನ್ನೂ ಕೇಳಿ ಮುಂದೆ ಪ್ರತ್ಯುತ್ತರವನ್ನು ಹೇಳುತ್ತಾಳೆಂದೂ ಅವಾಂತರ ಕಥೆಯನ್ನು ಮುಗಿಸಿ ದಂಡ ಮತ್ತು ಅಜರೆಯ ವೃತ್ತಾಂತವನ್ನೇ ಮುಂದುವರಿಸಲಾಯಿತು.

॥ ಶ್ರೀಃ ॥

ಶ್ರೀವಾಮನಪುರಾಣಂ

ಷಟ್‌ಷಷ್ಟಿತಮೋಽಧ್ಯಾಯಃ

ಅರಜಾ ಉವಾಚ

ನಾತ್ಮಾನಂ ತವ ದಾಸ್ಯಾಮಿ ಬಹುನೋಕ್ತೇನ ಕಿಂ ತವ ।
ರಕ್ಷಂತೀ ಭವತಃ ಶಾಪಾದಾತ್ಮಾನಂ ಚ ಮಹೀಪತೇ ॥ ೧ ॥

ಪ್ರಹ್ಲಾದ ಉವಾಚ

ಇತ್ಥಂ ವಿವದಮಾನಾಂ ತಾಂ ಭಾರ್ಗವೇಂದ್ರಸುತಾಂ ಬಲಾತ್ ।
ಕಾಮೋಪಹತಚಿತ್ತಾತ್ಮಾ ವ್ಯಧ್ವಂಸಯತ ಮಂದಧೀಃ ॥ ೨ ॥

ತಾಂ ಕೃತ್ವಾ ಚ್ಯುತಚಾರಿತ್ರಾಂ ಮದಾಂಧಃ ಪೃಥಿವೀಪತಿಃ ।
ನಿಶ್ಚಕ್ರಾಮಾಶ್ರಮಾತ್ತಸ್ಮಾದ್ಗತಶ್ಚ ನಗರಂ ನಿಜಂ ॥ ೩ ॥

ಅರವತ್ತಾರನೆಯ ಅಧ್ಯಾಯವು

೧-೫. ಆಗ ಅರಜೆಯು ದಂಡನನ್ನು ಕುರಿತು ಹೆಚ್ಚಾಗಿ ಮಾತನಾಡಿ ಪ್ರಯೋಜನವಿಲ್ಲ. ಧೊರೆಯೇ, ನನ್ನ ಆತ್ಮನನ್ನು ನಿನ್ನಿಂದಲೂ ಶಾಪದಿಂದಲೂ ರಕ್ಷಿಸುವ ಉದ್ದೇಶದಿಂದ ನನ್ನನ್ನು ನಾನೇ ನಿನಗೆ ದಾನಮಾಡುವುದಿಲ್ಲವೆಂದು ಖಂಡಿತವಾದ ಉತ್ತರವನ್ನಿತ್ತಳು. ಅನಂತರ ಪ್ರಹ್ಲಾದನು ಪ್ರಕೃತ ವೃತ್ತಾಂತವನ್ನು ಮುಂದುವರಿಸುತ್ತಾನೆ. ಈ ರೀತಿ ವಿವಾದ ಮಾಡುತ್ತಿದ್ದ ಆ ಭಾರ್ಗವ ಪುತ್ರಿಯಾದ ಅಜರೆಯನ್ನು ಕಾಮೋದ್ರಿಕ್ತನಾಗಿ ಮದಾಂಧನಾಗಿದ್ದ ಧೊರೆಯು (ದಂಡನು) ಬಲಾತ್ಕಾರದಿಂದ ವಶಪಡಿಸಿಕೊಂಡು ಅವಳನ್ನು ಭ್ರಷ್ಟಳನ್ನಾಗಿ ಮಾಡಿ ಆಶ್ರಮವನ್ನು ಬಿಟ್ಟು ತನ್ನ ನಗರಕ್ಕೆ ಹೊರಟುಹೋದನು. ಅಜರೆಯೂ ಕೂಡ ಬಲಾತ್ಕಾರದಿಂದ

ಸಾಪಿ ಶುಕ್ರೇಪ್ಸುತಾ ತನ್ವೀ ಅರಜಾ ರಜಸಾಪ್ಲುತಾ ।
ಆಶ್ರಮಾದಥ ನಿರ್ಗತ್ಯ ಬಹಿಸ್ತಸ್ಥಾವಧೋಮುಖೀ ॥ ೪ ॥

ಚಿಂತಯಂತೀ ಸ್ವಪಿತರಂ ರುದತೀ ಚ ಮುಹುರ್ಮುಹುಃ ।
ಮಹಾಗ್ರಹೋಪರುದ್ಧೇವ ರೋಹಿಣೀ ಶಶಿನಃ ಪ್ರಿಯಾ ॥ ೫ ॥

ತತೋ ಬಹುತಿಥೇ ಕಾಲೇ ಸಮಾಪ್ತೇ ಯಜ್ಞಕರ್ಮಣಿ ।
ಪಾತಾಲಾದಾಗಮಚ್ಛುಕ್ರಃ ಸ್ವಮಾಶ್ರಮಪದಂ ಮುನಿಃ ॥ ೬ ॥

ಆಶ್ರಮಾಂತೇ ಚ ದದೃಶೇ ಸುತಾಮೇತ್ಯ ರಜಸ್ವಲಾಂ ।
ಮೇಘಲೇಖಾಮಿವಾಕಾಶೇ ಸಂಧ್ಯಾರಾಗೇಣ ರಂಜಿತಾಂ ॥ ೭ ॥

ತಾಂ ದೃಷ್ಟ್ವಾ ಪರಿಪಪ್ರಚ್ಛ ಪುತ್ರಿ ಕೇನಾಸಿ ಧರ್ಷಿತಾ ।
ಕಃ ಕ್ರೀಡತಿ ಸರೋಷೇಣ ಸಮಮಾಶೀವಿಷೇಣ ಹಿ ॥ ೮ ॥

ಕ್ವಾ ದ್ಯೈವಯಾಮಿ ಕ್ವಗತಃ ಪಾಪಕೃತ್ಸುದುರ್ಮತಿಃ ।
ಕಸ್ತ್ವಾಂ ಶುದ್ಧಸಮಾಚಾರಾಂ ವಿಧ್ವಂಸಯತಿ ಪಾಪಕೃತ್ ॥ ೯ ॥

ಅವನೊಡನೆ ಸಂಗಮಿಸಿ ಅವನ ಶುಕ್ಲಸಂಪರ್ಕದಿಂದ ರಜಸ್ವಲೆಯಾಗಿ ಆಶ್ರಮವನ್ನು ಬಿಟ್ಟು ಹೊರಗೆ ಬಂದು ನಾಚಿಕೆಯಿಂದ ಅಧೋಮುಖಿಯಾಗಿ ನಿಂತಳು. ಹೊರಗೆ ನಿಂತು ತಂದೆಯನ್ನು ಸ್ಮರಿಸುತ್ತಾ ತನಗೆ ಉಂಟಾದ ಪರಾಭವದಿಂದ ಬಾರಿಬಾರಿಗೂ ಅಳುತ್ತಾ ಮಹಾಗ್ರಹದಿಂದ ಗ್ರಸ್ತಳಾದ ಚಂದ್ರಪತ್ನಿಯಾದ ರೋಹಿಣಿಯಂತೆ ತೋರಿದಳು.

೬-೧೦. ಅನಂತರ ಬಹಳಕಾಲ ಕಳೆದಮೇಲೆ ಯಜ್ಞಕಾರ್ಯವನ್ನು ಮುಗಿಸಿ ಕೊಂಡು ಪಾತಾಲದಿಂದ ಶುಕ್ರಾಚಾರ್ಯನು ತನ್ನ ಆಶ್ರಮಕ್ಕೆ ಬಂದನು. ಬಂದ ಒಡನೆಯೇ ಸಂಧ್ಯಾರಾಗದಿಂದ ರಂಜಿತವಾಗಿರುವ ಮೇಘಪಂಕ್ತಿಯಂತೆ ಆಶ್ರಮದ ಹೊರಗೇ ನಿಂತಿದ್ದ ರಜಸ್ವಲೆಯಾದ ಪುತ್ರಿಯನ್ನು ನೋಡಿದನು. ಅವಳನ್ನು ಕುರಿತು ಪುತ್ರಿ ಹೀಗೆ ದುಃಖಿನಿಯಾಗಿರುವ ನೀನು ಯಾರಿಂದ ಅವಮಾನಿಸಲ್ಪಟ್ಟಿದ್ದೀಯೆ, ಕೋಪದಿಂದ ಬುಸುಗುಟ್ಟುತ್ತಿರುವ ಸರ್ಪದೊಡನೆ ಯಾವನು ಆಟವಾಡುತ್ತಿದ್ದಾನೆ. ಶುದ್ಧವಾದ ಚಾರಿತ್ರವುಳ್ಳ ನಿನ್ನನ್ನೂ ಧ್ವಂಸಮಾಡಿದ ಆ ಪಾಪಿಯು ಎಲ್ಲಿ ಹೋಗಿರ ಬಹುದು. ನಾನೂ ಈಗ ಅವನನ್ನು ಹುಡುಕಲು ಎಲ್ಲಿ ಹೋಗಬೇಕು. ಹೇಳು

ತತಃ ಸ್ವಪಿತರಂ ದೃಷ್ಟ್ವಾ ಕಂಪಮಾನಾ ಪುನಃಪುನಃ ।
ರುದಂತೀ ವ್ರೀಡಯೋಪೇತಾ ಮಂದಂ ಮಂದ ಮುವಾಚ ಹ ॥ ೧೦ ॥

ತವ ಶಿಷ್ಯೇಣ ದಂಡೇನ ವಾರ್ಯಮಾಣೇನ ಚಾಸಕೃತ್ ।
ಬಲಾದನಾಥಾ ರುದತೀ ನೀತಾಹಂ ವಚನೀಯತಾಂ ॥ ೧೧ ॥

ಏತತ್ಪುತ್ರ್ಯಾ ವಚಃ ಶ್ರುತ್ವಾ ಕ್ರೋಧಸಂರಕ್ತಲೋಚನಃ ।
ಉಪಸ್ಪೃಶ್ಯ ಶುಚಿರ್ಭೂತ್ವಾ ಇದಂ ವಚನಮಬ್ರವೀತ್ ॥ ೧೨ ॥

ಯಸ್ಮಾತ್ತೇನಾವಿನೀತೇನ ಮಮಾಜ್ಞಾಭಯಮುತ್ತಮಂ ।
ಗೌರವಂ ಚ ತಿರಸ್ಕೃತ್ಯ ಚ್ಯುತಧರ್ಮಾ ರಜಾಃ ಕೃತಾ ॥ ೧೩ ॥

ತಸ್ಮಾತ್ಸರಾಷ್ಟ್ರಃ ಸಬಲಃ ಸಭೃತ್ಯೋ ವಾಹನೈಸಹ ।
ಸಪ್ತರಾತ್ರಾಂತರಾದ್ಭಸ್ಮ ನಗ್ನಾಂ ದೃಷ್ಟ್ವಾಂ ಭವಿಷ್ಯತಿ ॥ ೧೪ ॥

ಇತ್ಯೇವಮುಕ್ತ್ವಾ ಮುನಿಪುಂಗವೋಽಸೌ
ಶಪ್ತ್ವಾ ಸ ದಂಡಂ ಸ್ವಸುತಾಮುವಾಚ ।
ತ್ವಂ ಪಾಪಮೋಕ್ಷಾರ್ಥಮಿಹೈವ ಪುತ್ರಿ
ತಿಷ್ಠಸ್ವ ಕಲ್ಯಾಣಿ ತಪಶ್ಚರಂತೀ ॥ ೧೫ ॥

ಎಂದು ಪ್ರಶ್ನೆಮಾಡಲು ಅರಜೆಯು ತಂದೆಯನ್ನು ನೋಡಿ ಭಯದಿಂದ ನಡುಗುತ್ತಾ ಅಳುತ್ತಾ ಲಜ್ಜೆಯಿಂದ ತಲೆಬಗ್ಗಿಸಿಕೊಂಡು ಮೆಲ್ಲಗೆ ಹೀಗೆ ಹೇಳಿದಳು.

೧೧-೧೪. ನಿನ್ನ ಶಿಷ್ಯನಾದ ದಂಡನು ಬಾರಿಬಾರಿಗೂ ನನ್ನಿಂದ ತಡೆಯಲ್ಪಟ್ಟರೂ ಅನಾಥೆಯಾಗಿ ಅಳುತ್ತಾ ಇದ್ದ ನನ್ನನ್ನು ಬಲಾತ್ಕಾರದಿಂದ ಈ ದೋಷಕ್ಕೆ ಗುರಿಮಾಡಿದನು. ಈ ರೀತಿಯಾದ ಪುತ್ರಿಯ ವಾಕ್ಯವನ್ನು ಕೇಳಿದೊಡನೆಯೇ ಕೋಪದಿಂದ ಕೆಂಪಾದ ಕಣ್ಣುಗಳುಳ್ಳ ಶುಕ್ರಾಚಾರ್ಯನು, ಆಚಮನದಿಂದ ಶುದ್ಧನಾಗಿ ಈ ರೀತಿಯಾದ ಶಾಪವಚನವನ್ನಿತ್ತನು. ಯಾವಕಾರಣದಿಂದ ಅವಿನೀತನಾದ ಆ ದಂಡನು ನನ್ನ ಆಜ್ಞಾಭಯವನ್ನೂ ಗೌರವವನ್ನೂ ತಿರಸ್ಕರಿಸಿ ಅರಜೆಯನ್ನು ಸ್ವಧರ್ಮಚ್ಯುತಳನ್ನಾಗಿ ಮಾಡಿರುವನೋ ಆದುದರಿಂದ ಅವನು ಇನ್ನು ಏಳು ರಾತ್ರಿಯೊಳಗೆ ರಾಷ್ಟ್ರ, ಬಲ, ವಾಹನ ಸಹಿತನಾಗಿ ಭಸ್ಮವಾಗಲಿ.

೧೫-೧೮. ಈ ರೀತಿಯಾಗಿ ಆ ಶುಕ್ರಾಚಾರ್ಯನು ದಂಡನನ್ನು ಶಪಿಸಿ ತನ್ನ ಮಗಳಾದ ಅರಜೆಯನ್ನು ಕುರಿತು ಪುತ್ರಿ, ಈ ಪಾಪದ ವಿಮೋಚನೆಗಾಗಿ ತಪಸ್ಸನ್ನು

ಶಪ್ತ್ವೇತ್ಥಂ ಭಗವಾನ್ ಶುಕ್ರಃ ದಂಡಮಿಕ್ಷ್ವಾಕುನಂದನಂ ।
ಜಗಾಮ ಸಹ ಪಾತಾಲಂ ದಾನವಾಲಯಮುತ್ತಮಂ ॥ ೧೬ ॥

ದಂಡೋಽಪಿ ಭಸ್ಮಸಾದ್ಭೂತಃ ಸರಾಷ್ಟ್ರಬಲವಾನಃ ।
ಮಹತಾ ಬಲವರ್ಗೇಣ ಸಪ್ತರಾತ್ರಾಂತರೆ ತದಾ ॥ ೧೭ ॥

ಏವಂ ಹಿ ದಂಡಕಾರಣ್ಯಂ ಪರಿತ್ಯಕ್ಷ್ಯಂತಿ ದೇವತಾಃ ।
ಆಲಯಂ ರಾಕ್ಷಸಾನಾಂ ತು ಕೃತಂ ದೇವೇನ ಶಂಭುನಾ ॥ ೧೮ ॥

ಏವಂ ಪರಕಲತ್ರಾಣಿ ನಯಂತಿ ಸುಕೃತಾದಪಿ ।
ಭಸ್ಮಭೂತಾನ್ ಪ್ರಾಕೃತಾಂಸ್ತು ಮಹಾಂತಂ ಚ ಪರಾಭವಂ ॥ ೧೯ ॥

ತಸ್ಮಾದಂಧಕ ದುರ್ಬುದ್ಧಿರ್ನಕಾರ್ಯಾ ಭವತಾ ತ್ವಿಯಂ ।
ಪ್ರಾಕೃತಾಪಿ ದಹೇನ್ನಾರೀ ಕಿಮುತಾಹೋದ್ರಿನಂದಿನೀ ॥ ೨೦ ॥

ಶಂಕರೋಽಪಿ ನ ದೈತ್ಯೇಶ ಶಕ್ಯೋ ಜೇತುಂ ಸುರಾಸುರೈಃ ।
ನದ್ರಷ್ಟುಮಪಿ ಶಕ್ಯೋಽಸೌ ಕಿಮು ಯೋಧಯಿತುಂ ರಣೆ ॥ ೨೧ ॥

ಮಾಡುತ್ತಾ ನೀನು ಇಲ್ಲಿಯೇ ಇರು ಎಂದು ಹೇಳಿ, ದಂಡನಿಗೆ ಉಗ್ರವಾದ ಶಾಪವನ್ನು ಕೊಟ್ಟು ತಾನು ಪುನಃ ಪಾತಾಲಲೋಕಕ್ಕೇ ಹೊರಟುಹೋದನು. ದಂಡನೂ ಸಹ ಆಚಾರ್ಯನ ಶಾಪದಿಂದ ಏಳುದಿನಗಳೊಳಗೆ ರಾಷ್ಟ್ರ, ಬಲ, ವಾಹನಗಳೊಡನೆ ಭಸ್ಮವಾದನು. ಆದುದರಿಂದಲೇ ಪಾಪಿಯಾದ ದಂಡಕನ ಈ ಅರಣ್ಯವನ್ನು ದೇವತೆಗಳು ಪರಿತ್ಯಾಗಮಾಡುತ್ತಿದ್ದಾರೆ. ಶಂಭುವಿನಿಂದ ಕ್ರೂರಿಗಳಾದ ರಾಕ್ಷಸರ ಆವಾಸಸ್ಥಾನವಾಗಿ ಮಾಡಲ್ಪಟ್ಟಿದೆ.

೧೯-೨೨. ಈ ರೀತಿ ಪರಸ್ತ್ರೀಯರು ಅವಮಾನಿತರಾಗಿ ಸುಕೃತವನ್ನು ಮಾತ್ರವಲ್ಲದೆ ಎಲ್ಲಾವಿಧವಾದ ಪ್ರಾಕೃತ ಭೋಗ್ಯವಸ್ತುಗಳನ್ನೂ ದಹಿಸುತ್ತಾರೆ. ಬಹಳ ಅವಮಾನವನ್ನೂ ಉಂಟುಮಾಡುತ್ತಾರೆ. ಆದುದರಿಂದ ಎಲೈ ಅಂಧಕಾಸುರನೇ ಈ ವಿಧವಾದ ದುರ್ಬುದ್ಧಿಯನ್ನು ನೀನು ಮಾಡಬೇಡ. ಪ್ರಾಕೃತ ಸ್ತ್ರೀಯೂ ಕುಪಿತಳಾದಲ್ಲಿ ದಹಿಸುವುದಾದರೆ ಅಪ್ರಾಕೃತಳಾದ ಪಾರ್ವತಿಯೂ ದಹಿಸುವುದರಲ್ಲಿ ಹೇಳತಕ್ಕದ್ದೇನಿದೆ. ಎಲೈ ದೈತ್ಯರಾಜನೇ, ಶಂಕರನೂ ಸಹ ಸುರಾಸುರರಿಂದಲೂ ಜಯಿಸಲು ಶಕ್ಯನಲ್ಲ. ಅವನನ್ನು ನೋಡುವುದಕ್ಕೂ ಸಾಧ್ಯವಿಲ್ಲದಿರುವಾಗ ಯುದ್ಧಮಾಡುವ ವಿಚಾರವು ಬಹಳ ದೂರವಾದ ಕಥೆ, ಎಂದು ಪ್ರಹ್ಲಾದನು ಹಿತ

ಪುಲಸ್ತ್ಯ ಉವಾಚ

ಇತ್ಯೇವಮುಕ್ತೆ ವಚನೆ ಕ್ರುದ್ಧಃ ತಾಮ್ರೇಕ್ಷಣಃ ಶ್ವಸನ್ ।
ವಾಕ್ಯಮಾಹ ಮಹಾತೇಜಾಃ ಪ್ರಹ್ಲಾದಂ ಚಾಂಧಕಾಸುರಃ ॥ ೨೨ ॥

ಕಿಂ ಮಯಾಸೌ ರಣೆ ಯೋದ್ಧುಂ ಶಕ್ತಸ್ತ್ರಿನಯನೋಽಸುರ ।
ಏಕಾಕೀ ಧರ್ಮರಹಿತೋ ಭಸ್ಮಾರುಣಿತವಿಗ್ರಹಃ ॥ ೨೩ ॥

ನಾಂಧಕೋ ಬಿಭಿಯಾದಿಂದ್ರಾದ್ವಾನರೇಭ್ಯಃ ಕದಾಚನ ।
ಸ ಕಥಂ ವೃಷಪತ್ರಾಖ್ಯಾದ್ಬಿಭೇತಿ ಪುರವೀಕ್ಷಣಾತ್ ॥ ೨೪ ॥

ತಚ್ಛ್ರುತ್ವಾಸ್ಯ ವಚೋ ಘೋರಂ ಪ್ರಹಾದಃ ಪ್ರಾಹ ನಾರದ ।
ಸಹ್ಯಂ ಗರ್ಹ್ಯಂ ನ ಭವತಾ ವಿರುದ್ಧಂ ಧರ್ಮತೋಽರ್ಥತಃ ॥ ೨೫ ॥

ವಚನವನ್ನು ಹೇಳಿದೊಡನೆಯೇ ಅಂಧಕನು ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿ ನಿಟ್ಟುಸುರು ಬಿಡುತ್ತಾ ಪ್ರಹ್ಲಾದನನ್ನು ಕುರಿತು ಅಹಂಕಾರದಿಂದ ಹೇಳುತ್ತಾನೆ.

೨೩-೨೭. ಎಲೈ ಅಸುರನೇ, ಈ ತ್ರಿಲೋಚನನು ಯುದ್ಧದಲ್ಲಿ ನನ್ನೊಡನೆ ಹೋರಾಡಲು ಸಮರ್ಥನಾದಾನೇ ! ಏಕೆಂದರೆ ಇವನು ಏಕಾಕಿಯಾಗಿರುವದ್ದರಿಂದ ಸಮಸ್ತಗಾರ್ಹಸ್ಥ್ಯಧರ್ಮಗಳಿಂದಲೂ ಭ್ರಷ್ಟನಾಗಿ ಅಮಂಗಲವಾದ ಭಸ್ಮ ಧಾರಣದಿಂದ ನಿರ್ವೀರ್ಯನಾಗಿರುವನು. ಇವನು ನನ್ನೊಡನೆ ಹೇಗೆ ಯುದ್ಧ ಮಾಡಿಯಾನು, ಯಾವ ಅಂಧಕನಾದ ನಾನು ಇಂದ್ರನಿಗೂ ಇತರ ಮನುಷ್ಯರಿಗೂ ಎಂದಿಗೂ ಭಯಪಡುವದಿಲ್ಲವೋ ಅಂತಹ ನಾನು ಕೇವಲ ಪುರವೀಕ್ಷಣವನ್ನು ಹೊಂದಿ ವೃಷವಾಹನನಾಗಿರುವ ಆ ಹರನಿಗೆ ಹೇಗೆ ಭಯಪಡುವೆನು. ಈ ಪ್ರಕಾರವಾದ ಹರನಿಂದಾಪರವಾದ ಘೋರವಚನವನ್ನು ಕೇಳಿ ಪ್ರಹ್ಲಾದನು, ಅಂಧಕನನ್ನು ಕುರಿತು ಧರ್ಮಾರ್ಥ ದೃಷ್ಟಿಯಿಂದ ಯಾವುದು ವಿರುದ್ಧವಾಗಿ ಕಂಡುಬರುವುದೋ ಆದುದ ರಿಂದಲೇ ನಿಂದಿತವಾದ ಆ ವ್ಯಾಪಾರವು ನಿನ್ನಿಂದ ಸಹಿಸಲ್ಪಡತಕ್ಕದ್ದಲ್ಲ. ಸಿಂಹಕ್ಕೂ ನರಿಗೂ ಮತ್ತು ಅಗ್ನಿಗೂ ಪತಂಗದ ಹುಳುವಿಗೂ ಎಷ್ಟು ಅಂತರವಿರಬಹುದೋ ಹಾಗೆಯೇ ಚಿನ್ನಕ್ಕೂ ಕಲ್ಲಿಗೂ ಮತ್ತು ಆನೆಗೂ ಸೊಳ್ಳೆಗೂ ಎಷ್ಟು ಅಂತರವಿರ

ಹುತಾಶನಪತಂಗಾಭ್ಯಾಂ ಸಿಹ್ಮಕ್ರೋಷ್ಟುಕಯೋರಿವ ।
ಗಜೇಂದ್ರಮಶಕಾಭ್ಯಾಂ ಚ ರುಕ್ಮಪಾಷಾಣಯೋರಪಿ ॥ ೨೬ ॥

ಏತೇಷಾಮೇವ ಗದಿತಂ ಯಾವದಂತರಮಂಧಕ ।
ತಾವದೇವಾಂತರಂ ನಾಸ್ತಿ ಭವತೋಹಿ ಹರಸ್ಯ ಚ ॥ ೨೭ ॥

ವಾರಿತೋಸಿ ಮಯಾ ವೀರ ಭೂಯೋಭೂಯಶ್ಚ ವಾರ್ಯಸೇ ।
ಶೃಣುಷ್ವ ವಾಕ್ಯಂ ದೇವರ್ಷೇರಸಿತಸ್ಯ ಮಹಾತ್ಮನಃ ॥ ೨೮ ॥

ಯೋಧರ್ಮಶೀಲೋ ಜಿತಮಾನರೋಷೋ
ವಿದ್ಯಾವಿನೀತೋ ನಪರೋಪತಾಪೀ ।
ಸ್ವದಾರತುಷ್ಟಃ ಪರದಾರವರ್ಜಂ
ನತಸ್ಯ ಲೋಕೇ ಭಯಮಸ್ತಿ ಕಿಂಚಿತ್ ॥ ೨೯ ॥

ಬಹುದೋ ಇವುಗಳಿಗಿರುವಷ್ಟು ಅಂತರವೂ ನಿನಗೂ ಹರನಿಗೂ ಇರುವದಿಲ್ಲ. (ಇಲ್ಲಿ ಒಂದು ವಸ್ತುವಿಗೆ ಮತ್ತೊಂದು ವಸ್ತುವಿನ ಸಂಬಂಧವುಂಟಾಗಬೇಕಾದರೆ ಆ ಸಂಬಂಧವು ಧರ್ಮದೃಷ್ಟಿಯಿಂದಾಗಲೀ ಅರ್ಥದೃಷ್ಟಿಯಿಂದಾಗಲೀ ಅನುಗುಣವಾಗಿರಬೇಕು. ಅಗ್ನಿ ಪತಂಗಾದಿಗಳಿಗೆ ಪರಸ್ಪರ ವಿರೋಧವಿರುವುದರಿಂದ ಅಥವಾ ಅಧಿಕ ತಾರತಮ್ಯವಿರುವದ್ದರಿಂದ ಆ ಸಂಬಂಧವು ಯಾವ ಧರ್ಮಾರ್ಥಕ್ಕೂ ಅನುಗುಣವಲ್ಲ. ನಿನಗೂ ಹರನಿಗೂ ಇರುವ ತಾರತಮ್ಯವು ಇವುಗಳಿಗಿಂತಲೂ ವಿಷಮವಾದುದೆಂದು ತಾತ್ಪರ್ಯ.)

೨೮-೩೦. ಎಲೈ ಶೂರನಾದ ಅಂಧಕನೇ, ನನ್ನಿಂದ ನೀನು ಈ ರೀತಿ ತಡೆಯಲ್ಪಟ್ಟಿದ್ದೀಯೆ. ಮುಂದೆಯೂ ಹೀಗೆಯೇ ಬಾರಿಬಾರಿಗೂ ತಡೆಯಲ್ಪಡುತ್ತೀಯೆ ಮಹಾತ್ಮನಾಗಿಯೂ ದೇವರ್ಷಿಯಾಗಿಯೂ ಇರುವ ಅಸಿತಮಹರ್ಷಿಯ ಈ ವಾಕ್ಯವನ್ನು ಕೇಳು. ಯಾವನು ಈ ಲೋಕದಲ್ಲಿ ಧರ್ಮಶೀಲನಾಗಿಯೂ, ಅಹಂಕಾರ, ಕಾಮಕ್ರೋಧಗಳನ್ನು ಜಯಿಸಿಯೂ ವಿದ್ಯೆಯಿಂದ ವಿನೀತನಾಗಿಯೂ ಇತರರನ್ನು ಸಂತಾಪಗೊಳಿಸದೆ ಪರಸ್ತ್ರೀಪರಾಙ್ಮುಖನಾಗಿ ಸ್ವಸ್ತ್ರೀಯಲ್ಲಿ ಸಂತುಷ್ಟನಾಗಿರುವನೋ ಅವನಿಗೆ ಯಾರಿಂದಲೂ ಯಾವ ವಿಧದಲ್ಲಿಯೂ ಭಯವಿಲ್ಲ. ಯಾವನು ಧರ್ಮಭ್ರಷ್ಟನಾಗಿಯೂ ಕಲಹಪ್ರಿಯನಾಗಿಯೂ ಯಾವಾಗಲೂ ಪರರನ್ನು ಸಂತಾಪಪಡಿ

ಯೋ ಧರ್ಮಹೀನಃ ಕಲಹಪ್ರಿಯಸ್ಸದಾ
ಪರೋಪತಾಪೀ ಶ್ರುತಶಾಸ್ತ್ರವರ್ಜಿತಃ ।
ಪರಾರ್ಥದಾರೇಪ್ಸುರವರ್ಣಸಂಗಮೀ
ಸುಖಂ ಸ ವಿಂದೇನ್ನ ಪರತ್ರ ಚೇಹ ॥ ೩೦ ॥

ಧರ್ಮಾನ್ವಿತೋ ಭೂದ್ಭಗವಾನ್ ಪ್ರಭಾಕರಃ
ಸಂತ್ಯಕ್ತರೋಷಶ್ಚ ಮುನಿಃ ಸ ವಾರುಣಿಃ ।
ವಿದ್ಯಾನ್ವಿತೋಭೂನ್ಮನುರರ್ಕಪುತ್ರಃ
ಸ್ವದಾರಸಂತುಷ್ಟಮನಾಸ್ತ್ವಗಸ್ತ್ಯಃ ॥ ೩೧ ॥

ಏತಾನಿ ಪುಣ್ಯಾನಿ ಕೃತಾನ್ಯಮೀಭಿರ್ನ
ಪಾಪಬದ್ಧಾನಿ ಕುಲಕ್ರಮೋಕ್ತ್ಯಾ ।
ತೇಜೋನ್ವಿತಾಃ ಶಾಪವರಕ್ಷಮಾಶ್ಚ
ಜಾತಾಸ್ತು ಸರ್ವೇ ಸುರಸಿದ್ಧಪೂಜ್ಯಾಃ ॥ ೩೨ ॥

ಸುತ್ತಲೂ ಶಾಸ್ತ್ರಮಾರ್ಗವನ್ನು ಉಲ್ಲಂಘಿಸುತ್ತಲೂ ಪದಾರ್ಥದಲ್ಲಿಯೂ ಪರಸ್ತ್ರೀಯಲ್ಲಿಯೂ ಆಶೆಯುಳ್ಳವನಾಗಿಯೂ ನಿಂದಿತವಾದ ವರ್ಣದಲ್ಲಿ ಸಂಗಮಾಪೇಕ್ಷಿಯಾಗಿಯೂ ಇರುವನೋ ಅವನಿಗೆ ಇಲ್ಲಿಯೂ ಪರಲೋಕದಲ್ಲಿಯೂ ಸುಖಲೇಶವೂ ಇರುವದಿಲ್ಲ.

೩೧-೩೨. ಪೂಜ್ಯನಾದ ಪ್ರಭಾಕರನು ಧರ್ಮದಿಂದಕೂಡಿ ಬದುಕಿದನು. ವಾರುಣಿಯೆಂಬ ಮುನಿಯು ರೋಷವಿಲ್ಲದೆ ಶಾಂತಿಯಿಂದ ಬದುಕಿದನು. ಅರ್ಕಪುತ್ರನಾದ ಮನುವು ವಿದ್ಯೆಯಿಂದ ವಿನೀತನಾಗಿ ಬದುಕಿದನು. ಅಗಸ್ತ್ಯನು ಸ್ವಸ್ತ್ರೀಯಲ್ಲಿ ಸಂತುಷ್ಟನಾಗಿದ್ದನು. ಇವರಿಂದ ಈ ವಿಧವಾದ ಪುಣ್ಯಕರವಾದ ಸದ್ಧರ್ಮಗಳು ಪಾಪಸಂಬಂಧವಿಲ್ಲದೆ ಕುಲಕ್ರಮದಿಂದ ಆಚರಿಸಲ್ಪಟ್ಟವು. ಆದುದರಿಂದಲೇ ಇವರು ತಮ್ಮ ತೇಜಸ್ಸಿನಿಂದ ಶಾಪಾನುಗ್ರಹ ಸಮರ್ಥರಾಗಿದ್ದು ಸುರರಿಂದಲೂ ಸಿದ್ಧರಿಂದಲೂ ಪೂಜಿಸಲ್ಪಟ್ಟು ಪ್ರಸಿದ್ಧಿಹೊಂದಿದರು. ಇವರೆಲ್ಲರೂ ಅನ್ವಯದೃಷ್ಟಾಂತ, ವ್ಯತಿರೇಕ

ಅಧರ್ಮಯುಕ್ತೋಽದ್ಗಮಿತೋ ಬಭೂವ
ವಿಭುಶ್ಚ ನಿತ್ಯಂ ಕಲಹಪ್ರಿಯೋಽಭೂತ್ ।
ಪರೋಪತಾಪೀ ನಮುಚಿರ್ದುರಾತ್ಮಾ
ಪರಾವಲೇಪೀ ಸನಕೋ ಹಿ ರಾಜಾ ॥ ೩೩ ॥

ಪರಾರ್ಥಲಿಪ್ಸುರ್ದಿತಿಜೋ ಹಿರಣ್ಯದೃಜ್
ಮೂರ್ಖಶ್ಚ ತಸ್ಯಾಪ್ಯನುಜಃ ಸುದುರ್ಮತಿಃ ।
ಸುವರ್ಣಹಾರೀ ಯದುರುತ್ತಮೌಜಾ
ಏತೇ ವಿನೇಶುರ್ಹ್ಯನಯಾತ್ಪುರಾ ಹಿ ॥ ೩೪ ॥

ತಸ್ಮಾದ್ಧರ್ಮೋ ನಸಂತ್ಯಾಜ್ಯೋ ಧರ್ಮೋ ಹಿ ಪರಮಾ ಗತಿಃ ।
ಧರ್ಮಹೀನಾ ನರಾ ಯಾಂತಿ ರೌರವಂ ನರಕಂ ಮಹತ್ ॥ ೩೫ ॥

ಧರ್ಮಸ್ತು ಗದಿತಃ ಪುಂಭಿಃ ಕಾರಣಂ ದಿವಿ ಚೇಹ ಚ ।
ಪತನಾಯ ತಥಾಧರ್ಮ ಇಹಲೋಕೇ ಪರತ್ರ ಚ ॥ ೩೬ ॥

ದೃಷ್ಟಾಂತವಾದರೂ ಇದಕ್ಕೆ ಇದೆ. ಉದ್ಗಮಿತನು ಅಧರ್ಮದಿಂದಲೂ ವಿಭುವೆಂಬ ಧೊರೆಯು ಕಲಹಪ್ರಿಯತೆಯಿಂದಲೂ ದುರಾತ್ಮನಾದ ನಮುಚಿಯು ಪರಪೀಡೆಯಿಂದಲೂ ಸನಕನೆಂಬ ರಾಜನು ಹೆಚ್ಚಾದ ಗರ್ವದಿಂದಲೂ ನಾಶಹೊಂದಿದರು.

೩೪-೩೭. ಹಾಗೆಯೇ ಪರಾರ್ಥಕ್ಕಾಗಿ ಆಶೆಪಟ್ಟ ಹಿರಣ್ಯಾಕ್ಷನೂ ಮೂರ್ಖನಾದ ಅವನ ತಮ್ಮನೂ ಸುವರ್ಣವನ್ನು ಅಪಹರಿಸಿದ ಯದುವೆಂಬ ತೇಜಸ್ವಿಯಾದ ಧೊರೆಯೂ ಸಹ ತಮ್ಮ ಅನೀತಿಯಿಂದ ಹಿಂದೆ ನಾಶಹೊಂದಿದರು. ಆದುದರಿಂದ ಸದ್ಧರ್ಮವನ್ನು ಬಿಡಬಾರದು. ಧರ್ಮವೇ ಉತ್ತಮಗತಿಗೆ ಸಾಧನವಾದುದು. ಧರ್ಮಹೀನರಾದವರು ರೌರವವೆಂಬ ನರಕಕ್ಕೆ ಹೋಗುತ್ತಾರೆ. ಧರ್ಮವೇ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖಕ್ಕೆ ಸಾಧನವೆಂದು ಮಹಾತ್ಮರು ಹೇಳಿರುವರು. ಅದೇ ರೀತಿ ಅಧರ್ಮವು ಲೋಕದ್ವಯದಲ್ಲಿಯೂ ಪತನಕ್ಕೆ ಕಾರಣವೆಂದೂ ಮಹಾಪುರುಷರು ನಿರ್ಧರಿಸಿರುವರು. ಆದುದರಿಂದ ಧರ್ಮಶೀಲನಾದವನು

ತ್ಯಾಜ್ಯಂ ಧರ್ಮಾನ್ವಿತೈರ್ನಿತ್ಯಂ ಪರದಾರೋಪಸೇವನಂ ।
ನಯಂತಿ ಪರದಾರಾಸ್ತು ನರಕಾನೇಕವಿಂಶತಿಂ । ॥ ೩೬ ॥

ಸರ್ವೇಷಾಮೇವ ವರ್ಣಾನಾಮೇಷಧರ್ಮೋ ಇಹೋಚ್ಯತೆ ॥ ೩೭ ॥
ಪರಾರ್ಥಪರದಾರೇಷು ಯಸ್ತು ವಾಂಛಾಂ ಕರಿಷ್ಯತಿ ।

ಸಯಾತಿ ನರಕಂ ಘೋರಂ ರೌರವಂ ಬಹುಲಾಃ ಸಮಾಃ ॥ ೩೮ ॥
ಏವಂ ಪುರಾಸುರಪತೇ ದೇವರ್ಷಿರಸಿತೋಽವ್ಯಯಃ ।
ಪ್ರಾಹ ಧರ್ಮವ್ಯವಸ್ಥಾನಂ ಖಗೇಂದ್ರಾಯಾರುಣಾಯ ಹಿ ॥ ೩೯ ॥

ತಸ್ಮಾತ್ತು ದೂರತೋ ವರ್ಜೇತ್ಪರದಾರಾನ್ವಿಚಕ್ಷಣಃ ।
ನಯಂತಿ ನಿಕೃತಪ್ರಜ್ಞಂ ಪರದಾರಾಃ ಪರಾಭವಂ ॥ ೪೦ ॥

ಪುಲಸ್ತ್ಯ ಉವಾಚ

ಇತ್ಯೇವಮುಕ್ತೆ ವಚನೆ ಪ್ರಹ್ಲಾದಂ ಪ್ರಾಹಚಾಂಧಕಃ ।
ಭವಾ‌ನ್ ಧರ್ಮಪರಸ್ತ್ವೇಕೋ ನಾಹಂ ಧರ್ಮಂ ಸಮಾಚರೆ ॥ ೪೧ ॥

ಪರಸ್ತ್ರೀಸೇವನೆಯನ್ನು ಸರ್ವಾತ್ಮನಾ ಬಿಡಬೇಕು. ಪರಸ್ತ್ರೀಯರು ತಮ್ಮ ಸಮಾಗಮ ಹೊಂದಿದವರನ್ನು ಇಪ್ಪತ್ತೊಂದು ವಿಧವಾಗಿರುವ ನರಕಗಳಿಗೇ ತಳ್ಳುತ್ತಾರೆ.

೩೮-೪೦. ಪರಾರ್ಥದಲ್ಲಿಯೂ ಪರಸ್ತ್ರೀಯಲ್ಲಿಯೂ ಆಶೆಮಾಡುವವನು ರೌರವ ನರಕವನ್ನು ಬಹುವರ್ಷಪರ್ಯಂತ ಅನುಭವಿಸುತ್ತಾನೆ. ಈ ಪರದಾರ ವರ್ಜನವೆಂಬ ಧರ್ಮವು ಸರ್ವವರ್ಣಗಳಿಗೂ ಸಮಾನವಾದದ್ದು. ಪೂರ್ವದಲ್ಲಿ ಈ ರೀತಿಯಾದ ಧರ್ಮವನ್ನು ಮಹಾತ್ಮನಾದ ಅಸಿತನೆಂಬ ದೇವರ್ಷಿಯು ಪಕ್ಷಿರಾಜನಾದ ಅರುಣನಿಗೆ ವ್ಯವಸ್ಥೆಯಿಂದ ಉಪದೇಶಿಸಿದನು. ಆದುದರಿಂದ ಆತ್ಮಹಿತವನ್ನು ಅಪೇಕ್ಷಿಸುವ ಬುದ್ಧಿಶಾಲಿಯಾದ ಪುರುಷನು ಈರೀತಿಯಾದ ಅಧರ್ಮವನ್ನು ದೂರದಲ್ಲಿಯೇ ತ್ಯಜಿಸಬೇಕು. ಪರಸ್ತ್ರೀಯರು ಪ್ರಜ್ಞೆಯನ್ನೂ ನಾಶಪಡಿಸಿ ಬಹುವಿಧವಾದ ಪರಾಭವಕ್ಕೂ ಗುರಿಮಾಡುತ್ತಾರೆ.

೪೧-೪೫. ಪುಲಸ್ತ್ಯರು ಹೇಳುತ್ತಾರೆ. ಪ್ರಹ್ಲಾದನು ಈ ಮಾತನ್ನು ಹೇಳಿ ದೊಡನೆಯೇ ಅಂಧಕನು ನೀನೊಬ್ಬನೇ ಧರ್ಮಪರನಾಗಿರು. ನಾನು ಅಂತಹ ಧರ್ಮವನ್ನು ಆಚರಿಸುವುದಿಲ್ಲ ಎಂದು ಉತ್ತರವನ್ನಿತ್ತು, ಶಂಬರನನ್ನು ಕುರಿತು

ಇತ್ಯೇವಮುಕ್ತ್ವಾ ಪ್ರಹ್ಲಾದಮಂಧಕಃ ಪ್ರಾಹ ಶಂಬರಂ ।
ಗಚ್ಛ ಶಂಬರ ಶೈಲೇಂದ್ರಂ ಮಂದರಂ ವದ ಶಂಕರಂ ॥ ೪೨ ॥

ಭಿಕ್ಷೋ ಕಿಮರ್ಥಂ ಶೈಲೇಂದ್ರಂ ಸ್ವರ್ಗತುಲ್ಯಂ ಸಕಂದರಂ ।
ಪರಿರಕ್ಷಸಿ ಕೇನಾದ್ಯ ಕೇನ ದತ್ತೋ ವದಸ್ವ ಮಾಂ ॥ ೪೩ ॥

ತಿಷ್ಠಂತಿ ಶಾಸನೇ ಮಹ್ಯಂ ದೇವಾಃ ಶಕ್ರಪುರೋಗಮಾಃ ।
ತತ್ಕಿಮರ್ಥಂ ನಿವಸಸೇ ಮಾಮನಾದೃತ್ಯ ಮಂದರೇ ॥ ೪೪ ॥

ಯದೀಷ್ಟಸ್ತವ ಶೈಲೇಂದ್ರಃ ಕ್ರಿಯತಾಂ ವಚನಂ ಮಮ ।
ಯೋಽಯಂ ಹಿ ಭವತಃ ಪತ್ನೀ ಸಾ ಮೇ ಶೀಘ್ರಂ ಪ್ರದೀಯತಾಂ ॥ ೪೫ ॥

ಇತ್ಯುಕ್ತಃ ಸ ತದಾ ತೇನ ಶಂಬರೋ ಮಂದರಂ ದ್ರುತಂ ।
ಜಗಾಮ ತತ್ರ ಯತ್ರಾಸ್ತೇ ಸಹದೇವ್ಯಾ ಪಿನಾಕಧೃಕ್ ॥ ೪೬ ॥

ಶಂಬರ ನೀನು ಈಗಲೇ ಮಂದರಪರ್ವತಕ್ಕೆ ಹೋಗು. ಅಲ್ಲಿರುವ ಶಂಕರನನ್ನು ಕುರಿತು ಈ ನನ್ನ ಸಂದೇಶವನ್ನು ಹೇಳು. ಎಲೈ ಭಿಕ್ಷುವೇ (ಇದು ಭಿಕ್ಷಾಟನ ಮಾಡುವವನಿಗೆ ಭೋಗಸ್ಥಾನವೇಕೆ ಎಂಬ ಅವಹೇಳನೆಯನ್ನು ಸೂಚಿಸುತ್ತದೆ.) ವಿಲಾಸಿಗಳಿಗೆ ಭೋಗ್ಯವಾದ ಗುಹೆಗಳಿಂದ ಕೂಡಿ ಸ್ವರ್ಗಸದೃಶವಾಗಿರುವ ಈ ಮಂದರ ಪರ್ವತವನ್ನು ಏಕೆ ರಕ್ಷಿಸುತ್ತಿರುವೆ (ಇದು ಮತ್ತೊಬ್ಬರ ಭೋಗಕ್ಕಾಗಿಯೇ ಹೊರತು ನಿನಗೆ ಭೋಗಪಡುವ ಯೋಗ್ಯತೆ ಇಲ್ಲವೆಂಬ ಅಪಹಾಸವನ್ನು ಸೂಚಿಸುತ್ತದೆ) ಇದನ್ನು ನಿನಗೆ ಕೊಟ್ಟವರಾರು ಹೇಳು. ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ನನ್ನ ಆಜ್ಞೆಗೆ ಅಧೀನರಾಗಿರುವರು. ನನ್ನ ಆಜ್ಞೆಯನ್ನೂ ಅತಿಕ್ರಮಿಸಿ ನೀನು ಈ ಮಂದರಪರ್ವತದಲ್ಲೇಕೆ ವಾಸಿಸುತ್ತಿರುವೆ. ಈ ಪರ್ವತವೇ ನಿನಗೆ ಇಷ್ಟವಾಗಿರುವ ಪಕ್ಷದಲ್ಲಿ ಈ ನನ್ನ ಮಾತಿನಂತೆ ನಡೆದುಕೋ. ನಿನ್ನ ಪತ್ನಿಯಾದ ಪಾರ್ವತಿಯನ್ನು ನನಗೆ ಶೀಘ್ರವಾಗಿ ತಂದೊಪ್ಪಿಸು.

೪೭-೫೦. ಹೀಗೆ ಅಂಧಕನಿಂದ ಆಜ್ಞಾಪಿಸಲ್ಪಟ್ಟ ಶಂಬರನು ತ್ವರೆಯಿಂದ ಮಂದರಕ್ಕೆ ನಡೆದನು. ಅಲ್ಲಿ ದೇವಿಯೊಡನೆ ಶಂಕರನಿರುವ ಸ್ಥಳಕ್ಕೂ ಹೋಗಿ

ಗತ್ವೋಽವಾಚಾಂಧಕಚರೋ ಯಾಥಾತಥ್ಯಂ ದನೋಽಸ್ಸುತಃ ।
ತಮುತ್ತರಂ ಹರಃ ಪ್ರಾಹ ಶೃಣ್ವತ್ಯಾ ಗಿರಿಕನ್ಯಯಾ ॥ ೪೭ ॥

ಮಮಾಯಂ ಮಂದರೋ ದತ್ತಃ ಸಹಸ್ರಾಕ್ಷೇಣ ಧೀಮತಾ ।
ತನ್ನಶಕ್ತೋಽಸ್ಮಿ ಸಂತ್ಯಕ್ತುಂ ವಿನಾಜ್ಞಾಂ ವೃತ್ರವೈರಿಣಃ ॥ ೪೮ ॥

ಯಚ್ಚಾಬ್ರವೀದ್ದೀಯತಾಂ ಮೇ ಗಿರಿಪುತ್ರೀತಿ ದಾನವಃ ।
ತದೇಷಾ ಯಾತು ಸ್ವಂ ಕಾಮಂ ನಾಹಂ ಧಾರಯಿತುಂ ಕ್ಷಮಃ ॥ ೪೯ ॥

ತತೋ ಬ್ರವೀದ್ಗಿರಿಸುತಾ ಶಂಬರಂ ಮುನಿಸತ್ತಮ ।
ಬ್ರೂಹಿ ಗತ್ವಾಂಧಕಂ ವೀರ ಮಮವಾಕ್ಯಂ ವಿಪಶ್ಚಿತಂ ॥ ೫೦ ॥

ಅಹಂ ಪದಾತಿಃ ಸಂಗ್ರಾಮೇ ಭವಾನೀಶಸ್ತದಾ ಹಿ ನೌ ।
*ಪ್ರಾಣದೂತಂ ಪರಿಸ್ತೀರ್ಯ ಯೋ ಜೇಷ್ಯತಿ ಸಲಪ್ಸ್ಯತೇ ॥ ೫೧ ॥

ಅಂಧಕನು ಹೇಳಿದ್ದ ಸಂದೇಶವನ್ನೆಲ್ಲಾ ಶಂಕರನಿಗೆ ಯಥಾರ್ಥವಾಗಿ ಹೇಳಿದನು. ಆಗ ಅಂಧಕನ ಚಾರನಾಗಿ ಬಂದಿದ್ದ ಶಂಬರನನ್ನು ಕುರಿತು ಶಂಕರನು ಗಿರಿಸುತೆಯಾದ ದೇವಿಯು ಕೇಳುತ್ತಿರುವಾಗಲೇ ಈರೀತಿ ಉತ್ತರಹೇಳಿದನು. ಈ ಮಂದರಪರ್ವತವು ನನಗೆ ಇಂದ್ರನಿಂದ ಕೊಡಲ್ಪಟ್ಟಿದೆ. ಅವನ ಅಪ್ಪಣೆಯಿಲ್ಲದೆ ಇದನ್ನು ಬಿಟ್ಟುಕೊಡಲು ಸಾಧ್ಯವಿಲ್ಲ. ಗಿರಿಪುತ್ರಿಯನ್ನು ನನಗೆ ಒಪ್ಪಿಸಬೇಕೆಂದು ಮತ್ತೊಂದು ಮಾತಿಗೆ ಇದೇ ಉತ್ತರ. ಈ ಪಾರ್ವತಿಯು ತನಗೆ ಇಚ್ಛೆಯಿದ್ದಲ್ಲಿ ಯಾರನ್ನು ಬೇಕಾದರೂ ಸೇರ ಬಹುದು. ಇವಳನ್ನು ಪತಿ ಎಂಬ ಭಾವನೆಯಿಂದ ನಾನೇ ಭರಿಸಲು ಸಮರ್ಥನಾಗಿಲ್ಲ. ಆ ಸಮಯದಲ್ಲಿ ಪಾರ್ವತಿಯೂ ಸಹ ಶಂಬರನನ್ನು ಕುರಿತು ಸರ್ವಜ್ಞನಾದ ನಿಮ್ಮ ಅಂಧಕನಿಗೆ ನನ್ನದೂ ಇದೇ ಉತ್ತರವೆಂಬುದನ್ನು ತಿಳಿಸು ಎಂದಳು.

೫೧-೫೮. ಆ ಗೌರಿಯ ಉತ್ತರವೂ ಈ ರೀತಿಯಾದುದು. ಯುದ್ಧದಲ್ಲಿ ನಾನು ಕೇವಲ ಪದಾತಿಯಾಗಿರುವೆನು. ನೀನಾದರೋ ಧೊರೆಯಾದುದರಿಂದ ನಾನಾ ವಿಧವಾದ ವಾಹನಾದಿ ಸಾಮಗ್ರಿಯುಳ್ಳವನಾಗಿರುವೆ. ಆದರೂ ನಾವಿಬ್ಬರೂ ಪ್ರಾಣವನ್ನೇ ಪಣವನ್ನಾಗಿ ಇಟ್ಟು ಯುದ್ಧವೆಂಬ ದ್ಯೂತವನ್ನು ವಿಸ್ತರಿಸೋಣ. ಆ ಯುದ್ಧದಲ್ಲಿ ಯಾರು ಜಯಿಸುವರೋ ಅವರು ತಮ್ಮ ತಮ್ಮ ಇಷ್ಟವನ್ನು ಹೊಂದ

---

* ಇಲ್ಲಿ ಪ್ರಾಣದ್ಯೂತವೆಂಬ ಪಾಠವಿರಬೇಕೆಂದು ತೋರುತ್ತದೆ.

ಇತ್ಯೇವಮುಕ್ತೋಮತಿಮಾನ್ ಶಂಬರೋಂಧಕಮಾಗಮತ್ ।
ಸಮಾಗಮ್ಯಾಬ್ರವೀದ್ವಾಕ್ಯಂ ಸರ್ವಂ ಗೌರ್ಯಾ ಚ ಭಾಷಿತಂ ॥ ೫೨ ॥

ತಚ್ಛ್ರುತ್ವಾ ದಾನವಪತಿಃ ಕ್ರೋಧದೀಪ್ತೇಕ್ಷಣಃ ಶ್ವಸನ್ ।
ಸಮಾಹೂಯಾಬ್ರವೀದ್ವಾಕ್ಯಂ ದುರ್ಯೋಧನಮಿದಂ ವಚಃ ॥ ೫೩ ॥

ಗಚ್ಛ ಶೀಘ್ರಂ ಮಹಾಬಾಹೋ ಭೇರೀಂ ಸಾನ್ನಾಹಿಕೀಂ ದೃಢಾಂ ।
ತಾಡಯಸ್ವಾದ್ಯ ವಿಶ್ರಬ್ಧಂ ದುಃಶೀಲಾಮಿವ ಯೋಷಿತಂ ॥ ೫೪ ॥

ಬಹುದು. (ಈ ಶ್ಲೋಕದಲ್ಲಿ ದೇವಿಯ ಅಭಿಪ್ರಾಯಸೂಚಕವಾದ ಮತ್ತೊಂದು ಉಚಿತವಾದ ಅರ್ಥವೂ ತೋರಿಬರುತ್ತಿದೆ. ಭವಾನೀಶಃ ಎಂಬಲ್ಲಿ ಭವಾನ್ ಈಶಃ ಎಂಬ ಪದಚ್ಛೇದಕ್ಕೆ ತಕ್ಕಂತೆ ಮೇಲೆ ಅರ್ಥವನ್ನು ವಿವರಿಸಲಾಗಿದೆ. ಅಲ್ಲಿ ಭವಾನೀಶಃ ಎಂದು ಸಮಸ್ತ ಪದವನ್ನಾಗಿ ಮಾಡಿ ಭವನಿಗೆ(ರುದ್ರನಿಗೆ) ಅರ್ಧಾಂಗರೂಪಳಾಗಿರುವ ಪದಾತಿಯಾಗಿದ್ದರೂ ಅನುರಾಗಾತಿಶಯದಿಂದ ಅವನ ವಿಶ್ಲೇಷವನ್ನು ಸಹಿಸದಿರುವ ನಾನು ಅವನ ಸಹಾಯದಿಂದಲೇ ಯುದ್ಧಕ್ಕೆ ನಿಲ್ಲುತ್ತೇನೆ. ಈ ಯುದ್ಧದಲ್ಲಿ ನಿನ್ನ ಪ್ರಾಣವೇ ಪಣವಾಗುವುದರಲ್ಲಿ ಸಂದೇಹವಿಲ್ಲ. ಜಯಶೀಲನಾದ ಶಂಕರನೇ ಭವಾನೀಶನಾಗಿ ಪರಿಣಮಿಸುತ್ತಾನೆ. ಭವಾನೀ ಎಂದು ಪ್ರಸಿದ್ಧಿಹೊಂದಿರುವ ನನಗೆ ಶಂಕರನಲ್ಲದೆ ನೀನು ಹೇಗೆತಾನೆ ಪತಿಯಾಗುವೆ. ನಿನ್ನ ಈ ದುರ್ಬುದ್ಧಿಯು ನಿನ್ನ ಮರಣದಲ್ಲೇ ಪರ್ಯವಸಾನ ಹೊಂದೀತು ಎಂಬುದೇ ವ್ಯಂಗವಾಗಿ ತೋರಿಬರುವ ಅರ್ಥಾಂತರ) ಹೀಗೆ ಹೇಳಲ್ಪಟ್ಟ ಶಂಬರನು ಅಂಧಕನ ಸಮೀಪಕ್ಕೆ ಬಂದು ಶಂಕರನ ಮತ್ತು ಗೌರಿಯ ಉತ್ತರವನ್ನೆಲ್ಲಾ ಅವನಲ್ಲಿ ಅರಿಕೆಮಾಡಿದನು. ಆ ಮಾತನ್ನು ಕೇಳಿದೊಡನೆಯೇ ಕ್ರೋಧದಿಂದ ಕಣ್ಣುಗಳಲ್ಲಿ ಕಿಡಿಗಳನ್ನು ಹಾರಿಸುತ್ತಾ ನಿಟ್ಟುಸುರು ಬಿಡುತ್ತಾ ದುರ್ಯೋಧನನೆಂಬ ದಾನವನನ್ನು ಕರೆಸಿ ಶೂರನೇ ಹೋಗು ನಮ್ಮ ಯುದ್ಧ ಸನ್ನಾಹಸೂಚಕವಾದ ದೃಢವಾದ ಭೇರಿಯನ್ನು ದುಃಶೀಲಳಾದ ಸ್ತ್ರೀಯನ್ನು ಹೊಡೆಯುವಂತೆ ಯಥೇಚ್ಛೆಯಾಗಿ ಹೊಡೆ ಎಂದು ಆಜ್ಞಾಪಿಸಿದನು. (ಇಲ್ಲಿ ಉಪಮಾನವಾದ ದುಃಶೀಲಾಮಿವ ಎಂಬುದರಿಂದ ಈ ಭೇರೀತಾಡನವು ದುಃಶೀಲಳಾದ ಪಾರ್ವತಿಯ ತಾಡನವೆಂದೇ ಅಂಧಕನ ಭಾವನೆ.)

ಸಮಾದಿಷ್ಟೋಽಂಧಕೇನಾಥ ಭೇರೀಂ ದುರ್ಯೋಧನೋ ಬಲಾತ್ ।
ತಾಡಯಾಮಾಸ ವೇಗೇನ ಯಥಾ ಪ್ರಾಣೇನ ಭೂಯಸಾ ॥ ೫೫ ॥

ಸಾ ತಾಡಿತಾ ಬಲವತಾ ಭೇರೀ ದುರ್ಯೋಧನೇನ ಹಿ ।
ಸಸ್ವಾನ ಭೈರವಾಕಾರಂ ರೌರವಂ ರಾಸಭೀ ಯಥಾ ॥ ೫೬ ॥

ತಥಾ ತಂ ಸ್ವರಮಾಕರ್ಣ್ಯ ಸರ್ವ ಏವ ಮಹಾಸುರಾಃ ।
ಸಮಾಯಾತಾಃ ಸಭಾಂ ತೂರ್ಣಂ ಕಿಮೇತದಿತಿ ವಾದಿನಃ ॥ ೫೭ ॥

ಯಾಥಾತಥ್ಯಂ ಚ ತಾನ್ಸರ್ವಾನಾಹ ಸೇನಾಪತಿರ್ಬಲೀ ।
ತೇ ಚಾಪಿ ಬಲಿನಾಂ ಶ್ರೇಷ್ಠಾಃ ಸನ್ನದ್ಧಾ ಯುದ್ಧಕಾಙ್ಕ್ಷಿಣಃ ॥ ೫೮ ॥

ಸಹಾಂಧಕಾ ನಿರ್ಯಯುಸ್ತೇ ಗಜೈರುಷ್ಟ್ರೈರ್ಹಯೈ ರಥೈಃ ।
ಅಂಧಕೋ ರಥಮಾಸ್ಥಾಯ ಪಂಚನಲ್ವಂ ಪ್ರಮಾಣತಃ ॥ ೫೯ ॥

೫೫-೫೯. ಹಾಗೆ ಅಪ್ಪಣೆಮಾಡಲ್ಪಟ್ಟ ದುರ್ಯೋಧನನೂ ಸಹ ಭೇರಿಯನ್ನು ತನ್ನ ಬಲವನ್ನೆಲ್ಲಾ ಪ್ರಯೋಗಿಸಿ ವೇಗದಿಂದ ಹೊಡೆದನು. ಹಾಗೆ ಅವನಿಂದ ಬಲವಾಗಿ ಹೊಡೆಯಲ್ಪಟ್ಟ ಭೇರಿಯೂ ರೌರವಧ್ವನಿಯಿಂದ ಹೆಣ್ಣುಕತ್ತೆಯಂತೆ ಘೋರವಾಗಿ ಅರಚಿತು. ಆ ಧ್ವನಿಯನ್ನು ಕೇಳಿದೊಡನೆಯೇ ಅಸುರರೆಲ್ಲರೂ ಇದೇನು ಎಂದು ಕೇಳುತ್ತಾ ರಾಜಸಭೆಗೆ ತ್ವರೆಯಿಂದ ಬಂದರು. ಆಗ ಸಮರ್ಥನಾದ ಸೇನಾಪತಿಯು ಎಲ್ಲಾ ವೃತ್ತಾಂತವನ್ನೂ ಯಥಾರ್ಥವಾಗಿ ಅವರಿಗೆ ತಿಳಿಯಪಡಿಸಿದನು. ಆಗ ಮಹಾಪರಾಕ್ರಮಿಗಳಾದ ಆ ದಾನವರೆಲ್ಲರೂ ಯುದ್ಧಾಕಾಂಕ್ಷೆಯಿಂದ ಆನೆ, ಒಂಟೆ, ಕುದುರೆ, ರಥ ಮೊದಲಾದ ಯುದ್ಧಸಾಮಗ್ರಿಗಳಿಂದ ಅಂಧಕನೊಡನೆ ಹೊರಟರು. ಅಂಧಕನೂ ಐದು*ನಲ್ವಪರಿಮಾಣವುಳ್ಳ ಮಹಾರಥದಲ್ಲಿ ಕುಳಿತು ಈಶ್ವರನನ್ನು ಪರಾಜಯಗೊಳಿಸುವ ದೃಢನಿಶ್ಚಯದಿಂದ ಯುದ್ಧಕ್ಕೆ ಹೊರಟನು.

---

* ನಲ್ವವೆಂದರೆ ೪೦೦ ಹಸ್ತ ಉದ್ದದ ಒಂದು ಪರಿಮಾಣ. ೫ ನಲ್ವಕ್ಕೆ ೨೦೦೦ ಹಸ್ತ ಪರಿಮಾಣವಾಗುತ್ತದೆ.

ತ್ರ್ಯಂಬಕಂ ಸ ಪರಾಜೇತುಂ ಕೃತಬುದ್ಧಿರ್ವಿನಿರ್ಯಯೌ ।
ಜಂಭಃ ಕುಜಂಭೋ ಹುಂಡಶ್ಚ ತುಹುಂಡಃ ಶಂಬರೋ ಬಲಿಃ ॥ ೬೦ ॥

ಬಾಣಃ ಕಾರ್ತಸ್ವರೋ ಹಸ್ತೀ ಸೂರ್ಯಶತ್ರುರ್ಮಹೋದರಃ ।
ಅಯಃಶಂಕುಃ ಶಿಬಿಃ ಶಾಲ್ವೋ ವೃಷಪರ್ವಾ ವಿರೋಚನಃ ॥ ೬೧ ॥

ಹಯಗ್ರೀವಃ ಕಾಲನೇಮಿಃ ಸಂಹ್ರಾದಃ ಕಾಲನಾಶನಃ ।
ಶರಭಶ್ಚೈವ ಸಬಲೋ ವಲೋ ವೃತ್ರಶ್ಚ ವೀರ್ಯವಾನ್ ॥ ೬೨ ॥

ದುರ್ಯೋಧನಶ್ಚ ಪಾಕಶ್ಚ ವಿಪಾಕಃ ಕಾಲಶಂಬರೌ ।
ಏತೇಚಾನ್ಯೇಚ ಬಹವೋ ಮಹಾವೀರ್ಯಾ ಮಹಾಬಲಾಃ ।
ಪ್ರಜಗ್ಮುರುತ್ಸುಕಾ ಯೋದ್ಧುಂ ನಾನಾಯುಧಧರಾ ರಣೆ ॥ ೬೩ ॥

ಇತ್ಥಂ ದುರಾತ್ಮಾ ದನುದೈತ್ಯಪಾಲ ಸ್ತಥಾಂಧಕೋ
ಯೋದ್ಧುಮನಾ ಹರೇಣ ।
ಮಹಾಚಲಂ ಮಂದರಮಭ್ಯುಪೇಯಿವಾ ನ್ಸ ಕಾಲ
ಪಾಶಾವಶಿತೋ ಹಿ ಮಂದಧೀಃ ॥ ೬೪ ॥

ಇತಿ ಶ್ರೀ ವಾಮನಪುರಾಣೇ ಭೈರವಪ್ರಾದುರ್ಭಾವೇ ಅಂಧಕಸೈನ್ಯ
ನಿರ್ಗಮನಂನಾಮ ಷಟ್‌ಷಷ್ಠಿತಮೋಽಧ್ಯಾಯಃ

೬೦-೬೪. ಅನಂತರ ಜಂಭ, ಕುಜಂಭ, ಹುಂಡ, ತುಹುಂಡ, ಶಂಬರ, ಬಲಿ, ಬಾಣ, ಕಾರ್ತಸ್ವರ, ಹಸ್ತಿ, ಸೂರ್ಯಶತ್ರು, ಮಹೋದರ, ಅಯಃಶಂಕು, ಶಿಬಿ, ಶಾಲ್ವ, ವೃಷಪರ್ವ, ವಿರೋಚನ, ಹಯಗ್ರೀವ, ಕಾಲನೇಮಿ, ಸಂಹ್ರಾದ, ಕಾಲನಾಶನ, ಸರಭ, ಸಬಲ, ವಲ, ವೃತ್ರ, ದುರ್ಯೋಧನ, ಪಾಕ, ವಿಪಾಕ, ಕಾಲ, ಶಂಬರ, ಇವರೂ ಇನ್ನೂ ಇತರರಾದ ಮಹಾವೀರರೂ ಯುದ್ಧದಲ್ಲಿ ಕುತೂಹಲದಿಂದ ನಾನಾಯುಧಧಾರಿಗಳಾಗಿ ಹೊರಟರು. ಈರೀತಿ ದುರಾತ್ಮನಾದ ಅಂಧಕನು ಶಂಕರನೊಡನೆ ಯುದ್ಧಮಾಡಬೇಕೆಂಬ ಮನೋರಥದಿಂದ ಕಾಲಪಾಶಕ್ಕೆ ಅಧೀನನಾಗಿ ಮಂದರಮಹಾಪರ್ವತಕ್ಕೆ ಸೈನ್ಯದೊಡನೆ ಬಂದು ಸೇರಿದನು.

ಇಲ್ಲಿಗೆ ಶ್ರೀ ವಾಮನಪುರಾಣದ ಭೈರವಪ್ರಾದುರ್ಭಾವದಲ್ಲಿ ಅಂಧಕನ
ಸೈನ್ಯಪ್ರಸ್ಥಾನವೆಂಬ ಅರವತ್ತಾರನೆಯ ಅಧ್ಯಾಯವು ಮುಗಿದಿದೆ.